ಸಪ್ಟಂಬರ್

೧೯೫೫

ಬೆಲೆ:

೮ ಆಣೆಗಳು

ಹದುಳಕಾಗಿ ಹಾರಯಿಕೆ

೧

ಹೊಸತೆ ಇರಲಿ, ಹಳತೆ ಇರಲಿ,
ಒಳಿತು ಯಾವುದೊ ಬಾಳ್ಗೆ ಬರಲಿ!
ನೂಡಲೇನು ಪಡುವಲೇನು,
ಬೆಳಕ ಬದುಕಿಗೆ ಹೂಡಿತರಲಿ!
ಹಳ್ಳ ತಿಟ್ಟು ಸರಿಯಲಿ—
ಒಳ್ಳೆದಾರಿ ಸನಿಯಲಿ!

೨

ಸೃಷ್ಟಿದೇವಿ ಕೊಟ್ಟ ಪಯಿರ
ಒಟ್ಟುಗೂಡುತೆ ಎಲ್ಲರೊಕ್ಕಲಿ!
ಕೊಟ್ಟು ಕೊಂಡು ಎಲ್ಲರುಂಡು
ಹೊಟ್ಟೆಯುರಿಯನು ತಿಕ್ಕಿ ತಣಿಸಲಿ!
ದುಡಿದು ಒಡಲು ಸೊಕ್ಕಲಿ—
ಅಲಸಿಕೆಯದು ಬಿಕ್ಕಲಿ!

ಈ ಸಂಚಿಕೆಯಲ್ಲಿ :

ಜೊಲದೊಡೆಯರ ಮೇಲೆ ಪ್ರಲಯದ ಆಘಾತ (ಸಂಪಾದಕೀಯ)
ಸಂಪಾದಕರು ೧೨೧
ಜಯಂತಿಗೆ ಸಜಾಯಿಷಿನ ೧೨೩
ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೧೨೩
ಪ್ರತಿಭಂಗ (ಒಂದು ಕಥೆ)
ಶ್ರೀ. ಪ್ರ. ಮ. ಗಲಗಲಿ ಬಿ ಎ. (ಅನರ್ಸ್) ಬಿ. ಕಾಮ್. ಮುಂಬಯಿ ೧೨೫
ಸ್ವಪ್ನಭಂಗ (ನೀಳ್ಗನನ)
ಶ್ರೀ. ಎಸ್. ವಿ. ಲಕ್ಷ್ಮೀನಾರಾಯಣ ಶರ್ಮಾ, ಪೆರಡಾಲ ೧೨೮
ಸಭ್ಯತೆ (ಕವನ)
ಶ್ರೀ. ಜ ಶ್ರೀ. ದೇಸಾಯಿ, ಜರಕುಂಟಿ ಬಿ. ಎ, ಬಿ ಟಿ. ಶಹಾಪುರ ೧೩೦
ಜೀವನದಲ್ಲಿ ಅರ್ಥವಿದೆಯೆ? (ಅನುವಾದಿತ ಲೇಖನ)
ಶ್ರೀ ನಾರಾಯಣ ಮಹಿಷಿ, ಬಿ. ಎಸ್ಸಿ ಧಾರವಾಡ ೧೩೧
ನೀಲಾಂಬಿಕೆಗಾಗಿ (ಸಣ್ಣಕತೆ)
ಶ್ರೀ. ಗೋವಿಂದಮೂರ್ತಿ ದೇಸಾಯಿ, ಧಾರವಾಡ ೧೩೩
ಜನಪದಜೀವನ (ಪುಸ್ತಕಾವಲೋಕನ)
ಶ್ರೀ. ಕೆ. ಎಸ್. ಶರ್ಮಾ 'ವಾಣೀನಂದಿರಂ' ಕಾಸರಗೋಡು) ೧೩೪
ಡಾಕ್ಟರ್ ಜಾನ್‌ಸನನ ಪಶ್ಚಾತ್ತಾಪ (ವ್ಯಕ್ತಿಜೀವನದ ಒಂದು ನೆನಹು)
ಶ್ರೀ. ಬಳ್ಳೂರ ಸುಬ್ಬರಾಯ ಅತಿಗ, ಗಂಗೊಳ್ಳಿ ೧೪೨
ಕಣಗಿಲ ಹೂವು (ಕವನ)
ಶ್ರೀ ಶ್ರೀಕಾಂತ ಶಮನೇವಾಡಿ ೧೪೪
ಎನ್ನೆದೆಯ ಗುಹೆಯಲ್ಲಿ (ಕವನ)
ಶ್ರೀ. ಶಂ. ಗು. ಬಿರಾದಾರ, ಬಬಲೇಶ್ವರ ೧೪೪
ಹೃದಯನೇದನೆ (ಸಣ್ಣಕತೆ)
ಶ್ರೀ. ಚಿತ್ರಿಗೆ ರಾಮನ್, ಗೋಕರ್ಣ ೧೪೫
ನನ್ನ ಇವರು (ಒಂದು ನಗೆಬರೆಹ,
ಶ್ರೀಮತಿ ಮೀರಾ ಮುಜುಮದ್ದಾರ್, ನೌಪಾಡಾ, ಠಾಣಾ ೧೪೯
ಅರಳುಮಲ್ಲಿಗೆಗೆ (ಕವನ)
ಶ್ರೀ. ಸಿ. ಎಂ. ದೇವೇಂದ್ರನಾಯಕ, ಧಾರವಾಡ ೧೫೧
ನಿಸ್ಸರ್ ಮೋಹತಾರ 'ರಹೆದಾರಿ' (ಜೀವನಚಿತ್ರ)
ಶ್ರೀ. ಕೆ. ಗುರುರಾವ್ ಬಿ.-ಎ. ಹೈದರಾಬಾದ್ ೧೫೨
ಸಾರಿತ್ಯನಿಮರ್ಶೆಯ ಶಿಕ್ಷಣರಂಗ
ಶ್ರೀ. ಎಚ್. ಆರ್. ಶಾಸ್ತ್ರಿ ಜ್ಯೂ. ಬಿ. ಎ. ಹೈದರಾಬಾದ್ ೧೫೫
ಪುಸ್ತಕ ನಿಮರ್ಶೆ ('ಸಮರ್ಪಣ' ('ಶಾರದೆಯ ಅಪರಾವತಾರ')
ಶ್ರೀ. ಬಿ. ಪಿ. ಎಸ್. ರಾವ್ ಮತ್ತು ಶ್ರೀ. ಬಿ. ಆರ್. ವಾಡಪ್ಪಿ ೧೫೯
ಎಂ. ಎ., ಬಿ. ಟಿ.

ಸಾಚರ ಸ್ವೀಕಾರ

ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೧೮ ಸಂಚಿಕೆ ೪

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೪ ಆಣೆ.

**

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಹೊಲದೊಡೆಯರ ಮೇಲೆ ಪ್ರಲಯದ ಆಘಾತ

ಭಾರತಕ್ಕೆ ಸ್ವಾತಂತ್ರ್ಯ ದೊರೆತು, ಪ್ರಜಾಪ್ರಭುತ್ವದ ಆಡಳಿತವು ಪ್ರಾರಂಭವಾದಮೇಲೆ, ಪರಂಪರಾಗತವಾಗಿ ಬಂದಿರುವ ನಮ್ಮ ಸಾಮಾಜಿಕ, ಧಾರ್ಮಿಕ, ಆರ್ಥಿಕ ಜೀವನದ ಮೇಲೆ, ಒಂದು ಬಗೆಯ ಪ್ರಲಯದ ಆಘಾತಗಳೇ ಬೀಳುತ್ತ ನಡೆದಿವೆ. ಅನೇಕ ಕಾಲ ಪಾರತಂತ್ರ್ಯ-ದಲ್ಲಿಯೆ ಇದ್ದು ಪ್ರಗತಿ-ಪ್ರಕರ್ಷಗಳಿಗೆ ಅವಕಾಶವೇ ಇಲ್ಲದಂತಾಗಿದ್ದ ನಮ್ಮ ಸಮಾಜದಲ್ಲಿ, ಕಾಲೋಚಿತವಾದ ಬದಲಾವಣೆಗಳು—ಮಾರ್ಪಾಡುಗಳು ನಡೆಯಬೇಕಾಗಿವೆಯೆಂಬುದನ್ನು ವಿಚಾರಿ-ಗಳೆಲ್ಲರೂ ಒಪ್ಪಿಕೊಳ್ಳಬೇಕಾದ ಸಂಗತಿ. ಆದರೆ ನಡೆಯಬೇಕಾಗಿರುವ ಮಾರ್ಪಾಡು ಯಾವ ಬಗೆಯ-ದಾಗಿರಬೇಕು? ಇದ್ದುದರಲ್ಲಿಯೆ ಕಸ-ಕೊಳೆಗಳನ್ನು ತೆಗೆದು ಇದನ್ನೇ ಹೆಸನುಗೊಳಿಸಬೇಕೋ, ಇದ್ದುದನ್ನೆಲ್ಲ ತೆಗೆದುಹಾಕಿ ಎಲ್ಲವನ್ನೂ ಹೊಸತಾಗಿಯೇ ನಿರ್ಮಿಸಬೇಕೊ? ಈ ಪ್ರಶ್ನೆಗಳು ಮಾತ್ರ ತುಂಬ ತೊಡಕಿನವಾಗಿವೆ.

ಪ್ರಜೆಗಳೆನಿಸಿಕೊಳ್ಳುವ ಬಹುಸಂಖ್ಯಾಕರಿಗೆ ರಾಜಕೀಯಸ್ವಾತಂತ್ರ್ಯ—ಸುಖಜೀವನ-ಗಳೇನೋ ಬೇಕಾಗಿದ್ದುವು; ಬ್ರಿಟಿಷರ ನಿರ್ಗಮನದಿಂದ ಅವು ದೊರೆತುವೆಂಬ ಸುಖ-ಸಮಾಧಾನ ಗಳಲ್ಲಿ ಜನ ಇದ್ದಿತು. ಆದರೆ ಪ್ರಜೆಗಳ ಪ್ರತಿನಿಧಿಗಳೆನಿಸಿಕೊಂಡು, ಆಡಳಿತದ ಸೂತ್ರಗಳನ್ನು ವಹಿಸಿಕೊಂಡಿರುವ ನಮ್ಮ ಮುಂದಾಳುಗಳಿಗೆ ಅಷ್ಟರಿಂದಲೇ ತೃಪ್ತಿಯಿದ್ದಂತಿಲ್ಲ. ಅವರು ಭಾರತ ರಾಷ್ಟ್ರವನ್ನೂ ಸಮಾಜವನ್ನೂ ತೀರ ಹೊಸರೂಪದಿಂದ ಸಂಘಟಿಸಬೇಕೆಂದು ಹೊರಟಿದ್ದಾರೆ.

ಸಾವಿರಾರು ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ಒಂದು ಸಮಾಜಪದ್ಧತಿಯಲ್ಲಿ ಸಂಪೂರ್ಣ ಬದಲಾವಣೆ ಮಾಡಬೇಕೆಂದು ಎಳಸುವ ಮುಂದಾಳುಗಳಲ್ಲಿ, ಒಂದು ವಿಶಿಷ್ಟ ರೀತಿಯ ವ್ಯಕ್ತಿತ್ವ ಬೇಕಾಗುತ್ತದೆ. ಮೊದಲನೆಯದಾಗಿ ಅವರು ತಮ್ಮ ತ್ಯಾಗ-ಸೇವೆಗಳ ಪ್ರಭಾವದಿಂದ ಜನತೆಯ ಹೃದಯ-ಮನಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿರಬೇಕಾಗುತ್ತದೆ; ಬದಲಾವಣೆ ಮಾಡುವುದರಿಂದಾಗುವ ವರ್ತಮಾನ-ಭವಿಷ್ಯತ್ ಪರಿಣಾಮಗಳ ಕೂಲಂಕಷವಾದ ಜ್ಞಾನವು ಬೇಕಾಗುತ್ತದೆ. ಬದಲಾವಣೆಯ ಕಾಲದಲ್ಲಿ ಯಾರ ಮೇಲೂ ಯಾವ ಬಗೆಯ ದುಷ್ಪರಿಣಾಮಗಳೂ ಆಗದಂತಹ ಉಪಾಯಯೋಜನಾಬುದ್ಧಿ ಬೇಕಾಗುತ್ತದೆ. ತೋಟದಲ್ಲಿರುವ ಬಾಳೆಯ ಬೆಳೆಯನ್ನು ತೆಗೆದು ಅಲ್ಲಿ ಕಬ್ಬಿನ ಬೆಳೆಯನ್ನು ಬೆಳಸಬೇಕೆನ್ನುವವನು, ಬಾಳೆಯನ್ನು ಹೇಗೆ ಹೇಗೆ ತೆಗೆದರೆ ಅನುಕೂಲವಾದೀತೆಂಬುದನ್ನು ಅರಿತವನಾಗಿರಬೇಕಾವುದು. ಹೊಸತಾಗಿ ಕೃಷಿಮಾಡಲಿರುವ ಕಬ್ಬಿನ ಬೆಳೆಯ ಪರಿಪೂರ್ಣ ಜ್ಞಾನವನ್ನೂ ಪಡೆದವನಾಗಿರಬೇಕಾಗುವುದು ಎರಡೂ ಇಲ್ಲದವನು ಬದಲಾವಣೆಯನ್ನು ಬಯಸಿದರೆ, ಮೊದಲಿದ್ದ ಬಾಳೆಯ ಬೆಳೆಗೂ ಎರವಾಗಬೇಕಾಗುತ್ತದೆ; ಹೊಸತಾಗಿ ನೆಟ್ಟ ಕಬ್ಬಿನ ಬೆಳೆಯನ್ನೂ ಕಳೆದುಕೊಳ್ಳಬೇಕಾಗುತ್ತವೆ. ಬಾಳೆಯು ಬನದಲ್ಲಿದ್ದ ಕಡಜೀರಿಗೆಯ ಹುಳುವೊಂದು ತನಗೆ ಕಚ್ಚಿತೆಂಬ ಸಿಟ್ಟಿನಿಂದ, ಇದ್ದ ಬಾಳೆಯ ತೋಟವನ್ನು ಕಡಿದು ಹಾಕಿ, ಕಬ್ಬಿನ ಹೊಸ ಬೆಳೆಯನ್ನು ನೆಡಬೇಕೆಂಬ ನೀತಿಯನ್ನು ಲೋಕವು ಒಪ್ಪುವುದೆ? ನಮ್ಮ ಸಮಾಜದ ಆಚಾರ-ವಿಚಾರ, ಆರ್ಥಿಕ ವ್ಯವಸ್ಥೆಗಳನ್ನು ಒನ್ಮೈಲೇ ಬದಲಿಸಬೇಕೆಂದು ಹೊರಟಿರುವ ನಮ್ಮ ಕೆಲವು ಜನ ಮುಂದಾಳುಗಳು, ಈ ಬಗೆಯ ವಿವೇಕರಹಿತ ವಿಚಾರದಿಂದಲೇ ಬದಲಾವಣೆಯ ಕಾರ್ಯಗಳನ್ನು ಕೈಕೊಂಡು ಹೊರಟಿದ್ದಾರೆ. ಬಹಳವಾದವೆ ಬಾಳೆಯ ತೋಟದಲ್ಲಿದ್ದ ಕಡ-ಜೀರಿಗೆಯ ಹುಟ್ಟುಗಳನ್ನು ಕಂಡುಹಿಡಿದು, ಅವುಗಳನ್ನು ತೆಗೆದುಹಾಕುವ ವಿಚಾರವನ್ನು ಮಾಡು-ವುದು ವಿವೇಕಸಮ್ಮತವಾದುದು. ಮುಂದೆ, ಹೊಸತಾಗಿ ನೆಟ್ಟ ಕಬ್ಬಿನ ಬೆಳೆಯಲ್ಲಿ ಸೇರಿಕೊಂಡ ಹಾವು, ಆ ತೋಟಗಾರನನ್ನೇ ಕಚ್ಚಿ ಕೊಲ್ಲರಾರದೆಂಬುದನ್ನು ಯಾರು ಹೇಳಬಲ್ಲರು?

ಕಾಂಗ್ರೆಸ್ಸು ಸಮಾಜವಾದ ಪದ್ಧತಿಯು ಸಮಾಜನಿರ್ಮಾಣ ಮಾಡುವುದನ್ನು ನಿರ್ಣಯಿಸಿಕೊಂಡಿದೆಯಂತೆ; ಅದಕ್ಕಾಗಿ ನಮ್ಮ ಅಲ್ಲಲ್ಲಿಯ ಸರಕಾರದ ಸೂತ್ರಧಾರರು, ಕಾಂಗ್ರೆಸ್ಸಿನ ಧ್ಯೇಯಕ್ಕನುಸರಿಸಿ ಸಮಾಜವ್ಯವಸ್ಥೆ, ಅರ್ಥವ್ಯವಸ್ಥೆಗಳಲ್ಲಿ ಕ್ರಾಂತಿಕಾರಿಯಾದ ಬದಲಾವಣೆಗಳನ್ನು ಮಾಡಲಿದ್ದಾರಂತೆ. ಇದೊಂದು ನಗೆಬರುವಂತಹ ಮಾತೇ ಆಗಿದೆ. ಯಾವ ಜನತೆಗಾಗಿ ಕಾಂಗ್ರೆಸ್ಸು, ಕಾಂಗ್ರೆಸ್ ಸರಕಾರಗಳು ಸಮಾಜವಾದೀ ಪದ್ಧತಿಯ ಸಮಾಜರಚನೆಯಲ್ಲಿ ತೊಡಗಿರುವರೊ, ಆ ಜನತೆಯಲ್ಲಿ ಸಮಾಜವಾದದ ಸ್ವರೂಪವನ್ನು ಅರಿತವರು ಎಷ್ಟು ಜನರು? ಅದರ ಒಳ ಎಳೆಹುಳುಕುಗಳನ್ನು ಜನತೆಗೆಲ್ಲ ತಿಳುಹುವ ಚಟುವಟಿಕೆಗಳು ನಮ್ಮಲ್ಲಿ ನಡದಿವೆಯೆಲ್ಲಿ? ಜನರೆಲ್ಲ ಸಮಾಜವಾದದ ಸ್ವರೂಪವನ್ನು ತಿಳಿದು ಮನವರಿಕೆ ಮಾಡಿಕೊಂಡು, ಅದರ ಲಾಭವನ್ನು ಒಪ್ಪಿಕೊಂಡಾಗಲಲ್ಲವೇ ಜನತೆಯ ಪ್ರತಿನಿಧಿಗಳೆನಿಸಿಕೊಳ್ಳುವವರು ಅದರ ಯೋಜನೆಯ ಕುರಿತು ವಿಚಾರ ಮಾಡಬೇಕು? ಅದಾವುದೂ ಇಲ್ಲವೆ, ದೊರೆತಿರುವ ಕ್ಷಣಿಕ ಅಧಿಕಾರದ ಬಲದ ಮೇಲೆ, ತಮ್ಮ ಮೆದುಳಿನಲ್ಲೆದ್ದ ಭಾವನಾಲಹರಿಯಂತೆ ಶಾಸನಗಳನ್ನು ಮಾಡಿ, ಜನತೆಯ ತಲೆಯಮೇಲೆ ಹೇರುವುದೆಂದರೆ, ಇದು ಪ್ರಜಾಪ್ರಭುತ್ವದ ನೀತಿಯೊ, ಸರ್ವಾಧಿಕಾರಿತ್ವದ ಮಹತ್ವಾಕಾಂಕ್ಷೆಯ ಒತ್ತಾಯವೊ? ಈ ಪ್ರಶ್ನೆಯನ್ನು ಪ್ರಾಮಾಣಿಕ ರಾಜನೀತಿಜ್ಞರೂ, ಮನೋವಿಜ್ಞಾನಿಗಳೂ ಇಂದು ಸರಿಯಾಗಿ ಬಿಡಿಸಿ ಬೆಳಕಿಗೆ ತರುವ ಕಾಲ ಬಂದಿದೆ. ಈಗ ಅವರು ದಾಕ್ಷಿಣ್ಯ–ಭೀತಿಗಳಿಂದ ಸುಮ್ಮನೆ ಕುಳಿತರೆ, ನಮ್ಮ ಸಮಾಜದ ಭವಿಷ್ಯತ್ತಿನ ದುರ್ದೈವಕ್ಕೆ ಅವರೇ ಕಾರಣರಾಗುವರು.

ನವ್ಯದ ಮುಂಬಯಿ ಸರಕಾರದ ಮುಖ್ಯಮಂತ್ರಿಗಳೂ ಕಂದಾಯಮಂತ್ರಿಗಳೂ ಒಂದು ಬಗೆಯಿಂದ ಸರ್ವಾಧಿಕಾರೀ ಮನೋವೃತ್ತಿಯಿಂದಲೇ ನಮ್ಮ ಸಾಮಾಜಿಕ ಬದಲಾವಣೆಯ ಕಾರ್ಯಗಳಿಗೆ ಕೈಯಿಕ್ಕಿದ್ದಾರೆನ್ನಬಹುದು. ಅವರು ತುಂಬ ಹಟದಿಂದ ಪುರಸ್ಕರಿಸುತ್ತ ನಡೆದಿರುವ ಭೂಮಿಯ ಸಾಗುವಳಿಯ ಸುಧಾರಣೆಯ ವಿಧೇಯಕವು, ನವ್ಯದ ಜನತೆಗೆ ಎಷ್ಟೊಂದು ಕಂಟಕಕಾರಿಯಾಗಿ ನಿಲ್ಲಬಹುದೆಂಬುದರ ವಿಚಾರವನ್ನು, ಅವರು ತಮ್ಮ ತಲೆಯಲ್ಲಿ ಹಾಕಿಕೊಳ್ಳಲಿಕ್ಕೇ ಸಿದ್ಧರಿಲ್ಲ. ಮೊದಲನೆಯದಾಗಿ ಈ ಬಗೆಯ ಶಾಸನವು ಜನತೆಗೆ ಬೇಕಾಗಿದೆಯೋ ಇಲ್ಲವೋ ಎಂಬುದನ್ನೇ ಅವರು ವಿಚಾರಿಸಲು ಸಿದ್ಧರಿಲ್ಲ. ಈ ವಿಧೇಯಕವು ಕಾಯಿದೆಯಾಗಿ ಬಂದರೆ, ಸಮಾಜದಲ್ಲಿಯ ಮಧ್ಯಮತರಗತಿಯ ಲಕ್ಷಾವಧಿ ಕುಟುಂಬಗಳು ಅನ್ನಾನ್ನಗತಿಕವಾಗುವುದೆಂಬುದರ ಕಡೆಗೆ ಅವರು ಲಕ್ಷ್ಯವನ್ನೇ ಹರಿಸುತ್ತಿಲ್ಲ. ಮಧ್ಯಮತರಗತಿಯ ಜನತೆಯ ನಷ್ಟದಿಂದ, ಸಮಾಜಕ್ಕೆ ವಿಧಾಯಕವಾಗಿ ಇಪ್ಪ — ಒಂದು ವೈಶಿಷ್ಟ್ಯಪೂರ್ಣ — ಸುಸಂಸ್ಕೃತಿಯೇ ಹಾಳಾಗಿ ಹೋಗುವುದೆಂಬುದರ ಅರಿವು ಅವರಿಗೆ ಇದ್ದಂತಿಲ್ಲ. ಬಹುದಿನದ ಪರದಾಸ್ಯಜೀವನದ ಮೂಲಕ ಮೊದಲೇ ಕೆಳಮಟ್ಟಕ್ಕಿಳಿದ ನಮ್ಮ ಸಾಮಾನ್ಯ ಜನತೆಯ ಸ್ಥೈತಿಕಜೀವನ, ಇನ್ನೂ ಕೆಳಕ್ಕೆ ಇಳಿಯುವುದೆಂಬ ಮುನ್ನೋಟ ಅವರಿಗೆ ಇದ್ದಂತಿಲ್ಲ. ಕೇವಲ ಏಕೈಕ ದೃಷ್ಟಿಯವರಾಗಿ, ತಮ್ಮ ಮನೋಲಹರಿಯ ಹಟವನ್ನು ಸಾಧಿಸಬೇಕೆಂದು ಅವರು ನಿಂತಿದ್ದಾರೆ. ಸವಸ್ಥತ್ತ್ವದ ಆಸನದ ಮೋಹವಿದ್ದ ಕೆಲವರು — ತಮ್ಮ ಮನಸ್ಸಾಕ್ಷಿಗೆ ಒಪ್ಪಿಗೆಯಿಲ್ಲದಿದ್ದರೂ — ಅವರ ಮಾತಿಗೆ ತಮ್ಮ ಒಪ್ಪಿಗೆಯನ್ನು ಕೊಡುತ್ತಲಿದ್ದಾರೆ ಹೀಗೆ ಒಪ್ಪಿಗೆಯನ್ನು ಕೊಡುವವರಲ್ಲಿ, ಮೊದಲಿನಿಂದಲೂ ಹೊಲದೊಡೆಯರನ್ನು ದ್ವೇಷದಿಂದ ನೋಡುತ್ತ ಬಂದಿರುವ ಭೂರಹಿತ ಸದಸ್ಯರೂ ಇದ್ದಾರೆ. ಈ ಕಾಯಿದೆಯನ್ನು ಪಾಸುಮಾಡಿ ಸೇಡುತೀರಿಸಿಕೊಳ್ಳಬೇಕೆನ್ನುವ ವಿಕೃತಮನೋಭಾವನೆ ಇವರದು. ಮುಂಬರುವ ಸಾಮಾಜಿಕ ದುಷ್ಪರಿಣಾಮದ ವಿಚಾರವನ್ನು ಇವರು ಮಾಡುತ್ತಲೇ ಇಲ್ಲ.

ಬರಲಿರುವ ಚುನಾವಣೆಯಲ್ಲಿ ಗೆಲವು ಪಡೆಯುವ ಗತ್ತಿಗಾಗಿ ಈ 'ಹೊಲದೊಡೆಯರ ಸವಾಧಿಯ' ಕಾಯಿದೆಯನ್ನು ಪಾಸುಮಾಡಿಕೊಳ್ಳುತ್ತಿದ್ದಾರೆಂದು ಆಡಿಕೊಳ್ಳುವ ಜನರ ಮಾತುಗಳೂ ಅಲ್ಲಲ್ಲಿ ಕೇಳಬರುತ್ತಿವೆ. ಈ ಗತ್ತಿಗಾಗಿಯೆ ಈ ಕಾಯಿದೆಯು ಮುಂದೆ ಬರುವುದಾದರೆ, ಅದು ಇನ್ನೂ ಘಾತಕವಾಗಿ ಪರಿಣಮಿಸಬಹುದು. ಕಾಂಗ್ರೆಸ್ಸು ಸಂಘಟನೆಗೊಂಡು ಬೆಳೆದು ತನ್ನ ಧ್ಯೇಯವನ್ನು ಸಾಧಿಸಿದುದು ಹೆಚ್ಚಾಗಿ ನಮ್ಮಲ್ಲಿಯ ಮಧ್ಯಮತರಗತಿಯ ಜನರಿಂದ. ಇಷ್ಟೇ ಅಲ್ಲ ಎರಡು ಮೂರು ಸಲ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸು ಜಯಶಾಲಿಯಾದುದು ಮಧ್ಯಮತರಗತಿಯವರ ಸಹಾಯ ಸಹಕಾರಗಳಿಂದ. ಈಗ ಆಪತ್ಸೇ ಭಸ್ಮಾಸುರಭಾವದಿಂದ ನಾಶಗೊಳಿಸಿ, ಉಳುವ ರೈತನನ್ನೇ ಒಡೆಯನನ್ನಾಗಿ ಮಾಡುವುದರಿಂದ, ಮುಂದಿನ ಚುನಾವಣೆಯಲ್ಲಿ ತಾವು ಗೆಲವನ್ನು ಗಳಿಸುವೆನೆಂದು ಇಂದಿನ ನಮ್ಮ ಪ್ರಜಾಪ್ರತಿನಿಧಿಗಳು ನಂಬಿದ್ದರೆ, ಅದು ಅವರ ಭ್ರಮೆಯೇ ಸರಿ. ನಮ್ಮ ರೈತರಲ್ಲಿ ಬಹುಸಂಖ್ಯಾಕರು ಇನ್ನೂ ಅನಂಸ್ಕೃತರು. ತಾನೇ ಒಡೆಯನಾದ ರೈತ ಒಂದು ಪುಂಡರ ತಂಡಕ್ಕೆ ಸೇರಿಕೊಂಡು, ಅದರ ಮುಂದಾಳಿನ ಮಾತನ್ನು ಕೇಳಬಹುದಲ್ಲದೆ, ಸುಶಿಕ್ಷಿತರಾದ ಕಾಂಗ್ರೆಸ್ಸಿಗರ ಮಾತನ್ನು ಕೇಳಲಾರನು. ಆಗ ಈಗಿನ ಕಾಂಗ್ರೆಸ್ ಧುರೀಣರು ಸೋತು, ಆ ಪುಂಡರ ಮುಂದಾಳುಗಳ ಕೈಯಲ್ಲಿ ಕಾಂಗ್ರೆಸ್ಸಿನ ಮತ್ತು ಅಡಳಿತದ ಸೂತ್ರಗಳನ್ನು ಒಪ್ಪಿಸಿ ಮನೆಯಲ್ಲಿ ಕುಳಿತುಕೊಳ್ಳಬೇಕಾದೀತು. ಆಗ ತಮ್ಮ ಗತ್ತುಗಾರಿಕೆ ತಿಳಿಗೇಡಿತನದ್ದೆಂಬ ಅರಿವು, ಈ ವಿಧೇಯಕದ ಪುರಸ್ಕರ್ತರಿಗೆ ಉಂಟಾಗದೆ ಇರದು. ಅದಕ್ಕೆ ಕಳೆಮಕೊಂಡ ಮೇಲೆ ಬುದ್ಧಿ ಬಂದು ಮಾಡುವುದೇನು?

ನಮ್ಮ ಭಾರತೀಯ ಸಮಾಜವು ಹೃದಯಧರ್ಮದಿಂದಲೇ ಸಂಘಟಿತವಾದುದು. ಇಂದು ನಾವು ಅದನ್ನು ಬಿಟ್ಟು, ಕೇವಲ ಅರ್ಥದ ಬೆನ್ನುಹತ್ತಿ ಹೊರಟಿದ್ದೇವೆ. ಇದರಿಂದ, ನಮ್ಮ ಸಮಾಜಸಂಘಟನೆಗೆ ಅತ್ಯವಶ್ಯವಾಗಿ ಇದ್ದ ಪ್ರೀತಿ, ಸ್ನೇಹ, ದಯೆ, ದಾಕ್ಷಿಣ್ಯ, ಔದಾರ್ಯ– ಈ ಹೃದಯಧರ್ಮಸಂಪತ್ತಿಯನ್ನೇ ಕಳೆದುಕೊಳ್ಳುತ್ತಿದ್ದೇವೆ. ಈ ಸಂಪತ್ತಿಯು ಕಳೆದುಹೋದರೆ, ನಮ್ಮ ಸಮಾಜದ ಮೇಲೆ ಪ್ರಳಯದ ಆಘಾತವು ಶಾಶ್ವತವಾಗಿ ಬೀಳುವುದೆಂಬುದರಲ್ಲಿ ಸಂದೇಹವಿಲ್ಲ. ಮುಂಬಯಿರಾಜ್ಯದ ಈ ಹೊಲಸಾಗುವಳಿಯ ಕಾಯಿದೆಯು ಪಾಸಾದರೆ, ಹೊಲದೊಡೆಯರೆನಿಸಿಕೊಳ್ಳುವ ಮಧ್ಯಮತರಗತಿಯ ಮೇಲೆ ಆ ಪ್ರಳಯದ ಮೊದಲನೆಯ ಆಘಾತವು ಬಿದ್ದಂತಾಗುವುದು. ನಮ್ಮ ಸಮಾಜದ ದುರ್ದೈವವಿದು!

ನಾಡನಡೆ

ಜಯಂತಿಗೆ ಸಹಾಯಧನ

ಶ್ರೀಮಾನ್ ರಾ. ಯ. ಧಾರವಾಡಕರ
ಪ್ರಿನ್ಸಿಪಾಲ್ ಜನತಾಕಾಲೇಜ್, ಧಾರವಾಡ

೨೫ ರೂಪಾಯಿಗಳು.

ಸಹಾಯಧನವನ್ನು ಕಳಿಸುತ್ತ ಶ್ರೀ. ಧಾರವಾಡಕರರು ಹೀಗೆ ಕಾಗದವೊಂದನ್ನು ಬರೆದಿದ್ದಾರೆ:

" ಪ್ರಿಯ ಶ್ರೀ. ಬೆಟಗೇರಿ ಕೃಷ್ಣಶರ್ಮ ಅವರಿಗೆ—

ಜಯಂತಿಯ ಸಾಧನೆ-ತಪಸ್ಸುಗಳ ಬಗ್ಗೆ ಯಾರೂ ಪುನಃಪುನಃ ಹೇಳಬೇಕಾಗಿಲ್ಲ. ಕಳೆದ ಅನೇಕ ವರ್ಷಗಳಿಂದ ಜಯಂತಿ ಕನ್ನಡ ನಾಡಿಗಾಗಿ ಗೈದ ಅಮೋಘಸೇವೆ ಪುಷ್ಪಪ್ಪೆ ಇದೆ. 'ಜಯಂತಿ' ಕನ್ನಡ ನಾಡಿನಲ್ಲಿ ನಿರಂತರವಾದ ಸಾಹಿತ್ಯವನ್ನು ಒದಗಿಸಿ, ಅನೇಕ ಉದಯೋನ್ಮುಖ ಕವಿ-ಲೇಖಕರಿಗೆ ಬೆಳಕನ್ನು ಕೊಟ್ಟಿತು. ಅದಕ್ಕೆಲ್ಲ ತಾವು ಪಡುತ್ತಿರುವ ಅವ್ಯಾಹತ ಪರಿಶ್ರಮವೇ ಕಾರಣ. ನಿಮ್ಮ ವೈಯಕ್ತಿಕ ಸುಖ-ದುಃಖಗಳನ್ನು ಗಮನಿಸದೆ, ನೀವು ನಡೆಸಿದ ಈ ಕೆಲಸ ಮಹಾ ತಪಸ್ಸೇ ಸರಿ! ದೇವರು ತಮಗೆ ಯಶಸ್ಸನ್ನು ಕೊಡಲಿ. ಇದಕ್ಕಾಗಿ ನಾನು 'ಜಯಂತಿ' ಗೆಂದು ಕೊಡಬಯಸಿದ ೨೫ ರೂಪಾಯಿಗಳ ದೇಣಿಗೆಯಲ್ಲಿಯ ಮೊದಲನೆಯ ಕಂತು ಹತ್ತು ರೂಪಾಯಿ ಕಳುಹಿದ್ದೇನೆ. ದಯೆಯಿಟ್ಟು ಸ್ವೀಕರಿಸಬೇಕು. ಇದು ನನ್ನ ತೀರ ಅತ್ಯಲ್ಪ ಸೇವೆ. ದೇವರು ಜಾಚ್ಚು ಕೊಡುವಂತೆ ಪ್ರೇರೇಪಿಸಲಿ!

ನಿಮ್ಮ ವಿಶ್ವಾಸದ
ರಾ. ಯ. ಧಾರವಾಡಕರ.

'ಗೆಳೆಯರ ಬಳಗ' ಭಾಂಡುಪ— ಮುಂಬಯಿ

೨೦ ರೂಪಾಯಿಗಳು.

ಈ ಸಂಘದ ಕಾರ್ಯನಿರ್ವಾಹಕರು ಬರೆದ ಪತ್ರ ಹೀಗಿದೆ:—

" ಮಾನ್ಯರೆ,

ಇಲ್ಲಿಯ ಆಂಜಿಯಾತೆ (RMS) ಯ ಕನ್ನಡ ಕೆಲಸಗಾರರ 'ಗೆಳೆಯರ ಬಳಗ'ದ ಪರವಾಗಿ ಒಂದು ವಾಚನಾಲಯವನ್ನು ನಡೆಯಿಸುತ್ತಿದ್ದು ಅದಕ್ಕೆ ತಮ್ಮ ಪತ್ರಿಕೆಯ ಎರಡು ಪ್ರತಿಗಳನ್ನು ಪಡೆದುಕೊಳ್ಳುತ್ತಿರುವುದು ತಮಗೆ ವಿದಿತವಷ್ಟೆ? ತಮ್ಮ ಬಿನ್ನಹದ ಮೇರೆಗೆ ಜಯಂತಿ ಪತ್ರಿಕೆಯ ಏಳ್ಗೆಯ ಸದಿಚ್ಛೆಯಿಂದ, ನಮ್ಮ ಅಲ್ಪ ಕಾಣಿಕೆಯೆಂಬ ಇಂಬೆಯೆ ೨೦ ರೂ. ಗಳನ್ನು ಮನಿಯಾರ್ಡರಿನಿಂದ ಕಳುಹಲಾಗಿದೆ.

ಈಗಾಗಲೆ ಸಾಕಷ್ಟು ಜನಾದರಣೆ ಪಡೆದಿರುವ 'ಜಯಂತಿ' ಇನ್ನೂ ಹೆಚ್ಚು ಜಯಶೀಲವಾಗಿ ಸಾಗಿ, ನಾಡಿನ ಪಾಗು ನುಡಿಯ ಸೇವೆಯನ್ನು ಇನ್ನೂ ಹೆಚ್ಚು ಸಮರ್ಥರೀತಿಯಲ್ಲಿ ಸಲ್ಲಿಸುವಂತಾಗಲಿ ಮ 'ಗೆಳೆಯರ ಬಳಗ' ಸದಾಕಾಲ ಇಚ್ಛಿಸುವುದು. ಇತಿ ವಂದನೆಗಳು.

ತಮ್ಮ ವಿಶ್ವಾಸದ
ವಿ. ಎಸ್. ಜೋಶಿ
ಕಾರ್ಯದರ್ಶಿ
'ಗೆಳೆಯರ ಬಳಗ' ಮುಂಬಯಿ.

ಜಯಂತಿಯ ಅಭಿಮಾನಿ ಕನ್ನಡಿಗರ ಈ ಸದಿಚ್ಛೆಯೂ ಪ್ರತ್ಯಕ್ಷ ಸಹಾಯವೂ ನನ್ನ ಕಾರ್ಯೋತ್ಸಾಹವನ್ನು ಪರಿಪೋಷಿಸುವಂತಹವಾಗಿವೆ. ಶ್ರೀಮಾನ್ ಧಾರವಾಡಕರರಿಗೂ 'ಗೆಳೆಯರ ಬಳಗ'ದ ಎಲ್ಲ ಸದಸ್ಯರಿಗೂ ನನ್ನ ಕೃತಜ್ಞತೆಯ ವಂದನೆಗಳು.

—ಬೆಟಗೇರಿ ಕೃಷ್ಣಶರ್ಮ

ಗೋವಾಂತಕದ ಸತ್ಯಾಗ್ರಹಸಮರ

ಕಳೆದ ಆಗಸ್ಟ್ ೧೫ನೆಯ ದಿನಾಂಕವು ಭಾರತೀಯರ ಹೃದಯದಲ್ಲಿ ಬಹುಕಾಲ ನೆಟ್ಟನಿಲ್ಲುವಂತಹ ಘಟನೆಗಳನ್ನು ಒದಗಿಸಿ ಹೋಯಿತು. ಭಾರತೀಯರಲ್ಲಿ ಹುದುಗಿರುವ ಆತ್ಮಶಕ್ತಿಯೂ ಸ್ವದೇಶಾಭಿಮಾನವೂ ಎಂತಹವೆಂಬುದನ್ನು ಅದು ಲೋಕಕ್ಕೆಲ್ಲ ಸಾರಿತು.

ಪೋರ್ತುಗೀಜರು ಹುಂಬರಾದ ಕ್ರೂರರು. ಅಲ್ಲದೆ ಅವರಿಗೆ ಮರುಭೂದೇಶದ ಕಿವಿಮಾತನ್ನು ಹೇಳುತ್ತಿರುವ—ಕುಟಿಲ ರಾಜತಂತ್ರವನ್ನು ಆಡುತ್ತಿರುವ - ಪಶ್ಚಿಮದ ಕೆಲವು ರಾಷ್ಟ್ರಗಳ ಅಂತರಿಕ ಬೆಂಬಲವು ಇರುವುದು. ಆದುದರಿಂದಲೇ ಮಾನವತೆಯನ್ನೂ ರಾಜ್ಯನೀತಿಯನ್ನೂ ಮೆಟ್ಟಿನಿಂತು ಬರಿಗೈಯಿಂದ ಬರಲಿರುವ ಅಹಿಂಸಾವಾದಿಯ ಸತ್ಯಾಗ್ರಹಿಗಳನ್ನೂ ಮದ್ದುಗುಂಡುಗಳಿಂದ ಕೊಲ್ಲಲು ಸನ್ನದ್ಧರಾಗಿ ನಿಂತಿದ್ದರು. ಆದರೂ ವೀರರಾದ ಭಾರತೀಯ ಸತ್ಯಾಗ್ರಹಿಗಳು ಬೆಚ್ಚಿದರೆ? ಜೆದರಿದರೆ? ಪರಕಾರರ ಕಾಯಿದೆಯು ಜನರಿಗೆ ವಾಹನಗಳನ್ನು ಒದಗಿಸಲು ತಡೆಯೊಡ್ಡಿತು; ಆದರೂ ಆ ಸತ್ಯಾಗ್ರಹಿಗಳ ಸ್ವದೇಶಾಭಿಮಾನ, ಅವರ ಉತ್ಸಾಹವನ್ನು ಕುಂಠಿಸಿ ಮಾಡಲಿಲ್ಲ ಎಡೆಬಿಡದೆ ಸುರಿಯುತ್ತಿರುವ ಮಳೆನಾಡಿನ ಮಳೆಯಲ್ಲಿ, ಕೆಸರು ತುಂಬಿದ ದಾರಿಯಲ್ಲಿ ನಡೆಯುತ್ತಲೇ ಹೋಗಿ, ಗೋವೆಯ ಗಡಿಯನ್ನು

ತಲ್ಲಿದರು. ಯಾರಿಗೂ ಕೂಳು ನೀರಿನ ಪರವೆಯಿರಲಿಲ್ಲ; ಮರಣದ ಭೀತಿಯಿರಲಿಲ್ಲ. ನುಗ್ಗಿದರು! ಗೋವೆಯ ಗಡಿಯನ್ನು ಭೇದಿಸಿ ಸಾವಿರಸಂಖ್ಯೆಯಲ್ಲಿ ಒಳನುಗ್ಗಿದರು!! ಸೈನಿಕರ ಗುಂಡಿನೇಟನ್ನು ತಿಂದರು ಪೋಲೀಸರ ಲಾಠಿಯೇಟುಗಳನ್ನೂ, ಅಪಮಾನಕಾರಕವಾದ ಅಸಹನೀಯ ಏಟುಗಳನ್ನೂ ತಿಂದು ಸಹಿಸಿದರು. ಒಬ್ಬರ ಮನಸ್ಸೂ ವಿಕೃತವಾಗಲಿಲ್ಲ ಸತ್ಯಾಗ್ರಹ ನೀತಿಯನ್ನು ಮೀರಿ ನಡೆಮಕೊಳ್ಳಲಿಲ್ಲ. ಜೊತೆಯಲ್ಲಿದ್ದವರು ಗುಂಡುತಾಗಿ ಸತ್ತುಬಿದ್ದರೂ, ಮಿಕ್ಕವರು ತಮ್ಮ ಧ್ಯೇಯದಿಂದ ಹಿಂಜರಿಯಲಿಲ್ಲ. ಛಲೆ, ಭಾರತೀಯರ ಆತ್ಮಶಕ್ತಿಯೆ! ಕ್ಷಾತ್ರಬಲವೆ!

ನಮ್ಮ ಕೆಲವು ಜನ ವೀರರನ್ನು ಪೋರ್ತುಗೀಜರು ಕೊಂಯಹಾಕಿದ್ದರೂ ಅವರಿಗೆ ಇಂದು ಗೆಲವಿನ ಸಮಾಧಾನವಿಲ್ಲ. ಮಾನವತೆಯ ಅಂಶ ಅವರಲ್ಲಿ ಸ್ವಲ್ಪವಾದರೂ ಇದ್ದರೆ. ಅವರ ಕರುಳಲ್ಲಿ ಕಿಚ್ಚೇ ಬಿದ್ದಿರಬೇಕು. ದಾನವತೆಯ ಅಂಶವೇ ತುಂಬಿಕೊಂಡಿದ್ದರೆ, ಸತ್ಯಾಗ್ರಹದ ಈ ದೈವೀಶಕ್ತಿಗಾಗಿ ಅವರು ಭೀತಿಗೊಂಡಿರಬೇಕು. ಭಾರತೀಯರು ಪೋರ್ತುಗೀಜರಿಂದ ಭಾರತದ ಪ್ರದೇಶಗಳನ್ನು ಕಿತ್ತುಕೊಳ್ಳಬೇಕಾದರೆ, ಶಾಂತಿಮಯ ಸತ್ಯಾಗ್ರಹದಿಂದಲೇ ಕಿತ್ತುಕೊಳ್ಳಬೇಕಲ್ಲದೆ, ಶಸ್ತ್ರ-ಸೈನಿಕ ಯುದ್ಧದಿಂದಲ್ಲ. ಮಹಾತ್ಮರ ಪ್ರಭಾವದಿಂದ ಹೊಸ ಬೆಳಕನ್ನು ಕಂಡ ಭಾರತರಾಷ್ಟ್ರವು, ಇಂದು ಲೋಕಕ್ಕೆಲ್ಲ ಶಾಂತಿ-ಸಹಜೀವನಗಳ ಸಂದೇಶವನ್ನು ಬೀರುತ್ತಲಿದೆ. ಇಂತಹ ಕಾಲದಲ್ಲಿ ಭಾರತರಾಷ್ಟ್ರ ಗೋವೆಯ ಮೇಲೆ ಯುದ್ಧವನ್ನು ಸಾರಬೇಕೆ?

ಕುಟಿಲ ರಾಜತಂತ್ರಜ್ಞರ ಕೈಚಳಕ

ಹಾಗೆ ಭಾರತವು ಯುದ್ಧವನ್ನು ಸಾರಬೇಕೆಂದೇ ಈಗ ಪಶ್ಚಿಮದ ಕುಟಿಲ ರಾಜಕಾರಣಿಗಳು ದಾರಿಯನ್ನು ಕಾಯುತ್ತಿದ್ದಾರೆ. ಅವರಿಗದು ಇಷ್ಟವಾದ ವಿಷಯವಾಗಿದೆ. ಭಾರತ ರಾಷ್ಟ್ರಪುರುಷನ ತನ್ನ ಸಂಚಶೀಲಗಳ ತಕ್ಕೊಪ್ಪೇಸದೇಶದಿಂದ, ಜಗತ್ತಿನಲ್ಲಿಯ ಬಹುಜನರ ಮನಸ್ಸನ್ನು ಸೆಳೆದುಕೊಂಡಿರುವುದು ಅವರಿಗೆ ಸಹಿಸಲಾರದಂತಹ ಸಂಗತಿಯಾಗಿದೆ. ಭಾರತವನ್ನು ಶಾಂತಿತತ್ತ್ವದಿಂದ ಚ್ಯುತಗೊಳಿಸಿ, ಅದರ ಪ್ರಭಾವವನ್ನು ಕಡಿಮೆಮಾಡಬೇಕೆಂಬ ಕುಸಂಕಲ್ಪದಿಂದ ಅವರು, ಜಾಗತಿಕ ರಾಜಕಾರಣದಲ್ಲಿ ಬಗೆಬಗೆಯ ಕೈಚಳಕಗಳನ್ನು ನಡೆಸಿದ್ದಾರೆ. ಮೂರ್ಖ ಪೋರ್ತುಗೀಜರನ್ನು ಹುರಿದುಂಬಿಸಿ, ಭಾರತದ ವಿರೋಧಿಗಳನ್ನಾಗಿ ನಿಲ್ಲಿಸಿರುವುದೂ ಅವರದೊಂದು ಕೈಚಳಕವೆ. ಬಹಿರಂಗದಲ್ಲಿ ಭಾರತದ ಶಾಂತಿತತ್ತ್ವವನ್ನು ಎತ್ತಿಹಿಡಿದು ಮಾತನಾಡಿದಂತೆ ತೋರಿಸುತ್ತಿದ್ದರೂ, ಅಂತರಂಗದಲ್ಲಿ ಅವರೆಲ್ಲ ಪೋರ್ತುಗೀಜರಿಗೆ ಕಿವಿಮಂತ್ರಗಳನ್ನು ಊದುತ್ತಲಿದ್ದಾರೆ. ಭಾರತದ ಸೈನ್ಯಶಕ್ತಿಯ ಎದುರು ಪೋರ್ತುಗೀಜರು ಒಂದೇ ಒಂದು ಗಳಿಗೆಯ ಕಾಲ ತಡೆಯುಲಾರರೆಂಬುದು ಆ ಚಾಣಕ್ಯತಂತ್ರಿಗಳಿಗೆ ಗೊತ್ತಿಲ್ಲವೆಂತಲ್ಲ; ಪೋರ್ತುಗೀಜರನ್ನು ಬಲಿಯಾಗಿ ಕೊಟ್ಟು ಭಾರತವನ್ನು ಯುದ್ಧದಲ್ಲಿ ಕೆಡಹಬೇಕೆಂಬುದೇ ಅವರ ದುರಾಕಾಂಕ್ಷೆಯಾಗಿದೆ.

ಇಂಗ್ಲಂಡ್-ಅಮೇರಿಕೆಗಳ ವೃತ್ತಪತ್ರಗಳಲ್ಲಿ ಪ್ರಕಟವಾದ ಗೋವೆಯ ಸತ್ಯಾಗ್ರಹದ ವರದಿಗಳನ್ನು ನೋಡಿರಿ! ಅದೆಷ್ಟು ಸತ್ಯದ ಅಪಲಾಪ! ಅದೆಷ್ಟು ಭಾರತೀಯ ಧುರೀಣರ ಟೀಕೆ! ಸತ್ಯಾಗ್ರಹಿ ವೀರರ ಬಗೆಗಂತೂ ಹೇಸಿಕೆ ಬರುವಂತಹ ಪುಸಿಮಾತುಗಳನ್ನು ಬಳಸಿದ್ದಾರೆ. ಇದೇತರ ಲಕ್ಷಣ?

ನಿಜವಾಗಿಯೂ ಇಂಗ್ಲಂಡ್-ಅಮೇರಿಕೆಗಳ ಧುರೀಣರು ನಡುವೆ ಬಿದ್ದು ಸಂಧಾನ ಮಾಡಲೆಳಸಿದರೆ; ಗೋಮಾಂತಕದ ಸ್ವಾತಂತ್ರ್ಯದ ಪ್ರಶ್ನೆ ಸುಲಭವಾಗಿ ಬಿಡುವುದು. ಆದರೆ ಹಾಗೆ ಬಿಡಿಸುವುದು ಅವರಿಗೆ ಬೇಕಾಗಿಲ್ಲ. ಭಾರತವು ಯುದ್ಧದ ಭೇರಿಯನ್ನು ಬಾರಿಸುವುದೇ ಬೇಕಾಗಿದೆ. ಆದರೆ ಬ್ರಿಟಿಷರಿಗೆ ಭಾರತೀಯರ ಸತ್ಯಾಗ್ರಹ-ಶಕ್ತಿ ಎಂತಹದೆಂಬುದು ಗೊತ್ತಿಲ್ಲವೆ? ಅಂತಹ ದಿವ್ಯವಾದ ವಿಧಾಯಕ ಶಕ್ತಿ ತಮ್ಮ ಬಳಿಯಲ್ಲಿ ಇರುವಾಗ, ಭಾರತೀಯರು ಶಸ್ತ್ರಯುದ್ಧದ ಬೆನ್ನನ್ನೇಕೆ ಹತ್ತುವರು? ಪೋರ್ತುಗೀಜರು, ಈ 'ಊರು ಸುಟ್ಟು ನೋಜುನೋಡುವ' ಕುಟಿಲರ ತಂತ್ರಕ್ಕೆ ಒಳಗಾಗದೆ ಹೋದರೆ, ಕೊನೆಯವರೆಗೂ ಅವರು ಭಾರತೀಯರಿಗೆ ಸ್ನೇಹಿಗಳಾಗಿ ಉಳಿಯಬಹುದು; ಇಲ್ಲವಾದರೆ, ಎಲ್ಲ ರೀತಿಯಿಂದಲೂ ತಮ್ಮ ನಾಶವು ಕಟ್ಟಿಟ್ಟದ್ದೆಂಬುದರ ಅನುಭವ, ಬೇಗನೆ ಅವರಿಗೆ ಬಾರದೆಹೋಗದು.

ಪಾಕಿಸ್ತಾನಿಗಳ ಪರಪ್ರಕಾಶಕ ನಡತೆ

ಗೋಮಾಂತಕದ ರಾಜಕಾರಣದ ವಿಚಾರದಲ್ಲಿ, ಅಮೇರಿಕಾ-ಬ್ರಿಟಿಷ್ ರಾಜಕಾರಣಿಗಳು, ಪಾಕಿಸ್ತಾನಿಗಳನ್ನೂ ಮೂಗಿಗೆ ಕವಡೆ ಕಟ್ಟಿ ಆಡಿಸುತ್ತಿದ್ದಾರೆಂದು ತೋರುವುದು. ಭಾರತಕ್ಕೆ ವಿರೋಧಿಯಾಗಿ ನಿಂತಿದೆಯೆಂಬುದು ಸಂಪೂರ್ಣವಾಗಿ ಗೊತ್ತಿದ್ದರೂ, ಪಾಕಿಸ್ತಾನವು ಗೋವೆಯಲ್ಲಿಯ ಪೋರ್ತುಗೀಜರಿಗೆ ಎಲ್ಲ ಬಗೆಯ ಸಹಕಾರವನ್ನು ನೀಡುತ್ತಲಿದೆ. ಬಾಂಡುಂಗ್ ಪರಿಷತ್ತಿನಲ್ಲಿ ಪಾಸಾದ ವಸಾಹತುವಾದವಿರೋಧೀ ಗೊತ್ತುವಳಿಗೆ ಪಾಕಿಸ್ತಾನವೂ ಒಪ್ಪಿ ಸಹಿಯಿಕ್ಕಿರುವುದಾದರೂ, ಪೋರ್ತುಗೀಜರ ಈಗಿನ ಅನ್ಯಸರ್ಗಿಕ ರಾಜಕಾರಣವನ್ನು ಅದು ವಿರೋಧಿಸುತ್ತಿಲ್ಲ. ಭಾರತದ ನೆರೆಯ ರಾಷ್ಟ್ರಗಳಾದ ಬರ್ಮ್ಮದೇಶ, ಇಂಡೋನೆಷ್ಯಾ, ಸಿಲೋನಗಳು ಪೋರ್ತುಗೀಜರ ಚಟುವಟಿಕೆಗಳನ್ನು ಮುಕ್ತಮನದಿಂದ ವಿರೋಧಿಸಿ ಮಾತನಾಡಿವೆ; ಆಡುತ್ತಲಿವೆ. ಆದರೆ ಪಾಕಿಸ್ತಾನವು ಈ ವಿಷಯದಲ್ಲಿ ಎಂದೂ ಬಾಯಿಬಿಟ್ಟಿಲ್ಲ ಇಷ್ಟೇ ಅಲ್ಲ, ದಿಲ್ಲಿಯಿಂದ ಹೊರಬಿದ್ದ ಪೋರ್ತುಗೀಜ್ ರಾಯಭಾರಿಗೆ ಸಿಲೋನ್ ಸರಕಾರವು ಅವಕಾಶವನ್ನು ಕೊಡಲು ಸಮ್ಮತಿಸಲಿಲ್ಲವಾದರೂ, ಪಾಕಿಸ್ತಾನವು ಅವನನ್ನು ಸ್ವಾಗತಿಸಿ, ತನ್ನಲ್ಲಿ ಕಚೇರಿಯನ್ನು ತೆರೆಯಲು ಅವಕಾಶ ಕಲ್ಪಿಸಿಕೊಟ್ಟಿದೆ. ಇಷ್ಟೆಲ್ಲ ಮಾಡಿಯೂ ಪಾಕಿಸ್ತಾನಿಗಳು ಭಾರತದ ಸಂಪೂರ್ಣ ಸ್ನೇಹ-ಸಹಕಾರಗಳನ್ನು ಬಯಸುತ್ತಿದ್ದಾರಂತೆ! ಮೊನ್ನೆ-ಮೊನ್ನೆಯೆ ಪಟ್ಟವನ್ನೇರಿದ ಪಾಕಿಸ್ತಾನದ ಪ್ರಧಾನಮಂತ್ರಿಗಳು, ನೇಹರೂ ಅವರಿಗೆ ಬರೆದ ಪತ್ರದಲ್ಲಿ ಹೀಗೆ ಸ್ನೇಹವನ್ನು ಯಾಚಿಸಿದ್ದಾರೆ ಭಾರತೀಯರಲ್ಲೆಲ್ಲ ಬರೀ ಭಾವಿಕ ಬುದ್ಧಿಹೀನರೇ ಇದ್ದಾರೆಂದು ಪಾಕಿಸ್ತಾನಿಗಳು ಭಾವಿಸಿರುವರೇನೊ! ಎಂತಲೇ 'ಆಡುವುದೇ ಒಂದು ಮಾಡುವುದೇ ಒಂದು' ಎಂಬ ಕಾಯಕವನ್ನವರು ನಡೆಸಿದ್ದಾರೆ. ಪಾಪ, ರಾಜಕಾರಣವೆಂದರೆ ಏನೆಂಬುದನ್ನೇ ಅರಿಯದ ಬಾಲಬುದ್ಧಿಯವರವರು. ತಮ್ಮನ್ನು ಇನ್ನಾರೋ ಕೈಯಲ್ಲಿ ಹಿಡಿದು ಕುಣಿಸುತ್ತಲಿದ್ದಾರೆಂಬ ಕಲ್ಪನೆ ಕೂಡ ಅವರಿಗಿಲ್ಲವಾಗಿದೆ. ಭಾರತದೊಂದಿಗೆ ನಿಜವಾಗಿಯೂ ತಮಗೆ ಸ್ನೇಹ-ಸಹಕಾರಗಳು ಬೇಕಾಗಿದ್ದರೆ, ನಿತ್ಯ ನಿತ್ಯವೂ ನಡೆಸಿರುವ ಭಾರತವಿರೋಧಿ ಕೃತಿಗಳನ್ನು ಪಾಕಿಸ್ತಾನಿಗಳು ತಡೆದುಹಿಡಿಯಬೇಕು.

ವ್ರತಭಂಗ

(ಒಂದು ಕಥೆ)

ಶ್ರೀ. ಪ್ರ. ಮ. ಗಲಗಲಿ ಬಿ ಎ. (ಆನರ್ಸ್), ಬಿ. ಕಾಮ್.
ಮುಂಬಯಿ

卐

ನಿಸರ್ಗ ಸೌಂದರ್ಯದ ಆಕರ್ಷಣೆಯು ಎಂತಹ ವೈರಾಗ್ಯ ಶಾಲಿಯನ್ನೂ ತನ್ನ ಬಲೆಯಲ್ಲಿ ಹಿಡಿಯುವುದು. ಆ ಸೌಂದರ್ಯದಿಂದ ಸಂಭ್ರಾಂತನಾದ ವ್ಯಕ್ತಿ, ತಾನೂ ಸೌಂದರ್ಯದ ನಿರ್ಮಿತಿಗೆ ತೊಡಗುವನು. ಆಗ ಆತನಿಗೆ ತನ್ನ ವ್ರತ-ಸಂಕಲ್ಪಗಳ ಅರಿವೂ ಮರೆಯಾಗುವುದು.

卐

ಭಿಕ್ಕು ಇಡಿಯ ದಿನವೆಲ್ಲ ನಡೆದು, ತೀರ ದಣಿದವನಾಗಿ ಬಂದು ನರ್ಮದೆಯ ದಂಡೆಯ ಮೇಲೆ ನಿಂತಾಗ, ಅದೇ ಸಂಜೆಯಾಗಿತ್ತು. ಸಂಧ್ಯಾಸೂರ್ಯನು ಕೆಂಪಾಗಿ ಆಕಾಶದಲ್ಲಿ ರಕ್ತದೋಕುಳಿಯಾಡುತ್ತ ನಿಂತಿದ್ದನು. ಶರದೃತುವಿನ ಸುಂದರ ಮೋಡಗಳು ಅನಂತ ನೀಲಾಕಾಶದಲ್ಲಿ ಅಲ್ಲೊಂದು ಇಲ್ಲೊಂದು ಸಾವಕಾಶವಾಗಿ ತೇಲುತ್ತ ನಡೆದಿದ್ದುವು. ಸಂಜೆಯ ಶೀತಲ ಸುಗಂಧಿತ ಸುಳಿಗಾಳಿ, ಆ ಮೋಡಗಳ ಸೌಂದರ್ಯವನ್ನೂ, ಅವುಗಳ ಚಿತ್ರವಿಚಿತ್ರ ವರ್ಣ, ರೇಖೆಗಳನ್ನೂ ನೋಡುತ್ತ, ಅವುಗಳ ಗತಿ ಹೆಚ್ಚಿ ದೃಶ್ಯ ಮರೆಯಾಗೀತೆಂದು ಸಾವಕಾಶವಾಗಿ ಹಿತವಾಗಿ ಬೀಸುತ್ತಿತ್ತು. ಹಕ್ಕಿಗಳು ಚಿಲಿಪಿಲಿಗುಟ್ಟುತ್ತ ಗುಂಪುಗುಂಪಾಗಿ ದಿನದ ದುಡಿಮೆಯನ್ನು ಮುಗಿಸಿ ಗೂಡಿನೆಯ ಕಡೆಗೆ ಹೊರಟಿದ್ದುವು. ಅನತಿದೂರದಲ್ಲಿಯೇ ದೋಣಿಯೊಂದು ಒನಪು-ಒಯ್ಯಾರಗಳಿಂದ ನರ್ಮದೆಯ ಚಿಕ್ಕ ಚಿಕ್ಕ ತೆರೆಗಳನ್ನು ಬದಿಗೆ ಸರಿಸುತ್ತ ಬರುತ್ತಿತ್ತು. ವಿಾನುಗಾರನು ಗಂಭೀರ ಧ್ವನಿಯಿಂದ ಪಾಡುತ್ತಿದ್ದ ಜಾನಪದಗೀತವು ಹೃದಯವನ್ನು ಆನಂದಾತಿರೇಕದಿಂದ ತುಂಬಿ, ಸುತ್ತಲಿನ ವಾತಾವರಣವನ್ನು ಗಂಭೀರವಾಗಿಸಿ, ಚತುರ್ದಶ ದಿಕ್ಕುಗಳಿಗೆ ತೆರೆತೆರೆಯಾಗಿ ಹರಡುತ್ತಿತ್ತು. ದೋಣಿಯ ಪಟ ಸೂರ್ಯನ ಮತ್ತು ಸೌಂದರ್ಯದ ಮಧ್ಯದಲ್ಲಿ ಹಿಡಿದ ಅಂತಃಪಟದಂತೆ ಕಾಗೊಳಿಸುತ್ತಿತ್ತು. ಮುಂಪೆ ನರ್ಮದೆಯು ಸಾವಿರ ಕಂಠಗಳಿಂದ ಸುಶ್ರಾವ್ಯವಾಗಿ ಕಲಕಲ ನಿನಾದವನ್ನು ಮಾಡುತ್ತ, ಭಗವಾನ್ ಬುದ್ಧನ ವಕ್ಷಸ್ಥಲದಲ್ಲಿ ಕುಸುಮಮಾಲೆಯನ್ನಿಡಲು ಗೆಜ್ಜೆಗಳ ಕಪ್ಪುಳ ಮಾಡುತ್ತ—ನಿರಿಗೆಯನ್ನು ಚಿಮ್ಮುತ್ತ—ವೈಯಾರದಿಂದ ಸಾಗಿಬಂದ ಯಶೋಧರೆಯಂತೆ, ಸಾಗರದೆಡೆಗೆ ಶಂಭ್ರಮದಿಂದ ಸಾಗಿದ್ದಳು. ನಿಸರ್ಗವೇ ಸೌಂದರ್ಯವನ್ನು ಧರಿಸಿ ಸನ್ಯಾಸಿಯೆದುರು ನಿಂತಿತ್ತು. ಆ ಅನಂತಸೌಂದರ್ಯಕ್ಕೆ ಭಿಕ್ಕು ಶಿರಸಾ ವಂದಿಸಿದನು. ಆ ಸಂಜೆಯಲ್ಲಿ ಭಿಕ್ಕುವಿಗೆ ಅಗಮ್ಯ—ಪವಿತ್ರ—ಸೌಂದರ್ಯದ ಅನಂತತೆ ಗೋಚರಿಸಿ, ಅವನು ಸಮಾಧಿಸ್ಥನಾದನು

ಮರುದಿನ ಮುಂಜಾವದಲ್ಲಿ ನರ್ಮದೆಯನ್ನು ದಾಟಿ ಭಿಕ್ಕು ದಕ್ಷಿಣಕ್ಕೆ ಹೊರಟನು. ಕೈಯಲ್ಲಿ ದೊಡ್ಡದಾದ ಕೋಲನ್ನು ಹಿಡಿದು, ಕಾವಿಯ ಬಟ್ಟೆಯನ್ನುಟ್ಟುಕೊಂಡು, ಹೆಗಲಮೇಲೆ ಚಿಕ್ಕದಾದ ಕಾವಿಯಬಣ್ಣದ ಹಸಿಬೆಯನ್ನಿಟ್ಟುಕೊಂಡು, ನರ್ಮದೆಯನ್ನು ಬೀಳ್ಕೊಟ್ಟು, ಹೆಜ್ಜೆಗಳನ್ನು ಇಡಲಾರದೇ ಎತ್ತಿಡುತ್ತ ಅವನು ಹೊಂಟನು. ಅವನಿಗೆ ಪ್ರಪಂಚದ ಜ್ಞಾನ ಮರೆಯಾಗಿತ್ತು. ತಾನು ಹೊರಟಿರುವ ದಿಕ್ಕನ್ನೂ ಮರೆತು ಭಿಕ್ಕು ದ್ರುತಗತಿಯಿಂದ ಹೊರಟನು. ಅವನ ಮನಸ್ಸು ಬಾಹ್ಯ ಆವರಣಕ್ಕೆ ಸಿಲುಕದಂತೆ ಶೂನ್ಯವಾಗಿ ಹೋಗಿತ್ತು. ಅವನ ತೆರೆದ ಕಣ್ಣಿಗೆ ಹೊರಟಿರುವ ದಾರಿಕೂಡ ಕಾಣದಾಗಿತ್ತು. ಅವನ ಬಹಿರ್ಚಕ್ಷು-ಅಂತರ್ಚಕ್ಷುಗಳು ಕೇವಲ ಸೌಂದರ್ಯವನ್ನು ನೋಡುತ್ತಿದ್ದುವು. ಅವನ ಹೃದಯ ಸೌಂದರ್ಯದಿಂದ ತುಂಬಿತ್ತು. ಅವನ ನೀಳವಾದ ಕೈಗಳು ಆ ಸೌಂದರ್ಯವನ್ನು ಹಿಡಿದಿಡಲು ಯತ್ನಿಸುತ್ತಿದ್ದುವು. ಅವನ ಮನಸ್ಸು ಭಗವಾನ್ ಬುದ್ಧನು ತೋರಿದ ನಿರ್ವಾಣದ ಆನಂದದಿಂದ, ನಿಸರ್ಗವು ನರ್ಮದೆಯ ತಡಿಯಲ್ಲಿ ಅನಂತ ಸೌಂದರ್ಯಾನುಭವದಿಂದ ಮತ್ತವಾಗಿ ಇನ್ನೂ ಸಮಾಧಿಸ್ಥ ಸ್ಥಿತಿಯಿಂದ ಕೆಳಗಿಳಿದಿರಲಿಲ್ಲ. ಅವನ ಕಾಲುಗಳು ಮಾತ್ರ ನೆಲಕ್ಕೆ ಬಡಿಯುತ್ತಿದ್ದ ಕೋಲಿನ ತಾಳಕ್ಕೆ ಸರಿಯಾಗಿ ಹೆಜ್ಜೆಗಳನ್ನಿಕ್ಕುತ್ತ, ಅವನನ್ನು ಎತ್ತ ಕಡೆಗೋ ಕರೆದುಕೊಂಡು ಹೊರಟಿದ್ದುವು. ಭಿಕ್ಕು ಅದೇ ಸ್ಥಿತಿಯಲ್ಲಿ ಒಂದೇಸವನೇ ಒಂದೆರಡು ದಿನಗಳ ವರೆಗೆ ನಿದ್ರೆ-ನೀರಡಿಕೆಗಳನ್ನು ಮರೆತು, ಕೇವಲ ಸೌಂದರ್ಯವೊಂದನ್ನೇ ಆರಸುತ್ತ ಸಾಗಿ, ಚಿಕ್ಕ ಹಳ್ಳಿಯೊಂದಕ್ಕೆ ಬಂದನು.

ಆಗ ರಾತ್ರಿಯಾಗಿತ್ತು. ಭಿಕ್ಕು ಗುಡ್ಡಗಳ ಸಾಲಿನ ನಡುವೆ ನಿಂತು ನಿಸರ್ಗವನ್ನು ನಿರೀಕ್ಷಿಸಿದನು. ಮೇಲೆ ಆಕಾಶದಲ್ಲಿ ಕೃಷ್ಣವೆಯ ಚಂದ್ರನು ಕಂಗೊಳಿಸುತ್ತಿದ್ದನು. ಕ್ಷೀರಸಾಗರದಂತೆ ವಿಶಾಲವಾದ ಆಕಾಶವು ಬೆಳುದಿಂಗಳಿನ ಸ್ನಾನ ಮಾಡಿತ್ತು. ಚಂದ್ರನ ಪ್ರಶಾಂತವಾದ ದಟ್ಟವಾದ ಆ ಬೆಳುದಿಂಗಳಿನಲ್ಲಿ ಆಕಾಶದ ಅನಂತ ಛಿದ್ರಗಳು ಅಂದು ಮರೆಯಾಗಿ, ಕೇವಲ ಬಿಳಿಯ ಛಾಯೆ ತುಂಬೆಲ್ಲ ಹರಡಿತ್ತು. ಶರದೃತುವಿನ ತುಂಡುಮೋಡಗಳು, ಮಧ್ಯರಾತ್ರಿಯಲ್ಲಿ ನಿದ್ದೆಗಣ್ಣಿನಲ್ಲಿ ತೂಕಡಿಸುತ್ತ ಅಲ್ಲಲ್ಲಿ ನಿಂತಿದ್ದುವು. ಹೂದೋಟದಲ್ಲಿ ಸಂಚರಿಸುತ್ತಿದ್ದ ಸಿದ್ಧಾರ್ಥ-ಯಶೋಧರೆಯರಂತೆ, ದೂರದಲ್ಲಿ ಚಂದ್ರನು ರೋಹಿಣಿಯೊಡನೆ ವಿಲಾಸದಿಂದ ಆಕಾಶಯಾತ್ರೆಗೆ ಹೊರಟಿದ್ದನು.

ಕೆಳಗೆ ಇಳೆಯು ಬಿಳಿಯವಸ್ತ್ರವನ್ನುಟ್ಟು, ಪೂಜೆಗೆಂದು ಹೊರಟಿದ್ದ ಮಹಾಶ್ವೇತೆಯಂತೆ, ಬೆಳುದಿಂಗಳಿನ ಉಡುಗೆಯುಟ್ಟು ಶೋಭಿಸುತ್ತಿದ್ದಳು. ಅಲ್ಲೊಂದು ಇಲ್ಲೊಂದು ಪಕ್ಷಿ, ಸೌಂದರ್ಯದ ಅದಮ್ಯಶಕ್ತಿಯನ್ನು ಜಯಿಸಲಾರದೆ, ಮಧ್ಯರಾತ್ರಿಯಲ್ಲಿಯೂ ಎಚ್ಚೆತ್ತು ಕೂಗುತ್ತಿದ್ದುವು. ಶೀತಲ ಮಂದಮಾರುತವು ಹಿತವಾಗಿ

ಬೀಸುತ್ತಿತ್ತು. ಪ್ರಪಂಚವೇ ಸೌಂದರ್ಯದಲ್ಲಿ ಮಿಂದು ಬೆಳುದಿಂಗಳ ಬೆಳಿಯುಡಿಗೆಯನ್ನುಟ್ಟುಕೊಂಡು, ನಿಸರ್ಗವನ್ನು ವಿಸ್ಮಯದಿಂದ ನೋಡುತ್ತ ಮೂಕ ಪೂಜೆಯನ್ನು ಸಲ್ಲಿಸುತ್ತಿತ್ತು. ಹಕ್ಕಿಗಳ ಉಲಿವನ್ನು ಬಿಟ್ಟು ಬೇರಾವ ಸದ್ದೂ ಕೇಳಬರುತ್ತಿದ್ದಿಲ್ಲ. ಎದುರಿಗೆ ಮೂರನ ಸೈನ್ಯದೆದುರು ಅಚಲನಾಗಿ, ಮಂದಸ್ಮಿತವದನನಾಗಿ ಮೇರು-ಪರ್ವತದಂತೆ ಸ್ಥಿರನಾಗಿ ಕುಳಿತ ಬುದ್ಧನಂತೆ, ಆ ಸೌಂದರ್ಯದ ಉದಧಿಮಧ್ಯದಲ್ಲಿ ಪರ್ವತವೊಂದು ಕಂಗೊಳಿಸುತ್ತಿತ್ತು. ಕ್ಷೀರ-ಸಾಗರದ ಮಧ್ಯದಲ್ಲಿಂದ ಎದ್ದು ಬಂದ ಮೇರುಪರ್ವತದಂತೆ—ಬೆಳುದಿಂಗಳ ಹೊದಿಕೆಯನ್ನು ಹೊದ್ದ ಆ ಪರ್ವತವು ಶೋಭಿಸುತ್ತಿತ್ತು. ಸುತ್ತಲೆಲ್ಲ 'ಸತ್ಯಂ ಶಿವಂ ಸುಂದರಂ' ತತ್ತ್ವವು ತಾನೇ ತಾನಾಗಿ ಹರಡಿತ್ತು. ಭಿಕ್ಕು ಮತ್ತೆ ಅನಿರ್ವಚನೀಯ ಸಮಾಧಿಸ್ಥನಾದನು.

ಭಿಕ್ಕು ಸಮಾಧಿಯಿಂದ ಎಚ್ಚತ್ತು ಕಣ್ದೆರೆದು ನೋಡಿದಾಗ, ಅದೇ ಸೂರ್ಯೋದಯದ ಮುನ್ಸೂಚನೆಯಂತೆ ಪೂರ್ವದಿಗಂತದಲ್ಲಿ ವರ್ಣ-ವರ್ಣದ ವಸ್ತ್ರ ವಿಭೂಷಿತಳಾಗಿ ಉಷೆ ನೃತ್ಯವನ್ನಾರಂಭಿಸಿ ಸೂರ್ಯನಾರಾಯಣನನ್ನು ಸ್ವಾಗತಿಸುವ ಸಿದ್ಧತೆಯಲ್ಲಿದ್ದಳು. ಹಕ್ಕಿಗಳು ಎಚ್ಚತ್ತು ನಾನಾ ಸ್ವರಗಳಿಂದ ಸೂರ್ಯನನ್ನು ಸ್ವಾಗತಿಸುತ್ತ, ಸಂಭ್ರಮದಿಂದ ಗೂಡುಗಳನ್ನು ಬಿಟ್ಟು ಹಾರಿ ಹೊರಟಿದ್ದುವು. ಭಿಕ್ಕು ಗಿಡದ ತಡಿಯಲ್ಲಿ ಪೂರ್ವಾಭಿಮುಖವಾಗಿ ಕುಳಿತು, ಪರ್ವತದ ಶಿಖರವನ್ನೇರಿ ಬರುತ್ತಿದ್ದ ಸೂರ್ಯನನ್ನು ನೋಡುತ್ತಿದ್ದನು. ಬಂಗಾರದ ರಸದಲ್ಲಿ ಮಿಂದಂತೆ ಪರ್ವತವು ಸುರಮ್ಯವಾಗಿ ಕಾಣುತ್ತಿತ್ತು. ಭಿಕ್ಕು ಎದ್ದುನಿಂತು ಅತ್ಯಂತ ಸಂತೋಷದಿಂದ ಆ ಪರ್ವತವನ್ನು ಏರತೊಡಗಿದನು. ಇನ್ನೂ ಅವನ ಮನಸ್ಸು ಸೌಂದರ್ಯಸಮಾಧಿಯಿಂದ ಇಳಿದಿರಲಿಲ್ಲ. ಭಿಕ್ಕು ಪರ್ವತವನ್ನೇರಿ ನಿಂತು, ಸುತ್ತಲೂ ನೋಡಿದನು. ಎದುರಿಗೆ ವಿಶಾಲವಾದ ಅನೇಕ ಗುಹೆಗಳಿದ್ದುವು. ಅವನು ಯಾವ ತರದ ಅಜಿಕೆಯೂ, ವಿಚಾರವೂ ಇಲ್ಲದೆ ಅವನು, ಆ ಗುಹೆಗಳಲ್ಲಿಯ ಮೊದಲ ಗುಹೆಯನ್ನು ಹೊಕ್ಕನು. ಗುಹೆ ವಿಶಾಲವಾಗಿದ್ದಿತು. ಗಂಭೀರವಾದ ಆದರೂ ಪವಿತ್ರವಾದ ಶಾಂತತೆಯೊಂದು ನಿರ್ಜನವಾದ ಆ ಗುಹೆಯಲ್ಲಿ, ತುಂಬಿಲ್ಲ ತಾನೇ-ತಾನಾಗಿ ಹರಡಿತ್ತು. ಗುಹೆಯಲ್ಲಿ ಪ್ರಕಾಶವು ಬಹಳ ಮಂದವಾಗಿತ್ತು. ಭಿಕ್ಕುವಿಗೆ ಅಲ್ಲಿ ಒಂದು ಅನಿರ್ವಚನೀಯಸಂತೋಷದ ಅನುಭವವಾಯಿತು. ಆ ಕತ್ತಲು ತುಂಬಿದ ನಿರ್ಜನಗುಹೆಯನ್ನು ಬಿಟ್ಟುಹೋಗುವ ಮನಸ್ಸು ಅತನಿಗಾಗಲಿಲ್ಲ. ಅವನು ಶಾಂತ-ಮನಸ್ಸಿನಿಂದೆ ಪದ್ಮಾಸನಹಾಕಿ ಕುಳಿತುಕೊಂಡು, ಬುದ್ಧನನ್ನು ನೆನೆದು, ಗಟ್ಟಿಯಾಗಿ ಅಸ್ಪಲಿತ ವಾಣಿಯಿಂದ ಉಚ್ಚರಿಸಿದನು: "ಬುದ್ಧಂ ಶರಣಂ ಗಚ್ಛಾಮಿ, ಸಘಂ ಶರಣಂ ಗಚ್ಛಾಮಿ; ಧರ್ಮಂ ಶರಣಂ ಗಚ್ಛಾಮಿ!".

ಯೌವನದಲ್ಲಿ ಕಲಾವಿದನಾಗಿದ್ದ ಭಿಕ್ಕುವಿಗೆ ತನ್ನ ಜೀವನದ ಉದ್ದಿಶ್ಯ ತಿಳಿಯಿತು. ಭಿಕ್ಕು ತಾನು ಕಂಡು ಅನುಭವಿಸಿದ ಆ ಸೌಂದರ್ಯದ ಅನುಭವವನ್ನು, ತಾನು ಬುದ್ಧನ ಶಿಷ್ಯನಾಗಿ ಅನುಭವಿಸಿದ ನಿರ್ವಾಣದ ಸವಿಯನ್ನು, ತಾನು ಸಾರಬಯಸಿದ ಶಾಕ್ಯಮುನಿಯ ಅಹಿಂಸೆಯ ಸಂದೇಶವನ್ನು ಕಲ್ಲಿನಲ್ಲಿ ಕೆತ್ತಿ, ವರ್ಣ-ವರ್ಣದ ಚಿತ್ರಗಳನ್ನು ಬಿಡಿಸಿ ಕೃತಕೃತ್ಯನಾಗಬಯಸಿದನು. ಕಲಾವಿದ ಭಿಕ್ಕು ಕಣ್ದೆರೆದು ಗುಹೆಯನ್ನೀಕ್ಷಿಸಿದನು.

ಪದ್ಮಾಸನ ಹಾಕಿಕೊಂಡು ಪೂರ್ವಾಭಿಮುಖವಾಗಿ ಕುಳಿತು, ಎದುರಿಗೆ ಚಿತ್ರಕಲೆಯ ಸಾಧನಗಳನ್ನಿಟ್ಟುಕೊಂಡು, ಭಿಕ್ಕು ತನ್ನಲ್ಲಿಯೇ ತಾನು, ಈ ನಿರ್ಜನಗುಹೆಗಳ ಮಧ್ಯದಲ್ಲಿ ಬಂದದ್ದು ಹೇಗೆಂದು ವಿಚಾರಿಸುತ್ತಿದ್ದನು. ಮನುಷ್ಯನ ಜ್ಞಾನದಾಳವನ್ನು ದಾಟಿನಿಂತ ದೈವೀಶಕ್ತಿಯೊಂದು ಅವನನ್ನು ಅಲ್ಲಿಗೆ ಕರೆದು ತಂದಿತ್ತು. ಎಲ್ಲಿಯೂ ತಂಗದೇ ಹೊರಟಿದ್ದ ಭಿಕ್ಕುವಿಗೆ ತನ್ನ ಧರ್ಮವನ್ನು ವಿಸ್ತಾರ ಸಂಘದ ಕಟ್ಟಳೆಯನ್ನು ವಿಸ್ತಾರ, ತಂಗುವ ಅದಮ್ಯ ಇಚ್ಛೆಯುಂಟಾಯಿತು. ಮನೋಭೂಮಿಕೆಯಲ್ಲಿ ಆದ ಈ ಬದಲಾವಣೆಯ ಕಾರಣ-ಉದ್ದಿಶ್ಯಗಳೇನು? ಭಿಕ್ಕು ಕಣ್ದೆರೆದು ಸುತ್ತಲೂ ನೋಡಿದನು. ಗುಹೆಯಲ್ಲೆಲ್ಲ ಕತ್ತಲು ತುಂಬಿತ್ತು. ಅವನು ಎದ್ದು ನಿಂತು ಸುತ್ತಲೂ ಅಡ್ಡಾಡತೊಡಗಿದನು. ಒಮ್ಮೆಲೇ ಭಿಕ್ಕುವಿನ ದೃಷ್ಟಿ ಕಲ್ಲಿನ ಗೋಡೆಯ ಮೇಲೆ ಸ್ಥಿರವಾಗಿ ನಿಂತಿತು. ಭಿಕ್ಕುವಿನ ಸರ್ವಾಂಗಗಳೂ ಸ್ತಂಭಿತವಾದುವು. ಕಣ್ಣುಗಳು ಆನಂದಬಾಷ್ಪಗಳಿಂದ ತುಂಬಿದುವು. ಅವನ ನೀಳವಾದ ಕರಗಳು ತಾವಾಗಿಯೇ ಮುಗಿದವು. ಗೋಡೆಯ ಮೇಲೆ ಪ್ರಪಂಚಕ್ಕೆ ಅಭಯ ಹಸ್ತನೀಡಿ, ನಿರ್ವಾಣದ ಆನಂದವನ್ನು ಸರ್ವಾಂಗಗಳಲ್ಲಿಯೂ ಮೂಡಿಸಿ, ಮಂದಸ್ಮಿತವದನನಾಗಿ ಪದ್ಮಾಸನ-ಹಾಕಿ ಕುಳಿತ ಭಗವಾನ್ ಬುದ್ಧನ ಚಿತ್ರ! ಭಿಕ್ಕು ಗುಹೆಯ ತುಂಬ ಅತ್ಯಂತ ಹರ್ಷ ಪುಲಕಿತನಾಗಿ ಅಡ್ಡಾಡಿದನು. ಗುಹೆಯು ನಾಲ್ಕೂ ಕಡೆಗೆ ಸಿದ್ಧಾರ್ಥನ ಜೀವನದ ಅವಿಸ್ಮರಣೀಯ ಪ್ರಸಂಗಗಳು ಚಿತ್ರಿತವಾಗಿದ್ದುವು. ಇಲ್ಲಿ ಬುದ್ಧನು ಸಂಬುದ್ಧನಾಗುವ ಮುನ್ನ ಬೋಧಿವೃಕ್ಷದ ಕೆಳಗೆ ಮಾರನಿಗೆದುರಾಗಿ ಕುಳಿತಿದ್ದಾನೆ; ಅಲ್ಲಿ ಬುದ್ಧನು ತನ್ನ ಶರೀರವನ್ನೇ ವ್ಯಾಳ್ಳೆಕ್ಕೆ ದಾನವೀಯುತ್ತಿದ್ದಾನೆ.

ಭಿಕ್ಕು ಒಂದೊಂದಾಗಿ ಚಿತ್ರಿತ ಗುಹೆಗಳೆಲ್ಲವನ್ನೂ, ಕೈಯಲ್ಲೊಂದು ಎಳವಟಿಗೆಯನ್ನು ಹಿಡಿದುಕೊಂಡು ಅಡ್ಡಾಡಿ ನೋಡಿದನು. ಚಿತ್ರಭರಿತವಾದ ಗುಹೆಗಳಲ್ಲಿ ಪವಿತ್ರಶಾಂತತೆ ತಾನೇತಾನಾಗಿ ಹುಟ್ಟಿ ನಿಂತಿತ್ತು. ಪ್ರಪಂಚದ ಕಣ್ಣಮರೆಯಾಗಿ ನಿರ್ವಾಣ-

ನನ್ನೈದಿದ ಭಗವಾನ್ ಬುದ್ಧನು ಇಲ್ಲಿ ಒಂದು ನಿರ್ಜನವಾದ ಗುಡ್ಡಗಳ ತುದಿಯಲ್ಲಿ ಗುಹೆಗಳಲ್ಲಿ ಅನಂತಕಾಲದ ವರೆಗೆ ಬಂದು ನೆಲಸಿರು-ವನೋ—ಎಂದೆನಿಸಿತು ಭಿಕ್ಕುವಿಗೆ. ಅವನಿಗೆ ತನ್ನ ಜೀವನದ ಧ್ಯೇಯ ಕಂಡಿತು. ಅವನನು ಅಲ್ಲಿಗೆ ಕರೆದುಕೊಂಡು ಬಂದ ಆ ದೈವೀ-ಶಕ್ತಿಯು ಅಜ್ಞಾತ ಉದ್ದಿಶ್ಯ ಹೊಳೆಯಿತು.

ಭಿಕ್ಕು ಬರಿದಾದ ಗುಹೆಗಳನ್ನು ಚಿತ್ರಗಳಿಂದ ತುಂಬಲು ಉತ್ಸಾಹದಿಂದ ಕಾರ್ಯೋನ್ಮುಖನಾದನು. ಅವನು ಸಂಘ ಸೇರಿ, ಪರಿವ್ರಾಜಕ-ಭಿಕ್ಕುವಾಗಿ ಚಿತ್ರಕಲೆಯನ್ನು ತ್ಯಜಿಸಿದನು. ಯೌವನದ ವರೆಗೆ ತನ್ನ ಜೀವದುಸಿರಾಗಿ ಅಭ್ಯಸಿಸಿದ ಕಲೆಯನ್ನು, ಶಾಕ್ಯಮುನಿಯ ಸಂದೇಶ ಕೇಳಿ ತ್ಯಜಿಸಿ ಸಂಘಕ್ಕೆ ಶರಣೆಂದಿದ್ದನು. ಆ ಮಾತಿಗೆ ಇಂದು ವರ್ಷ-ವರ್ಷಗಳು ಕಳೆದಿದ್ದುವು. ಇಂದು ಮತ್ತೆ ಅದೇ ಕಲೆಯನ್ನು ತನ್ನ ಹೃದಯದ ಮುಖವಾಗಿ ಮಾಡಿ, ಭಿಕ್ಕು ತನ್ನ ಹೃದಯವನ್ನು ತೋಡಿಕೊಳ್ಳಬಯಸಿದನು. ಅವನು ಎಂದಾದರೊಮ್ಮೆ ತನ್ನ ಕಲಾತ್ಮಕ ತಪೋಭೂಮಿಯಿಂದ ಕೆಳಗಿಳಿದು ಗುಡ್ಡದ ಅಡಿಯಲ್ಲಿದ್ದ ಹಳ್ಳಿಯೊಳಗೆ ಬರುತ್ತಿದ್ದನು. ಹಳ್ಳಿಗರು ಪ್ರೇಮದಿಂದ ನೀಡಿದ ಆಹಾರವನ್ನು ಸ್ವೀಕರಿಸುತ್ತಿದ್ದನು. ದಾರಿಯಲ್ಲೆಲ್ಲ ಸಿದ್ಧಾರ್ಥನ ಹೆಸರನ್ನೇ ಉಚ್ಚರಿಸುತ್ತ ಶಾಕ್ಯಮುನಿಯ ಸಂದೇಶವನ್ನು ಸುತ್ತಲೆಲ್ಲ ಹರಡುತ್ತ ಅಡ್ಡಾಡುತ್ತಿದ್ದನು. ಭಿಕ್ಕು ಹೋದಲ್ಲೆಲ್ಲ ಶಾಂತಿ-ಸಮಾಧಾನಗಳು ಹಿಂಬಾಲಿಸುತ್ತಿದ್ದುವು. ಒಂದು ದಿನವೂ ಭಿಕ್ಕು ಆ ಊರಿನ ಹೆಸರನ್ನು, ಆ ಜನರ ಹೆಸರು-ದಿಶೆಗಳನ್ನು ತಾನಾಗಿ ಕೇಳಲಿಲ್ಲ; ಅವರಾಗಿ ಹೇಳಲಿಲ್ಲ. ಅವನು ಸದಾ ಸಂತೃಪ್ತನಾಗಿದ್ದು-ಕೊಂಡು, ದಗ್ಧಹೃದಯಗಳಿಗೆ ಪ್ರೇಮದ ಅಮೃತಸಿಂಚನವನ್ನು ನೀಡುತ್ತಿದ್ದನು. ಅಷ್ಟು ಅವನಿಗೆ ಸಾಕಿತ್ತು. ಒಮ್ಮೆ ಗುಹೆಗಳಿಗೆ ತಿರುಗಿದ ಮೇಲೆ ಎಷ್ಟೋ ದಿನಗಳ ವರೆಗೆ ಭಿಕ್ಕುವನ್ನು ಜನರು ಕಾಣುತ್ತಿದ್ದಿಲ್ಲ. ಆಗ ಆ ಕಲಾಯೋಗಿ ಭಿಕ್ಕು, ಕಲೆಯನ್ನು ಕುರಿತು ತಪಸ್ಸನ್ನಾಚರಿಸುತ್ತಿದ್ದನು. ಆ ತಪಃಫಲವನ್ನು ತನ್ನ ಹೃದಯದ ರಕ್ತದಲ್ಲದ್ದಿ, ತನ್ನ ಕಲ್ಪನೆಯಲ್ಲಿ ನಿರಂತರವಾಗಿ ನಿಂತಿದ್ದ ಶಾಕ್ಯ ಮುನಿಯ ಬಾಲ್ಯ-ಯೌವ್ವನಗಳನ್ನು ಚಿತ್ರಿಸುತ್ತಿದ್ದನು.

ಗಾಯಗೊಂಡ ಹಂಸವನ್ನು ಕೈಯಲ್ಲಿ ಹಿಡಿದುಕೊಂಡು, ಕಣ್ಣುಂಬಿದ ಕಂಬನಿಗಳನ್ನು ಕಷ್ಟದಿಂದ ಬಿಗಿಹಿಡಿದು, ತಮ್ಮನೊಂದಿಗೆ ವಾದಿಸುತ್ತಿದ್ದ ಸಿದ್ಧಾರ್ಥ; ಸಕಲ ವಸ್ತ್ರಾಭರಣ ಭೂಷಿತಳಾಗಿ ಕೈಯಲ್ಲಿ ಕುಸುಮಮಾಲೆಯನ್ನು ಹಿಡಿದುಕೊಂಡು, ಮಾರನ ಸೌಂದರ್ಯವನ್ನೂ ಧಿಕ್ಕರಿಸಿ ನಗುತ್ತ ನಿಂತಿದ್ದ ಸಿದ್ಧಾರ್ಥನಿಗೆದುರಾಗಿ ನಗುನಗುತ್ತ ಬರುತ್ತಲಿದ್ದ ಸುರಸುಂದರಿ ಯಶೋಧರೆ; ಮಲಗಿದ ಪತ್ನೀ-ಪುತ್ರರನ್ನು ಬಿಟ್ಟು, ಜಗತ್ಕಲ್ಯಾಣಕ್ಕಾಗಿ ಪ್ರಪಂಚದ ದುಃಖ-ನಿರ್ಹರಣಕ್ಕಾಗಿ ಹೊರಟುನಿಂತ ಸಿದ್ಧಾರ್ಥ....ಭಿಕ್ಕು ಒಂದೊಂದಾಗಿ ತನ್ನ ಚಿತ್ರಗಳನ್ನು ಮುಗಿಸುತ್ತ ನಡೆದನು. ಭಿಕ್ಕು ಸಿದ್ಧಾರ್ಥನು ಸಂಬುದ್ಧನಾಗುವ ಪೂರ್ವದಲ್ಲಿ, ಅವನು ಕಳೆದ ಸುಂದರ ಬಾಳ್ವೆಯ ಅನೇಕ ಸುಪ್ರಸಂಗಗಳನ್ನು ವರ್ಷಗಳ ವರೆಗೆ ತಪಸ್ಸನ್ನೆಸಗಿ ಗುಹೆ-ಗಳಲ್ಲಿ ಚಿತ್ರಿಸಿದನು.

ಮಧ್ಯವಯಸ್ಸಿನಲ್ಲಿ ಗುಹೆಗಳಲ್ಲಿ ಕಾಲಿಟ್ಟ ಭಿಕ್ಕು, ಇಂದು ವೃದ್ಧನಾಗಿದ್ದನು. ಯಾವ ಶಾಕ್ಯಮುನಿಯ ದಿವ್ಯಸಂದೇಶಕ್ಕೇ ಮನಸೋತು, ಸುಂದರ ಜೀವನಬಿಟ್ಟು, ತನ್ನ ಜೀವನದ ಉಸಿರಾಗಿದ್ದ ಆ ಚಿತ್ರಕಲೆಯನ್ನು ಬಿಟ್ಟು, ಸಂಘವನ್ನು ಸೇರಿ, ಭಿಕ್ಕುವಾಗಿ ನಿರ್ವಾ-ಣದ ದಾರಿಯಲ್ಲಿ ಬಹುದೂರ ಸಾಗಿ ಬಂದಿದ್ದನೋ—ಅದೇ ಶಾಕ್ಯ ಸಿಂಹನನ್ನು, ಗೌತಮನನ್ನು ಭಿಕ್ಕು ಇಂದು ಗುಹೆಗಳಲ್ಲಿ ಪ್ರತಿಯಾಗಿ ಸೃಷ್ಟಿಸಿದನು. ನಿರ್ವಾಣಸಾಧನೆಗೆ ವಿಘ್ನವಾಗುವುದೆಂದು ಬಿಟ್ಟಿದ್ದ ಕಲೆಯನ್ನೇ ಇಂದು ಆರಾಧಿಸಿ, ಪೂಜಿಸಿ ಚಿತ್ರಿಸಿ, ಭಿಕ್ಕು ತನ್ನ ನಿರ್ವಾಣವನ್ನು ಸಾಧಿಸಿದನು. ಯೌವನದಲ್ಲಿ ಕಲಾವಿದನಾಗಿದ್ದ ಭಿಕ್ಕು ಇಂದು ವೃದ್ಧಾಪ್ಯದಲ್ಲಿ ಕಲಾಯೋಗಿಯಾಗಿದ್ದನು.

ಭಿಕ್ಕುವಿಗೆ ತನ್ನ ಜೀವನ ಕೃತಾರ್ಥವೆಂದೆನಿಸಿತು. ಕೆಲವು ಗುಹೆಗಳು ಇನ್ನೂ ಬರಿಯವಾಗಿದ್ದುವು. ಆದರೆ ಭಿಕ್ಕುವಿಗೆ ಮಾತ್ರ ತನ್ನಲ್ಲಿದ್ದ ಚಿತ್ರಿಸುವ ಆ ದೈವೀಉತ್ಸಾಹ, ಅವನ ಕಲಾಸಾಧನೆಯಲ್ಲಿ ನೆರವಾದ ಆ ದೈವೀಶಕ್ತಿ ಇನ್ನುಳಿದಿಲ್ಲವೆಂದು ಎನಿಸಿತು. ಭಿಕ್ಕು ಮತ್ತೆ ತನ್ನ ಪರಿವ್ರಾಜಕಜೀವನಕ್ಕೆ ಹೋಗಬಯಸಿದನು. ಒಂದು ದಿನ ಅವನು ತನ್ನ ಹರುಬೆ—ಬಡಿಗೆಗಳನ್ನು ಹಿಡಿದುಕೊಂಡು, ಗುಹೆಗಳನ್ನು ಬಿಟ್ಟು, ಕೊನೆಯ ಸಲ ಕೆಳಗಿಳಿದನು. ಅವನ ಮನಸ್ಸು ಸುಪ್ರಸನ್ನವಾಗಿದ್ದಿತು. ಗುಹೆಗಳನ್ನು ಬಿಟ್ಟು ಹೊರಟ ಬಗೆಗೆ ಕಿಂಚಿತ್ತೂ ಅವನ ಮನಸ್ಸಿನಲ್ಲಿ ಅಸಮಾಧಾನ ಉಳಿದಿರಲಿಲ್ಲ. ಬರಿದಾಗಿದ್ದ ಗುಹೆಗಳ ಬಗ್ಗೆ ಭಿಕ್ಕು ಚಿಂತಿಸುತ್ತಿದ್ದಿಲ್ಲ. ಹಳ್ಳಿಯ ಮಧ್ಯದಲ್ಲಿ ಸಾವಕಾಶವಾಗಿ ನಡೆದಿದ್ದ ವೃದ್ಧಭಿಕ್ಕು, ದಾರಿಯಲ್ಲಿ ನಿಂತಿದ್ದ ವ್ಯಕ್ತಿಯೊಬ್ಬನನ್ನು ನೋಡಿ ನಿಂತನು. ಜೀವನದಲ್ಲಿಯೇ ಜನಿಸಿದ ವಿಚಿತ್ರ ಇಚ್ಛೆಯೊಂದು ಭಿಕ್ಕುವಿನ ಮನಸ್ಸಿನಲ್ಲುದಯಿಸಿತು. ಆ ವ್ಯಕ್ತಿಯನ್ನು ದ್ವೇಷಿಸಿ ಆ ಗುರಿಯನ್ನು ತೋರಿಸಿ ಭಿಕ್ಕು ಅದರ ಹೆಸರನ್ನು ಕೇಳಿದನು. ನಿಂತ ವ್ಯಕ್ತಿ ನೊಣಕಾಲು ಊರಿ ಭಿಕ್ಕುವಿಗೆ ನಮಸ್ಕರಿಸಿ ಹೇಳಿದನು: "ಅಜಾತೆಯ ಗುಡ್ಡ!"

ಭಿಕ್ಕು ಮಂದಸ್ಮಿತವನ್ನು ಬೀರಿ ಗುಹೆಗಳಿಗೆ ಕೈಮುಗಿದು ಹೊರಟುಹೋದನು. ಆ ಮೇಲೆ ಆ ಪ್ರದೇಶದಲ್ಲಿ ಯಾರಿಗೂ ಆ ಭಿಕ್ಕುವಿನ ದರ್ಶನವಾಗಲಿಲ್ಲ.

ಸ್ವಪ್ನಭಂಗ

(ನೀಳ್ಗವನ)

ಲೇ. ಎಸ್. ವಿ. ಎಲ್. ಎನ್. ಶರ್ಮಾ, ಪೆರಡಾಲ

ಗಗನದಗಲದಿ ಕೋಟಿ ತಾರೆಗಳು ಮಿನುಗುತಿರೆ,
ಹುಣ್ಣಿಮೆಯ ಚಂದಿರನ ತಂಗದಿರು ಪಸರಿಸಿರೆ,
ಆಲೆಯಲೆಯ ಬೆಳ್ಮುಗಿಲು ಸುಳಿಸುಳಿದು ತೇಲಿಬರೆ,
ಬೇಸಗೆಯ ರಾತ್ರಿಯಲಿ ನಮ್ಮೂರ ಹಳ್ಳಿಯಲಿ
ಅಂಗಳದಿ ಮಂಡಿಸಿರಲು,
ತರುಲತೆಯ ತೊಟ್ಟಿಲನು ತೂಗುವಾ ತಂಬೆಲರ
ಜೋಗುಳವ ಕೇಳುತಿರಲು,

ಸಪ್ತರ್ಷಿಮಂಡಲದ ಶೋಭೆಯನು ನೋಡುತ್ತ
ಹೊರಳಿದುದು ಮಮದೃಷ್ಟಿ ಧ್ರುವತಾರೆಯಿರುವತ್ತ
ಧೈರ್ಯ ಸಾಹಸದಲ್ಲಿ, ಧ್ಯೇಯ-ಸಾಧನೆಗಳಲಿ
ಧ್ರುವನೆಂಬ ಪೆಸರಾಂತು ಶಾಶ್ವತಂ ಧ್ರುವನೆನಿಸಿ
ಮೆರೆವ ಕಿರುಜ್ಯೋತಿಯನು ಕಂಡೆ,
ಅಚಲ ಮನಮಂ ನೆನೆದು, ದೊರೆತ ಪದವಿಯ ಕಂಡು
ನೈಮರೆದು ಮೌನಿಯಾದೆ.

× × × ×

ಚಂದಿರನ ಬಿಳಿಬೆಳಕು ಇಮ್ಮಡಿಸಿದಂತಾಗೆ,
ಹಾಲುಹೊಳೆ ಹರಿದಂತೆ ಗಗನದೆಡೆಯಿಂ ಧರೆಗೆ,
ದಿವ್ಯಪಥವಿಳಿದಿತ್ತು. ನಯವಾಗಿ ಬಿಳಿಯಾಗಿ,
ಇಬ್ಬದಿಯ ಮರಗಳಲಿ ಹೂವುಗಳು ಹೊರೆಯಾಗಿ
ಅರಳಿರಲು ಬಂತು ಕಂಪು,
ಮಿಣುಕುಹುಳುಗಳ ಹಿಂಡು ಚಕಮುಕಿಸುತಿರಲಾಗಿ
ಹೇಳಲೇನದರ ಸೊಂಪು!

ಶುಭ್ರ ವಸನವನುಟ್ಟು, ಬಿಳಿಯುಂಗಿಯಂ ತೊಟ್ಟು,
ಬೈತಲೆಯ ಬಾಚುತಲಿ ಪಯಣಕ್ಕೆ ನಾ ಹೊರಟು,
ಹಲಕೆಲವು ಕನ್ನಡದ ಕವನಗಳ ಕಂತೆಯನು
ಕೈಚೀಲದಲಿ ತುರುಕಿ, ಎಳ್ಕಡದ ಜೋಡಿಯನು
ಸಿಕ್ಕಿಸುತ ಮುಂದೆ ಹೋದೆ;
ಧ್ರುವತಾರೆಯಿರುವೆಡೆಗೆ ಸಾಗುವಾ-ಹುಮ್ಮಸದಿ
ಇಕ್ಕೆಲವ ನೋಡಿ ನಡೆದೆ.

ಮಂದಾರ ಕರವೀರ ಪಾರಿಜಾತದ ಹೂವು,
ತಂಗಾಳಿಯೊಲೆತಕ್ಕೆ ಕಿಲಕಿಲನೆ ನಗುತಿರಲು,
ಜೇಂಬನಿಯು ಹರಿದಿತ್ತು, ಹೂಮಳೆಯು ಸುರಿದಿತ್ತು.
ನಟ್ಟನಡುರಾತ್ರಿಯಲಿ ನಾ ಹೋದ ದಾರಿಯಲಿ
ಕೋಗಿಲೆಯು ಕುಕಿಲುತಿತ್ತು;
ಹಕ್ಕಿಗಳ ಚಿಲಿಪಿಲಿಯ ಲೆಕ್ಕಿಸದೆ ಮರಿದುಂಬಿ
ಹಿಂಡಾಗಿ ಹಾಡುತಿತ್ತು!

ಎತ್ತರದ ಬಾಂದಳದಿ ನಿಂದು ನಾ ಧರೆಯೆಡೆಗೆ
ನೋಡುತಿರಲಿನಿತೊಂದು ಸೊಗಸಿನಾ ನೋಟವದು!
ಹಸುರುಡೆಯ ಭೂದೇವಿ ನುಸಿಬಲೆಯ ಹೊದೆದಂತೆ
ಇಬ್ಬನಿಯು ಮುಸುಕಿತ್ತು! ಹಾಲ್ಬೆಳಕು ಜಿಲ್ಲಿತ್ತು!!
ಎಲ್ಲೆಲ್ಲು ಮೌನ, ಎಲ್ಲೆಲ್ಲು ಮೌನ!!!
ಅನಿತರಲಿ ದೂರದಿಂ ಮೆಲ್ಲನೆಯೆ ಕೇಳಿಸಿತು
ಇಂಪಾದ ದೇವಗಾನ!!!

ಕತ್ತೆತ್ತಿ ನೋಡಿದೆನು, ಕಿವಿಗೊಟ್ಟು ಕೇಳಿದೆನು,
ಮೇಲೆ ಮೇಲೇರಿದೆನು, ಬಲುದೂರ ಸಾಗಿದೆನು,
ದಿಟ್ಟಿಯಂ ಸೆಳೆದೊಂದು ಸುಮವ ಕಂಡೆತ್ತಿದೆನು,
ಅದರಂದವಂ ನೋಡಿ ತಿರುತಿರುಗಿ ಮೂಸುತಲಿ
ಸಾಗಿದೆನು ಮುಂದೆ ಮುಂದೆ;
ಚಂದಿರನ ರಾಜ್ಯದಲಿ ತಾರೆಗಳ ನಾಡಿನಲಿ
ಅಡಿಯಿರಿಸಿ ನಡೆದೆ ಮುಂದೆ.

ತಟ್ಟನೆಯೆ ತಾರೆಗಳು ಮರೆಯಾದ ತೆರನಾಯ್ತು;
ತಿಳಿಯಾದ ಸೀರೆಗಳನುಟ್ಟಿರುವ ತರುಣಿಯರು
ತಾರೆಗಳ ಪ್ರತಿರೂಪದಂದದಲಿ ಮಿನುಮಿನುಗಿ
ಸುಳಿಸುಳಿದು, ನಲಿನಲಿದು, ನಗುನಗುತ ತೋರಿದರು.
ಏನೆಂದು ತಿಳಿಯದಾದೆ;
ಶತಕೋಟಿ ತರುಣಿಯರ ಮನವೊಲಿಪ ತರುಣರನು
ನಾನೆಲ್ಲು ನೋಡದಾದೆ.

ಆತ್ಮನಾಶಯವರಿತು ಹುಡುಕಿ ನೋಡಿದೊಡಲ್ಲಿ,
ಎಲ್ಲವೂ ಬರಡಾಗಿ ಕಾಣಿಸಿತು ಗಗನದಲಿ,
ಜರತಾರಿಯುಡೆಯುಟ್ಟು ನವರತ್ನ ದಾಭರಣ
ತೊಟ್ಟು, ಮೆರೆವಾಸೆಯಲಿ ತಮ್ಮನೇ ಮರೆತಿರುವ
ಸಿರಿಯ ಸಮ್ರಾಜ್ಞಿಯರ ಸಾಲು!
ಹೆರರ ಸಿರಿವಂತಿಕೆಗೆ ಮಾತ್ಸರ್ಯಗೊಳುತಿರುವ
ಲಲನೆಯರು ಉಳಿದ ಸಾಲು!!

ಸೌಜನ್ಯ, ಸಹೃದಯತೆ, ಸರಳತೆಗೆ ಹೆಸರಾಂತು
ಸಾಹಿತ್ಯ ಸುಧೆಯುಂಡು ಭಾವನಾಲೋಕದಲಿ
ಮನಮೆಚ್ಚಿ ವಿಹರಿಸುತ ಕಲ್ಪನಾಲಾಸ್ಯದಲಿ
ಚಿತ್ರವಂ ಸೆಳೆಸೆಳೆದು ಕುಣಿಕುಣಿಸಿ ತಣಿಯಿಸುವ
ಅಂಗನೆಯ ಕಾಣದಾದೆ.
ಆಂತರಿಕ ಸೌಂದರ್ಯ ತುಂಬಿ ತುಳುಕಾಡುತಿಹ
ರಮಣಿಯಂ ನೋಡದಾದೆ.

ಸಂಗೀತದಿಂಪಿಂಗೆ ತಲೆದೂಗಿ ಹುಡುಕಿದೆನು,
ಆವೆಡೆಯ ಗಾನವೆಂದರಿಯಲೆಂದರಸಿದೆನು,
ದೂರದಲಿ ಬಿಳಿಯಾದ ಮೋಡದಲಿ ತಿಳಿಬೆಳಕು
ಹೊಳೆದಿತ್ತು, ಆದರಾಚೆ ಇನಿದನಿಯು ಮೊಳಗಿತ್ತು
ಹಾರೈಸಿ ಮುಂದೆ ಹೋದೆ!
ಬಿರಿಬಿರಿದು ಬಿಳಿಮೋಡ ಬಿಳಿಸೀರೆಯಾದುದನು
ಕಂಡು ನಾ ಚಕಿತನಾದೆ!!

ಕಂಕಣದ ಕಿಂಕಿಣಿಯು ಕಿವಿಗಿಂಪ ತರುತಿರಲು,
ಬಿಳಿಸೀರೆಯುಟ್ಟಿರುವ ಪೆಣ್ಮಣಿಯು ತೋರಿರಲು,
ಅವಳ ಮೊಗಬಟ್ಟಲಲಿ ನಗೆಹಾಲು ತುಳುಕುತಿರೆ
ವಿಂಚುಬಳ್ಳಿಯ ತೆರದಿ ದೇಹಲತೆ ಬಳುಕುತಿರೆ,
ಮುಂಗುರುಳು ನಲಿಯುತಿತ್ತು,
ನೀಲಿ ರವಕೆಯ ತೊಟ್ಟು, ಹಣೆಗೆ ತಿಲಕವನಿಟ್ಟು
ಆ ರೂಪ ರಂಜಿಸಿತ್ತು.

ಹದಿನಾರು ವತ್ಸರದ ಹರೆಯದಾ ದೇಹವದು,
ಸುಳಿಗುರುಳ ಜಡೆಯಿಳಿದು ನಡುವಿನೆಡೆಗೈತಂದು,
ಜೋಲಾಡುತಿರಲಾಗಿ, ಕೆನೆಹಾಲ ಬಣ್ಣವನು
ಹೋಲುವಾ ಮೈಬಣ್ಣ! ಹಾಲಕೆನೆಯಂದದಲಿ
ಮೃದುವಾದ ಕೆನ್ನೆಯಿತ್ತು!
ಮುದ್ದಾದ ಮೂಗಿನಲಿ ಮೂಡಿರುವ ನಕ್ಷತ್ರ-
ದಂತಿತ್ತು ಕಿರಿಯ ನತ್ತು!!

ಬೀರುತಿಹ ಮೈಯ್ ಗಂಪು, ಉಬ್ಬಿದೆದೆಯಾ ಪೆಂಪು,
ಕದಪುಗಳ ನಸುಗೆಂಪು ಕಣ್ಣುಗಳ ಆ ಸೊಂಪು,
ಚೆಂದುಟಿಗಳಾ ಚೆಂದ, ದಂತಪಂಕ್ತಿಗಳಂದ
ಕವಿಗಳಲಿ ಮಿನುಗುವಾ ಅಭರಣವೆನಿತೆಂದ
ಎಂದು ನಾ ಬರೆಯಲೆಂತು?
ಮೃದು-ಮಧುರ ಕರತಲದ ಕೆಂಬಣ್ಣದಂದಕ್ಕೆ
ನಾ ಸೋಲದಿರುವೆನೆಂತು?

ಕಣ್ಣು ಕವಿಯೊಂದಾಗಿ ನೋಡಿದೆನು ಕೇಳಿದೆನು.
ಕೈಯಲಿಹ ಸುಮವನಾ ಮೂಸಿದೆನು ತಿರುವಿದೆನು
ಉಡಿಗೆಯನ್ನೊರಸಿದೆನು ಬೈತಲೆಯ ತೀಡಿದೆನು
ತಿರುತಿರುಗಿ ಬಾಯ್ದೆರೆದು ಮತ್ತೆ ಬಾಯ್ಮುಚ್ಚಿದೆನು
ಮಾತಾಡಲಾಗಲಿಲ್ಲ;
ಹೆರರ ಹೂದೋಟದಲಿ ಅರಳಿರುವ ಹೂವಿಂಗೆ
ಕೈಚಾಚಲಾಗಲಿಲ್ಲ.

ತರುಣಿ ತಾ ದೂರದಲಿ ನಿಂದೇನೊ ಯೋಚಿಸುತ
ರೂಪ-ವೇಷಾದಿಗಳ ತಿರುತಿರುಗಿ ತಿದ್ದುತ್ತ
ಮೆಲ್ಲನೆಯೆ ಬಳಿ ಬಂದು ನಸುನಗೆಯ ಬೀರುತ್ತ
"ಎತ್ತಣಿಂ ಬರವಾಯ್ತು? ಚೀಲದಲ್ಲೇನಿಹುದು?"
ಎಂದೆನ್ನ ಕರೆದು ಕೇಳಿ,
ಲತೆಯಂತೆ ಬಳುಕುತ್ತ ಸೆರಗ ಸರಿಮಾಡುತ್ತ
ಬಂದಲ್ಲಿ ನಿಂದಳಬಲೆ!

"ನನ್ನೂರು ಕನ್ನಡವು, ನನ್ನ ನುಡಿ ಕನ್ನಡವು,
ಕನ್ನಡದ ಕತ್ತುರಿಯು, ನನಗದೇ ಪರಿಮಳವು
ಕನ್ನಡದ ತುತ್ತೂರಿ ಮೊಳಗಿಸುವ ಆಸೆಯಿದೆ,
ಕನ್ನಡದ ನುಡಿಗಾಗಿ ದುಡಿವ ಹೆಬ್ಬಯಕೆಯಿದೆ
ಕನ್ನಡದ ರಕ್ತವಿಹುದು!
ಕನ್ನಡದ ಕವನಗಳ ತಿಂದಿಹೆನು ಅವನೋದೆ
ನನ್ನಾತ್ಮ ತೃಪ್ತಿಯಹುದು!"
ಎಂದೆನಲು ನಸುನಾಚಿ ಬಳಿಬಂದು ವಿನಯದಲಿ
"ಒಲಿದಿಹೆನು ನಾ ನಿಮ್ಮ" ಮೆಚ್ಚಿರುವಿರಾ ನನ್ನ?
ಕನ್ನಡತಿ ನಾನಹುದು, ಕನ್ನಡವೆ ನನಗಿಹುದು,
ಕನ್ನಡದ ಏಳಿಗೆಗೆ ಒಂದಾಗಿ ದುಡಿಯುವೆವು
ಸಮ್ಮತಿಯ ನೀಡಿ ನೀವು,
ಸಮರಸದ ಜೀವನದಿ ಸರಸತಿಯ ಮೆರೆಸುತಲಿ
ಗುರಿಯೆಡೆಗೆ ನಡೆವ ನಾವು!"

ನನ್ನ ಮೊಗವರಳಿತ್ತು, ಹೃದಯವುಕ್ಕೇರಿತ್ತು
ಮೈಯೆಲ್ಲ ಪುಳಕಿಸಿತು. ಕೈಗೆ ಕೈ ತಗಲಿತ್ತು
ಮುಂಗುರುಳು ನಲಿಯುತಿರೆ ಮನವೇಕೊ ಮರುಳಾಯ್ತು
ತಂದಿದ್ದ ಹೂವನ್ನು ಅವಳ ತಲೆಗೇರಿಸಿದೆ,
ಕದಪುಗಳ ಮುಟ್ಟಿಸವರಿ—
ಹೊಸ ಸುಗ್ಗಿಯೊಸಗೆಯಂ ಕೊಡಲೆಂದು ಬರಸೆಳೆದು
ಮುದ್ದಿಸಿದೆ ಮುತ್ತ ಸುರಿಸಿ!

ಆಡಿಯ ಮೇಲಡಿಯಿಡುತ ಸವಿನುಡಿಯನಾಡುತ್ತ
ಸತಿಸಹ ವಸಿಷ್ಠರಂ ದೂರದಿಂದೀಕ್ಷಿಸುತ
ಆಕಾಶಮಾರ್ಗದಲಿ ಕಲೆಯು ಸಾಮ್ರಾಜ್ಯದಲಿ
ಮಿನುಗುವಾ ಧ್ರುವನೆಡೆಗೆ ಮುಟ್ಟಿಲಿಹ ಗುರಿಯೆಡೆಗೆ
ಸಾಗುತಿರೆ ಹುರುಪುದೋರಿ,
ಕನ್ನಡದ ಕವನಗಳ ತಿರುತಿರುಗಿ ಹಾಡುತಿರೆ
ಆಯಾಸ ಹೋಯ್ತು ಜಾರಿ.

× × × ×

ಕಾಲಗತಿ ಮರುಕೊಳಿಸೆ ಕರಿಕರಿಯ ಮೋಡಗಳು
ಮುಸುಕುತಿರೆ ಮೂಡಿದುವು ಜಗಮಗಿಪ ಮಿಂಚುಗಳು
ಗಡಗಡನೆ ಗುಡುಗಿತ್ತು! ಕೋಲ್ಮಿಂಚು ಹೊಳೆದಿತ್ತು
ಬಿರುಗಾಳಿ ಬೀಸಿತ್ತು! ಜಡಿಮಳೆಯು ಸುರಿದಿತ್ತು!
ಖಡ್‌ಖಳಿಲ್ ಸಿಡಿಲು ಬಿತ್ತು!!
ಆ ದನಿಗೆ ಬೆದರಿ ನಾವಿಬ್ಬರೂ ಕೆಳಗುರುಳಿ
ನಿದ್ದೆ ತಿಳಿದೆಚ್ಚರಾಯ್ತು!!!

ಮೈಯೆಲ್ಲ ಬೆವರಿತ್ತು ಎದೆಬಡಿತವೇರಿತ್ತು
ಸುತ್ತಲೂ ನೋಡಿದೆನು ನೀರವತೆ ಹರಡಿತ್ತು
ದಿವ್ಯಪಥವಿರಲಿಲ್ಲ ತರುಣಿಯರ ಸುಳಿವಿಲ್ಲ
ಕರಿಯ ಮೋಡಗಳಿಲ್ಲ, ಪಡುವಣದಿ ಚಂದಿರನ
ಬಿಂಬವದು ಹೊಳೆಯುತಿತ್ತು!
ದಾರಿಗಾಣದ ಪಥಿಕನಾಸೆಯಾ ಬೆಳಕಿನೊಲು
'ಬೆಳ್ಳಿ' ತಾ ಮೂಡಿ ಬಂತು!!

ಸ ಭ್ಯ ತೆ

(ಥಾಮಸ್ ಹಾರ್ಡಿಯ ಒಂದು ಕವನದ ಭಾವಾನುವಾದ)

ಜ. ಶೀ. ಜ.

೧

ಚಿಕ್ಕ ಗುಬ್ಬಿಯೊಂದು
ನೀರ ಕುಡಿಯಲೆಂದು
ಹಳ್ಳಕಿಳಿಯಿತು.
ಚುಂಚ ನೀರಿಗಿಟ್ಟು
ಸುತ್ತು ದಿಟ್ಟಿಯಿಟ್ಟು
ಮೆಯ್ಯ ಕೊಡಹಿತು

೨

ಬೇಟೆ ನಾಯಿಯೊಂದು
ಕೆರಳಿ ಬಗುಳಿ ಬಂದು
ಗುಬ್ಬಿ ಬೆದರಿತು.
ಬೆದರುತಿದ್ದು ಮತ್ತೆ
ಕಣ್ಣನರಳಿಸುತ್ತೆ
ತೆಪ್ಪಗಿದ್ದಿತು.

೩

ಗೂಳಿಯೊಂದು ಸೊಕ್ಕಿ
ನೀರ ಹೊಕ್ಕು ಕಲಕಿ
ತೆರಿಗಳೆದ್ದುವು.
ಗುಬ್ಬಿ ಪುಕ್ಕ ತೊಯ್ದು
ಬದಿಗೆ ನಸುವೆ ನೆಗೆದು
ತುಂತುರಿದ್ದುವು.

೪

ಸೊಗಸಿನುಡುಸಿನೊಬ್ಬ
ಕೈಲಿ ಕೊಳವಿಯಬ್ಬ
ಬೇಟೆ ಬಿಡಗದು!
ಗೂಳಿ ನಾಯಿಯಲ್ಲ
ಗುಬ್ಬಿ ಬಲ್ಲುದೆಲ್ಲ
ಮಾಯವಾದುದು!

ಈ ಜೀವನದಲ್ಲಿ ಏನಾದರೂ ಅರ್ಥವಿದೆಯೇ?

ಡಿ. ನಾರಾಯಣ ಸುಹಿಷಿ, ಬಿ. ಎಸ್‌ಸಿ. ಧಾರವಾಡ

(೧೯೩೦ರಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಉದ್ಯುಕ್ತರಾದ ಕೆಲ ಅಮೇರಿಕನ್ ತರುಣರು ವಿಲ್ ಡ್ಯೂರಂಟರಿಗೆ ಪತ್ರ ಬರೆದು, 'ಈ ಜೀವನದಲ್ಲಿ ಏನಾದರೂ ಅರ್ಥವಿದೆಯೇ ?' ಎಂದು ಕೇಳಿದ್ದರು. ಆಗ ವಿಲ್ ಡ್ಯೂರಂಟರು ಬೇರೆ ಬೇರೆ ಕ್ಷೇತ್ರದಲ್ಲಿ ಯಶಸ್ವೀ ಜೀವನ ಸಾಗಿಸಿದ ಮಹಾಪುರುಷರ ಅಭಿಪ್ರಾಯಗಳನ್ನು ಈ ವಿಷಯದಲ್ಲಿ ಪಡೆದಿದ್ದಾರೆ. ಅವರಿಗೆ ಪಂಡಿತ ಜವಾಹರಲಾಲ ನೆಹರು ಅವರು ಬರೆದು ತಿಳುಹಿದ ವಿಚಾರಗಳಿವು.)

ಪ್ರಿಯ ಡ್ಯೂರಂಟ್ ಸಾಹೇಬರೆ,

ನಿಮ್ಮ ಪತ್ರದಲ್ಲಿ ನೀವು ಬರೆದು ಕೇಳಿದ ಪ್ರಶ್ನೆಗಳು ಮನೋವೇಧಕವಾಗಿರುತ್ತವೆ; ಇಷ್ಟೇ ಅಲ್ಲ, ಕೆಂಚಿತ್ ಭಯವನ್ನುಂಟು ಮಾಡುವಂತಹವಿವೆ. ಪತ್ರವನ್ನು ಮೊದಲಿನಿಂದ ಸ್ವಲ್ಪ ಓದಿದ ಮೇಲೆ, ಇಷ್ಟೊಂದು ವಿಪ್ರತವಾಗಿ ಹಬ್ಬಿರುವ ಸೃಷ್ಟಿಯು ಉದ್ದೇಶಶೂನ್ಯವಾಗಿದೆ ಮತ್ತು ಮನುಷ್ಯನ ಪ್ರಯತ್ನವೆಲ್ಲ ವ್ಯರ್ಥವಾಗಿದೆ—ಎಂದೇ ಎನಿಸುತ್ತದೆ. ಈ ಪ್ರಶ್ನೆಗೆ ಪ್ರತಿಯಾಗಿ ನನ್ನ ಅಭಿಪ್ರಾಯವನ್ನು ಕೇಳಿದ್ದೀರಿ. ಆದರೆ ಅದನ್ನು ಕೊಡಲು ನನಗೆ ಅಧಿಕಾರವಿಲ್ಲವೆಂದು ನನಗೆನಿಸುತ್ತದೆ. ಈಗಂತೂ ಸಮಯದ ಅಭಾವವಿದ್ದೇ ಇದೆ. ಸಮಯ ಸಿಕ್ಕಿದ್ದರೂ ಕೂಡ ಸವಿಸ್ತಾರವಾಗಿ ಉತ್ತರ ಕೊಡುವುದು ನನಗೆ ಕಠಿಣವಾಗುತ್ತಿತ್ತು.

ಹಿಂದೂ ಜನರಾದ ನಾವು ಯಾವಾಗಲೂ ವೇದಾಂತಪ್ರಿಯರೆಂದು ಎನಿಸಿಕೊಂಡಿದ್ದೇವೇನೋ ನಿಜ; ಆದರೆ ನಾನು ಮಾತ್ರ ವೇದಾಂತವನ್ನು ಬಟ್ಟು ನಾಲ್ಕು ಹೆಜ್ಜೆ ದೂರದಲ್ಲಿಯೇ ಇರುತ್ತೇನೆ. ಬುದ್ಧಿಯು ಗೊಂದಲದಲ್ಲಿ ಬೀಳುತ್ತದೆಂಬುದನ್ನು ಮತ್ತು ಮನಃಶಾಂತಿ ಕಾರ್ಯಸ್ಫೂರ್ತಿಗಳು ಸಿಗುವುದಿಲ್ಲವೆಂಬುದನ್ನು ನಾನು ವೇದಾಂತದಿಂದ ಮೊದಲೇ ಕಲಿತಿದ್ದೇನೆ. ಧರ್ಮದ ಅಷ್ಟೊಂದು ಪರಿಣಾಮವು ಕೂಡ ನನ್ನ ಮನಸ್ಸಿನ ಮೇಲೆ ಆಗಿಲ್ಲ. ಪಾಂಡಿತ್ಯ ಪಡೆದು ದೊಡ್ಡ ವರೆನ್ನಿಸಿಕೊಳ್ಳಲಿಕ್ಕೆ ನಾವೆಲ್ಲರೂ ಮಾಡುವಂತೆ, ನಾನು ಕೂಡ ವಿವಿಧ ಭೌತಿಕಶಾಸ್ತ್ರಗಳಲ್ಲಿ ಅತ್ತಿತ್ತ ಅಡ್ಡಾಡಿದೆ. ಅದರಲ್ಲಿಯೇ ಸ್ವಲ್ಪ ನನ್ನ ಮನಸ್ಸಿಗೆ ರಂಜನೆಯಾಯಿತು, ನನ್ನ ದೃಷ್ಟಿಯು ಕೂಡ ವ್ಯಾಪಕವಾಯಿತು. ಆದರೂ ಸಹ ನನ್ನ ಬುದ್ಧಿಗೆ ಸ್ಥಿರತೆ ಎಂಬುದು ಬರಲಿಲ್ಲ. ನನ್ನ ಮನಸ್ಸಿನಲ್ಲಿ ಎಷ್ಟೋ ಸಂಶಯಗಳು ಹಾಗೆಯೆ ಉಳಿದುವು. ನಾನು ಅಂಶತಃ ನಾಸ್ತಿಕನಾಗಿಯೇ ಇದ್ದೆ. ನನಗೆ ಯಾವುದರ ಸ್ಪಷ್ಟ ಸ್ವರೂಪವು ತಿಳಿಯುತ್ತಿದ್ದಿಲ್ಲವೋ, ಅಂತಹ ಸಾಮಾಜಿಕ ಮತ್ತು ರಾಷ್ಟ್ರೀಯ ಧ್ಯೇಯಗಳ ನೆನಪಾಯಿತು; ಮತ್ತು ಅವೆಲ್ಲ ಅಸ್ಪಷ್ಟ ಕಲ್ಪನೆಗಳು ಒಂದೇ ವಿಶಾಲವಾದ ಕಲ್ಪನೆಯಲ್ಲಿ ಲೀನವಾದಾಗ, ಹಿಂದುಸ್ಥಾನದ ಸ್ವಾತಂತ್ರ್ಯವೇ ನನ್ನ ಮುಖ್ಯಧ್ಯೇಯವೆಂದೆನಿಸಿತು. ಹಿಂದುಸ್ಥಾನದ ಸ್ವಾತಂತ್ರ್ಯವೆಂದರೆ ಕೇವಲ ರಾಜ್ಯಕಾರಭಾರದ ಅಧಿಕಾರವೆಂದು ನಾನು ತಿಳಿಯಲಿಲ್ಲ.

ನನ್ನ ಕೋಟ್ಯನುಕೋಟಿ ಬಂಧು-ಭಗಿನಿಯರನ್ನು ದುಃಖದಿಂದ ಮತ್ತು ದಾಸ್ಯದಿಂದ ಮುಕ್ತಮಾಡುವುದೇ ದೇಶದ ಸ್ವಾತಂತ್ರ್ಯವೆಂದು ತಿಳಿಯುತ್ತ ಬಂದಿದ್ದೇನೆ. ಇಷ್ಟೇ ಅಲ್ಲ, ದಾಸ್ಯದಿಂದ ಬಳಲುತ್ತಿರುವ ಜಗತ್ತಿನ ಎಲ್ಲ ರಾಷ್ಟ್ರಗಳ ಪ್ರತೀಕ ನನ್ನ ದೇಶವಿದೆ—ಎಂದು ಎನಿಸಹತ್ತಿತ್ತು. ಮತ್ತು ದೇಶಾಭಿಮಾನದ ಬದಲು ಮನುಷ್ಯಜಾತಿಯ ಅಭಿಮಾನವನ್ನು ಹಿಡಿದು, ದೇಶದಲ್ಲಿಯ ಬಡವರ ಪ್ರತಿನಿಧಿಯಾಗಿ ಕಾರ್ಯಮಾಡಹತ್ತಿದೆನು.

ಆದರೆ ಈ ನನ್ನ ಕಾರ್ಯದಲ್ಲಿ ಎಷ್ಟೋ ಸಂಶಯ, ಕುಸಂಶಯ ಮತ್ತು ನಿರಾಶೆಗಳು ಅನುಭವಕ್ಕೆ ಬರುತ್ತಿದ್ದುವು. ದೃಢಮನಸ್ಸಿನಿಂದ ಮಾಡಬೇಕೆನಿಸಿದ ಕಾರ್ಯಮಾರ್ಗದಲ್ಲಿ ಬರಬಾರದ ವಿಘ್ನಗಳು ಕೂಡ ಬರುತ್ತಿದ್ದುವು. ಆಗ ನನ್ನ ಕರ್ತವ್ಯವೇ ತಿಳಿಯದಂತಾಗಿ ಮನಸ್ಸು ಗೊಂದಲದಲ್ಲಿ ಬೀಳುತ್ತಿತ್ತು.

ಈ ಸಮಯದಲ್ಲಿ ಗಾಂಧೀಜಿಯವರ ಭೆಟ್ಟಿ ನನಗಾಯಿತು. ಅವರು ತೋರಿಸಿದ ಮಾರ್ಗದಿಂದ ನನ್ನ ಕಾರ್ಯ ಸಿದ್ಧಿಯಾಗುವುದೆಂದು ಎನಿಸಿತು. ಹಾಗಿರದಿದ್ದರೂ ಕೂಡ, ಆ ಮಾರ್ಗದಿಂದ ಹೋಗಿ ಏನಾಗುತ್ತದೋ ನೋಡಬೇಕೆಂದೆನಿಸಿತು. ಆ ಮಾರ್ಗವನ್ನು ಅನುಸರಿಸಿದರೆ, ಇಷ್ಟು ದಿವಸ ನನ್ನ ಹೃದಯದಲ್ಲಿ ಕಟ್ಟಿಹಾಕಿದ ಭಾವನೆ ಮತ್ತು ಮಹತ್ತ್ವಾಕಾಂಕ್ಷೆಗಳಿಗೆ ದಾರಿ ಸಿಕ್ಕೀತೆಂದು ಎನಿಸಿತು. ಆ ಕಾರ್ಯದಲ್ಲಿ ನಾನು ಧೈರ್ಯದಿಂದ ಧುಮುಕಿದೆ. ಅದೆಂತಹ ಆಶ್ಚರ್ಯ! ಇಷ್ಟು ದಿವಸಗಳ ವರೆಗೂ ಶೋಧಿಸುತ್ತಿದ್ದ ಸಮಾಧಾನ ನನಗೆ ಸಿಕ್ಕಿತು. ಸತತೋದ್ಯೋಗದಲ್ಲಿಯೇ ಸಮಾಧಾನ! ಮನಸ್ಸನ್ನು ಹಿಡಿದ ಕಾರ್ಯದಲ್ಲಿ, ಅವಿಶ್ರಾಂತ ಶ್ರಮದಿಂದ ಸಮಾಧಾನ ಸಿಗುತ್ತದೆ.

ವಿಚಾರ-ನೇದಾಂತಗಳಲ್ಲಿಅಲ್ಲ. ಅವಿರತ ಉದ್ಯೋಗದಲ್ಲಿಯೇ ಶಾಂತಿ-ಸಮಾಧಾನಗಳ ಸೆಲೆ (ಬುಗ್ಗೆ) ಇರುತ್ತದೆ! - ಇವೆಲ್ಲ ನನ್ನ ಅನುಭವಕ್ಕೆ ಬಂದುವು.

ಇದೆಲ್ಲ ತಿಳಿದ ಮೇಲೆ, ಕೈಕೊಂಡ ಕಾರ್ಯದಲ್ಲಿಯೇ ನನ್ನ ಸರ್ವಶಕ್ತಿಯನ್ನು ಉಪಯೋಗಿಸುತ್ತ ಬಂದಿದ್ದೇನೆ. ಅದರ ಮೂಲಕ ಬಂದ ಸಮಾಧಾನದಿಂದ ನನ್ನ ವಿಶ್ವಾಸವು ಹೆಚ್ಚುತ್ತ ನಡೆದಿದೆ. 'ಜೀವನದಲ್ಲಿ ಏನಾದರೂ ಅರ್ಥವಿದೆ' ಎಂಬುದು ನನ್ನ ಅನುಭವಕ್ಕೆ ಬಂದಿತು. ಇಷ್ಟೊಂದು ದಿವಸ ತಿಳಿಯದ ಮನುಷ್ಯಜೀವನದ ಉದ್ದೇಶವು ನನಗೆ ತಿಳಿದಂತಾಯಿತು! ಇದಕ್ಕೆ ಚಿಕ್ಕಪುಟ್ಟ ಲಾಭವೆಂದೆನ್ನದೇಕೆ?

ನೀವು ಮುಂದೆ ಮಾಡಿದ ಪ್ರಶ್ನೆಗಳಿಗೆ ನಾನು ಹೇಳಿದುದೆಲ್ಲ ಸಮಾಧಾನಕರವಾದ ಉತ್ತರವಾಗಿದೆ—ಎಂದು ಎನ್ನುವುದು ಶಕ್ಯವಿಲ್ಲ. ನಾನೇನು ತರ್ಕತೀರ್ಥನೂ ಅಲ್ಲ ಅಥವಾ ಒಬ್ಬ ವೇದಾಂತಿಯೂ ಅಲ್ಲ; ಆದರೆ ಸಿಸಾಯಿ ಮನೋವೃತ್ತಿಯ ಮನುಷ್ಯನಿದ್ದೇನೆ. ಉದ್ಯೋಗ ಮತ್ತು ಕಷ್ಟದಲ್ಲಿಯೇ ಆನಂದಪಡುವ ಜನರಲ್ಲಿ ನಾನೊಬ್ಬ. ಆದುದರಿಂದ ತರ್ಕಶಾಸ್ತ್ರದಿಂದ ಅಥವಾ ಭೌತಿಕಶಾಸ್ತ್ರದ ನಿಯಮಗಳಿಂದ ಸಿಗುವ ಉತ್ತರವನ್ನು ನನ್ನಿಂದ ಕೊಡಲು ಆಗುವುದಿಲ್ಲ. ಶಾಸ್ತ್ರ, ನ್ಯಾಯ ಮತ್ತು ತರ್ಕಬುದ್ಧಿ ಇವುಗಳ ಮೇಲೆ ನನ್ನ ವಿಶ್ವಾಸವಿದ್ದೇ ಇತ್ತು; ಇನ್ನೂ ಕೂಡ ಅದರ ಮೂಲ್ಯವನ್ನು ಮಾನ್ಯಮಾಡುತ್ತೇನೆ. ಆದರೆ ನೇಲಿಂದ ನೇಲೆ ಅದರ ಅಶಕ್ತತೆಯ ಪ್ರತ್ಯಯ ಬರುತ್ತಿದೆ; ಮತ್ತು ಅದಕ್ಕಿಂತ ಬೇರೆ ಮತ್ತು ಬಲಿಷ್ಠಶಕ್ತಿಗಳು ಜೀವನವನ್ನು ಹಿಡಿತದಲ್ಲಿಟ್ಟುಕೊಂಡಿವೆ ಎಂಬುದು ಮನಸ್ಸಿಗೆ ಸ್ಪಷ್ಟವಾಗುತ್ತದೆ. ಈ ಶಕ್ತಿಗಳನ್ನು ಸ್ವಭಾವಜನ್ಯವೆಂದೇ ಎನ್ನಿರಿ ಅಥವಾ ದುರ್ದಮ್ಯ ಪ್ರೇರಣೆ ಎಂದೇ ಎನ್ನಿರಿ, ಏನೆಂದರೂ ಅವು ತರ್ಕದ ಮತ್ತು ಭೌತಿಕ. ಶಾಸ್ತ್ರದ ಕಕ್ಷೆಯಲ್ಲಿ ಬರುವುದಿಲ್ಲೆಂಬುದು ಮಾತ್ರ ನಿಶ್ಚಿತ. ಇತಿಹಾಸದ ಪುಟದ ಮೇಲೆ ಕಾಣಿಸಿಕೊಳ್ಳುವ ಸಮ್ರಾಟರ ಮತ್ತು ಶಕಕರ್ತರ ಜೇಡಿತನ, ಅವತಾರೀ ಪುರುಷರನ್ನು ಧಿಕ್ಕರಿಸಿ ನಡೆದ ಮನುಷ್ಯನ ಪಾಪವೃತ್ತಿ, ಮನುಷ್ಯನಿಗಾಗುತ್ತಿರುವ ನಷ್ಟ, ಮಾನವಜಾತಿಯನ್ನೇ ಅಧಃಪತನದ ಕಡೆಗೆ ಒಯ್ಯುವ ಹೊಸ ಸಂಕಟಗಳು ಇವೆಲ್ಲವುಗಳ ವಿಚಾರ ಮನಸ್ಸಿನಲ್ಲಿ ಬಂದಿತೆಂದರೆ, ನನ್ನ ಅಂತಃಕರಣವು ನಿರಾಶೆಯಿಂದ ವ್ಯಾಕುಲವಾಗುತ್ತದೆ. ಇಷ್ಟಾದರೂ ಕೂಡ, ನನ್ನ ದೇಶಕ್ಕೆ ಮತ್ತು ಮನುಷ್ಯಜಾತಿಗೆ ಸುದಿನಗಳು ಬರುವುವೆಂದು ನನಗೆನಿಸುತ್ತದೆ. ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ನಡೆಸಿದ ಯುದ್ಧದಿಂದ ಭಾಗ್ಯಕಾಲವು ಇನ್ನಿಷ್ಟು ಸಮೀಪ ಬರುತ್ತಲಿದೆ!

ಈ ಆಶಾವಾದದ ಸಮರ್ಥನೆ ಮಾಡಲು ನನಗೆ ಹೇಳದಿರಿ. ಅದನ್ನು ಮಾಡಲು ನನಗೆ ಬರುವುದಿಲ್ಲ. ನಾನು ಒಂದು ಮಹತ್ಕಾರ್ಯದಲ್ಲಿ ನನ್ನ ಅಲ್ಪಶಕ್ತಿಯನ್ನು ಪುಡುಕುತ್ತಿದ್ದೇನೆ. ನನ್ನ ಶ್ರಮವು ವ್ಯರ್ಥವಾಗುವುದಿಲ್ಲ— ಎಂದಿಷ್ಟೇ ಹೇಳಬಲ್ಲೆ. ಈ ಭಾವನೆಯ ಮೂಲಕ ನನಗೆ ಸಮಾಧಾನ, ಶಾಂತಿ ಮತ್ತು ಚಿತ್ತಸ್ಥೈರ್ಯಗಳು ಸಿಗುತ್ತವೆ. ನನ್ನ ಧ್ಯೇಯವು ತೀವ್ರವಾಗಿ ಪ್ರಾಪ್ತವಾಗಬೇಕೆಂದು ನನಗೆನಿಸುತ್ತದೆ. ನಿಜವಾಗಿ ಹೇಳುವುದಾದರೆ ನನ್ನ ಉದ್ಯೋಗದ ಫಲದ ವಿಷಯವಾಗಿ ನಾನು ಅಷ್ಟೊಂದು ಚಿಂತಿಸುವುದಿಲ್ಲ. ನನ್ನ ಉದ್ಯೋಗವು ಯೋಗ್ಯಮಾರ್ಗದ ಮೇಲೆ ಇದ್ದರೆ, ಅದರಲ್ಲಿಯೇ ನನಗೆ ಸಿಗುವ ಶಾಂತಿ-ಸಮಾಧಾನಗಳಿರುತ್ತವೆ.

ನೀರು
ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ದಿ ಸದ್ವೈದ್ಯಶಾಲಾ, ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮುಂಗಳೂರು, ಹುಬ್ಬಳ್ಳಿ
ಮಾರಾಟಗಾರರು ನಂಜನಗೂಡು ಟೂತ್ ಪೌಡರ್ ಉಪಯೋಗಿಸಿರಿ

ಸಾಮಾನ್ಯವಾಗಿ ಸೋಶಲಿಸ್ಟ್ ತತ್ತ್ವಗಳಿಗನುಗುಣವಾಗಿ ನಾನು ಎಲ್ಲ ವಿಷಯಗಳ ಕಡೆಗೆ ನೋಡುತ್ತೇನೆ; ಹಿಂದುಸ್ಥಾನದಲ್ಲಿ ಅಷ್ಟೇ ಅಲ್ಲ, ಬೇರೆ ಬೇರೆ ದೇಶಗಳಲ್ಲಿಯೂ ಸೋಶಲಿಸ್ಟ್ ತರಹದ ರಾಜ್ಯ ಪದ್ಧತಿಯು ಪ್ರಸ್ಥಾಪಿತವಾಗಬೇಕೆಂದು ನನ್ನ ಇಚ್ಛೆ ಇದೆ. ಜಗತ್ತಿನಲ್ಲಿಯು ದುರ್ಗುಣಗಳು ಹೋದಮೇಲೆ ಏನಾಗುತ್ತದೆಂಬದನ್ನು ನನಗೆ ಹೇಳಲು ಬರುವುದಿಲ್ಲ; ಆ ವಿಷಯವಾಗಿ ನನಗೆ ವಿಚಾರಮಾಡುವಂತೆ ಎನಿಸುವುದಿಲ್ಲ. ಕೂಡಲೆ ಮಾಡುವ ಎಷ್ಟೋ ಕೆಲಸಗಳಿವೆ, ಮತ್ತು ಆ ಉದ್ಯೋಗ ನನಗೆ ಸಾಕಷ್ಟಿದೆ! ಜಗತ್ತು ಪೂರ್ಣಾವಸ್ಥೆ ಮುಟ್ಟುವುದೋ ಇಲ್ಲವೋ ಅಥವಾ ಈಗಿದ್ದುದಕ್ಕಿಂತಲೂ ಸುಧಾರಿಸುವುದೋ ಇಲ್ಲವೊ ಇವುಗಳ ವಿಷಯದಲ್ಲಿ ನಾನು ಉತ್ತರ ಕೊಡುವುದಿಲ್ಲ. ಆದರೆ ಜಗತ್ತನ್ನು ಸುಧಾರಿಸುವುದಕ್ಕಾಗಿ ಏನಾದರೂ ಮಾಡಲು ಶಕ್ಯವಿದೆ ಎಂದು ಶ್ರದ್ಧೆ ಮತ್ತು ಆಶೆ ಇದೆ; ಅಂತೆಯೇ ನನ್ನ ಉದ್ಯೋಗವನ್ನು ಅಖಂಡವಾಗಿ ಮಾಡುತ್ತಲಿದ್ದೇನೆ!

'ಮನುಷ್ಯಜೀವನದ ಅರ್ಥ ಮತ್ತು ಉದ್ದೇಶವೇನು?' ಎಂಬ ನಿಮ್ಮ ಮುಖ್ಯ ಪ್ರಶ್ನೆಯನ್ನು ತಪ್ಪಿಸಲು ಪ್ರಯತ್ನಮಾಡಿದ್ದೇನೆಂದು ಸಹ ನೀವು ಎನ್ನಬಹುದು. ಅದು ನಿಜವೂ ಇರುತ್ತದೆ. ನಾನು ಜೀವನದತ್ತ ಯಾವ ದೃಷ್ಟಿಯಿಂದ ನೋಡುತ್ತೇನೆ, ಮತ್ತು ನನ್ನ ಉದ್ಯೋಗದಲ್ಲಿ ಶಕ್ತಿಯನ್ನಿಯುವ ವಿಚಾರಗಳನ್ನು ಹೇಳಿದರೆ—ಅದೇ ನಿಮ್ಮ ಪ್ರಶ್ನೆಗೆ ಯೋಗ್ಯ ಉತ್ತರವೆಂದು ತಿಳಿದೆ; ಹಾಗೆಯೇ ನಿಮಗೆ ಇವನ್ನೆಲ್ಲ ಬರೆದು ತಿಳಿಸಿದ್ದೇನೆ.

ನಿಮ್ಮ
ಜವಾಹರಲಾಲ್ ನೆಹರೂ

ವಿಲ್ ಡ್ಯೂರಂಟರ 'On the meaning of life' ಎಂಬುದರ ನಿರೂಪಣೆಯಿಂದ. ಲೇ.

ನೀಲಾಂಬಿಕೆಗಾಗಿ

(ಸಣ್ಣ ಕತೆ)

ಶ್ರೀ. ಗೋವಿಂದಮೂರ್ತಿ ದೇಸಾಯಿ, ಧಾರವಾಡ

●

ಭಾರತೀಯರ ಚರಿತ್ರೆಯಲ್ಲಿ ಒಂದು ಹೆಣ್ಣಿಗಾಗಿ ಕಲಹ-ಕಾಳಗಗಳಾದುದನ್ನು ನೋಡುವೆವು; ಅವರ ಪವಿತ್ರ ಜೀವನದ ಆದರ್ಶಸಾಧನೆಗಾಗಿ ಅನೇಕ ವ್ಯಕ್ತಿಗಳ ದಿವ್ಯಜೀವಗಳೂ ಹಾಳಾದುದನ್ನು ಕಾಣುವೆವು. ನೀಲಾಂಬಿಕೆಯೂ ಅಂತಹದೊಂದು ದಿವ್ಯಜೀವ.

●

" ಕುಂಜಾ, ಕುಂಜಾ.... ... "

" ಏನಾಣತಿ ರಾಜ್ಞಿ ? " ಕೈಜೋಡಿಸಿ ರಾಜಗೃಹದ ಪರಿಚಾರಿಕೆ ಕುಂಜಳು ಕೇಳಿದಳು.

" ರಾಮನಾಯಕರು ರಾಜಗೃಹಕ್ಕೆ ಮರಳಿ ಬಂದರೇನು ? ಏನು, ಯುದ್ಧದ ಭರದಲ್ಲಿ ಅಲ್ಲಿಯೇ ನಿಂತರೊ ? ಆ ಸವಣೂರಿನ ನವಾಬನಿಗೆ ಸಾವಿದ್ದಂತೆ ಕಾಣುವುದಿಲ್ಲ. ಯವನರಿಗೆ ಮಂದಿಯೊಡನೆ ಆಗಾದುವುದೆಂದರೆ ಒಂದು ಸಂತೋಷದ ಸಂಗತಿಯೆಂಬ ಭಾವನೆಯಿದೆಯೋ, ಏನೋ ! "

ಪಾಳೆಯಗಾರ ತಿಮ್ಮರಸನ ಧರ್ಮಪತ್ನಿ, ಪ್ರಸಾಧನಗಳನ್ನು ಹರಡಿಕೊಂಡು ದರ್ಪಣವೆದುರು ನಿಂತು, ತನ್ನನ್ನು ತಾನೇ ಅಲಂಕರಿಸಿಕೊಳ್ಳುತ್ತ ದಾಸಿಯನ್ನು ವಿಚಾರಿಸಿದಳು. ಕಪ್ಪುವರ್ಣದ ವಿಶಾಲ ಕೇಶರಾಶಿಯನ್ನು ಹಸ್ತಿದಂತದ ಹಣಿಗೆಯಿಂದ ಹಿಕ್ಕಿಕೊಳ್ಳುತ್ತ " ಇಂದು ನನಗೇಕೋ ಬಲಗಣ್ಣು ಹಾರುತ್ತಲಿದೆ. ರಾಮನಾಯಕರಿಗೆ ಯುದ್ಧದಲ್ಲಿ ಏನಾದರೂ ಅಪಾಯ ಸಂಭವಿಸಿತೋ ಏನೋ ! " ಎಂದು ಶಂಕಿಸಿದಳು.

" ನಿಮ್ಮ ಮನಸ್ಸು ಪ್ರಸನ್ನವಾಗಿರಬೇಕು ಒಡತಿ ! ಸವಣೂರಿನ ನವಾಬನು ಎಂತಹ ವೀರನಿದ್ದರೇನು ? ನಮ್ಮ ಮಹಾದಂಡನಾಯಕ ರಾಮನಾಯಕರು ಸೇನಾಪತಿತ್ವವನ್ನು ವಹಿಸಿಕೊಂಡಮೇಲೆ, ಸಮಗ್ರ ಸವಣೂರಿನ ಇಪ್ಪತ್ತೈರಡು ಪ್ರಾಂತಗಳನ್ನೂ ಜಯಿಸಿ ನಿಮ್ಮ ಪದತಲದಲ್ಲಿ ಅರ್ಪಿಸುವರು ಅಂದು ನೀವು ಬರೀ ಪಾಳೆಯಗಾರ ತಿಮ್ಮರಸನ ಧರ್ಮಪತ್ನಿಯಾಗಿರದೆ, ಸವಣೂರು ಮಂಡಲದ ಚಕ್ರವರ್ತಿನಿಯಾಗುವಿರಿ ತಾಯೀ ! ತಾವು ತಾಳ್ಮೆವಹಿಸಿ ರಾಮನಾಯಕರನ್ನು ಪ್ರೋತ್ಸಾಹಿಸಿದರೆ, ಜಯದೇವತೆಯು ನಮ್ಮ ಪಾಳೆಯಕ್ಕೆ ಬರುವುದು ಖಂಡಿತ. ಇದರಿಂದ ನಿಮ್ಮ ಪಾಳೆಯದ ಮುಖ್ಯ ನಗರವಾದ ಚಂದಗಡದ ಕೀರ್ತಿ ಭಾರತದ ಇತಿಹಾಸದಲ್ಲಿ ಅನಂತಕಾಲದವರೆಗೂ ಬೆಳಗುತ್ತದೆ. ಮಹಾರಾಜ್ಞಿಯವರು ಮನಸ್ಸು ಮಾಡಿದರೆ ಅವರಿಗೆ ಯಾವುದು ತಾನೇ ಅಸಾಧ್ಯ ? " ಅರಮನೆಯ ದಾಸಿ ಕುಂಜಳು ಪ್ರಾಂಜಲ ಮನಸ್ಸಿನಿಂದ ವಸ್ತುಸ್ಥಿತಿಯನ್ನು ತೂಗಿ ಮಾತನಾಡಿದಳು.

" ಮುತ್ತಿನಂತಹ ಮಾತುಗಳವು ಕುಂಜಾ ! ನೀನು ದಾಸಿಯಾಗದೆ ರಾಜಕಾರಣಿಯಾಗಿ ಜನ್ಮವೆತ್ತಿದ್ದರೆ, ನೀನೇ ಪಾಳೆಯದ ಒಡತಿಯಾಗುತ್ತಿದ್ದೆ. ನಮ್ಮ ರಾಮನಾಯಕರು ಈ ಸಂಗ್ರಾಮದಲ್ಲಿ ವಿಜೇತರಾದರೆ, ನಿನಗೆ ನನ್ನ ಕಂಠಾಭರಣವು ಖಂಡಿತವಾಗಿ ಸಿಕ್ಕುವುದು " ಎಂದು ಹೆಳಲನ್ನು ಮುಗಿಸುತ್ತ, ಚಂದಗಡದ ಪಾಳೆಯಗಾರ ತಿಮ್ಮರಸನ ಪತ್ನಿ ನೀಲಾಂಬಿಕೆ ಮಾತನಾಡಿದಳು. ದೇಹದುದ್ದಕ್ಕೂ ಇದ್ದ ದರ್ಪಣದೆದುರು ನಿಂತು, ಮತ್ತೆ ಮತ್ತೆ ತನ್ನ ಹೆಳಲನ್ನು ನೋಡಿ, ತನ್ನ ಅಲಂಕಾರವು ಸರಿಯಾಗಿದೆಯೆಂಬ ಸಮಾಧಾನದಲ್ಲಿಯೆ ಸ್ನಾನಗೃಹಕ್ಕೆ ತೆರಳಿದಳು. ಮುಖವನ್ನು ತೊಳೆದುಕೊಂಡು ತನ್ನ ಪ್ರಸಾಧನಗೃಹಕ್ಕೆ ಬಂದು, ಉಡಿಗೆ-ತೊಡಿಗೆಗಳನ್ನು ಬದಲಿಸಿ ಹಣೆಗೆ ತಿಲಕವನ್ನಿಟ್ಟಳು. ತಿಲಕವನ್ನಿಡುವಾಗ ತಿಲಕದ ಕಡ್ಡಿ ಕೈಯಿಂದ ಜಾರಿ ಕೆಳಗೆ ಬಿದ್ದಿತು. ನೀಲಾಂಬಿಕೆಯ ಮನಸ್ಸು ಅಳುಕಿತು. ಇಂದು ಬೆಳಗಿನಿಂದಲೂ ಅವಳಿಗೆ ಅಪಶಕುನಗಳೇ ಪ್ರಾರಂಭವಾಗಿದ್ದುವು. ಎಂತಲೇ ತುಂಬ ವಿಪ್ಲವಲಗೊಂಡು, ಯುದ್ಧಕ್ಕೆ ಹೋದ ರಾಮನಾಯಕರು ನೇಸರು ನೆತ್ತಿಯ ಮೇಲೆ ಬಂದರೂ ಭೋಜನಕ್ಕೆ ಏಕೆ ಬರಲಿಲ್ಲವೆಂದು ಅವರ ಹಾದಿಯನ್ನು ಪ್ರತೀಕ್ಷಿಸುತ್ತಿದ್ದಳು. ನವಿಲಾಕಾರದ ಆಸನದ ಮೇಲೆ ದೇಹವನ್ನು ಚೆಲ್ಲಿ, ಯಾವುದೋ ವಸ್ತುವಿನ ಮೇಲೆ ತನ್ನ ದೃಷ್ಟಿಯನ್ನು ನೆಟ್ಟು ಸುಮ್ಮಗೆ ಕುಳಿತಿದ್ದಳು—ಹಿಂದಿನ ಸ್ಮೃತಿಗಳನ್ನು ಮೆಲುಕು ಹಾಕುತ್ತ: "ನನ್ನ ತಂದೆ ನನ್ನನ್ನೇನೋ ಚಂದಗಡದ ಪಾಳೆಯಕ್ಕೆ ಕೊಟ್ಟಿದ್ದಾರೆ! ನಾನಿಂದು ಬಹಿರಂಗದಲ್ಲಿ ಪಾಳೆಯಗಾರ ತಿಮ್ಮರಸನ ರಾಜ್ಞಿಯೇನೋ ಸತ್ಯ; ಆದರೆ ತಿಮ್ಮರಸನ ಹತ್ತಿರ ಇಂದೇನಿದೆ ? ಅವನು ರಣಹೇಡಿ, ಅಂಜುಬುರುಕ ! ನನ್ನ ತಂದೆ ನನ್ನನ್ನು ಕೊಟ್ಟದ್ದು ತಿಮ್ಮರಸನ ಸಂಪತ್ತಿಗೆ ! ನಮ್ಮ ಮದುವೆಯಾಗಿ ಹತ್ತು ವರುಷಗಳಾದರೂ ನಾನು ಸಂಸಾರದಲ್ಲಿ ಪಟ್ಟ ಸುಖವೇನು ? ವಂಶವ ಯಶೋಭಿವೃದ್ಧಿಗೆ ಒಬ್ಬ ಕುಲಲಲಾಮನು ನನ್ನ ಹೊಟ್ಟೆಯಿಂದ ಹುಟ್ಟಲಿಲ್ಲ. ರಾಜ್ಯವು ತಿಮ್ಮರಸನಿಂದ ಆಳಲ್ಪಡುತ್ತಿದ್ದರೂ, ರಾಜ್ಯದ ಕೀರ್ತಿ ಪಸರಿಸಿದ್ದು ಅವರ ತಮ್ಮ ರಾಮನಾಯಕರಿಂದ. ಅವರು ನಿಜಕ್ಕೂ ವೀರರು. ಅವರಿಲ್ಲದೇ ಹೋಗಿದ್ದರೆ, ನಾವು ರಾಜ್ಯ ಕೈದಿಗಳಾಗಿ, ಪರರಾಜರ ಕಾರಾಗೃಹದಲ್ಲಿ ಕೊಳೆಯಬೇಕಿತ್ತು. ನನ್ನ ಪತಿಗೆ ಪಾಳೆಯವು ದೊರೆತುದು ವೀರತ್ವದಿಂದಲ್ಲ; ಮನೆತನದ ಸಂಸ್ಥದಾಯಕ್ಕಾಗಿ. ನಮ್ಮ ಮಾವನವರ ಹೊಟ್ಟೆಯಿಂದ ಇವರೇ ಹಿರಿಯರು ! ನಾನು ಅಬಲೆ. ನನಗೆ ಖಡ್ಗ ಹಿಡಿಯಲು ಬರುತ್ತಿದ್ದರೆ, ನಾನು ನವಾಬನನ್ನು ಎಂದೋ ಧೂಳೀಪಟ ಮಾಡುತ್ತಿದ್ದೆ. ಆದರೂ ನನ್ನ ಮೈದುನ ರಾಮನಾಯಕರು ನಮ್ಮೆಲ್ಲರ, ನಮ್ಮ ಮನೆತನದ ಕೀರ್ತಿಯನ್ನು ಕಾಪಾಡಿದ್ದಾರೆ. " ಎಂದು ವಿಚಾರಿಸಿದಳು. ಪ್ರತ್ಯಕ್ಷ ನಡೆದ ಪಾಳೆಯದ ಸಮರಕ್ಕಿಂತಲೂ ಅವಳ ಮನಸ್ಸಿನಲ್ಲಿ ನಡೆದ

ವಿಚಾರಗಳ ಕೋಲಾಹಲವು ಭೀಕರವಾಗಿತ್ತು. ಅವಳ ದೇಹವು ಅರಮನೆಯಲ್ಲಿದ್ದರೂ, ಮನಸ್ಸು ಸಂಗ್ರಾಮದಲ್ಲಿ ಸಂಚರಿಸುತ್ತಿತ್ತು.

ನೀಲಾಂಬಿಕೆ ಸುರಸುಂದರಿ. ಅವಳ ಸೌಂದರ್ಯ ಅವಳಿಗೇ ತೊಂದರೆಯಾಗಿತ್ತು. ಅವಳ ರೂಪಭ್ರಾಂತಿಯಿಂದಲೇ ಚಂದಗಡ ಪಾಳೆಯವನ್ನು, ಅನೇಕ ರಾಜರು ಬಂದು ಬಂದು ಮುತ್ತುತ್ತಿದ್ದರು. ತಿಮ್ಮರಸನನ್ನು ಕ್ಷಣಾರ್ಧದಲ್ಲಿ ಸದೆಬಡೆದು, ನೀಲಾಂಬಿಕೆಯನ್ನು ಎಂದೋ— ಯಾರಾದರೂ – ಒಯ್ಯಬಹುದಿತ್ತು. ಆದರೆ ರಾಮನಾಯಕನನ್ನು ರಣರಂಗದಲ್ಲಿ ಎದುರಿಸುವುದು ಎಂತಹವನಿಗೂ ಸಾಧ್ಯವಿರಲಿಲ್ಲ. ತಿಮ್ಮರಸನಿಗಿಂತ ಮೂರೇ ವರ ಹಕ್ಕೆ ಚಿಕ್ಕವನಾದ ರಾಮನಾಯಕನನ್ನು ಕಂಡರೆ ಎಲ್ಲರಿಗೂ ಅಂಜಿಕೆ. ರಾಮನಾಯಕನು ತುಂಬ ಜೆಲುವ. ಅವನ ನಿಲುವು ಎತ್ತರದ್ದು. ತಂದೆ ಇರುವಾಗ ರಾಮನಾಯಕನನ್ನು ಅವರು ಯುವರಾಜನೆಂದು ಸಂಬೋಧಿಸುತ್ತಿದ್ದರು. ತಿಮ್ಮರಸನಲ್ಲಿ ಧೈರ್ಯವೇ ಇದ್ದಿರಲಿಲ್ಲ ಹಿರಿಯ ಮಗ. ನಾದುದರಿಂದಲೇ ಗಾದಿಗೆ ಬಂದನು. ನೀಲಾಂಬಿಕೆಯ ಲಾವಣ್ಯಕ್ಕೆ ಮರುಳಾಗಿ ಈಗ ಚಂದಗಡಕ್ಕೆ ಮುತ್ತಿಗೆ ಹಾಕಿದ್ದ ನವಾಬನು. ಅನೇಕ ಸಲ ಇಂತಹ ಕುಹಕಪ್ರಯತ್ನಗಳನ್ನು ಮಾಡಿ ನಿರಾಶನಾಗಿ ಹೋಗಿದ್ದನು. ಆದರೆ ಈ ಸಲ ಹೆಚ್ಚಿನ ದಂಡನ್ನು ಕಟ್ಟಿಕೊಂಡು ಬಂದು ಬೀಡುಬಿಟ್ಟಿದ್ದಾನೆ. ಈ ಸಲ ಅವನು ಗೆದ್ದೇ ತೀರುವನೆಂಬ ವಾರ್ತೆ ಎಲ್ಲೆಡೆ ಹಬ್ಬಿತ್ತು. ತಿಮ್ಮರಸನ ದೇಹದ ರಕ್ತಸಂಚಲನವೇ ನೀತಂತಿತ್ತು. ತಿಮ್ಮರಸನಿಗೆ ಒಡಂಬಡಿಕೆ ಮಾಡಿಕೊಳ್ಳುವಲ್ಲಿ ಬಹಳ ಆತುರತೆಯಿತ್ತು. ನವಾಬನು ಈ ಸಲ ಮುತ್ತಿಗೆ ಹಾಕಿದಾಗ "ನಾನು ಮುತ್ತಿಗೆ ಹಾಕಿದ್ದು ಈ ಚಂದಗಡದ ನೆಲಕ್ಕಲ್ಲ; ಚಂದಗಡದ ಸಂಪತ್ತಿಗಲ್ಲ; ಚಂದಗಡದ ಸಮಗ್ರ ಸೌಂದರ್ಯದ ಅಧಿದೇವತೆ ನೀಲಾಂಬಿಕೆಗಾಗಿ! ಅವಳನ್ನು ತನಗೊಪ್ಪಿಸಿದರೆ, ತಾನೇ ಪತ್ತು ಅನೆಯ ಭಾರ ಹೊನ್ನನ್ನು ಕೊಟ್ಟು ಮರಳಿ ಹೋಗುವೆನು" ಎಂದು ತಿಳಿಸಿದ್ದನು. ಆದರೆ ರಾಮನಾಯಕನು ಇದನ್ನು ನಿರೋಧಿಸಿ "ಇಂತಹ ಮಾತುಗಳನ್ನು ನೀನು ಆಡಲೇಬಾರದಿತ್ತು. ನಿನ್ನ ಉದ್ದೇಶವು ಆ ರೀತಿಯಿದ್ದರೆ, ನೀನು ರಣರಂಗದಲ್ಲಿ ನಮ್ಮನ್ನು ಸೋಲಿಸಿ ಮುಂದಿನ ಕಾರ್ಯ ಮಾಡಬೇಕು. ನೀನು ನಮ್ಮ ನೀಲಾಂಬಿಕೆಯನ್ನು ಬಯಸಿದರೆ, ನಾನು ನಿಮ್ಮ ನೂರು ಜನ ಪತ್ನಿಯರನ್ನು ಬಯಸಬಲ್ಲೆ" ಎಂದು ತಿಳಿಸಿದನು. ತಮ್ಮನು ಹೀಗೆ ಉತ್ತರವನ್ನು ಕೊಡುವಾಗ ತಿಮ್ಮರಸನ ಮೈನಡುಗಿತು. ಎದೆಯು ಅಂಜಿಕೆಯಿಂದ ಬಿರಿಯಿತು, ಮನಸ್ಸು ಅದಕ್ಕೆ ಒಪ್ಪಿಗೆಯನ್ನೀಯದೆ ಹೋಯಿತು. ಅವನಿಗೆ ರಾಜ್ಯಸುಖವು ಬೇಕಿತ್ತು; ಹೆಂಡತಿ ನೀಲಾಂಬಿಕೆ ಹೋದರೇನು? ಬೇರೆಯ ಹತ್ತಿಟ್ಟು ಹೆಣ್ಣುಗಳನ್ನು ತರಬಹುದಿತ್ತು. ಇನ್ನೊಂದೆಂದರೆ ಅವನಿಗೆ ಹೆಣ್ಣಿನ ಆಶೆಯೇ ಇರಲಿಲ್ಲ! ಎಂತಲೇ ಹೆಣ್ಣಿನ ಪಾವಿತ್ರ್ಯದ ನೆಲೆಯೂ ತಿಳಿದಿರಲಿಲ್ಲ. ಅವನ ಪಾಲಿಗೆ ನೀಲಾಂಬಿಕೆಯಿದ್ದೂ ಇಲ್ಲದಂತಿತ್ತು. ಅವನ ಪೂರ್ಣ ಮನಸ್ಸು ಗಾದಿಯ ಅಧಿಕಾರದ ಮೇಲಿತ್ತು.

ಕುದುರೆಗಳ ಖುರಪುಟದ ಧ್ವನಿಯು ಅರಮನೆಯನ್ನು ಸಮೀಪಿಸಿದಂತೆ, ತನ್ನ ಸೆರಗನ್ನು ಸರಿಪಡಿಸಿಕೊಂಡು ನೀಲಾಂಬಿಕೆ ಯುವರಾಜರ ಸ್ವಾಗತಕ್ಕೆ ಸಿದ್ಧಳಾದಳು. ಅಶ್ವದ ಪಾದಗಳ ತುಳಿತದಿಂದ ಏಳುತ್ತಿದ್ದ ಧೂಳಿಯಲ್ಲಿ ಅಶ್ವಾರೋಹಿಯು ಮುಚ್ಚಿದ್ದರಿಂದ, ಸುಸ್ಪಷ್ಟವಾಗಿ ಚಿತನು ಕಾಣುತ್ತಿರಲಿಲ್ಲ. ಆದರೆ ಅಶ್ವದ ಕನೆಯುವಿಕೆಯ ರೀತಿಯಿಂದ, ಇದು ಯುವರಾಜ ರಾಮನಾಯಕರದೆಂದೇ ಒಳಗಿಪ್ಪ ನೀಲಾಂಬಿಕೆ ದೃಢಪಡಿಸಿಕೊಂಡಳು. ಅಶುಭಸೂಚಕ ಚಿಹ್ನೆಗಳನ್ನು ಬೆಳಗಿನಿಂದಲೂ ಕಂಡ ಅವಳಿಗೆ, ಹೋದ ಜೀವವು ಮರಳಿ ಬಂದಷ್ಟು ಸಂತೋಷವಾಯಿತು ಅವಳಿಗೆ ಹಿಂದೂ ಸಂಸ್ಕೃತಿಯನ್ನು ಕಾಪಾಡುವುದರಲ್ಲಿ ಬೆಂಬಲವಾಗಿ ನಿಂತಿದ್ದ ವ್ಯಕ್ತಿಯೆಂದರೆ ರಾಮನಾಯಕನೊಬ್ಬನೇ! ತನ್ನ ಪತಿಗೆ ಅವಳು ಏನನ್ನೂ ಹೇಳುವಂತಿರಲಿಲ್ಲ.

ಕುದುರೆಯಿಂದಿಳಿದು ಯುವರಾಜರು ನೀಲಾಂಬಿಕೆಗೆ ವಂದಿಸಿ, ತಮ್ಮ ರಣರಂಗದ ವಾರ್ತೆಗಳನ್ನು ತಿಳಿಸಿದರು. ನವಾಬನು ಈ ಸಲ ಬಹಳ ಬಲಶಾಲಿಯಾಗಿ ಬಂದಿರುವನೆಂದೂ ಹೇಳಿದರು ಅವನನ್ನು ಈ ಸಲ ಗೆಲ್ಲುವುದು ಕೊಂಚ ಕಠಿಣವೆಂದೇ ಸಂಶಯವನ್ನು ವ್ಯಕ್ತಪಡಿಸಿದಾಗ, ಇದುವರೆಗಿದ್ದ ನೀಲಾಂಬಿಕೆಯ ಧೈರ್ಯವು ಉಡುಗಿತು. ಯುವರಾಜರು ತಮ್ಮ ವಾಸಸ್ಥಾನಕ್ಕೆ ಹೋಗಲು ಹೊತ್ತಾಗುವುದೆಂದು ತಿಳಿದು, ಸಂಜೆಯ ಮುಂದೆ ಭೆಟ್ಟಿಯಾಗುವೆನೆಂದು ನೀಲಾಂಬಿಕೆಗೆ

ಶಾಂತಿ ಸೇವಾಸದನದ ಹೊಸ ಪುಸ್ತಕಗಳು

ಜೈನಧರ್ಮ	೧೫–೦–೦
ಶ್ರೀ. ಮಿರ್ಜಿ ಅಣ್ಣಾರಾಯರು	
ಹಾಲು–ಹಣ್ಣು (ಕವನ ಸಂಗ್ರಹ)	೧–೪–೦
ಶ್ರೀ. ಭುಜೇಂದ್ರ ಮಹಿಷವಾಡಿ	
ಮೂಲಶಿಕ್ಷಣದ ಸೌಲ್ಯಮೂಪಣ	೦–೧೫–೦
ಶ್ರೀ. ಮಿರ್ಜಿ ಅಣ್ಣಾರಾಯರು	
ಬಾಳೆ–ಬಂಡಿ (ಕವನ ಸಂಗ್ರಹ)	೦–೪–೦
ಶ್ರೀ. ಬಾಳ ಬಿ. ಉಪಾಧ್ಯೆ	
ಭರತೇಶನ ನಾಲ್ಕು ಚಿತ್ರಗಳು	೧–೪–೦
ಶ್ರೀ. ಮಿರ್ಜಿ ಅಣ್ಣಾರಾಯರು	

ಅಚ್ಚಿನಲ್ಲಿ:

ಸಂಸ್ಕೃತಿಯ ಹೃದಯ

ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾ ಸದನ, ಸೇಡಬಾಳ

ಪೋ. : **ಸೇಡಬಾಳ** (ಜಿಲ್ಲಾ ಬೆಳಗಾಂವಿ)

ಹೇಳಿದರು. ಗಂಭೀರವಾದ ಹೆಜ್ಜೆಯನ್ನಿಡುತ್ತ ಯುವರಾಜರು ತಮ್ಮ ಗೃಹಕ್ಕೆ ತೆರಳಿದರು. ಬಳಲಿದ್ದರೂ ಮುಖದಲ್ಲಿ ಗಂಭೀರತೆ ಆವರಿಸಿತ್ತು. ಆಗ ನೀಲಾಂಬಿಕೆ ನೇರವಾಗಿ ತನ್ನ ದೇವರಮನೆಗೆ ಹೋಗಿ, ತುಪ್ಪದ ನೀರಾಜನವೊಂದನ್ನು ಬೆಳಗಿಸಿ ಕುಲದೇವತೆಗೆ ಕೈ ಮುಗಿದು, ತನ್ನ ಮೈದುನ ರಾಮನಾಯಕನಿಗೆ ದೇವಿಯು ವಿಜಯವನ್ನು ತರಲೆಂದು ಪ್ರಾರ್ಥಿಸಿದಳು.

ರವಿಯು ತನ್ನ ಸುವರ್ಣವರ್ಣದ ರಶ್ಮಿಗಳನ್ನು ತಾಯಿಯ ಮಡಿಲಿನಲ್ಲಿ ಕಳಿಸಿ, ಲೋಕದಿಂದ ಮರೆಯಾಗಲು ಪ್ರಯತ್ನಿಸುತ್ತಿದ್ದ ಪರ್ವತಾಕಾರದ ಬಿಳಿಯ ಮೋಡಗಳು ಸಂಜೆಯ ಬಂಗಾರದಾಗಸದಲ್ಲಿ ಹಿಂಜಿ ಹಿಂಜಿ ಹರಿದುಹೋಗುತ್ತಿರುವ ದೃಶ್ಯವನ್ನು ನೀಲಾಂಬಿಕೆಯು ತನ್ನ ವಾಸಗೃಹದ ಕಿಟಕಿಯಲ್ಲಿ ನಿಂತು ನಿರೀಕ್ಷಿಸುತ್ತಿದ್ದಳು. ಪ್ರತಿ ಕ್ಷಣಕ್ಕೂ, ಯುವರಾಜ ರಾಮನಾಯಕರು ತನ್ನ ಭೆಟ್ಟಿಗೆ ಬರುಬಹುದೆಂದು ನೀಲಾಂಬಿಕ ಯೋಚಿಸುತ್ತಿದ್ದಳು ಸಂಜೆಯ ಮುಂಡೆ ಅರಮನೆಯ ವಾತಾವರಣವೇ ಮ್ಲಾನವಾದಂತಾಗಿತ್ತು. ರಣರಂಗದಲ್ಲಿ ಏನೋ ಬದಲಾವಣೆಯಾಗಿದೆಯೆಂಬ ಕಲ್ಪನೆ ನೀಲಾಂಬಿಕೆಯಲ್ಲಿ ಮೂಡಿತು. ಆದರೆ ಆ ರೀತಿ ಒಡಂಬಡಿಕೆಗೆ ತಿಮ್ಮರಸನು ಒಪ್ಪಿದ್ದರೆ ಅದನ್ನು ರಾಮನಾಯಕನು ಹೇಗೆ ಒಪ್ಪಿದನು? ಅವನ ರಕ್ತದಲ್ಲಿ ಪವಿತ್ರ ಭಾರತೀಯ ಕ್ಷಾತ್ರತೇಜದ ಕಣಗಳು ಸೇರಿರುವಾಗ, ಅವನೆಂದೂ ತಾಯ ಸಮಾನ ಅತ್ತಿಗೆಯನ್ನು ಯವನರ ಕೈಗೆ ಒಪ್ಪಿಸಲು ಸಿದ್ಧನಾಗನು. ಒಂದು ಪಕ್ಷಕ್ಕೆ ಅಣ್ಣನು ಒಪ್ಪಿದರೆ ತಮ್ಮನು ನನಗದನ್ನು ಹೇಳದೆ ಹೋಗುವವನಲ್ಲ; ಅದರೆ ಬಂದು ಭೆಟ್ಟಿಯಾಗಿ ಹೋಗುವೆನೆಂದು ಹೇಳಿದ ಮೈದುನ ರಾಮನಾಯಕನು ಇದು ಹೇಗೆ ಈ ಹೊತ್ತಿನವರೆಗೂ ಬಂದಿಲ್ಲ—ಎಂದು ನೀಲಾಂಬಿಕೆ ಚಿಂತಾಕ್ರಾಂತಳಾದಳು. ಅರಮನೆಯಲ್ಲೆಲ್ಲ ಚಿಂತೆಯೇ ತುಳುಕಿತ್ತು. ಪರಿಚಾರಕರನ್ನು ಒಳಗೊಂಡು ಎಲ್ಲರೂ ಮೌನವಾಗಿದ್ದರು. ನೀಲಾಂಬಿಕೆಗೆ ಅನೇಕೋ ದುಃಸ್ವಪ್ನಗಳು ಬೀಳತೊಡಗಿದುವು. ತನ್ನ ಪರಿಚಾರಿಕೆಯನ್ನು ಕಳುಹಿಸಿ ರಾಮನಾಯಕರು ವಾಸಗೃಹದಲ್ಲಿ ಇರುವರೋ ಹೇಗೆ ಎಂಬುದನ್ನು ತಿಳಿದುಕೊಂಡಳು. ರಾಮನಾಯಕರು ಅದಾಗಲೇ ಮನೆಯನ್ನು ಬಿಟ್ಟು ಹೋಗಿದ್ದರಂತೆ. ರಣರಂಗದಲ್ಲಿ ಹೆಚ್ಚಿನ ಬದಲಾವಣೆ ಏನೂ ಆಗಿಲ್ಲವೆಂಬ ವಾರ್ತೆಯನ್ನು ದಾಸಿ ತಂದಳು. ಅಂದು ಮಧ್ಯಾಹ್ನನೇ ಅರಮನೆಯ ಗುಪ್ತಚಾರನೊರ್ವನು, ತಿಮ್ಮರಸನ ಕಡೆಯಿಂದ ಓಲೆಯೊಂದನ್ನು ಒಯ್ದನೆಂಬ ದಟ್ಟವಾರ್ತೆ ನಗರದಲ್ಲಿ ಹಬ್ಬಿದೆಯೆಂದು ಅವಳೇ ಹೇಳಿದಳು. ಅರಮನೆಯ ಪರಿವಾರಕ್ಕೆ ಇದಾವುದೂ ಗೊತ್ತಿರಲಿಲ್ಲ ಸ್ವತಃ ರಾಜ್ಯದ ರಾಜ್ಞಿಗೆ ಗೊತ್ತಿಲ್ಲದಿರುವಾಗ ಉಳಿದವರ' ಪಾಡೇನು? ರಾಜಕಾರಣವನ್ನು ಹೆಂಗಸರಿಗೇಕೆ ಹೇಳಬಾರದೆಂದು ನೀಲಾಂಬಿಕೆ ಸಿಡಿಮಿಡಿಗೊಂಡಳು. ಆದರೆ ಅಬಲೆ, ಅಸಹಾಯಕಳು! ಮೊದಲೇ ನಿರಾಶೆ, ಅನೇಲೆ ರಣರಂಗದ ಸುದ್ದಿಯನ್ನು ತಿಳಿಸಲು ಬರುವೆನೆಂದು ಹೇಳಿ ರಾಮನಾಯಕನು ಬಾರದೇಯಿದ್ದನು! ಭಾರವಾದ ದೇಹವನ್ನು ಆಸನದಲ್ಲಿ ಚೆಲ್ಲಿ ಸುಮ್ಮನೆ ಮಲಗಿದ್ದಳು. ಅರಮನೆಯ ಸುಪ್ಪತ್ತಿಗೆ ಕೂಡ ಅವಳಿಗೆ ಮುಳ್ಳಿನಂತೆ ಚುಚ್ಚುತ್ತಿತ್ತು.

ಅಷ್ಟರಲ್ಲಿ ದಾಸಿಯು ರಾಮನಾಯಕರು ಬಂದರೆಂದು ಹೇಳಿದ ಕೂಡಲೆ, ಚಟ್ಟನೆ ಎದ್ದುಕುಳಿತು ಅಸ್ತವ್ಯಸ್ತವಾದ ಸೆರಗನ್ನು ಸರಿಪಡಿಸಿಕೊಂಡು ಅಕೆ ಸ್ವಾಗತವನ್ನು ಕೋರಿದಳು.

"ಅತ್ತಿಗೆ, ತಡವಾದದ್ದನ್ನು ಕ್ಷಮಿಸು. ರಾಜ್ಯಕಾರಭಾರ, ಅದರಲ್ಲಿಯೂ ಯುದ್ಧದ ಸಮಯವೆಂದರೆ ಸೈನಿಕರಿಗೆ ಸಮಯದ ಅರಿವೇ ಇರುವುದಿಲ್ಲ. ಕುಲದೇವತೆಯ ಕೃಪೆಯಿಂದ ಇಲ್ಲಿಯವರೆಗೂ ನಮ್ಮ ಸೈನಿಕರು ನವಾಬನ ಸೈನಿಕರನ್ನು ಎದುರಿಸುತ್ತಲೇ ಇದ್ದಾರೆ. ಆದರೆ ಅಣ್ಣನು ಒಪ್ಪಂದಕ್ಕೆ ಸಿದ್ಧನಿರುವುದಾಗಿ ನವಾಬರಿಗೆ ಓಲೆ ಕಳುಹಿಸಿರುವನೆಂಬ ವಾರ್ತೆ ನನ್ನ ಕಿವಿಗೆ ಬಿದ್ದಿದೆ. ಅಣ್ಣನ ಭೆಟ್ಟಿಯಾದಾಗ ನನಗೇನೂ ಇದು ತಿಳಿಯಲಿಲ್ಲ. ಅವನಿಗೆ ನನ್ನೊಡನೆ ರಾಜಕಾರಣವನ್ನು ಚರ್ಚಿಸುವುದೇ ಬೇಡವಾಗಿದೆ!" ರಾಮನಾಯಕನು ಹೇಳಿದನು.

"ಒಡಂಬಡಿಕೆಯೆಂದರೆ.....?" ನೀಲಾಂಬಿಕೆ ಪ್ರಶ್ನಿಸಿದಳು.

"ಒಡಂಬಡಿಕೆಯು ಏನೆಂಬುದನ್ನು ಹೇಳಲು ನನಗೆ ಬಾಯಿಲ್ಲ ಅತ್ತಿಗೆ! ರಾಜ್ಯ ಕಳೆದುಹೋಗಿದ್ದರೆ ಅದನ್ನು ಮರಳಿ ಪಡೆಯಬಹುದಿತ್ತು; ಆದರೆ ರಾಜ್ಯಲಕ್ಷ್ಮಿ ಹೋದರೆ ಅವಳನ್ನು ತಿರುಗಿ ಪಡೆಯುವುದೆಂತು? ಎಂತಹ ಹೇಡಿ ಹಿಂದುವೂ ಈ ಕಾರ್ಯಮಾಡನು! ಅತ್ತಿಗೆ, ನನ್ನ ಪ್ರಾಣವು ಇರುವವರೆಗೂ ನಾನು ಈ ಚಂದಗಡದ ಮಣ್ಣಿಗಾಗಿ ಕೀರ್ತಿಗಾಗಿ, ಚಂದಗಡದ ಪ್ರಜೆಗಳ ಗೌರವಕ್ಕಾಗಿ ಹೋರಾಡುತ್ತೇನೆ" ಎಂದು ಎದ್ದುನಿಂತನು.

"ರಾಜ್ಯಲಕ್ಷ್ಮಿಯೆಂದರೇನು ರಾಮನಾಯಕರೆ.....?" ಎಂದು ನೀಲಾಂಬಿಕೆ ಕೇಳಿದಾಗ, ಅದನ್ನು ನಾನು ನನ್ನ ಬಾಯಿಂದ ಹೇಳಲಾರೆನೆಂದು ನುಡಿಯುತ್ತ ರಾಮನಾಯಕನು ಅಲ್ಲಿಂದ ಜಾರಿದನು. ನೀಲಾಂಬಿಳಿಗೆ ಒಂದೆಡೆ ಗಂಡನ ಹೇಡಿತನಕ್ಕಾಗಿ ದುಃಖವಾದರೆ, ಇನ್ನೊಂದೆಡೆ ರಾಮನಾಯಕನ ಶೌರ್ಯದ ಮಾತುಗಳಿಗಾಗಿ ಆನಂದವಾಯಿತು. ಹಿಂದೂಧರ್ಮದ ಸಂಸ್ಕೃತಿ ಹಾಗು ಗೌರವಗಳಲ್ಲಿ ಅವನಿಟ್ಟ ಪ್ರೀತಿ ವಿಶ್ವಾಸಗಳನ್ನು ಕಂಡು ನೀಲಾಂಬಿಕೆ ಸಮಾಧಾನಪಟ್ಟಳು ಅಂತೂ ಅಂದು ಅಹೋರಾತ್ರಿ ಅವಳು ಚಿಂತೆಯಲ್ಲಿಯೇ ಕಳೆದಳು. ಅವಳಿಗೆ ನಿದ್ರೆಯೇ ಬರಲಿಲ್ಲ. ತನ್ನ ಪತಿ ತಿಮ್ಮರಸನ ಹೇಡಿತನವನ್ನು ಹಳಿಯುತ್ತಲೇ ರಾತ್ರಿ ಕಳೆದಳು. ಮುಂಜಾನೆ ಹಾಸಿಗೆಯಿಂದ ಎದ್ದಾಗ ಕಣ್ಣೆಲ್ಲ ಕೆಂಪಾಗಿದ್ದುವು. ಹರಡಿದ ಕೂದಲುಗಳನ್ನು ಹಾಗೆಯೇ ಬಿಟ್ಟುಕೊಂಡು ಆತ್ತಿತ್ತ ಅಡ್ಡಾಡಹತ್ತಿದಳು. ಅಂದು ಯುವರಾಜ ರಾಮನಾಯಕರು ರಣರಂಗದಿಂದ ಅರಮನೆಗೆ ಬರುವುದಿಲ್ಲವೆಂದು ಹೇಳಿಕಳಿಸಿದ್ದರು. ಮಧ್ಯಾಹ್ನದಲ್ಲಿ ತಿಮ್ಮರಸನು ನೀಲಾಂಬಿಕೆಯ ಶಯನಗೃಹಕ್ಕೆ ಬಂದನು. ಇತ್ತೀಚೆಗೆ ತಿಮ್ಮರಸನು ಅಲ್ಲಿಗೆ ಬರುತ್ತಲೇ ಇರಲಿಲ್ಲ. ಇಂದು ನೀಲಾಂಬಿಕೆ ತಳೆದ ಉಗ್ರ ರೂಪವನ್ನು ನೋಡಿ, ತಿಮ್ಮರಸನು ಮಾತನಾಡಲು ಅಂಜಿದನು. ಹಾಸಿಗೆಯ ಮೇಲೆ ಮಲಗಿದ ನೀಲಾಂಬಿಕೆಗೆ, ಗಂಡನು ಬಂದಾಗ ಎದ್ದು ಗೌರವವನ್ನು ಕೊಡಬೇಕೆಂಬ ಮನಸ್ಸಾಗಲಿಲ್ಲ. ಅವನ ರಣಹೇಡಿತನವನ್ನು ಕಂಡು ಅವನನ್ನು ಸಹಸ್ರಸಲ ಶಪಿಸಿದಳು. ತಿಮ್ಮರಸನು ತಾನೇ ಆಸನವೊಂದನ್ನು ಎಳೆದು ಕುಳಿತುಕೊಂಡನು.

"ನೀಲಾ, ನಿನ್ನಲ್ಲಿ ಕ್ಷಮೆಯೋರಿ ಮಾತನ್ನೊಂದು ಕೇಳಬೇಕಾಗಿದೆ" ಕೈಬೆರಳುಗಳನ್ನು ತಿಕ್ಕುತ್ತ ಸಾವಕಾಶವಾಗಿ ತಿಮ್ಮರಸನು ಅರ್ಧ ಅಂಜಿ, ಅರ್ಧ ಮಾತನಾಡುವ ಧೈರ್ಯವಿಲ್ಲದೆ ಮಾತನಾಡಿದನು. ಅವಳು ಯಾವುದಕ್ಕೂ ಪ್ರತಿಕ್ರಿಯೆಯನ್ನೇ ತೋರಿಸಲಿಲ್ಲ ತಿಮ್ಮರಸನು ತಾನೇ "ನೀನು ನನ್ನ ರಾಜ್ಯದ ಲಕ್ಷ್ಮಿಯೇನೋ ಅಹುದು; ಆದರೆ ಸವಣೂರಿನ ನವಾಬನು ನನ ಕಾಲಾಂತಕ. ಅವನು ನನ್ನ ಮೇಲೆ ಯುದ್ಧ ಹೂಡಿದ್ದು ಚಂದಗಡದ ಪಾಳೆಯಕ್ಕಲ್ಲ; ಚಂದಗಡದ ಪಾಳೆಯಗಾರನ ಪತ್ನಿಗೆ. ಆದಕ್ಕೆ....."ಎಂದು ಮತ್ತೇನಿಂತನು. "ನೀವು ನನ್ನ ಕ್ಷಮೆ ಕೇಳುವ ಕಾರಣವೇನು? ನಾನು ನಿಮ್ಮ ಕೈಗೊಂಬೆ. ನಿಮ್ಮ ಮನಸ್ಸಿಗೆ ಬಂದಂತೆ ನನ್ನನ್ನು ಆಡಿಸಿರಿ. ನಿಮ್ಮ ಸೂತ್ರದಂತೆ ನಡೆಯುವ ಸಜೀವ ಗೊಂಬೆ ನಾನು!" ಎಂದು ಸಿಂಹಿಣಿಯಂತೆ ಸಿಟ್ಟಿನಿಂದ ಹೇಳಿದಳು ನೀಲಾಂಬಿಕೆ. ತಿಮ್ಮರಸನು "ನಾನಿಂದು ಒಪ್ಪಂದಪತ್ರಕ್ಕೆ ಅಂಕಿತವನ್ನಿತ್ತಿದ್ದೇನೆ. ನೀನು ಇಂದು ರಾತ್ರಿ ನವಾಬರ ತಾಣಕ್ಕೆ ಹೋಗಬೇಕು. ನಿನಗಿಂತಲೂ ಈ ಚಂದಗಡದ ಗಾದೆ ನನಗೆ ಮುಹತ್ತ್ವದ್ದು" ಎಂದು ಹೇಳಿದನು. ನೀಲಾಂಬಿಕೆಯು ತುಳಿದ ಹಾವು ತಲೆಯೆತ್ತಿ ಕೋಪವನ್ನು ಕಾರುವಂತೆ "ನರಾಧಮ, ನೃಶಂಸ, ನಪುಂಸಕ.....ಯಾವ ಮುಖದಿಂದ ಯಾವ ಮಾತನಾಡುವಿ? ನೀರಕುಲದಲ್ಲಿ ಜನ್ಮವೆತ್ತಿ ಮಡದಿಯಾಗಿರುವ ಹೆಣ್ಣೊಂದನ್ನು ಪರರಾಜನಿಗೆ ಒಪ್ಪಿಸಲು ನಾಚಿಕೆಯೆನಿಸುವುದಿಲ್ಲವೇ? ನೀನು ಖಡ್ಗವನ್ನು ಹಿಡಿದು ನನ್ನ ಕುತ್ತಿಗೆಗೆ ಹಾಕಿದರೆ, ನಾನು ಸಂತೋಷದಿಂದ ಮರಣವನ್ನು ಸ್ವಾಗತಿಸುತ್ತೇನೆ. ಕೈಹಿಡಿದವಳನ್ನು ಕೈಹಿಡಿದವನು, ಕೈಹಿಡಿದು ಬೇರೆ ಪುರುಷನ ಬಳಿ ಕಳಿಸುವಂತಹ ನೀಚಕೃತಿ ಜಗತ್ತಿನಲ್ಲಿ ಯಾವುದೂ ಇಲ್ಲ! ನೀನು ನನ್ನನ್ನು ಬೇರೆಯವರಿಗೆ ಕೊಡಲು ನಾನೇನು ನಿನ್ನ ತೊತ್ತೆಂದು ಭಾವಿಸಿದೆಯಾ? ಧರ್ಮದಿಂದ ನಡೆಯುವ ವರೆಗೂ ಪತಿಯು ಪತಿಯೇ ಹೊರತು, ಜೀವನದ ಕೊನೆಯವರೆಗೂ ಅಲ್ಲ. ಅಧರ್ಮದಲ್ಲಿ, ಅನ್ಯಾಯದಲ್ಲಿ ಕಾಲಿಕ್ಕಿದ ಪತಿಯು ಎಂದೂ ತನ್ನ ಸತಿಯ ಮೇಲೆ ಅಧಿಕಾರವನ್ನು ನಡೆಯಿಸಲಾರ. ಮದುವೆಯ ಪವಿತ್ರಪ್ರತೀಕವಾದ ಈ ನಿನ್ನ ಮಂಗಲಸೂತ್ರವನ್ನು ತೆಗೆದುಕೋ" ಎಂದು ನೀಲಾಂಬಿಕೆ, ಕೊರಳಲ್ಲಿಯ ಮಂಗಲಸೂತ್ರವನ್ನು ಹರಿದು ತಿಮ್ಮರಸನ ಮೇಲೆ ಎಸೆದಳು. ತಿಮ್ಮರಸನಿಗೆ ಏನೂ ಮಾತನಾಡಲು ಬರಲಿಲ್ಲ. ಅಲ್ಲಿಂದ ಎದ್ದು ನೇರವಾಗಿ ತನ್ನ ಕೋಣೆಗೆ ತೆರಳಿದನು. ಬಲಾತ್ಕಾರದಿಂದ ನೀಲಾಂಬಿಕೆಯನ್ನು ನವಾಬ ತಾಣಕ್ಕೆ ಕಳಿಸಿದರಾಯಿತೆಂದು ಬಗೆದು, ಮುಂದಿನ ಕಾರ್ಯಕ್ಕೆ ಸಿದ್ಧನಾದನು. ಮೊದಲೇ ಕೆಂಪಗಿದ್ದ ನೀಲಾಂಬಿಕೆಯ ಮುಖವು ಕೋಪದಿಂದ ಮತ್ತಿಷ್ಟು ಕೆಂಪಾಯಿತು. ಧನಲಕ್ಷ್ಮಿಯ ಮೇಲೆ ಆಶೆಯಿಟ್ಟ ತಿಮ್ಮರಸನಿಗೆ ಹೆಂಡತಿಯ ಗೌರವವು ಕೂಡ ಕಾಸಿಗಿಂತ ಕಡೆಯಾಯಿತು. ಅಸಹಾಯಳಾಗಿ ನೀಲಾಂಬಿಕೆ ತನ್ನ ಶಯ್ಯೆಯ ತುಂಬ ಹೊರಳಾಡಿದಳು. ಆಕೆಯ ಹೊಟ್ಟೆಯಲ್ಲಿ ಎದ್ದ ಅಗ್ನಿಯ ಪ್ರಕೋಪವನ್ನು ಸಪ್ತಸಮುದ್ರಗಳು ಕೂಡ ಶಾಂತಪಡಿಸಲು ಅಸಮರ್ಥವಾಗಿದ್ದುವು. ಅಂದು ಸರಿರಾತ್ರಿಯಲ್ಲಿ, ನೀಲಾಂಬಿಕೆಯನ್ನು ನವಾಬನ ಪಾಳೆಯಕ್ಕೆ ಕಳಿಸಿಕೊಡುವೆನೆಂದು ತಿಮ್ಮರಸನು ಆಗಲೇ ಗುಪ್ತಚಾರನೊರ್ವನಿಂದ ತಿಳಿಸಿದ್ದನು ಈ ಸಂಗತಿಯನ್ನು ಬಹು ಗೌಪ್ಯವಾಗಿಟ್ಟಿದ್ದನು.

× × × ×

ರಾತ್ರಿಯು ಅಧಾಗಲೇ ಅರ್ಧ ಸರಿದಿತ್ತು. ಕೈಯಲ್ಲಿ ಸಂಜನ್ನು ಹೊತ್ತಿಸಿಕೊಂಡು ಹತ್ತೆಂಟು ಜನ ಸೇವಕರು ಮೇಣೆಯೊಂದನ್ನು ಹೊತ್ತುಕೊಂಡು ನವಾಬರ ಶಿಬಿರದತ್ತ ಬರುತ್ತಿದ್ದರು. ಅಲ್ಲಿದ್ದ ಸೈನಿಕರೆಲ್ಲರೂ ಬಹುರೀತಿ ದುಡಿದಿದ್ದರಿಂದ, ಅವರೆಲ್ಲರೂ ನಿದ್ರಾವಶರಾಗಿದ್ದರು. ಮುಖ್ಯ ತಾಣೆಯಲ್ಲಿಯ ನವಾಬರ ವಾಸಗೃಹದಲ್ಲಿ ಮಾತ್ರ ಇನ್ನೂ ಪಂಜುಗಳು ಉರಿಯುತ್ತಿದ್ದುವು. ನೀಲಾಂಬಿಕೆ ಇಂದು ನವಾಬರ ಶಿಬಿರಕ್ಕೆ ಬರುವವಳಿದ್ದುದರಿಂದ, ಯಾವ ಕಾವಲುಗಾರರೂ ನವಾಬರ ಡೇರೆಯಲ್ಲಿ ಬರುವಂತಿರಲಿಲ್ಲ ಅವರಿಗೆ ಆ ರೀತಿಯ ಆಜ್ಞೆಯೇ ಇತ್ತು. ಮೇಣೆಯು ಬಾಗಿಲು ತೆರೆಯಿತು. ಮುಖಕ್ಕೆ ಪರದೆಯನ್ನು ಹಾಕಿಕೊಂಡು ವನಿತೆಯೊಬ್ಬಳು ಕೆಳಕ್ಕಿಳಿದಳು. ಅವಳ ಕಾಲಲ್ಲಿಯ ನೇವುರದ ಗೆಜ್ಜೆಗಳು ಆ ಪ್ರಶಾಂತಸಮಯದಲ್ಲಿ ಸುಮಧುರಸ್ವರವನ್ನು ಹೊರಡಿಸುತ್ತಿದ್ದುವು. ಪಾದಗಳಲ್ಲಿಯ ಜರದ ಮೆಟ್ಟಲುಗಳನ್ನು ನೋಡಿ ನವಾಬನಿಗೆ ಸಗ್ಗವೇ ಇಳಿದುಬಂದಂತಾಯಿತು ತಾನು ಯಾವ ಹೆಣ್ಣಿಗಾಗಿ ಇದುವರೆಗೂ ಆಶಿಸಿ ಹೋರಾಡಿದ್ದನೋ, ಆ ಹೆಣ್ಣು ತನ್ನೆದುರು ಪ್ರತ್ಯಕ್ಷವಾಗಿ ನಿಂತಾಗ, ನವಾಬನ ಆನಂದಕ್ಕೆ ಪಾರವೇ ಇರಲಿಲ್ಲ. ಬಂದವಳು ಮುಖದ ಪರದೆಯನ್ನು ಕೊಂಚ ಹೊರಳಿಸಿದ ಕೂಡಲೇ, ಆಕಾಶದಿಂದ ತೂರಿಬಂದ ಚಂದ್ರನ ಕಿರಣಗಳಂತೆ ಪ್ರಕಾಶವು ಬಿದ್ದಿತು. ಸಂಪ್ರದಾಯದಂತೆ ನವಾಬರ ಎದುರಿನಲ್ಲಿಟ್ಟ ಕನಕದ ಹೂಜೆಯಿಂದ, ಮದಿರೆಯನ್ನು ಒಂದು ಬಂಗಾರದ ಪಾತ್ರೆಯಲ್ಲಿ ಬಾಗಿಸಿ ನವಾಬರಿಗೆ ಕೊಟ್ಟಳು. ತನ್ನನ್ನು ನೀಲಾಂಬಿಕೆಯು ಈ ಮೊದಲೇ ಪ್ರತಿಸುತ್ತಿರಬಹುದೆಂದು ಭ್ರಾಂತನಾದ ನವಾಬನು, ಮತ್ತೆ ಮತ್ತೆ ಅವಳ ಕೈಯಿಂದ ಮದಿರೆಯನ್ನು ಈಯಿಸಿಕೊಂಡು ಕುಡಿದನು. ಅವನಿಗೆ ಹೆಚ್ಚು ಸಮಯವನ್ನು ಕಳೆಯುವುದು ಬೇಡವಾಗಿತ್ತು. ಕಾಮಾತುರನಾದ ನವಾಬನು ಅವಳ ಕೈಯನ್ನು ಹಿಡಿದು ಜಗ್ಗಿದನು. ಕೈಗುಂಟಲೇ ಅವಳೂ ಹೋಗಿ ನವಾಬನ ಬದಿಯಲ್ಲಿ ಕುಳಿತಳು. ನವಾಬನು ಅವಳನ್ನು ತನ್ನ ಎದೆಗೆ ಅಪ್ಪಿಕೊಂಡನು. ಆಗಲೇ ಅವನ ನುದಿರೆಯ ಮದವು ತಲೆಗೆ ಏರಹತ್ತಿತ್ತು. ಅಪ್ಪಿಕೊಂಡ ದೇಹವು ಆದೇಕೋ ಕಬ್ಬಿಣದನ್ನು ಕಠಿಣವಾಗಿ ನವಾಬನಿಗೆ ತೋರಿತು ಅವಳನ್ನು ಬಿಗಿಯಾಗಿ ಅಪ್ಪಿಕೊಂಡ ನವಾಬನು ಪುನಃ ಏಳಲೆಯಿಲ್ಲ. ಬಂದವಳು ತನ್ನ ಕತಾರಿಯಿಂದ, ತೋಳಸೆರೆಯಲ್ಲಿ ಸಿಕ್ಕ ನವಾಬನನ್ನು ತಿವಿದುದರಿಂದ, ಅವನ ಹೃದಯದಿಂದ ರಕ್ತವು ಚಿಮ್ಮತೊಡಗಿತು. ಅವನಿಗೆ ಅಡಲಿಕ್ಕೆ ಬಾಯಿಯೇ ಇರಲಿಲ್ಲ. ತಾನಪ್ಪಿಕೊಂಡ ಹೆಣ್ಣು ಹೆಣ್ಣಾಗಿರದೆ, ಹೆಣ್ಣುನೇಪದಲ್ಲಿದ್ದ ರಾಮನಾಯಕನೆಂಬುದು, ಮರಣದ ಕೊನೆಯ ಗಳಿಗೆಯಲ್ಲಿ ನವಾಬನಿಗೆ ತಿಳಿಯಿತು. ಕೂಡಲೆ ಅವನ ಪ್ರಾಣಪಕ್ಷಿ ಹಾರಿಹೋಯಿತು. ಪ್ರಣಯದಲ್ಲಿ ನವಾಬರು ತಲ್ಲೀನರಾಗಿರಬೇಕೆಂದು ಕಾವಲುಗಾರರು, ಹೊರಗೆ

ದೂರದಲ್ಲಿ ನಿಂತಿದ್ದರು. ಅವರಲ್ಲಿಯ ಯಾರೂ ಒಳಗೆ ಬರಬಾರದೆಂಬ ಆಜ್ಞೆಯನ್ನು ನವಾಬರೇ ಹೊರಡಿಸಿದ್ದರು. ನವಾಬನ ಜೀವನನ್ನು ಕ್ಷಣಾರ್ಧದಲ್ಲಿ ನುಂಗಿ ನೀರುಕುಡಿದ ರಾಮನಾಯಕನು, ತನ್ನ ಸ್ತ್ರೀ ವೇಷವನ್ನು ಸರಿಪಡಿಸಿಕೊಂಡು, ಮುಖದ ತುಂಬ ಪರದೆಯನ್ನು ಎಳೆದು ಕೊಂಡು ಮತ್ತೆ ಮೇಣೆಯನ್ನೇರಿ ಹೊರಟುಹೋದನು. ಆಗಲೇ ರಾತ್ರಿ ಸರಿದಿತ್ತು. ಬೆಳಗಿನ ಜಾವ. ತನ್ನ ವಿಜಯವಾರ್ತೆಯನ್ನು ಅತ್ತಿಗೆಗೆ ಹೇಳಲಿಕ್ಕೆ ರಾಮನಾಯಕನಿಗೆ ತುಂಬ ಆತುರವೆನಿಸಿತ್ತು. ಉಲ್ಲಾಸದ ನಡಿಗೆಯಿಂದಲೇ ಅವನು ಈ ವಾರ್ತೆಯನ್ನು ನೀಲಾಂಬಿಕೆಗೆ ತಿಳಿಸಲು, ಮೊದಲು ಅವಳ ಶಯನ ಗೃಹದ ಕಡೆ ಹೋಗಿ ಬಾಗಿಲನ್ನು ಹೂಡಿ ಅತ್ತಿಗೆಯನ್ನು ಕೂಗಿದನು. ನೀಲಾಂಬಿಕೆ ಬಾಗಿಲನ್ನು ತೆರೆದು ರಾಮನಾಯಕನನ್ನು ಒಳಗೆ ಕರೆದೊಯ್ಯುವ ಬದಲು, ತಾನೇ ಹೊರ-ಬಂದು ಅಂತಹ ಹೊತ್ತಿನಲ್ಲಿ ಬಂದ ಕಾರಣವನ್ನು ಕೇಳಿದಳು. ರಾಮ-ನಾಯಕನು ತುಂಬ ಉತ್ಸಾಹದಿಂದ, ತಾನು ಅದುಹೇಗೆ ನವಾಬನನ್ನು ಕೊಂದೆನೆಂಬುದನ್ನೆಲ್ಲ ವಿವರಿಸಿದನು. ನರಾಧಮ ನವಾಬನ ಕೊಲೆಯ ವಾರ್ತೆಯನ್ನು ಕೇಳಿ ನೀಲಾಂಬಿಕೆ ಸಂತೋಷಪಟ್ಟಳು; ಆದರೆ ಅವಳ ಮುಖದಲ್ಲಿ ಅಜೇಕೋ ಅಪ್ಪು ಗೆಲವು ಕಂಡುಬರಲಿಲ್ಲ. "ನಿಮ್ಮ ಆಶೀರ್ವಾದದಿಂದ ಕಾರ್ಯವು ತೀರ ಸುಗಮವಾಯಿತು ಅತ್ತಿಗೆ! ನಿಮ್ಮ ಪುಣ್ಯಬಲದಿಂದ ನಮ್ಮ ಚಂದಗಡದ ಗೌರವವು ಉಳಿದಂತಾ-ಯಿತು ಅತ್ತಿಗೆ!" ಎಂದು ಹೇಳಿ, ರಾಮನಾಯಕನು ಅತ್ತಿಗೆಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ನಮಸ್ಕಾರ ಮಾಡಿ ಏಳುವಾಗ ರಾಮನಾಯಕನ ಕಣ್ಣೀರುಗಳು ನೀಲಾಂಬಿಕೆಯ ಪಾದಗಳ ಮೇಲೆ ಬಿದ್ದುವು. ನೀಲಾಂಬಿಕೆಗೆ ಆಶ್ಚರ್ಯವಾಯಿತು. "ರಾಮನಾಯಕ ನಿನ್ನ ಕಣ್ಣಲ್ಲಿ ನೀರೇಕೆ? ಮಹಾಶತ್ರುವನ್ನು ಜಯಿಸಿ ವಿಜೇತೃವಾಗಿ ಬಂದಾಗ ಅಳುವೇಕೆ? ಚಂದಗಡದ ದೊರೆ ನೀನು. ಇದರ ಗಾದಿಯನ್ನು ಏರಿ, ಕೀರ್ತಿಯನ್ನು ಕಾಪಾಡುವ ಹೊಣೆಯನ್ನು ನೀನೆ ಹೊರಬೇಕು! ನಿನ್ನ ಕಣ್ಣಲ್ಲಿ ನೀರನ್ನು ಕಂಡು ನನಗೇಕೋ ದುಃಖವೆನಿಸುತ್ತದೆ" ಎಂದು ನೀಲಾಂಬಿಕೆ ಹೇಳಿದಳು.

"ನನ್ನ ದುಃಖದ ಕಾರಣ ಬೇರೆ ಇದೆ ಅತ್ತಿಗೆ! ಇದುವರೆಗೂ ಭಾರತೀಯ ಸ್ತ್ರೀಯರ ಗೌರವವನ್ನು ಕಾಪಾಡಲಿಕ್ಕೆ ನಾನು ನವಾಬ-ನೊಡನೆ ಹೋರಾಡಿದೆ; ಆದರೆ ಇನ್ನು ಇಂತಹ ಗೌರವ ಕಾಯುವ ಕಾರ್ಯದಲ್ಲಿ ಹೋರಾಡಬೇಕೆಂದರೆ, ಇಂಥ ನವಾಬರಿಲ್ಲವಲ್ಲ ಅತ್ತಿಗೆ! ನಾನು ಇನ್ನು ಯಾರೊಡನೆ ಪವಿತ್ರ ಕಾರ್ಯಸಾಧನೆಗೆ ಹೋರಾಡಲಿ? ನಾನು ಅವನನ್ನು ಮೋಸಮಾಡಿ ಕೊಂದೆನೆಂದು ನನ್ನ ಅಂತರಾತ್ಮವು ಕಡಿಯುತ್ತಿದೆ. ರಣರಂಗದಲ್ಲಿ ನಾನು ಅವನನ್ನು ನನ್ನ ಖಡ್ಗಕ್ಕೆ ಆಹುತಿಕೊಟ್ಟಿದ್ದರೆ, ನನಗೆ ನಿಜಕ್ಕೂ ಆನಂದವಾಗುತ್ತಿತ್ತು. ನನ್ನ ಅನ್ಯಾಯಕ್ಕೆ ನನಗೆ ಮಾತ್ರ ವೀರಸ್ವರ್ಗವು ದೊರೆಯುವುದಿಲ್ಲ. ನಾನು ಅವನನ್ನು ಕೊಂದದ್ದು, ನಿನ್ನ ಗೌರವವನ್ನು ಕಾಪಾಡಲಿಕ್ಕೆ. ನಾನು ಈ ರೀತಿ ಕೊಲ್ಲದೆ ಹೋಗಿದ್ದರೆ, ನೀನು ಅವನ ವಶಳಾಗುತ್ತಿದ್ದೆ ಅತ್ತಿಗೆ! ಅಧರ್ಮಯುದ್ಧಕ್ಕಾಗಿ ನನಗೆ ತುಂಬ ವಿಷಾದವೆನಿಸಿದೆ" ಎಂದು ಹೇಳಿ ಕಣ್ಣನ್ನು ಒರಸಿಕೊಂಡನು. ನವಾಬನ ಪರಮಾವಧಿ ಅನ್ಯಾ-ಯದ ಮುಂದೆ ರಾಮನಾಯಕನು ಮಾಡಿದ ಅನ್ಯಾಯವು ಏನೂ ಅಲ್ಲ ವೆಂದು ಹೇಳಿ, ನೀಲಾಂಬಿಕೆ ಅವನಿಗೆ ಧೈರ್ಯಕೊಟ್ಟಳು. ಅವನ ಕಾರ್ಯವನ್ನು ಹೊಗಳಿ. ಭಾರತೀಯ ಸ್ತ್ರೀತ್ವದ ಗೌರವವನ್ನು ಕಾಯ್ದ ದ್ದಕ್ಕೆ ಸ್ವರ್ಗವೇಕೆ ಇಂದ್ರನ ಅರ್ಧ ಪಟ್ಟವೇ ದೊರೆಯುತ್ತದೆ—ಎಂದು ಹೇಳಿ, ತುಂಬಾ ಆಶೀರ್ವದಿಸಿ ಮತ್ತೆ ತನ್ನ ಶಯನಗೃಹಕ್ಕೆ ಹೋಗಿ ಬಾಗಿಲುಗಳನ್ನು ಹಾಕಿಕೊಂಡಳು. ಇತ್ತ ರಾಮನಾಯಕನು ತಾನು ನಿಜವಾಗಿಯೂ ಅನ್ಯಾಯದಿಂದ ನವಾಬನ ಜೀವನನ್ನು ತೆಗೆದುಕೊಂಡೆ-ನೆಂದು ಭಾವಿಸಿ ವ್ಯಥೆಪಡುತ್ತ, ಭಾರವಾದ ಕಾಲುಗಳನ್ನು ಎಳೆಯುತ್ತ ತನ್ನ ಕೋಣೆಗೆ ತೆರಳಿದನು.

ನಸುಕಿನಲ್ಲಿ ನವಾಬರ ತಾಣೆಯಲ್ಲಿ ಕೋಲಾಹಲವೇ ಕೋಲಾ-ಹಲ! ನವಾಬರ ಕೊಲೆಯಾಗಿದೆಯೆಂದು ಕೇಳಿ ಎಲ್ಲರೂ ಅಂಜಿ ದಿಕ್ಕು ದಿಕ್ಕಿಗೆ ಓಡತೊಡಗಿದರು. ಸೂರ್ಯನು ತಾಯಿಯ ಮಡಿಲನ್ನು ಬಿಟ್ಟು ಹೊರಬೀರುವ ಪೂರ್ವದಲ್ಲಿಯೆ, ನವಾಬರ ಪಾಳೆಯವು ಅದಾ-ಗಲೇ ಕಿತ್ತಿ ಹೋಗಿತ್ತು. ತಿಮ್ಮರಸನ ಸೇನಾನಿಗಳು ಅದನ್ನು ಅರ-ಮನೆಯ ಪರಿವಾರಕ್ಕೂ ಹಾಗು ಮಂತ್ರಿಗಳಿಗೂ ತಿಳಿಸಿದರು. ಮಂತ್ರಿ-ಗಳು ಇಂತಹ ಶುಭವಾರ್ತೆಯನ್ನು ಕೇಳಿ ರಾಮನಾಯಕನನ್ನೂ ಹಾಗು ತಿಮ್ಮರಸನನ್ನೂ ಅಭಿನಂದಿಸಲು ಅರಮನೆಗೆ ತೆರಳಿದರು. ರವಿಯು ಏರುತ್ತಿದ್ದರೂ ತಿಮ್ಮರಸನ ಕೋಣೆಯ ಬಾಗಿಲಿಕ್ಕಿತ್ತು. ಆ ಶಯನ-ಗೃಹದ ದ್ವಾರಗಳನ್ನು ದೂಡಿದರೂ ಅದು ತೆಗೆಯಲಿಲ್ಲ ಬಲವಾದ ಸಂಶಯ ಬರಲು, ಮಂತ್ರಿಗಳು ಆದನ್ನು ಜೋರಿನಿಂದ ಒಡೆಸಿ ತೆಗೆಯಿಸಿ ದರು. ಆದರೆ ಅಲ್ಲಿ ಇದ್ದ ತಿಮ್ಮರಸನ ದೇಹವು ರಕ್ತದಲ್ಲಿ ಮುಳುಗಿತ್ತು. ಮೇಲೆ ನೀಲಾಂಬಿಕೆಯ ಶವವು ಜೋಲಾಡುತ್ತಿತ್ತು. ಆದನ್ನು ನೋಡಿ ಮಂತ್ರಿಯ ಪ್ರಜ್ಞೆಯೇ ತಪ್ಪಿತು. ನೀಲಾಂಬಿಕೆಯ ಹಸ್ತಾಕ್ಷರವಿದ್ದ ಚೀಟೆಯೊಂದು ಅಲ್ಲಿ ಇತ್ತು. ಅದರಲ್ಲಿ "ನನ್ನ ಪತಿ ತಿಮ್ಮರಸನನ್ನು ನಾನೇ ಕೊಲೆಮಾಡಿದ್ದೇನೆ. ಹೆಂಡತಿಯನ್ನು ಪರರಿಗೊಪ್ಪಿಸಿ ರಾಜ್ಯದ ಗಾದಿಯನ್ನು ಉಳಿಸಿಕೊಳ್ಳುವ ಪುರುಷರನ್ನು ನೋಡಿ ನನಗೆ ನಾಚಿಕೆ-ಯೆನಿಸಿತು. ಇಂತಹ ಪತಿಯು ಕೂಡ ಸಂಸಾರವನ್ನು ಮಾಡುವುದು ನನಗೆ ಸಾಧ್ಯನಿಲ್ಲ. ಇಂದು ತಿಮ್ಮರಸನು ನನ್ನ ಗೌರವವನ್ನು ಮಾರಿ-ಕೊಂಡರೆ, ನಾಳೆ ಸಮಗ್ರ ಚಂದಗಡದ ಗೌರವವನ್ನೇ ಮಾರಲೂ ಹೇಸ ವವನಲ್ಲ. ಅದಕ್ಕೆ ಇಂತಹ ಸಮಾಜಘಾತಕರು ಇರಬಾರದೆಂದು ಭಯಸಿ, ನಾನು ಈ ಕಾರ್ಯಕ್ಕೆ ಉದ್ಯುಕ್ತಳಾಗಿದ್ದೇನೆ ಅಗ್ನಿಸಾಕ್ಷಿ ನಾನು ಕೈಹಿಡಿದವರನ್ನು ಕಳಕೊಂಡಮೇಲೆ ನಾನೇಕೆ ಇರಬೇಕು? ನವಾಬರನ್ನು ಕೊಂದು ಭಾರತೀಯ ಸ್ತ್ರೀಯರ ಶೀಲ ಗೌರವಗಳನ್ನು ಕಾಪಾಡಿದ ರಾಮನಾಯಕರಿಗೆ ನನ್ನ ಅನಂತ ಧನ್ಯವಾದಗಳು. ಇತಿ ತಮ್ಮ—ನೀಲಾಂಬಿಕೆ."

ಅದನ್ನು ಮಂತ್ರಿಗಳು ಓದಿ ವಾರ್ತೆಯನ್ನು ರಾಮನಾಯಕರಿಗೆ ತಿಳುಹಲು ಹೋದರೆ, ಅಲ್ಲಿ ಮತ್ತೊಂದು ಅನಾಹುತ. ತಮ್ಮನ್ನು ತಾವೇ ನೇಣು ಹಾಕಿಕೊಂಡು ರಾಮನಾಯಕರು ಇಹಲೋಕ-ಯಾತ್ರೆಯನ್ನು ಪೂರಯಿಸಿದ್ದರು. ಅನ್ಯಾಯದಿಂದ, ಅಧರ್ಮದಿಂದ ರಣಾಂಗಣದ ನಿಯಮಗಳನ್ನು ಉಲ್ಲಂಘಿಸಿ ನವಾಬರನ್ನು ಕೊಲೆ ಮಾಡಿದ ಪ್ರಾಯಶ್ಚಿತ್ತಕ್ಕೆ, ತಾವು ತಮ್ಮ ಪ್ರಾಣವನ್ನು ಅರ್ಪಿಸಿರುವು-ದಾಗಿ ಅವರು ಬರೆದಿಟ್ಟಿದ್ದರು. ಅದು ಒಂದೆಷ್ಟು ನಿಜಯೋನ್ಮಾದ-ವಾದರೆ, ಮತ್ತೊಂದೆಡೆ ದುಃಖದ ಪರ್ವತವೇ ನಿಂತಿತ್ತು!!!

ಜನಪದ ಜೀವನ

(ಪುಸ್ತಕಾವಲೋಕನ)*

ಶ್ರೀ. ಕೆ. ಎಸ್. ಶರ್ಮಾ 'ವಾಣೀಮಂದಿರಂ' ಕಾಸರಗೋಡು

●

ಉತ್ತಮ ಸಾಹಿತ್ಯಕೃತಿಗಳ ಭವ್ಯನಿರ್ಮಿತಿಯ ತಳಹದಿಯಲ್ಲಿ, ಉತ್ತಮ ಬರೆಹಗಾರರಿಗೆ ಉತ್ತೇಜನವನ್ನು ಕೊಡುವ, ಜನತೆಯಲ್ಲಿ ಓದುವ ಅಭಿರುಚಿಯನ್ನು ಹುಟ್ಟಿಸುವ, ಹಳ್ಳಿಗಳಲ್ಲಿಯೂ ವಾಚನಾಲಯಾಭಿರುಚಿಯನ್ನು ಬೆಳೆಯಿಸುವ ಮಹದಾಶೆಯನ್ನಿರಿಸಿಕೊಂಡು ರೂಪಿಸಿದವಾದ—ಧಾರವಾಡದ ಕರ್ನಾಟಕ ಸಹಕಾರಿ ಸಾಹಿತ್ಯಸಂಘವು, ತನ್ನ ಮೊದಲನೆಯ ಕೃತಿಯಾಗಿ ಸುಪ್ರಸಿದ್ಧ ಸಾಹಿತ್ಯಿಕರಾದ ಶ್ರೀ. ಬೆಟಗೇರಿ ಕೃಷ್ಣಶರ್ಮರ ಕಥಾಕುಸುಮಮಾಲೆಯನ್ನು ನೀಡಿ, ತನ್ನ ಸಾಗುದಾರಿಯ ಮೊದಲನೆಯ ಹಂತವನ್ನು,–ಸೋಪಾನವನ್ನು–ಭದ್ರವಾಗಿ ನೆಲೆಯೂರಿಸಿಕೊಂಡಿದೆಯೆನ್ನುವುದು ಅಭಿಮಾನದ ಮಾತು. ಪ್ರಸ್ತುತ ವಾತಾವರಣದಲ್ಲಿ ಕಾಣಿಸುತ್ತಿರುವ—ಉತ್ತಮ ಸಾಹಿತ್ಯಿಕರ ಪಾಲಿಗೊದಗಿರುವ ದುರವಸ್ಥೆಯನ್ನು, ಪ್ರಕಾಶನಸಂಸ್ಥೆಗಳ ವ್ಯಾಪಾರೀ ಮನೋಭಾವದ ಸೋಗನ್ನು ಮನಗಂಡು,—ಲೇಖಕರ ವ್ಯವಸ್ಥಿತ ಜೀವನೋನ್ನತಿಯ ಸಾಧನಾಧ್ಯೇಯದೊಡನೆ—ಹಿರಿಯ ಕನ್ನಡಿಗರು ಅಹರ್ನಿಶ ಬಯಸುತ್ತಿರುವ ಮಹೋನ್ನತ ಕೃತಿಯ ಭವ್ಯಭಾವಿಯನ್ನು ಈಡೇರಿಸ ಹೊರಟ ಪ್ರಸ್ತುತ ಸಂಘದ ಉದಾತ್ತಧ್ಯೇಯವನ್ನು ಕೊಂಡಾಡುವುದು ಸಾಹಿತ್ಯಧರ್ಮವೆಂದು ಮಾತ್ರವಲ್ಲ; ಮಾನವಧರ್ಮವೆಂದೂ ಹೇಳಬಹುದು. ಅಂತೂ ಹಲವಾರು ಉತ್ತಮ ಧ್ಯೇಯಗಳನ್ನು ನಾಡಿನ ಮಾನಸಿಕ – ಜೀವನವಿಕಾಸಭಾವದಲ್ಲಿ ಅನುಗೊಳಿಸಿ ಮುಂದಡಿಯಿಟ್ಟ ಸಂಘವು, ಭಾಷೆಯ ಪ್ರಗತಿಯೊಡನೆ ಸಾಹಿತ್ಯ ಸಂಪತ್ತನ್ನು ಮೇಲ್ಮೈಗೇರಿಸಿ ಬೆಳಗುವಂತಾಗಲಿ.

"ಜನಪದಜೀವನ"—ಜೀವನದ ಮಾರ್ಮಿಕ ಚಿತ್ರಗಳನ್ನೊಳಗೊಂಡ ಈ ಸಂಕಲನದಲ್ಲಿ, ನಾಡಿನ ಜೀವನದ ನಾನಾಮುಖಿಗಳನ್ನು ತೋರುವ ಏಳು ಕಥೆಗಳಿವೆ; ಅರ್ಥಾತ್ ಇದು ನಾಡಿಗರ ಜೀವನದ ಒಳಸೋಟವನ್ನು ಬಿಂಬಿಸುವ ಕೈಗನ್ನಡಿಯೆಂದರೆ, ಉತ್ತಮ ಲೇಖಕರ ಮುಂದಿದು ಸ್ತುತಿಯಾಗಲಾರದು; ವಾಸ್ತವಿಕತೆಯ ಪಡಿನುಡಿಯಷ್ಟೆ! ಆ ವಾಸ್ತವಿಕತೆಯ ಸವಿಯನ್ನು ಪರಿಭಾವಿಸುವುದೀಗ ಕರ್ತವ್ಯ.

ಸಣ್ಣಕತೆಗಳೆಂದರೆ, ಅದು ಇಂದು ನಿನ್ನೆಯ ನಿರ್ಮಾಣದ ಮಾತಲ್ಲ. ಬಹು ಹಿಂದಿನಿಂದಲೇ ಬೆಳೆದು ಬರುತ್ತ, ವಿವಿಧ ಮಾರ್ಗಗಳಲ್ಲಿ ನೆಲೆನಿಂತು, ವಿವಿಧಾಭಿರುಚಿಯೊಡನೆ ವಿವಿಧ ರೂಪಗಳನ್ನಳವಡಿಸಿಕೊಂಡು ಬಂದ ಒಂದು ಸಾಹಿತ್ಯಶಾಖೆ. ಈ ಶಾಖೆಯಲ್ಲಿ ನೆಲೆನಿಂತ ಪ್ರಾಚೀನಗತಿಯು ಕೇವಲ ಕಾಲಾವಧಿಯ ಗಣನೆಯಲ್ಲಿ ರೂಪಿತವಾಗಿ ಷಣ್ಣಕತೆಗಳೆಂಬ ಅಭಿಧಾನಕ್ಕೈರವಾದರೆ, ಇಂದದು ಇತಿಹಾಸ–ಮನಶ್ಶಾಸ್ತ್ರ–ಸಮಾಜಶಾಸ್ತ್ರಗಳ ಪರಿಚಯದ ತಳಹದಿಯಲ್ಲಿ ನೆಲೆನಿಂತ ನಿಸರ್ಗಶಕ್ತಿಯ ಆಗು-ಹೋಗುಗಳನ್ನು ಕಣ್ಣಿಟ್ಟು ಕಾಣುವ ಸತ್ಯಪ್ರತಿಬಿಂಬಕ ಜೀವನಧರ್ಮದ ಚಿತ್ರಗಳೆಂಬ ಹೃದಯವನ್ನು, ತನ್ನದೇ ಆದ ಭವ್ಯಮಾರ್ಗದಲ್ಲಿ ನಿರೂಪಿಸುವ ಜ್ಞಾನದೀಪಿಕೆಯಾಗಬೇಕು. ಈ ಧ್ಯೇಯವನ್ನಿರಿಸಿಕೊಂಡೇ—ಇಂದು ಪತ್ರಿಕೆಗಳಲ್ಲೂ, ಪುಸ್ತಕಗಳಲ್ಲೂ ಎಡೆಬಿಡದೆ ಬೆಳಕು ಕಾಣುತ್ತಿರುವ ಕತೆಗಳು ಸಾಗಿವೆಯೇ ಎಂದರೆ—ಅದಕ್ಕುತ್ತರವನ್ನು ಪ್ರಸ್ತುತ ಲೇಖಕರು ಮಾರ್ಮಿಕವಾಗಿ, ಅನುಭವಪೂರ್ಣವಾಗಿ ಹೇಳಿದ್ದಾರೆ. ಲೇಖಕರಲ್ಲಿರುವ ಪ್ರಕಾಶನಾತುರ, ಪ್ರಕಾಶಕರಲ್ಲಿ ನೆಲೆಗೊಂಡ ವ್ಯಾಪಾರೀ ಮನೋಭಾವದ ವಿವೇಚನಾರಹಿತ ವ್ಯವಹಾರ ಇವುಗಳಿಂದ, ಸಣ್ಣಕತೆಗಳ ಜೀವನಾಡಿಯೆ ಶಕ್ತಿಹೀನವಾಗಿದೆ. ಕತೆಗಾರರಲ್ಲಿ ನೆಲಸಿರಬೇಕಾದ "ಲೋಕಜೀವನದೃಷ್ಟಿ, ವ್ಯಕ್ತಿ–ಮತ್ತು–ಸಮಾಜದಲ್ಲಿ ನೆಲಸಿದ ಜೀವನಘಟನೆಗಳನ್ನು ವಿಶ್ಲೇಷಣೆ ಮಾಡಿನೋಡುವ ಹದನಾದ ಬುದ್ಧಿಯ ವೈಭವ" ಇವು ತೀರ ಕಡಿಮೆಯಾಗಿದ್ದು, ಎಂದಿನಿಂದಲೋ ನಡೆದುಬಂದಿರುವ–ಬುದ್ಧಿಯು ಕಾಯಿದೆ, ಕಾನೂನುಗಳಿಂದ ಬಿಡಿಸಲಾಗದ,—ಕೇವಲ ಹೃದಯಪ್ರೇಮಯೋಗದ ಸಾಧನದಿಂದ ಮಾತ್ರ ಬಿಡಿಸಲಾಗುವ ಮಹಾಸಮಸ್ಯೆಗಳನ್ನು ಮೆಲುಕು ಹಾಕುತ್ತ, ಇಂದಿನ ಕತೆಗಳು ಸಾಗಿಬಂದಿವೆ. ಬರೆಯುವವರಲ್ಲಿ ಅಭ್ಯಾಸ, ಅನುಭವ, ಬಹುಶ್ರುತತೆ, ವಿಮರ್ಶಾಧೀನವಿವೇಕ ಇವುಗಳನ್ನು ಬೆಳೆಯಿಸಿಕೊಳ್ಳುವ ಬಯಕೆಯಿಲ್ಲ! ಹಾಗೆಂದಾದರೆ ಕಥಾಸಾಹಿತ್ಯವೆಂತು ಪ್ರಗತಿಮುಖವಾಗಬಲ್ಲುದು? ಅದು ಸಾಧ್ಯವಲ್ಲದ ಮಾತು! ಎಂದಿನವರೆಗೆ ಕತೆಗಳು ಜೀವನಧರ್ಮದ ಮರ್ಮಗಳನ್ನು ಲಕ್ಷಾವಧಿ ಜನರಿಂದ ತುಂಬಿದ ನಾಡಿನ ಜೀವನದ ಹೋರಾಟಗಳನ್ನು,—ತಮ್ಮ ಸಾಹಿತ್ಯದಲ್ಲಿ ಒಡಮೂಡಿಸಲಾರವೋ, ಎಂದಿನವರೆಗೆ ಜೀವನಸೌಂದರ್ಯವನ್ನು ಚಿತ್ರಿಸಿ ಆದರ್ಶಚಿತ್ರಗಳನ್ನು ತೋರದೆ ವಿಕೃತ ಮನೋಭಾವದ ಚಿತ್ರಗಳನ್ನೇ ಬಿಂಬಿಸುವುವೋ —ಅಲ್ಲಿಯವರೆಗೆ ಸಾಗುವ ದಾರಿ ಸುಗಮವಾಗದು. ಜನಜೀವನವೂ ಸುಧಾರಿತವಾಗದು. ಸತ್ಯ ಪ್ರತಿಬಿಂಬಕ ಜೀವನಸೌಂದರ್ಯದ ಸವಿಯಿಲ್ಲದ ಕಥನವದು ನಿರರ್ಥಕವೆಂದೇ ಹೇಳಬೇಕು.

ಉತ್ತಮ ಕತೆಗಾರರಾದ ಪ್ರಸ್ತುತ ಲೇಖಕರು, ತಮ್ಮ ಕಥೆಗಳನ್ನು ತೋರುವ ಮೊದಲು, ಚಿಕ್ಕಕತೆಗಳ ರಚನಾತ್ಮಕ ವಿವೇಚನೆಯ ರೂಪದಲ್ಲೊಂದು ನಿವೇದನೆಯನ್ನೋ, ಮೊದಲನುಡಿಯನ್ನೋ ಇತ್ತು ಮಹೋಪಕಾರವೆಸಗಿದ್ದಾರೆ. ಚಿಕ್ಕಕತೆಗಳು ಸಾಗಿಬಂದ ರೀತಿಯನ್ನೂ, ಪ್ರಾಚೀನ ಕವಿಗಳದಕ್ಕೆ ಮನ್ನಣೆ ಕೊಡದಿರುವ ಕಾರಣವನ್ನೂ ವಿಶದವಾಗಿ ವಿವರಿಸುತ್ತ, ಕನ್ನಡದಲ್ಲಿ ಅನುವಾದ

* ಇದೊಂದು ಕಥಾಸಂಕಲನ. ಲೇಖನ-ಶ್ರೀ. ಬೆಟಗೇರಿ ಕೃಷ್ಣಶರ್ಮ ಇವರು ಪ್ರಕಾಶನ—ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿ. ಧಾರವಾಡ. ಪುಟ ೧೫೪ ಬೆಲೆ ೧-೪-೦

ರೂಪದಲ್ಲಿ ಬೆಳಕುಕಂಡ ಕತೆಗಳ, ನಿರ್ಮಾತೃಗಳ ಪರಿವಿಡಿಯನ್ನಿತ್ತು–ಕತೆಗಾರನಲ್ಲಿರಬೇಕಾದ ಅನುಭವ ಪೂರ್ಣ ಭಾವನಿಲಾಸ ವೈಭವವನ್ನು ವಿಶದವಾಗಿ ನಿರೂಪಿಸಿದ್ದಾರೆ. ಮುಂದೆ ಪ್ರಸ್ತುತ ವಾತಾವರಣದಲ್ಲಿ ಬೆಳಕು ಕಾಣುತ್ತಿರುವ ಕತೆಗಳ—ಸಾಹಸಭಾವವನ್ನು ವಿವರಿಸಿ, ಉದಯೋನ್ಮುಖ ಕತೆಗಾರರ ಜೀವನನಿಷ್ಠೆಗೊಂದು ಪಥದೀಪಿಕೆಯನ್ನು ತೋರಿದ್ದಾರೆಂಬುದಿದು ಶ್ಲಾಘನೀಯವಿದೆ. ಇದೇ ಸಂದರ್ಭದಲ್ಲಿ "ಬೇಸಾಯದ" ದೃಷ್ಟಾಂತವೊಂದನ್ನಿತ್ತು—ಕತೆಗಾರನ ಶ್ರದ್ಧೆಯನ್ನು ಬಯಲಿಗೆಳೆದುದು ಮರೆಯಲಾಗದ ಮಾತು. ಮುಂದೆ ಲೇಖಕರಿತ್ತಿದ ಗಹನವಾದ ವಿಚಾರಗಳನ್ನು ಕಣ್ಣಿಟ್ಟು ಕಾಣಬೇಕಾಗಿದೆ. ಲಲಿತಸಾಹಿತ್ಯದಲ್ಲಿ ಭುಗಿಲೆದ್ದಂತೆ ಚಿಕ್ಕ ಕತೆಗಳ ಭಾಗದಲ್ಲೂ ಉರಿದೇಳುತ್ತಿರುವ ಆದರ್ಶ–ವಾಸ್ತವಗಳ ವಾದವನ್ನು ಮೃದುವಾಗಿ ಕೊನೆಗೊಳಿಸಿ—ಅವುಗಳೊಳಗೆ ಸಮಸ್ಯೆಯ ದೀಪೆಯನ್ನೆಳೆದಾಗ ನಾವು ಬೆರಗಾದಂತೆ, ಲೇಖಕರ ಇತ್ಯರ್ಥದ ಬಗೆಯನ್ನೂ ಮೆಚ್ಚಬೇಕು. ಅದರಂತೆಯೆ ವಿಚಾರಾನುಭಾವವಿಲ್ಲದೆ–"ಸಂಪ್ರದಾಯ–ಪ್ರಗತಿಶೀಲಗಳು" ಮರುಳಾಟವೆಬ್ಬಿಸುವ ಈ ಕುರುಕ್ಷೇತ್ರದಲ್ಲಿ, ಲೇಖಕರು ತಮ್ಮ ಹೃದಯಾನುಭಾವ ಪೂರ್ಣ ಸಮರ್ಥನೆಯಿಂದ ಪ್ರಗತಿಯ ಯಾಥಾರ್ಥ್ಯವನ್ನು ತೋರಿ, ಸ್ನೇಹ ಭಾವದ ಹೊನಲನ್ನು ಹರಿಯಿಸಿದ್ದಾರೆ. ಇಂದಿನ ಈ ವಾದಗಳ ಬಿರುಸಾಟದ ಸಂದಿಗ್ಧ ಪರಿಸ್ಥಿತಿಯಲ್ಲಿ, ಪ್ರತಿಯೊಬ್ಬನೂ ಮರೆಯದೆ ನೆನಪಿಡಬೇಕಾದ ಮುಖ್ಯ ವಿಚಾರವೆಂದರೆ—ಲೇಖಕರಿತ್ತಿದ "ಸಮನ್ವಯ ರಹಸ್ಯದ ಮಧುರಮೇಲನ." ಆ ಬಳಿಕ ಕನ್ನಡ ಜನಜೀವನವನ್ನು ಚಿತ್ರಿಸಬಯಸುವವರಿಗೊಂದು ಒಲುಮೆಯ ಸಂದೇಶವನ್ನೂ, ಸಾಹಿತ್ಯಮಾರ್ಗದಲ್ಲಿ ಕಥಾವಸ್ತುವಿನಂತೆ ಭಾಷಾಗೌರವವನ್ನು ಲೇಖಕನುಳಿಸಿಕೊಳ್ಳಬೇಕಾದ ಎಚ್ಚರಿಕೆಯನ್ನೂ ಲೇಖಕರು ಸಾರಿ, ಜೀವನಸೌಂದರ್ಯಪ್ರತೀಕವಾದ "ಅರಳಿದ ಜೀವ"ದೊಡನೆ ಉಳಿದಾರು ಕತೆಗಳಿಗೂ ಪ್ರವೇಶವನ್ನು ಇತ್ತಿದ್ದಾರೆ.

'ಅರಳಿದ ಜೀವ' ಎಂಬುದು 'ಸುಖದ ಜೀವನವನ್ನುಳಿದು ಸಮಾಧಾನದ ಮರಣವನ್ನು' ಬಯಸುತ್ತಿರುವ ಮೇಲಗಿರಿ ಸೆಟ್ಟರ ಹೃದಯದ್ರವ ಪೂರ್ಣವಾದ ಜೀವನಚಿತ್ರ. ಕಥಾರಂಭವು ಮೇಲಗಿರಿ ಸೆಟ್ಟರು–ದಿಕ್ಕಿಲ್ಲದೆ ಹೋದ ದೂರದ ದಾಯಾದಿಯೊಬ್ಬನ ಮಗನನ್ನು ಮನೆಯಲ್ಲಿ ತಂದಿರಿಸಿಕೊಂಡು, ಬಳಿಕ ಅವನಿಂದಲೇ ನಡೆಯುತ್ತಿರುವ ಸ್ವಾರ್ಥಲಾಲಸೆಯ ಘೋರರೂಪವನ್ನು ಅಸಹಾಯ ಸ್ಥಿತಿಯಲ್ಲಿ ನಿಟ್ಟಿಸುವಲ್ಲಿಂದ ಆರಂಭವಾಗಿ, ಕಥಾಲೇಖಕರೊಡನೆ ಸ್ವಜೀವನ-ಚರಿತ್ರೆಯನ್ನು ಹೇಳಿ ಮುಗಿಸುವಲ್ಲಿಗೆ ಕೊನೆಗಾಣುವುದು. ರೇತನ್ ಕಾಲದ ಬಡ ಜೀವನದ ದುರಂತಚಿತ್ರ, ತನ್ನ ಪರಂಪರೆಯ ಗುಣವನ್ನು ಬಿಡಲಾಗದೆ ಸ್ವಾರ್ಥದ ತೇಕಾಟದಲ್ಲಿ ಮುಳುಗಾಡುವ ಮಲಕಪ್ಪನ (ದಾಯಾದಿ ಮಗ) ಹೃದಯಗತಿ—ಇವೇ ಇಲ್ಲಿ ಕಥಾವತರುಣಿಕೆಗಳಾದರೆ, ಮೇಲಗಿರಿ ಸೆಟ್ಟರ ಉದಾರಜೀವನದ ಉದಾತ್ತ ಚರಿತ್ರೆಯು ಅರಳಿದ ಜೀವಕ್ಕೆ ಪುಟಕೊಡುವುದು. ಅಂತೂ ಜನಪದದಲ್ಲಿ ಬಂದಡಸಿದ ಬಡತನದ ಮುಂದೆ, ಬಡವರ ಹೊಟ್ಟೆ-

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು

The National Pharmacies & Pharmaceuticals Ltd., Dharwar

ಹೊರೆಯಲು ಹಿರಿಯಮಠದ ಅಡಿವಯ್ಯಸ್ವಾಮಿ ಅಳವಡಿಸಿದ ಉದ್ಯಮವೂ, ಈ ಉದ್ಯಮದ ಮುಂದೆಯೆ ಬಡತನದ ಮರ್ಮವರಿಯದೆ ಜೀವನಧರ್ಮದ ಮರ್ಮವನ್ನೇ ಮರೆತು ಸ್ವಜೀವನದೊಡನೆ ಸರ್ವವನ್ನೂ ಕಳೆದುಕೊಂಡ ಮಲಕಪ್ಪನ ತಂದೆ ಬೋರಣ್ಣನ ಚಿತ್ರವೂ ತಲೆಹೊಕ್ಕು ನಿಂತು—ಸಾಮೂಹಿಕವಾಗಿ ನೆಲೆನಿಂತ ಮಲಕಪ್ಪನ ಉದ್ವೃತ್ತಜೀವನದ ಒಳನೋಟವನ್ನು ಮಾರ್ಮಿಕವಾಗಿ ಸಾರಿ ನಿಂತಿದೆ. ಇದರಂತೆಯೆ ಇನ್ನೊಂದು ಚಿತ್ರ "ಹುಳುಹತ್ತಿದ ಹಳ್ಳಿ." ಅರಳಿದ ಜೀವವು ಶ್ರೀಮಂತಜೀವನದ ಘೋರಸ್ವಾರ್ಥವನ್ನು, ಜೀವನೋನ್ನತಿಯ ಸಾಧನೆಯೊಡನೆ ತೆರೆದೆದೆಯನ್ನು ಬಿಂಬಿಸುವಂತಾದರೆ—ಎರಡನೆಯದು ಊರೇ ಗೌರವಿಸುವಂತಿದ್ದ ಬೇಸಾಯಗಾರ ನೀಲಪ್ಪನ ಸುಖಜೀವನದ, ತುಂಬುಜೀವನದ ಸವಿಯನ್ನೆತ್ತಿ, ಕೊನೆಗದೇ ಮನೆತನವನ್ನು ಹಾಳುಗೆಡಹಿದ ಚೆನ್ನಪ್ಪನ ಇತಿಹಾಸವನ್ನು ಸಾರುತ್ತಿದೆ. ಚೆನ್ನಪ್ಪನು ನೀಲಪ್ಪನ ತಂಗಿಯ ಮಗನು. ಚಿಕ್ಕಂದಿನಲ್ಲಿ ಊರನ್ನು ಬಿಟ್ಟು, ತನ್ನ ಇಪ್ಪತ್ತುನಾಲ್ಕನೆಯ ವಯಸ್ಸಿ

ನಲ್ಲಿ ಮನೆಗೆ ಬಂದು, ಸ್ವಸಾಮರ್ಥ್ಯದ ಚಾಕಚಕ್ಯತೆಯಿಂದ ನೀಲಪ್ಪನ ಹೃದಯವೊಡನೆ ಮನೆಯನ್ನಿಡೀ ತನ್ನವನ್ನಾಗಿಸಿಕೊಂಡು, ಕೊನೆಗದನ್ನುರುಳಿಸಿ ಹಾಳುಗೆಡಹುವ ಮಹಾಪಾಪಿ. ಈ ಮಹಾಪಾಪದೊಡನೆ—ನೀಲಪ್ಪನ ಮಗ ನಂದಿಯಣ್ಣನ ಹೆಂಡತಿ (ವಿಧವೆ) ಹೊನ್ನಮ್ಮನ ಜೀವನವನ್ನೇ ಕೊನೆಗಾಣಿಸಿ, ಆ ದುರಂತವನ್ನು ಹಣದಿಂದ ತಪ್ಪಿಸಿ, ನೀಲಪ್ಪನ ಹಿರಿಯ ಮಗ ನಾಗಣ್ಣನ ಜೀವನವನ್ನು ಸುಲಿದು, ಎಂಟೆತ್ತಿನ ಕಮತದ ಮನೆಯನ್ನು ಸ್ಮಶಾನವಾಗಿಸಿದ ಘೋರ ಪಾಪಿಯೆಂದರೆ, ನಾವು ಕಾಣುವ ಹೃದಯವಿದಾರಕ ಚಿತ್ರಣಕ್ಕಿದು ಸಾಕಾಗದ ಹೆಸರು. ಹೀಗೆ ಎರಡು ಮನೆತನದ ಚಿತ್ರವೊಡನೆ, ನಾನಾಮುಖವಾಗಿ ಸಾಗುವ ಜೀವನದ ವಿಶ್ಲೇಷಣೆಯನ್ನೆಸಗಿ ಲೇಖಕರು ಬಹು ಮಾರ್ಮಿಕವಾಗಿ, ತದಾಯತ್ತವಾಗಿ ನೆಲೆನಿಂತ ಜನಪದ ಜೀವನವನ್ನು ತೆರೆದು ತೋರಿದ್ದಾರೆ. ಕತೆಗಾಗಿ ಆಯ್ದುಕೊಂಡ ಘಟನೆಯಲ್ಲಿಯ ಸತ್ಯ-ಸೌಂದರ್ಯವನ್ನು ಅವಿಷ್ಕರಿಸಿ ತೋರಿಸಿ, ಅವುಗಳಲ್ಲಿ ರಸಭಾವಗಳ ಬುಗ್ಗೆಯನ್ನೆಬ್ಬಿಸಿ, ಜೀವನದ ಗುರಿಯನ್ನುಲ್ಲೇಖಿಸಿ-ಒಳಗೆ ಕಂಡ ದರ್ಶನವನ್ನು-ಆ ಆ ಜೀವನಕ್ಕನುಗುಣವಾದ ಭಾಷಾಸಮರ್ಥಾದೆಯಲ್ಲಿ ಸಾರಿರುವುದಿದು ಕಲೆಯ ಹೊಳಹೆಂದರೆ ಮಾತಿದು ಬರಿದಾಗದು ಮೊದಲನೆಯ ಕತೆಯಲ್ಲಿ ಆಕರ್ಷಕವಾದ ಸಂಭಾಷಣೆಯಲ್ಲಿ ಜೀವನದ ತೊಡರುಗಳು, ಜೀವನಾನುಭವಗಳು ಒಳಗೊಂಡಿದ್ದು, ಮುಂದದು ಸ್ವಸಂವೇದನೆಯ ಚರಿತ್ರಕಥನದಲ್ಲಿ ಸಾಗಿ ರಸಾವಹವಾದರೆ — ಎರಡನೆಯದು ಜೀವನದ ಮೊದಲಹಂತದ ಏರನ್ನು ಚಿತ್ರಿಸಿ, ಕೊನೆಗದು ದುರಂತಕ್ಕೆರವಾದ ದಾರುಣಚಿತ್ರವನ್ನು ರೂಪಿಸುತ್ತಿದೆ. ವಿಚಾರಪೂರ್ಣ ಅನುಭವಸಂಪತ್ತು, ಜೀವನಾನುಬಂಧಿ ಘಟನೆ, ಸೌಂದರ್ಯ ಪ್ರತೀಕವಾದ ಜೀವನದ ಒಳನೋಟ—ಇವುಗಳಿಂದೀ ಎರಡು ಕತೆಗಳೂ ಸಣ್ಣಕತೆಗಳ ಮಾದರಿಗೊಂದು ಕುರುಹು!

ಮುಂದಿನದು "ದೆವ್ವದ ಸಂಸಾರ!" ಈ ಕತೆಯಲ್ಲಿ ಕಾಣಿಸುವ ಚಿತ್ರ,—ಸ್ವಪ್ನಲೋಕದಲ್ಲಿ ನಲಿದಾಡುವ ಭೂತಗಳ ಕತೆ. ಆಫೀಸುಕಾರಕೂನನೊಬ್ಬನು, ಉಪಾಧ್ಯಾಯರಿಂದ-ಉಪಾಧ್ಯಾಯಿನಿಯಿಂದ ಬಂದ ವಿವಿಧರೀತಿಯ ಅಪೇಕ್ಷೆಗಳನ್ನು ಪರಾಂಬರಿಸುತ್ತ, ಕೊನೆಗೆ ಭೂತದ ಕಾಟಕ್ಕೆ ಬಲಿಯಾದ ಉಪಾಧ್ಯಾಯನ ಚಿತ್ರವನ್ನೇ ನೆನವರಿಸಿ, ನಿದ್ರೆಯಲ್ಲಿ ಭೂತಲೋಕಕ್ಕೆ ತೆರಳುವುದು. ಘಟಪ್ರಭಾನದಿಯ ನೆರೆಗೆ ಪಾಲಾದ "ಬೆಲ್ಲಬಾಳು" ಹಳ್ಳಿಯ ಭೀಕರಚಿತ್ರವಿದು. ಅಲ್ಲಿರುವ ಕಲ್ಮೇಶ್ವರನ ಗುಡಿಯಲ್ಲಿ ನೆಲೆನಿಂತ ಭೂತಸಂಸಾರದ ಮಾರ್ಮಿಕ ಜೀವನಚಿತ್ರವಿದು. ಏನೇ ಇರಲಿ. ನಾವಿಲ್ಲಿ ಕಾಣುವುದು ಭೂತದ ಅಸ್ತಿತ್ವವನ್ನಲ್ಲ; ಉಪಾಧ್ಯಾಯ ಜೀವನದ ದುರಂತವನ್ನು. ಊರಿನ ಪುಂಡರು ಅಧ್ಯಾಪಕನ ಪತ್ನಿಯನ್ನು ಕೆಡಿಸಿ ಆಕೆಯ ಬಾಳನ್ನು ಮುಗಿಸಿ ಆ ಬಡ ಉಪಾಧ್ಯಾಯನನ್ನು ನೆಲೆಯಿಲ್ಲದಾಗಿಸಿದ ಬಾಳಿನ ಒಳನೋಟವನ್ನು ಕಾಣುತ್ತೇವೆ. ಅಧ್ಯಾಪಕ ಜೀವನದ ಅದೆಷ್ಟೋ ಕಾದಂಬರಿ-ಕತೆಗಳನ್ನು ನಾವು ಕಂಡಿದ್ದೇವೆ; ಬೇಕಾದಷ್ಟು ಕಂಡಿದ್ದೇವೆ. ಆದರೆ ಈ ಕತೆ ಮಾತ್ರ ಹೊಸ ರೂಪದಿಂದ ಬಂದಿದೆ. ಸ್ವಾಪ್ನಿಕ ಭಾವದಲ್ಲಿ—ನೆರಳೇ ದೇಹವಾಗಿರುವಲ್ಲಿ—ಬಡ ಅಧ್ಯಾಪಕನ ಆತ್ಮವೊಂದು ತನ್ನ ಇತಿಹಾಸವನ್ನು ಸಾರಿ—ನಮ್ಮನ್ನು ಸೆರೆಹಿಡಿದಂತೆ, ಮಾನವಜೀವನದ ಸಮಗ್ರ ಇತಿಹಾಸವನ್ನು ತುಲನೆಮಾಡಿ, ಸ್ವಾರ್ಥದಲ್ಲಿ ತೇಲಾಡಿ ಜೀವನವನ್ನೆ ಕಹಿಯಾಗಿಸುವ ಮಾನವನ ಬದುಕುನೆಲೆಗಿಂತ ಮರಣದ ಬಳಿಕಿನ ಪೈಶಾಚಿಕ ಜೀವನವು ಉನ್ನತವಾಗಿದೆಯೆಂಬುದನ್ನು ಸತ್ಯ ಪ್ರತಿಬಿಂಬಕ ಜೀವನನಿರೂಪಣೆಯಿಂದ ಸ್ಫುಟವಾಗಿ ಕಾಣಿಸಿದೆ. ಸಂಭಾಷಣೆಗಳಲ್ಲೇ ತೇಲಾಡುವ ಈ ಕತೆಯ ಕಥನಕಲೆಯು ಪ್ರತಿಪದದಲ್ಲೂ ಜೀವನದ ನೆಲೆಯನ್ನು ವಿಸ್ತರಿಸುತ್ತ ಸಾಗುತ್ತದೆಯೆಂದರೆ, ದೆವ್ವಸಂಸಾರವಾಗಿ ಮಾರ್ಪಟ್ಟ ಆ ಬಡ ಮಾನವ-ಸಂಸಾರದ ಸ್ಥಿತಿಗಾಗಿ ಮರುಗದಿರಲಾರೆವು. ಹೀಗೆ ದೆವ್ವದ ಸಂಸಾರದ ಗತಿ.

ಮುಂದಿನವುಗಳಲ್ಲಿ 'ನೆತ್ತರ ಕೊಡುಗೆ' ಮತ್ತು, 'ನಂದನೂರಿನಜಾತ್ರೆ' ಎಂಬವುಗಳು, ಕನ್ನಡ ನಾಡಿನಚಾರಿತ್ರಿಕಘಟನೆಗಳಿಗೆ ರೂಪುಗೊಟ್ಟ ಮಿನುಗಿದ ಒಂದೆರಡು ವಸ್ತುಗಳು. ಮೊದಲನೆಯದು ನಾಗಪ್ಪಗೌಡರ ಹಿರಿಯ ಮನೆತನವನ್ನೂ ಮಾನವನ್ನೂ ಕಾದು, ಸ್ವಾಮಿಭಕ್ತನಾಗಿ ಪ್ರಾಣವನ್ನರ್ಪಿಸಿದ ಮುತ್ತಣ್ಣನ ನೆತ್ತರ-ಕೊಡುಗೆಯ ವೀರಕಥೆ. ಮುತ್ತಣ್ಣನ ವಂಶಪರಂಪರೆಯಲ್ಲಿ ನೆಲೆಗೊಂಡ ಮನೆಯ ಹೊತ್ತಗೆಯಲ್ಲಿದ್ದ ಜೀವನಚರಿತ್ರೆಯನ್ನು ಹಳ್ಳಿಗೆ ಬಂದ ಲೇಖಕರು ಪರಾಂಬರಿಸಿ "ನೆತ್ತರಕೊಡುಗೆ"ಯೆಂಬ ಅಭಿಧಾನವು ಆ ಸ್ಥಳಕ್ಕೆ ಬರಲಿರುವ ಕಾರಣವನ್ನು ತಿಳಿಯುವ ಬಗೆಯಲ್ಲಿ ಕತೆ ಜೆಲುವಾಗಿ ರೂಪಿತವಾಗಿದೆ. ಆರ್ಥಾತ್ ಎಷ್ಟೆಷ್ಟೋ ವೀರ-ಜೀವನವನ್ನು ಕುಂಬಿನಿಂತ ನೆಲದ ಹಿರಿಮೆಯನ್ನಿದು ತೋರುವಂತೆ, ಕರ್ನಾಟಕದ ಭೂಮಿಯ-ಭೂಗತೇತಿಹಾಸದ ಹೊಳಹನ್ನು ಜನಮನದಲ್ಲಿ ನೆಲೆಯೂರಿಸುತ್ತಿದೆ. ಇಂತಹ ಚಿತ್ರಗಳು—ಮರೆತ ಕತೆಗಳು—ನೆನಪಿಗೆ—ಗಮನಕ್ಕೆ ಬಂದಷ್ಟು ನಮ್ಮ ಜನಪದಜೀವನದ ಆಂತರಿಕ ಜೀವನದ ವ್ಯವಸಾಯವೂ, ಕಟ್ಟುನಿಟ್ಟುಗಳೂ, ಸಂಪ್ರದಾಯವೂ ಅರ್ಥವಾಗುವುವು. ಈ ತಳಹದಿಯಲ್ಲಿಲ್ಲದ ಚಾರಿತ್ರಿಕ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಘಟನೆಗಳಿಂದೇನುಪಯೋಗವಿದೆ? ನಮ್ಮ ಜೀವನದ–ನಮ್ಮ ಜನತೆಯ ಜೀವನದ ನೇರವಾದ ಗುರಿಗೆ–ಈ ಬಗೆಯ ಕತೆಗಳು ಉತ್ತರಿಸುವುದು. "ನಂದನೂರಿನ ಜಾತ್ರೆ"ಯೆಂಬುದು ಗಂಗಾಸಾನಿಯ ನರ್ತನ, ಊರ ಜಾತ್ರೆ ಇವುಗಳ ಹಿರಿಮೆಯಾದರೂ, "ಸಾನಿಯು ಸೋಮಪ್ಪ ದೇಸಾಯರ ವಿಷಯಲಾಲಸೆಯನ್ನೆಚ್ಚರಿಸಿ, ಪ್ರತಿಭಟಿಸಿ–ನೊಂದು ಪುರಿಗೆ ಸಾಗಿದ ಅವರ ಪತ್ನಿ ಗೌರಮ್ಮ ರಾಣಿಯ ಪ್ರೇಮಾದರಭರಿತ ಹೃದಯವನ್ನು ಅವರ ಕೈಗೆ ಒಪ್ಪಿಸಿಕೊಟ್ಟು, ರಾಣಿಯ ಮಂಗಲಸೂತ್ರವನ್ನು ಬೆಳಗುವುದಿದು" ಕತೆಯು ಜೀವನಾಡಿಯಾಗಿ ಹರಿದು ಕತೆಯ ಪೂರ್ಣವಿಕಾಸವನ್ನು ತುಂಬಿನಿಂತಿದೆ. ಹೀಗೆ ಈ ಎರಡು ಚಾರಿತ್ರ್ಯಿಕ ಘಟನೆಗಳು, ಅರ್ಥಗಂಭೀರವಾದ, ಸಂದರ್ಭಾನುಸಕ್ತವಾದ ಸಂಭಾಷಣೆಗಳಿಂದ ಮಿರುಗಿವೆ.

ಇನ್ನೊಂದು "ಬೀದಿಯ ಹಾಡುಗಾರರು," ಮತ್ತೊಂದು "ಮೂರನೆಯ ವರ್ಗದ ಪ್ರಯಾಣ". ಮೊದಲನೆಯದರಲ್ಲಿ ಲೇಖಕರು ಕಲೆಯ ಪ್ರಯೋಜನವಾದವನ್ನು ಮಂಡಿಸಿ, ಅದಕ್ಕೊಂದು ಬೀದಿಯ ಹಾಡುಗಾರರ ಜೀವನದ ದುರಂತವನ್ನು ಉತ್ತರವಾಗಿ ಕೊಟ್ಟರೆ,—ಮತ್ತೊಂದರಲ್ಲಿ ಮೂರನೆಯ ವರ್ಗದಲ್ಲಿ ನೆಲೆಗೊಂಡ ಜೀವನದ ವಸ್ತುಪ್ರದರ್ಶನಾಲಯವನ್ನು ತೆರೆದು ತೋರಿದ್ದಾರೆ. ಈ ಭಾಗದಲ್ಲಿ ರಾಜಕೀಯ–ಸಾಮಾಜಿಕಸಮಸ್ಯೆಗಳನ್ನು ಖಂಡನೆ-ಮಂಡನೆಗಳಿಂದ ಬಗೆಹರಿಸಲು ಯತ್ನಿಸುತ್ತ, ತನ್ನತನವನ್ನರಿಯದೆ ಕುಳಿತಿರುವ ಮಂದಿಯನ್ನು ಲೇಖಕರು ಎತ್ತಿ ತೋರಿದ್ದಾರೆ. ಒಂದರಲ್ಲಿ ಕಲೆಯ ಪ್ರಯೋಜನವಾದದ ಹೊನಲಿದೆ. ಅದಕ್ಕೊಂದುತ್ತರವಾಗಿ ಚಿಕ್ಕ ಘಟನೆಯಿದೆ ಮಾತ್ರ. ಈ ಕತೆ ಜನಪದಜೀವನದ ಚಿತ್ರವೆನ್ನಬಹುದೇ ಎಂದರೆ ಮನಸ್ಸೊಪ್ಪದು; ಇದು ಸೌಂದರ್ಯ–ಇಲ್ಲವೆ ರಸಸಿದ್ಧಿ ಮತ್ತು ಪ್ರಯೋಜನವಾದಗಳ ತೀರ್ಮಾನಮಾತ್ರವಾಗಿದೆ. ಇದೊಂದು ಉತ್ತಮಾದರ್ಶದ ನೆಲೆಯಲ್ಲಿ ಮೇಲ್ಮೈಯನ್ನು ಹೊಂದಿದೆಯೆಂದು ಮಾತ್ರ ಹೇಳಬಹುದಲ್ಲದೆ—ಜನಪದ ಜೀವನದಲ್ಲಿ ಸಮರಸವಾಗಿದೆಯೆಂದೆನ್ನಬರುವಂತಿಲ್ಲವೆಂದು ನನಗೆನಿಸುತ್ತಿದೆ. ಲೇಖಕರ ಧ್ಯೇಯವೇನಿರಬಹುದೋ ಏನೊ! ಎರಡನೆಯದರಲ್ಲಿ ಜನಪದಜೀವನದ ಸಾಮಾನ್ಯರೂಪಣೆ ಬಂದರೂ, ಬಾವಾಜಿಯ ಶುಶ್ರೂಷೆಯತ್ತವಾಗಿ ಬಂದ ಯತ್ನಗಳು, ಕೆಲಸಗಳು, ಮನೋಭಾವಗಳು, ಕುಸು ಅತಿರೇಕಕ್ಕೆ ಕಾಲಿರಿಸಿವೆಯೆನ್ನಬೇಕಾಗಿದೆ. ದೀನದಲಿತರಿಂದ ಕುಂಬಿತೊನೆದಾಡುವ ಈ ವಸ್ತುಪ್ರದರ್ಶನಾಲಯದಲ್ಲಿ, ಈ ಬಗೆಯ ಸೇವಾಭಾವವು ಕೊಡುಗೈಗೆ ಎಷ್ಟು ಎಟಕಬಹುದೋ ಹೇಳಲು ಸಾಧ್ಯವಿಲ್ಲ. ಅಂತೆಯೆ ಉಳಿದ ಕತೆಗಳ ಒಳ-ಹೊರ ನೋಟಗಳಲ್ಲಿ ತೆಲಿಸಿದ ಬಗೆಯ ನೆಳಿತ, ಸಂಪರ್ಕ, ಸೌಂದರ್ಯ ಪ್ರತೀಕ ಇವು ಇದರಲ್ಲಿ ಚೆಲುವಾಗಿ ಒಡಮೂಡಿಲ್ಲವೆಂದು ಕಾಣುತ್ತದೆ. ಅದಕ್ಕೇ ವಸ್ತು ಕಾರಣವಲ್ಲ; ವಸ್ತುಗತ ಘಟನೆಗಳು ಕಾರಣವಾಗಿರಬಹುದು.

ಅಂತೂ "ಅರಳಿದ ಜೀವ, ಹುಳುಹತ್ತಿದ ಹಳ್ಳಿ" ಇವು ಜೀವನಧರ್ಮದ ಪರಮೋತ್ಕರ್ಷವನ್ನು ಸಾರಿದರೆ, 'ದಿವ್ವದ ಸಂಸಾರ ಇದು ಮನೋಜ್ಞವಾದ, ಅವಶ್ಯಂವೇದ್ಯವಾದ, ಮಾರ್ಮಿಕವಾದ ಮಾನವಧರ್ಮವನ್ನು ಶೋಧಿಸಿ ತಲೆಯೆತ್ತಿ ನಿಂತು ಒಂದು ಕ್ರಾಂತಿಯನ್ನೆಸಗಿದೆಯೆಂದರೆ, ಈ ಕತೆ ಜನಪದ ಜೀವನದ ತಿರುಳೆನ್ನಬಹುದು. ಉಳಿದ ಚಾರಿತ್ರಿಕ ಘಟನೆಗಳೂ ಸುಂದರವಾಗಿದ್ದು ಆಕರ್ಷಕವಾಗಿರುವಂತೆ "ನೆತ್ತರ ಕೊಡುಗೆ" ಜನಪದದಲ್ಲಿ ನೆಲೆನಿಂತ ಸ್ಥಳನಾಮಧೇಯದ ಅಳಿದುಳಿದ ವಸ್ತುವನ್ನು ಪ್ರಕಾಶಿಸಿ ತೋರಿದೆ. ಉಳಿದುವೆರಡೂ ಉತ್ತಮ ಕತೆಗಳೆಂದೆನ್ನಬಹುದು.

ಶ್ರೀ. ಬೆಟಗೇರಿಯವರ ಪ್ರಬುದ್ಧವಿದ್ವತ್‌ಸಂಪತ್ತು, ಅನುಭವ ಸಂಪತ್ತು, ಎಲ್ಲಾ ಕತೆಗಳಲ್ಲೂ ಉತ್ತಮ ಸಾಹಿತ್ಯಸಂಪತ್ತನ್ನು ದಾನ ಮಾಡಿದಂತೆ, ಸಹಕಾರೀ ಸಾಹಿತ್ಯಸಂಘದ ಉದ್ದೇಶವನ್ನು ಸಾರ್ಥಕಗೊಳಿಸಿದೆಯೆನ್ನಬಹುದು. ಉತ್ತಮ ಕತೆಗಾರರೆಂದು ಖ್ಯಾತಿಯನ್ನು ಗಳಿಸಿ, ಕನ್ನಡನಾಡಿನ ಮೂಲೆ-ಮೂಲೆಯಲ್ಲೂ "ಅಶಾಂತಿ ಪರ್ವ-ರಾಜಯೋಗಿ"ಗಳ ದುಂದುಭಿಯನ್ನು ಮೊಳಗಿ, ಉತ್ತಮ ಕತೆಗಾರರೆಂದು ವಿಶ್ರುತರಾದ ಶ್ರೀಯುತರು, ತಾವೆತ್ತಿದ ಜೀವನಗಳ, ಜೀವನ ಸಂದರ್ಭಗಳ ಆಗು-ಹೋಗುಗಳ ಚರಿತ್ರೆಯನ್ನು ಮಾರ್ಮಿಕವಾಗಿ ರೂಪಿಸಿ, ಅವೆಲ್ಲವುಗಳ ಜೀವಂತಶಕ್ತಿಯನ್ನು ಸಂಭಾಷಣೆಗಳ ಮಧುರಮೇಲನದಲ್ಲಿ ನೆಲೆಗೊಳಿಸಿದ್ದಾರೆಂಬುದು ಮರೆಯುವ ಮಾತಲ್ಲ. ಆಷ್ಟೊಂದು ಭಾವಪೂರ್ಣವಾಗಿ, ಆಳವಾಗಿ, ಗಂಭೀರವಾಗಿ ಪರಿಶೀಲಿಸಿ ಅನುಗೊಳಿಸಿದ ನಾಲ್ಕೂ ನಿಟ್ಟಿನ ನೋಟಗಳನ್ನು ಸೆಳೆದ ಸಂಭಾಷಣೆಗಳವು! ಒಂದೊಂದೆಡೆಯಿಂದ ಆರಿಸಿದ ಮಾತುಗಳನ್ನೇ ಪೋಣಿಸಿಕೊಂಡರೆ, ಅವೇ ಒಂದು ಭಾವವಿಲಾಸಮಾಲೆಯಾಗುವುದು. ಅಂತೂ ಈ 'ಜನಪದಜೀವನ' ಉದಾತ್ತ ಅನುಭವಸಂಪತ್ತಿನಿಂದ ಪುಟೆದು ನಿಂತು, ಸರ್ವಾತ್ಮನಾ ಸುಂದರವಾದ ರಸಪಾಕವೆಂದರೆ, ಇನ್ನದಕ್ಕೆ ಮತ್ತೊಂದು ಹೆಸರು ಬೇಡ.

ಅಂತೂ ಪ್ರಚಲಿತ ವಾತಾವರಣದಲ್ಲಿ ನೆಲೆಗೊಂಡ ಕತೆಗಳ ಅನಸ್ಯೂತ ಪ್ರವಾಹಗತಿಯನ್ನು ತಡೆಯದೆ, ಅವಕ್ಕೊಂದು ಉಪದೇಶಾತ್ಮಕವಾದ ನೀತಿಯನ್ನಿತ್ತು ಕತೆಗಾರರ ಅಭ್ಯಾಸವನ್ನು ಬೆಳಗಬಯಸಿ, ಅವ್ಯಾಸಂಗಿಕ ವಾದಗಳನ್ನು ತಡೆಹಿಡಿದು ನಿಂತ ಶ್ರೀ. ಬೆಟಗೇರಿಯವರ ಮೊದಲಮಾತುಗಳನ್ನು ಈ ಸಂಕಲನದಲ್ಲಿ ನೋಡುವದಿದು ಅಭ್ಯಾಸೀಲೇಖಕರ ಭಾಗ್ಯವೆನ್ನಬೇಕು. ಧಾರವಾಡದ ಸಹಕಾರಿ ಸಾಹಿತ್ಯಸಂಘದ ಮೊದಲ ಕುಸುಮವಾಗಿ ಅರಳಿದ ಈ ಜೀವನವು, ಎಲ್ಲೆಡೆಯಲ್ಲೂ ಸ್ವಾಶ್ರಿತ ಮಧುರಸವನ್ನು ಚೆಲ್ಲಿ ಪರಿಮಳಿಸಲೆಂದೇ ಆಶೆ.

ಡಾಕ್ಟರ್ ಜಾನಸನ್‌ನ ಪಶ್ಚಾತ್ತಾಪ

(ವ್ಯಕ್ತಿಜೀವನದ ಒಂದು ನೆನಹು)

ಶ್ರೀ. ಬಳ್ಕೂರು ಸುಬ್ರಾಯ ಅಡಿಗ, ಗಂಗೊಳ್ಳಿ

卐

ಭಾವನಾಶಕ್ತಿಯು ವಿಕಾಸಹೊಂದಿದ ಮನುಷ್ಯನಿಗೆ, ಎಳೆಯತನದಲ್ಲಿ ತಿಳಿವಳಿಕೆ ಸಾಲದಾಗ ಘಟಿಸಿದ ತನ್ನ ಒಂದೊಂದು ಅಪರಾಧವೂ, ಬಾಳಿನುದ್ದಕ್ಕೂ ಮುಳ್ಳುಮೊನೆಯಾಗಿ ಚುಚ್ಚುತ್ತಿರುವುದು. ನಿಜವಾಗಿಯೂ ಇದು ಮಾನವತೆಯ ಅರಳಿಕೆಯ ಗುರುತು! ತನ್ನಿಂದಾದ ತಪ್ಪುಗಳಿಗಾಗಿ ಪಶ್ಚಾತ್ತಾಪ ಪಡದವನು ಮಾನವನಲ್ಲ; ದಾನವ!

卐

ಲಿಟ್‌ಫೀಲ್ಡ್ ನಿವಾಸಿಯಾದ ಮೈಕೇಲ್ ಜಾನಸನರು, ಒಂದು ದಿನ ಬೆಳಗ್ಗೆ ತಮ್ಮ ಮಗನೊಡನೆ... 'ಸ್ಯಾಮ್! ನಾನಿಂದು ತುಂಬಾ ಬಲಹೀನನಾಗಿದ್ದೇನೆ. ನೀನು ನನ್ನ ಬದಲು 'ಯೂಟೋಜೀಟರಿ'ಗೆ ಹೋಗು ಮತ್ತು ಅಲ್ಲಿ ಪೇಟೆಯಲ್ಲಿರುವ ಪುಸ್ತಕದಂಗಡಿಯನ್ನು ನೋಡಿಕೊಳ್ಳು' ಎಂದರು.

ಈ ಶಬ್ದಗಳನ್ನು, ಇಂಗ್ಲೆಂಡ್ ದೇಶದ ಲಿಟ್‌ಫೀಲ್ಡ್‌ನಲ್ಲಿರುವ ವೃದ್ಧ ಸಜ್ಜನರೊಬ್ಬರು, ನೂರು ವರ್ಷಗಳ ಹಿಂದೆ ಹೇಳಿದ್ದರು. ಹಿಂದೆ ಅವರು ಬಹು ಪ್ರಸಿದ್ಧ ಪುಸ್ತಕ ಮಾರಾಟಗಾರರಾಗಿದ್ದರು. ಆದರೀಗ ಅವರ ಆರ್ಥಿಕಸ್ಥಿತಿ ಸರಿಯಿದ್ದಿಲ್ಲ. ಆದುದರಿಂದ ಅವರು, ಪ್ರತಿ ವಾರವೂ ಸಂತೆಯ ದಿನ, ಯೂಟೋಜೀಟರಿನ ಒಂದು ಪುಸ್ತಕದಂಗಡಿಯಲ್ಲಿ ಕುಳಿತು ಪುಸ್ತಕ ವ್ಯಾಪಾರ ಮಾಡಬೇಕಾಗುತ್ತಿತ್ತು. ಮೈಕೇಲ್ ಜಾನಸನರ ಈ ಮಾತು ಕೇಳುತ್ತಲೇ, ಸ್ಯಾಮನು ಮುಖ ಉಬ್ಬಿಸಿ ಮನದಲ್ಲೇ ಗೊಣಗತೊಡಗಿದ. ಬಳಿಕ ಅವನೊಮ್ಮೆ ತಂದೆಯ ಮೊಗದತ್ತ ದೃಷ್ಟಿ ಹೊರಳಿಸಿ ಹೇಳಿದ: —'ನಾನು ಅಲ್ಲಿಗೆ ಹೋಗುವುದಿಲ್ಲ; ಖಂಡಿತ ಹೋಗಲಾರೆ!' ಅವನ ಮಾತಿನಲ್ಲಿ ದೃಢತೆಯಿತ್ತು.

ಜಾನಸನ್ ತಮ್ಮ ಮಗನ ಹಟವನ್ನು ಬಾಲ್ಯದಿಂದಲೇ ಬಲ್ಲರು. ಸ್ಯಾಮ್ ಸಣ್ಣವನಿದ್ದಾಗ, ಅವರು ಇಂತಹ ಸಂದರ್ಭಗಳಲ್ಲಿ ಅವನನ್ನು ದಂಡಿಸಿ ತಮ್ಮ ಇಚ್ಛೆಯನ್ನೀಡೇರಿಸಿಕೊಳ್ಳುತ್ತಿದ್ದರು; ಆದರೆ ಈಗ ಆ ಕೋಪಿಷ್ಠ ಹಾಗೂ ಛಲವಾದಿ ಮಗನನ್ನು ಎದುರಿಸಲು ಬೇಕಾದ ಶಕ್ತಿಯಾಗಲಿ ಮನಸ್ಸಾಗಲಿ ಅವರಲ್ಲಿರಲಿಲ್ಲ. ಆದುದರಿಂದ ಅವರು ಆ ಮಾತನ್ನು ಅಲ್ಲಿಗೇ ಮುಗಿಸಿ, ಸ್ವತಃ ಯೂಟೋಜೀಟರಿಗೆ ಹೋಗುವ ಸಿದ್ಧತೆಗಾರಂಭಿಸಿದರು.

ತನ್ನ ಟೊಪ್ಪಿಗೆ ಹಾಗೂ ಬೆತ್ತವನ್ನು ತೆಗೆದುಕೊಳ್ಳುತ್ತ ಅವರು ಸ್ಯಾಮನೊಡನೆ— 'ಆಗಲಿ, ಅಹಂಕಾರ ಹಾಗೂ ಮೂರ್ಖತನದಿಂದಾಗಿ ನೀನು, ಕಾಹಿಲೆಗೊಳಗಾದ ತಂದೆಯನ್ನು ಇಡೀ ದಿನ ಆ ಗದ್ದಲದ ವಾತಾವರಣದಲ್ಲಿ ಇರಗೊಡಿಸಲು ಮನಸ್ಸು ಮಾಡುವಾಗ ನಾನೇನೇನ್ನಲಿ? ಆದರೆ ಸ್ಯಾಮ್! ನಾನು ಮರಣಹೊಂದಿದ ಮೇಲೆ, ನೀನು ಇದರ ಕುರಿತು ವಿಚಾರ ಮಾಡುವೆ'— ಎಂದರು.

ನವಯುವಕ ಸ್ಯಾಮನು ತನ್ನ ಮುದಿತಂದೆಯೊಡನೆ ನಿರ್ದಯವಾಗಿ ವರ್ತಿಸಿದ ಈ ಘಟನೆ ಜರುಗಿ ಸುಮಾರು ೫೦ ವರ್ಷಗಳ ತರುವಾಯದ ಮಾತು. ಅಂದು ಯೂಟೋಜೀಟರ್ ಊರಿನಲ್ಲಿ ವಾರದ ಸಂತೆಯು ಜರುಗುವ ದಿನ. ಜಳಿಯು ಇಗರ್ಜಿಯ ಗೋಪುರದ ಮೇಲೊಂದು ಗಡಿಯಾರವಿತ್ತು. ಮಧ್ಯಾಹ್ನ ಆದರ ಎರಡೂ ಮುಳ್ಳುಗಳು ಹನ್ನೆರಡನ್ನು ಸೂಚಿಸುತ್ತಿದ್ದುವು. ಇಂತಹ ಮಧ್ಯಾಹ್ನದ ಸುಡುಬಿಸಿಲಿನಲ್ಲಿ, ಸಂತೆಯ ನಡುವೆ, ಮುದುಕರೊಬ್ಬರು ತೋರಿಬರುತ್ತಿದ್ದರು. ಅವರು ಕಿಕ್ಕಿರಿದ ಜನಸಮೂಹವನ್ನು ಸೀಳಿ ತಮ್ಮ ದಾರಿಯನ್ನು ಮಾಡಿಕೊಳ್ಳುತ್ತಿದ್ದರು. ಯಾರಾದರೂ ತಮ್ಮ ದಾರಿಗೆ ಅಡ್ಡವಾದರೆ ಅವರು ಕೂಗಿ—'ದಾರಿ ಬಿಡಿ; ನೀವು ಸುಮ್ಮನೆ ತೊಂದರೆ ಕೊಡುತ್ತಿದ್ದೀರಲ್ಲ!'— ಎನ್ನುತ್ತಿದ್ದರು.

'ಎಂತಹ ವಿಚಿತ್ರ ವೃದ್ಧನಿವನು!' ಎಂದು ಜನರು ಗುಣುಗುಟ್ಟುತ್ತಿದ್ದರು. ಅವರ ಮಾತಿಗೆ ನಗಬೇಕೋ ಅಳಬೇಕೋ ಎಂದೇ ಜನರಿಗೆ ತಿಳಿಯುತ್ತಿದ್ದಿಲ್ಲ.

ಆದರೆ ಅವರ ಗಂಭೀರ ಮುಖಾಕೃತಿಯನ್ನು ನೋಡಿದ ಮೇಲೆ ಯಾರಿಗೂ ಅವರನ್ನು ಅಪಮಾನಿಸುವ ಸಾಹಸವಾಗುತ್ತಿರಲಿಲ್ಲ. ಅವರ ಮುಖ ಸಿಡುಬಿನ ಕಲೆಗಳಿಂದ ವಿಕಾರಗೊಂಡಿದ್ದರೂ, ಕಣ್ಣುಗಳು ಮಸಕುಮಸಕಾಗಿದ್ದರೂ, ಅವರ ದೃಷ್ಟಿಯಲ್ಲಿ ಅಧಿಕಾರ ಹಾಗೂ ಬುದ್ಧಿವಂತಿಕೆಗಳು ಎದ್ದು ಕಾಣುತ್ತಿದ್ದುವು. ಹೀಗಾಗಿ ಅವರನ್ನು ಕಂಡಾಗ, ಎಲ್ಲರಲ್ಲಿಯೂ ಶ್ರದ್ಧಾ-ಭಯಗಳು ಉಂಟಾಗುತ್ತಿದ್ದುವು. ಆದ್ದರಿಂದ ಅವರಿಲ್ಲ ಆಚೇಚೆ ಸರಿದು ಅವರಿಗೆ ದಾರಿ ಬಿಡುತ್ತಿದ್ದರು; ಮತ್ತು ವೃದ್ಧರು ಸಂತೆಯ ಮಧ್ಯದಿಂದ ನಡೆದು, ಬಳ್ಳಿಯಿಂದಾವರಿಸಿದ

ಇಗರ್ಜಿಯ ಬಳ ನಿಂತುಕೊಂಡರು. ಅಲ್ಲಿ ಅವರು ತಲುಪಿದೊಡನೆಯೇ ಗಡಿಯಾರ ಹನ್ನೆರಡು ಬಾರಿಸಿತು.

ಈ ವೃದ್ಧ ಮಹಾಶಯರು ನಿಂತ ಸ್ಥಳದಲ್ಲೇ ಮೊದಲು ಮೈಕೇಲ್ ಜಾನಸನರು ಪುಸ್ತಕದಂಗಡಿಯನ್ನಿಟ್ಟುಕೊಂಡಿದ್ದರೆಂದು ಕೆಲಜನರ ಹೇಳಿಕೆ.

'ಹೌದು; ಇದೇ ಆ ಸ್ಥಳ'—ವೃದ್ಧರು ಮೆಲ್ಲನೆ ತಮ್ಮಷ್ಟಕ್ಕೆ ಹೇಳಿದರು. ಅವರು ಅಲ್ಲಿಯೆ ನಿಂತು ತಮ್ಮ ಟೊಪ್ಪಿಗೆಯನ್ನು ತಲೆಯಿಂದ ತೆಗೆದುಬಿಟ್ಟರು. ಸೂರ್ಯಕಿರಣಗಳು ಒಂದೇಸವನೆ ಅವರ ತಲೆಯನ್ನು ಸುಡುತ್ತಿದ್ದುವು. ಆದರವರಿಗೆ ಆ ಕಷ್ಟದತ್ತ ಲಕ್ಷ್ಯವೇ ಇರಲಿಲ್ಲ. ಆಗಲೇ ಕಾರ್ಮೋಡವೊಂದು ಆಕಾಶದಲ್ಲಿ ಸುಳಿದು ಮಳೆ ಸುರಿಯತೊಡಗಿತು ಆದರವರು ಮಳೆಯಕಡೆಗೂ ಲಕ್ಷ್ಯಕೊಡಲಿಲ್ಲ. ಜನರು ಆ ರಹಸ್ಯಮಯ ವೃದ್ಧರನ್ನು ಭಯ-ವಿಸ್ಮಯಗಳಿಂದ ನೋಡತೊಡಗಿದರು. 'ಇವರಾರು? ಎಲ್ಲಿಂದ ಬಂದಿದ್ದಾರೆ? ಈ ರೀತಿ ಬರಿತಲೆಯಿಂದ ಅದೇಕೆ ಸಂತೆಯ ನಡುವೆ ನಿಂತಿದ್ದಾರೆ?' ವಿದ್ಯಾರ್ಥಿಗಳೂ ಕಣ್ಣರಳಿಸಿ ಈ ಅದ್ಭುತಾಕಾರದ ವ್ಯಕ್ತಿಯನ್ನು ನೋಡಲು ಬರತೊಡಗಿದರು.

ಆ ಊರಿನಲ್ಲೊಬ್ಬ ಕುರುಬನಿದ್ದ. ಅವನು ಕೆಲಸಮಯದ ಹಿಂದೆ ಲಂಡನ್ನಿನ ಸ್ಮಿತ್‌ಫೀಲ್ಡ್ ಪೇಟೆಯ ವರೆಗೆ ಹೋಗಿಬಂದಿದ್ದ. ಜನಸಮೂಹದೊಳಗೆ ನುಗ್ಗಿ ಆ ಅದ್ಭುತ ಮನುಷ್ಯನನ್ನು ಕಂಡಾಗ, ಅವನು ತನ್ನ ಗೆಳೆಯನೊಬ್ಬನೊಡನೆ ಪಿಸುಮಾತಿನಲ್ಲಿ..... 'ಗೆಳೆಯ! ಇವನಾರೆಂದು ಗೊತ್ತಿದೆಯೆ?' ಎಂದ, 'ಇಲ್ಲ; ಆದರೆ ತಿಳಿಯಬೇಕೆಂಬ ಕುತೂಹಲವಿದೆ; ಏಕೆಂದರೆ ಇವನಷ್ಟು ಆಶ್ಚರ್ಯಕರ ಮನುಷ್ಯನನ್ನು ಇದುವರೆಗೂ ಕಂಡಿಲ್ಲ. ಇವನ ಕಡೆಗೆ ದೃಷ್ಟಿ ಬೀರಿದಾಗೆಲ್ಲ ನನಗೆ ಅದೇಕೋ ನನ್ನ ಲಘೆತನದ ಅರಿವಾಗುತ್ತದೆ. ಹೇಗಿದ್ದರೂ ಇವನು ಸಾಮಾನ್ಯ ಮನುಷ್ಯರಿಗಿಂತ ಶ್ರೇಷ್ಠನೆಂಬುದು ನಿಶ್ಚಯ'—ಗೆಳೆಯನೆಂದ.

'ನಿಮ್ಮ ಊಹೆ ನಿಜವಾದುದೇ. ಏಕೆಂದರೆ ಇವರು ಇಡೀ ಇಂಗ್ಲಂಡಿನಲ್ಲೇ ಮಹಾ ವಿದ್ವಾಂಸರೆಂದು ಕೀರ್ತಿಗಳಿಸಿದ ಡಾಕ್ಟರ್ ಸೆಮ್ಯೂಲ್ ಜಾನ್‌ಸನರು. ಎಷ್ಟೆಷ್ಟೋ ಪ್ರಸಿದ್ಧಪುರುಷರೆಲ್ಲ ಇವರೊಡನೆ ತಿರುಗಾಡುತ್ತಾರೆ.'

ಕುರುಬನ ಮಾತುಗಳಲ್ಲಿ, ಈ ಕತೆಯ ಆರಂಭದಲ್ಲಿ ನಿರ್ದಯ ಬಾಲಕನ ರೂಪದಲ್ಲಿದ್ದ ಸ್ಯಾಮನೇ ಮುಂದೆ ಪ್ರಸಿದ್ಧ ಡಾಕ್ಟರ್ ಸೆಮ್ಯೂಲ್ ಜಾನ್‌ಸನ್ ಆಗಿಬಿಟ್ಟಿದ್ದ. ಇಂಗ್ಲೆಂಡಿನ ಅತ್ಯಂತ ಶ್ರೇಷ್ಠ ಹಾಗೂ ಬುದ್ಧಿವಂತ ಲೇಖಕರೆಂದು ಅವರು ಪ್ರಪಂಚದಲ್ಲೇ ಪ್ರಸಿದ್ಧರಾಗಿದ್ದರು. ಅವರು ತಮ್ಮ ತಾಯ್ನುಡಿಗೆ ನಿಜವಾದ ಸ್ವರೂಪವನ್ನೂ ಪಾರ್ಶ್ವವನ್ನೂ ಕೊಟ್ಟಿದ್ದಾರೆ. ಸಾವಿರಾರು ಜನರು ಅವರ ಕಾದಂಬರಿಗಳನ್ನೋದಿದ್ದಾರೆ. ಸಭ್ಯಸಮಾಜದಲ್ಲಿ ಅವರಿಗೊಂದು ಗಣ್ಯಸ್ಥಾನವಿತ್ತು. ಸಿರಿವಂತರಿಗೂ ಅವರ ಗೆಳೆತನವು ಗೌರವಾಸ್ಪದವಾಗಿತ್ತು. ಹೆಚ್ಚೇಕೆ? ಗ್ರೇಟ್ ಬ್ರಿಟನ್ನಿನ ರಾಜನೂ ಅವರ ಪರಿಚಯಲಾಭವನ್ನು ಪಡೆಯ ಬಯಸಿ—'ನನ್ನ ರಾಜ್ಯದಲ್ಲಿ ಇಂತಹ ಮನುಷ್ಯನಿರುವುದು ಅದೆಷ್ಟು ಗೌರವದ ವಿಚಾರ' ಎಂದು ಸ್ವತಃ ಉದ್ಗರಿಸಿದ್ದಾನೆ.

ಆದರೆ ಈ ಎಲ್ಲ ಪ್ರಸಿದ್ಧಿಯು ಅವರ ಜೀವನವನ್ನೇ ಕೊರೆಯುತ್ತಿದ್ದ ಆ ದುಃಖದ ಸ್ಮೃತಿಯನ್ನು ಮರೆಯಿಸದಾಯಿತು. ಎಂದೂ ಅವರು, ತಂದೆಯ ಸಂತಪ್ತ ಆಕೃತಿಯನ್ನು ಮರೆಯದಾದರು. ತಂದೆ ಸತ್ತು ಎಷ್ಟೋ ವರ್ಷಗಳುರುಳಿದರೂ, ಅವರ ಹೃದಯವನ್ನು ಆಳವಾಗಿ ನೋಯಿಸಿದ ತಮ್ಮ ಅಪರಾಧವನ್ನೆಂದೂ ಕ್ಷಮಿಸಿಕೊಳ್ಳದಾದರು. ತದಕ್ಕೆಂತಲೇ ಅವರೀಗ ಯೂಟೋಜೀಟರಿನ ಸಂತೆಯಲ್ಲಿ, ತಮ್ಮ ತಂದೆಯ ಅಂಗಡಿಯಿದ್ದ ಸ್ಥಳದಲ್ಲೇ ನಿಂತು, ತಮ್ಮ ಅಪಕೃತ್ಯಕ್ಕೆ ತಕ್ಕ ಪಶ್ಚಾತ್ತಾಪಪಡುವುದಕ್ಕಾಗಿ ಬಂದಿದ್ದರು. ಬಾಲಕ ಜಾನಸನನು ಮಾಡಲು ಒಪ್ಪದಿರುವ ಮಾತನ್ನೇ ಈಗ ಪ್ರಖ್ಯಾತಿಪಡೆದ ಜಾನಸನರು ತಮ್ಮ ವೃದ್ಧಾವಸ್ಥೆಯಲ್ಲಿ ನೆರವೇರಿಸುತ್ತಿದ್ದರು. ಈ ರೀತಿ ವಿಶೇಷ ಪಶ್ಚಾತ್ತಾಪ ಹಾಗು ನಮ್ರತೆಯಿಂದಾಗಿ, ತಮ್ಮ ಹೃದಯಕ್ಕೆ ಶಾಂತಿ ದೊರಕಲೆಂದೂ ದೇವರು ತಮ್ಮ ಅಪರಾಧವನ್ನು ಕ್ಷಮಿಸಲೆಂದೂ ಅವರು ಹಾರ್ದಿಕವಾಗಿ ಆಶಿಸುತ್ತಿದ್ದಾರೆ.

(ನೆಥೇನಿಯಲ್ ಹೋಥರ್ನರು ಬರೆದ ಇಂಗ್ಲೀಷ ಲೇಖನದ ಸಾರ)

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಹೆಣ್ಣಿನ ಜೀವನದ ಸುಂದರಚಿತ್ರಣದ ಎರಡು ಕಾದಂಬರಿಗಳು

(೧) ವಿಧಿತಂದ ವಧು .... ೧—೮—೦

(೨) ಕುಲವಿಲ್ಲದ ಹೆಣ್ಣು .... ೧—೮—೦

ಹೆಣ್ಣಿನ ಬಾಳನ್ನು ಚಿತ್ರಿಸುವ ಸುಂದರ ಕತೆಗಳು

ಶ್ರೀಮತಿ ಶಾಂತಾದೇವಿ ಮಾಳವಾಡ

(೩) ಕುಂಕುಮಬಲ .... ೧—೦—೦

(ಪ್ರಿ. ವಿ. ಕೃ. ಗೋಕಾಕರ ಮುನ್ನುಡಿ ಸಹಿತ)

ಪ್ರಸಿದ್ಧ ಲಾವಣಿಕಾರರಾದ ಕವಿ

ಶ್ರೀಧರ ಖಾನೋಳಕರ

(೪) ಹೂಗಂಪು (ಲಾವಣಿಗಳು) .... ೦—೧೨—೦

ಈ ಮೇಲಿನ ನಾಲ್ಕು ಪುಸ್ತಕಗಳು ತರಿಸಿದವರಿಗೆ ಅಂಚೆವೆಚ್ಚ ಉಚಿತ

ಗವಳೀಗಲ್ಲಿ ವ್ಯವಸ್ಥಾಪಕರು

ಹುಬ್ಬಳ್ಳಿ **ಆನಂದ ಗ್ರಂಥಮಾಲಾ, ಹುಬ್ಬಳ್ಳಿ**

ಕಣಗಿಲ ಹೂವು

ಶ್ರೀ. ಶ್ರೀಕಾಂತ ಶಮನೇವಾಡಿ

ಇಂತೇಕೆ ನಿಂತಿರುವೆ ಚಿಂತೆಗಳ ಕಂತೆಯನೆ
ಶಿರದಲ್ಲಿ ಹೊತ್ತಿಂತು ಶೋಕಾಕುಲೆ,
ಚಿರಶಿಲ್ಪಸುರಲಲನೆ ಮಾಯವಾಯಿತು ಚಲನೆ?
ದೂರವಾಗಲು ಕೊರಳ ಕುಸುಮಮಾಲೆ. ೧

ಬತ್ತಿಹೋಗಿದೆ ನಗೆಯು ಬಿರಿದುಹೋಗಿದೆ ಬಗೆಯು
ಹರಿದ ಮುಗಿಲನು ಹೊಲಿವ ಬಗೆಯೇನು ಹೇಳು?
ನಿನ್ನೆದೆಯ ಕನಸುಗಳ ಕನ್ನಡಿಯೆ ತಾನೊಡೆದು
ಪುಡಿಯಾಗಿ ಹುಡಿಗೊಂಡ ಈ ಬಾಳುಹಾಳು! ೨

ನೀ ಕಂಡ ಕಲ್ಪನೆಯ ಕುಸುರೆಲ್ಲ ನಿನ್ನೆದೆಯ
ನಿಟ್ಟುಸಿರಿನಲಿ ಸುಟ್ಟು ಕರಿಕಾಯಿತೆ?
ನೀ ಮಿಂದ ಆನಂದಸಾಗರವೆ ಸಂತಾಪ-
ದಾಗರವು ತಾನಾಗಿ ನರಕವಾಯ್ತೆ? ೩

ಜೀವನದ ಸಾಗರದ ಹಗಲಿರುಳಿನಲೆಗಳಲಿ
ಹೊಯ್ದಾಡುತಿದೆ ಚೆಲುವಿನೀ ದೇಹದೋಣಿ;
ದಿಕ್ಕುತಪ್ಪಿದ ದೋಣಿ ಚುಕ್ಕಾಣಿಗಾರಿಲ್ಲ
ಮೇಣ್ ಹುಟ್ಟುಹಾಕಲ್ಕೆ, ಬರಿ ಅರ್ತವಾಣಿ! ೪

ಕಲ್ಲೆಲಿನ ಕಡಲಿನಲಿ ಕಾಣುವುದೊ ದೂರಾಚೆ
ತೀರದಲ್ಲಿವೆ ಒಂದು ಆ ದೀಪಗಂಬ,
ಅದನಂಬಿ ಅದರೆಡೆಗೆ ಮುಂಬಂದು ತಂಗಿಹರು
ನೊಂದವರಿಗಿಂಬಿಹುದು ಮೇಣಲ್ಲಿ ತುಂಬ. ೫

" ಕೆಂಪುಕಣಗಿಲ "ದಲ್ಲಿ ಕೆಂಪುಂಟು ಕಂಪಿಲ್ಲ
ತಂಪಿಲ್ಲ ಮೂಲದಲ್ಲಿದೆ ಮೃತ್ಯುಶೂಲ—
ಎನಿತೆನಿತೊ ಚಿಟ್ಟೆಗಳು ಹಾರಾಡಿ ಬಾಳಬಟ್ಟಿ
ಬಿಟ್ಟೋಡಿ ತೊಳಲಾಡುತಿವೆ ದಿಕ್ಕುಪಾಲ. ೬

ನಿನ್ನಿರವಿನಂತಸ್ತ ನೀನಳಿದು ನೋಡಿದೊಡೆ
ಬಿಟ್ಟೋಡಬಹುದಲ್ಲ ಒಣಭ್ರಾಂತಿಯು!
ನೀಕಂಡ ಕನಸುಗಳೆ ನನಸಾಗಿ ಮೈಗೊಂಡು
ಮೊಗದೋರಬಹುದಲ್ಲ ವಿಶ್ರಾಂತಿಯು! ೭

ಗರಿಯೊಡೆದ ಹಕ್ಕಿಯೊಲು ಗುರಿಯಿರದೆ ಹಾರಾಡ-
ದಿರು ಮನಕೆ ಬಂದಂತೆ ನೆನಪಿಟ್ಟುಕೊ;
ಸಿರಿಯಿರಲಿ ಇರದಿರಲಿ ಗುಣರೂಪಸಂಪನ್ನ-
ನವಯುವಳನನ್ನಾಯ್ದು ನೀನೊಪ್ಪಿಕೊ! ೮

ಎನ್ನೆದೆಯ ಗುಹೆಯಲ್ಲಿ....!

ಶ್ರೀ. ಶಂ. ಗು. ಬಿರಾದಾರ, ಬಬಲೇಶ್ವರ

●

ಎನ್ನೆದೆಯ ಗುಹೆಯಲ್ಲಿ ಕವಿದ ಕತ್ತಲೆಯಲ್ಲಿ
ಕಿರುಹಣತೆ ಕಣ್ದೆರೆದು ನೋಡುತಿಹುದು,
ನೀರವತೆಯನೆ ಹೊದ್ದು ' ಹಾ ' ಎಂದು ಮಲಗಿದಾ
ನುಲಿತ ತಿಮಿರವು ಅದಕೆ ಕಾಣುತಿಹುದು.

ನೈರಾಶ್ಯನೀಡದಲಿ ಕುಳಿತ ಗೂಗೆಯು ತಾನು
ಮರಿಗೆ ಜೋಗುಳ ಹಾಡ ಕಲಿಸುತಿಹುದು,
ಅನುತಾಪ ಬಲದಿಂದ ಹೊರಬಂದ ಘಟಸರ್ಪ
ಉದರಪೋಷಣೆಗಾಗಿ ಚಲಿಸುತಿಹುದು.

ಬಯಕೆವೃಕ್ಷಕೆ ನೇತ ಅನಿತಬಾವಿಲಿಬಳಗ
ಕಣ್ಮೈಸಿದು ಪಣ್ಗಾಯ ನೋಡುತಿಹುದು,
ಅಜ್ಞಾನ ತಿಮಿರದೊಳು ಕಣ್ಣು ಕಪ್ಪಡಿ ಸಂಘ
ಕಣ್ಣುಮುಚ್ಚಾಲೆಯನ್ನಾಡುತಿಹುದು.

ವಿಷಯವಾಸನೆ ಹುಳುಗಳೆಲ್ಲ ಸೊಡರನ್ನಡರಿ
ಹರಿದು ತಿನ್ನುವ ಛಲದಿ ಹಾರಾಡುತಿಹವು;
ಮೂಲೆ-ಮೂಲೆಗಳಲ್ಲಿ ' ಝೀಂ ' ಗುಡುವ ಕ್ರಿಮಿಕೀಟ
ನೀರವತೆಯೊಡನೆ ತಾ ಹೋರಾಡುತಿಹವು.

ಬೆಳಕಿನೆಡೆಗೈತರುವ ಬದುಕಿನಾದರ್ಶವದು
ಕಂಗೆಟ್ಟು ಬಿದ್ದಿಹುದು ದಾರಿಯಲ್ಲಿ—
ಹಲಗಾಲದಿಂದಲೂ ಹಾತೊರೆವ ಸುಖ-ಶಾಂತಿ
ದನಿಯಿರದೆ ನರಳುತಿವೆ ಗೋರಿಯಲ್ಲಿ.

ತಿಮಿರವೋಡಿಪ ಶಕ್ತಿ ಕಿರುಹಣತೆಗಿನಿತಿಲ್ಲ
ಬತ್ತಿ ಮೊಟಕಾಗಿಹುದು ಮೇಲೆತ್ತುವವರಿಲ್ಲ;
ಹತ್ತಿರವೆ ತೈಲವಿದೆ ಎತ್ತಿ ಹೊಯ್ಯುವರಿಲ್ಲ
ಬದುಕುವಾಸೆಯು ಇಲ್ಲ ಸಾವು ನಿಶ್ಚಿತವಿಲ್ಲ.

ಬಾ ರವಿಯೆ ಜಗದೆರೆಯ ಬಾರಿನ್ನ ಬಾಗಿಲಿಗೆ
ಬಾಬೇಗ ಎನ್ನೆದೆಗೆ ವಿಶ್ವಶಕ್ತಿ—
ನಿನಗಾಗಿ ಕಾದಿಹೆನು ಈ ಜೀವ ತೇದಿಹೆನು
ನೀ ಕರುಣಿಸೆನ್ನೆದೆಗೆ ನೈಜನುಕ್ತಿ!

ಹೃದಯ ವೇದನೆ

(ಸಣ್ಣಕತೆ)

ಶೀ. ಚಿತ್ರಿಗೆ ರಾಮನ್, ಗೋಕರ್ಣ

ಅಜ್ಞಾನದ ಮೂಲಕ ಘಟಿಸಿದ ಸಣ್ಣ ಸಣ್ಣ ಘಟನೆಗಳೂ ಒಮ್ಮೊಮ್ಮೆ ಮಾನವನ ಬಾಳನ್ನೇ ಹಾಳುಮಾಡಿಬಿಡುವುವು. ಪಾಪ, ಕುಸುಮಾನ ಹಸ್ರು ಕಣ್ಮರೆಯಾಗದೆ ಹೋಗಿದ್ದರೆ, ಅವಳು ಶ್ರೀಕಾಂತನೊಂದಿಗೆ ಸುಖಜೀವಿನಿಯಾಗಿರಬಹುದಾಗಿತ್ತಲ್ಲವೆ?

ಮೂರುಸಂಜೆಯಾಗಿತ್ತು.

"ಕುಸುಮಾ!" ನನ್ನ ರೂಮಿನ ಬಾಗಿಲನ್ನು ತಟ್ಟಿದರು.

"ಬನ್ನಿರಿ ಮಾಸ್ಟರ್!"

ನಾನೂ ಶ್ರೀಕಾಂತ ಮಾಸ್ಟರರೂ ಒಂದೇ ಹೈಸ್ಕೂಲಿನಲ್ಲಿ ಕೆಲಸ ಮಾಡುತ್ತಿದ್ದೆವು. ಮೂರು ವರ್ಷಗಳಿಂದಲೂ ನಾವು ಸಹೋದ್ಯೋಗಿಗಳಾಗಿದ್ದರೂ ಅವರಿಗೆ ನನ್ನ ವಿಷಯವಾಗಿ ಯಾವ ಭಾವನೆಯಿದ್ದಿತೆಂಬುದನ್ನು ನಾನು ಹೇಳಲಾರೆ; ಆದರೆ ನಾನು ಮಾತ್ರ ಮನಃಪೂರ್ವಕವಾಗಿ ಅವರನ್ನು ಪ್ರೀತಿಸಿದ್ದೆ.

'ಕುಸುಮಾ' ಎಂದು ಇತರರು ಕರೆದರೆ, ಒಂದು ವೇಳೆ ಅವರನ್ನು ನಾನು ಗುರುತಿಸದಿರಬಹುದು; ಶ್ರೀಕಾಂತರು ಕರೆದರೆ ಮಾತ್ರ, ಖಂಡಿತ ಇದು ಇಂಥವರದೇ ಧ್ವನಿ ಎನ್ನುವಷ್ಟು ಅದು ಕರ್ಣಪರಿಚಿತವಾಗಿತ್ತು.

ಅವರ ತುಂಬುಗಲ್ಲ, ಉದ್ದವಾದ ಮೂಗು, ಅಗಲವಾದ ಕಣ್ಣುಗಳು, ಹರವಾದ ಹಣೆ, ಉಂಗುರಗೂದಲು, ಬಲಿಷ್ಠ ಹಾಗೂ ಎತ್ತರ ಕಾಯ, ಕೆಂಪುಬಿಳಿ ಮೈಬಣ್ಣ ಮತ್ತು ಮೋಹದ ಮಾತುಗಳು—ಇವುಗಳಿಂದ ನನ್ನ ಮನಸ್ಸು ಸೋತು ಶರಣುಹೋಗಿತ್ತು. ಮದುವೆಯಾದರೆ ಶ್ರೀಕಾಂತರೇ ನನ್ನ ಕಾಂತರಾಗಬೇಕೆಂದು ಸಂಕಲ್ಪಿಸಿದ್ದೆ.

ಹಲವು ಸಲ ಅವರೊಡನೆ, "ನಿಮ್ಮ ವೃತ್ತಿಯಲ್ಲಿರುವ ಹುಡುಗಿಯೇ ಸಿಗುತ್ತಾಳೆ ನಿಮಗೆ!" ಎಂದು ಪರ್ಯಾಯವಾಗಿ ಹಾಸ್ಯ ಮಾಡುತ್ತಿದ್ದೆ. ಆಗ ಅವರು "ನಿಮ್ಮ ತಂದೆಯವರಷ್ಟೇ ಭವಿಷ್ಯ ಹೇಳುತ್ತಿದ್ದರು; ನೀನೂ ಹೇಳುವಿಯೇನು?" ಎಂದು ಮುಗಿಸಿಬಿಡುತ್ತಿದ್ದರೇ ಹೊರತು, "ಅವಳ ಹೆಸರು ಕುಸುಮಾ ಎಂದಲ್ಲವೇ?" ಎಂದು ಪ್ರಶ್ನಿಸುತ್ತಲೇ ಇರಲಿಲ್ಲ. ಬರುಬರುತ್ತ ನನಗೆ ಅವರ ಸಲುಗೆ ಸ್ವಲ್ಪ ಹೆಚ್ಚಿರದ್ದಾಗಿತ್ತು. ಸಂದರ್ಭ ಸಿಕ್ಕರೆ, "ನನ್ನನ್ನು ಮದುವೆಯಾಗಲು ಮನಸ್ಸಿಲ್ಲವೇ?" ಎಂದು ಕೇಳಬೇಕೆಂದು ನಿರ್ಧರಿಸುತ್ತಿದ್ದೆನಾದರೂ, ನನ್ನ ಹೆಣ್ತನದ ಸಹಜನಾಚಿಕೆಯಿಂದಾಗಿ ಹಾಗೆ ಕೇಳಲ್ಲ ಸಮರ್ಥಳಾಗುತ್ತಿರಲಿಲ್ಲ

ಶ್ರೀಕಾಂತರು ಒಳಗೆ ಬಂದರು. ಎಂದಿನಂತೆ ಮಂಚದ ಮೇಲೆ ಹಾಸಿಗೆಯ ಮೇಲೆಯೇ ಕುಳಿತುಕೊಂಡರು. ಬಯಸಿದ ಗಂಡು, ಬಿಚ್ಚಿದ ಹಾಸಿಗೆಯ ಮೇಲೆ ಕುಳಿತುಕೊಂಡರೆ, ಪ್ರಾಯದ ಹೆಣ್ಣಿನ ಮನಸ್ಸಿನಲ್ಲುಬ್ಬವಿಸಬಹುದಾದ ವಿಚಾರಗಳನ್ನೂ, ಅವಳ ಅಂತರಂಗದಲ್ಲಿ ಚಿಮ್ಮಬಹುದಾದ ಸಂತಸದ ಬುಗ್ಗೆಯನ್ನೂ ಅನುಭವಿಸಿಯೇ ಅರಿಯಬೇಕು! ನಾಚಿಕೆಯಿಂದ ತಲೆ ತಗ್ಗಿಸಿ, ಎದುರಿಗಿರುವ ಕುರ್ಚಿಯನ್ನು ಮುಂದಕ್ಕೆಳೆದುಕೊಂಡು ಕುಳಿತುಕೊಂಡೆ.

"ನಾನು ಆಗಲೇ ಬಂದು, ಅರ್ಧಘಂಟೆ ಕುಳಿತು ಹೋದೆ."

"ಹೌದಂತೆ, ಇದೇ ಈಗ ಹೇಳಿದಳು ಅಕ್ಕ.....ಕೆಲಸವಿತ್ತೇ?"

"ಕೆಲಸನೆಂದರೇನು..... ವಿಶೇಷವೇನಿಲ್ಲವೆನ್ನಿ....."

"ಆಗಲಿ, ಹೇಳಿ, ನಿಮ್ಮ ಕೆಲಸವನ್ನು ನಾನು ಮಾಡಲಾರೆನೆಂದು ನಿಮ್ಮ ವಿಚಾರವೇ?"

"ಕೆಲಸವೆಂದರೆ ಕೆಲಸವಲ್ಲ.....ಒಂದು ಬಗೆಯ ಸಹಾಯವಾಗಬೇಕಿತ್ತು."

"ಸಹಾಯವೇ? ನನ್ನಿಂದ? ಹೇಳಿ, ಮಾಡುತ್ತೇನೆ ಎಂದೆನಲ್ಲ!"

"ಒಂದು ಮೂವತ್ತು ರೂಪಾಯಿ ಬೇಕಿತ್ತು."

"ಏಕೆ, ನಿಮ್ಮ ಸಂಬಳ ಆಗಿಲ್ಲವೇ?"

"ಇಲ್ಲ; ಅದೇಕೋ ಎದೆ ನೋಯುತ್ತಿದ್ದುದರಿಂದ, ಒಂದು ಪೀರಿಯಡ್ಡು ಮೊದಲೇ ಮನೆಗೆ ಬಂದಿದ್ದೆ."

"ಈಗೇನು ಅಷ್ಟು ಅವಸರ ಹಣದ್ದು?"

"ಮೂವತ್ತು ರೂಪಾಯಿ ಟಿ. ಎಂ. ಓ. ಮಾಡು ಎಂದು ಅಮ್ಮನಿಂದ ತಾರುಬಂದಿದೆ."

"ನೋಡಿದಿರಾ — ಬೇಗನೆ ಒಂದು ಮದುವೆ ಮಾಡಿಕೊಂಡು, ಅಮ್ಮನಿಗೊಂದು ಸೊಸೆ ತಂದು, ಅವಳ ಕಷ್ಟವನ್ನು ದೂರಮಾಡಿರಿ—ಎಂದು ನಾನೆಂದರೆ ನೀವೆಲ್ಲಿ ಕೇಳುತ್ತೀರಿ? ನೀವು ಹೀಗೆಯೇ ಗಣಪರಾಗಿದ್ದರೆ, ಅಮ್ಮನ ಸೀಕು ಗುಣವಾಗುವುದು ಯಾವಾಗ?" ಅಮ್ಮನಿಗೆ ಸೀಕೆಂದು ಹೇಳುತ್ತಿದ್ದರು ಅವರು.

"ಅದನ್ನೇ ನಾನೂ ವಿಚಾರ ಮಾಡುತ್ತಿದ್ದೇನೆ. ಒಳ್ಳೆಯ ಹೆಣ್ಣು ಸಿಕ್ಕರೆ, ಈ ವರ್ಷವೇ.."

"ನಾನು..... ಕೆಟ್ಟವಳೇ ಮಾಸ್ಟರ್?" ನಾಚಿಕೆಯಿಂದ ನಗುತ್ತ ಕೇಳಿದೆ.

"ಯಾರು ಹಾಗೆಂದವರು?"

"ನಾನು ಒಳ್ಳೆಯವಳೇ ಹಾಗಾದರೆ?"

"ನನಗೆ ಮೂವತ್ತು ರೂಪಾಯಿ ಕೊಟ್ಟರೆ ತುಂಬಾ ಒಳ್ಳೆಯವಳು ನೀನು....."

"ಹಾಗಾದರೆ ನನ್ನನ್ನು.....ಆಂ?"

"ನೋಡೋಣ....." ಕೊಂಕುನಗೆ ನಗುತ್ತ ಹೇಳಿದರು.

"ಈಗ ಮೂರು ವರ್ಷಗಳಿಂದ ನೋಡುತ್ತಿದ್ದುದು ಸಾಲದೇ?"

" ನಿನ್ನನ್ನಲ್ಲ ನೋಡಬೇಕಾದುದು... ...."

" ಮತ್ತೆ ? "

" .....ಅಮ್ಮ ಒಪ್ಪಬೇಕು, ಜಾತಕವೂ ಕೂಡಿಬರಬೇಕು...."

" ಆಗಲಾದರೂ ನನ್ನನ್ನೇ ಮದುವೆಯಾಗುವಿರಾ ? "

" ಹರಟಬೇಡ ಕುಸುಮಾ ! ಇದ್ದರೆ ಕೊಡು ಒಂದು ನೂವತ್ತು ರೂಪಾಯಿಗಳನ್ನು. "

" ಹರಟೆಯಲ್ಲ, ಸೀರಿಯಸ್ಸ್ಲೀ ಕೇಳುತ್ತೇನೆ. "

" ಹೀಗೆಲ್ಲ ಮಾಡಿದರೆ, ನಾನು ನಿನ್ನ ರೂಮಿಗೆ ಬರುವುದೇ ಇಲ್ಲ ನೋಡು ! "

" ನನ್ನ ಹತ್ತಿರವೂ ಹಣವಿಲ್ಲವಲ್ಲ ....." ಸುಳ್ಳೇ ಹೇಳಿದೆ. ಅಂದೇ ನನ್ನ ಸಂಬಳ ತಂದಿದ್ದೆ.

" ಹಾಗಾದರೆ ಹೊರಡಲೇ ? ಇನ್ನಾರನ್ನಾದರೂ ಕೇಳಿನೋಡುತ್ತೇನೆ. "

" ಸಾಕು ಬಿಡಿರಿ ನಿಮ್ಮ ದೊಡ್ಡಿಸ್ತಿಕೆ ! ನಾನೇ ಕೊಡುತ್ತೇನೆ. ತಿರುಗಿ ಕೊಡುತೀರೋ ? ಅಥವಾ....."

" ವರದಕ್ಷಿಣೆಯ ಹಣದಲ್ಲಿ ಮುರಿದು ಕೊಟ್ಟರಾಯತಲ್ಲ ! "

" ಅಂತೂ..... ... "

ಶ್ರೀಕಾಂತರಿಗೆ ನನ್ನ ಮೇಲೆ ಪ್ರೇಮವಿದೆಯೆಂಬುದನ್ನು ತಿಳಿದು ಕೊಳ್ಳುವಷ್ಟು ಜಾಣ್ಮೆ ನನ್ನಲ್ಲಿರದಿದ್ದರೆ, ನಾನು ಹೆಣ್ಣಾಗಿ ಹುಟ್ಟಿದ್ದೇಕೆ ! ಅವರಿಗೆ ಮೂವತ್ತು ರೂಪಾಯಿಗಳನ್ನು ಕೊಡುವುದಾಗಲಿ ಅವರು ನನ್ನನ್ನು ಮದುವೆಯಾಗಬೇಕೆನ್ನುವುದಾಗಲಿ ಮಹತ್ತ್ವದ ಮಾತಾಗಿರಲಿಲ್ಲ. ಆದರೆ ಅವರು ನನ್ನ ಮಂಚದ ಮೇಲೆ ಕುಳಿತು. ಕೊಂಡು ತಾಸುಗಟ್ಟಲೆ ನನ್ನೊಡನೆ ಹರಟಬೇಕು; ನನ್ನನ್ನು ಮೆಚ್ಚಿ ಮೋಹಿಸಬೇಕು; ಒಮ್ಮೆಯಾದರೂ ನನ್ನನ್ನಪ್ಪಿ ಪ್ರೀತಿಯಿಂದೊಂದು ಮುತ್ತು ಕೊಡಬೇಕು—ಎಂಬುದೇ ನನ್ನಾತುರವಾಗಿತ್ತು.

.... .. ಅವರು ನನ್ನನ್ನೆಷ್ಟು ದಿನ ತಬ್ಬಿಕೊಂಡು ಮುತ್ತಿಟ್ಟಿಲ್ಲ ! ಎಷ್ಟು ದಿನ ನನ್ನ ಸೀರೆಯ ಸೆರಗನ್ನೆಳೆದಿಲ್ಲ ! ಎಷ್ಟು ದಿನ ' ನನ್ನ ಕುಸುಮಾ ' ಎಂದು ನನ್ನೆದೆಯ ಬಿರಿಮುಗುಳ್ಗಳನ್ನರಳಿಸಿಲ್ಲ !..... ಆದರೆ ಅವೆಲ್ಲವೂ ನನ್ನ ಹೊಂಗನಸಿನ ಹಾಸಿಗೆಯಲ್ಲಿ.....

ಶ್ರೀಕಾಂತರು ಶೀಘ್ರದಲ್ಲಿಯೇ ನನ್ನವರಾಗುವರು; ನಾನು ಶ್ರೀಕಾಂತರವಳಾಗುವೆನು; ನಾವಿರ್ವರೂ ಒಂದಾಗುವೆವು.....

ಅವರನ್ನು ಹೆಚ್ಚುಹೊತ್ತು ಕುಳ್ಳಿರಿಸಿಕೊಂಡು ಮೋಜು ಮಾಡುವ ವೇಳೆ ಅದಾಗಿರಲಿಲ್ಲ. " ಆಗಲಿ, ಕೊಡುತ್ತೇನೆ; ಉಳಿದ ವರವಕ್ಷಿಣೆ ಎಷ್ಟೆಂದು ತಿಳಿಸಿದರೆ....." ಎನ್ನುತ್ತ ಟೇಬಲಿನತ್ತ ಹೊರಟೆ.

ಟೇಬಲಿನ ಮೇಲಿದ್ದ ಪರ್ಸು ಮಾಯವಾಗಿತ್ತು. ಕಪಾಟು, ಟ್ರಂಕು, ಡ್ರಾಯರು, ಪುಸ್ತಕಗಳ ರಾಶಿ ಎಲ್ಲವನ್ನೂ ಹುಡುಕಿದೆ. ಶಾಲೆಯಿಂದ ಬಂದೊಡನೆ ಪರ್ಸನ್ನು ಟೇಬಲಿನ ಮೇಲಿಟ್ಟದ್ದು ತುಂಬಾ ಜ್ಞಾಪಕವಿದ್ದಿತು. ಜತೆಯಲ್ಲಿ ವಿಮಲಾ ಕೂಡ ಇದ್ದಳು. ಅವಳೂ ಒಂದು ಹತ್ತು ರೂಪಾಯಿಗಳನ್ನು ಕೇಳಿದ್ದಳು; ' ಇಲ್ಲ ' ಎಂದು ಹೇಳಿದ್ದೆ.

ನಾನು ಹೊರಗೆ ಹೋಗಿಬರುವಷ್ಟರಲ್ಲಿ ರೂಮಿಗೆ ಬಂದು ಹೋದವರು ಶ್ರೀಕಾಂತರೊಬ್ಬರೇ. ನಾನು ತಿರುಗಿಬಂದೆ; ಅವರು ಮತ್ತೆ ಬಂದರು. ಪರ್ಸು ಮಾತ್ರ ಹೋದದ್ದು ಹೋಗಿಬಿಟ್ಟಿತ್ತು. ಅದೇನೂ ತಿರುಗಿ ಬರಬಹುದೋ ಇಲ್ಲವೋ ಎಂಬುದನ್ನು ಯಾರು ಹೇಳಬೇಕು ?

ಒಂದು ನೂರಾ ಮೂವತ್ತು ರೂಪಾಯಿಗಳು ! ನನ್ನ ಒಂದು ತಿಂಗಳ ಪರಿಶ್ರಮದ ಫಲ !

× × × ×

ಮೊದಲನೆಯ ತಾಸು ಬಿಡುವಿದ್ದುದರಿಂದ, ಎರಡನೆಯ ತಾಸಿಗೆ ಸರಿಯಾಗಿ ಶಾಲೆಗೆ ಹೋಗಿದ್ದೆ. ಗಂಟೆ ಹೊಡೆದು ವರ್ಗದಲ್ಲಿ ಕಾಲಿಟ್ಟಾಗ, ಎಲ್ಲ ವಿದ್ಯಾರ್ಥಿನಿಯರೂ ಮೌನವಾಗಿ ಎದ್ದುನಿಂತರು. ನಾನೂ ಎರಡು ನಿಮಿಷ ಮೌನಳಾಗಿ ನಿಂತೆ. ಮೃತಾತ್ಮರಿಗೆ ಶಾಂತಿ. ದೊರಕಲೆಂದು ದೇವಿಯನ್ನು ಪ್ರಾರ್ಥಿಸಿದೆ. ನನ್ನ ಕಂಗಳು ನೀರಿನಿಂದ ತುಂಬಿದ್ದುವು.

ಅಂದು ಶ್ರೀಕಾಂತದಿನಾಚರಣೆ..... ಶ್ರೀಕಾಂತರು ಸತ್ತು ಐದು ವರ್ಷ.....

ಐದು ವರ್ಷಗಳ ಕೆಳಗೆ ಒಂದು ದಿನ, ಶ್ರೀಕಾಂತರು ನನ್ನ ರೂಮಿಗೆ ಬಂದಿದ್ದರು. ಅಂದು ಮದುವೆಯಾಗಿರೆಂದು ಅವರನ್ನು ಕಾಡಿದ್ದೆ. ಮೂವತ್ತು ರೂಪಾಯಿಗಳನ್ನು ಕೇಳಿದ್ದರು. ನನ್ನ ಪರ್ಸು ಮಾಯವಾಗಿತ್ತು....ಹಣದಿಂದಾಗಿ ಅರ್ಧನಿಮಿಷದಲ್ಲಿ ವೈಮನಸ್ಸು ಉಂಟಾಗಬಲ್ಲದು. ಒಂದುನೂರಾ ಮೂವತ್ತು ರೂಪಾಯಿಗಳನ್ನು ಕಳೆದುಕೊಂಡ ನಾನು, ಒಮ್ಮೆಲೇ ದುಡುಕಿ ಸಿಡುಕಿನಿಂದ ವರ್ತಿಸಬಾರದಾಗಿತ್ತು. ಆದರೆ ವಿಧಿಘಟನೆ ! ಜೀವನರಥದಲ್ಲಿ ಕುಳ್ಳಿರುವುದಷ್ಟೇ ನಮ್ಮ ಕೆಲಸ. ಆ ರಥಾಶ್ವದ ಮೂಗಿನ ಕಡಿವಾಣವು ವಿಧಾತನ ಕೈಯಲ್ಲಿರುತ್ತದೆ. ಆತನೊಯ್ದಲ್ಲಿಗೇ ನಾವು ಸಾಗಬೇಕು..... ' ಹಾಯ್ ' ಎಂದಿತು ನನ್ನ ಹೃದಯ.

ಅಂದಿನ ನೆನಪು ಪುನಃ ನನ್ನ ಹೃದಯದ ಸುಪ್ತವೇದನೆಯನ್ನು ಕೆರಳಿಸಿತು.....

" ಏನು ಹುಡುಕುತ್ತಿರುವೆ ಕುಸುಮಾ ? "

" ಪರ್ಸ್ ಕಾಣುತ್ತಿಲ್ಲ ಸರ್. "

" ಯಾವಾಗಲೂ ನಿನ್ನ ಅಜಾಗ್ರತೆಯೇ ಹೆಚ್ಚಾಗುತ್ತದೆ. "

" ಹೀಗಾಗುತ್ತದೆಂದು ಯಾರಿಗೆ ಗೊತ್ತು ? ಯಾವಾಗಲೂ ಇಲ್ಲೇ ಇಡುತ್ತಿದ್ದೆನಲ್ಲ ! "

" ಮಕ್ಕಳೇನಾದರೂ ತೆಗೆದುಕೊಂಡು ಹೋದರೋ ಏನೋ ? "

" ಮಕ್ಕಳು ಯಾಕೆ ತೆಗೆದುಕೊಂಡಾರು ?.....ಹುಡುಗಾಟ ಮಾಡಬೇಡಿ ಸರ್ ! "

" ನಾನೇಕೆ ಹುಡುಗಾಟ ಮಾಡಲಿ ? ಹಣ ಕೇಳಿದ್ದೇ ತಪ್ಪೇನು ನನ್ನದು ? "

ಹಿಂದೊಮ್ಮೆ ಶಾಲೆಯೊಳಗೆ ಶ್ರೀಕಾಂತರೇ ನನ್ನ ಪರ್ಸನ್ನು ಅಡಗಿಸಿಟ್ಟಿದ್ದರು. ಆಗಲೂ ಶಾಲೆಯೊಳಗೆ ವರ್ಗದಲ್ಲಿಯ ಟೇಬಲಿನ ಮೇಲೆ ಬಿಟ್ಟಿದ್ದೆ. ಒಂದು ವಾರ ಕುಣಿದಾಡಿಸಿ, ಎಲ್ಲ ಶಿಕ್ಷಕ-ಶಿಕ್ಷಿಕೆಯರಿಗೂ ನನ್ನಿಂದ ಚಹಾಪಾರ್ಟಿ ಕೊಡಿಸಿ, ಪರ್ಸನ್ನು ತಿರುಗಿ ಕೊಟ್ಟಿದ್ದರು.

ಮನೆಯಲ್ಲಿ ನನ್ನ ಪರ್ಸನ್ನಾಗಲಿ, ಬಿಡಿಗಾಸನ್ನಾಗಲಿ, ಅಕ್ಕ ಅಥವಾ ಅಕ್ಕನ ಮಕ್ಕಳು ಎಂದಿಗೂ ಮುಟ್ಟಿದವರಲ್ಲ. ಶ್ರೀಕಾಂತರು ಅಬೇ ಆಗ ಬಂದು ಹೋಗಿದ್ದಾರೆಂದ ಬಳಿಕ, ಅವರೇ ವಿನೋದಕ್ಕಾಗಿ ಅಡಗಿಸಿಟ್ಟಿರಬೇಕು.

ಶ್ರೀಕಾಂತರ ಹೊರತು ಇನ್ನಾರೂ ತೆಗೆಯಲು ಸಾಧ್ಯವಿಲ್ಲ. ಅವರದನ್ನು ವಿನೋದಕ್ಕಾಗಿ ತೆಗೆದಿರುವರೋ ಗಿಟ್ಟಿಸಲೆಂದೇ ತೆಗೆದಿರುವರೋ ಹೇಗೆ ತಿಳಿಯಬೇಕು ನನಗೆ? ಒಂದೆರಡು ರೂಪಾಯಿಗಳೇ? ಒಂದುನೂರಾ ಮೂವತ್ತು ರೂಪಾಯಿಗಳು! ನಾನು ತಾಳ್ಮೆತಪ್ಪಿ ಮಾತನಾಡಬೇಕಾಯಿತು:

"ಪರ್ಸ್ ಕೊಡಿ ಸ್ಸರ್!"

"ಇಲ್ಲ ಕುಸುಮಾ, ನಿಜಕ್ಕೂ ನಾನು ನೋಡಿಲ್ಲ ಅದನ್ನು!"

"ನಾನಿಲ್ಲದಾಗ ನೀವು ಇಲ್ಲಿಗೆ ಬಂದಿರಲಿಲ್ಲವೇ?"

"ಅಂದರೆ, ನಿನ್ನ ಪರ್ಸನ್ನಪಹರಿಸಲೆಂದೇ ಬಂದಿದ್ದೆನೆಂದು ನಿನ್ನ ಅಂಬೋಣವೇ?"

"ಅಪಹರಿಸಿದ್ದೀರಿ ಎಂದು ನಾನೆನ್ನುವುದಿಲ್ಲ. ವಿನೋದಕ್ಕಾಗಿ ಅಡಗಿಸಿಟ್ಟಿದ್ದರಿ....."

"ನಾಲ್ಕು ಜನರೆದುರು ವಿನೋದಮಾಡುತ್ತೇನೆಂದು ಕಳ್ಳತನದಲ್ಲಿ ವಿನೋದಮಾಡುವ ವ್ಯಕ್ತಿ ನಾನಲ್ಲ ಕುಸುಮಾ! ಹುಡುಕಿ ನೋಡು." ಎಂದವರೇ ಸಿಟ್ಟಿನಿಂದ ಎದ್ದುಬಿಟ್ಟರು ಶ್ರೀಕಾಂತ.

"ನಿಮ್ಮ ಹೊರತು ಮತ್ತೆ ಯಾರು ಬರುತ್ತಾರೆ ಇಲ್ಲಿ? ನೀವೇನೇ ತೆಗೆದಿರಬೇಕು!"

"ಹಾಗೇಯೇ ತಿಳಿದುಕೋ..... ಆಣೆಯಾಗಿಯೂ ನಿನ್ನ ಪರ್ಸನ್ನು ನಾನು ಕಾಣೆ."

ಅವರು ಹೊರಟು ನಡೆದರು. ಅವರ ಆಣೆಯಲ್ಲಿ. ನನಗೆ ನಿಶ್ವಾಸ ಹುಟ್ಟಲಿಲ್ಲ. ಹಿಂದೆಷ್ಟೋ ಸಲ ಸುಳ್ಳು ಆಣೆಯನ್ನು ಹಾಕಿಲ್ಲವೇ? ಇಂದಿನ ಆಣೆಯಾದರೂ ಹಾಗೆಯೇ.....

ಶ್ರೀಕಾಂತರ ಚೇಷ್ಟೆ ನನ್ನ ಕುತ್ತಿಗೆಗೆ ಬಂದಿತ್ತು. ಹಾಲಿನವನು ಹಣ ಕೇಳುತ್ತಾನೆ, ಅಕ್ಕ ಹಣ ಕೇಳುತ್ತಾಳೆ, ಕೆರಾಣಿ ಅಂಗಡಿಯವನು ಹಣ ಕೇಳುತ್ತಾನೆ—ಅವರಿಗೆಲ್ಲ ಏನೆಂದು ಹೇಳಬೇಕು? ಒಂದು ಐವತ್ತು ರೂಪಾಯಿಗಳಾದರೂ ನನ್ನ ಬಳಿಯಿದ್ದಿದ್ದರೆ, ಶ್ರೀಕಾಂತರೊಡನೆ ಸಿಟ್ಟುಮಾಡುವ ಸಂದರ್ಭ ಬರುತ್ತಲೇ ಇರಲಿಲ್ಲ. ಆದರೆ ಪರ್ಸಿಗೆ ಪರ್ಸೇ ಇಲ್ಲದಂತಾಗಿತ್ತು.

ಅಕ್ಕನಿಗೇನಾದರೂ ತಿಳಿದಿದೆಯೇ—ಎಂದು ವಿಚಾರಿಸಿದೆ. ಅವಳಿಗೂ ತಿಳಿದಿರಲಿಲ್ಲ. ಶ್ರೀಕಾಂತರ ಹೊರತು ಮತ್ತಾರಾದರೂ ಬಂದಿದ್ದರೋ?—ಎಂದು ತಿಳಿದುಕೊಂಡೆ. 'ನಿಮಲೆ ಬಂದಿದ್ದಳು. ನೀನಿಲ್ಲನೆಂದೊಡನೆ ಇಲ್ಲಿ ನಿಲ್ಲಲೂ ಇಲ್ಲ ಆವಳು. ರೂಮಿನೊಳಗಂತೂ ಕಾಲಿಡಲೇ ಇಲ್ಲ" ಎಂದಳು ಅಕ್ಕ.

ಇಡಿಯ ಮನೆಯನ್ನೇ ಹುಡುಕಾಡಿದೆ. ವ್ಯರ್ಥವಾಯಿತು. ಶ್ರೀಕಾಂತರೇ ತೆಗೆದಿರಬೇಕೆನ್ನುವುದರಲ್ಲಿ ಯಾವ ಶಂಕೆಯೂ ಇರಲಿಲ್ಲ. ಅವರಿಗೆ ಹಣದ ಆವಶ್ಯಕತೆಯೂ ಇದ್ದಿತು. ಆದರೂ ಕಳವು ಮಾಡಿರಬಹುದೆಂದು ನಂಬಲು ಶಕ್ಯವಿದೆಯೇ? ನಾಲ್ಕಾರು ದಿನ ಕುಣಿಸಿ, ಚಹಾಪಾರ್ಟಿ ಗಿಟ್ಟಿಸಿ, ಬಳಿಕ ಕೊಡಬೇಕೆಂದೇ ಇಷ್ಟೆಲ್ಲ ತಂತ್ರವನ್ನು ಮಾಡಿದ್ದು.

ಆ ಮಾರನೆಯ ದಿನ ಶಾಲೆಗೆ ಹೋದೆ. ಶ್ರೀಕಾಂತರು ನನ್ನನ್ನು ಕರೆಕಳುಹಿದರು. ಆಫೀಸುರೂಮಿಗೆ ಹೋದೆ. ಶ್ರೀಕಾಂತರು ಇನ್ನೂ ಸಿಟ್ಟಿನ ಮುಖಮುದ್ರೆಯಲ್ಲಿಯೇ ಇದ್ದರು.

"ಪರ್ಸು ಸಿಕ್ಕಿತೇ?"

"ತೆಗೆದುಕೊಂಡವರು ಕೊಡದೆ ಹೇಗೆ ಸಿಕ್ಕೀತು?"

"ಇದು ನಿನಗೆ ಯೋಗ್ಯವಲ್ಲ ಕುಸುಮಾ!"

"ಹೋಗಲಿ ಬಿಡಿ.....ಇಂದಲ್ಲ ನಾಳೆಯಾದರೂ ಸಿಕ್ಕೀತು."

"ಹಾಗಾದರೆ ನಾನೇ ತೆಗೆದಿರುವೆನೆಂದು ನೀನು ನಂಬಿರುವೆ! ನಾನು ನೋಡಿಯೂ ಇಲ್ಲವೆಂದು ಒಮ್ಮೆ ಹೇಳಿದೆ. ನಿನಗೆ ಹಣ ಬೇಕಾದರೆ ಕೇಳು, ನಾನು ಕೊಡುತ್ತೇನೆ. ಆದರೆ ಸುಮ್ಮನೆ ಅಪವಾದ..."

"ಇರಲಿ ಸ್ಸರ್, ನಿಮ್ಮ ಮೇಲೆ ಅಪವಾದ ಹೊರಿಸಿ ಹಣ ಪಡೆಯುವ ಇಚ್ಛೆ ನನಗಿಲ್ಲ!"—ನಾನು ಕ್ಲಾಸಿಗೆ ನಡೆದೆ. ನನ್ನ ಪರ್ಸನ್ನು ತೆಗೆಯದೆ ಹಣಕೊಡಲು ಹೇಗೆ ಒಪ್ಪೀತು ಶ್ರೀಕಾಂತರ ಮನ? ಬೆಕ್ಕಿಗೆ ಆಟ! ಇಲಿಗೆ ಪ್ರಾಣಸಂಕಟ!—ಎನ್ನುತ್ತಾರಲ್ಲ ಹಾಗಾಯಿತು ನನ್ನ ಅವಸ್ಥೆ.

ಆ ದಿನವೇ ರಜೆಪಡೆದು ಶ್ರೀಕಾಂತರು ಊರಿಗೆ ಹೋದರು. ಒಂದು ವಾರ ಅವರು ಶಾಲೆಗೆ ಬರುವಂತಿರಲಿಲ್ಲ. ಬಂದರೂ ನನ್ನ ಪರ್ಸು ತಿರುಗಿ ಕೊಡದೆ ನಾನೇನೂ ಅವರೊಡನೆ ಮಾತಾಡುವಂತಿಲ್ಲ. ಅವರ ವಿಷಯವಾಗಿ ನಾನು ಯಾವ ಸದ್ಭಾವನೆಯನ್ನಿಟ್ಟುಕೊಂಡಿದ್ದೆನೋ

ದಿ ನ್ಯಾಶನಲ್ ಮ್ಯುಜಿಕಲ್ ಪಾಲ್
ಧಾರವಾಡ

ಗಡಿಯಾರ, ಜಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಗಿ**

ಆದು ಒಂದು ದಿನದಲ್ಲಿಯೆ ನಾಶವಾಯಿತು. ಈ ಒಂದು ಕ್ಷುಲ್ಲಕ ಕಾರಣಕ್ಕಾಗಿ ನನ್ನ ಸಿಟ್ಟು ಅತಿರಿಕ್ತವಾಯಿತು. ಅವರನ್ನು ಮದುವೆಯಾಗುವ ವಿಚಾರ ಬಂದಾಗ ಜುಗುಪ್ಸೆಯುಂಟಾಯಿತು. ಅವರ ಮುದ್ದು ಮುಖವನ್ನು ನೆನಸಿದಾಗ, "ಅವರು ಹಾಗೆ ಮಾಡಿರಲಾರರು"— ಎನಿಸುತ್ತಿತ್ತು; ಹೃದಯ ತಳಮಳಿಸುತ್ತಿತ್ತು.

ಒಂದು ವಾರ ಕಳೆಯುವುದರಲ್ಲಿತ್ತು. ಶ್ರೀಕಾಂತರಿಂದ ಪತ್ರ ಬಂದಿತ್ತು. ಅದರಲ್ಲಿ ಕ್ಷೇಮಸಮಾಚಾರ ತಿಳಿಸಿ, ಕೊನೆಗೆ 'ನಿನ್ನ ಹಣ ಸಿಕ್ಕಿತೆ?' ಎಂದು ಬರೆದಿದ್ದರು.

ಅದನ್ನೋದಿ ಹರಿದೊಗೆದೆ. ಹೆಂಗುಸರೊಡನೆ ವಾರಗಟ್ಟಲೆ ವಿನೋದ ಮಾಡುವುದು ಗಂಡುಸರಿಗೆ ಭೂಷಣವೇ? ತಾನು ತೆಗೆದೇ ಇಲ್ಲವೆಂದು ಆಣೆಯನ್ನು ಬೇರೆ ಮಾಡಿದರು. ಹಾಗಾದರೆ, 'ನಿನ್ನ ಹಣ ಸಿಕ್ಕಿತೇ?' ಎಂದು ಕೇಳಿದ್ದರ ಉದ್ದೇಶವೇನು? ಊರಿಗೆ ಹೋಗುವಾಗ, ಕುಸುಮಳಿಗೆ ಕೊಡಿರೆಂದು ಯಾರ ಬಳಿಯೋ ಪರ್ಸು ಕೊಟ್ಟು ಹೋಗಿರಬೇಕು.

ಅದೇ ದಿನ ಸಂಜೆಯೇ, ಶ್ರೀಕಾಂತರು ಒಂದುನೂರಾ ಮೂವತ್ತು ರೂಪಾಯಿಗಳನ್ನು ಮನಿಯಾರ್ಡರು ಮಾಡಿದ್ದುದು ನನ್ನ ಕೈ ಸೇರಿತು. 'ನಿನ್ನ ನೂರಾಮೂವತ್ತು ರೂಪಾಯಿಗಳನ್ನು ಕಳಿಸಿದ್ದೇನೆ. ತುಂಬಾ ತೊಂದರೆಯಾಗಿರಬಹುದಲ್ಲವೇ? ಕ್ಷಮಿಸು! ಬಾಕಿ ವಿಷಯ ಮುಖತಃ. ಶ್ರೀಕಾಂತ'— ಎಂದು ಮನಿಯಾರ್ಡರು ಕೂಪನಿನಲ್ಲಿ ಬರೆಯಲಾಗಿತ್ತು.

ಪರ್ಸನ್ನು ತೆಗೆದವರು ಶ್ರೀಕಾಂತರೇ ಎಂಬ ಬಗ್ಗೆ ಮತ್ತಾವ ಆಧಾರ ಬೇಕು? ನಾನು ಅವರನ್ನು ಎಷ್ಟೇ ಪ್ರೀತಿಸಿದರೂ, ಅವರ ಈ ತೆರನ ಆಟವನ್ನು ನಾನು ಮೆಚ್ಚುತ್ತಿರಲಿಲ್ಲ. ಮರುದಿನ ಶಾಲೆಗೆ ಬಂದೇಬರುತ್ತಾರೆ. ಆಗ ಸ್ಪಷ್ಟವಾಗಿ ನನ್ನ ವಿಚಾರವನ್ನು ತಿಳಿಸಿಬಿಡಬೇಕು.

ಶಾಲೆಯ ಗಂಟೆ ಬಡಿಯಿತು. ನನ್ನ ವಿಚಾರಗಳೆಲ್ಲವೂ ಸರಿಯೆಂದು ಭಾವಿಸಿ ಮನೆಯ ಕಡೆಗೆ ಸಾಗಿದ್ದೆ.

ದೂರದಿಂದಲೇ ಮನೆ ಕಾಣಿಸುತ್ತಿತ್ತು. ಪುಟ್ಟ ಕಿಟ್ಟುವನ್ನೆತ್ತಿಕೊಂಡು ಮುದ್ದು ಮಾಡುತ್ತ ಬಾಗಿಲಲ್ಲಿ ನಿಂತಿದ್ದಳು ಅಕ್ಕ. ಮನೆ ಸಮೀಪಿಸಿತು; ಕಿಟ್ಟುವಿನ ಕೈಯಲ್ಲಿ ನನ್ನ ಪರ್ಸ್ ಕಾಣಿಸಿತು. ವೇಗವಾಗಿ ಸಾಗಿದೆ. ಅಕ್ಕ ನಗುತ್ತ ನಿಂತಿದ್ದಳು.

"ಯಾವಾಗ ಕೊಟ್ಟಿದ್ದರು ಪರ್ಸನ್ನು? ಇಷ್ಟು ದಿನ ಏಕೆ ಹೇಳಲಿಲ್ಲ?" ರೇಗಿ ಕೇಳಿದೆ.

"ಯಾರು ಕೊಟ್ಟವರು? ನೀನೆನ್ನುತ್ತಿರುವುದೇನು ಕುಸುಮಾ?"

"ಶ್ರೀಕಾಂತ ಮಾಸ್ತರು ಕೊಟ್ಟರಲಿಲ್ಲವೇ?"

"ಇಲ್ಲ....."

"ಹಾಗಾದರೇನು ಹಾರಿಬಂತೇನು ಈ ಪರ್ಸು?"

"ಹಾರಿಯೂ ಬರಲಿಲ್ಲ, ಓಡಿಯೂ ಬರಲಿಲ್ಲ— ಕಿಟ್ಟುನ ಆಟಗೆಗಳಲ್ಲಿ ಮುಳುಗಿತ್ತು!"

ಕಿಟ್ಟುನ ಕೈಯಿಂದ ಪರ್ಸನ್ನು ಕಸಿದುಕೊಂಡು, ರೂಮಿಗೆ ಹೋದೆ. ಅದರಲ್ಲಿಯ ನೂರಾಮೂವತ್ತು ರೂಪಾಯಿಗಳೂ, ನಾನು ಇಟ್ಟಂತೆಯೇ— ಕರವಸ್ತ್ರದಲ್ಲಿ ಕಟ್ಟಿಟ್ಟಂತೆಯೇ—ಇದ್ದುವು.

ರಾತ್ರಿಯಿಡೀ ನಿದ್ದೆ ಹತ್ತಲಿಲ್ಲ. ನನ್ನ ಕಲ್ಪನೆ ಸುಳ್ಳಾಗಿತ್ತು. ಶ್ರೀಕಾಂತರು ಅಂಥ ವ್ಯಕ್ತಿಗಳಲ್ಲ; ಆದರೆ, "ನಿನ್ನ ನೂರಾಮೂವತ್ತು ರೂಪಾಯಿಗಳನ್ನು ಕಳುಹಿದ್ದೇನೆ" ಎಂದು ಮನಿಯಾರ್ಡರು ಮಾಡಿದ್ದೇಕೆ?

ನನ್ನೀ ನಡತೆಯಿಂದ ಅವರು ನೊಂದುಕೊಂಡಿರಲಾರರೇ? ನನ್ನಂತಹ ಒಬ್ಬ ಹೆಣ್ಣಿನಿಂದ ತಾನು ಅಪವಾದಕ್ಕೆ ಗುರಿಯಾದೆನಲ್ಲ— ಎಂದು ಅವರು ಮಿಡುಕಿರಲಾರರೇ? ನನ್ನ ಮನಸ್ಸೂ ಮಿಡುಕಿತು. ನನ್ನ ತಪ್ಪಿಗೆ ಶಿಕ್ಷೆಯಾಗಲೇ ಬೇಕು. ಶ್ರೀಕಾಂತರು ನನ್ನನ್ನು ಕ್ಷಮಿಸಬಹುದೇ? ಕ್ಷಮಿಸಲಾರರೇ?

ಮರುದಿನ ಬೇಗನೆ ಶಾಲೆಗೆ ಹೋದೆ. ಶ್ರೀಕಾಂತರು ಬರುವುದನ್ನೆ ಹಾದಿಕಾಯುತ್ತಿದ್ದೆ. ಆದರೆ ಅವರು ಬರಲಿಲ್ಲ.....ಅವರು ಬರಲಾರರೇ? ನನ್ನನ್ನು ಕ್ಷಮಿಸಿ.....ಕೈಹಿಡಿಯಲಾರರೇ?

ಮುಖ್ಯಾಧ್ಯಾಪಕರ ಹೆಸರಿಗೆ ತಂತಿಯೊಂದು ಬಂದಿತ್ತು— "ಹೃದಯನೋವಿನಿಂದ ಶ್ರೀಕಾಂತರು ಕೈಲಾಸವಾಸಿಗಳಾದರು"— ಎಂದು.

ಶ್ರೀಕಾಂತರ ಮರಣದಿಂದ ಇಡಿಯ ಶಾಲೆಯೇ ಸ್ಮಶಾನದುಃಖವನ್ನು ಸೂಚಿಸಿತು. ಎರಡು ನಿಮಿಷ ನಾನೂ ಮೌನವನ್ನಾಚರಿಸಿದೆ. ನನ್ನ ಕಣ್ಣುಗಳಿಂದ ಉಕ್ಕುತ್ತಿರುವ ನೀರನ್ನು ತಡೆಗಟ್ಟುವುದಾಗಲಿಲ್ಲ.

ಆಗಾಗ ಅವರ ಭೇಟ್ಟಿ ನನಗಾಗುತ್ತಿದೆ. ಹಿಂದಿನಂತೆಯೆ ಮೋಜು ಮಾಡುತ್ತಾರೆ; ಹರಟುತ್ತಾರೆ; ನಲಿದು ನಲಿಸುತ್ತಾರೆ. ನನ್ನ ಹೃದಯವನ್ನು ಚುಚ್ಚಿ ವೇದನೆಯನ್ನುಂಟು ಮಾಡುತ್ತಾರೆ: "ನಿನ್ನ ಪರ್ಸು ಸಿಕ್ಕಿತೇ ಕುಸುಮಾ?" ಎನ್ನುತ್ತಾರೆ. "ತಪ್ಪಾಯ್ತು ಕ್ಷಮಿಸಿ....ಕ್ಷಮಿಸಿ....ಸಿಟ್ಟಾಗಬೇಡಿ....'' ಎಂದು ನಾನೂ ಕನವರಿಸುತ್ತೇನೆ. ಅವರು ನನ್ನ ವೈದಡವಿ ಸಮಾಧಾನಪಡಿಸಿ, ತೋಳುಗಳನ್ನು ಹಿಡಿದೆತ್ತಿ, ಸೆಳೆದು ತಬ್ಬಿ ಮುತ್ತಿಟ್ಟಂತೆ ಭಾಸವಾಗುತ್ತದೆ. ಬದುಕಿದ್ದು ನನ್ನನ್ನು ಮದುನೆಯಾಗಿ ಕೊಡಬಹುದಾದ ಎಲ್ಲ ಸುಖವನ್ನೂ ಕನಸಿನಲ್ಲಿ ಕರುಣಿಸುತ್ತಿದ್ದಾರೆ. ನನ್ನ ಪಾಲಿಗೆ ಅವರು ಸತ್ತಿಲ್ಲ; ನನ್ನ ಹೃದಯಮಂದಿರದಲ್ಲಿ ನಲಿದುಲಿಯುತ್ತಿದ್ದಾರೆ!

ಶ್ರೀಕಾಂತರು ಕಣ್ಮರೆಯಾಗಿ ಐದು ವರ್ಷಗಳಾದುವು. ಪ್ರತಿವರ್ಷವೂ 'ಶ್ರೀಕಾಂತ ದಿನಾಚರಣೆ' ಮಾಡಲಾಗುತ್ತಿದೆ ನಮ್ಮ ಶಾಲೆಯಲ್ಲಿ. ಅಂದು ಅವರ ಕುರಿತಾದ ಎಷ್ಟೋ ವಿಚಾರಗಳು ಕೆಣಕಿ ಕೆರಳಿಸಿ ನನ್ನೊಡನೆ ಸಂಸವಾಡುತ್ತವೆ.

ಶ್ರೀಕಾಂತರನ್ನು ಹಡೆದ ತಾಯಿ ಇನ್ನೂ ಬದುಕಿದ್ದಾರೆ. 'ನಿಮ್ಮ ಅಭಾಗಿನಿ ಸೊಸೆ'— ಎಂದು ಪ್ರತಿತಿಂಗಳಿಗೂ ಯಥಾಶಕ್ತಿ ಸೇವೆಯನ್ನು ಸಲ್ಲಿಸುತ್ತ ಬಂದಿದ್ದೇನೆ— ಹಣದ ರೂಪದಲ್ಲಿ.

ಶ್ರೀಕಾಂತರು ಮೃತರಾದುದು ಹೃದಯನೋವಿನಿಂದ.....

ನಾನು ಬದುಕಿಯೂ ಸತ್ತವಳಂತಿರುವ ಕಾರಣವೂ—ಹೃದಯ ವೇದನೆ.....

ನಮ್ಮ 'ಇವರು'

(ಒಂದು ನಗೆಬರಹ)*

ಶ್ರೀಮತಿ ಮೀರಾ ಮುಜುಮದಾರ್, ನೌಪಾಡಾ-ಥಾಣಾ

ಗಂಡ-ಹೆಂಡಿರ ಅಭಿರುಚಿಗಳಲ್ಲಿ ವ್ಯತ್ಯಾಸವಿರುವುದು ಸ್ವಾಭಾವಿಕವಾಗಿದೆ. ಆದರೆ ಪರಸ್ಪರ ಅಭಿರುಚಿಗಳನ್ನು ಪರಸ್ಪರರು ಸಹಾನುಭೂತಿಯಿಂದ ಕಂಡು ನಕ್ಕು ನಲಿಯದೆಹೋದರೆ, ಬಾಳು ಸವಿಬಾಳಾಗುವುದಿಲ್ಲ.

ಈ ದಿನ ಉಷಾ ಮಹಿಲಾಮಂಡಳಕ್ಕೆ ತಡಮಾಡಿ ಬಂದುದನ್ನು ಕಂಡು, ನಾನು ಸಹಜವಾಗಿಯೇ ತಡವಾದ ಕಾರಣವನ್ನು ಕೇಳಿದೆ. ಅವಳು ಉತ್ತರ ಕೊಡುವ ಮೊದಲೇ ಪ್ರಮಿಳಾ ಕೇಳಿದಳು: "ಈ ದಿನ ಪಿಕ್ಚರಿಗೆ ಹೊರಟಿದ್ದಿ ಅಲ್ಲನೇ? ಇಷ್ಟು ಬೇಗನೆ ಹೇಗೆ ಬಂದೆ?"

ಉಷೆಯ ಮೋರೆಯ ಮೇಲೆ ನಿರಾಶೆಯ ಮಿಂಚೊಂದು ಸುಳಿದು ಮಾಯವಾಯಿತು. ಪ್ರಮಿಳಾ ಮತ್ತೆ ಕೆಣಕಿದಳು: "ಏಕೆ, ಪಿಕ್ಚರು ಸೇರಲಿಲ್ಲನೇ?"

ಉಷಾ ಉದ್ವೇಗದಿಂದ ಹೇಳಿದಳು: "ಎಲ್ಲಿಯ ಪಿಕ್ಚರು! ಥೇಟರಿನ ವರೆಗೆ ಹೋಗಿ ಹಾಗೆಯೆ ಹಿಂದಿರುಗಬೇಕಾಯಿತು!" ಎಲ್ಲರಲ್ಲಿಯೂ ಉತ್ಸುಕತೆ ಬೆಳೆಯಿತು.

"ಟಿಕೇಟು ದೊರೆಯಲಿಲ್ಲವೇ" ನಾನು ಕೇಳಿದೆ. ಅವಳ ಸಿಟ್ಟು ಹೆಚ್ಚಾದಂತೆ ತೋರಿತು.

"ಟಿಕೇಟು ಮೊದಲೇ ಕೊಂಡುಕೊಂಡಿದ್ದೆವು; ಆದುದರಿಂದ ತಡವಾಗಿಯೆ ಹೊರಟಿವು. ನಾನು ಹೊರಡುವಾಗಲೇ ಇವರನ್ನು ಕೇಳಿದೆ: 'ಟಿಕೇಟು ಜೊತೆಗೆ ಇವೆಯಲ್ಲವೇ?' ಎಂದು. ಆದಕ್ಕೆ 'ನಾನೆಂದರೆ ಇಷ್ಟು ಮರೆಗುಳಿಯಂದು ತಿಳಿದಿರುತ್ತೀಯಾ?' ಎಂದು ನನ್ನನ್ನೇ ತಿರುಗಿ ಪ್ರಶ್ನಿಸಿ ಉಪಹಾಸದ ನಗೆ ಬೀರಿದರು. ಥೇಟರಿನ ಬಳಿ ಬಂದಾಗ, ಟಕೇಟಿಗೆಂದು ತಮ್ಮ ಕೋಟಿನ ಜೇಬಿನಲ್ಲಿ ಕೈ ಹಾಕಿದರು; ಕೋಟಿನ ಎಲ್ಲ ಜೇಬುಗಳನ್ನೂ ತಿರುವಿ ಹಾಕಿದಮೇಲೆ "ಓ, ಆಶ್ಚರ್ಯ! ಆಫೀಸಿಗೆ ಹೋಗುವ ನೇಳೆಯಲ್ಲಿ ಇದೇ ಕೋಟಿನ ಜೇಬಿನಲ್ಲಿ ಇಟ್ಟಿದ್ದೆ ನೋಡು! ಈಗ ಎಲ್ಲಿ ಮಾಯವಾದುವೋ ಏನೋ ಟಿಕೇಟು!" ಎಂದಾಗ, 'ಅವ್ಯಾ ಕಾಲು ಬಂದುವೋ ಏನೋ!' ಎಂದು ನಾನು ವ್ಯಂಗ್ಯವಾಗಿ ನುಡಿದೆ. ಅವರಿಗೆ ತಿಳಿಯದಂತೆ ನಾನೇ ಅವುಗಳನ್ನು ತೆಗೆದಿಟ್ಟಿಲ್ಲವೆಂಬುದರ ಬಗ್ಗೆ ನನ್ನನ್ನು ಮತ್ತೆ ಮತ್ತೆ ಕೇಳಿಯಾದ ಮೇಲೆ ನೆನಪಾಯಿತು ಮಹಾರಾಯರಿಗೆ: 'ತೆಗೆದಿಟ್ಟುದೇನೋ ನಿಜ! ಆದರೆ ಅದು ಮತ್ತೊಂದು ಕೋಟಿನ ಜೇಬಿನಲ್ಲಿ' ಎಂದು. ಸರಿ, ನೇಳೆ ಮೀರಿ ಹೋದುದರಿಂದ, ಬೇರೆ ಟಿಕೇಟು ದೊರೆಯದೆ ಹಾಗೆಯೇ ಹಿಂದಿರುಗಬೇಕಾಯಿತು.

"ನಮ್ಮಲ್ಲಿಯೂ ಇವರು ಹೀಗೆಯೇ!" ಉಷೆಯ ಮಾತು ಕೊನೆಗೊಳ್ಳುವಷ್ಟರಲ್ಲಿಯೇ ಪ್ರಮಿಳಾ ಆವೇಶದಿಂದ ನುಡಿದಳು: "ಬೇಕಾದಾಗ, ಒಂದಾದರೂ ವಸ್ತುವು ಜೇಬಿನಲ್ಲಿ ದೊರೆತಿದೆಯೇ ಇವರಿಗೆ! ಕೈಗೆ ದೊರೆತದ್ದನ್ನೆಲ್ಲ ಜೇಬಿಗೆ ಸೇರಿಸುತ್ತಾರೆ. ಆದ್ದರಿಂದಲೇ ನೇಳೆಗೆ ಒಂದೂ ದೊರೆಯುವುದಿಲ್ಲ! ಇವರ ಕೋಟಿನಲ್ಲಿ ಸರ್ವ ವಸ್ತುಗಳ ಸಂಗ್ರಹ. ಹಣಿಗೆ, ಸಿಗರೇಟಿನ ತೆರವಾದ ಪಾಕೇಟುಗಳು, ಕಡ್ಡಿಯ ಪೆಟ್ಟಿಗೆ, ೧೦-೧೫ ತ್ತಿ ಅಣೆಯ ಚಿಲ್ಲರೆ, ಎರಡು ವರ್ಷಗಳ ಹಿಂದೆ ನಾವಿರುತ್ತಿದ್ದ ಮನೆಯ ಬೀಗದ ಕೈ, ಎಂಟು ದಿನಗಳ ಹಿಂದೆಯೇ ನಾನು ಅಂಚೆಗೆ ಸೇರಿಸಲೆಂದು ಕೊಟ್ಟ ಓಲೆ—ಎಲ್ಲವುಗಳಿಗೂ ಇವರ ಕೋಟಿನ ಕಿಸೆಯೇ ಆಶ್ರಯಸ್ಥಾನ!"

ಪ್ರಮಿಳೆಯ ಪತಿಯ ಈ ವರ್ಣನೆಯನ್ನು ಕೇಳಿ ನನಗೂ 'ನಮ್ಮವರ' ನೆನಪಾಯಿತು. ಇನ್ನೂ ಸಂಭಾಷಣೆಗೆ ಬಣ್ಣ ಏರುವ ಲಕ್ಷಣಗಳು ತೋರಹತ್ತಿದುವು. ಹೆಂಗುಸರಿಗೆಲ್ಲರಿಗೂ ಮೆಚ್ಚಿನ ವಿಷಯ-ಪತಿಗಳ ಟೀಕೆ- ದೊರೆತನೇಲೆ, ಸಂಭಾಷಣೆಗೆ ಬಣ್ಣ ವೇರಲು ಇನ್ನೇನು ಬೇರೆ ಬೇಕು?

ನಾನು ನನ್ನ ಅನುಭವವನ್ನು ಹೇಳತೊಡಗಿದೆ: "ನಮ್ಮಲ್ಲಿಯ ಸಂಗತಿಯಂತೂ ಇನ್ನೂ ಕೇಳುವ ಹಾಗಿದೆ. ಇವರಿಗೆ ಐದ್ನೈದು ನಿಮಿಷಕ್ಕೆ ಬೇಕಾಗುವ ಸಿಗರೇಟು, ಕಡ್ಡಿಪೆಟ್ಟಿಗೆಗಳಾದರೂ ನೇಳೆಗೆ ದೊರೆಯಬೇಕೆಂದು. ನಾನೊಂದ Smoking set ನ್ನು ತಂದು, ಅವರಿಗೆ ಸಹಜವಾಗಿ ದೊರೆಯುವಂತೆ ಟೀಬಲ್ಲಿನ ನೇಲೆಯೇ ಇಟ್ಟೆ. ಆ setನಲ್ಲಿ ಬೂದಿ, ಕಡ್ಡಿಪೆಟ್ಟಿಗೆ, ಸಿಗರೇಟು ಮುಂತಾದುವೆಲ್ಲವನ್ನೂ ಇಡುವ ವ್ಯವಸ್ಥೆಯಿದೆ. ಆದರೇನು! ಅದು ಕುಳಿತಿತು ಟೀಬಲ್ಲಿನ ಮೇಲೆಯೇ! ಮನೆಯಲ್ಲಿ ಅಲ್ಲಲ್ಲಿ ಬಿದ್ದ ಬೂದಿ, ತೆರವಾದ ಸಿಗರೇಟ್ ಪೆಟ್ಟಿಗೆಗಳು, ಸೇದಿ ಒಗೆದ ಸಿಗರೇಟಿನ ಸಣ್ಣ ಸಣ್ಣ ತುಣುಕು—ಇವುಗಳನ್ನು ತೆಗೆದೊಗೆಯುವುದರಲ್ಲಿ ವೆಚ್ಚವಾಗುತ್ತಿದ್ದ ನನ್ನ ನೇಳೆಯಲ್ಲಿ ಏನೂ ಉಳಿತಾಯವಾಗಲಿಲ್ಲ. ಏನೆನ್ನಬೇಕು ಇವರ....."

ನಾನು ಮಾತನಾಡುತ್ತಿರುವಾಗಲೇ ಸುಶೀಲಾ, ನನ್ನನ್ನೂ ಸುಮ್ಮನಿರಿಸಿ ಗಡಿಬಿಡಿಯಿಂದ ಹೇಳತೊಡಗಿದಳು: "ನಮ್ಮ ಮನೆಯಲ್ಲಿಯೂ ಇದೇ ಕತೆ! ಇವರಿಗೆ ತಾಸು ಎರಡು ತಾಸಿಗೆ ಮುಕ್ಕಲಿಕ್ಕೆ ಅಡಿಕೆ ಬೇಕು. ಆದರೆ ಅಡಿಕೆಯ ಚಬ್ಬಿಯ ಮುಚ್ಚಳವನ್ನು ತಪ್ಪಿಯಾದರೂ ಹಾಕಿದ್ದಾರೆಯೇ? ಇವರ ಹಿಂದಿನಿಂದ ಚಬ್ಬಿಯ ಮುಚ್ಚಳವನ್ನು ನಾನೇ ಹಾಕಿಡಬೇಕು. ಸ್ನಾನಮಾಡುವಾಗ ಇವರು ಹಾಗೆಯೇ ತೆರೆದಿಟ್ಟ ಸಾಬೂನಿನ ಪೆಟ್ಟಿಗೆಯನ್ನೂ ನಾನೇ ಎತ್ತಿಡಬೇಕು. ಹೊರಗೆ

* ನೋವ್ಹೆ. ೧೯೫೮ರ 'Reader's Digest' ನಲ್ಲಿಯ 'Trouble with men' ಎಂಬ ಬರಹದ ಅನುವಾದವಿದು. —ಲೇ.

ಹೋಗುವಾಗ ಇವರು ಬದಲಿಸಿದ ವೇಷವನ್ನು ತೆಗೆದಿಡಲಿಕ್ಕೂ ನಾವೇ ಮುಂದಾಗಬೇಕು. ನಾವಿಲ್ಲದಿದ್ದರೆ ಇವರ ಎಲ್ಲ ಕೆಲಸಗಳು ನಿಂತೇ ಬಿಡುತ್ತವೆ. ಕೋಟಿನ ಗುಂಡಿಯನ್ನು ಕೂಡ ನಾವೇ ಹೆಚ್ಚಿ ಕೊಡಬೇಕು!" ನಾನು ಮಾತುಗೂಡಿಸಿದೆ: "ನಾವಿಲ್ಲದಿದ್ದರೆ ಈ ಗಂಡಸರದು ಒಂದು ಕ್ಷಣಹೊತ್ತೂ ನಡೆಯುವುದಿಲ್ಲ. ಆದರೆ ನಮ್ಮ ಕೂಡ ಸಾದಾ ನಾಲ್ಕು ಮಾತುಗಳನ್ನಾಡಲು ಕೂಡ ಇವರಿಗೆ ಬೇಡವಾಗುತ್ತದೆ. ಇವರು ಮತ್ತಾವ ಅಪರಾಧವನ್ನು ಮಾಡಿದರೂ ನಾನು ಕ್ಷಮಿಸಬಹುದು; ಆದರೆ ಬೆಳಗ್ಗೆ ಚಹ ಕುಡಿಯುವ ವೇಳೆಗೆ ಇವರ ಕೈಯಲ್ಲಿಯ ವೃತ್ತಪತ್ರಗಳನ್ನು ಕಂಡು ನನ್ನ ತಲೆ ತಿರುಗುತ್ತದೆ. ಚಹ ಕುಡಿಯಲೆಂದು ಕರೆದಾಗ, ಮೊದಲು ಬೇಗನೆ ಬರುವುದಿಲ್ಲ. 'ಇದೊಂದು ಬರಹವನ್ನು ಸಂಪೂರ್ಣ ಓದಿ ಬರುತ್ತೇನೆ' ಅಥವಾ 'Patience' ಆಟ ಮುಗಿಸಿಬರುತ್ತೇನೆ–ಎಂದು ಹೇಳುತ್ತ ಅಲ್ಲಿಯೇ ಕೂಡುತ್ತಾರೆ. ಬಹಳ ಗಡಿಬಿಡಿ ಮಾಡಿದಾಗ ಬರುತ್ತಾರೆ, ಕೈಯಲ್ಲಿ ವೃತ್ತಪತ್ರವನ್ನು ಹಿಡಿದುಕೊಂಡು! 'ಚಹ ಇನ್ನಿಷ್ಟು ಬೇಕೆ?' ಎಂಬ ನನ್ನ ಪ್ರಶ್ನೆಗೆ ಉತ್ತರ ಕೊಡುವಷ್ಟು ಸಹ ಮೈಮೇಲೆ ಅರಿವು ಇರುವುದಿಲ್ಲ ಮಹಾರಾಯರಿಗೆ." ನಾನು ನಸುನಗುತ್ತಲೇ ಮಾತು ಮುಂದುವರಿಸಿದೆ: "ಬಾಹ್ಯ ಜಗತ್ತೆಲ್ಲ–ನನ್ನನ್ನು ಕೂಡ–ಮರೆತು ಬಿಡುವಷ್ಟು ಆ ಹಾಳು Times ನಲ್ಲಿ ಇರುತ್ತದೆಯಾದರೂ ಏನೋ! ಅವರನ್ನು ಮಾತನಾಡಿಸಲು ನಾನು ಅದೆಷ್ಟೋ ಯತ್ನಿಸುತ್ತೇನೆ: ಮೊದಲುದಿನ ರಾತ್ರಿ ಕಂಡ ಅದ್ಭುತಕನಸನ್ನು ರಸಭರಿತವಾಗಿ ಬಣ್ಣಿಸುತ್ತೇನೆ; ಅಥವಾ ಈ ದಿನ ಅಡಿಗೆಯಲ್ಲಿ ಯಾವ ಹೊಸ ಪದಾರ್ಥವನ್ನು ಮಾಡಬೇಕೆಂದು ಕೇಳುತ್ತೇನೆ; ಮೊದಲನೆಯ ದಿನವೇ ಬಂದ ಆವರ ಮೆಚ್ಚಿನ ಗೆಳೆಯನ ಪತ್ರದ ಬಗ್ಗೆಯೂ ಮಾತನಾಡಿ ನೋಡುತ್ತೇನೆ. ಆದರೆ ಎಲ್ಲವೂ ವ್ಯರ್ಥ! ಎನಾದರೂ ಉತ್ತರ ದೊರೆತರೆ, 'ಏ, ಈಗ ನನ್ನನ್ನು ಮಾತಾಡಿಸಬೇಡ ನೋಡು' ಎಂಬುದೊಂದೇ! 'Afro-Asian Conference ಯಶಸ್ವಿಯಾಗಬಹುದೋ ಮೂರನೆಯ ಯುದ್ಧವನ್ನು ತಪ್ಪಿಸುವುದು ಸಾಧ್ಯವಿದೆಯೇ, ಪಾಕಿಸ್ತಾನ ಹಿಂದುಸ್ತಾನ ನಡುವಿನ ಕ್ರಿಕೆಟ್ ಮ್ಯಾಚಿನಲ್ಲಿ ಹಿಂದುಸ್ತಾನಕ್ಕೆ ಅಪಯಶವೇಕೆ ಬಂದಿತು? ಮುಂತಾದ ಹಾಳು ಸಮಸ್ಯೆಗಳು ತಲೆಯಲ್ಲಿ ಸುಳಿದಾಡುತ್ತಿದ್ದಾಗ, ಅಡಿಗೆ ಏನು ಮಾಡಬೇಕೆಂಬ ನನ್ನ ಪ್ರಶ್ನೆಗೆ ಉತ್ತರವು ಹೇಗೆ ದೊರೆತೀತು? ಒಂದೆರಡು ಸಲ ಆ ಹಾಳು ವೃತ್ತಪತ್ರವನ್ನು, ಆವರು ಏಳುವ ಮೊದಲೇ ಬಚ್ಚಿಟ್ಟು ನೋಡಿದೆ. ಆದರೇನು? ಗಾಢನಿದ್ರೆಯಲ್ಲಿದ್ದಾಗಲೇ ನಾನು ಬಚ್ಚಿಟ್ಟ ಸ್ಥಳವನ್ನು ಹೇಗೆ ನೋಡಿದ್ದರೋ! ಅಡಿಗೆ ಮನೆಗೆ ಬರುವಾಗ, ಎಂದಿನಂತೆಯೇ ಕೈಯಲ್ಲಿ ವೃತ್ತಪತ್ರವನ್ನು ಹಿಡಿದುಕೊಂಡೇ ಬಂದರು!"

ಇಷ್ಟೊತ್ತು ಸುಮ್ಮನೆ ಕುಳಿತ ಕಮಲೆಗೆ ಉತ್ಸಾಹ ಬಂದಿತು: "ನಾವು ಮಾತಾಡಿದುದನ್ನೂ, ಹೇಳಿದುದನ್ನೂ ದುರ್ಲಕ್ಷಿಸುವುದಂತೂ ಇವರ ಸ್ವಭಾವವೇ ಆಗಿಬಿಟ್ಟಿದೆ. ಮಳೆ ಬರುತ್ತಿದ್ದಾಗ ಕೊಡೆ ಒಯ್ಯಲಿಕ್ಕೆ ಹೇಳಿದರೆ, ಬೇಕೆಂತೆಯೇ ಏನೋ–ತಕ್ಕೊಳ್ಳದೇ ಹೋಗುತ್ತಾನೆ. ಆ ಮೇಲೆ ಮಧ್ಯರಾತ್ರಿಯಲ್ಲಿ "ಗಂಟಲು ನೊಯ್ಯುತ್ತಿದೆ", "ಜೆನ್ನು ಶೂಲಿಹಾಕಿದೆ?" "ಕಾಫೀ ಮಾಡಿ ಕೊಡು?" "ತಲೆ ಒತ್ತು" ಎಂದು ಹೇಳಿ, ನಮ್ಮನ್ನು ಮಧ್ಯರಾತ್ರಿಯಲ್ಲಿ ಎಚ್ಚರಿಸಲು ಮಾತ್ರ ಸಿದ್ಧರಿರುತ್ತಾರೆ."

ಈ ರೀತಿ ನಮ್ಮ ಸಂಭಾಷಣೆ ಬೆಳೆಯುತ್ತ ಹೋಗಿ, ಗಂಡಸರು ತಮ್ಮನ್ನು ತಾವೇ ಪರಿಪೂರ್ಣರೆಂದು ತಿಳಿಯುತ್ತಿದ್ದರೂ, ಅವರಲ್ಲಿ ಸುಧಾರಿಸತಕ್ಕದ್ದು ಇನ್ನೂ ಬಹಳಷ್ಟಿದೆಯೆಂಬುದನ್ನು ಎಲ್ಲರೂ ಒಪ್ಪಿದರು.

"ಅವರಿಗೆ ಹೆಂಗುಸರ ಅರ್ಥಶಾಸ್ತ್ರ ಕೂಡ ತಿಳಿಯುವುದಿಲ್ಲ" ಒಬ್ಬ ಮಹಿಳೆ ತನ್ನ ಅನುಭವವನ್ನು ಹೇಳಿದಳು: "ಮೊನ್ನೆ ಕ್ರಿಸ್‌ಮಸ್ ರಜೆಯಲ್ಲಿ ಇಲ್ಲಿಂದ ಆಗ್ರಾಕ್ಕೆ ಟ್ರಿಪ್ ಹೊರಡಿಸಬೇಕೆಂಬ ಯೋಚನೆಯು ನಮ್ಮಿಬ್ಬರಿದುರು ಬಂದಾಗ, ಈ ಪ್ರವಾಸಕ್ಕೆ ಎಷ್ಟು ವೆಚ್ಚವಾಗಬಹುದೆಂದು ಎಣಿಕೆ ಹಾಕತೊಡಗಿದಾಗ, ನಾನು ಅವರಿಗೆ ಹೇಳಿದೆ: 'ಬೆಂಗಳೂರೀ ರೇಶಿಮೆಯ ಪತ್ತಲ ಖರೀದಿಸಬೇಕೆಂದು ಮಾಡಿದ್ದೇವಲ್ಲ! ಅದರಷ್ಟೇ ವೆಚ್ಚ ಬರಬಹುದು; ಪತ್ತಲವನ್ನು ಕೊಂಡುಕೊಳ್ಳುವುದನ್ನು ಬಿಟ್ಟರೆ ಆಯಿತು!' ಎಂದೆ.

ಆಗ ಅವರು 'ಆದರೆ ಈಗ ಪತ್ತಲವನ್ನು ಕೊಳ್ಳುವುದು ಸಹ ಸಾಧ್ಯವಿಲ್ಲದ್ದರಿಂದ, trip ನ ಯೋಚನೆ ಬಿಟ್ಟುಬಿಡೋಣ' ಎಂದರು. ಆಗ ನಾನು, 'ಒಳ್ಳೆಯದು, ಹಾಗಾದರೆ ಮನೆಯಲ್ಲಿಯೇ ಇದ್ದು Furniture ಮುಂತಾದ್ದನ್ನು ಖರೀದಿಸಿ, ಮನೆಯನ್ನು ಶೃಂಗರಿಸೋಣ' ಎಂದು ಹೇಳಿದಾಗ 'ಅದಕ್ಕೆಲ್ಲಿಂದ ಹಣ ತರುತ್ತೀ?' ಎಂದು ಕೇಳುತ್ತಾರೆ. 'ರಜೆಯಲ್ಲಿ ಪ್ರವಾಸಕ್ಕೆ ಹೋಗದಿದ್ದುದರಿಂದ ಉಳಿತಾಯವಾದ ಹಣದಿಂದ' ಎಂದು ನಾನು ಎಷ್ಟು ಸಲ ಸಾರಿ ಸಾರಿ ಹೇಳಿದರೂ, ಈ ಸಾದಾ ಅರ್ಥಶಾಸ್ತ್ರವೇನೂ ಅವರ ತಲೆಯಲ್ಲಿ ಸೇರಲಿಲ್ಲ."

ಮತ್ತೊಬ್ಬ ಮಹಿಳೆ ಹೇಳಿದಳು: 'ನಮ್ಮಲ್ಲಿ ಇವರಿಗೆ ತಾವು ಮೊದ್ದು ಯಂತ್ರಜ್ಞರೆಂಬ ಜಂಭವಿದೆ, ಮನೆಯಲ್ಲಿಂದು ಎಷ್ಟೋ ಗಡಿಯಾರಗಳನ್ನು ಕೆಡಿಸಿ ಮೂಲೆಯಲ್ಲಿ ಒಗೆದಿದ್ದಾರೆ. ಅನೇಕ ಸಲ ಸ್ಟೋವ್ ನೆಬ್ಬಗೆ ಮಾಡಲು ಪ್ರಯತ್ನಿಸಿ, ಅದನ್ನು ಕೆಡಿಸಿ, ಕೊನೆಗೆ ರಿಪೇರಿ ಮಾಡುವವನ ಕಡೆಗೇ ಕೊಟ್ಟು ಇಮ್ಮಡಿ ಹಣ ಬಡಿಯುತ್ತಾರೆ. ಮೊನ್ನೆಯಂತೂ ಬಹಳೇ ಮೋಜು ಆಯಿತು. ರಿಪೇರಿಯವನಿಂದಲೂ ಸ್ಟೋವ್ ನೆಬ್ಬಗಾಗಲೊಲ್ಲದು. ಆಗ ಅಲ್ಲಿಯೇ ಬಿದ್ದ ಒಂದು ಮುಚ್ಚಳದಂತೆ ತೋರುತ್ತಿದ್ದ ಗೋಲಾಕಾರದ ವಸ್ತುವೊಂದನ್ನು ಕಂಡು ನಾನು ಕೇಳಿದೆ: 'ಇದನ್ನೆಲ್ಲಿಡುವುದು ನೋಡಿರಿ' ಎಂದು. 'ಅದೇನು, Stove ಎಂಬ ಶಬ್ದದಲ್ಲಿರುವ O ಅದು' ಎಂದರು.

ನಾನು ಸಹಜವಾಗಿ ಆದನ್ನು ತೆರವಿದ್ದ ಸ್ಥಳದಲ್ಲಿ ಇಟ್ಟು ಒತ್ತಿದೆ ಕೂಡಲೆ ಸ್ಟೋವ್ ಪ್ರಾರಂಭವಾಯಿತು. ಏನೆನ್ನಬೇಕು ಇಂಥವರಿಗೆ?"

ಮನೆಗೆ ಬಂದು ನಾನು ಇವರಿಗೆ ನಮ್ಮ ಸಂಭಾಷಣೆಯ ಬಗ್ಗೆ ಹೇಳಿದಾಗ, ಇವರು ಕುಚೇಷ್ಟೆಯ ದನಿಯಲ್ಲಿ ಎಂದರು:

"ನೀವು ಹೀಗೆ ವರ್ತಿಸಬೇಕು, ಹೀಗೆ ಮಾಡಬೇಕು. ಹಾಗೆ ಮಾಡಬಾರದು—ಎಂಬ ಉಪದೇಶಪರ ವ್ಯಾಖ್ಯಾನಗಳು ಬರಿ ನನ್ನ ಪಾಲಿಗೇ ಬಂದಿಲ್ಲವೆನ್ನು. ಅಂತೂ ಎಲ್ಲ ಗಂಡಸರು ನನ್ನಂತೆಯೇ ಹೆಂಗಸರನ್ನು ಮದುವೆಯಾದ ಫಲವನ್ನು ಉಣ್ಣುತ್ತಿದ್ದಾರೆ!"

"ದಿನಾಲು ಸಾವಿರ ಉಪನ್ಯಾಸಗಳನ್ನು ಕೊಟ್ಟರೂ ನೀವು ಮಾತ್ರ ಎಳ್ಳಷ್ಟೂ ಸುಧಾರಿಸುವುದಿಲ್ಲವಲ್ಲ!" ನಾನು ಕೃತಕ-ಕೋಪದಿಂದ ಮಾತನಾಡಿದೆ.

"ಅದಕ್ಕೆ ಕಾರಣವಿದೆ ಮಿಸ್ಟರ್," ಇವರು ನನ್ನನ್ನು ಸಮಾಧಾನಗೊಳಿಸಲೆಂದು ಎಂದರು: "ನಾವು ಗಂಡಸರು ದಿನದಲ್ಲಿಯ ಬಹಳ ವೇಳೆಯನ್ನು ಮನೆಯ ಹೊರಗೇ ಕಳೆಯುತ್ತೇವೆ. ನಮಗೆ ನಮ್ಮ ಹೊರಗಿನ ಕೆಲಸದ ಅನೇಕ ವ್ಯಾಪಗಳಿರುತ್ತವೆ. ಆದುದರಿಂದ ಮನೆಯ ಸಂಗತಿಗಳೆಡೆಗೆ ದುರ್ಲಕ್ಷ್ಯವಾಗುವುದು ಸಹಜವೇ ಇದೆ."

ನಾನು ಮಾತು ಮುಗಿಸಿದೆ: "ನೀವು ಹೇಗೆಯೇ ಇದ್ದರೂ ಮದುವೆ ಮಾಡಿಕೊಂಡ ಒಪ್ಪಿಗೆ ನಿಮ್ಮ ಕೂಡ ನಾವು ನಡೆದುಕೊಂಡು ಹೋಗಲೇ ಬೇಕು!"

ನಾನು ಮನಸ್ಸಿನಲ್ಲಿ ಎಂದುಕೊಂಡೆ: "ಹೌದು, 'ಇವರು' ಇರದಿದ್ದರೆ 'ಇವಳು' ಎಲ್ಲಿ?"

ಅರಳುಮಲ್ಲಿಗೆಗೆ

ಶ್ರೀ. ಸಿ. ಎಂ. ದೇವೇಂದ್ರನಾಯಕ, ಧಾರವಾಡ

●

ಹದುಳದಲಿ ತುಳುಕಿಬಿಡೆ
ಪ್ರಮದೆಯರ ಎದೆಮುಗುಳಿ,
ಹದನದಲಿ ಬಿರಿಯಬಿಡೆ
ಸುಮತಿಯರ ಕಣ್ಮಣಿಯೆ,
ನಿನ್ನೆದೆಯ ಪಕ್ವತೆಗೆ
ಮನಸೋಲದವರಾರೆ?

ಘಮಘಮಿಸಿ ಅರಳಿಬಿಡೆ
ಚೆಲುವೆಯರ ಎದೆಯೊಲವೆ,
ನಳನಳಿಸಿ ಬಳುಕಿಬಿಡೆ
ಮುಗುದೆಯರ ಮುಡಿಹೂವೆ
ಭಾವುಕದ ಹೃದಯಕ್ಕೆ
ತಲೆದೂಗದವರಾರೆ?

ತಂಗಾಳಿ ತೂರ್ಣವರಿ,
ಭೃಂಗಾಳಿ ಝೇಂಕಾರ
ತಂತಾನೆ ಸೋಬಾನ
ಹೇಳುತಿವೆ ಕಣ್ಣೆರೆಯೆ,
ಆಂತರ್ಯದೊಲವಿಂಗೆ
ಓಗೊಡದಲಾರಿಹರೆ?

ಹೊಂಬಣ್ಣ ಬೆಡಗಿನಲಿ
ಸೌಂದರ್ಯ ಮುಗ್ಧತೆಯ
ಸ್ನಿಗ್ಧದೀ ಸೌಮ್ಯತೆಯು
ಸಾಕೆನ್ನು ಮಾನಿನಿಯೆ
ದೈವಯೋಗದ ನುಡಿಗೆ
ತಲೆಬಾಗದವರಾರೆ?

ಮೊನೆಸೂಜಿ ನೀ ಜಾಜಿ
ಓ ಮದನ ಮಲ್ಲಿಗೆಯೆ,
ಎನಿತೊಂದು ಹೆಸರಿಹವೆ
ಓ ಕವಿಯ ರಸವತಿಯೆ,
ದೇವನೊಲುಮೆಗೆ ಜಗದಿ
ಎದುರು ಬರುವವರಾರೆ?

ನೋಡಲಾರೆನು ನಾನು
ನಿನ್ನದೀ ಮೌನತೆಯ;
ನನ್ನೊಲುಮೆ ನಿನಗಿಹುದು
ಶಮುಪುಳುಕಿ ಅರಳಿಬಿಡೆ
ಕಾವ್ಯಸೌರಭವು ಮನೆ,
ನಿನ್ನ ಸಮರಾರಿಹರು?

ಮಿಸ್ಟರ್ ಮೆಹತಾರ "ರಹದಾರಿ"

(ಒಂದು ಜೀವನಚಿತ್ರ *

ಶ್ರೀ. ಕೆ. ಗುರುರಾವ್ ಬಿ. ಎ ಹೈದರಾಬಾದ್

(ಮಿಸ್ಟರ್ ಮೆಹತಾ, ನಿವೃತ್ತಿ ಹೊಂದಿದ I. C. S. ಅಧಿಕಾರಿಗಳು. ಊಟದ ಟೇಬಲಿನ ಹತ್ತಿರ ಕುಳಿತಿದ್ದಾರೆ)

ಶ್ರೀಮತಿ:— ಇಗೋ, ಸರ್ಕಾರದ ಆಜ್ಞಾಪತ್ರ!

ಮೆಹತಾ:—ಏನು? ಆಜ್ಞಾಪತ್ರ ಬಂದಿತೆ? ಎಂಥಾ ಆಶ್ಚರ್ಯ! ಎಷ್ಟು ದಿನಗಳಾದುವು ನಾವು ಅರ್ಜಿಯನ್ನು ಕಳಿಸಿ? ಆಬ್ಬ! ತಿಂಗಳ ಮೇಲಾಯಿತು. ಹಳೆಯ ಬ್ರಿಟಿಷ್ ಅಧಿಕಾರಿವರ್ಗವೆ ಜವಾಬ್‌ದಾರಿಯುಕ್ತವಾಗಿತ್ತು. ನಿನ್ನೆ ಮೊನ್ನೆ ತಲೆ ಎತ್ತಿದ್ದ ಈ ಜನರಿಗೆ, ಯಾವಾಗಲೂ ಶಾಶ್ವತವಾದ ಸ್ವಾರ್ಥದ ಆಲೋಚನೆಯಲ್ಲಿ, ಬೇರೆ ಕೆಲಸ ಮಾಡಲಿಕ್ಕೆ ಸಮಯವೆಲ್ಲಿ ಪಾಪ?

ಶ್ರೀ:—ಅಲ್ಲದೆ, ಸರ್ಕಾರದವರು ಒಂದೇ ಒಂದು "ಯುನಿಟ್" ಗೆ ಮಾತ್ರ ಅಪ್ಪಣೆ ಕೊಟ್ಟಿದ್ದಾರಂತೆ.

ಮೇ:— ಏನು? ನಾವು ನಾಲ್ಕು "ಯುನಿಟ್" ಗಳಿಗೆ ಕೇಳಿಕೊಂಡಿರಲಿಲ್ಲವೇ?

ಶ್ರೀ:—(ಕಾಗದವನ್ನು ಓದುವಳು) "ಸರ್ಕಾರವು ಮನವಿಪತ್ರವನ್ನು ಸೂಕ್ಷ್ಮವಾಗಿ ಅವಲೋಕಿಸಿದೆ. ಪತ್ರದಲ್ಲಿ ಸೂಚಿಸಿದ ವಿಷಯಗಳು, ಎಂದರೆ ಅರ್ಜಿದಾರನು ಪಾನಪ್ರತಿಬಂಧಕ ಆಜ್ಞೆಯು ಜಾರಿಗೆ ಬರುವುದಕ್ಕೆ ಪೂರ್ವದಲ್ಲಿಯೆ ಮಾದಕ ಪಾನೀಯದ ಅಭ್ಯಾಸದಲ್ಲಿದ್ದು, ಸದ್ಯದ ಆರೋಗ್ಯದೃಷ್ಟಿಯಿಂದ ಅದನ್ನು ಬಿಡುವುದು ಶಕ್ಯವಿಲ್ಲವೆಂದು ಸೂಚಿಸಿದ ಪ್ರಯುಕ್ತ, ಅರ್ಜದಾರನಿಗೆ ಸರ್ಕಾರವು ಮಾದಕ ಸೇವನೆಗೆ ಅಪ್ಪಣೆಯನ್ನು ಕೊಡಲು ಸಂತೋಷಿಸುತ್ತದೆ."

ಮೇ:— ಅವರ ತಲೆ! ಸರ್ಕಾರವಂತೆ! ನಾನು ಎಷ್ಟು ಮತ್ತು ಏನು ಉಣ್ಣಬೇಕೆಂದು ಮತ್ತು ಕುಡಿಯಬೇಕೆಂದು ಹೇಳಲು ಅವರಾರು? ಮೋಸಗಾರರು. ದಬ್ಬಾಳಿಕೆ, ತುಂಬಾ ದಬ್ಬಾಳಿಕೆ! (ಎಂದು ಹೇಳುತ್ತ ಕಪ್ಪನ್ನು ಕೋಪದಿಂದ ಬಿಸಾಡುವನು.)

ಶ್ರೀ:— ತಾಳಿ, ತಾಳಿ! ನೀವು ಹೀಗೆಲ್ಲ ರೇಗಾಡಕೂಡದೆಂದು ಡಾಕ್ಟರರು ಹೇಳಿರಲಿಲ್ಲವೆ?

ಮೇ:— ಡಾಕ್ಟರ್? ಅವನದೂ ಒಂದು ದಬ್ಬಾಳಿಕೆ! ಅವನು ಇನ್ನು ನಮ್ಮ ಮನೆಗೆ ಬಂದು ನಮ್ಮನ್ನು ಅಂಜಿಸುವುದೇ ಬೇಡ. ವಿನಾ ಕಾರಣವಾಗಿ ಭಯವನ್ನು ಹುಟ್ಟಿಸುತ್ತಾನೆ, ಈ ಡಾಕ್ಟರುಗಳು....

ಶ್ರೀ:— ವಿನಾಕಾರಣ ಭಯಪಡಿಸುವುದಿಲ್ಲ. ನಾವು ಎಚ್ಚರಿಕೆಯಿಂದ ಇರಬೇಕು. ಸ್ವಲ್ಪ ಹೆಚ್ಚುಕಡಿಮೆಯಾದರೆ ವಿಪರೀತವಾಗ ಬಹುದು. ನಿಮ್ಮ ಪೆನ್‌ಶನ್‌ನಿಂದಲ್ಲನೇ ನಮ್ಮ ಕುಟುಂಬವು ನಡೆಯುವುದು!

ಸುಚೇತಾ:— (ಮಹತಾರ ಮಗಳ) ಅಮ್ಮಾ, ಯಾವಾಗಲೂ ಈ ಉಪದೇಶನದ ನುಡಿಗಳನ್ನು ನುಡಿಯಬೇಡ.

ಮೇ: - ಹರಿ ಹೇಗಿದ್ದಾನೆ? ಆಫೀಸಿನ ಕೆಲಸವು ಸರಿಯಾಗಿ ನಡೆದಿದೆಯಲ್ಲವೇ? (ಹರಿದಾಸ ದೇಸಾಯಿ, ಸುಚೇತಳ ಗಂಡ, I. A. S. ಅಧಿಕಾರಿ)

ಶ್ರೀ:— ಹರಿಯ ಆಫೀಸಿನ ಕೆಲಸವು ಚೆನ್ನಾಗಿ ನಡೆಯುತ್ತಿದೆ. ಅವನಿಗೆ ಸಾರ್ವಜನಿಕ ಸಂಪರ್ಕ ಖಾತೆಯನ್ನು ಕೊಟ್ಟಿದ್ದಾರೆ. ಏನೇ ಆಗಲಿ, ಹುಡುಗನು ಮುಂದಕ್ಕೆ ಬರಹತ್ತಿದ್ದಾನೆ.

ಮೇ:— ಸಾರ್ವಜನಿಕ ಸಂಪರ್ಕಖಾತೆ! ಈಗಿನ ಮಂತ್ರಿಗಳು ತಮ್ಮ ನಂಟರಿಗಾಗಿ ಇನ್ನೂ ಯಾವ ಯಾವ ಖಾತೆಗಳನ್ನು ತೆಗೆಯುತ್ತಾರೆಯೋ?

ಶ್ರೀ:— ಆದರೆ, ಹರಿ ನಿಮ್ಮ ಅಳಿಯನಲ್ಲ.....ಅವರಿಗಾವ ನಂಟಸ್ತಿಕೆ?

ಮೇ:— ಹೌದು; ನಿಜ; ಏನೇ ಆಗಲಿ ಹರಿಯನ್ನು ಸ್ವಲ್ಪ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಅವನು ಇತ್ತೀಚೆಗೆ ಹೆಚ್ಚಿನ ದುಂದುಗಾರಿಕೆಯನ್ನು ಪ್ರಾರಂಭಿಸಿದ್ದಾನೆಂದು ತಿಳಿದುಬಂದಿದೆ ಅವನು ಮಾದಕಪದಾರ್ಥಗಳನ್ನು ಸೇವಿಸದ ಹಾಗೇ ಸುಚೇತಾ ನೋಡಿಕೊಳ್ಳಬೇಕು.

ಸು: – ಅವರು ಗೌರವನೀಯರಾದ ಅತಿಥಿಗಳ ಸಂಗಡ ಕಲೆತಿರಬೇಕು. ಅತಿಥಿಗಳನ್ನು ಸಂತುಷ್ಟಗೊಳಿಸದೆ, ಸಾರ್ವಜನಿಕ ಸಂಪರ್ಕಖಾತೆಯಲ್ಲಿ ಇರುವುದು ಹೇಗೆ ಸಾಧ್ಯ? ಆ ಗೌರವನೀಯರಾದ ಅತಿಥಿಗಳು ಮಾದಕಪದಾರ್ಥಗಳ ಸೇವನೆಯ ವಿನಾ ಸಂತುಷ್ಟಿಗೊಳ್ಳಲಾರರು.

ಮೇ:— ಈ ಎಲ್ಲಾ ಪಾರ್ಟಿಗಳಿಗೆ ಸರ್ಕಾರವು ಪ್ರತ್ಯೇಕ ಹಣವನ್ನೇನಾದರೂ ಕೊಡುತ್ತಿದೆಯೊ?

ಸು:— ಸರ್ಕಾರವು ಬೇರೆ ಹಣವನ್ನು ಕೊಡುವುದಿಲ್ಲ; ಆದರೆ ಅಧಿಕಾರಿಗಳು ಒಳ್ಳೆಯ ಕೆಲಸವನ್ನು ಮಾಡಿ ತೋರಿಸಬೇಕು. ಈ ಬಗೆಯ ಪಾರ್ಟಿಗಳು ಇಲ್ಲದಿದ್ದರೆ, ಅಧಿಕಾರಿಯು ಜನಪ್ರಿಯನಾಗುವ ಬಗೆ ಹೇಗೆ?

* ಶ್ರೀಮಾನ್ A. ರಾಜಗೋಪಾಲಾಚಾರ್ಯರ ಒಂದು ಬರೆಹದ ಅನುವಾದ. ಲೇ.

ಮೇ:— ಇದೇ ನಿಮ್ಮ ರಾಷ್ಟ್ರೀಯ ಸರಕಾರವು ಮಾಡುತ್ತಿರುವ ಕೆಲಸ. ಹೆಚ್ಚಿನ ಸಂಬಳ ಕೊಡುವುದಿಲ್ಲ; ಆದರೆ ಕೆಲಸವನ್ನು ಮಾತ್ರ ಉತ್ತಮವಾಗಿ, ದೇಶಭಕ್ತರ ಹಾಗೆ ಮಾಡಿ ತೋರಿಸಬೇಕು. ದೇಶಭಕ್ತರಂತೆ! ನೋಪ!

ಶ್ರೀ:— ತಂದೆ-ತಾತಂದಿರೇ ಸೆರೆಯನ್ನು ಕುಡಿಯುತ್ತಿರುವಾಗ ಮಕ್ಕಳನ್ನು ಆದರಿಂದ ದೂರವಿಡುವುದು ಶಕ್ಯವಾಗುತ್ತಿದೆಯೊ?

ಮೇ:— ನನಗೆ ನಿನ್ನ ಉಪದೇಶದ ಅವಶ್ಯಕತೆಯಿಲ್ಲ. ಇನ್ನು ಮುಂದೆ ಮಕ್ಕಳು ಸೆರೆಯನ್ನು ಮುಟ್ಟಕೂಡದ ಹಾಗೆ ನೋಡಿಕೊಳ್ಳಬೇಕು.

ಶ್ರೀ:— ಏನೇ ಆಗಲಿ, ಸರಕಾರದವರು ಪಾನನಿರೋಧದಿಂದ ಸೆರೆಯನ್ನು ಸಿಗದ ಹಾಗೆ ಮಾಡಿ, ಉತ್ತಮ ಕೆಲಸವನ್ನು ಮಾಡುತ್ತಿದ್ದಾರೆ.

ಮೇ:— ಇದು ಮಾತ್ರ ಒಪ್ಪಿಕೊಳ್ಳಬಹುದಾದ ವಿಚಾರ. ನೀನು ಯಾವಾಗಲೂ ವಾದದಲ್ಲಿ ಚತುರಳಾಗಿರುತ್ತಿ. ಆಬರಲಿ, ನಿನ್ನೆ ಮೊನ್ನೆ ತಲೆ ಎತ್ತಿದ ಈ ದೇಶದ ನಾಯಕರು, ಆಹಾರ, ಪಾನೀಯದ ವಿಷಯದಲ್ಲಿ ದಬ್ಬಾಳಿಕೆಯನ್ನು ತೋರುವುದು ಸರಿಕಾಣುವುದಿಲ್ಲ. ಇಷ್ಟು ನಿರ್ಬಂಧ ಮಾಡುವುದಕ್ಕಿಂತ ಕಮ್ಯುನಿಸ್ಟರಾಗಿದ್ದರೆ ಉತ್ತಮವಿತ್ತು. ಆಗ ನಾನೂ ಅವರಿಗೆ ಸ್ವಾಗತವನ್ನು ಕೋರುತ್ತಿದ್ದೆ.

ಶ್ರೀ:— ಇನ್ನು ಹೆಚ್ಚಿಗೆ ಮಾತನ್ನು ಆಡಲಾರೆ. ನಿಮ್ಮ ಕೋಪವು ಹೆಚ್ಚಾಗಹತ್ತಿದೆ. ಸದ್ಯ ಹರಿಯನ್ನು ಸೆರೆಯ ಗುಲಾಮ. ನಾಗದಂತೆ ಮಾಡುವುದಕ್ಕೆ ಏನನ್ನು ಮಾಡಬೇಕು ಯೋಚಿಸಿ!

ಮೇ:— ನನಗೆ ತಿಳಿಯದು. ಸುಚೇತಾ ಈ ವಿಷಯವನ್ನು ನೋಡಿಕೊಳ್ಳಬೇಕು. ಅವಳು ಅವನ ಹೆಂಡತಿಯಲ್ಲವೇ?

(ಹರಿವಾಸ ದೇಸಾಯಿ ಕೈಯಲ್ಲಿ ಪತ್ರಿಕೆಯನ್ನು ಹಿಡಿದುಕೊಂಡು ಪ್ರವೇಶಿಸುತ್ತಾನೆ.)

ಹರಿ:— ನೋಡಿ! ಆಂಧ್ರದಲ್ಲಿ ಪಾನಪ್ರತಿಬಂಧಕ ವಿರೋಧವಾಗಿ ಬಹುಮತ ದೊರೆತಿದೆ. ಬಹಳ ಉತ್ತಮ ಕೆಲಸ. ತುಂಬಾ ಸಂತೋಷದ ಸಂಗತಿ!

ಮೇ:— ಏಕೆ? ಸಂತೋಷದ ಸಂಗತಿ ಹೇಗೆ?

ಹ:— ಯಾವುದೇ ಸಂಗತಿಯಾಗಲಿ, ಬಲಾತ್ಕಾರದಿಂದ ಜಾರಿಯಲ್ಲಿ ತರುವುದು ಹುಚ್ಚುತನ. ಈ ಹುಚ್ಚುತನವು ಎಷ್ಟು ತೀವ್ರದಲ್ಲಿ ತಿದ್ದಿಕೊಳ್ಳಲಾಗುವುದೋ ಅಷ್ಟೇ ಉತ್ತಮ. ಆಂಧ್ರದಲ್ಲಿ ತಿದ್ದಿಕೊಂಡಿದ್ದಾರೆಂಬುದನ್ನು ಕೇಳಲು ತುಂಬಾ ಸಂತೋಷವಾಗುತ್ತದೆ.

ಮೇ:— ತಪ್ಪು ಹರಿ. ಬಲಾತ್ಕಾರ ಯಾವುದು? ರೈತರಿಂದ ಜೂಕಂದಾಯವನ್ನು ವಸೂಲ್ ಮಾಡುವುದು ಬಲಾತ್ಕಾರವೇ? ಪಾನಪ್ರತಿಬಂಧ ಬಹಳ ಉತ್ತಮವಾದ ಮಾರ್ಗ ಹರಿ! ನಿನಗೆ ತಿಳಿಯದು. ಪಾನಪ್ರತಿಬಂಧನೇ ಸರ್ಕಾರದ ದಬ್ಬಾಳಿಕೆಯನ್ನು ದೂರ ಮಾಡುತ್ತದೆ.

ಸರಸ ಸಣ್ಣಕಥೆಗಳ ಸಂಕಲನ!

"ಜೀವನರಂಗ"

ಸುಪ್ರಸಿದ್ಧ ಸಣ್ಣಕಥೆಗಾರರಾದ

ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರ ಮುನ್ನುಡಿಯು

ಈ ಸಂಕಲನಕ್ಕೆ ಇದೆ.

ಬರೆದವರು:

ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ. ಬಿ. ಟಿ.

ಬೆಲೆ: ೧-೪-೦ ಮಾತ್ರ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್!

ಮುಖ್ಯ ವ್ಯಾಪಾರಿಗಳು:

ಮನೋಹರ ಗ್ರಂಥ ಭಾಂಡಾರ, ಧಾರವಾಡ.

ಹ:— ಈ ಅಧ್ಯಾಪ್ಯ ವಿಚಾರವು ನನಗೆ ಅರ್ಥವಾಗುವುದಿಲ್ಲ. ಹಾಗಾದರೆ ಸರ್ಕಾರಕ್ಕೆ ಆಗತಕ್ಕ ಪಾನೀಯ ವಿಚಾರವೇನು?

ಮೇ:— ಹೋ! ಇವೆಲ್ಲವು ಅಲ್ಪವಿಚಾರಗಳು. ಪ್ರಜೆಯ ದುಡ್ಡು ಪಾನೀಯಕ್ಕಾಗಿ ಖರ್ಚು ಮಾಡಿಸುವುದು ಸರ್ಕಾರದ ಆದಾಯವೇ? ಹರಿ, ನಾನು ಹತ್ತು ವರ್ಷ ಕಂದಾಯಖಾತೆಯಲ್ಲಿ ಕೆಲಸ ಮಾಡಿದ್ದೇನೆ. ಈ ಬಗೆಯ ವಾದಶರಣಿ ನನ್ನ ಮುಂದೆ ನಡೆಯದು.

ಹ:— ಮಾವನವರೇ, ಇಂದು ನಿಮ್ಮ ವಿಚಾರಶರಣಿಯೇ ವಿಚಿತ್ರವಿದೆ. ನಿಮಗೇನಾದರೂ ಸ್ವಲ್ಪ ಆಯಾಸವಾಗಿದೆಯೆ?

ಮೇ:— ನನಗೇನು ಆಗಿಲ್ಲ; ನಾನು ಪಾನೀಯದ 'ಶರ್ಮಿಟ್'ನ್ನು ಕೇಳುವುದಿಲ್ಲ. ಇನ್ನು ಮುಂದೆ ನನಗೆ ಆ ದ್ರವರೂಪ ರಾಕ್ಷಸಿ ಬೇಡ.

ಹ:— ಡಾಕ್ಟರರು ನಿಮಗೆ ಆದರ ಆವಶ್ಯಕತೆಯನ್ನು ಕೋರಿಸಿದ್ದಾರಲ್ಲಾ?

ಮೇ:— (ನಗುತ್ತ) ಡಾಕ್ಟರರೆ? ಅವರು ನಿಜವಾಗಿಯೂ ನನಗೆ ಅದನ್ನು ಬೇಡವೆಂದು ಹೇಳಿದ್ದಾರೆ; ಆದರೆ ಕೈ ಬೆಚ್ಚಗೆ ಮಾಡಿದಾಗ ಸುಳ್ಳು ಸರ್ಟಿಫಿಕೇಟನ್ನು ಬರೆದುಕೊಟ್ಟರು. ಯಾವುದು ನನ್ನ ದೇಹಕ್ಕೆ ಅಪಾಯಕರವೊ, ಅದನ್ನೇ ಅಮೃತವೆಂದು ಹೇಳಿದ್ದಾರೆ ನಮ್ಮ Family ಡಾಕ್ಟರರು!

ಹ:— ನಾಲ್ಕಾರು ಸಾಲುಗಳಲ್ಲಿ ಯಾರಿಗೂ ಅರ್ಥವಾಗದ ಲಿಪಿಯನ್ನು ಬರೆದು, ಕೊನೆಗೆ ನಿಮ್ಮ ಆರೋಗ್ಯಕ್ಕೆ ಒಂದು ಅಂಶ ಮಾದಕ ದ್ರವ್ಯವು ಪ್ರತಿನಿತ್ಯ ಅವಶ್ಯವೆಂದು ಹೇಳಲಿಲ್ಲವೇ?

ಮೇ:— ನಿಜ, ಬರೆದಿದ್ದಾರೆ. ಅವರ ಹಿನ್ನೆಲೆ ನನಗೆ ಗೊತ್ತು. ಅವರ ಕೈಯನ್ನು ನಾನು ಬಿಸಿಮಾಡಿದ್ದೇನೆ.

ಹೊಲಿಗೆಯ ಪುಸ್ತಕಗಳು

ಹೊಲಿಗೆಯ ಅತ್ಯಾಧುನಿಕ ಜ್ಞಾನಕೊಡುವ ಪುಸ್ತಕಗಳನ್ನು ಇಂದೇ ತರಿಸಿಕೊಂಡು ನಿಮ್ಮ ಉದ್ಯೋಗ ಬೆಳೆಸಿಕೊಳ್ಳಿರಿ.

೧. ಮನೆಯಲ್ಲಿ ಹೊಲಿಗೆ ೧-೪-೦
(ಮಕ್ಕಳ, ಮಹಿಳೆಯರ ಉಡುಪುಗಳು)

೨. ಸೂಚಿ ಶಿಲ್ಪಕಲೆ (ಭಾಗ ೨) ೨-೦-೦
(ಕೋಟು, ಪ್ಯಾಂಟು, ಶೇರವಾನಿ ಮುಂ.)

೩. ಈಝಿಕಟಿಂಗ್ (ಕನ್ನಡ) ಮುಂಬೈಪ್ರಕಟನೆ. ೪-೪-೦
(ಮಕ್ಕಳ, ಮಹಿಳೆಯರ ಫ್ಯಾಶನೆಬಲ್ ಬಟ್ಟೆಗಳು.)

೪. ಕಸೂತಿಕಲೆ ೨ ಭಾಗಗಳು ಕೂಡಿ) ೨-೪-೦
(ಕೈ, ಹಾಗೂ ಯಂತ್ರದ ಕಸೂತಿ)

ಏವರಕ್ಕೆ :— **ಹಳಪೇಟಿ ಮತ್ತು ಕಂಪನಿ**

ಗಾಂಧೀಚೌಕ, ಧಾರವಾಡ

ಶ್ರೀ:..... ಏನದೇಕೆ ಹಣ? ಈ ತೀರ್ಮಾನವೇ ಕುಟುಂಬಕ್ಕೆ ಒಳ್ಳೆಯದು.

ಸು:— ನಿಜವಾಗಿಯೂ ಈ ತೀರ್ಮಾನವು ಹಿತಕರವಾದುದು.

ಹ: — ಸರಿ. ಕೊನೆಯ ನಿರ್ಣಯಕ್ಕೆ ಬರುವ ಮುಂಚಿತವಾಗಿ ಇನ್ನೊಮ್ಮೆ ಆಲೋಚಿಸಬೇಕು.

ಮೇ: — ಇಲ್ಲ. ಇದೇ ಕೊನೆಯ ನಿರ್ಣಯ!

ಹ:— ಆದರೆ ನಿಮಗೆ ನಿದ್ರೆ ಬರದಿರುವಿಕೆ, ಹೃದಯಸ್ಪುರಣದ ವಿಚಾರವೇನು?

ಮೇ:— ಅದಕ್ಕೆ ಔಷಧ ನನಗೆ ಗೊತ್ತು. ರಾತ್ರಿ ಸ್ವಲ್ಪ ಊಟ ಕಡಿಮೆಯಾದರೆ, ಮುಂಜಾನೆ ನನ್ನ ಮೈ ಹಗುರಾಗಿರುತ್ತದೆ. ಆದರೆ ಸ್ವಲ್ಪ ಹಸಿವೆಯಾಗುತ್ತದಷ್ಟೇ!

ಹ:— ಏನೇ ಆಗಲಿ, ಈ ವಿಚಾರದಲ್ಲಿ ಇನ್ನೊಮ್ಮೆ ಡಾಕ್ಟರರ ಅಭಿಪ್ರಾಯ ತೆಗೆದುಕೊಳ್ಳುವುದು ಉಚಿತವೆಂದು ತೋರುತ್ತದೆ

ಸು:— ಏನೇ ಆಗಲಿ, ನಾವು ಒಂದು ಆಂಸಿಗಿಂತ ಹೆಚ್ಚಿಗೆ ಪಡೆಯಲು ಶಕ್ಯವಿಲ್ಲ. ಸರ್ಕಾರವು ಒಂದು 'ಯುನಿಟ್' ಗೆ ಮಾತ್ರ ಅಪ್ಪಣೆ ಕೊಟ್ಟಿದೆಯಲ್ಲವೆ?

ಹ:— ನಾನು ಇದೆಲ್ಲವನ್ನೂ ಸರಿಪಡಿಸುತ್ತೇನೆ.

ಮೇ:— ಇಲ್ಲ ಸರಿ, ಇವೆಲ್ಲವೂ ನನಗೆ ಸರಿಹೋಗದು. ನಾನು ಹಳೆಯ ಪದ್ಧತಿಯವನು. ನನಗೆ ಪಾನೀಯ ಬೇಕಾದರೆ ನಾನು ಕುಡಿಯುತ್ತೇನೆ. ಯಾರು ಹೇಳಿದರೂ ಕೇಳುವುದಿಲ್ಲ. ಆದರೆ ಸದ್ಯ ನನಗೆ ಬೇಕಿಲ್ಲ. ನಾನು ಅದನ್ನು ನಿಲ್ಲಿಸಿಬಿಡುತ್ತೇನೆ ನಿಲ್ಲಿಸಿ ಬಿಡಬಲ್ಲೆ. ನನಗೆ ಮೋಸ-ಔಪಚಾರಗಳು ಸರಿದೋರುವುದಿಲ್ಲ.

ಶ್ರೀ:— ನಿಜ. ಅದೇ ಉತ್ತಮ.

ಸು:— ನಿಜವಾಗಿ ಅದೇ ಉತ್ತಮವಾದ ಮಾರ್ಗ.

ಹ:— ಸರಿ! ಆದರೆ ನನಗೆ ಇಲ್ಲಿ ಸ್ಥಾನವಿಲ್ಲ.

ಮೇ:— ಸದ್ಯ ನಾನು ಆ ಮದ್ರಾಸಿ ಸೆಕ್ರೇಟರಿಗೆ ಪತ್ರವನ್ನು ಬರೆಯುತ್ತೇನೆ. ಈಗಿನ ಅಧಿಕಾರಿಗಳೆಲ್ಲರೂ ಮುಖಸ್ತುತಿ ಮಾಡುವವರೆ "Yes Sir," ಗಳೆಲ್ಲಾ!

ಸು:— (ನಗುತ್ತ ಗಂಡನ ಕಡೆ ನೋಡುತ್ತಾಳೆ) ಆದರೆ ನಮ್ಮ ಜೊತೆಗೆ ಇರುವವರನ್ನು ಮಾತ್ರ ಬಿಟ್ಟಲ್ಲವೇ?

ಮೇ:— ಪರಮಿಟ್ಟನ್ನು ನಿರಾಕರಿಸುವ ಪತ್ರವನ್ನು ಬರೆದು ನನ್ನ ಬುದ್ಧಿಮತ್ತೆಯನ್ನು ತೋರಿಸುತ್ತೇನೆ. (ಹೋಗುವನು)

ಹ:— ಮಾವನವರು ಬಹಳ ತೀವ್ರನಿರ್ಧಾರಕ್ಕೆ ಬರುತ್ತಾರೆ; ಮತ್ತು ಅವುಗಳನ್ನು ತೀವ್ರವೇ ಬದಲಾಯಿಸುತ್ತಾರೆ.

ಶ್ರೀ:— ಅವರು ನನ್ನ ಜೀವನದಲ್ಲಿ ಪ್ರವೇಶಿಸಿದಾಗ, ಅವರ ಮನೋದಾರ್ಢ್ಯವು ಕಲ್ಲಿಗಿಂತ ನಿಶ್ಚಲವಾಗಿತ್ತು.

ಸು:— ಸೆರೆಯು ಮನುಷ್ಯನ ಮನೋದಾರ್ಢ್ಯವನ್ನು ಚಂಚಲವನ್ನಾಗಿ ಮಾಡುತ್ತದೆಂದು ಅವರು ಹೇಳುತ್ತಾರೆ.

ಹ: — ಹಳೆಯ ಮಾತು. ಸೆರೆ ಕುಡಿಯುವವರು ದೃಢಮನಸ್ಕರಾಗಿರುವುದನ್ನು ನಾನು ಕಂಡಿದ್ದೇನೆ. ಅಗ್ಗದರದ ಮಾಸಪತ್ರಿಕೆಗಳಲ್ಲಿರುವ ವಿಷಯವನ್ನು ನನ್ನ ಮುಂದೆ ಹೇಳಿ, ಬುದ್ಧಿವಂತನೆಂದು ಹೊಗಳಿಸಿಕೊಳ್ಳಬೇಕೆನ್ನುವಿಯಾ?

ಸು:— ಬೇರೆಯವರು ಅಮೌಲ್ಯವಾದ ಗ್ರಂಥಗಳನ್ನು ತಂದು ಕಪಾಟಿನಲ್ಲಿ ಸುಂದರವಾಗಿ ಜೋಡಿಸುತ್ತಾರೇ ಆಗಲಿ .. ಓದುವುದಿಲ್ಲ.

ಹ:— ಒಳ್ಳೆಯ ಉಚಿತೋಕ್ತಿ. ನಮ್ಮದೇಕೆ ವಾಗ್ವಾದ. ಮಾವನವರು ತೀರ್ಮಾನವೇನೋ ಮಾಡುತ್ತಾರೆ; ಅವುಗಳಿಗೆ ಹೊಂದಿಕೊಳ್ಳುವುದಿಲ್ಲ.

ಶ್ರೀ:— ನಾವು ಅವರಿಗೆ ಸಹಾಯಮಾಡಬೇಕು. ನಿರುತ್ಸಾಹಪಡಿಸಕೂಡದು. ನಾವು ಸ್ಥಿರಮನಸ್ಸು ಮಾಡಿ ದೇವರನ್ನು ನಂಬಿದರೆ ದೇವರು, ನಮಗೆ ಅನುಕೂಲಿಗನಾಗುತ್ತಾನೆ

ಹ:— ನೀವು ನಂಬತಕ್ಕ ದೇವರಿದ್ದರಲ್ಲವೇ ಅವನು ನಮಗೆ ಅನುಕೂಲನಾಗುವುದು?

ಸು:— ಹಾಗೆಲ್ಲ ಮಾತಾಡಬೇಡಿ. ನಾವೇ ಹೀಗೆ ಮಾತಾಡಿದರೆ, ಹುಡುಗರು ಏನೆಂದುಕೊಳ್ಳುತ್ತಾರೆ! ವಿಜ್ಞಾನಿಗಳು ಏನಾದರೂ ಹೇಳಿದರೆ ನೀವು ನಂಬುತ್ತೀರಿ; ಆದರೆ ನಾನು ಆ ಸರ್ವಶಕ್ತನಾದ ಆ ದೇವರನ್ನು ನಂಬುತ್ತೇನೆ.

ಹ:— ನಿನ್ನ ಹೇಳಿಕೆಯೇ ನಿಜವಿರಬಹುದು. ವಿಜ್ಞಾನಿಗಳು Atom ನಲ್ಲಿ ಅದ್ಭುತಶಕ್ತಿಯನ್ನು ಕಂಡುಹಿಡಿದಿದ್ದಾರೆ. ಅದೇ ಪ್ರಕಾರ ಮಾನವನ ಹೃದಯದಲ್ಲಿ ಇನ್ನೂ ಅದ್ಭುತಶಕ್ತಿ ಇರಬಹುದು ಇದೆಲ್ಲವೂ ಅಗೋಚರವಾಗಿರುವ ಅದ್ಭುತಶಕ್ತಿಯ ಅಲೆಗಳಂತೆ ಇವೆ.

ಶ್ರೀ:— ಅಲೆಗಳಾಗಲಿ, ಏನೇ ಆಗಲಿ; ಸೆರೆಯು ಮನುಷ್ಯನ ಬುದ್ಧಿಯನ್ನು ಕೆಡಿಸುತ್ತದೆ. ಈ ಮುದಿನಯಸ್ಸಿನಲ್ಲಿ ಮೇಹತರ ಬುದ್ಧಿ ವಿಚಿತ್ರವಾಗಿದೆ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ನಾನು ಮೆಚ್ಚಿದ ಕಥೆ' ಎಂಬ ಶೀರ್ಷಿಕೆಯನ್ನಿರಿಸಿಕೊಂಡು ಬೇರೆ ಬೇರೆ ಹದಿನಾರು ಜನ ವಿಮರ್ಶಕರಿಂದ ಲೇಖನಗಳು ಬಂದಿರುವುವು.

'ಜಗತ್ತಿಗಾಗಿ' ಕಥೆಯನ್ನು ಮೆಚ್ಚಿ ಬರೆದವರು:

೧. ಶ್ರೀ. ಸೀತಾರಾಮ ಎಸ್. ಜಾಗೀರದಾರ, ಹೈದರಾಬಾದ್. ೨. ಶ್ರೀ. ಎಂ. ಆರ್. ಭಟ್ಟ, ಮದ್ಗುಣಿ. ೩. ಶ್ರೀ. ಎಚ್. ಆರ್. ಶಾಸ್ತ್ರಿ ಜ್ಯೂ. ಬಿ. ಎ. ನಿಜಾಮ್ ಕಾಲೇಜ್, ಹೈದರಾಬಾದ್. ೪. ಶ್ರೀ. ಕೆ. ಎಸ್. ಶರ್ಮಾ, ವಾಣೀ ಮಂದಿರಂ, ಕಾಸರಗೋಡು. ೫. ಶ್ರೀ. ಲಕ್ಷ್ಮೀಕಾಂತ, ಹುಬ್ಬಳ್ಳಿ. ೬. ಶ್ರೀ. ಲಕ್ಷ್ಮಣ ಜೋಶಿ, ಕೂಡ್ಲಿಗಿ. ೭. ಶ್ರೀ. ಎಂ. ಎಸ್. ಜೋಶಿ, ಧಾರವಾಡ.

'ಮಾತೃತ್ವ' ಕಥೆಯನ್ನು ಮೆಚ್ಚಿ ಬರೆದವರು:

೧. ಶ್ರೀ. ಎಸ್. ಎಸ್. ಆಂಗಡಿ, ಹೆರಕಲ್ಲ ೨. ಶ್ರೀ. ಆರ್. ರಾಮರಾವ್, ತೊಂಡೆಭಾವಿ (ಕೋಲಾರ ಜಿಲ್ಲೆ). ೩. ಪುಂಡೂರು ವೆಂಕಟರಾಜ ಪುಣಿಂಚತ್ತಾಯ, ಕಾಸರಗೋಡು. ೪. ಶ್ರೀ. ಡಿ. ಗುರುರಾಜಾರಾವ್ ಜ್ಯೂ. ಬಿ. ಎಸ್ಸಿ. ಸೆಂಟ್ರಲ್ ಕಾಲೇಜ್, ಬೆಂಗಳೂರು. ೫. "ವಾಣಿ" ಹುಬ್ಬಳ್ಳಿ. ೬. ಶ್ರೀ. ಸೂಗಣ್ಣ ಹುಂಡೇಕಾರ, ಶಂಕರ ಕಾಲೇಜ್, ಯಾದಗಿರಿ. ೭. 'ನಿರುದ್ಯೋಗಿ ಚೆನ್ನ' ಲಕ್ಷ್ಮೀಶ್ವರ.

'ತಂದೆಯ ಪಾತಕ' ಕಥೆಯನ್ನು ಮೆಚ್ಚಿದವರು:

೧. ಶ್ರೀ. ಎಚ್. ನಾಗರಾಜರಾವ್, ಬೋರ್ಡ್ ಹೈಸ್ಕೂಲ್, ಕೂಡ್ಲಿಗಿ. ೨. ಶ್ರೀ. ಕುಲಕರ್ಣಿ ಶಂಕರರಾವ್, ಅಕ್ಕಲಕೋಟೆ.

ಎಲ್ಲ ಲೇಖನಗಳನ್ನೂ ನಮ್ಮ ಸಂಪಾದಕ ಸಮಿತಿಯವರೇ ಓದಿ ವಿಮರ್ಶಿಸಿ ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ:

'ಜಗತ್ತಿಗಾಗಿ' ಎಂಬ ಕತೆಯನ್ನು ಮೆಚ್ಚಿ ಬರೆದವರಲ್ಲಿ ಶ್ರೀ. ಎಚ್. ಆರ್. ಶಾಸ್ತ್ರಿ, ಶ್ರೀ. ಲಕ್ಷ್ಮಣ ಜೋಶಿ ಶ್ರೀ. ಕೆ. ಎಸ್. ಶರ್ಮಾ, ಶ್ರೀ. ಎಂ. ಎಸ್. ಜೋಶಿ ಈ ನಾಲ್ವರ ಬರೆಹಗಳು ಅತ್ಯುತ್ತಮವಾಗಿವೆ. ಪ್ರತಿಯೊಂದೂ ಪ್ರಕಟಿಸಲು ಅರ್ಹವಾಗಿದೆಯಾದರೂ ಎಲ್ಲವನ್ನೂ ಪ್ರಕಟಿಸಲು ಶಕ್ಯವಿಲ್ಲದುದು ವಿಷಾದದ ಸಂಗತಿ. ಶ್ರೀ. ಸೀತಾರಾಮ ಎಸ್. ಜಾಗೀರದಾರರ ಲೇಖನವೂ ಉತ್ತಮವಾಗಿದೆ. ಮಿಕ್ಕುವೆರಡಾದರೂ ಒಳ್ಳೆಯ ಬರೆಹಗಳು. ಈ ಕಥೆಯನ್ನು ಮೆಚ್ಚಿ ಬರೆದವರಲ್ಲಿ ಎಲ್ಲರ ಲೇಖನಗಳೂ ಒಳ್ಳೆಯವಾಗಿರುವುದು ಒಂದು ವೈಶಿಷ್ಟ್ಯವೆ ಎನಿಸುವಂತಿದೆ.

'ಮಾತೃತ್ವ' ಎಂಬ ಕತೆಯ ಬಗೆಗೆ ಬರೆದವರಲ್ಲಿ ಶ್ರೀ. ಆರ್. ರಾಮರಾಯರ ಲೇಖನವು ಹೆಚ್ಚು ಒಳ್ಳೆಯದಾಗಿದೆ. ಆದರೆ ಅದು ಮೆಚ್ಚಿಕೆಯ ಲೇಖನವಾಗಿರದೆ, ಅದರಲ್ಲಿಯ ಕೊರತೆಗಳನ್ನು ಎತ್ತಿ ತೋರಿಸಿದ ವಿಮರ್ಶಾತ್ಮಕ ಲೇಖನವಾಗಿದೆ ಶ್ರೀ. ಪುಂಡೂರು ವೆಂಕಟರಾಜರ ಲೇಖನವು ತಕ್ಕಮಟ್ಟಿಗೆ ಚೆನ್ನಾಗಿದೆ. ಮಿಕ್ಕುವೆಲ್ಲ ತೀರ ಸಾಮಾನ್ಯವಾಗಿವೆ. ಅನುಭವರಹಿತವಾದ ಭಾವನಾತ್ಮಕವೆನಿಸುವ ಮೆಚ್ಚಿಕೆಯು ಸಹೃದಯರ ಮನಸ್ಸು-ಬುದ್ಧಿಗಳಿಗೆ ಸಮಂಜಸವೆನಿಸದು. ಮೆಚ್ಚಿಕೆಗಾಗಿ ತೋರಿಸುವ ಕಾರಣಗಳು ಬುದ್ಧಿ-ಭಾವನೆಗಳೆರಡಕ್ಕೂ ಒಪ್ಪಿಗೆಯೆನಿಸುವಂತೆ ಇರಬೇಕು.

'ತಂದೆಯ ಪಾತಕ' ಕತೆಯನ್ನು ಮೆಚ್ಚಿದ ಇಬ್ಬರಲ್ಲಿ ಶ್ರೀ. ಕುಲಕರ್ಣಿ ಶಂಕರರಾಯರ ಲೇಖನವು ತುಂಬ ಚೆನ್ನಾಗಿದೆ. ಇನ್ನೊಬ್ಬರದು ತೀರ ಸಾಮಾನ್ಯ.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ 'ನೀಲಾಂಬಿಕೆಗಾಗಿ' 'ಹೃದಯವೇದನೆ' ಇವೆರಡೂ ಸ್ವತಂತ್ರಕಥೆಗಳನ್ನು ಇರಿಸಲಾಗಿದೆ. ಸಪ್ಟೆಂಬರ್ ೨೨ನೆಯ ದಿನಾಂಕದೊಳಗಾಗಿ ತಲ್ಪುವಂತೆ ವಿಮರ್ಶೆಗಳನ್ನು ಬರೆದು ಕಳುಹಬೇಕು.

— ಸಂಪಾದಕ

ನಾನು ಮೆಚ್ಚಿದ ಕತೆ

'ಜಗತ್ತಿಗಾಗಿ'

(ಸಣ್ಣಕತೆಯ ವಿಮರ್ಶೆ)

ಶ್ರೀ. ಹೆಚ್. ಆರ್. ಶಾಸ್ತ್ರೀ ಸುರಪುರ (ನಿಜಾಮ ಕಾಲೇಜು)

ಈ ತಿಂಗಳಲ್ಲಿ ಪ್ರಕಟಿತವಾದ ಮೂರು ಕತೆಗಳಲ್ಲಿ ನನಗೆ ಮೆಚ್ಚಿಕೆಯಾದ ಕತೆಯೊಂದನ್ನು ವಿಮರ್ಶಿಸಿ ಕಳುಹಬೇಕೆಂದು 'ಜಯಂತಿ' ಅಪೇಕ್ಷಿಸಿದೆ. 'ತಂದೆಯ ಪಾತಕ' ಎಂಬ ಕತೆಯಲ್ಲಿ ಸ್ವಾತಂತ್ರ್ಯಸಮರದಲ್ಲಾಗಬಹುದಾದ ಘಟನೆಯೊಂದು ಚಿತ್ರಿತವಾಗಿದೆ. ತಂದೆಯ ಪಾತಕ ಮಗಳಲ್ಲಿಯ ಸದ್ಗುಣಗಳಿಂದ ನಾಶವಾಯಿತೆನ್ನುವುದನ್ನು ಬಿಟ್ಟರೆ, ಉಳಿದ ಯಾವ ನಾವೀನ್ಯವೂ ಈ ಕತೆಯಲ್ಲಿಲ್ಲ.

'ಮಾತೃತ್ವ' ಎಂಬ ಕತೆಯಲ್ಲಿ ಲೇಖಕರು ಬಾಲವಿವಾಹದಿಂದಾಗಬಹುದಾದ ಪರಿಣಾಮವನ್ನು ಪರ್ಯಾಯವಾಗಿ ಪೇಳಿದ್ದಾರೆ. ಅನೇ ತಾನೇ ತಾರುಣ್ಯವ ಹೊಸ್ತಿಲಲ್ಲಿ ಕಾಲಿಡುತ್ತಿದ್ದ ತರುಣಿಯ ಮುದಿಗಂಡನು ತೀರಿಕೊಂಡರೆ ಅವಳು ಪಡೆಯಬೇಕಾದ ಸುಖವನ್ನು ಪಡೆಯಲು ಹೇಗೆ ಸಾಧ್ಯ? ಸಾಮಾಜಿಕ ಕಟ್ಟಳೆಗಳ ಪ್ರಕಾರ ಅವಳು ವಿಧವೆಯಾದರೂ, ಮನಸ್ಸಿಗೆ ತಕ್ಕಂತೆ ಅವಳಲ್ಲುಂಟಾಗಬಹುದಾದ ಇತರ ಬಯಕೆಗಳಲ್ಲಿ ಮಾತೃತ್ವವೆಂಬುದೂ ಒಂದು ಸಹಜವಾದ ಬಯಕೆ. ತನ್ನ ಬಯಕೆಯನ್ನು ಈಡೇರಿಸಿಕೊಳ್ಳಲು ಅವಳು ಯಾವ ನಿರ್ಬಂಧನೆಗಳಿಗೂ ಲಕ್ಷ್ಯವನ್ನೀಯುವುದಿಲ್ಲವೆಂದು ಅರುಹುವುದಕ್ಕಾಗಿ ಕತೆ ಬರೆಯಲ್ಪಟ್ಟಿದೆ. 'ತಂದೆಯ ಪಾತಕ'ಕ್ಕಿಂತಲೂ ಇದು ಎಲ್ಲ ದೃಷ್ಟಿಗಳಿಂದಲೂ ಉತ್ತಮವಾದದ್ದು. ಆದರೆ ಇವುಗಳೆಲ್ಲಕ್ಕಿಂತಲೂ 'ಜಗತ್ತಿಗಾಗಿ' ಎಂಬ ಕತೆ ವಸ್ತು. ದೃಷ್ಟಿಯಿಂದಲೂ, ಸಂವಿಧಾನ ದೃಷ್ಟಿಯಿಂದಲೂ, ವರ್ಣನೆಗಳ ದೃಷ್ಟಿಯಿಂದಲೂ ಅತ್ಯುತ್ತಮವಾಗಿದೆ. ಆ ಎರಡೂ ಕತೆಗಳಲ್ಲಿಲ್ಲದ ಒಂದು ಕಾವ್ಯರಮಣೀಯತೆ ಇದರಲ್ಲಿದೆ ಎಂದರೆ ಅತ್ಯುಕ್ತಿಯಾಗಲಾರದು. ಅದಕ್ಕೆ ಯಥಾಶಕ್ತಿ ಇದನ್ನಿಲ್ಲಿ ವಿಮರ್ಶಿಸಲಾಗಿದೆ.

ನಿಷ್ಪಕ್ಷಪಾತವಾದ ಸಮಾಜಸೇವೆಯನ್ನೇ ಜೀವನದುದ್ದೇಶವನ್ನಾಗಿಸಿಕೊಂಡ ಮನುಷ್ಯನಿಗೆ ವಿವಾಹವು ಒಂದು ತಡೆ; ಅದು ಅವನ ಸೇವೆಯನ್ನು ಪಕ್ಷಾನುವರ್ತಿಯಾಗುವಂತೆ ಮಾಡುವುದೆನ್ನುವ ಮೂಢನಂಬಿಕೆ ತಳಹದಿಯಿಲ್ಲದ್ದು. ಸಮಾಜಸೇವಕ ವಿವಾಹವಾಗಬೇಕು. ವಿವಾಹವಾಗುವ ಧ್ಯೇಯವೇನೋ ವೈಯಕ್ತಿಕ ಸುಖ; ನಿಜ. ಆದರೆ ಅದು ಅದರ ಒಂದು ಅಂಗಮಾತ್ರ; ಅದಕ್ಕೆಲ್ಲಿ ಪ್ರಾಧಾನ್ಯವಿಲ್ಲ. ಅದರ ಸ್ಥಾನವನ್ನು ನಿಷ್ಕಲ್ಮಷವಾದ ಪ್ರೇಮವು ಆಕ್ರಮಿಸುತ್ತದೆ. ಪತಿಯ ಈ ಪ್ರೇಮದ ಪಾಲುಗಾರರಾಗಲು ಪತಿಯೂ ಸಮಾಜದಲ್ಲಿ ಒಂದಾಗುತ್ತಾಳೆ. ಸಮಾಜಸೇವಕನಿಗೆ ಪತಿಯೂ ಇತರರಂತೆ ಸಾಮಾಜಿಕಳು. ಆಗ ಪಕ್ಷಪಾತವೆಂಬುದೆಲ್ಲಿ? ಅವನಿಗೆ, ಕೈ ಹಿಡಿದವಳು ಭಾವನೆಯಲ್ಲಿ ಮಾತ್ರ ಪತಿ. ಅವಳೂ ತನ್ನ ಪತಿಯ ಮಹತ್ತರವಾದ ಧ್ಯೇಯನಿಷ್ಠ ಜೀವನದಲ್ಲಿ ಒಂದಾಗಲು ಬಯಸುತ್ತಾಳೆ. ಅವನ ಜೀವದೊಡನೆ ಜೀವ ಬೆರಸುತ್ತಾಳೆ; ಆತ್ಮದೊಡನೆ ಆತ್ಮ ಬೆರಸುತ್ತಾಳೆ. ಇವರ ಜೀವನವಾಹಿನಿಯು, ಅಲ್ಲೊಂದು ಹುಟ್ಟಿ, ಇಲ್ಲೊಂದು ಹುಟ್ಟಿ ನಡುವೆ ಸಂಗಮಗೊಂಡು ಅನಂತವಾದ, ವಿಶಾಲವಾದ ಜಲಧಿಯನ್ನು ಸೇರುವ ಏಕಮಾತ್ರ ಧ್ಯೇಯವುಳ್ಳ ನದಿಗಳಂತೆ ಪ್ರವಹಿಸುತ್ತದೆ. ಆಗ ವಿವಾಹವು "ಸಮಾಜ ಸೇವೆಯನ್ನು ಮಾಡಲು ಇರ್ವರು ಕೈಕೊಳ್ಳುವ ಒಕ್ಕೊರಲಿನ ಪ್ರತಿಜ್ಞೆ" ಯೆನಿಸುತ್ತದೆ.

ನಿಜವಾದ ಸಮಾಜಸೇವಕ ಮದುವೆಯಾಗಬೇಕು. ಆದರೆ ಅವನು ಮನೋದಾರ್ಢ್ಯವುಳ್ಳವನಾಗಿರಬೇಕು. ವಿವಾಹವಾದಕೂಡಲೆ ತನ್ನ ಉಚ್ಚವಾದ ಧ್ಯೇಯವನ್ನು ಬದಿಗೊತ್ತಿ, ಸಕಲ ಜೀವಕೋಟಿಗಳಿಗಾಗಿ ತುಂಬಿಸೂಸುತ್ತಿರುವ ಪ್ರೇಮಮಯವಾದ ತನ್ನ ವಿಶಾಲ ಹೃದಯದಲ್ಲಿ ವಿಷಯಸುಖಕ್ಕಾಗಿ ಕೇವಲ ತನ್ನ ಹೆಂಡತಿಯನ್ನಷ್ಟೆ ಕಂಡು ವಿಶಾಲನಾದ ಪ್ರೇಮವನ್ನು ಸಂಕುಚಿತವನ್ನಾಗಿ, ಅಪವಿತ್ರನನ್ನಾಗಿ ಮಾಡುವ ಕೆಳಮಟ್ಟಕ್ಕಿಳಿಯಬಾರದು. ಹಾಗೆ ಇಳಿಯುವುದೂ ಇಲ್ಲ. ಇದಕ್ಕೆ ಪ್ರತಿಯಾಗಿ ಸಾಂಬರಾಣಾನನ್ನು ತೋರಿಸಿದರೆ ಅದು ಅವನ ದುರ್ದೈವವೆಂದು ಹೇಳಬೇಕು. 'ಆತ್ಮಶಕ್ತಿಹೀನ ಸಾಂಬರಾಣಾ,' 'ಅಳ್ಳೆದೆಯ ಸಾಂಬರಾಣಾ' ಎಂದವನನ್ನು ಕರೆಯಬೇಕಲ್ಲದೆ ಬೇರೆ ಮಾರ್ಗವಿಲ್ಲ.

ಸಾಂಬರಾಣಾನಿಗೆ ಭೂವಿಯೊಡೆತನವಿತ್ತು. ಯೌವನ, ರೂಪುಗಳಿದ್ದುವು. ಸಕಲೈಶ್ವರ್ಯವೂ ಇತ್ತು. ಆದರೂ ಅವಿವಾಹಿತನಾಗಿದ್ದ. ವಿವಾಹವಾದರೆ ತನ್ನ ವಿಶಾಲವಾದ ಪ್ರೇಮವು ಸಂಕುಚಿತವಾಗುವುದೆಂದು ತಿಳಿದು, ಕುಮಾರನಾಗಿದ್ದುಕೊಂಡೇ ನಿಷ್ಪಕ್ಷಪಾತಿಯಾಗಿ ಪ್ರಜೆಗಳ ಹಿತಚಿಂತನೆ ಮಾಡುತ್ತಿದ್ದನು. ಮೇಲು-ಕೀಳೆನ್ನದೆ ಹಿತರಲ್ಲಿಯೂ, ಅಹಿತರಲ್ಲಿಯೂ ಸಮದೃಷ್ಟಿಯಿಂದ ದೇಶಸೇವೆ ಮಾಡಬೇಕೆಂಬ ಆದಿತ್ಯದೇವನ ತತ್ತ್ವವನ್ನು ಎಡೆಬಿಡದೆ ಪಾಲಿಸುತ್ತಿದ್ದ. 'ಜಗಕೆಲ್ಲ ಕಣ್ಣಾದ ರವಿಗಾವ ಗೋತ್ರ' ಎನ್ನುವುದು ಅವನ ಮಂತ್ರವಾಗಿತ್ತು. ಸಾಂಬರಾಣಾನ ಈ ಧ್ಯೇಯವೇನೋ ಪವಿತ್ರವಾದದ್ದು. ಅದರಂತೆ ಅವನು ನಡೆಯುತ್ತಲೂ ಇದ್ದ. ಆದರೆ ದುರಭಿಮಾನದ ಹಕ್ಕಿಯೊಂದು ಅವನಿಗರಿಯದಂತೆ ಅವನ ಹೃದಯದ ಗೂಡಿನಲ್ಲಿ ಅವಿತುಕೊಂಡಿತ್ತು. ಇದು ನಮಗೂ ತಿಳಿಯುವುದಿಲ್ಲ ಸಾಂಬರಾಣಾ—ಆದಿತ್ಯದೇವರಲ್ಲಿ ಪ್ರಥಮ ಸಂಭಾಷಣೆಯಾಗುವವರೆಗೆ. ವೈವಾಹಿಕಜೀವನವು ಅವನ ಆದರ್ಶಧ್ಯೇಯಕ್ಕೆ ಧಕ್ಕೆ ತರಬಹುದೆಂಬ ಆಭಿಪ್ರಾಯ ತಳಹದಿಯಿಲ್ಲದ ಭಯವೆಂದು ಆದಿತ್ಯನೆಂದಾಗ 'ಅದು ತಳಹದಿ ಇಲ್ಲದ್ದಲ್ಲ' ಎಂಬ ಅವನ ಉತ್ತರ, ಗುರುವಾದ ಆದಿತ್ಯನನ್ನೇ ಚಕಿತಗೊಳಿಸುತ್ತದೆ. ಗುರುವಿನ ತತ್ತ್ವೋಪದೇಶವನ್ನು ಚಾಚೂ ತಪ್ಪದೆ ಪಾಲಿಸುವ ಯಾವ ಶಿಷ್ಯನೂ ತನ್ನ ಗುರುವಿಗೆ ಇಷ್ಟು ನೇರವಾಗಿ ಉತ್ತರ ಕೊಡಲಾರನು. ಸಾಂಬರಾಣಾನ ಅವಿಧೇಯತನ ಇಷ್ಟಕ್ಕೇ ಮುಗಿಯುವುದಿಲ್ಲ. ಮುಂದೆ ಆದಿತ್ಯನು

ಸಾಂಬರಾಣಾನಿಗೆ ತನ್ನ ಮಗಳಾದ ತಪತಿಯನ್ನು ಮದುವೆಯಾಗೆಂದು ಬೇಳಿದಾಗ, ಅದಕ್ಕೆ ಅವನ ಉತ್ತರವನ್ನು ನೋಡಿ: "ನಿಮ್ಮ ಮಗಳ ವಿವಾಹವನ್ನು ಮಾಡಬೇಕು" ಎಂಬುದರಲ್ಲಿ. ಹಾಗೂ ನನ್ನ ಮದುವೆಯೂ ಆಗಬೇಕೆಂಬ ನಿಮ್ಮ ಉತ್ಕಟಾಭಿಲಾಷೆಯಲ್ಲಿ ಸಂಬಂಧವಿಲ್ಲದಿಲ್ಲವೆಂದು ನನಗೆ ಭಯವಾಗುತ್ತದೆ." ಗುರುವಿನ ವಿಷಯವಾಗಿ ಸಚ್ಛಿಷ್ಯನಿಗಿರಬೇಕಾದ ಸದ್ಭಾವನೆ ಇದೆಯೇ? 'ಸಂಬಂಧವಿಲ್ಲದಿಲ್ಲ' ಎಂದು ಅವನು ಹೇಳುವಾಗ, ಆದಿತ್ಯನಿಗೆ ಹೇಗಾಗಿರಬೇಡ? ತನ್ನ ಶಿಷ್ಯ ತನಗಿತ್ತ ಅಪವಾದವೆಂತಹದು! ಇಷ್ಟಾದರೂ ಅವನನ್ನು ಬಿಡುತ್ತಾನೆಯೇ? ಮತ್ತೆ ಪರೀಕ್ಷಿಸುತ್ತಾನೆ.

"ಎರಡರಲ್ಲೂ ಸಂಬಂಧವಿದ್ದರೆ. ಅದರಲ್ಲಿ ಏನಾದರೂ ತಪ್ಪನ್ನು ಕಾಣುತ್ತಿದ್ದೀಯೇನು?"

"ನಿಮ್ಮ ಬೇಡಿಕೆಯ ಹಿನ್ನೆಲೆಯಲ್ಲಿ ಈ ವಿಧದ ಬಯಕೆ ಇರುವುದಾದರೆ, ಖಂಡಿತವಾಗಿಯೂ ನಾನು ನಿಮ್ಮನ್ನು ನಿಷ್ಪಕ್ಷಪಾತಿಯೆಂದು ಕರೆಯಲು ಇಷ್ಟಪಡಲಾರೆ. ಹಾಗಾದರೆ ನಿಮ್ಮ ಅಭಿಲಾಷೆ ಸರ್ವಸಮಾನದ ದೃಷ್ಟಿಗಾಗಲಿ, ಸಮಾಜದ ಕಲ್ಯಾಣಕ್ಕಾಗಿ ಯಾಗಲಿ ಇರದೆ, ಕೇವಲ ನಿಮ್ಮ ಪುತ್ರಿಯ ಮದುವೆ ಮಾಡುವುದಕ್ಕೆ ಇದೆಯೆಂದಹಾಗಾಯಿತು." ಸಾಂಬರಾಣಾನ ಈ ಮಾತು ಅವನಲ್ಲಿಯ ದುರಭಿಮಾನಕ್ಕೆ ಚೆನ್ನಾಗಿ ಕನ್ನಡಿ ಹಿಡಿಯುತ್ತದೆ. ಆದಿತ್ಯನ ನುಡಿಯೊಂದು, ನಡೆಯೊಂದು – ಎನ್ನುವ ಘೋಷಣೆ ಈ ಮಾತಿನಿಂದ ಸ್ಪಷ್ಟವಾಗುತ್ತದೆ. ತನ್ನ ಗುರುವು ಸ್ವಾರ್ಥಿ, ಪಕ್ಷಪಾತಿ—ಎನ್ನುವ ಕಳಂಕವನ್ನು ಅವನ ಹಣೆಗೆ ಒತ್ತುತ್ತಾನೆ ಸಾಂಬರಾಣಾ. ಆದಿತ್ಯನು ಎಷ್ಟು ಪರಿಯಾಗಿ ಬೋಧಿಸಿದರೂ ಅರಸನು ಗುರುವಿನ ವಾದವೇ ತಪ್ಪಿದೆಯೆನ್ನುವ ತನ್ನ ಹಟವನ್ನು ಬಿಡುವುದಿಲ್ಲ. ಕೊನೆಗೆ ಹಿಂತಿರುಗುವುದಾದರೂ ಹೇಗೆ? ತನಗುಪದೇಶವನ್ನಿತ್ತ ಗುರುವನ್ನೇ ಸೋಲಿಸಿದೆನೆಂಬ ದುರಭಿಮಾನ, ಒಣ ಹೆಮ್ಮೆಗಳಿಂದ ಕೂಡಿ. ಈ ಮಾತನ್ನು ಮುಂದೆ ವಸಿಷ್ಠರೊಡನೆ "ಹುಸಿಹೆಮ್ಮೆಯಿಂದ ಅಂಧನಾಗಿ ಆದಿತ್ಯನೇನಲ್ಲಿ ಅವಿಧೇಯನಾಗಿ ನಡೆದೆ. ಅದರ ಪ್ರಾಯಶ್ಚಿತ್ತಕ್ಕಾಗಿ ಈ ತಪಸ್ಸು" ಎಂದು ಸಾಂಬರಾಣಾನೇ ಒಪ್ಪಿಕೊಂಡಿದ್ದಾನೆ. ಈ ಒಂದು ದುರಹಂಕಾರವೇ ಮುಂದೆ ಅವನ ಪವಿತ್ರವಾದ ಧ್ಯೇಯವನ್ನು ಪಡಿಲಿಸಲು, ಕಾರಣವಾಯಿತು.

ಆ ಸಂಜೆ ಊರ ಹೊರಗಡಿಯಲ್ಲಿ ರಾಜನು ಮೊಟ್ಟಮೊದಲನೆಯ ಸಲ ತಪತಿಯನ್ನು ನೋಡುತ್ತಾನೆ. ಆಗಲೇ ತನ್ನ ಉಚ್ಚತಮವಾದ ಧ್ಯೇಯನಿಷ್ಠ ಜೀವನವನ್ನು ಮರೆಯುತ್ತಾನೆ. ವೈವಾಹಿಕ ಜೀವನವು ತನ್ನ ಜೀವನೋದ್ದಿಶ್ಯಕ್ಕೆ ಅತಂಕವೆಂದು ವಾದಿಸಿದ ಅರಸನು, ಆತಳ ರೂಪಿಗೆ ಮಾರುಹೋಗುತ್ತಾನೆ. ಅವಳನ್ನು ಬಗೆಬಗೆಯಾಗಿ ವರ್ಣಿಸುತ್ತಾನೆ. ಕೊನೆಗೆ ತನ್ನನ್ನು ಪತಿಯನ್ನಾಗಿ ಸ್ವೀಕರಿಸೆಂದು ಯಾಚಿಸಿಯೂ ಬಿಡುತ್ತಾನೆ. ಆದಿತ್ಯನ ಪುತ್ರಿಯಾದ, ಅವನ ತತ್ತ್ವಗಳನ್ನು ಅಕ್ಷರಶಃ ಪಾಲಿಸುವ ತಪತಿ, ಅರಸನ ಈ ಮರುಳುಮಾತಿಗೆ ಮಾರುಹೋಗುವಳೇ? ಅವಳೂ ಸಾಂಬರಾಣಾನ ರೂಪವನ್ನು ಮೆಚ್ಚಿದವಳೇ; ಆದರೆ ಅವನಂತೆ ಇವಳು ದಾಂಪತ್ಯಜೀವನವನ್ನು ತುಚ್ಛೀಕರಿಸಲಿಲ್ಲ. ವಿವಾಹವೂ ವಿಶ್ವಕಲ್ಯಾಣಕ್ಕಾಗಿಯೇ ಇದ್ದೆಯೆಂದು ಅವಳ ಭಾವನೆಯಾಗಿತ್ತು. ಆದ್ದರಿಂದ ಅವಳು "ಸಮಾಜದ ಮಧ್ಯೆ ಜೀವಿಸುವ ಬಾಲೆ ಪರಪುರುಷರನ್ನು ಮದುವೆಯಾದ ಮೇಲೆ, ಪತಿಯನ್ನಾಗಿ ಭಾವಿಸಿ ಮಾತ್ರ ಕೈಹಿಡಿಯಲು ಸಾಧ್ಯ" ಎಂದೆನ್ನುತ್ತಾಳೆ. ಇದುವರೆಗೂ ರಾಜನಿಗೆ ಅವಳು ತಪತಿ ಎನ್ನುವ ಭಾವನೆಯೇ ಬಂದಿಲ್ಲ. ಅವಳೇ ಮುಂದೆ ತನ್ನ ಹೆಸರನ್ನು ಹೇಳಿದಾಗ, ಅರಸನಿಗೆ ಯಾರೋ ಬಂದು ಕೆನ್ನೆಗೊಂದು ಬಿಗಿದಂತಾಗುತ್ತದೆ. ತಲೆ ಕೆಳಬಾಗುತ್ತದೆ. ಸೋಲೊಪ್ಪಿಕೊಳ್ಳುತ್ತಾನೆ. ಆದರೆ 'ಸೋತೆನೆಲ್ಲ' ಎಂದು ಒಳಗೊಳಗೆ ಕುದಿಯುತ್ತದೆ ಇವನ ಮನ. ಈಗಲೂ ಅವನಿಗೆ ನಿಜವಾದ ಪಶ್ಚಾತ್ತಾಪವಾಗಿಲ್ಲ. ಇದ್ದುದರಲ್ಲೇ ಕಾನನಕ್ಕೆ ಹಿಂದಿರುಗಿ 'ಪ್ರಾಯಶ್ಚಿತ್ತಕ್ಕಾಗಿ ತಪಸ್ಸು' ಎಂದು, ಬಗೆಬಗೆಯಾಗಿ ದೇಹವನ್ನು ದಂಡಿಸುತ್ತಾನೆ. ದೊರೆಯಿಲ್ಲದ ದೊರೆತನದಲ್ಲಿ ಹಾಹಾಕಾರವೇಳುತ್ತದೆ. ಕುಲಗುರುವಾದ ವಸಿಷ್ಠರು ಸಾಂಬರಾಣಾನಲ್ಲಿಗೆ ಬಂದು ಸಮಾಧಾನಪಡಿಸುತ್ತಾರೆ. ಅವರ ಮಾತಿಗೆ ಕೊಟ್ಟ ಉತ್ತರದಲ್ಲೂ ರಾಜನ ದುರಭಿಮಾನ ಎದ್ದು ಕಾಣುತ್ತದೆ ವಸಿಷ್ಠರು ಇದನ್ನು ಎತ್ತಿ ತೋರಿಸುತ್ತಾರೆ: "ಈ ಉಗ್ರತಪಸ್ಸಿಗೆ ನಿನ್ನ ಮುಂಗೋಪವೇ ಕಾರಣವೆಂದು ನಿನ್ನ ಮುಖವೇ ಕಾಣುತ್ತದೆ. ಪಡಬೇಕಾದ ಮನೋನೈರ್ಮಲ್ಯ, ಚಿತ್ತಶಾಂತಿಗಳು ನಿನ್ನಲ್ಲಿಲ್ಲ. ಈ ವಿಧದ ಕಪಟತ್ಯಾಗದಿಂದ ಮತ್ತು ಅತ್ಮಹೀನ ಧ್ಯಾನದಿಂದ ನಿನ್ನ ವ್ಯಸನವನ್ನು ವ್ಯರ್ಥವಾಗಿ ಮುಚ್ಚಿಕೊಳ್ಳಲು ಯತ್ನಿಸಿರುವೆಯಷ್ಟೆ."

ಸಾಂಬರಾಣಾ ಒಪ್ಪಿಕೊಳ್ಳುತ್ತಾನೆ. ವಸಿಷ್ಠರೊಡನೆ ರಾಜಧಾನಿಗೆ ಹಿಂದಿರುಗಿ, ಎಲ್ಲರ ಅಭಿಪ್ರಾಯದಂತೆ ತಪತಿಯನ್ನು ಮದುವೆಯಾಗುತ್ತಾನೆ. ಏತಕ್ಕಾಗಿ? ಮದುವೆಯಾಗುವುದಕ್ಕಾಗಿ. ಆದಿತ್ಯದೇವನ ಪವಿತ್ರೋಪದೇಶದಂತೆ 'ಜಗತ್ತಿಗಾಗಿ' ಯಲ್ಲ. ರಾಜ್ಯವನ್ನು ಹೆರವರಿಗೊಪ್ಪಿಸಿ ಊರಹೊರಗಿನ ವನಮಂದಿರದಲ್ಲಿ ತಪತಿಯೊಡನೆ ವಾಸಿಸುತ್ತಾನೆ. ಅಲ್ಲಿ ಅವಳೇ ಅವನಿಗೆ ಸರ್ವಸ್ವ. ಅವಳ ಮೈಯನ್ನು ಹೀರುವುದರಲ್ಲಿಯೇ ತೊಡಗುತ್ತಾನೆ. ಅವಳನ್ನು ತನ್ನ ಕಾಮದ ಬೊಂಬೆಯನ್ನಾಗಿ ಮಾಡುತ್ತಾನೆ. ತಪತಿ ಇದರಿಂದ ಹೇಸಿಕೊಂಡು, ರಾಜನ ಕಣ್ಣನ್ನು ತೆರೆಯುತ್ತಾಳೆ; ವಿವಾಹವು ಕೇವಲ ವಿವಾಹವಾಗಿ ಅನವರತವೂ ಒಬ್ಬರನ್ನೊಬ್ಬರು ಅಪ್ಪಿಕೊಂಡು ಕುಳಿತಿರುವುದಲ್ಲ; ಅದೂ 'ಜಗತ್ತಿಗಾಗಿ'ಯೇ ಜನಹಿತಕ್ಕಾಗಿಯೇ ಇದೆ. ಪತಿ–ಪತಿಯರು ಕೇವಲ ಭಾವನೆಯಲ್ಲಿ ಮಾತ್ರ. ವಿವಾಹವಾದರೂ, ತಮ್ಮ ದೇಹಗಳನ್ನು ಲೋಕಹಿತದಲ್ಲಿಯೇ ಸವೆಸಬೇಕು. ಬಾಳ ಹಣತೆಯಲ್ಲಿ ಜೊತೆಯಾಗಿ ಉರಿದು ಜಗತ್ತಿಗೇ ಬೆಳಕನ್ನು ನೀಡಬಲ್ಲ ಎರಡು ಬತ್ತಿಗಳಂತೆ ಜಗತ್ತಿಗಾಗಿಯೇ ದುಡಿದು ಮಡಿಯಬೇಕು. ಆದೀಗ ನಿಜವಾದ ಧ್ಯೇಯನಿಷ್ಠ ಜೀವನವನ್ನು ಸಾಧಿಸಿದಂತೆ—ಎಂದು ಬುದ್ಧಿ ಹೇಳುತ್ತಾಳೆ. ಅರಸನು ಮತ್ತೊಮ್ಮೆ ತನ್ನ ತಪ್ಪುಗಳನ್ನು ಕಂಡುಕೊಳ್ಳುತ್ತಾನೆ. ಆದರೆ ಈ ಸಲ ತಿದ್ದಿಕೊಳ್ಳುತ್ತಾನೆ. ನಿಜವಾದ ಪಶ್ಚಾತ್ತಾಪವಾಗುತ್ತದೆ. ತಪತಿಯು ಬುದ್ಧಿಮಾತುಗಳಿಗೆ

ಎಚ್ಚತ್ತು, ತನ್ನಲ್ಲಿ ಮನೆಮಾಡಿದ ದುರಭಿಮಾನವನ್ನು ಕಿತ್ತೊಗೆದು, ಪುಟಕ್ಕಿಟ್ಟ ಚಿನ್ನದಂತೆ ಶುದ್ಧನಾಗಿ ಆದಿತ್ಯದೇವನನ್ನು ನೆನೆದು, ಜಗತ್ತಿಗಾಗಿ ದುಡಿಯಲು ರಾಜಧಾನಿಗೆ ಹಿಂದಿರುಗುತ್ತಾನೆ.

ಕತೆ, ಸಮಾಜಸೇವಕನು ಮದುವೆಯಾದರೂ ಸಮಾಜಕ್ಕಾಗಿಯೇ ಎಂಬುದನ್ನರುಹುವುದರ ಜೊತೆಗೆ, ವ್ಯಕ್ತಿತ್ವವಿಮರ್ಶೆಯನ್ನೂ ಮಾಡುತ್ತದೆ. ಉದಾತ್ತ ಧ್ಯೇಯವುಳ್ಳವನಾಗಿದ್ದರೂ ಮನುಷ್ಯನಿಗೆ ಚಿತ್ತೈರ್ಯವಿಲ್ಲದಿದ್ದರೆ ತನ್ನ ಗುರಿಯನ್ನು ಸಾಧಿಸುವುದರಲ್ಲಿ ಯಶಸ್ವಿಯಾಗಲಾರೆ. ಅವನು ಪ್ರಕೃತಿಯ ಬಲೆಯಲ್ಲಿ ಸಿಗಲೂಬಹುದು; ಏಕೆ ಸಿಕ್ಕೇ ಸಿಗುತ್ತಾನೆ. ಆದರೆ ಪುನಃ ಆ ಬಲೆಯಿಂದ ಬಿಡುಗಡೆ ಹೊಂದುವುದು ಸಾಧ್ಯವಾಗಲಾರದು. ಬೇರೊಬ್ಬರು ಅವನನ್ನು ರಕ್ಷಿಸಬೇಕಾಗುತ್ತದೆ. ಆದರೆ ಆತ್ಮಶಕ್ತಿ, ಮನೋನೈರ್ಮಲ್ಯ ವುಳ್ಳವರು ಹಾಗೆಂದೂ ಎಡವಿದರೂ ಪುನಃ ಎಚ್ಚರಿಯುತ್ತಾರೆ. ಸಾಂಬರಾಣಾ-ತಪತಿಯರೇ ಇದಕ್ಕೆ ಸಾಕ್ಷಿಗಳು.

ಪಾತ್ರಸೃಷ್ಟಿಯಲ್ಲಿ ಲೇಖಕರದು ತುಂಬಾ ಪಳಗಿದ ಕೈಯೆಂದು ಹೇಳಬೇಕು. ತಪತಿ- ಆದಿತ್ಯದೇವರ ಆದರ್ಶಪಾತ್ರಗಳು ಮನ ಹಿಡಿಯುವಂತೆ ವರ್ಣಿಸಲ್ಪಟ್ಟಿವೆ ಸದ್ಗುರುವಿನಲ್ಲಿರಬೇಕಾದ ಸಂಯಮ, ಸೌಜನ್ಯಗಳು ಆದಿತ್ಯನಲ್ಲಿ ಜೈನ್ನಾಗಿ ಒಡಮೂಡಿವೆ. ಆದರ್ಶ ತಂದೆಯ ಆದರ್ಶಪುತ್ರಿಯಾದ ತಪತಿಯ ನಯ, ವಿನಯ, ಮನೋದಾರ್ಢ್ಯಗಳೂ ಹೃದಯಂಗಮವಾಗಿವೆ. ಸಾಂಬರಾಣಾನ ಪಾತ್ರವಂತೂ ಅತ್ಯುತ್ತಮವಾಗಿ ಚಿತ್ರಿಸಲ್ಪಟ್ಟಿದೆ. ಅವನು ಉಸಿರುವ ಪ್ರತಿಯೊಂದು ಶಬ್ದವೂ, ಗೈಯುವ ಆಚಾರಗಳೂ, ಭಾವಿಸುವ ವಿಚಾರಗಳೂ ಅವನ ವ್ಯಕ್ತಿತ್ವವನ್ನು ಸುಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ. ಪಾತ್ರಚಿತ್ರಣದ ದೃಷ್ಟಿಯಿಂದ ಈ ಕತೆಯನ್ನು ಎಷ್ಟು ಹೊಗಳಿದರೂ ಸಾಲದು.

ಅಲ್ಲಲ್ಲಿ—ಕತೆಯಲ್ಲಿ ಬರುವ ಪ್ರಕೃತಿವರ್ಣನೆಗಳೂ, ಸನ್ನಿವೇಶ ನಿರೂಪಣೆಗಳೂ ಮಿಂಚಿನಂತೆ ಸುಳಿದು ಕತೆಗೆ ವಿಲಕ್ಷಣ ಕಾಂತಿಯನ್ನಿತ್ತಿವೆ. ರಾಜನು ಅಂದು ಪ್ರಥಮ ಸಲ ತಪತಿಯನ್ನು ಕಂಡ ತಾಣದ ವರ್ಣನೆ ಹೃದ್ಯವಾಗಿದೆ. ಅವಳನ್ನು ಕಂಡ ಅರಸನ ಹೃದಯದಲ್ಲಿ ಎಂತಹ ಸುಂದರವಾದ ಭಾವನೆಗಳುದಿಸುತ್ತವೆ! ಅವಳು ಸೌಂದರ್ಯದ ಶುದ್ಧ ಸತ್ತ್ವವಂತೆ; ಹೂವಿನಲ್ಲಿಯ ಗಂಧವಂತೆ; ಎಳವಳ್ಳಿಗಳಲ್ಲಿಯ ಮೃದುತ್ವವಂತೆ; ಪ್ರವಾಹದಲ್ಲಿಯ ಕಲಕಲರವವಂತೆ... ಇತ್ಯಾದಿ. ಎಷ್ಟು ಸುಂದರವಾಗಿವೆ ಈ ಮಾತುಗಳು! ಇದೇ ಸಂದರ್ಭದಲ್ಲಿ ಉಕ್ತವಾಗಿರುವ ಇನ್ನೊಂದು ಮಾತು ನಮ್ಮ ಲಕ್ಷ್ಯವನ್ನೆಳೆಯುತ್ತದೆ:- "ಎಲೆಗಳ ಈ ಸಂಗೀತ, ಕಾನನದ ಈ ಕಂಪನ, ಈ ಪ್ರದೇಶದ ಏಕಾಂತತೆ ಮತ್ತು ಮೀಸಲಿಟ್ಟಂತೆ ಈ ಸಂದರ್ಭ-ಇವೆಲ್ಲವೂ ಸೃಷ್ಟಿಯ ಆರಂಭದಿಂದಲೇ ಇವರಿಬ್ಬರ ದರ್ಶನಕ್ಕಾಗಿಯೇ ಇದ್ದಂತೆ ಕಂಡಿತು." ಇದು ಬಹು ಅರ್ಥಪೂರ್ಣವಾದ ಮಾತು. ಪ್ರಸಂಚದಲ್ಲಿ ಎಂದೋ ನಡೆಯಬೇಕಾಗಿರುವ ಘಟನೆಗೆ ಪ್ರಕೃತಿಯಲ್ಲಿ ಇಂದಿನಿಂದಲೇ ಪೂರ್ವಸಿದ್ಧತೆ ನಡೆಯುತ್ತಿದೆ; ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲವೆನ್ನುವ ಒಂದು ದೊಡ್ಡ ತತ್ತ್ವವನ್ನೇ ಸಾರುತ್ತದೆ.

ಮುಂದೆ ವಸಿಷ್ಠರು ವನಮಂದಿರದ ಹೊರಗಡೆ ಕಾಯುತ್ತಿರುವಾಗಿನ ವರ್ಣನೆಯೂ, 'ಸುವಾಸಿತ ತೈಲದ ದೀಪ ಉರಿಯುತ್ತಿತ್ತು' ಎನ್ನುವ ಉಕ್ತಿಯೂ ಮನೋಹರವಾಗಿವೆ ಆ ಸನ್ನಿವೇಶವೇ ಅತ್ಯಂತ ಸುಂದರವಾಗಿ ವರ್ಣಿಸಲ್ಪಟ್ಟಿದೆ.

ಇನ್ನು ಕತೆಯಲ್ಲಿ ಬರುವ ಸಂಭಾಷಣೆಗಳಂತೂ ಅತ್ಯಂತ ಸುಂದರವಾಗಿವೆ. ಸಾಂಬರಾಣಾ—ಆದಿತ್ಯರ ಸಂಭಾಷಣೆ, ನಾಯಕ (ಸಾಂಬರಾಣಾ)ನ ಮನಸ್ಸಿನ ಒಂದುಮುಖವನ್ನು ತೋರಿಸಿದರೆ, ತಪತಿ- ಸಾಂಬರಾಣಾರ ಪ್ರಥಮಸಂಭಾಷಣೆ ಅದರ ಇನ್ನೊಂದು ಮುಖವನ್ನು ತೋರಿಸುತ್ತದೆ ಅಲ್ಲಿ 'ನ'ಕಾರವನ್ನುತ್ತರಿಸಿದ ದೊರೆ ಇಲ್ಲಿ ಒಪ್ಪಿಗೆಯನ್ನಿಯುತ್ತಾನೆ. ಅಲ್ಲದೆ ಅದು ಭಾಷೆಯ ದೃಷ್ಟಿಯಿಂದಲೂ ಸುಂದರವಾಗಿದೆ. ಉದಾಹರಣೆಯಾಗಿ ಸಾಂಬರಾಣಾ ತಪತಿಯನ್ನು ಹೊಗಳುವಾಗಿನ ಈ ಮಾತುಗಳನ್ನು ನೋಡಿ:

"ನೀನು ಸ್ವಪ್ನಸಾಮ್ರಾಜ್ಯದ ಬಯಕೆಯೊಂದು ಪ್ರತ್ಯಕ್ಷಗೊಂಡಂತೆ ತೋರುವಿ" "ನೀನು ಬೆಳಕಿನ ಪ್ರತಿರೂಪು. ನಿನ್ನ ಪರಿಚಯವನ್ನು ನೀನೇ ಮಾಡಿಕೊಡುವ ಪೀಠಿಕೆಯಾಗಿರುತ್ತಿ." "ನೀನು ಸಮುದ್ರದ ತರಂಗಗಳಂತೆ ತಾಳಬದ್ಧವಾಗಿರುತ್ತಿ."

ಹಾಗೆಯೇ ಕತೆಯನ್ನು ಮುಕ್ತಾಯಗೊಳಿಸುವ ರೀತಿಯೂ ಸುಂದರವಾಗಿದೆ

"ನೀನು ಶಿಕ್ಷಿಸಿ ಪ್ರೀತಿಸಬೇಕೆನ್ನುತ್ತಿ."
"ನೀವು ಪ್ರೀತಿಸಿ ಶಿಕ್ಷಿಸಬೇಕೆನ್ನುತ್ತೀರಿ."

ಕೊನೆಯದಾಗಿ, ಅನುವಾದದ ವಿಷಯ. ಸುಪ್ರಸಿದ್ಧ ವಂಗ ಸಾಹಿತಿಗಳಾದ ಶ್ರೀ. ಸುಬೋಧಘೋಷರ ಬಂಗಾಲೀ ಕಥೆಯನ್ನು ಶ್ರೀಮಾನ್ ಮುದೇನೂರ ಸಂಗಣ್ಣನವರು ಕನ್ನಡಿಸಿ ನಮಗಿತ್ತಿದ್ದಾರೆ. ಭಾಷೇತರ ಸಾಹಿತ್ಯವನ್ನು ಸ್ವಭಾಷಾ ಸಾಹಿತ್ಯದಲ್ಲಿ ಪರಿವರ್ತಿಸುವುದು ಸುಲಭವಲ್ಲ. ಲೇಖಕನಿಗಿಂತಲೂ ಅನುವಾದಕನ ಹೊಣೆ ಹಿಂದು. ತನ್ನ ಕಾರ್ಯದಲ್ಲಿ ಅತನೇನಾದರೂ ತಪ್ಪಿದರೆ ಲೇಖಕರಿಗೂ, ಕಲೆಗೂ ದ್ರೋಹ ಬಗೆದಂತಾಗುತ್ತದೆ. ಅತ ಅನ್ಯಭಾಷಾಸಾಹಿತ್ಯದಲ್ಲೂ ಚೆನ್ನಾಗಿ ಅನುಭಾವಿಯಾಗಿರಬೇಕು. ಕೇವಲ ಕತೆಯ ಹೊರಮೈಯನ್ನರಿತುಕೊಳ್ಳುವುದರಿಂದ ಪ್ರಯೋಜನವಿಲ್ಲ. ಅದರ ಒಳಗಿನ ಒಳಗನ್ನು ಕಂಡುಕೊಂಡು ಅದರ ರೋಮರೋಮಗಳಲ್ಲೂ ಒಂದಾಗಿ ಬೆರೆಯಬೇಕು. ಆಮೇಲೆ ಅದನ್ನು ಅನುವಾದಿಸಿದರೆ ಮೂಲದಲ್ಲೂ ಇರದಿದ್ದ ಒಂದು ಸೊಬಗು ಇದಕ್ಕೆ ಇರಬಹುದು. ಈ ಕಾರ್ಯವು ಇಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆಯೆಂದು ನಾನು ಹೇಳಲಾರೆ. ಶ್ರೀ. ಸುಬೋಧರ ಮೂಲಕತೆಯನ್ನು ನಾನು ಓದಿಲ್ಲ; ಆದರೆ ಕತೆಯನ್ನು ಓದುವಾಗ ಮಾತ್ರ ಹಾಗೆ ಯಾವ ಕೊರತೆಗಳೂ ಇನಿತೂ

(ಉಳಿಸಿಯ ಪುಟ ನೋಡಿರಿ)

ಪುಸ್ತಕ ವಿಮರ್ಶೆ

ಸಮರ್ಪಣ (೫)

(ಅರವಿಂದ ಸಾಹಿತ್ಯದರ್ಪಣ ೧)

ಪ್ರಕಾಶಕರು : ಶ್ರೀಅರವಿಂದ ಮತ್ತು ಶ್ರೀ ಮಾತಾಮಂಡಲ, ಹುಬ್ಬಳ್ಳಿ, ಪು. ಅ. ೧೦೨ ಪುಟಗಳು. ಬೆಲೆ ೨—೦—೦.

ಶ್ರೀಅರವಿಂದರು ಆಧುನಿಕ ಕಾಲದ ಮಹರ್ಷಿಗಳು. ಆಧ್ಯಾತ್ಮಿಕ ಸತ್ಯದ ದ್ರಷ್ಟಾರರು. ಇಂದಿನ ನಾಸ್ತಿಕವೈಜ್ಞಾನಿಕ ಯುಗದಲ್ಲಿಯೂ ಭಾರತೀಯ ಸನಾತನ ಸಂಸ್ಕೃತಿಯಾದ ಆಸ್ತಿಕ್ಯವನ್ನು ಪ್ರಪಂಚಕ್ಕೆಲ್ಲ ವೈಜ್ಞಾನಿಕ ಪ್ರಮಾಣಗಳಿಂದಲೇ ಮನವರಿಕೆ ಮಾಡಿಕೊಟ್ಟವರು. ವಿಶೇಷ ಪರಿಸ್ಥಿತಿಯ ಮೂಲಕ ಅವರು ತಮ್ಮ ವಿಚಾರಗಳನ್ನು ಇಂಗ್ಲಿಷ್ ಭಾಷೆಯಲ್ಲಿಯೇ ಮೂಡಿಸಿ, ಅನೇಕ ಗ್ರಂಥಗಳನ್ನಾಗಿ ಒದಗಿಸಿದ್ದಾರೆ.

ಶ್ರೀಅರವಿಂದರ ಮಹಾತ್ಮೃದ ವಿಷಯದಲ್ಲಿ ಇಂದು ಅನೇಕರ ಮನದಲ್ಲಿ ಕುತೂಹಲವು ತಲೆದೋರಿದೆ. ಅವರ ಆಧ್ಯಾತ್ಮಿಕ ವಿಚಾರಗಳೇನೆಂಬುದನ್ನು ತಿಳಿದುಕೊಳ್ಳಲು ಬಹಳ ಜನರು ಅಪೇಕ್ಷಿಸುತ್ತಿದ್ದಾರೆ. ಆದರೆ ಇಂಗ್ಲಿಷ್ ಭಾಷೆಯನ್ನರಿಯದ ಕುತೂಹಲಿಗಳು ಸಾಕಷ್ಟಾಗಿ ಶ್ರೀಅರವಿಂದರ ವಿಚಾರಗಳಿಂದ ದೂರವೇ ಉಳಿಯುವಂತಾಗುತ್ತಿತ್ತು. ಹುಬ್ಬಳ್ಳಿಯ ಶ್ರೀಅರವಿಂದ ಮತ್ತು ಶ್ರೀಮಾತಾ ಮಂಡಲದವರು, ಕನ್ನಡಿಗರಿಗಾಗಿ ಕನ್ನಡ ಭಾಷೆಯಲ್ಲಿಯೇ ಶ್ರೀಅರವಿಂದರ ವಿಚಾರಗಳನ್ನು ಕ್ರಮವಾಗಿ ಪ್ರಕಟಿಸತೊಡಗಿರುವುದು ತುಂಬ ಸಂತೋಷದ ಸಂಗತಿಯಾಗಿದೆ. ಈ ಮೊದಲು ಪ್ರಕಟವಾದ ಇವರ 'ಸಮರ್ಪಣ'ದ ನಾಲ್ಕು ಸಂಪುಟಗಳಲ್ಲಿ, ಶ್ರೀಅರವಿಂದರಿಗೆ ಸಂಬಂಧಿಸಿದ ಲೇಖನಗಳೂ, ಅವರ ತತ್ತ್ವಜ್ಞಾನದ ಪರಿಚಯಾತ್ಮಕ ಲೇಖನಗಳೂ, ಅವರ ಕೃತಿಭಾಗದ ಸಾರಗಳೂ ಬಂದಿದ್ದುವು. ಈ ಐದನೆಯ ಸಂಪುಟದಲ್ಲಿ, ಶ್ರೀಅರವಿಂದರ ಬೇರೆ ಬೇರೆ ಗ್ರಂಥ ಭಾಗಗಳ ಭಾಷಾಂತರಗಳನ್ನೇ ಪ್ರಕಟಿಸಿದುದು ಇದರದೊಂದು ವೈಶಿಷ್ಟ್ಯವಾಗಿದೆ.

ಭಾಷಾಂತರವು ಸುಲಭವಾದ ಸಂಗತಿಯಲ್ಲ. ಅದರಲ್ಲಿಯೂ ವೇದಾಂತ – ತತ್ತ್ವಜ್ಞಾನಗಳಂತಹ ಗಡುಸಾದ ವಿಷಯವನ್ನು ಭಾಷಾಂತರಿಸುವುದಂತೂ ಇನ್ನೂ ಕಠಿಣವಾದುದು. ಎರಡೂ ಭಾಷೆಗಳ ನೆಲೆಯ ಮೇಲೆ ಭಾಷಾಂತರಕಾರರಿಗೆ ಪ್ರಭುತ್ವವಿರಬೇಕಲ್ಲದೆ, ವಿಷಯದ ತಿಳಿವಳಿಕೆಯೂ ಸಂಪೂರ್ಣವಾಗಿ ಇರಬೇಕಾಗುತ್ತದೆ. ಈ ದೃಷ್ಟಿಯಿಂದ ವಿಚಾರಮಾಡಿದರೆ, ಈ ಸಂಪುಟದಲ್ಲಿ ಕಂಡುಬರುವ ಭಾಷಾಂತರಕಾರರೆಲ್ಲರೂ ಸಾಕಷ್ಟು ತಜ್ಞರೂ ಸಮರ್ಥರೂ ಇರುವರೆಂದು ಕಂಡುಬಾರದೆ ಇರದು.

ಇದರಲ್ಲಿ ಅಡಕವಾಗಿರುವ ಆರು ವಿಷಯಗಳಲ್ಲಿ, ಮೊದಲನೆಯದಾದ 'ನಮ್ಮ ಧ್ಯೇಯ' ಎಂಬುದನ್ನು ಶ್ರೀಮಾನ್ ಎಂ. ಯಾಮುನಾಚಾರ್ಯರು ಅನುವಾದಿಸಿರುವರು. ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ತ್ವಜ್ಞಾನದ ಪ್ರಾಧ್ಯಾಪಕರಾಗಿ ಇದ್ದಾರೆ. ಎರಡನೆಯ ವಿಷಯ 'ಆರ್ಯ ಎಂಬ ಹೆಸರಿನ ರಹಸ್ಯವೇನು?' ಎಂಬುದನ್ನು ಶ್ರೀಮಾನ್ ವಿ. ಬಿ. ನಾಯಕರು ಅನುವಾದಿಸಿದ್ದಾರೆ. 'ಮಾತೆ' ಎಂಬ ಮೂರನೆಯ ವಿಷಯವನ್ನು ಶ್ರೀಮಾನ್ ನಾರಾಯಣ ಸಂಗಮರು ಭಾಷಾಂತರಿಸಿ ಕೊಟ್ಟಿದ್ದಾರೆ. "Hymns to the Mystik Fire" ಎಂಬ ತಮ್ಮ ಗ್ರಂಥಕ್ಕೆ ಶ್ರೀಅರವಿಂದರು ಬರೆದ ಮುನ್ನುಡಿಯನ್ನು, 'ವೇದ' ಎಂಬ ಹೆಸರಿನಿಂದ ಶ್ರೀಮಾನ್ ಹ. ರಾ. ಭುಲೋಕೇಶ ಎಂ. ಎ. ಅವರು ಅನುವಾದಿಸಿದ್ದಾರೆ. "The Foundations of Indian Culture" ಎಂಬ ಶ್ರೀಅರವಿಂದರ ಗ್ರಂಥದಲ್ಲಿಯ 'ಗೀತೆಯ ಬೆಳಕಿನಲ್ಲಿ' ಎಂಬ ಪ್ರಕರಣವನ್ನು "ಉಪನಿಷತ್ತುಗಳು" ಎಂಬ ಶೀರ್ಷಿಕೆಯನ್ನು ಇರಿಸಿ ಶ್ರೀಮಾನ್ ನರೇಗಲ್ಲ ಪ್ರಲ್ಹಾದರಾವ ಎಂ. ಎ., ಬಿ. ಟಿ. ಅವರು ಭಾಷಾಂತರಿಸಿಕೊಟ್ಟಿದ್ದಾರೆ. ಕೊನೆಯದಾಗಿರುವ 'ಗೀತೆಯ ಸಂದೇಶ' ಎಂಬ ವಿಸ್ತೃತ ಲೇಖನವು, ಶ್ರೀಅರವಿಂದರ 'Essays on the Gita' ಎಂಬ ಗ್ರಂಥದಲ್ಲಿಯ ಮೊಳನೆಯ ಪ್ರಕರಣದ ಅನುವಾದ. ಇದನ್ನು ಅನುವಾದಿಸಿದವರು ಪ್ರೊ. ಅ. ವೆಂಕಪ್ಪಶಾಸ್ತ್ರಿಗಳು ಮತ್ತು ಶ್ರೀಮಾನ್ ಗು. ಭಿ. ಜೋಶಿ ಎಂ. ಎ., ಬಿ. ಟಿ. ಅವರು.

ಅನುವಾದಕರೆಲ್ಲರೂ ಶ್ರೀಅರವಿಂದರ ವಾಙ್ಮಯದ ಅಭ್ಯಾಸಿಗಳು. ಅವರ ವಿಚಾರಗಳಲ್ಲಿ ಶ್ರದ್ಧೆಯನ್ನು ಇರಿಸಿಕೊಂಡವರು. ಆದುದರಿಂದಲೇ, ಯಥಾರ್ಥವಾಗಿ ಶ್ರೀಅರವಿಂದರ ವಿಚಾರಗಳನ್ನು ಕನ್ನಡದಲ್ಲಿ ಇಳಿಸಿರುವರು. ಇಂತಹ ಗ್ರಂಥಗಳನ್ನು ಓದುವುದರಿಂದ, ನಮ್ಮ ಜನರಿಗೆ ಶ್ರೀಅರವಿಂದರ ತತ್ತ್ವ ವಿಚಾರಗಳ ಪರಿಚಯವಾಗುವುದಲ್ಲದೆ, ಅದರೊಂದಿಗೆ ನಮ್ಮ ಭಾರತೀಯ ಆಧ್ಯಾತ್ಮಿಕ ವಿಚಾರಪುಂಜಗಳಾದ ವೇದ, ಉಪನಿಷತ್ತು, ಭಗವದ್ಗೀತೆ ಇವುಗಳ ಮುಖಪರಿಚಯವೂ ಆಗುವುದು. ಪರಿಸ್ಥಿತಿಯ ಪ್ರಭಾವಕ್ಕೆ ಒಳಗಾಗಿರುವ ನಮ್ಮ ಜನರ ಮನಸ್ಸು, ಹೆಚ್ಚಾಗಿ ಭೌತಿಕಸಂಪತ್ತಿನ ಬೆನ್ನನ್ನೇ ಹತ್ತಿ ಹೊರಟಿದ್ದು, ಆಧ್ಯಾತ್ಮಿಕ ಸಂಪತ್ತಿನ ಬೆಲೆ ಎಂತಹದೆಂಬುದನ್ನು ಅದು ಮರೆತು ನಡೆದಿದೆ. ಇಂದು ಪ್ರಪಂಚವೆಲ್ಲವೂ ಬಯಸುವ ಶಾಂತಿ–ಸಮಾಧಾನಗಳು ಭೌತಿಕಸಂಪತ್ತಿನ ಬೆಲೆಗೆ ದೊರೆಯುವುದೆಂಬುದರ ತಿಳಿವಳಿಕೆ ಎಲ್ಲರಲ್ಲಿಯೂ ಮೂಡಬೇಕಾಗಿದೆ. ಈ ಕಾರ್ಯಕ್ಕೆ ಸಹಾಯವಾಗುವಂತೆ ಯೋಗ್ಯ ಗ್ರಂಥಗಳು ನಮ್ಮ ಜನರ ಕೈಯಲ್ಲಿ ಕಾಲಕಾಲಕ್ಕೆ ದೊರೆಯುತ್ತಿರಬೇಕು. ಈ ಗ್ರಂಥ ಪ್ರಕಾಶಕರು ಅಂತಹ ಸತ್ಕಾರ್ಯಕ್ಕೆ ತೊಡಗಿದುದು ಸಂತೋಷದ ಸಂಗತಿಯಾಗಿದೆ. ಹೆಚ್ಚು ಹೆಚ್ಚಾಗಿ ಜನರು ಈ ಬಗೆಯ ಗ್ರಂಥಗಳನ್ನು

ಕೊಂಡು ಓದಲುತೊಡಗಿದರೆ, ಹೆಚ್ಚಿನರಸಿಕರಿಗೆ ಇಂಪಿನ ಗ್ರಂಥ-ಕೃಯವೂ ಕಡಿಮೆಯಾಗಬಹುದು.

—ಬಿ. ಪಿ. ಎಸ್. ರಾವ್.

ಶಾರದೆಯ ಅಪರಾವತಾರ

(ಲಘುಪ್ರಬಂಧ ಸಂಕಲನ)

ಶ್ರೀ. ಎನ್. ಎಸ್. ಗದಗಕರ, ಬಿ. ಎ. ಧಾರವಾಡ

ಗ್ರಂಥದ ಹೆಸರೇ ವಿಡಂಬನವನ್ನು ಹೊರಹೊಮ್ಮಿಸುವುದರಿಂದ ಅಂತರಂಗವು ಹೇಗಿದೆಯೋ ಎಂದು ಓದುಗರು ಕುತೂಹಲಿಗಳಾಗುವ ಸಂಭವನವಿದೆ. ಆದರೆ ಈ ಪುಸ್ತಕದಲ್ಲಿ ಬರುವ ಲಘುಪ್ರಬಂಧಗಳ ನಾಮಕರಣವು ಬಹುಮಟ್ಟಿಗೆ ಕುತೂಹಲಕ್ಕೆ ಅಪ್ಪದವನ್ನುಂಟು ಮಾಡಬಲ್ಲದು. ಲಘುಪ್ರಬಂಧಗಳು ಹಾಗಿರಬೇಕು ಹೀಗಿರಬೇಕು ಎಂದು ಹೇಳುವುದು ಸುಲಭವಾದರೂ, ಬರೆಹಗಾರನ ವ್ಯಕ್ತಿತ್ವ ಅಲ್ಲಿ ಗೋಚರಿಸುವುದೋ ಇಲ್ಲವೋ ಎಂಬುದನ್ನು ಓದುಗನು ನೋಡುವುದು ಒಂದು ವಿಧದಿಂದ ಹೆಚ್ಚು ಯೋಗ್ಯವಾದೀತು ಎಂದು ನನ್ನ ಅಭಿಪ್ರಾಯ. ಇರಲಿ, ಕನ್ನಡದಲ್ಲಿ ಪ್ರಬಂಧಸಾಹಿತ್ಯ ಅಷ್ಟು ಹುಲುಸಾಗಿ ಬೆಳೆದುಬಂದಿಲ್ಲವೆನ್ನುವ ಈ ಕಾಲದಲ್ಲಿ, ಕೇವಲ ಕಾದಂಬರಿಗಳಿಗೇ ಕೈಮುಗಿದು ಕುಳಿತುಕೊಳ್ಳದೆ, ಬರೆಹಗಾರರು ವ್ಯಂಗ್ಯವಿಡಂಬನೆಗಳನ್ನೊಳಗೊಂಡ ಈ ಪ್ರಬಂಧ ಸಂಕಲನವನ್ನು ಪ್ರಕಟಿಸಿದುದು ಒಂದು ಬಗೆಯಿಂದ ಯೋಗ್ಯವಾಗಿದೆ. ಈ ಪ್ರಬಂಧಗಳಲ್ಲಿ ಲಘುತನವು ಕೆಲವೆಡೆಯಲ್ಲಿ ಇಲ್ಲದಾಗಿದೆಯೆಂದು ಹೇಳಿದರೂ, ಅದು ಶ್ರೀಮದ್ ಗಾಂಭೀರ್ಯವನ್ನು ಮಾತ್ರ ಪ್ರಕಟಿಸಿಲ್ಲ! ವಿಡಂಬನೆ, ಹಾಸ್ಯ ಮೊದಲಾದ ಗುಣಗಳು ಅಷ್ಟು ಇಷ್ಟು ಬರಬೇಕೆಂದು ಪ್ರಮಾಣವಿಲ್ಲವಾದರೂ, ಎಷ್ಟು ಬರುವುದಕ್ಕೆ ಸಾಧ್ಯವಿದೆಯೋ ಅಷ್ಟು ಮಾತ್ರ ನಾವು ಈ ಪ್ರಬಂಧಗಳಲ್ಲಿ ಕಾಣಬಹುದಾಗಿದೆ. ಈ ಎಲ್ಲ ರೀತಿಯಲ್ಲಿ ನೋಡಿದರೆ, ಶಾರದೆಯ ಅಪರಾವತಾರವು ವಿಷಯನಿರೂಪಣೆ ವಸ್ತುಗಳ ಆಯ್ಕೆ, ಶೈಲಿಯ ಹದ ಮೊದಲಾದ ಸಾಹಿತ್ಯಿಕ ಗುಣಗಳನ್ನು ಹೊರಹೊಮ್ಮಿಸುವಂತಹದಾಗಿದೆ. 'ಶಾರದೆಯ ಅಪರಾವತಾರ' 'ಕಾಸಾಡಿಯ ಕೈಚಿಮಣಿ' 'ಒಬ್ಬನೇ ಕುಳಿತುಕೊಂಡಾಗ'—ಈ ಪ್ರಬಂಧಗಳ ರೀತಿಯು ಹಗುರುತನಕ್ಕೆಡೆಕೊಟ್ಟರೆ, 'ಕಣ್ಣಿನ ಕೃಪುಶಕ್ತಿ' 'ಹಟವಾರಿಶನವೆಂಬ ಸದ್ಗುಣ' 'ಅಸೂಯೆ' 'ತಲೆನೋವು'—ಪ್ರಬಂಧಗಳು ವಿಚಾರಪ್ರಧಾನವೆನಿಸಿ ವಿಷಯ ನಿರೂಪಣೆಯೇ ಅಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಗ್ರಂಥವು ಚಿಕ್ಕದಾದರೂ ವೈವಿಧ್ಯದಿಂದೊಡಗೂಡಿದೆಯೆಂದು ಹೇಳಲು ಏನೂ ಅಡ್ಡಿಯಿಲ್ಲ ಪುಸ್ತಕದ ರಕ್ಷಾಕವಚವು ಸಾಲಂಕೃತ ನವಯುವನಿನಂತೆ ಕಾಣದಿದ್ದರೂ, ಬಡ ಮುತ್ತೈದೆಯಂತೆಯೂ ಆಗಿಲ್ಲವೆಂದು ಸಂತೋಷದಿಂದ ಹೇಳಬಹುದು. ಉತ್ತರೋತ್ತರ ಶ್ರೀ. ಗದಗಕರರ ಗ್ರಂಥಗಳು ಹೊರಬರಲೆಂದು ಹಾರೈಸುವೆ.

—ಬಿ. ಆರ್. ನಾಡಕ್ಷಿ

(೧೫ನೆಯ ಪುಟದಿಂದ ಮುಂದುವರಿದುದು)

ಕಾಣುವುದಿಲ್ಲ. ಕಥೆಯನ್ನು ಓದುವಾಗ ಇದು ಅನುವಾದಿತ ಕಥೆಯೆಂಬ ಭಾವನೆಯೂ ಬಾರದಷ್ಟು, ಸುಂದರವಾಗಿ, ಅನುವಾದಕರು ಇದನ್ನು ಕನ್ನಡಿಸಿದ್ದಾರೆ. ಪಾತ್ರಗಳೂ, ಸಂಭಾಷಣೆಗಳೂ ಅತ್ಯಂತ ಸುಂದರವಾಗಿವೆ. ಭಾಷೆ ನಿರ್ದುಷ್ಟವಾಗಿ ಹೃದ್ಯವಾಗಿದೆ. ಕಥೆಯನ್ನು ಓದುವಾಗ ರಸ, ಭಾವಗಳ ಓಟಕ್ಕೆ ಎಲ್ಲಿಯೂ ತಡೆ ಬರುವುದಿಲ್ಲ.

ಒಟ್ಟಿನಲ್ಲಿ ಪಾತ್ರಸೃಷ್ಟಿಯ ದೃಷ್ಟಿಯಿಂದಲೂ, ವಸ್ತು ಸಂವಿಧಾನದೃಷ್ಟಿಯಿಂದಲೂ, ವರ್ಣನೆ ಮತ್ತು ಸನ್ನಿವೇಶ ನಿರೂಪಣೆಯ ದೃಷ್ಟಿಯಿಂದಲೂ, ಕೊನೆಯದಾಗಿ ಅನುವಾದದ ದೃಷ್ಟಿಯಿಂದಲೂ, ಎಲ್ಲ ದೃಷ್ಟಿಯಿಂದಲೂ ಇದೊಂದು ಉತ್ತಮ ಕಥೆಯಾಗಿದೆ. ಇದನ್ನು ಕನ್ನಡಿಸಿದ ಶ್ರೀಮಾನ್ ಮುದೇನೂರ ಸಂಗಣ್ಣನವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

ಜಯಂತಿಯ ೧೬-೧೭ನೆಯ ಸಂಪುಟಗಳು
ಕೆಲವೇ ಪ್ರತಿಗಳು ಉಳಿದಿವೆ!

ಒಂದೊಂದು ಸಂಪುಟವೆಂದರೆ ಒಂದೊಂದು ಜ್ಞಾನಕೋಶದ ವಿಭಾಗವಿದ್ದಂತೆ.

ವಾಚನಾಲಯಗಳವರು ಈ ಯೋಗವನ್ನು ಕಳೆದುಕೊಳ್ಳಲಾಗದು!

೪ ರೂ. ೮ ಆಣೆಗಳನ್ನು M. O. ಮೂಲಕ ಕಳುಹಿಸಿದರೆ, ಆಂಚೆಯ ವೆಚ್ಚವನ್ನು ನಾವೇ ವಹಿಸಿ ೧೨ ಸಂಚಿಕೆಗಳನ್ನು ಕಳುಹಿಸುವೆವು. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಿರಿ.

ವ್ಯವಸ್ಥಾಪಕ 'ಜಯಂತಿ' ಧಾರವಾಡ

ಸಾದರಸ್ವೀಕಾರ

೨೪ ಕರ್ನಾಟಕ ಸಾಹಿತ್ಯಮಂದಿರ, ಹೈದರಾಬಾದ್ (೧೯ನೆಯ ವರ್ಷದ ವರದಿ) ಕಳುಹಿಸಿದವರು ಗೌರವ ಕಾರ್ಯದರ್ಶಿ, ಕರ್ನಾಟಕ ಸಾಹಿತ್ಯಮಂದಿರ, ಬಾಗಲಿಂಗಂಪಲ್ಲಿ, ಹೈದರಾಬಾದ್. ಕ್ರೌ. ಅ. ೫೬ ಪುಟಗಳು.

ಕನ್ನಡಾಭಿಮಾನಿಗಳಿಗೆಲ್ಲ ಸಂತೋಷವನ್ನುಂಟುಮಾಡುವಂತಹ ವರದಿಯಿದು. ಹೈದರಾಬಾದಿನಲ್ಲಿರುವ ಕನ್ನಡಿಗರಲ್ಲಿ ಸಂಘಟನೆಯನ್ನೂ ಸಾಹಿತ್ಯ-ಸಂಸ್ಕೃತಿಗಳ ಜಾಗೃತಿಯನ್ನೂ ಉಂಟುಮಾಡುವಂತಹ ಹಲವು ಚಟುವಟಿಕೆಗಳನ್ನು ಈಗ ದೊರನಾಡ ಕನ್ನಡಿಗರ ಸಂಸ್ಥೆ ನಡೆಸುತ್ತಿದೆ. ಅಭಿನಂದನೆ.

೨೫ ಜನಪದಜೀವನ (೨೪ ಸಣ್ಣಕತೆಗಳ ಸಂಕಲನ) ಲೇಖಕರು ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮ (ಅನಂದಕಂದ) ಧಾರವಾಡ. ಪ್ರಕಾಶಕರು: ಕರ್ನಾಟಕ ಸಹಕಾರೀ ಸಾಹಿತ್ಯಸಂಘ ಲಿಮಿಟೆಡ್, ಧಾರವಾಡ. ಕ್ರೌ. ಅ. ೧೫೫ ಪುಟಗಳು. ಬೆಲೆ ೧–೦–೦.

೨೬ Hindu Mrriage Act 1955 (Act No. XV of 1955) ೧ನೆಯ ಭಾಗವಿದು. ಲೇಖಕರು ಶ್ರೀಮಾನ್ ವಿ. ಎಸ್. ಕುಲಕರ್ಣಿ ಬಿ. ಎ., ಎಲ್ ಎಲ್. ಬಿ. ಅಡ್ವೋಕೇಟ್ ಹೈಕೋರ್ಟ್, ಮುಂಬಯಿ. ಪ್ರಕಾಶಕರು ಶ್ರೀಮತಿ ಜಾನಕೀಬಾಯಿ ಜಾವೂರ್‌ಕರ್, ಲಾ ಬುಕ್‌ಹೌಸ್, ಪೂನಾ ೨. ಡೆ. ಅ. ೪೨ ಪುಟಗಳು. ಬೆಲೆ ೧–೮–೦.

೨೭ ಅಭಿನವಗಣಿತ (೨ನೆಯ ತರಗತಿಗಾಗಿ.) ಡೆ. ಅ. ೬೮ ಪುಟಗಳು. ಬೆಲೆ ೦–೮–೦

೨೮ ಅಭಿನವಗಣಿತ (೩ನೆಯ ತರಗತಿಗಾಗಿ.) ಡೆ ಅ. ೮೪ ಪುಟ. ಬೆಲೆ ೦–೧೦–೦.

ಈ ಗಣಿತಗಳನ್ನು ರಚಿಸಿದವರು ಹರಿಹರರು. ಧಾರವಾಡದ ಸಾಯಿ ಪಬ್ಲಿಶಿಂಗ್ ಹೌಸ್, ವಿಜಯ ರೋಡ್ ಇವರು ಪ್ರಕಟ ಮಾಡಿದ್ದಾರೆ.

ಗಣಿತದಂತಹ ಒಣಕಲು ವಿಷಯವನ್ನೂ ಮಕ್ಕಳ ಮನಸ್ಸಿಗೆ ರಂಜಕವೆನಿಸುವಂತೆ ಕಲಿಸಲು ಈ ಪುಸ್ತಕಗಳು ಖಂಡಿತವಾಗಿ ಸಹಾಯಮಾಡುವಂತಿವೆ. ಮುಂಬಯಿ ಸರಕಾರದ ವಿದ್ಯಾಶಾಖೆಯು ಅಭ್ಯಾಸಪತ್ರಿಕೆಗೆ ಅನುಗುಣವಾಗಿ ಈ ಪುಸ್ತಕಗಳನ್ನು ರಚಿಸಿದ್ದಾರೆ. ಸಂದರ್ಭೋಚಿತ ಚಿತ್ರ, ನಕ್ಷೆ, ಆಕೃತಿಗಳು ಇವುಗಳಿಂದ, ಈ ಗಣಿತಗಳು ಮಕ್ಕಳ ಮನಸ್ಸನ್ನು ಆಕರ್ಷಿಸುವಂತಿವೆ. ಪಾಲಕರೂ ಅಧ್ಯಾಪಕರೂ ಈ ಪುಸ್ತಕಗಳ ಉಪಯೋಗದಿಂದ ಪ್ರಯೋಜನವನ್ನು ಪಡೆಯಬಹುದು.

೨೯ ಸಾವಿಗೆ ಮುಂಚೆ ಸಮಾಧಿ (ಅನುವಾದಿತ ಕಥೆಗಳ ಸಂಕಲನ) ಮೂಲ ಇಂಗ್ಲಿಷ್ ಕತೆಗಾರ ಎಡ್ಗರ್ ಎಲೆನ್‌ಪೋ ಅವರ ಕತೆಗಳನ್ನು, ಬೆಂಗಳೂರಿನ 'ಧನ್ವಂತ' ಅವರು ಅನುವಾದ ಮಾಡಿದ್ದಾರೆ ಪ್ರಕಾಶಕರು ಮೆ. ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ೨. ಕ್ರೌ. ಅ. ೧೯೬ ಪುಟಗಳು. ಬೆಲೆ ?

೩೦–೩೧ ಶ್ರೇಯಾಂಸ (ಸ್ವತಂತ್ರ ಸಾಮಾಜಿಕ ಕಾದಂಬರಿಯ ೧–೨ ಭಾಗಗಳು.) ಬರೆದವರು ಶ್ರೀ ಮಿರ್ಜಿ ಅಣ್ಣಾರಾಯರು. ಪ್ರಕಾಶಕರು ವಾಹಿನೀ ಪ್ರಕಾಶನ, ಬೆಂಗಳೂರು. ಕ್ರೌ. ಅ. ೩೨೦ (೧ನೆಯ ಭಾಗ) ೩೧೮ (೨ನೆಯ ಭಾಗ) ಪುಟಗಳು. ಬೆಲೆ ಪ್ರತಿಯೊಂದು ಭಾಗಕ್ಕೆ ೧–೮–೦.

೩೨ ಮಂಜರಿ (ತಮಿಳು ಮಾಸಪತ್ರಿಕೆ) ಸಂಪಾದಕರು ಶ್ರೀಮಾನ್ ಟಿ. ಜಿ. ರಂಗನಾಥನ್. ಪ್ರಕಾಶಕರು ಶ್ರೀಮಾನ್ ಎನ್. ರಾಮರತ್ನಂ, ಮ್ಯಾನೇಜರ್, ಎಂ. ಎಲ್. ಜೆ. ಪ್ರೆಸ್ ಮದ್ರಾಸು ೪; ಡೆ. ಅ. ೮೮ ಪುಟಗಳು. ಬಿಡಿಸಂಚಿಕೆಗೆ ೦–೬–೦.

೩೩ ಸೋಷ್ಯಲಿಸ್ಟ್ ಇಂಡಿಯಾ (ಸಚಿತ್ರ ಪಕ್ಷಪತ್ರಿಕೆ) ಪ್ರಕಾಶಕರು ಟಾಸ್ ಇನ್ ಇಂಡಿಯಾ ೩೫, ಬಾರಖಾಂಬಾರೋಡ್, ನ್ಯೂದಿಲ್ಲಿ ಕ್ರೌ. ಕ್ವಿ ಡೆ ೨೮ ಪುಟಗಳಲ್ಲದೆ ಹೆಚ್ಚೀಲಿಗೆಗಳೂ ಇವೆ.

೩೪ ಬುತ್‌ಕೋಟು (ಏಕಾಂಕ ಸಂಕಲನ) ಬರೆದವರು 'ಎನ್ನೆ' ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೨೩ನೆಯ ವರ್ಷದ ೬ನೆಯ ಕೆರಣ. ಕ್ರೌ. ಅ ೯೨ ಪುಟಗಳು ಬೆಲೆ ೧–೦–೦.

೩೫ ದಕ್ಷಿಣಧ್ರುವ ನಳಕ್ಯಾಗ (ಕಥಾಸಂಕಲನ.) ಬರೆದವರು ಶ್ರೀ. ನಾರಂಗಿಭಟ್ಟ, ಮುಂಬಯಿ. ಮೇಲಿನ ಪ್ರತಿಭಾ ಗ್ರಂಥಮಾಲೆಯ ೧೩ನೆಯ ವರ್ಷದ ೭ನೆಯ ಕೆರಣ. ಕ್ರೌ. ಅ. ೧೧೮ ಪುಟಗಳು. ಬೆಲೆ ೧–೦–೦.

೩೬ ಶ್ರೀಮಾಧ್ವ ಋಗ್ಭಾಷ್ಯಪ್ರಶಸ್ತಿ (ಪ್ರಾಚೀನಗ್ರಂಥ ಮಹತ್ತ್ವ ನಿರೂಪಣೆ) ಬರೆದವರು ಶ್ರೀ ಮಹರ್ಷಿ ದೇವರಾತರು. ಪ್ರಕಾಶಕರು ಶ್ರೀಮಾನ್ ಆಲೂರ ವೆಂಕಟರಾಯರು ಬಿ. ಎ., ಎಲ್ ಎಲ್. ಬಿ ಸಾಧನಕೇರಿ ಧಾರವಾಡ. ಕ್ರೌ. ಅ. ೧೬ ಪುಟಗಳು. ಬೆಲೆ ೦–೬–೦.

ಶ್ರೀಮಹರ್ಷಿ ದೇವದಾತರು ವೇದಗಳ ತೂಲಂಕಷ ಅಭ್ಯಾಸಿಗಳು. ವೇದದ ಋಕ್ಕುಗಳೆಲ್ಲ ಅವರಿಗೆ ಮುಖೋದ್ಗತವಾಗಿವೆ. ವೇದ. ಮಂತ್ರಗಳಿಗೆ ಅರ್ಥ ಬರೆದ ಶ್ರೀಸಾಯಣಾಚಾರ್ಯರಿಗಿಂತಲೂ ಮೊದಲೇ ಶ್ರೀಮನ್ಮಧ್ವಾಚಾರ್ಯರು ಋಗ್ವೇದದಲ್ಲಿಯ ಅನೇಕ ಮಂತ್ರಗಳ ಮೇಲೆ ಭಾಷ್ಯ ಬರೆದಿದ್ದಾರೆ. ಈ ಮಾಧ್ವ ಋಗ್ಭಾಷ್ಯವು ವೇದಾಭ್ಯಾಸಿಗಳಿಗೆ ಅಪೇಕ್ಷಿತ ಪ್ರಯೋಜನಕಾರಿಯಾಗಿರುವುದೆಂಬುದನ್ನು, ಮಹರ್ಷಿ ದೇವದಾತರು ಈ ಕೆರುಹೊತ್ತಗೆಯ ಮೂಲಕ ಪ್ರಕಟಪಡಿಸಿದ್ದಾರೆ.

V. 1777

—ದ್ವಿಶಕ್ತಿಯುತವಾದ—

ಮೋಬಿಲ್‌ಗ್ಯಾಸ್

ಉಪಯೋಗಿಸಿ ಪ್ರತಿ ಗ್ಯಾಲನ್ನಿಗೂ ಅತ್ಯಂತ ಹೆಚ್ಚು ಮೈಲೇಜನ್ನು ಪಡೆಯಿರಿ

ಇಂದಿನ ಪೆಟ್ರೋಲುಗಳ ಪೈಕಿ ಯಾವುದು ಅತ್ಯಂತ ಹೆಚ್ಚು ಮೈಲೇಜನ್ನು ಕೊಡುತ್ತದೆ? ಯಾವುದು ನಿಮ್ಮ ಎಂಜಿನ್ನನ್ನು ಅಕ್ಯುತ್ಪಮ ಸ್ಥಿತಿಯಲ್ಲಿಡುತ್ತದೆಯೋ ಅದು ಎಂಬುದು ಪ್ರತ್ಯಕ್ಷ. ಎಂದರೆ ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್—ಏಕೆಂದರೆ ಇದು ಬೇರೆ ಯಾವ ಪೆಟ್ರೋಲಿನಕಿಂತಲೂ ಹೆಚ್ಚು ಎಂಜಿನ್ ಕೊಂಡ ರೋಗಗಳನ್ನು ನಿವಾರಣೆ ಮಾಡುತ್ತದೆ.

ಆದುದರಿಂದ ನಿಮ್ಮ ಎಂಜಿನ್ನು ಹೆಚ್ಚು ಶಕ್ತಿಯನ್ನು ಪಡೆದು ಖರ್ಚನ್ನು ಕಡಿಮೆ ಮಾಡುತ್ತದೆ. ಅಲ್ಲದೆ, ನಿಮ್ಮ ಕಾರು ಆಥವಾ ಟ್ರಕ್ಕು ನಿಮ್ಮ ನಿರೀಕ್ಷಣೆಯಪ್ರಕಾರ ಪೂರ್ಣ ಶಕ್ತಿಭರಿತವಾಗಿ ಸುಗಮವಾಗಿ ನಡೆಯುತ್ತದೆ.

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್ ಉಪಯೋಗಿಸಲು ಇಂದೇ ಪುರು ಮಾಡಿರಿ. ಮೋಬಿಲ್ ಪನಂ ಕಾಂಪೌಂಡನ್ನೊಳಗೊಂಡ ಪೆಟ್ರೋಲು ಇದೊಂದೇ. ಈ ಕಾಂಪೌಂಡಿನಷ್ಟು ಬಲವಾದ ಆಂಟಿವ್ ಗಳ ಮಿಶ್ರಣವು ಇದುವರೆಗೆ ಪೆಟ್ರೋಲಿನಲ್ಲಿ ಸೇರಿಸಲ್ಪಟ್ಟಿರಲೇ ಇಲ್ಲ. ಮೋಬಿಲ್‌ಗ್ಯಾಸ್ ಉಪಯೋಗಿಸಲು ಪುರು ಮಾಡುವುದು ಲಾಭಕರ, ಏಕೆಂದರೆ ಅದು ನಿಮ್ಮ ಹಣಕ್ಕೆ ಹೆಚ್ಚು ಮೌಲ್ಯವನ್ನು ಕೊಡುತ್ತದೆ.



ಇದು ದೊರೆಯುವುದು ಹಾರುವ ಕೆಂಪು ಕುದುರೆಯ ಗುರುತಿರುವಲ್ಲಿ ಮಾತ್ರ —ಇನ್ನೆಲ್ಲಿಯೂ ಇಲ್ಲ!

ಎಲ್ಲೆಲ್ಲಿಯೂ ಜ್ಞಾನ ಡ್ರೈವರುಗಳು ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸನ್ನು ಹೊಗಳುತ್ತಾರೆ — ಅದು ಪೂರ್ಣ ಶಕ್ತಿಯನ್ನು ಕೊಡುತ್ತೆ, ಖರ್ಚನ್ನು ಇಳಿಸುತ್ತದೆ ಎಂಬುದನ್ನು ಅವರು ಕಂಡುಕೊಂಡಿದ್ದಾರೆ!

ಸ್ಟಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ (ಕಂಪೆನಿಯು ಮಂಬಯಿಯ ಹೊಸಗಾರಿಕೆಯು ಮಿತಿಯದೆ)

Printed by N. A. Hoskeri at the Vijaya Press, Dharwar and published for the Proprietors Jayrnti publications, by K. S. Betgeri at the Jayanti Office, Dharwar

ಅಕ್ಟೋಬರ್

೧೯೫೫

ಬೆಲೆ:

೮ ಆಣೆಗಳು

ಧನ್ಯ ಗಾಂಧಿಮೋಹನ!

೧

ಭಾರತಜನ ಸಂಜೀವನ ಧನ್ಯ ಗಾಂಧಿಮೋಹನಾ!
ತಾರಕಮ್ಮೆ ನಿನ್ನ ಸತ್ಯ-ಶಾಂತಿಯ ಸಂಭಾವನಾ!

೧

ದೇವನಲ್ಲ, ದೊರೆಯು ಅಲ್ಲ, ನೋವಿನೊಳೇ ಬಂದೆ....
ನೋವುಗಳನು ತಾಳುವುದೇ ತಪಸಿನ ತಿರುಳೆಂದೆ...
ದೇವನ ನೆಲೆಯರಿದೆ—ಹೃದಯ,
ಭಾವದ ಸವಿ ಸುರಿದೆ....
ದೇವಪದವ ದೊರೆಯ ಹದವ ಪೂರಿ ನಿಂದೆ ತಂದೆ....
ಭಾರತಜನ ಸಂಜೀವನ ಧನ್ಯ ಗಾಂಧಿಮೋಹನಾ!

೨

"ಜ್ಞಾನರಹಿತ ಮಾನವನೇ ದಾನವನಿದು ಸತ್ಯ!
ಮಾನವಕುಲಕವನೆ ಮಾರಿಯಾಗಿ ನಿಲುವನಿತ್ಯ"
ಇಂತು ನಿಟಿವ ಸಾರಿ ಸಾರಿ
ಚಿಂತೆಯ ಹಾಸಿಯಾಟ ತೋರಿ,
ಹಂಥಗಾರನಾಗಿ ಬಾಳ್ವ ಬಗೆಯನೊರೆದೆ ಚೈತ್ಯ....
ಭಾರತಜನ ಸಂಜೀವನ ಧನ್ಯ ಗಾಂಧಿಮೋಹನಾ!

ಈ ಸಂಚಿಕೆಯಲ್ಲಿ :

ಕನ್ನಡಿಗರಿಗೆ ಮತ್ತೆ ಜೀನ-ಸಾವಿನ ಸಮಸ್ಯೆ (ಸಂಪಾದಕೀಯ)
ಸಂಪಾದಕರು ೧೬೧

ಜಯಂತಿಗೆ ಸಹಾಯಧನ ೧೬೩

ಬಾಪೂಜಿಯ ಸಾಧನೆ ಹಾಗೂ ಸಿದ್ಧಿ (ಒಂದು ವಿವೇಚನೆ)
ಶ್ರಿಮತಿ ಸರೋಜಿನಿ ಮಹಿಷಿ ಎಂ. ಎ., ಎಲ್‌ಎಲ್. ಬಿ. ಧಾರವಾಡ ೧೬೩

ಕನಸಲ್ಲ-ನನಸು (ಸಣ್ಣಕತೆ)
ಶ್ರೀ. ಎಲ್. ಡಿ. ಸಭಾಹಿತ, ಮುಂಬಯಿ ೧೬೫

ಸೋವಿಯಟ್ ಒಕ್ಕೂಟದಲ್ಲಿ....ವಿದ್ಯಾಭ್ಯಾಸ (ಪರಿಚಯಾತ್ಮಕ)
ಸೋವಿಯಟ್ ಒಕ್ಕೂಟದ ಸಮಾಚಾರ--ವಿಚಾರದಿಂದ ೧೭೦

ಗೆಲವಿನ ಹೊಳ್ಳು (ನವ್ಯಕವಿತೆ)
ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್‌ಸಿ. ಎಲ್‌ಎಲ್. ಬಿ. ಮುಂಬಯಿ ೧೭೨

ನಕಲು (ಸಣ್ಣಕತೆ)
ಶ್ರೀ. ಕೆ. ಎ. ಎನ್. ರಾವ್, ಬನಾರಸ ೧೭೪

ವಿಚಾರಕ್ಕೆ ಬಹಿಷ್ಕಾರ (ವಿವೇಚನಾತ್ಮಕ)
ಶ್ರೀ. ಬಿ. ಎಚ್. ಶ್ರೀಧರ ಎಂ. ಎ. ಕೆನರಾ ಕಾಲೇಜ್, ಕುಮಟಾ ೧೭೬

ನಮಸ್ಕಾರ-ಚಮತ್ಕಾರ (ಒಂದು ಹರಟೆ)
ಶ್ರೀ ಎನ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ. ಧಾರವಾಡ ೧೭೯

ಬಲಿದಾನ (ಐತಿಹಾಸಿಕ ರೂಪಕ)
ಶ್ರೀ. 'ಎನ್‌ಪೀಶಂ' ಮದ್ರಾಸು ೧೮೧

ದೇಗುಲದಲ್ಲಿ (ಕವನ)
ಶ್ರೀ. ಕೆ. ಜಿ. ಕೃಷ್ಣಭಟ್ಟ, ಪೆರಡಾಲ (ದ. ಕ.) ೧೮೫

ದೂರದ ಬೆಟ್ಟ (ಪುಸ್ತಕಾವಲೋಕನ)
ಶ್ರೀ. ಲಕ್ಷ್ಮಣ ವಿ. ಜೋಶಿ ಬಿ..ಎ., ಬಿ. ಇಡಿ. ಕೊಡ್ಲಿಗಿ ೧೮೬

ನವದರ್ಶನ (ಅನುವಾದಿತ ಸಣ್ಣಕತೆ)
ಶ್ರೀ. ಎನ್. ಭೀಮಭಟ್ಟರು, ಕನ್ಯಾನ (ದ. ಕ.) ೧೯೦

ಕ್ಷೋಭೆ (ಕವನ)
ಶ್ರೀ. ಯರ್ಮುಂಜ ರಾಮಚಂದ್ರ (ದ. ಕ.) ೧೯೫

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ಎಚ್. ಆರ್. ಶಾಸ್ತ್ರಿ ಮತ್ತು ಶ್ರೀ. ಕೆ. ಎಸ್. ಶರ್ಮಾ ೧೯೬

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೧೮ ಸಂಚಿಕೆ ೫

ಕುಟುಂಬದಲ್ಲಿಯು
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ಚಂದಾ

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಕನ್ನಡಿಗರಿಗೆ ಮತ್ತೆ ಜೀವ-ಸಾವಿನ ಸಮಸ್ಯೆ

ಕನ್ನಡಿಗರು ಆಶಾವಾದಿಗಳಾಗಿ ಕುತೂಹಲಿಗಳಾಗಿ ಕುಳಿತಾಗ, ಮತ್ತೆ ಮತ್ತೆ ನಿರಾಶೆಯು ಏಟುಗಳು. ರಾಜ್ಯಪುನರ್ನಿರ್ಮಾಣದ ಆಯೋಗದ ವರದಿ ಇದುವರೆಗೂ ಅಧಿಕೃತವಾಗಿ ಹೊರಗೆ ಬಂದಿಲ್ಲವಾದರೂ, ಕನ್ನಡ ಜನತೆಯ ಹೃದಯದ ಮೇಲೆ ಆಘಾತಮಾಡುವಂತಹ ಅನೇಕ ವರ್ತಮಾನಗಳು ಒಂದೊಂದಾಗಿ ಹೊರಬಿದ್ದು ಗಾಳಿಯಲ್ಲಿ ಹರಡಿಕೊಂಡಿವೆ.

ಇಂದಿನ ಪ್ರಜಾಪ್ರಭುತ್ವದಲ್ಲಿ ಕೈನಡೆಯುವ ಜನರೆಲ್ಲ ಸ್ವಾರ್ಥಸಾಧಿಸಿಕೊಳ್ಳಲು ನಿಂತುದರಿಂದ, ಸರಕಾರದಿಂದಲೂ ಸರಕಾರವು ನಿಯಮಿಸಿದ ವಿಶೇಷಸಮಿತಿಗಳಿಂದಲೂ ಎಲ್ಲರಿಗೂ ಸರಿಯಾದ ನ್ಯಾಯವು ದೊರೆತೀತೆಂದು ಹೇಳಲು ಬರುವಂತಿಲ್ಲ. ಸರಕಾರದ ಪ್ರಾಮಾಣಿಕತೆಯ ಮೇಲೆ ನಂಬುಗೆಯಿರಿಸಿ ಸುಮ್ಮಗೆ ಕುಳಿತುಕೊಂಡ ಜನರೇ ಅನ್ಯಾಯದ ಆಘಾತಗಳನ್ನು ಅನುಭವಿಸಬೇಕಾಗಿ ಬರುವುದು.

ಈಗ ಗಾಳಿಯಲ್ಲಿರುವ ವರ್ತಮಾನಗಳೆಲ್ಲ ನಿಜವಿದ್ದರೆ, ಆಯೋಗಸಮಿತಿಯು ಕನ್ನಡಿಗರ ಮೇಲೆ ಮಾಡಿದಷ್ಟು ಅನ್ಯಾಯವನ್ನು ಇನ್ನಾರಿಗೂ ಮಾಡಿಲ್ಲವೆಂದು ಹೇಳುವಂತಿದೆ. ರಾಜ್ಯಪುನರ್ನಿರ್ಮಾಣದ ವಿಚಾರದಲ್ಲಿ ಭಾಷಾದೃಷ್ಟಿಯೊಂದನ್ನೇ ಪ್ರಾಧಾನ್ಯವಾಗಿ ಇರಿಸಿಕೊಳ್ಳಲಾಗಿಲ್ಲವೆಂದು ಆಯೋಗದ ಹೇಳಿಕೆ. ಹಾಗಿದ್ದರೆ ಬೆಳಗಾಂವಿ ಜಿಲ್ಲೆಯಿಂದ ಚಂದಗಡ ತಾಲೂಕನ್ನೂ ದಕ್ಷಿಣಕನ್ನಡ ಜಿಲ್ಲೆಯಿಂದ ಕಾಸರಗೋಡು ತಾಲೂಕನ್ನೂ ಶಿವುಟ ಬೇರೆ ರಾಜ್ಯಗಳಿಗೆ ಕೊಟ್ಟುದೇಕೆ? ಇದೇ ದೃಷ್ಟಿಯಿಂದ ನೋಡಿ ಸೊಲ್ಲಾಪುರ, ದಕ್ಷಿಣಸಾತಾರೆ, ಉತ್ತರಸಾತಾರೆ, ಅನಂತಪುರ, ಸೇಲಂ, ನೀಲಗಿರಿ, ಮೊದಲಾದ ಜಿಲ್ಲೆಗಳಿಗೆ ಸೇರಿದ ಕನ್ನಡ ತಾಲ್ಲೂಕುಗಳನ್ನು ಕರ್ನಾಟಕಕ್ಕೆ ಏಕೆ ಕೂಡಿಸಬಾರದಾಗಿತ್ತು? ಕರ್ನಾಟಕ ರಾಜ್ಯದಲ್ಲಿ ಕನ್ನಡ ಪ್ರದೇಶವೆಲ್ಲ ಒಟ್ಟುಗೂಡಬೇಕೆಂಬುದೇ ಕನ್ನಡಿಗರ ಇಚ್ಛೆಯಲ್ಲವೆ? ಬೇರೆಯ ರಾಜ್ಯಗಳಿಗೆ ಸೇರಿದ ಕನ್ನಡಿಗರಿಗೆ, ತಮ್ಮ ಭಾಷೆ-ಸಂಸ್ಕೃತಿಗಳನ್ನು ಉಳಿಸಿಕೊಂಡು ಬಾಳುವುದಕ್ಕೆ ಅವಕಾಶವಾಗಬೇಕೆಂಬುದರ ಯೋಚನೆಯನ್ನು, ಸರ್ವರ ಕಲ್ಯಾಣದ ವಿಚಾರವನ್ನು ಮಾಡಲಿದ್ದ ಆಯೋಗಸಮಿತಿಯವರು ಮಾಡಿರುವರೆ?

ಬಳ್ಳಾರಿಯ ಮೂರು ಅಚ್ಚಕೆಚ್ಚಿನ ತಾಲ್ಲೂಕುಗಳನ್ನು ಆಂಧ್ರರಾಜ್ಯಕ್ಕೆ ಸೇರಿಸಬೇಕೆಂದು ಮಾಡಿದ ಆಯೋಗದ ನಿರ್ಣಯವಂತೂ ಅನ್ಯಾಯದ ಶಿಖರವನ್ನೇರಿ ನಿಂತಿದೆ. ಈ ನಿರ್ಣಯದ ವಿಚಾರದಲ್ಲಿ ಆಯೋಗದ ಸದಸ್ಯರು ಸ್ವಂತದ ಅಭಿಪ್ರಾಯಕ್ಕಿಂತ ಆಂಧ್ರಧುರೀಣರ ಪ್ರಭಾವದಾಕ್ಷಿಣ್ಯಕ್ಕೊಳಗಾಗಿರುವರೆಂದು ಯಾರಿಗೂ ಎನಿಸುವಂತಿದೆ. ಬಳ್ಳಾರಿ ಜಿಲ್ಲೆಯ ಕನ್ನಡತನವನ್ನು ಕುರಿತು ಹೊಸತಾಗಿ ವಿಚಾರಮಾಡಬೇಕಾದ ಕಾರಣವೇ ಈಗ ಉಳಿದಿಲ್ಲ. ಹಿಂದೆಯೆ ರಾಷ್ಟ್ರಸಭೆ ಪಂಚಾಯತಿ ನಡೆಸಿ ನಿರ್ಣಯಕೊಟ್ಟಿದೆ. ಇಂದಿನ ಸರಕಾರವೂ ಒಂದಲ್ಲ ಎರಡುಸಲ ಬೇರೆ ಬೇರೆ ಸಮಿತಿಗಳನ್ನು ನಿಯಮಿಸಿ, ಬಳ್ಳಾರಿಯ ಆರು ತಾಲ್ಲೂಕುಗಳ ಕನ್ನಡತನವನ್ನು ಸಿದ್ಧಗೊಳಿಸಿದೆ. ಹೀಗಿದ್ದರೂ ಬಳ್ಳಾರಿ ಜಿಲ್ಲೆಯ ಮೂರು ತಾಲ್ಲೂಕುಗಳು ಆಂಧ್ರರಾಜ್ಯಕ್ಕೆ ಸೇರಬೇಕೆ? ತಮ್ಮ ನಾಡು-ನುಡಿಗಳ ಬಗೆಗೆ ಅತಿರೇಕಾಭಿಮಾನಿಗಳಾದ ಆಂಧ್ರರು, ಆ ತಾಲ್ಲೂಕುಗಳಲ್ಲಿಯ ಬಹುಸಂಖ್ಯಾಕ ಕನ್ನಡಿಗರನ್ನು ಕನ್ನಡಿಗರನ್ನಾಗಿ ಉಳಿಸಬಹುದೆ? ಇಷ್ಟೆಲ್ಲ ಕನ್ನಡ ಪ್ರದೇಶವನ್ನೂ ಕನ್ನಡಜನತೆಯನ್ನೂ ಕಳೆದುಕೊಂಡು ಘಟಿತವಾಗಲಿರುವ ಕರ್ನಾಟಕರಾಜ್ಯವನ್ನು ತೆಗೆದುಕೂಂಡು ಮಾಡುವುದಾದರೂ ಏನು? ಕರ್ನಾಟಕ ರಾಜ್ಯ ಕನ್ನಡಿಗರೆಲ್ಲರ ಜೀವನದ ಅಭ್ಯುದಯಕ್ಕಾಗಿ ಬೇಕಾಗಿದೆ; ಕೇವಲ ಕೆಲವೊಂದು ಮುಂದಾಳುಗಳನ್ನು ಮಂತ್ರಿಗಳನ್ನಾಗಿ ಅಧಿಕಾರಿಗಳನ್ನಾಗಿ ಮಾಡಿ ಮೆರೆಸುವುದಕ್ಕಲ್ಲ!

ಆಯೋಗದ ಸದಸ್ಯರಿಗೆ, ಕನ್ನಡಿಗರು ಕರ್ನಾಟಕರಾಜ್ಯವನ್ನು ಏಕಕ್ಕಾಗಿ ಬೇಡುತ್ತಲಿದ್ದಾರೆಂಬುದರ ಸಂಪೂರ್ಣ ಕಲ್ಪನೆಯೇ ಇದ್ದಂತಿಲ್ಲ. ಇದು ಇದ್ದರೆ, ಹೈದರಾಬಾದ್ ರಾಜ್ಯವನ್ನು ಈ ರೀತಿಯಾಗಿ ಒಡೆಯುತ್ತಿರಲಿಲ್ಲ. ಕನ್ನಡ ಪ್ರಾಚೀನ ಸಂಸ್ಕೃತಿಯ ಕೇಂದ್ರವಾದ ಬೀದರ್ ಜಿಲ್ಲೆಯನ್ನು, ಆಂಧ್ರರ ರಾಜ್ಯವಾಗಲಿದ್ದ ಹೈದರಾಬಾದಿಗೆ ಸೇರಿಸುವುದರಿಂದ, ಅಲ್ಲಿಯ ಜನರ ಹಿತವು ಯಾವರೀತಿಯಲ್ಲಿ ಸಾಧಿಸಬಹುದೆಂದು ಅವರ ಭಾವನೆಯಿರಬಹುದು? ಬೀದರ್ ಜಿಲ್ಲೆಗೆ ಆಂಧ್ರ ಭಾಷೆಯ ಸಂಪರ್ಕ ಸ್ವಲ್ಪವೂ ಇಲ್ಲ; ಇದ್ದರೆ ಉತ್ತರಭಾಗದ ಕೆಲವು ಪ್ರದೇಶದಲ್ಲಿ ಮರಾಠೀ ಭಾಷೆಯ ಸಂಪರ್ಕ ವಿರಬಹುದು. ಆದರೂ ಅದು ಆಂಧ್ರರ ಕೈವಾಡಕ್ಕೆ ಸಿಕ್ಕಿಕೊಳ್ಳಬೇಕಂತೆ!

ಕನ್ನಡಿಗರಿಗಾಗಿರುವ ಅನ್ಯಾಯದ ಕಣ್ಣುಗಳಿಂದ ನೋಡಿದರೆ ಸಮುದ್ರಮಂಥನವಾಗಿ ಕಾಲಕೂಟವನ್ನು ಹೊರಕ್ಕೆ ಹೊರಡಿಸಿದಂತಾಗಿದೆ ಈ ಆಯೋಗದ ನಿರ್ಣಯ. ಪಕ್ಷ-ಪಂಗಡಗಳ ಪ್ರಭಾವದಾಕ್ಷಿಣ್ಯಗಳಿಗೆ ಒಳಗಾಗಿ ಕನ್ನಡಿಗರು ಈ ಕಾಲಕೂಟವನ್ನು ಕುಡಿಯಲು ಒಪ್ಪಿಕೊಂಡುಬಿಟ್ಟರೆ, ಕರ್ನಾಟಕದ ಜೀವಾಳಗಳೇ ಸತ್ತ್ವಹೀನವಾಗಿ ಹೋಗಬಹುದು.

ಕನ್ನಡ ವೀರ-ಸಾಂಸ್ಕೃತಿಕ ಜೀವನದ ಮುನ್ನೂರು ವರ್ಷಗಳ ಕಾರ್ಯಕ್ಷೇತ್ರವಾಗಿ ಪರಿಣಮಿಸಿದ, ನಮ್ಮ ಅಭಿಮಾನದ ಪುಣ್ಯಕ್ಷೇತ್ರ ಹಂಪೆ-ವಿಜಯನಗರಗಳನ್ನು ಕಳೆದುಕೊಳ್ಳಬೇಕೇ ನಾವು? ಶ್ರೀಬಸವಣ್ಣನವರು ಬದುಕಿ-ಬಾಳಿ, ಅನೇಕ ಶರಣರನ್ನು ಕೂಡಿಸಿ, ಅನುಭವಮಂಟಪವನ್ನು ಸ್ಥಾಪಿಸಿದ ಕಲ್ಯಾಣದ ಪವಿತ್ರಭೂಮಿಗೆ ಹೊರತಾಗಬೇಕೇ ನಾವು? ಈಗ ಕಳೆದು ಕೊಂಡ ಕನ್ನಡ ಬಳಗವನ್ನು ಮತ್ತೆ ನಾವು ಕೂಡಿಕೊಳ್ಳುವ ಹಾದಿಗಳು ಉಳಿಯಬಹುದೆ? ಇದರ ಕಲ್ಪನೆ ಮಾಡಿದರೂ ಕನ್ನಡಿಗರ ಕರುಳು ಅಸಹನೀಯ ದುಃಖಸುರಿಯಿಂದ ಬೆಂದು ಹೋಗಬಹುದು.

ಸಂತಾಪದ ವಿಷಯವೊಂದು: ಇಂತಹ ಜೀವ-ಸಾವಿನ ಸಂದರ್ಭದಲ್ಲಿಯೂ ಅಧಿಕಾರಲೋಲುಪರಾದ ನಮ್ಮ ಕೆಲವು ಜನ ಧುರೀಣರು, ಪಕ್ಷದಾಕ್ಷಿಣ್ಯದ ಮೂಲಕ ಬಾಯಿಮುಚ್ಚಿ ಸುಮ್ಮಗಿರಬಹುದಾಗಿದೆ. ಮೈಸೂರಿನ ಕೆಲವು ಅಧಿಕಾರಪ್ರಿಯರಿಗಂತೂ ಕರ್ನಾಟಕರಾಜ್ಯ ನಿರ್ಮಾಣವೇ ಬೇಡವಾಗಿದೆ ಮೂರು ದಿನಗಳ ತಮ್ಮ ನೈಯಕ್ತಿಕ ಅಧಿಕಾರದ ಸ್ವಾರ್ಥಕ್ಕಾಗಿ ಅವರು ಕರ್ನಾಟಕದ ಶಾಶ್ವತ ಅಕಲ್ಯಾಣವನ್ನು ಮಾಡಲಿಕ್ಕೇ ಸಿದ್ಧರಾಗಿ ನಿಂತಿದ್ದಾರೆ. ಮೈಸೂರಿನ ಮುಖ್ಯಮಂತ್ರಿಗಳ ಮಾತಿನ ಮತ್ತು ಕೃತಿಯ ಘೋರಣದ ಅರ್ಥವೇ ಜನರಿಗೆ ಅಗದಂತಾಗಿದೆ. ಸಂದರ್ಭಕ್ಕೆ ಅನುಕೂಲವೆನಿಸುವಂತೆ ಅವರು, ಬೇಕಾದಲ್ಲಿ ಬೇಕಾದಂತೆ ಮಾತನಾಡುತ್ತಲಿದ್ದಾರೆ. ಆಯೋಗದ ಈ ಬಗೆಯ ನಿರ್ಣಯಕ್ಕೆ ಕನ್ನಡಿಗರಲ್ಲಿಯ ಸಡಿಲುತನವೂ ನಿಷ್ಠಾಭಿನ್ನತೆಯೂ ಮುಖ್ಯ ಕಾರಣವಾದುದು ಸರಿಯೇ ಸರಿ.

ಇದ್ದುದರಲ್ಲಿಯೇ ಒಂದು ಸಮಾಧಾನಪಡಬೇಕಾದ ಸಂಗತಿಯೆಂದರೆ, ಉತ್ತರ ಕನ್ನಡಿಗರ—ಉತ್ಕಟಭಾವನೆಯಿಂದ ನಡೆಸಿರುವ—ಒಮ್ಮತದ ಚಟುವಟಿಕೆಗಳು. ಇಲ್ಲಿಯ ಎಲ್ಲ ಧುರೀಣರೂ ಕರ್ನಾಟಕ ರಾಜ್ಯನಿರ್ಮಾಣಕ್ಕಾಗಿ ಆತುರರಿರುವರಲ್ಲದೆ, ಆಯೋಗದ ನಿರ್ಣಯವನ್ನು ಎಲ್ಲರೂ ಪ್ರಬಲವಾಗಿ ವಿರೋಧಿಸುತ್ತಲಿದ್ದಾರೆ. ಸಂದರ್ಭ ಬಂದರೆ, ನಿರ್ಣಯವನ್ನು ಪ್ರತಿಭಟಿಸಿ ನಿಲ್ಲಲಿಕ್ಕೂ ಸಿದ್ಧರಾಗಿದ್ದಾರೆ. ಸಂಪೂರ್ಣ ಕರ್ನಾಟಕದ ರಚನೆಗಾಗಿ ಅಲ್ಲಲ್ಲಿ ಅವಶ್ಯಕ ಚಟುವಟಿಕೆಗಳನ್ನೂ ನಡೆಸಿದ್ದಾರೆ.

ನಮ್ಮ ಕೇಂದ್ರಸರಕಾರವು ಆಯೋಗದ ನಿರ್ಣಯಗಳನ್ನು ಇದ್ದುದಿದ್ದಂತೆ ಸ್ವೀಕರಿಸಲಿಕ್ಕಿಲ್ಲ. ಕನ್ನಡಿಗರಿಗಾಗಿರುವ ಅನ್ಯಾಯದ ವಿಚಾರವನ್ನೆದು ನೂಡಬಹುದು. ಆದರೆ ಹಾಗದು ಮಾಡಲಿಕ್ಕೆ ಸಿದ್ಧವಾಗದೆ ಹೋದರೆ, ತಮ್ಮ ಹಕ್ಕು-ಬಾಧ್ಯತೆಗಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಕನ್ನಡಿಗರೆಲ್ಲ ಒಂದುಗೂಡಿ, ಸರಕಾರವನ್ನೇ ಪ್ರತಿಭಟಿಸುವ ಪ್ರಸಂಗ ಬರಬಹುದು. ಆ ಪ್ರಸಂಗವು ಬಹಳ ದೂರದಲ್ಲಿಯೂ ಇರಲಾರದು. ಕನ್ನಡ ಭಾಗ್ಯವಿಧಾತ ಅಂತಹ ಪ್ರಸಂಗವನ್ನು ತಾರದಿದ್ದರೆ ಎಲ್ಲರಿಗೂ ಒಳ್ಳೆಯದು.

ಬೆಳಗಾಂವಿಯಲ್ಲಿ ಬಂಡುಗಾರಿಕೆ

ಬೆಳಗಾಂವಿಯಲ್ಲಿ ಮರಾಠಿ ಮಾತನಾಡುವವರ ಸಂಖ್ಯೆ ಸಾಕಷ್ಟು ಇದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು ಅಲ್ಲಿ ಮರಾಠಿಗರು ಏಕೆ ಹೆಚ್ಚಾಗಿ ಇರುವರೆಂದು ಹೇಳುವುದು ಚರ್ವಿತಚರ್ವಣದ ವಿಷಯವಾದೀತು. ಇದೀಗ ಬೆಳಗಾಂವಿ ಕರ್ನಾಟಕದ್ದೆಂದು ಆಯೋಗ ನಿರ್ಣಯಿಸಿದೆಯೆಂಬ ವರ್ತಮಾನ ಹೊರಬೀಳುವುದೇ ತಡ; ಅಲ್ಲಿಯ ಕೆಲವು ಮರಾಠೀ ಕಿಡಿಗೇಡಿಗಳು ಕನ್ನಡಿಗರನ್ನು ಎದುರಿಸುವ ಸಿದ್ಧತೆಗೇ ತೊಡಗಿದ್ದಾರೆ. ಬೆಳಗಾಂವಿಯು ಕರ್ನಾಟಕತ್ವವನ್ನು ಒಪ್ಪುವ ಸಮಂಜಸ ಬುದ್ಧಿಯ ಮರಾಠಿಗರು ಬೆಳಗಾಂವಿಯಲ್ಲಿ ಇಲ್ಲವೆಂತಲ್ಲ; ಅವರೇ ಬಹುಸಂಖ್ಯಾಕರಾಗಿದ್ದಾರೆ. ಆದರೆ ಅತಿವಾದಿಗಳಾದ ಕೆಲವು ಜನ ಪೊಣೆಗೇಡಿಗಳು, ಮರಾಠೀ ಮುಂದಾಳುಗಳುಗಳೆಂಬ ಅಭಾಸವನ್ನೊಡ್ಡಿ ಗೊಂದಲಮಾಡಲು ತೊಡಗಿದ್ದಾರೆ. ಅವರ ಗೊಂದಲ ಬೆಳಗಾಂವಿಯ ಕನ್ನಡಿಗರ ಮನಸ್ಸನ್ನು ರೇಗಿಸಿಬಿಟ್ಟಿದೆ ತಮ್ಮ ಹಕ್ಕು-ಬಾಧ್ಯತೆಗಳನ್ನು ಕಾಯ್ದುಕೊಳ್ಳುವಲ್ಲಿ ಕನ್ನಡಿಗರು ಹೇಡಿಗಳಾಗಿ ಹಿಂದುಳಿಯಲಾರರೆಂಬುದನ್ನು ಈ ಮರಾಠೀ ಕಿಡಿಗೇಡಿಗಳು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಕನ್ನಡಿಗರ ಸ್ವಭಾವ, ತಾನೂ ಬದುಕಿ ಇನ್ನೊಬ್ಬರನ್ನೂ ಬದುಕಗೊಡಬೇಕೆನ್ನುವ ಉಚ್ಚಮಟ್ಟಕ್ಕೆ ಸೇರಿದುದು. ಹೋರಾಟಕ್ಕೆ ನಿಲ್ಲುವುದಾದಲ್ಲಿ ಅವರು ಯಾರಿಗೂ ಹೆದರಿ ಹಿಂಜರಿಯುವವರಲ್ಲವೆಂಬುದನ್ನು ಬೆಳಗಾಂವಿಯ ಈ ಕಿಡಿಗೇಡಿಗಳು ಮರೆಯಬಾರದು.

—ಸಂಪಾದಕರು

ಬಾಪೂಜಿಯ ಸಾಧನೆ ಹಾಗೂ ಸಿದ್ಧಿ!

ಲೇ. ಸರೋಜಿನಿ ಮಹಿಷಿ, ಎಂ ಎ., ಎಲ್‌ಎಲ್. ಬಿ. ಧಾರವಾಡ

ಜಯಂತಿಗೆ ಸಹಾಯಧನ

ಶ್ರೀಮಾನ್ ರಂಗರಾವ ಸ್ವಾ. ದೇಶಪಾಂಡೆ, ಆಲದಕಟ್ಟಿ

೧೦ ರೂಪಾಯಿಗಳು

ಇವರು ಜಯಂತಿಗೆ ಮೊದಲಿನಿಂದಲೂ ಚಂದಾದಾರರಾಗಿ ಇರುವರಲ್ಲದೆ, ಜಯಂತಿಯ ಯೋಗ-ಕ್ಷೇಮವನ್ನು ಯಾವಾಗಲೂ ವಿಚಾರಿಸುವ ಹಿರಿಯ ಹಿತಚಿಂತಕರು. ಈಗ ಜಯಂತಿಯ ಸಹಾಯಧನವೆಂದು ೧೦ ರೂ. ಗಳನ್ನು ಅಂಚೆಯ ಮೂಲಕ ಕಳುಹಿರುವರು.

ಶ್ರೀ. ಎ. ಎನ್. ಜೋಶಿ, ಭಾಂಡುಪ—ಮುಂಬಯಿ

೧೦ ರೂಪಾಯಿಗಳು

ಇವರು ಹಣವನ್ನು ಕಳುಹುತ್ತ ಮನಿಯಾರ್ಡರಿನ ಕೂಪನ್ನಿನಲ್ಲಿ ಹೀಗೆ ಬರೆದಿರುವರು:

" ಮಾನ್ಯ ಸಂಪಾದಕರಿಗೆ— ಜಯಂತಿಯ ಓದುಗರಲ್ಲೊಬ್ಬನ ವಂದನೆಗಳು. ನಿಮ್ಮ ಪತ್ರಿಕೆಗೆ ಸಹಾಯಧನವೆಂದು ಈಗ ಎರಡು ತಿಂಗಳ ಮೊದಲು ಹಣ ಕಳುಹಬೇಕೆಂದು ಮಾಡಿದ್ದೆ; ಆದರೆ ಸಹಾಯಧನವೆಂದ ಬಳಿಕ, ಕನಿಷ್ಠ ೧೦ ರೂಪಾಯಿಗಳನ್ನಾದರೂ ಕಳುಹಬೇಕೆಂದು ಯೋಚಿಸಿ, ಸುಮ್ಮನೆ ಕುಳಿತೆ. ನನ್ನ ಕೈಯಲ್ಲಿ ಒಮ್ಮೆಲೆ ೧೦ ರೂ. ಉಳಿಯುವ ಸಂಭವವಿಲ್ಲೆಂದು ತಿಳಿಯಿತು. ಹೀಗಾದರೆ ನಿಮ್ಮ ಪತ್ರಿಕೆಗೆ ಹಣ ಕಳುಹುವ ಬಗೆ ಹೇಗೆ? ತಕ್ಷಣ ಒಂದು ಗಾದೆಯ ಮಾತು ನೆನಪಿಗೆ ಬಂತು: 'ಹನಿಗೆ ಹನಿ ಕೂಡಿ ಹಳ್ಳ!' ಕೂಡಲೆ ಈ ೩ ರೂ.ಗಳನ್ನು ಮನಿಯಾರ್ಡರು ಮಾಡಿದೆ. "

ಶ್ರೀ. ಜೋಶಿಯವರು ಬರೆದ ಮಾತುಗಳನ್ನು ನೋಡಿದಾಗ, ನಮಗೆ ಸ್ವರ್ಗೀಯ ಶಾಂತಕವಿಗಳು ಬರೆದ ಒಂದು ಪದ್ಯ ಜ್ಞಾಪಕಕ್ಕೆ ಬಂದಿತು :

" ಚಿನ್ನದ ಕಂಕಣ ಕೈಕಾಸನಿತ್ತಿತು
ಹೊನ್ನಿನೊಂಕೆಯ ಕೈ ಇಲ್ಲೆಂದಿತು;
ರನ್ನದುಂಗುರದ ಕೈ ಸುಮ್ಮನೆ ಕುಳಿತಿತು,
ಇನ್ನೊಂದು ಬಡಗೈ ಹಣಕೊಟ್ಟಿತು. "

ಕನ್ನಡದ ಸೇವೆಗಾಗಿ ದಾಸಯ್ಯರಾಗಿ ಭಿಕ್ಷೆಗೆ ಹೊರಟಾಗ, ತಾವು ಕಂಡುಂಡುದನ್ನು ಸ್ವ. ಶಾಂತಕವಿಗಳು ಈ ಪದ್ಯದಲ್ಲಿ ಜೆನ್ನಾಗಿ ಮೂಡಿಸಿದ್ದಾರೆ.

ಶ್ರೀ. ಜ. ಶ್ರೀ. ದೇಸಾಯಿ, ಜರಕುಂಟಿ

೫ ರೂಪಾಯಿಗಳು

ಇವರೂ ಜಯಂತಿಯ ಚಂದಾದಾರರು; ಜಯಂತಿಯ ಅಭಿಮಾನಿಗಳು. ಇವರು ತಮ್ಮ ಪತ್ರದಲ್ಲಿ ಹೀಗೆ ಬರೆದಿದ್ದಾರೆ:

" ಜಯಂತಿಯ ಆರ್ಥಿಕ ಕುಹಯೋಗ ನಿವಾರಣೆಗೆಂದ ಏನೋ ಕಳುಹಬೇಕೆಂದು ಪ್ರೇರಣೆಯಾದಂತೆ ಕಳಿಸಿರುವೆ. ಈ ಐದು ರೂಪಾಯಿಗಳನ್ನು ನೀವು, ಆರ್ಥಿಕ ಸಂಕಟದ ಭೂತೋಚ್ಚಾಟನ ಶಕ್ತಿಯುಳ್ಳ—ಮಂತ್ರಾಕ್ಷತೆಯ ಐದು ಕಾಳುಗಳೆಂದು ಭಾವಿಸಬೇಕಾಗಿ ವಿನಂತಿ. "

ಜಯಂತಿಗೆ ಸಹಾಯಮಾಡಬೇಕೆಂಬ ಭಾವನೆಯಿಂದಲೇ ಶ್ರೀಮಾನ್ ಎಸ್. ಎನ್. ನಾಯಿಕ, ರಿಝರ್ವ್ ಬ್ಯಾಂಕ್—ಮುಂಬಯಿ ಅವರು ಸಹಾನುಭೂತಿಪೂರ್ಣವಾದ ಕಾಗದ ಬರೆದು ಚಂದಾದಾರರಾಗಿದ್ದಾರೆ.

ನಮ್ಮ ಸಹಾಯಕ ಮಹನೀಯರಿಗೆಲ್ಲ ಕೃತಜ್ಞತೆಯ ವಂದನೆಗಳು.

— ಸಂಪಾದಕರು

ಭಾರತೀಯ ಜೀವನಸಿದ್ಧಿಯು ಕಲ್ಪನೆ ಅಧ್ಯಾತ್ಮಿಕ ಉನ್ನತಿಯಲ್ಲಿ ನೆಲೆಗೊಂಡಿದೆ. ಆವ್ಯಕ್ತವಾದಂತಹ ಅದರ ರೂಪ ಜನ್ಮ-ಜನ್ಮಾಂತರಗಳ ಕೋಟಲೆಯಲ್ಲಿ ಸಿಕ್ಕದ ಮುಕ್ತಿರೂಪದಲ್ಲಿದ್ದರೆ, ಅದರ ವ್ಯಕ್ತರೂಪ ತ್ಯಾಗ, ಸೇವೆಗಳಲ್ಲಡಗಿದೆ. ಬಾಪೂಜಿಯಾದರೂ ಇದನ್ನೇ ನಂಬಿದರು. ದೈವಭೀರುಗಳಾದ ಹಿಂದುಗಳಲ್ಲಿ ದೇಶಸೇವೆ, ಸಮಾಜದ ಹೊಸರಚನೆ, ಒಕ್ಕಟ್ಟು ಇವುಗಳ ಬಗ್ಗೆ ಅಭಿಮಾನವನ್ನುಂಟುಮಾಡಲು ಅವರು ಯತ್ನಿಸಿದ್ದು, ಈ ದೈವೀ ಪರಿಭಾಷೆಯಲ್ಲಿಯೇ! ದೇವರು ಸೃಷ್ಟಿಸಿದ ಅಸಂಖ್ಯ ದೇಶಬಾಂಧವರ ಸೇವೆಯಲ್ಲಿ ದೇಶಪ್ರೇಮ-ದೇಶಾಭಿಮಾನಗಳು ಸೇರಿವೆ ಎಂದು ಬೇರೆ ಹೇಳುವುದೇ ಬೇಡ. 'ಆತ್ಮ ಸಾಕ್ಷಾತ್ಕಾರವು, ವನದಲ್ಲಿ ವಾಸವಾಗಿದ್ದು ಸಂನ್ಯಾಸವೃತ್ತಿಯನ್ನು ಕೈಕೊಳ್ಳುವಷ್ಟಲ್ಲ, ಅದರೆ ಜನಸೇವೆಯಿಂದ ಸರ್ವೋದಯವನ್ನು ಸಾಧಿಸುವಲ್ಲಿದೆ' ಎಂಬುದನ್ನು ಬಾಪೂಜಿ ತಾವೇ ನೋಡಲು ಬಳಕೆಯಲ್ಲಿ ತಂದರು. ರಾಜಕೀಯದಲ್ಲಿ ಬಂದ ತತ್ತ್ವಜ್ಞಾನ. ಇವೆರಡರ ಸುಂದರವಾದ ಸಮ್ಮಿಶ್ರಣವನ್ನು ಎತ್ತಿ ತೋರಿಸಬಹುದು.

ಬಾಪೂಜಿಯ ಸಿದ್ಧಿ ಹಾಗೂ ಸಾಧನೆ ಇವೆರಡರಲ್ಲಿ ಏನೇ ಸಾಮ್ಯ ವ್ಯತ್ಯಾಸವಿಲ್ಲ. ಸಿದ್ಧಿ ಒಳ್ಳೆಯದಾಗಿದ್ದರೆ ಸಾಧನೆ ಒಳ್ಳೆಯದಿರಲೇಬೇಕು; ಸಾಧನೆ ಒಳ್ಳೆಯದಿದ್ದರೆ ಸಿದ್ಧಿ ಒಳ್ಳೆಯದಾಗಲೇಬೇಕು. ಒಂದುವೇಳೆ, ಸಿದ್ಧಿ ಒಳ್ಳೆಯದಾಗಿ ಕಾಣದಿದ್ದರೂ, ಅದು ಕೇವಲ ತಾತ್ಕಾಲಿಕ. 'ಕುರು ಕರ್ಮೈವ ತಸ್ಮಾತ್ ತ್ವಂ,' ಅಥವಾ 'ಕರ್ಮಣ್ಯೇವಾಧಿಕಾರಸ್ತೇ' ಎಂಬೂದೂ ಬಾಪೂಜಿಯ ಮೆಚ್ಚಿಕೆಯ ಮಾತು! ಸಾಧನ ಹೇಗಿದ್ದರೂ ಸರಿ, ಸಿದ್ಧಿ ಒಳ್ಳೆಯದಾದರೆ ತೀರಿತು, —ಎಂಬ ಮಾತು ಸಾಮಾನ್ಯರನ್ನು ಆಕರ್ಷಿಸುವುದು ಸಹಜವೇ! ಸಾಧನದ ಮೇಲಿಂದ ಸಿದ್ಧಿಯನ್ನು ತಿಳಿಯುವ ಜನ ಕಡಿಮೆ: ಕಳವು, ಮೋಸ, ವಿಶ್ವಾಸಘಾತ—ಏನಿದ್ದರೂ ಸರಿ, ಪರಿಣಾಮ ಒಳ್ಳೆಯದಾದರೆ ಯಾವ ಸಾಧನದಿಂದೇನು?—ಎಂಬ ಮಾತು ಸತ್ಯವೇ ಎಂದು ಪ್ರಥಮದರ್ಶನಕ್ಕೆ ಗೋಚರಿಸಬಹುದು. ಅಥವಾ ಸ್ವಾರ್ಥಸಿದ್ಧಿಗೆ ಹೆಣಗಾಡುವ ಈ ಸಾಧನ ಸರಿಯಾದುದಲ್ಲ ಎಂಬ ವಿಚಾರವೂ ತಲೆದೋರಲಿಕ್ಕಿಲ್ಲ. ಹಲವು ಸಲ ಯೋಗ್ಯಾಯೋಗ್ಯ ಸಾಧನೆಗಳ ಬಗ್ಗೆ ಹೊಯ್ದಾಟ ನಡೆಯಬಹುದು. ಸಾತ್ತ್ವಿಕ ಮನುಷ್ಯನು ಯೋಗ್ಯ ಸಾಧನವನ್ನೇ ಉಪಯೋಗಿಸಬೇಕೆಂಬುದನ್ನು ಒಪ್ಪಬಹುದು; ಅಯೋಗ್ಯಸಾಧನವನ್ನು ಬಳಸಿದ ಇನ್ನೊಬ್ಬನನ್ನು ತೆಗಳಬಹುದು. ಆದರೆ ವಾಸ್ತವಿಕ ಕ್ಷೇತ್ರಕ್ಕೇ ಕಾಲಿರಿಸಿದಾಗ, ಒಳ್ಳೆಯ ಸಾಧನಗಳನ್ನೇ ಉಪಯೋಗಿಸುವ ಪರೀಕ್ಷೆಯಲ್ಲಿ ಎಷ್ಟು ಜನ ತೇರ್ಗಡೆಯಾಗಬಹುದು?

ಅಲ್ಲದೆ ಅಯೋಗ್ಯ ಸಾಧನಗಳನ್ನು ಪಯೋಗಿಸುವ ಮನುಷ್ಯನು ಎಷ್ಟು ಮಟ್ಟಿಗೆ ಅದರ ಸಿದ್ಧಿಯನ್ನು ತನ್ನ ಕೈಯಲ್ಲಿಟ್ಟುಕೊಳ್ಳಬಲ್ಲ? ಬಳಿಕ ಒಳ್ಳೆಯ ಸಾಧನವನ್ನುಪಯೋಗಿಸಿ, ಒಳ್ಳೆಯ ಫಲವೇ ಉಂಟಾಗುವುದೆಂದು ನಂಬುವುದು ಯೆನೇಗ್ಯವಲ್ಲವೇ? ಸ್ವರಾಜ್ಯಕ್ಕಾಗಿ ಕೈಕೊಂಡ ಹೋರಾಟ ಸ್ವರಾಜ್ಯವೇ! ಆ ಹೋರಾಟದಲ್ಲಿ ಅಯೋಗ್ಯ ಸಾಧನವೇನಾದರೂ ಬಂದಿತೆ, ಸ್ವರಾಜ್ಯದ ಅರ್ಥ ಎಷ್ಟು ಮಟ್ಟಿಗೆ ಪೂರ್ಣವೋ! ಬಾಪೂ ಈ ಮಾತಿನ ಅರ್ಥವನ್ನು ಪ್ರಯೋಗಕ್ಕೆಳಿಸಿ ನೋಡಿದ್ದಾರೆ. ರಾಜಕೋಟದ ಪ್ರಕರಣದಲ್ಲಿ ಪರಕೀಯರ ಬಲದ ಸಹಾಯವನ್ನು ಕೋರಿದ್ದು, ಅನಶನ-ಅಶಾಂತಿಗಳ ಕುರುಹು! ಆದರ ಫಲ ಹೇಗೆ ತಾನೇ ಒಳ್ಳೆಯದಾಗಬಲ್ಲದು?—ಬಾಪೂ ಫಲದ ಬಗ್ಗೆ ಸಾಶಂಕರಾಗಿದ್ದರು!

'ಯೋಗ್ಯಸಾಧನ' ಎಂಬುದೊಂದನ್ನು ಬಿಟ್ಟರೆ, ಅಯೋಗ್ಯ ಸಾಧನದ ವ್ಯಾಪ್ತಿ ಬಹು ದೊಡ್ಡದಾಗಿದೆ. ಮೋಸ, ಕ್ರೌರ್ಯ ಏನೆಲ್ಲವೂ ಇದರಲ್ಲಿ ಬರಬಹುದು. ಇವುಗಳನ್ನುಪಯೋಗಿಸಿಯೂ ಮನುಷ್ಯ ಎಷ್ಟು ಮಟ್ಟಿಗೆ ಅವುಗಳ ಒಳ್ಳೆಯ ಪರಿಣಾಮದ ಬಗ್ಗೆ ನಿಶ್ಚಿಂತನಾಗಿರಬಲ್ಲನು? ಜೀವನದಲ್ಲಿ ಶಾಂತಿ — ಪ್ರಾಮಾಣಿಕ ಪ್ರಯತ್ನದಲ್ಲಿ, ಜೀವಿಜೀವಿಗಳಲ್ಲಿ ಕಂಡುಬರುವ ಸಹೃದಯತೆಯಲ್ಲಿ ಅಡಕವಾಗಿದೆ; ಮಾನವರನ್ನೆಲ್ಲ ಒಟ್ಟಿಗೆ ತಂದು ಉಪಯುಕ್ತವಾದ ಯಾವುದೇ ಸತ್ಕಾರ್ಯಕ್ಕೆ ಅವರನ್ನು ಆಣಿಗೊಳಿಸುವುದರಲ್ಲಿಯೇ ಸತ್ಯ-ಸೌಂದರ್ಯಗಳು ಅಡಕವಾಗಿವೆ.

'ಸಾಧನೆ' ಶುದ್ಧವಾಗಿರಬೇಕು—ಎಂದು ಹೇಳುವಲ್ಲಿ ಗಾಂಧೀಜಿ ಸಿದ್ಧಿಗೆ ಮಹತ್ತ್ವವನ್ನು ಕೊಡಲಿಲ್ಲ ಎಂದು ಹೇಳುವುದೂ ಸಮಂಜಸವಾಗಲಾರದು. ಸಿದ್ಧಿಯಷ್ಟೇ ಪಾವಿತ್ರ್ಯ ಸಾಧನಕ್ಕೆಯೆ—ಎಂಬ ಮಾತನ್ನೇ ಅವರು ಪದೇಪದೇ ಹೇಳಿದ್ದು! ಸಾಧನದ ಪರಿಶುದ್ಧಿಯಲ್ಲಿ ಚಾರಿತ್ರ್ಯವೂ, ನೀತಿಯೂ ಪ್ರಧಾನಸ್ಥಾನವನ್ನು ಆಕ್ರಮಿಸಿವೆ. ನೈತಿಕ, ರಾಜಕೀಯ, ಸಾಮಾಜಿಕ—ಯಾವ ಸಿದ್ಧಿಗಾಗಿ ಹೋರಾಟ ನಡೆದರೂ, ಅದರಲ್ಲಿ ನೀತಿ, ಚಾರಿತ್ರ್ಯ, ಮುಖ್ಯ. ಗಾಂಧೀಜಿಯ ಸಾಬರಮತಿಯ ಸತ್ಯಾಗ್ರಹಾಶ್ರಮದಲ್ಲಿ ಹೇಳಿದ ಪಾಠಶೀಲದ ತತ್ತ್ವಗಳನ್ನೇ ಗಾಂಧೀಜಿ ಕೊನೆಯ ಮನೆಗೂ ಅನುಸರಿಸಿದರು. ಅವೇ ತತ್ತ್ವಗಳು ಇಂದು ಭಾರತದ ಮೂಲಕ ಜಗತ್ತಿನಲ್ಲಿ ಪ್ರಸಾರ ಪಡೆಯುತ್ತಿವೆಯೆಂಬುದು ಕಣ್ಣಿನಂದನೀಯ!

ಭಿನ್ನ ಭಿನ್ನ ಸಂದರ್ಭಗಳಲ್ಲಿ ಬರುವಂತಹ ಸತ್ಯ, ಕೊನೆಗೂ ಹುಡುಕಿಕೊಂಡು ಹೋಗುವುದು ಚಿರಂತನ ಸತ್ಯವನ್ನೇ! ಜಗತ್ತಿನಲ್ಲಿದ್ದುದು ಅದೊಂದೇ:— ಸತ್-ಚಿತ್-ಆನಂದ ಸ್ವರೂಪನಾದ ಪರಮಾತ್ಮ! ಸತ್ಯಂ, ಶಿವಂ, ಸುಂದರಂ! ಸತ್ಯದಲ್ಲಿ ಸೌಂದರ್ಯವನ್ನು ಕಾಣುವುದು ಜೀವನದ ಗುರಿ! ಸತ್ಯವನ್ನು ಅಗ್ರಹಪೂರ್ವಕವಾಗಿ ಸಾಧಿಸಹೊರಟ ಸತ್ಯಾಗ್ರಹಿಯ ಗುರಿಯಾದರೂ ಅದೇ! ಅವನು ಕೈಕೊಳ್ಳುವ ಪ್ರತಿಜ್ಞೆ, ವ್ರತ ಸತ್ಯಾನ್ವೇಷಣೆಯ ಪ್ರಯತ್ನದಲ್ಲಿಯ ಸಾಧನಗಳು. ಈ ಪ್ರತಿಜ್ಞೆಯು ಪೂರ್ತಿಯಾಗಿ ಕೊನೆಗೊಳ್ಳಲೇಬೇಕು ಎಂದು ಹೇಳುವಲ್ಲಾಗಲಿ, ಅಥವಾ ಇದು ಕೊನೆಗೊಳ್ಳುವಂತೆ ನೋಡಿಕೊಳ್ಳುವಲ್ಲಾಗಲಿ ಇರುವ ಸೌಂದರ್ಯಕ್ಕೆಂತ ಆ ಪ್ರತಿಜ್ಞೆಯ ಪೂರ್ತಿಗಾಗಿ ನಡೆದ ಹೋರಾಟದಲ್ಲಿಯೇ ನಿಜವಾದ ಸೌಂದರ್ಯವಿದೆ. ಮುಸುಕಾಗಿದ್ದ ಸತ್ಯವನ್ನು ಬೆಳಕಿಗೆ ತರುವ ಹೋರಾಟವೇ ಮುಖ್ಯವಲ್ಲದೆ, ಸತ್ಯವನ್ನು ಹೊಸದಾಗಿ ಪ್ರಸ್ಥಾಪಿಸುವ ಹೊಣೆ ಅಲ್ಲಿಲ್ಲ! ಅಂತಿಮ ಸತ್ಯ ಮಾತಿನಲ್ಲಿಷ್ಟೇ ಅಲ್ಲ, ಕೃತಿಯಲ್ಲಿಯೂ ಇದೆ; ವಿಚಾರದಲ್ಲಿಯೂ ಇದೆ. ಜೀವನಕ್ಕೆ ಸಂಬಂಧಿಸಿ ವಿವಿಧ ಕ್ಷೇತ್ರಗಳಲ್ಲೂ ಇದೆ. ಈ ಕ್ಷೇತ್ರಗಳಲ್ಲೂ ಸತ್ಯಾನ್ವೇಷಣೆಗಾಗಿ ಪ್ರಗತಿಪಥದಲ್ಲಿ ಹೋರಾಟ ನಡೆಯಲೇ ಬೇಕಾದುದು. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವು, ಈ ಪಥದಲ್ಲಿ ಮೊದಲ ಮೆಟ್ಟಿಲು!

ಸತ್ಯಾಗ್ರಹಿಯಲ್ಲಿ ದ್ವೇಷ, ಅಸೂಯೆ, ಮತ್ಸರ ಇವಾವುದಕ್ಕೂ ಅವಕಾಶವಿಲ್ಲ. ಕಟುವಾದ ಭಾವನೆಯನ್ನು ತನ್ನಿಂದಲೂ, ತನ್ನವರಿಂದಲೂ ದೂರಗೊಳಿಸಿ ಸೌಹಾರ್ದಭಾವನೆಯನ್ನುಂಟುಮಾಡಬೇಕಾದುದು ಅವನ ಕರ್ತವ್ಯ! ಸತ್ಯದ ಪೆಸರಿನಲ್ಲಿ ಹಿಂಸೆಗೆ ಎಡೆಗೊಡುವುದು ಸತ್ಯಾನ್ವೇಷಣೆಯ ಪ್ರಯತ್ನವಲ್ಲ. ಹಿಂಸೆಯಿಲ್ಲದೆ ಹೋರಾಟ ಸಾಧ್ಯವಿರದಿದ್ದರೆ, ಆ ಹೋರಾಟವನ್ನು ಬಿಟ್ಟುಕೊಟ್ಟರೂ ಒಳ್ಳೆಯದೇ! ಹಿಂಸೆ ಶಾರೀರಿಕವಾಗಿರಬಹುದು; ಮಾನಸಿಕವಾಗಿರಬಹುದು ಕಟುವಾಗಿದ್ದರೂ ಸತ್ಯವಾದುದನ್ನು ಪ್ರತಿಪಾದಿಸುವಲ್ಲಿ ಮಾನಸಿಕ ಹಿಂಸೆಯ ಅಭಾಸವಾಗಬಹುದು. ಆದರೆ ಆ ಸತ್ಯ ಕಟುವಾಗಿ ಕಂಡು ಬರುವುದೂ ಅಸತ್ಯದ ಆವರಣವಿದ್ದುದರಿಂದಲೇ! ಈ ಆವರಣವನ್ನು ಅಹಿಂಸೆಯಿಂದ ಕಳಚಿಹಾಕುವುದೇ ಒಳ್ಳೆಯ ಸಾಧನ! ಸತ್ಯದ ವಿವಿಷ್ಕಾರವೇ ಅದರ ಸಿದ್ಧಿ!

ಕನಸಲ್ಲ-ನನಸು!

(ಸಣ್ಣಕತೆ)

ಶ್ರೀ. ಎಲ್. ಡಿ. ಸಭಾಹಿತ, ಮುಂಬಯಿ

●

ಮಾನವನ ಅಜ್ಞಾನದಿಂದೆನ್ನಿ, ವಿಧಿಯ ಕೈಚಳಕದಿಂದೆನ್ನಿ; ಎಂತೆಂತಹ ಅಘಟಿತ ಘಟನೆಗಳು ಲೋಕದಲ್ಲಿ ಘಟಿಸಬಹುದೆಂಬುದರ ನಿಯಮವಿಲ್ಲ. ಇವು ಅಣ್ಣ-ತಂಗಿಯರನ್ನು ಗಂಡ-ಹೆಂಡಿರನ್ನೂ ಆಗಿಸಬಲ್ಲವು.

●

ಪೋಸ್ಟ್‌ಮನನು ಗುಲಾಬಿ ರಂಗಿನ ಕವರೊಂದನ್ನು ಕೈಗಿತ್ತಾಗಲೇ ಮೃದುಲಾಬೇನ ಊಹಿಸಿಕೊಂಡಳು: ಇದೇನೋ ಕರೆಯೋಲೆ ಎಂದು. 'Wedding' ಎಂದು ಕವರಿನ ಮೇಲ್ಬದಿಗೆ ಅಚ್ಚುಹಾಕಿಸಿರುವುದನ್ನು ಓದಿದಾಗ, ಅವಳಿಗೆ ತನ್ನ ಊಹೆ ನಿಜವೆಂದು ತಿಳಿದಿತ್ತು. 'ಎಲ್ಲಿಂದ ಬಂತು? ನನಗೆ ಆಮಂತ್ರಣ ಕೊಡುವವರು ಯಾರು?' ಎಂದು ಆಶ್ಚರ್ಯ-ಕುತೂಹಲಗಳಿಂದ ಅವಳು ಬುಕ್‌ಪೋಸ್ಟ್ ಆಗಿ ಬಂದಿದ್ದ ಆ ಅರ್ಧತೆರೆದಿದ್ದ ಕವರಿನೊಳಗಿಂದ ಚಿಕ್ಕ ಕಾರ್ಡನ್ನು ಹೊರಗೆ ತೆಗೆದು ಓದತೊಡಗಿದಳು. ಅದು ಅಹಮದಾಬಾದಿನಿಂದ 'ಪ್ರೇಮಕುಮಾರನ ಲಗ್ನಕ್ಕೆ ಬರಬೇಕು' ಎಂದು, ರಸಿಕಲಾಲ ಶಾಹರಿಂದ ಅವಳಿಗೆ ಬಂದ ಆಮಂತ್ರಣವಾಗಿತ್ತು. "ಲಗ್ನದ ಹೊತ್ತಿಗೆ ಇವರು ನನ್ನನ್ನು ಮರೆಯಲಿಲ್ಲವಲ್ಲ! ಅದೇ ಪ್ರೇಮಕುಮಾರನನ್ನು ನಾನೇ ಬೆಳೆಸಬೇಕು ಎಂದುಕೊಂಡಿದ್ದರೆ ಅವನೀಗ ಯಾವ ಅವಸ್ಥೆಯಲ್ಲಿರುತ್ತಿದ್ದನೊ! ಈ ವೈಭವವನ್ನು ಕಾಣುವುದೇನೂ ಶಕ್ಯವಾದ ಮಾತಾಗಿರಲಿಲ್ಲ. ಆಗಲಿ, ಅವನು ಸುಖದಲ್ಲಿ ಬೆಳೆದನಲ್ಲ! ಅಲ್ಲಮುದುವೆ ಎಂದು?—ಎಂದು ನಾನು ಓದಲೇ ಇಲ್ಲವಲ್ಲ!" ಎಂದು ಮತ್ತೆ ಓದಿದಳು. "ಓ, ಇಂದೇ ಸಂಜೆಯ ೬-೩೦ ಕ್ಕೆ. ಈಗ ೩ ಗಂಟೆ. ನಾನಿನ್ನು ಹೋಗುವ ಮಾತು ದೂರವೇ ಉಳಿಯಿತು. ಮೊದಲೇ ತಿಳಿಸಿದ್ದರೂ ನಾನು ಇಲ್ಲಿಯ ಕೆಲಸ ಬಿಟ್ಟು ಹೊರಟುಹೋಗುವುದೂ ಶಕ್ಯದ ಮಾತಾಗಿರಲಿಲ್ಲ. ಒಮ್ಮೆ ಹೋದರೂ, ಇಂತಹ ಸಡಗರದ ಸಮಯದಲ್ಲಿ ಔಪಚಾರಿಕವಾಗಿಯಾದರೂ ನನ್ನನ್ನಲ್ಲಿ ಯಾರಾದರೂ ಮಾತನಾಡಿಸಬಹುದು ಎಂದು ಊಹಿಸುವಂತೆಯೂ ಇಲ್ಲ. ನಾನು ಹೋದರೆಷ್ಟು, ಹೋಗದಿದ್ದರೆಷ್ಟು! ನಾನು ಮುದ್ದಾಗಿ ಬೆಳೆಸಬೇಕು ಎಂದುಕೊಂಡ ಮಗು ಸುಖದಲ್ಲಿ ಬೆಳೆದು, ಇನ್ನೇನು ಸಾಂಸಾರಿಕ ಜೀವನಕ್ಕೆ ಹತ್ತುವುದಲ್ಲ! ಒಂದು ರೀತಿಯಿಂದ ನಾನು ಹೋಗದಿರುವುದೇ ಮೇಲು. ಆವನು ಸುಖವಾಗಿರುವನೆಂದು ಕೇಳುವುದೇ ನನಗೆ ಸರನು ಸುಖ. ಥೂ, ನನ್ನ ಹಾಳು ಮರಿವೆಗೇನು ಹೇಳಬೇಕು? ವಧು ಯಾವಳು—ಎಂದು ಇನ್ನು ಹೊತ್ತಾದರೂ ಓದಿಕೊಳ್ಳಲೇ ಇಲ್ಲ ಮತ್ತೆ!" ಎಂದು ತಿರುಗಿ ಕಾರ್ಡಿನ ಮೇಲೆ ದೃಷ್ಟಿ ಹರಿಸಿದಳು—"ಚಿಮನಲಾಲ ವ್ರಜಲಾಲ, ದೇಸಾಯಿ, ಸೊಲ್ಲಾಪುರ ಇವರ ಹಿರಿಯ ಮಗಳು ಸ್ನೇಹಚೀನ" ಎಂದು ಓದಿದಾಗ, ಏಕೋ ಅವಳಿಗೆ ಉಸಿರು ತಡೆದಂತಾಯಿತು. ನಿದಾನವಾಗಿ ಆಫೀಸುರೂಮಿಗೆ ನಡೆದಳು. ಇದೇನು ಕನಸೆ?—ಎಂದು ಕೈಯಲ್ಲಿ ಹಿಡಿದ ಕರೆಯೋಲೆಯನ್ನೇ ನಿಟ್ಟಿಸುತ್ತ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆ, ಹಳೆಯ ನೆನಪುಗಳೆಲ್ಲ ಒಂದೊಂದಾಗಿ ಮನದಲ್ಲಿ ಮರುಕಳಿಸತೊಡಗಿದ್ದುವು:—

ಇಪ್ಪತ್ತೈರಡು ವರ್ಷಗಳ ಹಿಂದಿನ ಮಾತು. ಮೃದುಲಾಬೇನ್ ಇದೇ ಆಫೀಸುರೂಮಿನಲ್ಲಿ ಕುಳಿತಿದ್ದಳು. ಆ ದಿನ ಇದೇ ಹೊತ್ತಿಗೆ, ಮಗನಲಾಲರ ಡ್ರಾಯ್ವರು, ಅವರ ಅರ್ಜಂಟ್ ಕರೆಯೊಂದಿಗೆ ಕಾರನ್ನು ಅವಳಲ್ಲಿಗೆ ತಂದಿದ್ದ. "ಸರಿ ಬಂದಿ ನಿಲ್ಲು" ಎಂದು ಅವನಿಗೆ ಹೇಳಿ, ಅವಳು ಹೊರಡುವ ಸಿದ್ಧತೆ ಮಾಡಿಕೊಳ್ಳತೊಡಗಿದಳು. "ಮಗನಲಾಲರು ಎಂದೂ ಹಾಗೆ ಕರೆಕಳುಹಿದವರಲ್ಲ. ಏಕೆ ಕರೆದಿದ್ದಾರು? ನನ್ನ ಮೇಲೇನಾದರೂ ಪುಕಾರು ಕೇಳಿರಬಹುದೆ? ಅಂತಹದನ್ನು ನಾನೇನು ಮಾಡಿದ್ದೇನೆ? ಏನಿದ್ದರೂ ಅವರನ್ನು ಕಂಡಾಗ ತಿಳಿಯುವುದಲ್ಲ!" ಎಂದುಕೊಂಡರೂ, ಅವಳ ಮನಸ್ಸು ಏಕೋ ಉದ್ವಿಗ್ನಗೊಂಡಿತ್ತು. ಮಗನಲಾಲರಲ್ಲಿ ಅವಳಿಗೆ ಭಕ್ತಿಯಿದ್ದಷ್ಟೇ ಭಯವೂ ಇತ್ತು. ಅದಕ್ಕೆ ಕಾರಣವೆಂದರೆ, ಅಸಹಾಯಳಾದ ಅವಳನ್ನು ಈ ಸ್ಥಿತಿಗೆ ತಂದವರು ಅವರೇ!

ಮೃದುಲಾಬೇನಳ ಗಂಡ ಗಿರಿಧರಲಾಲ, ಮಗನಲಾಲರಲ್ಲಿ ಮುನಶೀ ಕೆಲಸಕ್ಕೆ ನಿಂತು, ಆಗಲೇ ಹತ್ತು ವರ್ಷಗಳ ಮೇಲಾಗಿತ್ತು. ಇಂಪೋರ್ಟ್-ಎಕ್ಸಪೋರ್ಟ್ ನಡೆಸುತ್ತಿರುವ ಮಗನಲಾಲರ ಕೈಕೆಳಗೆ, ಗಿರಿಧರಲಾಲರನ್ನುಳಿದು ಇನ್ನೂ ನಾಲ್ವರು ಮುನಶೀ ಕೆಲಸಕ್ಕೆ ಇದ್ದರು. ಅವರೆ ಅವರಿಗೆ ಗಿರಿಧರಲಾಲನ ಶ್ರದ್ಧೆ, ಕಾರ್ಯತತ್ಪರತೆ, ಉಳಿದವರಿಗಿಂತ ಮೆಚ್ಚುಗೆಯದಾಗಿತ್ತು. ಆ ನಂಬುಗೆಯೇ ಅವನಿಗವರ ವಿಶ್ವಾಸವನ್ನು ಗಳಿಸಿಕೊಟ್ಟಿತ್ತು.

ಗಿರಿಧರಲಾಲ ಗಿರಗಾಂವಿನಲ್ಲಿ ಒಂದು ರೂಮು ಹಿಡಿದಿದ್ದ. ಸಂಸಾರದಲ್ಲಿ ಅವನಿಗೆ ಯಾವ ಕೊರಗೂ ಇರಲಿಲ್ಲ. ಜೀವನಕ್ಕೆ ಸಾಕಾದಷ್ಟು ಉತ್ಪತ್ತಿ; ಪ್ರೀತಿಯಿಂದ ಆರೈಯುವ ಮಡದಿ! ಇದೇ ರೀತಿಯಲ್ಲಿ ಮುಂದೂ ನಡೆದು ಬಂದರೆ ಸಾಕು—ಎಂದು ಗಿರಿಧರಲಾಲ ಹಂಬಲಿಸಿದ್ದ; ಹಾರೈಸಿದ್ದ. ಆ ದಂಪತಿಗಳಿಗೆ ಜೀವನಲಾಲ ಒಬ್ಬನೇ ಮಗ. ತಂದೆ-ತಾಯಿಗಳ ಮಮತೆಯೆಲ್ಲವನ್ನೂ ಉಂಡು ಬೆಳೆದ ಆ ಮಗು, ಮುದ್ದಾಗಿರುವಷ್ಟೇ ಸುಟಿಯಾಗಿಯೂ ಇತ್ತು.

'ದೇವರು ಪ್ರೀತಿಸಿದ ಮಗುವಿಗೆ ಆಯುಸ್ಸು ಅಲ್ಪ' ಎಂದ ಹಾಗೆ, ಆರು ವರ್ಷದ ಜೀವನಲಾಲ, ಒಂದು ದಿನ ಏಕೋ ರಸ್ತೆಗೆ ಒಬ್ಬನೇ ಇಳಿದು ಬಂದವನು, ಅಪಘಾತಕ್ಕೆ ಬಲಿಯಾಗಿದ್ದ. ಮೋಟಾರಿನ ಅಡಿಯಲ್ಲಿ ಸಿಕ್ಕು ಮೃತನಾಗಿದ್ದ. ಆ ತಂದೆ-ತಾಯಿಗಳ ಆಶೆಯ ಒಂದೇ ಒಂದು ಕುಡಿ ಆ ದಿನ ಕತ್ತರಿಸಿ ಹೋಗಿತ್ತು.

ಆ ದಂಪತಿಗಳು ಮಗು ಸತ್ತ ವ್ಯಸನದಲ್ಲೇ ಒಂದು ತಿಂಗಳು ಕಳೆಯುವಷ್ಟರಲ್ಲಿ, ಮುಂಬಯಿ ನಗರವನ್ನೇ ನುಂಗಲು ಬಂದಂತೆ ವೈಲೀ ಭೇನೆ ಮಾರಿಯಂತೆ ಹಬ್ಬಿತ್ತು. ಗಿರಿಧರಲಾಲನಿಗೂ, ಮೃದುಲಾಬೇನಳಿಗೂ, ಮಗನಲಾಲರು ಅರ್ಥರ್‌ರೋಡ ಆಸ್ಪತ್ರೆಗೆ ತಮ್ಮನ್ನು ಸಾಗಿಸಿದ್ದಷ್ಟೇ ನೆನಪು. ಆಲ್ಲಿಂದ ಹೊರಬೀಳುವಾಗ ಮೃದುಲಾಬೇನ್ ಒಬ್ಬಳೆ! ಗಿರಿಧರಲಾಲ ಬೇನೆಗೆ ಬಲಿಯಾಗಿದ್ದ. ಮೃದುಲಾಬೇನಳ ಮೈಗೂ, ಮನಸ್ಸಿಗೂ ಎಂತಹ ವಿಕಾರ-ಆಘಾತಗಳನ್ನು ಕೊಟ್ಟಿತ್ತಾ ಬೇನೆ! ತನ್ನವರು ಎನ್ನುವ ಜನ ಅವಳಿಗೀಗ ಯಾರೂ ಇರಲಿಲ್ಲ. ಪ್ರಪಂಚ ವಿಶಾಲವಾಗಿದ್ದರೂ, ಅವಳ ಪ್ರಪಂಚ ಶೂನ್ಯವಾಗಿತ್ತು. ಅವಳಿಂದು ಅಸಹಾಯ ಹೆಣ್ಣು!

ಗಿರಿಧರಲಾಲನ ಸೇವೆಯನ್ನು ಸ್ಮರಿಸಿಕೊಂಡೋ, ಮೃದುಲಾಬೇನಳ ಇಂದಿನ ಅಸಹಾಯ ದೈನ್ಯತೆಯನ್ನು ನೋಡಿಯೋ, "ದಿನವೂ ಬೆಳೆಯುತ್ತಿದ್ದ ಅನಾಥಾಶ್ರಮದಲ್ಲಿ ಕಾರ್ಯದರ್ಶಿನಿಗೆ ಕೆಲಸ ಹೆಚ್ಚಾಗಿರುವುದರಿಂದ, ಇವಳು ಸಹಾಯಕಳಾಗಿ ಇರಲಿ. ನಿರಾತಂಕವಾಗಿ ತನ್ನೊಬ್ಬಳ ಜೀವನ ಪೇಗೂ ನಡೆದರೆ ಸಾಕು ಎಂಬುದಕ್ಕಿತ ಹೆಚ್ಚಿನ ಆಶೆ ಇವಳಿಗೇನು ಉಳಿದಿದೆ? ಇರುವಷ್ಟು ಕಾಲ ಅಲ್ಲಿ ಹೇಗೂ ಆಷ್ಟು ನಡೆಯುವುದು" ಎಂದು ಮಗನಲಾಲರು ಲೆಕ್ಕ ಹಾಕಿದ್ದರು. ಅನಾಥಾಶ್ರಮದ ಮೇನೇಜಿಂಗ್ ಟ್ರಸ್ಟಿಗಳಾದ ಅವರ ಮಾತಿಗೆ 'ಆಲ್ಲ' ಎನ್ನುವ ಟ್ರಸ್ಟಿ ಯಾವನೂ ಇರಲಿಲ್ಲ. 'ಒಡೆದುಹೋದ ನನ್ನ ಬದುಕಿನಲ್ಲಿ ಅನಾಥ ಮಕ್ಕಳ ಸೇವೆಯನ್ನು ಮಾಡುವಷ್ಟು ಪುಣ್ಯವಾದರೂ ನನಗೆ ಸಿಕ್ಕಿತಲ್ಲ! ಆ ಮಕ್ಕಳಂತೆ ನಾನೂ ಒಬ್ಬ ಅನಾಥೆ' ಎಂಬ ಮನೋಭಾವದಿಂದಲೇ ಮೃದುಲಾಬೇನ ಆಲ್ಲಿಗೆ ಬಂದುನಿಂತಳು. ಆ ಹೆಣ್ಣು ಹೃದಯಕ್ಕೆ ಹಿತವಾದ ಕೆಲಸ—ಮಕ್ಕಳೊಂದಿಗೆ ಕೂಡಿ ನಡೆಯುವ ಬದುಕು—ಪ್ರಿಯವಾಗಿಯೇ ಇದ್ದಿತು. ಅನಂತರ ಒಂದು ವರ್ಷದ ಮೇಲೆ, ಮೊದಲಿನ ಕಾರ್ಯದರ್ಶಿನಿ ಟ್ರಸ್ಟಿಗಳೊಂದಿಗೆ ಸರಿ ಬಾರದೆ ಬಟ್ಟುಹೋದ ಮೇಲೆ ಮೃದುಲಾಬೇನಳಿಗೇ ಆ ಪಟ್ಟ ಬಂತು. ತೆರವಾದ ಸಹಾಯಿಕೆಯ ಸ್ಥಳದಲ್ಲಿ ಸುಂದ್ರಾಬೇನ್ ಎಂಬ ಅವಳ ವಯಸ್ಸಿನವಳೇ ಆದ ಒಬ್ಬ ವಿಧವೆ ಬಂದಳು. "ನನ್ನಂತೆಯೇ ನಿರ್ಗತಿಕಳಾದ ಇವಳೂ ಯಾವುದೋ ಟ್ರಸ್ಟಿಗಳ ಪರಿಚಯದಿಂದ ಬಂದಿರಬೇಕು ಪಾಪ!" ಎಂದುಕೊಂಡಳಾಗ ಮೃದುಲಾಬೇನ. ಅಂದಿನಿಂದ ಅವರಿಬ್ಬರೂ ಸಲುಗೆಯಿಂದಲೇ ನಡೆದುಕೊಂಡು ಬಂದರು.

ತಾನಿಂದು ಮಗನಲಾಲರ ಔದಾರ್ಯದ ಮೇಲೆ ಬದುಕಿದ್ದೇನೆ—ಎಂಬುದನ್ನು ಮರೆಯಲಾಗದ ಮೃದುಲಾಬೇನ, ಅವರ ಕರೆಗೆ ಏಕೋ ಅವಳಿಗರಿಯದ ಭೀತಿ ಅವಳ ಅಂತರಂಗದಲ್ಲಿ ಉಂಟಾಗಿತ್ತು. ಅದಕ್ಕೆ ಇದೇ ಮೊದಲನೆಯ ಬಾರಿ ಹಾಗವರು ಕರೆಕಳುಹಿದ್ದೇ ಕಾರಣವಾಗಿತ್ತು.

"ಸುಂದ್ರಾಬೇನ್, ನಾನು ಸ್ವಲ್ಪ ಹೊರಗೆ ಹೋಗಿ ಬರುತ್ತೇನೆ. ಮಕ್ಕಳನ್ನು ನೋಡಿಕೊಳ್ಳಿ" ಎಂದು ಮೃದುಲಾಬೇನ ಹೊರಬಿದ್ದಳು. ಏಕೋ ಅವಳಿಗೆ, ಮಗನಲಾಲರು ತನ್ನನ್ನು ಕರೆದಿದ್ದಾರೆ ಎಂದು ಹೇಳುವ ಮನಸ್ಸು ಆಗಲಿಲ್ಲ. ತನಗೆ ಸಂಬಂಧವಿಲ್ಲದ ವಿಚಾರದಲ್ಲಿ ಕುತೂಹಲ ತೋರುವುದು ಸುಂದ್ರಾಬೇನಳಲ್ಲೂ ಇರಲಿಲ್ಲ. ಯಾರೋ ಪರಿಚಿತರು ಆಸರೂಪಕ್ಕೆ ಕರೆದಿರಬೇಕು, ಹೋಗಿದ್ದಾಳೆ — ಎಂದುಕೊಂಡಳು ಅವಳು.

ಮಗನಲಾಲರ ವೈಭವದ ಗುರುತಾಗಿ ಕಾಳ್ಬಾದೇವಿಯಲ್ಲಿ ನಿಂತಿದ್ದ ಮಗನಲಾಲ ಮೆನ್ಶನ್ನಿನ ಎದುರು ಕಾರು ಬಂದು ನಿಂತಿತು. ಮಗನಲಾಲರ ಅಂಗಡಿ, ಗೋಡೌನು, ವಸ್ತಿ ಎಲ್ಲ ಅವರಿಗೇ ಮೀಸಲಾಗಿದ್ದ ಆ ನಾಲ್ಕು ಅಂತಸ್ತಿನ ಮನೆಯನ್ನು ಹೊಗುವಾಗ, ಮೃದುಲಾಬೇನಳಿಗೆ ತುಂಬ ಸಂಕೋಚವೆನ್ನಿಸಿತು. ನಿದಾನವಾಗಿ ಲಿಫ್ಟನ್ನು ಏರಿ, ನಾಲ್ಕನೆಯ ಮಾಳಿಗೆಯ ತಮ್ಮ ಬೈಠಕ್ಕು ಖಾನೆಯಲ್ಲಿ ಒಬ್ಬರೇ ಕುಳಿತು ತನ್ನ ಬರವನ್ನೇ ನೋಡುತ್ತಿದ್ದ ಮಗನಲಾಲರೆದುರು ನಿಂತು "ನಮಸ್ತೇ" ಎಂದು ಅವಳು ಎಂದಾಗಲೇ ಅವರ ಯೋಚನೆ ಹರಿದದ್ದು.

ಪ್ರತಿ ಸಮಸ್ಯಾರ ಸಲ್ಲಿಸಿ, ಎದುರಿನ ಖುರ್ಚಿಯಲ್ಲಿ ಕುಳಿತುಕೊಳ್ಳುವುದಕ್ಕೆ ಸೂಚಿಸುತ್ತ, ಮಾತೂ ಅಪವ್ಯಯವಾಗಬಾರದೆಂಬ ರೀತಿಯಲ್ಲಿ ವ್ಯವಹಾರದ ಭರದಲ್ಲಿ ವೇಳೆಯನ್ನು ಮಹತ್ತ್ವವಾಗಿ ಬೆಳೆಸಿಕೊಂಡು ಬಂದ ತಮ್ಮ ಮನೋವೃತ್ತಿಗನುಸರಿಸಿ ನೇರವಾಗಿ ವಿಷಯವನ್ನೇ ಅವರು ಎತ್ತಿದರು:

"ಮೃದುಲಾಬೇನ್, ನಿಮ್ಮಿಂದ ಒಂದು ಕೆಲಸವಾಗಬೇಕಾಗಿದೆಯಲ್ಲ!"

"ನಾನು ಯಾವ ಬಗೆಯಲ್ಲಿ ಸೇವೆ ಸಲ್ಲಿಸಲು ಶಕ್ತಳೆಂದು ತಾವು ತಿಳಿಸಿದರೆ....."

"ನೀವು ನನ್ನಲ್ಲಿ ಇಷ್ಟು ಗೌರವವನ್ನು ಇಟ್ಟಿದ್ದೀರಿ ಎಂದೇ ನಾನು ನಿಮ್ಮನ್ನೀಗ ಕರೆಸಿದ್ದು. ವಿಷಯವನ್ನು ಮೊದಲು ಕೇಳಿಕೊಳ್ಳಿ. ಮಾತು ಗುಟ್ಟಾಗಿರಬೇಕು. ಇದು ನನ್ನ ಗೌರವಕ್ಕೆ ಸಮ್ಬಂಧಿಸಿದ ವಿಚಾರವಾದ್ದರಿಂದ, ನಾನು ಹೀಗೆ ಹೇಳಬೇಕಾಯಿತು. ನೋಡಿ, ನನ್ನ ಕಿರಿಯ ಮಗಳು ಚಂಚಲಾ ಒಂದು ತಪ್ಪು ಕೆಲಸಮಾಡಿಬಿಟ್ಟಿದ್ದಾಳೆ. ಅಂಬಾಲಾಲ ಎಂಬೊಬ್ಬ; ಚಂಚಲೆಗೂ



ಸ್ವಲ್ಪ ದೊಡ್ಡವನಾದ ನಮ್ಮ ನಂಟಿನ ಹುಡುಗ ಇಲ್ಲಿ ಇದ್ದ. ಸ್ಥಿತಿಯಿಂದ ಬಡವ. ಬಂದು, ಓದಿಕೊಳ್ಳುವುದಕ್ಕೆ ಸ್ವಲ್ಪ ಅನುಕೂಲ ಮಾಡಿಕೊಡಬೇಕು ಎಂದು ಕೇಳಿಕೊಂಡಾಗ, ನಮ್ಮ ಮಕ್ಕಳ ಜೊತೆಯಲ್ಲಿ ಇವನೊಬ್ಬ ಹೆಚ್ಚಲ್ಲ—ಎಂದು ಮನೆಯಲ್ಲಿ ಆಶ್ರಯ ಕೊಟ್ಟೆ. ಹುಡುಗ ಫಡಪೋಶಿ ಎಂದು ತಿಳಿದಿರಲಿಲ್ಲ. ಚಂಚಲೆಯಾದರೂ ಇಷ್ಟು ಚಂಚಲಳೆಂದು ನಾನು ಭಾವಿಸಿರಲಿಲ್ಲ. ಅವರಿಬ್ಬರಲ್ಲಿ ಆಗಲೇ ಸಲುಗೆ ಬೆಳೆದು ಹೋಗಿತ್ತು—ಎಂದು ನನಗೆ ತಿಳಿದದ್ದು ತುಂಬಾ ತಡವಾಗಿ. ಊಹೆಗೂ ನಿಲುಕದ ಈ ವಿಚಾರವನ್ನು ಆರಿಯದ ನಾನು, ವಯಸ್ಸಿಗೆ ಬಂದ ಅವಳಿಗೆ ವರ ಹುಡುಕಬೇಕು ಎಂದು ಪ್ರಯತ್ನ ನಡೆಸುವುದನ್ನು ತಿಳಿದು, ? ಅವರಿಬ್ಬರೂ ಒಂದು ರಾತ್ರಿ ಬೆಳಗಾಗುವುದರಲ್ಲಿ ನಾಪತ್ತೆಯಾಗಿದ್ದರು. ಹೀಗೆ—ಎಂದು ವಿಷಯ ತಿಳಿದಾಗ, ನಾನು ಅರಿತುಕೊಂಡೆ: ಇದು ಅಂಬಾಲಾಲನದೇ ಕರಾಮತ್ತು—ಎಂದು. ಇಲ್ಲವಾದರೆ ಯಾವುದಕ್ಕೂ ಕಡಿಮೆಯಿಲ್ಲದ ಇಂತಹ ಮನೆಯನ್ನು ಬಿಟ್ಟು ಚಂಚಲೆ ಹೀಗೆ ಓಡಿ ಹೋಗುತ್ತಿದ್ದಳೆ? ಅವಳ ಅಪ್ರಬುದ್ಧ ವಯಸ್ಸಿಗೆ ವಿವೇಕವಾದರೂ ಏನು ಇರಬೇಕು? ಹೇಗೂ ಇವರನ್ನು ಪತ್ತೆ ಹಚ್ಚಬಹುದು ಎಂದುಕೊಂಡು, ಗೌರವದ ದೃಷ್ಟಿಯಿಂದ ನಾನು ಈ ವಿಚಾರ ಮನೆಯ ಹೊರಗೆ ಹಾಕದೆ, ಗುಪ್ತವಾಗಿಯೇ ಚೌಕಶಿ ಮಾಡಿದಾಗ ತಿಳಿಯಿತು: ಅಂಬಾಲಾಲ ಸುರತದ ತನ್ನ ಮನೆಗೆ ಅವಳನ್ನು ಒಯ್ದಿದ್ದಾನೆ—ಎಂದು. ಮತ್ತೆಲ್ಲಾದರೂ ಹೋಗುವಷ್ಟು ಚೈತನ್ಯ ಅವನಲ್ಲಿ ಇದ್ದರಲ್ಲವೆ? ಅಂತೂ ಹೋಗಿ ಮಗಳನ್ನು ನಾನೇ ಕರೆತಂದೆ. ನನ್ನ ಹೆಂಡತಿಯಿಂದ ಕಣ್ಣೀರು ಕರೆಸಬಾರದಲ್ಲ—ಎಂದು. ಅವನು ಹಾಳಾಗಿ ಹೋಗಲಿ ಎಂದು ಬಿಟ್ಟೂಬಿಟ್ಟೆ. ಇಲ್ಲದ ರಗಳೆ ಹೆಸರಿಗೆ ಹಾಳು ಎಂದು, ಇಷ್ಟು ಮಾಡಿದರೂ ಶನಿ ಬಿಡಲಿಲ್ಲ. ಅವಳನ್ನು ಕರೆತಂದ ಕೆಲದಿನಗಳಲ್ಲೇ ನನಗೆ ತಿಳಿಯಿತು, ಅವಳಾಗಲೇ ಗರ್ಭಿಣಿಯಾಗಿದ್ದಾಳೆಂದು. ನಾನಾಗ ಒಂದಕ್ಕಿಂತಲೂ ಹೆಚ್ಚು ಬಾರಿ ಯೋಚಿಸಿದೆ; ಅಂಬಾಲಾಲನಿಗೆ; ಇವಳನ್ನು ಕೊಟ್ಟುಬಿಡಲೇ ಎಂದು. ಅವನೋ ಹುಟ್ಟುದರಿದ್ರ; ಅಲ್ಲದೆ ಪೋಲಿ. ಇವಳನ್ನು ಬಾಳಿಸಿಕೊಂಡು ಹೋಗುವುದುಂಟೆ? ಅವಳ ಹಣೆಯಲ್ಲಿ ಮದುವೆಯಿಲ್ಲದೆ ಇನ್ನು ಇಲ್ಲೇ ಉಳಿದರೂ ಅಡ್ಡಿಯಿಲ್ಲ, ಈ ವಿಚಾರ ಬೇಡ—ಎಂದು ನನ್ನ ಹೆಂಡತಿ ತುಂಬಾ ಗೋಗರೆದಳು. ವರನಾಗುವುದಕ್ಕೇ ಅಯೋಗ್ಯನಾದ ಆ ವ್ಯಕ್ತಿ, ನಮ್ಮ ಯೋಗ್ಯತೆಗೆ ತಕ್ಕ ಸಂಬಂಧವಾಗುವ ಮಾತು ದೂರವೇ ಉಳಿಯಿತಾದರೂ, ಈ ಸ್ಥಿತಿಯಲ್ಲಿ ಯೋಚಿಸಿದಂತೆ ನನ್ನ ಪಿತ್ತವೇ ಕೆಣಕಿಹೋಗುವಂತಾಯ್ತು. ಆದರೂ ಹೆತ್ತ ಹೊಟ್ಟೆ. ಇನ್ನೂ ಒಂದು ಮಾತು: ಚಂಚಲಾ ಹುಟ್ಟಿದ ವರ್ಷವೇ ಎಂದಿಲ್ಲದ ಭಾಗ್ಯಲಕ್ಷ್ಮಿ ಈ ಮನೆಯನ್ನು ಅರಸಿಕೊಂಡು ಬಂದದ್ದು. ಅವಳು ಹುಟ್ಟಿದಂದಿನಿಂದ ನನಗೆ ಪ್ರತಿಯೊಂದರಲ್ಲೂ ಲಾಭವೇ ಎನ್ನಬೇಕು. ಅದರಿಂದ ಅವಳ ವಿಚಾರದಲ್ಲಿ ನನಗಿರುವ ಮಮತೆ, ಅವಳ ಯಾವ ತಪ್ಪನ್ನೂ ಕ್ಷಮಿಸು ಎಂದೇ ಹೇಳುತ್ತದೆ. ಚಂಚಲಾ ತಪ್ಪು ಮಾಡಿದ್ದಾಳೆ. ತಿಳಿಯದೇ ಒಂದು ಬಾರಿ ಕಾಲು ಜಾರಿದ್ದಕ್ಕೆ ಆಜನ್ಮ ಅವಳು ಶಿಕ್ಷೆ ಅನುಭವಿಸುವುದನ್ನು ತಂದೆಯಾಗಿ ನಾನು ನೋಡಲಾರೆ" ಎಂದು ತಡೆದು, ಒಂದು ನಿಟ್ಟುಸಿರು ಬಿಟ್ಟರವರು. ಮುಚ್ಚು-ಮರೆಯಿಲ್ಲದ ತಂದೆಯ ಹೃದಯವನ್ನು ಅವರು ತನ್ನಲ್ಲಿ ತೋಡಿಕೊಳ್ಳುತ್ತಿರುವುದನ್ನು ಕಂಡಾಗ, ಮೃದುಲಾಬೇನಳಿಗೆ ಅವರಲ್ಲಿ ಅಪಾರ ಶ್ರದ್ಧೆ ಉಂಟಾಗಿತ್ತು. ಆದರೆ, ಈ ಪರಿಸ್ಥಿತಿಗೆ ಪರಿಹಾರವಾಗಿ ತಾನೇನು ಮಾಡಬೇಕು—ಎಂದು ವಿಧಿಸುತ್ತಾರೆಯೋ ಎಂಬುದನ್ನು ಕೇಳುವದಕ್ಕೆ ಕುಳಿತವಳಂತೆ ಹಾಗೇ ಅವಳು ಮೌನವಾಗಿದ್ದಳು. ಅವರಿಗೂ ಅದನ್ನೇ ಹೇಳಬೇಕಾಗಿತ್ತು, "ಚಂಚಲೆಯನ್ನು ಮನೆಗೆ ಕರೆತಂದಮೇಲೆ, ಮೂಕಿಯಾಗಿ ಅವಳು ಮೂಲೆಹಿಡಿದು ಕುಳಿತಿರುವುದನ್ನು ನೋಡಿದಾಗಲೆಲ್ಲ ನನಗೆ ಕರುಳೇ ಕಿತ್ತು ಬರುವಂತಾಗುತ್ತಿದೆ. ಇನ್ನು ವಿವಾಹಬಾಹಿರವಾಗಿ ಹೊತ್ತ ಆ ಬಸಿರನ್ನು ಹಾಗೇ ಬೆಳೆಯಗೊಡುವುದೇಕೆ? ಇಲ್ಲದ ಉಪಹಾಸಕ್ಕೆ ಕಾರಣವಾಗಬಾರದು ಎಂದು ಒಮ್ಮೆ ವಿಚಾರ ಬಂತು. ಆದರೆ ಆ ಪಾಪಕ್ಕೆ ನಾನು ಹೇಸಿದೆ; ಅಂಜಿದೆ. ಅವಳಿಗೆ ಚಿಭಯ ಕೊಡುತ್ತಲೇ ಗರ್ಭಿಣಿಯನ್ನು ಮನೆಯಲ್ಲೇ ಗುಟ್ಟಾಗಿ ಪೋಷಿಸಿಕೊಂಡು ಬಂದೆನಾದರೂ, ನಿನ್ನೆ ಅವಳು ಹಡೆದಿದ್ದಾಳೆ. ಗಂಡು ಮಗುವಾಗಿದೆ. ಇನ್ನು ಈ ಮಗುವನ್ನು ಮನೆಯಲ್ಲೇ ಇಟ್ಟುಕೊಂಡು ಬೆಳೆಸುವಂತಿಲ್ಲ. ಅದರಿಂದ ನನಗೆ ಗೌರವವಿಲ್ಲ. ಅವಳಿಗೆ ಮತ್ತೆ ಬದುಕಿಲ್ಲ ಈ ವರೆಗೆ ವಿಷಯ ಬಯಲಾಗದಿರುವಂತೆ ಕಾದುಕೊಂಡಂತೆ, ಮಗುವನ್ನು ಮನೆಯಲ್ಲೇ ಇಟ್ಟುಕೊಂಡರೆ ಆಗುವಂತಿಲ್ಲ. ನಮ್ಮಲ್ಲಿಗೆ ಬರುಹೋಗುವ ಜನ ಎಷ್ಟೋ ಇರುತ್ತಾರೆ. ಕಾರಣ ಮಗುವಿನ ಪೋಷಣೆಗೆ ಬೇರೆ ವ್ಯವಸ್ಥೆ ಆಗಲೇಬೇಕು. ಮುದ್ದಾದ ಹಸುಳೆಯನ್ನು ಹೆತ್ತವಳಿಂದ ಆಗಲಿಸುವಾಗ ನನಗೂ ವ್ಯಥೆಯಾಗುತ್ತದೆ. ಆದರೆ ಗೌರವವಿಲ್ಲದ ಬದುಕು ಯಾರಿಗೆ ಸಹ್ಯ ಹೇಳಿ! ಅದರಿಂದ ಈ ಮಗುವನ್ನು ನಿಮಗೆ ಒಪ್ಪಿಸಬೇಕು ಎಂದು ಕರೆಕಳುಹಿಸಿದ್ದು. ಈ ಮಗುವಿಗಿನ್ನು ನೀವೇ ತಾಯಾಗಿ ನೋಡಿಕೊಳ್ಳಬೇಕು. ಸಂತಾನಭಾಗ್ಯವಿಲ್ಲದ ಜನ, ಸಾಕುವುದಕ್ಕಾದರೂ ಮಕ್ಕಳನ್ನು ಕೂಡಿ ಎಂದು ನಮ್ಮ ಅನಾಥಾಶ್ರಮಕ್ಕೆ ಎಷ್ಟು ಬಾರಿ ಬಂದವರಿಲ್ಲ? ಹಾಗೇ ಈ ಮಗುವನ್ನಾದರೂ ಕೇಳಿಕೊಂಡು ಬರಬಾರದೆಂದಿಲ್ಲ.... ಆದರ ಪಣೆಯಲ್ಲಿ ಬರೆದಿದ್ದರೆ. ಇಲ್ಲವಾದರೆ ಅನಾಥಾಶ್ರಮವನ್ನಲ್ಲಿ ಉಳಿದ ಮಕ್ಕಳೊಂದಿಗೆ ಈ ಮಗುವೂ ಬೆಳೆಯುಬೇಕಾಗಿಬಂದರೂ, ನೀವು ಇರುವಷ್ಟು ಕಾಲ ಮಗು ಎಂದೂ ಅನಾಥ

ವಾಗಲಾರದು. ಈ ಮಗುವಿನ ಬಗ್ಗೆ ಯಾವ ಸಹಾಯ ಬೇಕಾಗಿದ್ದರೂ ಕೇಳುವುದಕ್ಕೆ, ನಾನಿರುವವರೆಗೆ ನಿಮಗೆ ಸಂಕೋಚ ಬೇಡ. ಈ ಮಾತೆಲ್ಲ ನಮ್ಮಿಬ್ಬರ ಹೊರತು ಮತ್ತೆ ಯಾರಿಗೂ ತಿಳಿಯುವುದಲ್ಲ. ಮಗುವನ್ನು ನಿಮಗೆ ಒಪ್ಪಿಸಿದ ವಿಚಾರವನ್ನು ನಾನು ಮನೆಯಲ್ಲೂ ಹೇಳುವುದಿಲ್ಲ, ಯಾರಿಗೋ ಸಾಕಿಕೊಳ್ಳುವುದಕ್ಕೆ ಕೊಟ್ಟೆ ಎಂದು ಹೇಳಿಬಿಡುತ್ತೇನೆ. ಇದೊಂದು ಋಣ ನೀವು ನನಗೆ ಸಲ್ಲಿಸಲೇಬೇಕು. ಇಲ್ಲವಾದರೆ ಈ ಇಳಿವಯಸ್ಸಿನಲ್ಲಿ ನಾನು ಉಸಿರಾಡಿಸುವುದೂ ಕಷ್ಟ" ಎಂದು ವ್ಯಸನದ ಭಾರವಲ್ಲೇ ಸುಮ್ಮನಾದರು ಅವರು. ದೊರೆಯಂತಿದ್ದ ಒಂದು ವ್ಯಕ್ತಿ, ನನ್ನಂಥ ಒಬ್ಬ ಸಾಮಾನ್ಯ ಹೆಣ್ಣಿನಲ್ಲಿ ಬೇಡುತ್ತಿದ್ದಾನಲ್ಲ— ಎಂದು ಮೃದುಲಾಬೇನಳಿಗೆ ಕನಿಕರವುಂಟಾಗಿತ್ತು. ಹೆಣ್ಣು ಹೆಣ್ಣಿಗಾಗಿ ಅನುಕಂಪ ತಳೆದಿತ್ತು. ಹೊತ್ತು ಹೆತ್ತ ಮಗನನ್ನು ಕಳೆದುಕೊಂಡ ಮೃದುಲಾಬೇನಳ ಹೃದಯ, ಈ ಮಗುವಿಗಾಗಿ ವಾತ್ಸಲ್ಯದಿಂದ ತುಂಬಿ ಬಂದಿತ್ತೀಗ. ಮಗನಲಾಲರ ಕೃಪಾಭತ್ರದಲ್ಲಿ ಬದುಕಿದ್ದ ಅವಳಿಗೆ ಪರಿಸ್ಥಿತಿಯನ್ನು ಪರ್ಯಾಲೋಚಿಸಿದಾಗ ಈ ಮಗು ತನ್ನದೇ ಎನ್ನುವ ಭಾವ ಉಂಟಾಗಿತ್ತು. ತನ್ನ ಬರಡಾದ ಬಾಳಿನಲ್ಲಿ ಈ ಮಗ ಆಸೆಯ ಸುಳಿಯಾಗಿ ಬಂದಿದೆ ಎಂದುಕೊಂಡಳು. ಈ ಜಗತ್ತಿನಲ್ಲಿ ಇನ್ನೂ ಕಣ್ಣು ಬಿಡಲಾರದ ಮಗುವಿನಲ್ಲಿ ಯಾವ ದೋಷವಿದೆ? ಆದರೂ ಈ ಮಗು ಪ್ರಪಂಚಕ್ಕೆ ಬಂದದ್ದೇ ಒಂದು ದೋಷವೆನ್ನಬೇಕೆ? ಅದಕ್ಕೇ ತಂದೆಯಿಲ್ಲ ಎನ್ನಿಸಿಕೊಂಡು, ತಾಯಿಯಿಂದಲೂ ಅಗಲಿ ಅಜ್ಞಾತ ಬದುಕು ಬಾಳಬೇಕೆ? ಎಂಬ ಸಂತಾಪ, ಮಥುಕ ಕೂಡ ಅವಳಲ್ಲಿ ಉಂಟಾಗತೊಡಗಿತ್ತು. 'ಏನಿದ್ದರೂ ಇನ್ನು ನನ್ನ ಉಡಿಯಲ್ಲಿ ಬಿದ್ದ ಮಗು ಇದು. ನಾನು ಬದುಕಿ ಉಳಿದರೆ, ಮಗುವಿಗೂ ಆಯುಸ್ಸು ಗಟ್ಟಿಯಾಗಿ ಇದ್ದರೆ, ಮುಂದಾಗುವುದನ್ನು ಕಾಣಬಹುದು' ಎಂದು ಕೊಂಡಳು. ಅನಾಥಾಶ್ರಮದಲ್ಲಿ ನಲವತ್ತು ಮಕ್ಕಳಿದ್ದರೂ, ಅವುಗಳಲ್ಲಿ ಒಂದೂ ತನ್ನದು ಎಂಬ ಆತ್ಮೀಯತೆ ಅವಳಲ್ಲಿ ಉಂಟಾಗುತ್ತಿರಲಿಲ್ಲ. ಅವುಗಳ ಪಾಲನೆಯಲ್ಲಿ ಕರ್ತವ್ಯದ ಅಂಶ ಮಾತ್ರ ಇದ್ದಿತು. ತನ್ನ ಮಾತಿಗೆ ಮೃದುಲಾಬೇನ ಒಪ್ಪಿಕೊಂಡಳಲ್ಲ— ಎಂದು ಮಗನಲಾಲರ ಉಸಿರೇಗ ಸಡಿಲಾಗಿತ್ತು.

ಅಂದೇ ರಾತ್ರಿ, ಮನೆಯ ಜನಕ್ಕೂ ಗುಟ್ಟಾಗಿ ಅಂಧೇರಿಯ ಅನಾಥಾಶ್ರಮಕ್ಕೆ ಮಗುವನ್ನು ಸಾಗಿಸಿ, ತಂದೆಯ ಕರ್ತವ್ಯವನ್ನು ಮಗಳಿಗಾಗಿ ಮಾಡಿದೆನೆಂದು ಮಗನಲಾಲರು ಸಮಾಧಾನದ ನಿಟ್ಟುಸಿರು ಬಿಟ್ಟರು. ಅವರ ಮನೆಯಲ್ಲಿ ಕಾಲು ಮುರಿದುಕೊಂಡು ಬಿದ್ದಿರುವ ಲಕ್ಷ್ಮಿಯ ಕೃಪೆಯಿಂದ, ಜನತೆಯ ಆಕ್ಷೇಪದ ಕಣ್ಣಿಗೆ ಧೂಳು ಸಹಜವಾಗಿಯೇ ಬೀಳದಿರುತ್ತದೆಯೇ? ಮಗುವನ್ನು ಒಪ್ಪಿಸಿಕೊಂಡಾಗಲೇ 'ಪ್ರೇಮಕುಮಾರ' ಎಂದು ಮೃದುಲಾಬೇನ ಅದಕ್ಕೆ ನಾಮಕರಣ ಮಾಡಿದ್ದಾಯಿತು. ಹಾಲೂಡಿಸಲು ದಾಯಿಯ ಏರ್ಪಾಡಿನಿಂದ ಹಿಡಿದು, ಮಗುವಿನ ಪ್ರತಿಯೊಂದು ಅರಯಿಕೆಯಲ್ಲೂ ತಾನೇ ಹೊತ್ತು ಹೆತ್ತುದಕ್ಕಿಂತಲೂ ಹೆಚ್ಚಿನ ಮಮತೆಯಿಂದ ಅವಳು ನೋಡತೊಡಗಿದಳು. ಅಲ್ಲಿ ಅವಳನ್ನು ಕೇಳುವ ಜನ ಯಾರು? ಇದೂ ಒಂದು ಅನಾಥ ಮಗು ಎಂದೇ ಅಲ್ಲಿ ಎಲ್ಲರ ಭಾವನೆ. 'ಮಗು ತೀರಾ ಚಿಕ್ಕದು; ಅದಕ್ಕೇ ಇವಳು ಇಷ್ಟು ಆಸ್ಥೆ ವಹಿಸಿಕೊಂಡಿದ್ದಾಳೆ' ಎಂದೇ ಎಲ್ಲರ ಭಾವನೆ.

ಅದೇ ಮರುವರ್ಷ, ಹೊರಜಗತ್ತಿಗೆ ಇನ್ನೂ ಕುಮಾರಿಯಾಗಿಯೇ ಉಳಿದ ಚಂಚಲಾಬೇನಳನ್ನು, ತಮ್ಮ ಅಂತಸ್ತಿಗೆ ತಕ್ಕ ವರನಿಗೆ ಮದುವೆ ಮಾಡಿಕೊಟ್ಟ ಕೆಲದಿನಗಳಲ್ಲಿಯೇ, ಇನ್ನು ತನ್ನ ಕರ್ತವ್ಯ ಮುಗಿಯಿತು— ಎಂಬಂತೆ, ಕೆಲ ದಿನಗಳಿಂದಲೂ ಕಾಡುತ್ತಿದ್ದ ಬ್ಲಡ್‌ಪ್ರೆಶರಿನಿಂದ ಮಗನಲಾಲರು ತೀರಿಕೊಂಡಿದ್ದರು. ಅವರ ಸಾವು ಮೃದುಲಾಬೇನಳ ಚಿಂತೆಗೆ ಸ್ವಲ್ಪ ಕಾರಣವಾದದ್ದು ಕೆಲಸ ಹೋದೀತು ಎಂದು ಅಲ್ಲ. ಅವಳಾಗಲೇ ಕಾಯಂ ಆಗಿದ್ದಾಳೆ. ಇನ್ನು ಪ್ರೇಮಕುಮಾರನ ಭವಿಷ್ಯ ಏನೋ ಎಂದು. 'ನಾನು ಈ ಮಗುವನ್ನು ಸಲಹಿ ಮುಂದಕ್ಕೆ ತಂದೀನೇ?' ಎಂದು ಯೋಚಿಸುವಳಾದರೂ, 'ಅದರ ಹಣೆಯಲ್ಲಿ ಏನು ಬರೆದಿದೆಯೋ ಅದು ಆಗಲೇಬೇಕು. ನಾನು ಮಾಡಬಹುದಾದದ್ದನ್ನೆಲ್ಲವನ್ನೂ ಮಾಡುತ್ತೇನೆ'. ಎಂದು ತನ್ನಲ್ಲೇ ಸಮಾಧಾನ ತಂದುಕೊಳ್ಳುತ್ತಿದ್ದಳು.

ಮೂರು ವರ್ಷದಲ್ಲಿ ಆಡಿಯಿಡುತ್ತಿದ್ದ ಮಗು "ಮಮ್ಮಿ" ಎಂದು ಮುದ್ದಾಗಿ ಕರೆದಾಗಲೆಲ್ಲ, ಮೃದುಲಾಬೇನಳ ಹೆಣ್ಣುಹೃದಯ ನಿಜಕ್ಕೂ 'ನಾನಿಂದು ಸುಖಿ. ಈ ಮಗುವನ್ನು ಪಡೆದು ನಾನು ಧನ್ಯಳಾದೆ' ಎಂದು ಹಾಡುತ್ತಿತ್ತು. ಕೆಟ್ಟ ಕನಸನ್ನು ಮರೆಯುವಂತೆ ತನ್ನ ಹಿಂದಿನ ಬದುಕನ್ನೆಲ್ಲ ಅವಳೀಗ ಮರೆತಿದ್ದಳು. ಅದೇ ಹೊತ್ತಿಗೆ 'ಸುಖದ ಭಾವ ಸಂಚಾರಿ' ಎಂದು ಅವಳಿಗೆ ತಿಳಿಸುವುದಕ್ಕೇನೋ ಎಂಬಂತೆ, ರಸಿಕಲಾಲಶಾಹರು ಅನಾಥಾಶ್ರಮದಲ್ಲಿ ಅಡಿಯಿಕ್ಕಿದ್ದರು ದೇವರು ಅವರಿಗೆ ಎಲ್ಲ ಸೌಭಾಗ್ಯವನ್ನೂ ಕೊಟ್ಟಿದ್ದ; ಆದರೆ ಸಂತಾನಭಾಗ್ಯ ಕರುಣಿಸುವಲ್ಲಿ ಸ್ವಲ್ಪ ಜಿಪುಣನಾಗಿದ್ದ. ಅಹಮದಾಬಾದಿನಿಂದ ಅವರು ಆಗಾಗ ಕೆಲಸದ ಮೇಲೆ ಮುಂಬಯಿಗೆ ಬರುತ್ತಿರುವರಾದರೂ, ಈ ಸಾರಿ ಅವರು ಈ ಅನಾಥಾಶ್ರಮಕ್ಕೆ ಭೆಟ್ಟಿಕೊಡುವ ಉದ್ದೇಶದಿಂದಲೇ ಬಂದದ್ದಾಗಿತ್ತು. ಒಪ್ಪಿಗೆಯಾಗಬಹುದಾದ ಅನಾಥ ಮಗು ತನುಗೆ ಸಾಕುವುದಕ್ಕೆ ಸಿಗಬಹುದೇನೊ— ಎಂಬ ಆಶೆಯಿಂದ ಒಳಗೆ ಕಾಲಿಟ್ಟಾಗಲೇ, ಬಾಲಕೃಷ್ಣನಂತೆ ಅಲ್ಲಿ ಆಡುತ್ತಿದ್ದ ಪ್ರೇಮಕುಮಾರನನ್ನು ಕಂಡಾಗ 'ಈ ಮಗು ಸಿಕ್ಕರೆ ಅಡ್ಡಿಯಿಲ್ಲ' ಎಂದುಕೊಂಡು ಅವರು ಪ್ರಸ್ತಾಪಿಸಿದಾಗ, ಮೃದುಲಾಬೇನಳ ಉಸಿರು ಹಿಡಿದಿತ್ತು. "ನೋಡಿ, ನನಗೆ ಮಕ್ಕಳಿಲ್ಲ. ಅಹಮದಾಬಾದಿನಲ್ಲಿ ಭಾರತ ಸ್ಪಿನ್ನಿಂಗ್ ಎಂಡ್ ವೀವಿಂಗ್ ಮಿಲ್ಸ್ ನಡೆಸುತ್ತಿದ್ದೇನೆ; ನನಗೀಗ ವಯಸ್ಸಾಗಿದೆ. ನನ್ನೊಂದಿಗೇ ನನ್ನ ಮನೆ ಬರಿಯದಾಗಬಾರದು. ನನಗೆ ಮಗುವಾಗದಿದ್ದರೂ ನಮ್ಮ ಹಿರಿಯರ ತಾವಿನಲ್ಲಿ ಒಂದು ಸಂಸಾರ ಊರ್ಜಿತವಾಗಿ ಇರಲಿ ಎಂದು ತುಂಬಾ ಹಾರೈಸಿದ್ದೇನೆ. ಹಾಗೆ ಯಾರನ್ನಾದರೂ ತರುವ ಇಷ್ಟ ನನಗಿಲ್ಲ. ಪ್ರಾಯಕ್ಕೆ ಬಂದ ಯಾರನ್ನಾದರೂ ದತ್ತು ತೆಗೆದುಕೊಂಡರೆ, ಅಂಥ ಜೀವಕ್ಕೆ ಸಿತೃಭಕ್ತಿ ಎನ್ನುವುದು ಹೇಳಿಕೊಟ್ಟ ಮಾತಾಗುತ್ತದೆ—ಎಂದು, ನಾನು ಒಂದೆರಡು ನನ್ನ ಪರಿಚಿತ ಸ್ಥಳಗಳಲ್ಲಿ ಕಂಡಿದ್ದೇನೆ. ಅದರಿಂದ ಯಾವುದಾದರೂ ಚಿಕ್ಕ

ಮಗು ಒಂದು ಸಿಳ್ಳರೆ ನೋಡುವಾ ಎಂದು ತುಂಬ ಹುಡುಕಾಡಿದೆ. ನನ್ನ ಪರಿಚಿತ ಕಡೆಗಳಲ್ಲೆಲ್ಲ ನೋಡಿದೆ. ಆದರೆ ಈ ವರೆಗೆ ನನ್ನಾಶೆ ಫಲಿಸದಿರುವುದರಿಂದ ಇಲ್ಲಿಗೆ ಬರಬೇಕಾಯಿತು. ಈ ಮಗು ನನಗೆ ಪೂರಾ ಒಪ್ಪಿಗೆಯಾಗಿದೆ. ನೀವು ದೊಡ್ಡ ಮನಸ್ಸು ಮಾಡಿ ಈ ಮಗುವನ್ನು ಒಪ್ಪಿಸುವಿರಾದರೆ, ನಿಮ್ಮ ಅನಾಥಾಲಯಕ್ಕೆ ಹತ್ತು ಸಾವಿರ ರೂಪಾಯಿ ಬೇಕಾದರೂ ದೆಣಿಗೆ ಎಂದು ಕೊಡುತ್ತೇನೆ. ಈ ಮಗುವಿನ ಬೆಲೆ ಅದು ಎಂದು ತಿಳಿಯಬೇಡಿ. ಮನುಷ್ಯಜೀವಕ್ಕೆ ಬೆಲೆ ಕಟ್ಟುವುದೂ ಅಲ್ಲ; ನಿಕ್ರಯಿಸುವುದೂ ಅಲ್ಲ. ಇಲ್ಲಿ ಬೆಳೆಯಬಹುದಾದದ್ದಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ಈ ಮಗುವನ್ನು ನಾನು ಬೆಳೆಸಿಕೊಂಡು ಬರುತ್ತೇನೆ ಎಂದು ನಾನು ಆಶ್ವಾಸನ ಕೊಡುತ್ತೇನೆ. ನನ್ನ ಮಾತಿನ ಮೇಲೆ ವಿಶ್ವಾಸ ವಿಡುವುದು ನಿಮ್ಮ ಚಿತ್ತಕ್ಕೆ ಬಿಟ್ಟ ವಿಚಾರ. ಏಕೋ ಈ ಮಗುವನ್ನು ಕಂಡಾಗ, ಈ ಮಗು ನನ್ನದಾಗಲಿ ಎಂದುಕೊಳ್ಳುವಂತಾಗಿದೆ. ಇಷ್ಟರ ಮೇಲೆ ನಿಮ್ಮ ಇಷ್ಟ" ಎಂದು ತುಂಬಾ ಮಮತೆಯಿಂದ ಶಾಹರು ಕೇಳಿಕೊಂಡಾಗ, ಮೃದುಲಾಬೇನ್ ಯೋಚನೆಗೆ ಒಳಗಾದದ್ದು ನಿಜ. "ಈ ಮಗುವನ್ನು ಕಳಿಸಿದರೆ ಮತ್ತೆ ನಾನು ಒಂಟಿಯಾಗುತ್ತೇನಲ್ಲ" ಎಂಬ ಚಿಂತೆ ಅವಳಿಗೆ. ಆದರೆ ಒಂದು ಮನಸ್ಸು ಹೇಳುತ್ತಿತ್ತು: 'ನಿನ್ನ ಬದುಕೇನು ಶಾಶ್ವತವೆ? ನೀನು ಹೋದರೆ ಈ ಮಗು ಇಲ್ಲಿ ಎಲ್ಲರೊಂದಿಗೆ ಇನ್ನೊಂದು ಅಷ್ಟೆ! ಪ್ರೇಮಕುಮಾರನ ಹಿತವನ್ನೇ ನೀನು ಬಯಸುತ್ತಿದ್ದರೆ ಅವರಿಗೆ ಈ ಮಗುವನ್ನು ಒಪ್ಪಿಸಿಬಿಡು. ತುಂಬಾ ಅನುಕೂಲವಾದ ಜನ. ಪ್ರೀತಿಯಿಂದ ಕೇಳುತ್ತಿದ್ದಾರೆ. ಈ ಬೇಡಿಕೆಯನ್ನು ಅಲ್ಲಗಳೆದು ಈ ಮಗುವಿನ ಭವಿಷ್ಯ ಹಾಳುಮಾಡಬೇಡ' ಎಂದು ಹಾಗೇ ಒಂದು ನಿರ್ಧಾರಕ್ಕೆ ಬಂದಾಗ ಮನಸ್ಸು ಹಗುರಾಯಿತು ಈ ಮಗುವನ್ನು ಒಪ್ಪಿಸಿ-ಬೀಳ್ಕೊಡುವಾಗ ತುಂಬ ವ್ಯಥೆಯೂ ಆಯಿತು. ತುಂಬ ಕಳಕಳಯಿಂದ ಶಾಹರನ್ನು ಉದ್ದೇಶಿಸಿ "ಕಾಕಾ, ನನ್ನ ಆತ್ಮೀಯರೊಬ್ಬರ ಮಗು ಇದು. ಪರದೇಶಿಯಾಗಿ ಇಲ್ಲಿಗೆ ಬಂತು. ಹುಟ್ಟಿದಂದಿನಿಂದ ಈ ಮಗುವಿಗೆ ನಾನೇ ತಾಯಿಯಾಗಿ ನೋಡಿಕೊಳ್ಳಬೇಕಾಯಿತು. ಹುಟ್ಟಿನಲ್ಲೇ ಪ್ರತಿಕೂಲ ಪರಿಸ್ಥಿತಿಗೆ ಈ ಮಗು ಎದುರಾಗಬೇಕಾಗಿ ಬಂದುದಕ್ಕೆ, ನಾನು ಈ ಮಗುವಿನ ಮೇಲೆ ಅಪಾರ ಕರುಣೆಯಿಟ್ಟುಕೊಂಡಿದ್ದೇನೆ. ಅಷ್ಟೇ ವಾತ್ಸಲ್ಯವನ್ನೂ ತಳೆದಿದ್ದೇನೆ. ಈ ಮಗುವನ್ನು ಬೆಳೆಸಿ ಮುಂದಕ್ಕೆ ತರಬೇಕು ಎಂಬ ಹಂಬಲ ನನಗೆ ತುಂಬಾ ಇದೆಯಾದರೂ, ಹೆಣ್ಣಾದ ನನಗೆ ಅಷ್ಟು ಶಕ್ತಿ ಇಲ್ಲ. ನಾನಾದರೂ ಈ ಹಿಂದೆ ಕಳೆದಷ್ಟು ದಿನ ಇನ್ನು ಮುಂದೆ ಕಳೆಯಬೇಕಾಗಿದೆಯೆ? ತಾವು ಮಮತೆಯಿಂದ ಕೇಳಿದ್ದಕ್ಕೆ ಈ ಮಗುವನ್ನು ಒಪ್ಪಿಸುತ್ತಿದ್ದೇನೆ. ಇನ್ನು ಈ ಮಗುವಿನ ಎಲ್ಲ ಭಾರ ನಿಮ್ಮದು-ಅದರ ಸರ್ವಸ್ವವೂ ನೀವೇ. ಪ್ರೇಮಕುಮಾರನೆಂದು ಈ ಮಗುವಿಗೆ ನಾನೇ ಇಟ್ಟ ಹೆಸರು. ನನ್ನ ಈ ವರೆಗಿನ ಶುಶ್ರೂಷೆಯ ಸಂಕೇತವಾಗಿ ಈ ಹೆಸರಿನಿಂದಲೇ ಬೆಳಿಸಿದರೆ ನನಗದೇ ಒಂದು ಸಮಾಧಾನ. ಈ ಹೆಸರಿನಿಂದಲೇ — ಮುಂದೆ ಎಂದಾದರೂ ನಾನು ಈ ಮಗುವನ್ನು

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯೂಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಗುರುತಿಸಬೇಕಾದ ಸನ್ನಿವೇಶವಾದರೂ ಬರಬಾರದೇಕೆ? ತಮ್ಮ ಕೃಪೆಯಿಂದ ಈ ಮಗು ಬೆಳೆದು ಪ್ರಾಪಂಚಿಕಕ್ಕೆ ಹೊಂದಿಕೊಳ್ಳಲು ಶಕ್ತನಾದಾಗ, ನನಗೆ ತಿಳಿಸಲು ಮರೆಯಬಾರದು. ನಾನೆಲ್ಲೇ ದೂರದಲ್ಲಿದ್ದರೂ ಕೇಳಿ ಸಂತೋಷಪಟ್ಟುಕೊಳ್ಳುತ್ತೇನೆ. ಕೊನೆಯದಾಗಿ ನಾನು ತಮ್ಮಲ್ಲಿ ಹೇಳಿಕೊಳ್ಳಬೇಕಾದ ಮಾತು ಇಷ್ಟೇ: ಮಗು ತಿಳಿವಳಿಕೆಗೆ ಬಂದಾಗ ಬಾಲ್ಯದ ಸ್ಮೃತಿಯನ್ನು, ಮರೆತೂ ನೆನಪಿಗೆ ತಂದುಕೊಡಬಾರದು" ಎಂದಳು. "ಸರಿ," ಎಂದು ಅವರು ಆ ಮಗುವನ್ನು ಒಪ್ಪಿಸಿಕೊಂಡರು. ಅನಾಥಾಶ್ರಮದಲ್ಲಿ ಬೆಳೆಯುತ್ತಿದ್ದ ಮಗುವಿನ ಹುಟ್ಟಿನ ವಿಚಾರ; ಅವರು ಮತ್ತೆ ಕೇಳುವುದೂ ಅಲ್ಲ, ಇವಳು ಹೇಳುವುದೂ ಅಲ್ಲ. ಇಬ್ಬರಿಗೂ ಅದು ಗೊತ್ತು. ಮಾನವೀಯ ಚಾರಿತ್ರಿಕ ಪವಿತ್ರತೆಯೆಲ್ಲವೂ ಶಿಶುತನದಲ್ಲಿ—ಕುಲದ ಕಲಂಕವನ್ನೂ ಮರೆಸುವುದೇ ಮಗುತನ—ಎಂದು ಭಾವಿಸಿದ್ದ ಜನವಷ್ಟೇ ಅನಾಥಾಶ್ರಮಕ್ಕೆ ಮಗುವನ್ನು ಬೇಡಿ ಬರಬೇಕಷ್ಟೆ? ಹನಿ ತುಂಬಿದ ಕಣ್ಣುಗಳಿಂದಲೇ ಅವಳು ಪ್ರೇಮಕುಮಾರನನ್ನು ಬೀಳ್ಕೊಟ್ಟಳು. ಮಗನಲಾಲರಿಗೆ ನನ್ನ ಋಣ ಸಲ್ಲಿಸಿದೆನೆಂದು, ಒಂದು ಹೊತ್ತ ಹೊರೆಯ ಭಾರ ಇಳಿಸಿದಂತೆ ಮೃದುಲಾಬೇನಳಿಗೆ ಎನ್ನಿಸಿತಾದರೂ, ತನಗೆ ಪ್ರೀಯವಾದ ವಸ್ತುವನ್ನು ಕಳೆದುಕೊಂಡೆನೆಂಬ ವ್ಯಥೆಯೂ ಉಂಟಾಗಿತ್ತು.

ಈ ಮಾತಿಗೀಗ ಇಪ್ಪತ್ತೆರಡು ವರ್ಷಗಳೇ ಸಂದಿವೆ. ಅದೇ ಪ್ರೇಮಕುಮಾರ ಈಗ ದೊಡ್ಡವನಾಗಿದ್ದಾನೆ. ಇಂದು ಅವನ ಲಗ್ನ. ವಧು ಸೊಲ್ಲಾಪುರದ ದೊಡ್ಡ ಜವೀನದಾರರ ಮಗಳು. ವಧೂ-ವರರ ತಂದೆ ಬೇರೆ ಬೇರೆಯಾಗಿದ್ದರೂ, ಇಬ್ಬರನ್ನೂ ಹಡೆದವಳು ಒಬ್ಬಳೇ ಎಂದು ಮೃದುಲಾಬೇನಳಿಗೆ ತಿಳಿದಿರುವಂತೆ ಇನ್ನಾರಿಗೆ ತಿಳಿದಿದೆ? ಈ ಊಹೆಗೂ ಮೀರಿದ ಸನ್ನಿವೇಶವನ್ನು ನೆನೆಸಿಯೇ ಮತ್ತೊಮ್ಮೆ 'ಇದೇನು ಕನಸೆ?' ಎಂದು ತನ್ನಲ್ಲೇ ತಾನು ಪ್ರಶ್ನಿಸಿಕೊಂಡಳು ಮೃದುಲಾಬೇನ. ಆದರೆ ಕೈಯ್ಯಲ್ಲಿನ್ನೂ ಹಿಡಿದಿದ್ದ ಆ ಕರೆಯೋಲೆ 'ಅಲ್ಲ ಇದು ನನಸು!' ಎಂದು ಸಾರುತ್ತಿತ್ತು. "ದೇವರ ಲೀಲೆ ವಿಚಿತ್ರ!" ಎನ್ನುತ್ತ ಅವಳು ಕುಳಿತಂತೆ ಖುರ್ಚಿಗೆ ಒರಗಿಕೊಂಡಳು.

ಸೋವಿಯತ್ ಒಕ್ಕೂಟದಲ್ಲಿ

ಮಕ್ಕಳ ಸಾರ್ವತ್ರಿಕ ನಿರ್ಬಂಧ ವಿದ್ಯಾಭ್ಯಾಸ*

ಲೇ : ಐ. ಕೈರೋವ್

(ರಶಿಯನ್ ಸಂಘದ ಶಿಕ್ಷಣಸಚಿವರು)

ಸಾಕ್ಷರತೆಯ ಬಗೆಗೆ ನಮ್ಮ ದೇಶದಲ್ಲಿಯ ದುರನುಭವವೊಂದು : ಚಸರನ್ನು ಅದು ದೇಹಶ್ರಮಕಾರ್ಯದಿಂದ ವಿಮುಖರನ್ನಾಗಿ ಮಾಡುತ್ತಲಿದೆ. ಕಲಿತವರೆಲ್ಲರೂ ಕಾರಕೂನನಾಗಬೇಕೆಂದೇ ಬಯಸುತ್ತಾರೆ. ಎಂತಲೇ ನಮ್ಮ ನಾಡಿನ ಒಕ್ಕಲಿಗರಲ್ಲಿಯೂ ಕಾರ್ಮಿಕರಲ್ಲಿಯೂ ಸಾಕ್ಷರಿಗಳ ಸಂಖ್ಯೆ ತೀರ ಕಡಿಮೆ. ರಶಿಯಾ ದೇಶದ ವಿದ್ಯಾಭ್ಯಾಸಕ್ರಮವು ನಮ್ಮ ಜನರಿಗೆ ಮಾದರಿಯಾಗಬೇಕು !

ಝಾರರ (ರಶಿಯದಲ್ಲಿ ಕ್ರಾಂತಿಗೆ ಮೊದಲು ಆಳುತ್ತಿದ್ದ ಚಕ್ರವರ್ತಿಗಳ) ಕಾಲದ ರಶಿಯವು, ಅತ್ಯಂತ ಕೆಳಮಟ್ಟದ ಸಾಕ್ಷರತೆಯುಳ್ಳ ದೇಶವಾಗಿದ್ದಿತು. ೧೯೨೭ರ ಜನಗಣನೆಯ ಪ್ರಕಾರ, ಜನತೆಯಲ್ಲಿ ಶೇಕಡ ೨೪ರಷ್ಟು ಮಾತ್ರವೇ ಅಕ್ಷರಸ್ಥರಾಗಿದ್ದರು. ರಶಿಯನೇತರ (ನಾನ್-ರಶಿಯನ್) ರಾಷ್ಟ್ರೀಯತೆಗಳಲ್ಲಿ, ಸಾಕ್ಷರತೆಯು ವಿಶೇಷ ತಗ್ಗಿನ ಮಟ್ಟದಲ್ಲಿದ್ದಿತು. ರಶಿಯದ ಆಂದಿನ ಸಾಮ್ರಾಜ್ಯವಾದೀ ಸರಕಾರವು, ಸಾರ್ವಜನಿಕ ವಿದ್ಯಾಭ್ಯಾಸದ ಹಾದಿಯಲ್ಲಿ ಪ್ರತಿಯೊಂದು ಬಗೆಯ ಅಡ್ಡಿಯನ್ನೂ ತಂದೊಡ್ಡುತ್ತಿದ್ದಿತು. ಮಕ್ಕಳು ಮತ್ತು ತರುಣ-ತರುಣಿಯರಲ್ಲಿ ಐದರಲ್ಲೊಂದು ಪಾಲು ಮಾತ್ರವೇ ಪಾಠಶಾಲೆಗಳಿಗೆ ಹೋಗುತ್ತಿದ್ದರು. ಲಕ್ಷಗಟ್ಟಲೆ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಪಡೆಯಲು ಸಾಧ್ಯವಿರಲಿಲ್ಲ. ರಶಿಯನೇತರ ರಾಷ್ಟ್ರೀಯತೆಗಳು, ಮಕ್ಕಳಿಗೆ ತಮ್ಮ ನಾಡ ಭಾಷೆಗಳಲ್ಲಿ ಶಿಕ್ಷಣವನ್ನು ನೀಡುವಂತಹ ಪಾಠಶಾಲೆಗಳನ್ನು ಪಡೆಯುವ ಹಕ್ಕು ಇಲ್ಲದಂತಾಗಿತ್ತು.

ಅಕ್ಟೋಬರ್ ಕ್ರಾಂತಿಯ ತರುವಾಯ, ಸೋವಿಯತ್ ರಾಜ್ಯ ಸತ್ತೆಯು, ಎಲ್ಲ ನಾಗರಿಕರಿಗೂ ವಿದ್ಯಾಭ್ಯಾಸ ಪಡೆಯಲು ಹಕ್ಕನ್ನು ಘೋಷಿಸಿತು. ಹೊಸ ಸಾಮಾಜಿಕ ಪದ್ಧತಿಗೆ ಅನುಗುಣವಾಗಿದ್ದ, ಸಾರ್ವಜನಿಕ ವಿದ್ಯಾಭ್ಯಾಸದ ಪ್ರಜಾಪ್ರಭುತ್ವವಾದೀ ಪದ್ಧತಿಯನ್ನು ನೆಲೆಗೊಳಿಸಿತು. ನಮ್ಮ ಬಹುರಾಷ್ಟ್ರೀಯತೆಯ ದೇಶದಲ್ಲಿಯ ಎಲ್ಲ ರಾಷ್ಟ್ರೀಯತೆಗಳ ಮಕ್ಕಳಿಗೂ ತಮ್ಮ ಸ್ವಭಾಷೆಗಳಲ್ಲಿ ಅಧ್ಯಯನವನ್ನು ಪಡೆಯಲು ಸಾಧ್ಯವಾಗುವಂತೆ ಒಂದು ಸಾಧಾರಣ ಪಾಠಶಾಲಾ ಪದ್ಧತಿಯು ಸಂಘಟಿತವಾಯಿತು.

ಸಾರ್ವಜನಿಕ ವಿದ್ಯಾಭ್ಯಾಸದ ವಿಷಯದಲ್ಲಿ ತೋರಿಸಿದ ಈ ಆಸಕ್ತಿಯು, ಫಲಕಾರಿಯಾದ ಪರಿಣಾಮಗಳನ್ನು ಕೊಟ್ಟಿತು. ೧೯೧೪-೧೯೧೫ರ ಪಾಠಶಾಲಾವರ್ಷದಲ್ಲಿ, ಕ್ರಾಂತಿಪೂರ್ವದ ರಶಿಯದಲ್ಲಿ ೭೯,೦೦,೦೦೦ ಜನ ಮಕ್ಕಳು ಪಾಠಶಾಲೆಗಳಲ್ಲಿ ಶಿಕ್ಷಣವನ್ನು ಪಡೆಯಲು ಹಾಜರಾಗುತ್ತಿದ್ದರು. ಸೋವಿಯತ್ ರಶಿಯದಲ್ಲಿ ಈ ಸಂಖ್ಯೆಯು ೧೯೨೯-೧೯೩೦ರಲ್ಲಿ ೧,೩೫,೦೦,೦೦೦ ವಿದ್ಯಾರ್ಥಿಗಳವರೆಗೆ ಬೆಳೆಯಿತು.

೧೯೩೦ರ ಆಗಸ್ಟ್, ತಿಂಗಳಲ್ಲಿ ಸೋವಿಯತ್ ರಶಿಯದಲ್ಲಿ ಸಾರ್ವತ್ರಿಕವಾದ ನಿರ್ಬಂಧದ ಪ್ರಾಥಮಿಕ ವಿದ್ಯಾಭ್ಯಾಸದ ನಿರ್ಧಾರಾಜ್ಞೆಯು (ಡಿಕ್ರೀ) ಘೋಷಿಸಲ್ಪಟ್ಟಿತು. ಈ ವರ್ಷ ಸೋವಿಯತ್ ಜನತೆಯು, ಈ ಗಮನಾರ್ಹವಾದ ಘಟನೆಯ ೨೫ನೆಯ ವಾರ್ಷಿಕೋತ್ಸವವನ್ನು ಆಚರಿಸಿತು. ಈ ಸಂದರ್ಭವು, ಸೋವಿಯತ್ ಪಾಠಶಾಲೆಯ ಅಭಿವೃದ್ಧಿಯಲ್ಲಿ ಒಂದು ಹೊಸ ಘಟ್ಟವನ್ನು ಅಂಕಿತಗೊಳಿಸುತ್ತದೆ.

೧೯೩೦-೩೧ರಿಂದ—ಪಾಠಶಾಲಾ ವರ್ಷದಿಂದ – ಸಾರ್ವತ್ರಿಕವಾದ ನಿರ್ಬಂಧದ ಪ್ರಾಥಮಿಕ (ನಾಲ್ಕು ವರ್ಷಗಳ) ವಿದ್ಯಾಭ್ಯಾಸವು ಇಡೀ ಸೋವಿಯತ್ ಒಕ್ಕೂಟದಲ್ಲೆಲ್ಲ ಆಚರಣೆಗೆ ತರಲ್ಪಟ್ಟಿತು. ಔದ್ಯೋಗಿಕ ಕೇಂದ್ರಗಳಲ್ಲಿಯೂ ಮತ್ತು ಕಾರ್ಮಿಕರ ವಸತಿಗಳಲ್ಲಿಯೂ ಸಾರ್ವತ್ರಿಕವಾದ — ನಿರ್ಬಂಧದ — ಸಪ್ತವರ್ಷೀಯ ವಿದ್ಯಾಭ್ಯಾಸವು ಆಚರಣೆಗೆ ತರಲ್ಪಟ್ಟಿತು.

ಸಾರ್ವತ್ರಿಕವಾದ ನಿರ್ಬಂಧ ವಿದ್ಯಾಭ್ಯಾಸವು ಆಚರಣೆಗೆ ತರಲ್ಪಟ್ಟುದರಿಂದ, ಅದಕ್ಕಾಗಿ ಹೆಚ್ಚು ಅಧಿಕ ಸಂಖ್ಯೆಯ ಉಪಾಧ್ಯಾಯರು, ಶಾಲಾ ಕಟ್ಟಡಗಳು, ಹಾಗೂ ಹೊಸ ಪಠ್ಯಪುಸ್ತಕಗಳು ಮತ್ತು ಶಾಲೋಪಕರಣಗಳು ಅವಶ್ಯಕವಾದುವು.

---

* ಭಾರತದಲ್ಲಿಯ ಟಾಸ್ ಸಂಸ್ಥೆಯ ' ಸೋವಿಯತ್ ಒಕ್ಕೂಟದ ಸಮಾಚಾರ-ವಿಚಾರ' ದಿಂದ ಸ್ವೀಕರಿಸಿದುದು. ಸಂ. ಜ.



೧೯೩೪ರ ವೇಳೆಗೆ ಮಕ್ಕಳ ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸವು ಇಡೀ ದೇಶದಲ್ಲೆಲ್ಲ ಜಾರಿಗೆ ತರಲ್ಪಟ್ಟಿತು. ೧೯೩೮-೩೯ರ ಪಾಠಶಾಲಾ ವರ್ಷದಲ್ಲಿ, ಸೋವಿಯತ್ ಒಕ್ಕೂಟದಲ್ಲಿ ೩,೪೦,೦೦,೦೦೦ ವಿದ್ಯಾರ್ಥಿಗಳು ಪಾಠಶಾಲೆಗಳಿಗೆ ಹೋಗುತ್ತಿದ್ದರು. ಅದೇ ಸಮಯದಲ್ಲಿ ಏಳು ವರ್ಷದ ಮತ್ತು ಮಾಧ್ಯಮಿಕ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು, ಕ್ರಾಂತಿಪೂರ್ವದಲ್ಲಿ ಪಾಠಶಾಲೆಗಳಿಗೆ ಹೋಗುತ್ತಿದ್ದ ಮಕ್ಕಳ ಮತ್ತು ತರುಣ-ತರುಣಿಯರ ಸಂಖ್ಯೆಯ ಏಳರಷ್ಟಾಗಿದ್ದಿತು.

ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ರಾಷ್ಟ್ರೀಯ ಪ್ರಜಾತಂತ್ರಗಳು ಕೂಡ ಮಹತ್ತರವಾದ ವಿಜಯಗಳನ್ನು ಸಾಧಿಸಿವೆ. ಕ್ರಾಂತಿಗೆ ಮೊದಲು, ಉಜ್ಬೆಕಿಸ್ತಾನದ ಪ್ರದೇಶದಲ್ಲಿ ಕೇವಲ ಸುಮಾರು ಐವತ್ತು (೫೦) ಪ್ರಾಥಮಿಕ "ರಶಿಯನ್-ನೇಟಿವ್" (ನಾಟಿ-ರಶ್ಯನ್) ಪಾಠಶಾಲೆಗಳು ನಡೆಯುತ್ತಿದ್ದುವಾದರೆ, — ಅಲ್ಲಿ ಅದೇ ವೇಳೆಗೆ ರಶಿಯನ್ನರ ಮಕ್ಕಳಿಗಾಗಿ ಸುಮಾರು ಒಂದು ನೂರು ಪ್ರಾಥಮಿಕ ಪಾಠಶಾಲೆಗಳು ತೆರೆಯಲ್ಪಟ್ಟಿದ್ದುವು. ಈ ರಶಿಯನ್ ಪಾಠಶಾಲೆಗಳಲ್ಲಿ ೧೭,೩೦೦ ಜನ ರಶಿಯನ್ ಹುಡುಗಿಯರು ಶಿಕ್ಷಣವನ್ನು ಪಡೆಯುತ್ತಿದ್ದರು. ೧೯೩೮-೩೯ ಪಾಠಶಾಲಾವರ್ಷದಲ್ಲಿ ಸೋವಿಯತ್ ಉಜ್ಬೆಕಿಸ್ತಾನದಲ್ಲಿ ೨,೫೯೬ ಸಪ್ತವರ್ಷೀಯ ಮತ್ತು ೫೯೧ ಮಾಧ್ಯಮಿಕ ಶಾಲೆಗಳನ್ನೂ ಒಳಗೊಂಡು ಒಟ್ಟು ೫,೧೦೩ ಪಾಠಶಾಲೆಗಳಿದ್ದುವು. ಈ ಪಾಠಶಾಲೆಗಳಲ್ಲಿ ೧೨,೪೯,೦೦೦ ಜನ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದರು.

ಸೋವಿಯತ್ ರಶಿಯದಲ್ಲಿ ವಾಸಿಸುವ ರಾಷ್ಟ್ರೀಯತೆಗಳ ಸ್ವಂತಭಾಷೆಗಳಲ್ಲಿಯ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ಜನತೆಯ ತೀವ್ರವಾದ ಸಾಂಸ್ಕೃತಿಕ ಬೆಳೆವಣಿಗೆಯನ್ನು ಪ್ರೋತ್ಸಾಹಿಸಿತು. ಸೋವಿಯತ್ ದೇಶದಲ್ಲಿ ನಡೆದಿರುವ ಸಾಂಸ್ಕೃತಿಕ ಕ್ರಾಂತಿಗೆ ಪೂರ್ವಾಪೇಕ್ಷಿತ ಆವಶ್ಯಕತೆಯಾಗಿಯೂ ಅದರ ಭಾಗವಾಗಿಯೂ ಇದ್ದಿತು ಈ ಶಿಕ್ಷಣ.

ದೇಶಭಕ್ತಿಪೂರಿತವಾದ ಮಹಾಯುದ್ಧದಲ್ಲಿಯೂ, ಅದು ಕೊನೆಗಂಡ ಮೇಲೂ, (ಯುದ್ಧಕಾಲದಲ್ಲಿ ಪಾಠಶಾಲೆಯನ್ನು ಬಿಡಲೇಬೇಕಾಗಿ ಬಂದು, ಕೈಗಾರಿಕೋದ್ಯಮಗಳಲ್ಲಿಯೂ ವ್ಯವಸಾಯ ಕ್ಷೇತ್ರದಲ್ಲಿಯೂ ಕೆಲಸದಲ್ಲಿ ತೊಡಗಿದ) ಯುವ-ಕಾರ್ಮಿಕರಿಗಾಗಿಯೂ ಮತ್ತು ಯುವ-ವ್ಯವಸಾಯಗಾರರಿಗಾಗಿಯೂ ಸಂಜೆಯ ಪಾಠಶಾಲೆಗಳು ಸಂಘಟಿಸಲ್ಪಟ್ಟುವು. ಈ ಅನುಕೂಲದಿಂದ ಅವರು ಸಪ್ತವರ್ಷೀಯ ಪಾಠಶಾಲೆಯಲ್ಲಿಯೂ ಮತ್ತು ಮಾಧ್ಯಮಿಕ ಪಾಠಶಾಲೆಯಲ್ಲಿಯೂ ತಮ್ಮ ಕೆಲಸಗಳನ್ನು ತ್ಯಜಿಸದೆಯೇ ಓದಿ ಉತ್ತೀರ್ಣರಾಗಲು ಸಾಧ್ಯವಾಯಿತು.

ಯುದ್ಧೋತ್ತರ ವರ್ಷಗಳಲ್ಲಿ ಅತ್ಯಲ್ಪ ಸಮಯದಲ್ಲಿಯೇ ಸೋವಿಯತ್ ಜನತೆಯು ಜರ್ಮನ್ 'ಫ್ಯಾಸಿಸ್ಟ್'ರಿಂದ (ಹಿಟ್ಲರ್ ಅನುಯಾಯಿಗಳಿಂದ) ನಾಶಹೊಂದಿದ ವಿದ್ಯಾಭ್ಯಾಸದ ಸಂಸ್ಥೆಗಳನ್ನು ಪುನರ್ನಿರ್ಮಾಣ ಮಾಡಿದರು. ಸಾರ್ವಜನಿಕ ವಿದ್ಯಾಭ್ಯಾಸದ ಇತೋಧಿಕ ಅಭಿವೃದ್ಧಿಯನ್ನೂ ಅವರು ಸಾಧಿಸುವ ಭರವಸೆಯನ್ನಿತ್ತರು.

ಸೋವಿಯತ್ ರಶಿಯದ ರಾಷ್ಟ್ರೀಯ ಆರ್ಥಿಕಾಭಿವೃದ್ಧಿಗಾಗಿ ಸಿದ್ಧಗೊಳಿಸಲಾದ ಐದನೆಯ ಪಂಚವಾರ್ಷಿಕ (೧೯೫೧-೫೫) ಯೋಜನೆಯು, ಒಂದು ದೊಡ್ಡ ಕಾರ್ಯಭಾರವನ್ನು ನಿಗದಿಗೊಳಿಸಿದೆ. ಅದರಲ್ಲಿ, ಸಾರ್ವತ್ರಿಕ ಸಪ್ತವರ್ಷೀಯ ವಿದ್ಯಾಭ್ಯಾಸದಿಂದ ಸಾರ್ವತ್ರಿಕ ಮಾಧ್ಯಮಿಕ (ಹತ್ತು ವರ್ಷದ್ದು) ವಿದ್ಯಾಭ್ಯಾಸದೆಡೆಗೆ ಸಂಧಿಕಾಲವನ್ನು, ಪ್ರಜಾತಂತ್ರಗಳ ರಾಜಧಾನಿಗಳಲ್ಲಿಯೂ, ಪ್ರಜಾತಂತ್ರಗಳ ಅಧೀನದಲ್ಲಿರುವ ನಗರಗಳಲ್ಲಿಯೂ, ಪ್ರಾಂತಿಕ, ಪ್ರಾದೇಶಿಕ ಮತ್ತು ಅತ್ಯಂತ ದೊಡ್ಡ ಕೈಗಾರಿಕೋದ್ಯಮದ ಕೇಂದ್ರಗಳಲ್ಲಿಯೂ, ಪೂರ್ಣಗೊಳಿಸಬೇಕೆಂದು ನಿರ್ದೇಶವೀಯಲಾಗಿದೆ. ಈ ಯೋಜನೆಯ ತರುವಾಯದ ಪಂಚವರ್ಷೀಯ ಅವಧಿಯಲ್ಲಿ, ಇತರ ನಗರಗಳಿಗೂ ಮತ್ತು ಗ್ರಾಮಾಣ ಸ್ಥಾನಗಳಿಗೂ ಸಾರ್ವತ್ರಿಕ ಮಾಧ್ಯಮಿಕ (ದಶವರ್ಷೀಯ) ವಿದ್ಯಾಭ್ಯಾಸವನ್ನು ವಿಸ್ತರಿಸಲು ಆವಶ್ಯಕವಾದ ಪರಿಸ್ಥಿತಿಗಳನ್ನು ಸಿದ್ಧಗೊಳಿಸಬೇಕೆಂದೂ ಈ ಯೋಜನೆಯಲ್ಲಿ ನಿರ್ದೇಶಗೊಳಿಸಲಾಗಿದೆ.

ಈ ಕಾರ್ಯಭಾರವು ವಿಜಯಪ್ರದವಾಗಿ ಸಾಧಿಸಲ್ಪಡುತ್ತಿದೆ, ೧೯೫೦ರೊಡನೆ ಹೋಲಿಸಿದರೆ, ೧೯೫೫ರಲ್ಲಿ ಮಾಧ್ಯಮಿಕ ಶಾಲೆಗಳ ಎಂಟನೆಯ ತರಗತಿ (ಇಯತ್ತೆ)ಯಿಂದ ಹತ್ತನೆಯ ತರಗತಿಯ ವರೆಗಿನ ವಿದ್ಯಾರ್ಥಿಗಳ ಸಂಖ್ಯೆಯು ನಾಲ್ಕು ಪಾಲಿಗಿಂತಲೂ ಹೆಚ್ಚಾಗಿ ಬೆಳೆಯುತ್ತಿದೆ. ಎಲ್ಲ ಮುಖ್ಯ ನಗರಗಳಲ್ಲಿಯೂ ಮತ್ತು ಔದ್ಯೋಗಿಕ ಕೇಂದ್ರಗಳಲ್ಲಿಯೂ ಸಾರ್ವತ್ರಿಕ ದಶವರ್ಷೀಯ ವಿದ್ಯಾಭ್ಯಾಸವನ್ನು ಆಚರಣೆಯಲ್ಲಿ ಜಾರಿಗೆ ತರಲಾಗಿದೆ.

ಈ ಸಮಯದಲ್ಲಿ ಸೋವಿಯತ್ ಒಕ್ಕೂಟದಲ್ಲಿ ೨,೨೦,೦೦೦ ಪಾಠಶಾಲೆಗಳಿವೆ. ಅಲ್ಲಿ ೩,೭೦,೦೦,೦೦೦ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯುತ್ತಾರೆ. ಝಾರರ ಕಾಲದ ರಶಿಯದಲ್ಲಿ ಪಾಠಶಾಲೆಗಳಲ್ಲಿ ೨,೪೦,೪೦೦ ಜನ ಉಪಾಧ್ಯಾಯರಿದ್ದರು. ಸೋವಿಯತ್ತಿನ

ಪಾಠಶಾಲೆಗಳಲ್ಲಿ ಕೆಲಸಮಾಡುತ್ತಿರುವ ಉಪಾಧ್ಯಾಯರ ಸಂಖ್ಯೆ ೧೭,೫೭,೫೦೦ ಆಗಿದೆ. ಸೋವಿಯತ್ ಆಡಳಿತವರ್ಷಗಳ ಅವಧಿಯಲ್ಲಿ ೧,೦೦,೦೦೦ಕ್ಕಿಂತಲೂ ಹೆಚ್ಚು ಪಾಠಶಾಲೆಗಳ ಕಟ್ಟಡಗಳು ಕಟ್ಟಲ್ಪಟ್ಟಿವೆ..

ಪ್ರತಿವರ್ಷದಲ್ಲಿಯೂ ಸಾರ್ವಜನಿಕ ವಿದ್ಯಾಭ್ಯಾಸದ ಸಲುವಾಗಿ, ಮೊದಲಿಗಿಂತ ಹೆಚ್ಚು ಹಣ ನಿಗದಿಗೊಳಿಸಲ್ಪಡುತ್ತಿರುವುದನ್ನು ಕಾಣಬಹುದು. ೧೯೫೫ರಲ್ಲಿ ಈ ಉದ್ದೇಶದ ಸಲುವಾಗಿ ೬,೮೪೦,೦೦,೦೦,೦೦೦ ರೂಬಲ್ಲುಗಳನ್ನು (ರೂಬಲ್ಲಿಗೆ ೧.೨ ರೂಪಾಯಿ) ಮೀಸಲಾಗಿದೆ—ಎಂದರೆ ೧೯೪೦ರ ಅಂಕೆಯ ಮೂರರಷ್ಟು ಹಣ.

ಪ್ರತಿವರ್ಷವೂ ಸೋವಿಯತ್ ರಶಿಯದಲ್ಲಿ ಮಾಧ್ಯಮಿಕ ಪಾಠಶಾಲೆಯ ಶಿಕ್ಷಣವನ್ನು ಮುಗಿಸಿದ ಜನರ ಸಂಖ್ಯೆಯು ಕಾರ್ಮಿಕವರ್ಗದಲ್ಲಿ ಬೆಳೆಯುತ್ತಿದೆ. ಹೆಚ್ಚು ಹೆಚ್ಚು ಜನ ತರುಣರು ಮಾಧ್ಯಮಿಕ ಪಾಠಶಾಲೆಗಳಿಂದ ಉತ್ತೀರ್ಣರಾಗುತ್ತಿದ್ದಾರೆ.

ಮಾಸ್ಕೋ ನಗರದ ಸ್ತಾಲಿನ್ 'ಆಟೋಮೋಬೈಲ್' (ಮೋಟಾರು) ಕಾರಖಾನೆಯಲ್ಲಿಯ ಕೆಲಸಗಾರರಲ್ಲಿ, ಶೇಕಡ ೯೦ ರಷ್ಟು ಜನರು ಮಾಧ್ಯಮಿಕ ಪಾಠಶಾಲಾ ಶಿಕ್ಷಣವನ್ನು ಪಡೆದಿದ್ದಾರೆಂಬುದು ಗಮನಾರ್ಹವಾದ ಸ್ವಾರಸ್ಯ ವಿಷಯವಾಗಿದೆ. ಮ್ಯಾಗ್ನಿತೋಗೋರ್ಸ್ಕ್ ನಗರದ ಲೋಹಕರ್ಮಾಗಾರದಲ್ಲಿಯ ಮೂಲಭೂತ ವೃತ್ತಿಶಾಖೆಗಳಲ್ಲಿ ಕೆಲಸಮಾಡುವವರಲ್ಲಿ, ಶೇಕಡ ೮೦ರಿಂದ ೯೦ ರಷ್ಟು ಜನರು—ಇವರು ಕೂಡ ಮಾಧ್ಯಮಿಕ ಪಾಠಶಾಲಾ ಶಿಕ್ಷಣವನ್ನು ಪಡೆದವರಿದ್ದಾರೆ.

ಸೋವಿಯತ್ ರಶಿಯದಲ್ಲಿ ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸವನ್ನು ಆಚರಣೆಗೆ ತರಲು ಪ್ರಾರಂಭಿಸಿ ೨೫ ವರ್ಷಗಳಾದುವು. ಈಗ ಸಾರ್ವತ್ರಿಕ ಮಾಧ್ಯಮಿಕ ಪಾಠಶಾಲಾ ಶಿಕ್ಷಣದ ಸಮಸ್ಯೆಯು ಕಾರ್ಯತಃ ಬಗೆಹರಿಸಲ್ಪಡುತ್ತಿದೆ. ಸೋವಿಯತ್ ದೇಶದಲ್ಲಿ ಯುವಜನರ ಸಲುವಾಗಿಯೂ, ಸೋವಿಯತ್ ಜನತೆಯ ಸಾಂಸ್ಕೃತಿಕ ಮಟ್ಟವನ್ನು ಉನ್ನತಗೊಳಿಸುವುದರ ಸಲುವಾಗಿಯೂ ಅತ್ಯಂತ ಆಸಕ್ತಿಯು ಪ್ರದರ್ಶಿಸಲ್ಪಡುತ್ತಿದೆಯೆನ್ನುವುದಕ್ಕೆ ಇದು ಪ್ರತ್ಯಕ್ಷ ಪ್ರಮಾಣವಾಗಿದೆ.

ಗೆಲವಿನ ಪೊಳ್ಳು

(ಒಂದು ನವ್ಯಕವನ)

●

ಶ್ರೀ. ಅರವಿಂದ ನಾಡಕರ್ಣಿ, ಬಿಸ್ಸಿ., ಎಲ್‌ಎಲ್. ಬಿ. ಮುಂಬೈ

ಮೊಗ್ಗೆ ತುಂಬಾ ಅರಳಿದೆ ಚೈತ್ರಸಂಭ್ರಮದಲ್ಲಿ.
ಮೆಲುಗಾಳಿಗೆ ತಲೆಬಾಗುವ ಮುಗ್ಧಕಳಿಕೆಯ
ನಮ್ರನಗೆ ಸತ್ತು—
ನವಶಕ್ತಿಯ ಅಮಲೇರಿದೆ ಪೌಡರುಮೊಗಕೆ.

ಆಟವಿನೋದಗಳ ಹೊಸಹೊಸ ಯೋಜನೆಗಳ ಕ್ರಮ
ರದ್ದಾಗಿ
ಮನ ಲೆಕ್ಕಹಾಕುತಿದೆ ಯಾವುದೋ ಮಹಾಯೋಗದ
ಕಾಲಾಂತರ ಆಳೆಯಲು.
ಹರಿಣಿಯೋಟದ ಗಡಿಬಿಡಿ ಹೆಜ್ಜೆ ನತಿಸಿ
ಲಯನಿಯಂತ್ರಣದಿ ನೆಲಮೆಟ್ಟುತಿದೆ ಒಜ್ಜೆ ಕಾಲು,
ಆತ್ಮವಿಶ್ವಾಸದಲಿ.

ವಿಶ್ವವೈಚಿತ್ರ್ಯದಾನಂದ ಲುಟಾಯಿಸುವ ಚಂಚಲನೇತ್ರ
ಈಗ ಒಸರಿಸುತಿವೆ ಭಾವಮಧು ಜಡವಾಗಿ.
ಜಂಭವೇರಿದ ವೇಣಿ ತೂಗುತಿದೆ ತಾಳದಲಿ.
ಒಡಲಾಳದಲಿ ಅಡಗಿದ ಮಧು
ಉಕ್ಕಿಹರಿಯುತಿದೆ ನರನರ ನಾಡಿ-ನಾಡಿಗಳಲ್ಲಿ.
ಪಕ್ವ ಮಾವಿನ ತಿಳಲ ಚಪ್ಪರಿಸಿದ ನಾಲಗೆ
ಪಟಪಟ ಒಸರಿಸಿತು ಅಮೃತ ಬಿಂದು ಬಿಂದು.
ಕೆಂದುಟಿ ಬೀಸುತಿನೆ ವಾಗ್ಜಾಲ ಜಾಲ.

ಪ್ರತಿ ಚಲನವಲನಕೊಮ್ಮೆ ಕೋಮಲ ಅಂಗಾಂಗದಿಂದ
ಸಾವಿರಾರು ತಂತಿವಾರ್ತೆ ಹೊಮ್ಮಿ ಝೇಂಕರಿಸುವುವು

ಕರ್ಣಪಟಲಕೆ ಅಪ್ಪಳಿಸಿ.
ಸುಪ್ತಮನಕೆ ಧಕ್ಕೆಯಿಕ್ಕಿ.
ಎಲ್ಲವೂ ಸುವ್ಯವಸ್ಥಿತ ಕಲ್ಪಿತ ಪರಿಣಾಮಕಾಗಿ.
ತುಂಟನಗೆಯ ಕಿಲಕಿಲ, ಕೈಕುಣಿತ, ನಡುಕುಲುಕು,
ಕೊರಳತಿರುಪು, ಓರೆನೋಟ
ಎಲ್ಲವೂ ಹೊಡೆಯುತಿವೆ ಶರ
ತೈಲಕುಂಭದ ಮೇಲಿಟ್ಟ ಮೀನಗಣ್ಣಿಗೆ!
ಅಜೋ– ವೃದ್ಧ ವೃಕ್ಷದ ಬಳಿ ಮೇನಕೆಯ ಮೋಹಿನೀ ನೃತ್ಯ!

ಅಹಹಾ!
ಧಡದಿ ಉರುಳಾಡುವ ಶಂಖ-ಚಿಪ್ಪುಗಳನು
ಹೀರುತಿವೆ ತೆರೆತೆರೆ.
ಯಾರಿವನು? ಎಲ್ಲೋ ಕಂಡಂತಿದೆ ಮುಖಸೂರ್ಯ.
ಓಹೋ. ಚೆಂಡಿಗಾಗಿ ಮಿತ್ರರೊಡನೆ ಗುದ್ದಾಡಿ ಅತ್ತವನು
ಇವನೇನು?
ಬಿ ಏ. ಪರೀಕ್ಷೆಯಲಿ ಫಸ್ಟ್‌ಕ್ಲಾಸ್ ಹೊಡೆದನೆಂದು
ದೊಡ್ಡ ಹೊಟೇಲಿನಲಿ ಚಹಾ ಕೊಟ್ಟವನು ಇವನೇನು?
ರಾಜಕಾರಣ ಅರ್ಥಶಾಸ್ತ್ರ ಚಿತ್ರಸಟವಿಮರ್ಶೆ
ಮುಂತಾದ ವಿವಾದಾರ್ಹ ವಿಷಯಗಳ ಮೇಲೆ
ಉದ್ದುದ್ದ ಉಪನ್ಯಾಸಕೊಡುವ ಮಹಾಪಂಡಿತ
ಮಂತ್ರಮುಗ್ಧನಾದಂತೆ ಮೂಕನಾದನಲ್ಲ!

ಸಂಸ್ಕೃತವನ್ನೇ ಧಿಕ್ಕರಿಸಿದ ಜಂಟಲ್‌ಮನ್ನನು
ಶಾಕುಂತಲವನ್ನು ಇಪ್ಪತ್ತು ಸಲ ಓದಿದನಂತೆ!
ಅಡವಿಬಾಳಿಗೆ ತಕ್ಕ ಸರಿಗಮಶತ್ರು
ಕಂಕಣನಾದಕ್ಕೆ ಜಿಗಿವನಲ್ಲ!
ಉದ್ಯಾನ ಹೂಗಿಡಗಳ ಬಣ್ಣಬಣ್ಣ ನೋಡಲು ಹೇಸಿದವನು
ಪತ್ತಲವರ್ಣ ಕುರಿತು ಉಪನ್ಯಾಸ ಕೊಡುತ್ತಾನಲ್ಲ!
ಎದೆಯಲುಕ್ಕುವ ಬುಗ್ಗೆ ಬುಗ್ಗೆ ತುಂಬಿ
ಬರೇ ನೀರುನೀರನು ಬುರುಡೆಯಲಿ.
ಲೋಕಸಂತೆಯೊಡನೆ ನಡೆಸುವ ಮಲ್ಲಕುಸ್ತಿ ತಡೆದು
ಮನ ಬಿದ್ದಿದೆ ನಿತ್ರಾಣ ನವಶುಶ್ರೂಷೆ ಕಾಯುತ!
ಯಾರಿವನ ಮೇಲೆ ಮಾಯಮಾಟ ಮಾಡಿದವರು?
ಯಾರವರು?

ಕೇಶರಾಶಿಯ ನೇವರಿಸಿ ನಾನ್ಕೊಗದ ಪೌಡರನು ಹೀರಿದ
ಗಾಳಿ
ಅವನ ಮೈಗಿತ್ತಿತ್ತು ವಿದ್ಯುತ್ತಿನ ಕರೆಂಟು.

ದಿಗ್ವಿಜಯದುಲ್ಲಾಸ ಹೊಳೆಹೊಳೆಯಾಗಿ ಹರಿಯಿತು
ಬೆಸೆದ ಬಾಹುಗಳಲಿ.
ಅಪೂರ್ವ ಪರಾಕ್ರಮಕಿರೀಟ ಮೆರೆಯುತಿದೆ ತಲೆಗಳಲಿ.
ಇಬ್ಬರೂ ಬಿಂಕದಿಂದುಬ್ಬಿದರು ಪುಗ್ಗೆಯಂತೆ
ತಮ್ಮ ಶಕ್ತಿಗೆ ತಾವೇ ಆಶ್ಚರ್ಯಪಡುತ! ಪಾಪ!
ಮೇಲೆ ನಕ್ಕನು ಬ್ರಹ್ಮ ಗಹಗಹಿಸಿ.
ನೌಕರಿಗಾಗಿ ವಶೀಲಿ ಹಚ್ಚಿದವನು ಕಾರ್ಯಸಿದ್ಧಿಗೆ ನಕ್ಕಂತೆ!
"ಒಂದು ಮೆಟ್ಟಿಲನ್ನೇರಿದೆ, ಈಗುಳಿದಿದಿನ್ನೊಂದು" ಎಂದು
ಮತ್ತೆ ವಿಚಾರಮಗ್ನನಾದ ಕಮಲಾಸನದಲ್ಲಿ.
ಪ್ರಸೂತಿಗೃಹದಲ್ಲಿ ಅವತರಿಸಿದ ಬಾಲಕೃಷ್ಣ
ಭೋಂಕನತ್ತ ನರ್ಸುಗಳ ಕೈಯಲ್ಲಿ.
ಆ ಓಂಕಾರಕೆ ಚಿಗುರಿದುವು ಕೈಗಳೆರಡು ಬಾಣಂತಿಗೆ.
ಆ ಕೈಗಳಿಂದುಕ್ಕಿ ಹರಿಯಿತು ಶೀತಲ ಮಂದಾಕಿನಿ.
ಅದರಲಿ ಮಿಂದ ಆ ಅಸಹಾಯ ಜೀವಕೆ
ಸಿಕ್ಕಿತು ವಜ್ರಕವಚ.
ಕರುಳ ಕತ್ತು ರಕ್ತಧಾರೆಯಲ್ಲದ್ದಿ
ಕೈಗಳೆರಡೂ ನಿರ್ಮಿಸಿದ ಅಭೇದ್ಯ ಕವಚ
ಎಲ್ಲಿಂದ ಬಂತಾಶಕ್ತಿ ಆ ಕೈಗಳಿಗೆ?
ಎಲ್ಲಿಂದ ಬಂತು.....?
ಮಗುವಿಗೆ ಮೊಲೆಯುಣಿಸುತ ನಕ್ಕಳು ತಾಯಿ
ಲೋಕವಡಗಿತ್ತು ದುಗ್ಧಧಾರೆಯು ಹೀರುವ
ಪುಟ್ಟ ತುಟಿಗಳಲಿ.
ಸುಖಸ್ವಪ್ನಗಳಾಗಿ ಎದೆತಳ ಕಲಕಿದ
ಮೂರ್ತಿ ಮಡಿಲಲಿತ್ತು ಸಜೀವ.
ಹೊಟ್ಟೆಗೆ ಜೋಲುವ ಮರಿಯ ಸಲಹ ಜಿಗಿಯುತಿತ್ತು
ಹೆಣ್ಣು ಕೋತಿ ಟೊಂಗೆಯಿಂದ ಟೊಂಗೆಗೆ.
ಹದ್ದಿನ ಪದ್ದಿಗೆ ಮರಿಗಳನು ರೆಕ್ಕೆಯಲ್ಲಡಗಿಸಿ
ಕಿರ್ರನೆ ಕೆರಿಚಿತು ಸ್ಯಾರೆನುಕಂತದಿ ತ್ರಸ್ತ ಹೇಟೆ.
ಎಲ್ಲೋ ಅಲೆವ ಒಂದೆರಡೂ ಮರಿಗಳೂ ಸಹೆ
ಫಕ್ಕನೆ ಬಂದು ಹೊಕ್ಕುವು ರೆಕ್ಕೆಯಡಿಯ ಕೋಟೆ.

ಪಾಟಿಪುಸ್ತಕ ಹಿಡಿದ ಮಗುವ ನೋಡಿ
ಉಬ್ಬಿದಳು ಹೊಸಗೆಲವಿನ ಭರವಸ್ಸಲ್ಲಿ ತಾಯಿ
ಮೇಲೆ ನಕ್ಕನು ಬ್ರಹ್ಮ ಮತ್ತೊಮ್ಮೆ ಧರ್ಮನೆ ತೇಗಿ:
"ಎರಡೂ ಮೆಟ್ಟಿಲುಗಳನ್ನೇರಿದೆ.
ಹೀಗೇ ಬದುಕೆ ಬಂದಿದೆ ಜೀವಕೋಟಿ ಇದುವರೆಗೂ.
ಹೀಗೇ ಬದುಕುವುದು ಜೀವಕೋಟಿ ಇದುವರೆಗೂ!"

ನಕಲು

(ಒಂದು ಚಿಕ್ಕಕತೆ)

ಶ್ರೀ. ಅಶ್ವತ್ಥ, ಬನಾರಸ ಹಿಂದು ವಿ. ವಿ. ನಿಲಯ

ಮೂಲಬಿಂಬ ತಿರುಪೆಬೇಡುತ್ತ ಬೀದಿಬೀದಿ ಅಲೆಯುತ್ತಿದೆ. ಅದರ ಪ್ರತಿಬಿಂಬ ಎಲ್ಲರಿಂದಲೂ ಮನ್ನಣೆ ಪಡೆಯುತ್ತಲಿದೆ. ಇದೊಂದು ಕಲಾಪ್ರಪಂಚದಲ್ಲಿಯ ಚಮತ್ಕಾರ!

ಆ ಮಧ್ಯಾಹ್ನ ಕಲ್ಕತ್ತೆಯ ಮ್ಯೂಜಿಯಂ ದಿವ್ಯಭವನ ಗುಜುಗುಟ್ಟುತ್ತಿತ್ತು. ಸಾವಿರಾರು ಮೋಟಾರುಕಾರುಗಳು ಚೌರಂಗಿ ರಸ್ತೆಯುದ್ದಕ್ಕೂ ನಿಂತಿದ್ದುವಲ್ಲದೆ ಅಲ್ಲೆಲ್ಲ ತುಂಬಿ ತುಳುಕಿ ಇದಿರಿನ 'ಎಸ್‌ಪ್ಲನೇಡ್,' ಆಕ್ಕಪಕ್ಕದ ರಸ್ತೆಗಳಿಗೂ ಹರಿದಿದ್ದುವು. ಸ್ವಲ್ಪ ಹೊತ್ತಿಗೆ ಮುಂಚೆ ಗೌರ್ನರ್ ಸಾಹೇಬರು ಭಾರತದ ಕಲಾಪ್ರೌಢಿಮೆ, ನಾಗರಿಕತೆ, ಸಂಸ್ಕೃತಿಗಳ ಮೇಲೆ ಭಾಷಣಮಾಡಿ, ಆಂತರರಾಷ್ಟ್ರೀಯ ಚಿತ್ರಕಲಾ ಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸಿ ಹೋಗಿದ್ದರು. ರಸಿಕಜನರು ಒಂದೊಂದು ರೂಪಾಯಿ ಪ್ರವೇಶಧನವನ್ನು ಕೊಟ್ಟು, ಗುಂಪುಗುಂಪಾಗಿ ಒಳಹೊಕ್ಕು, ಇರುವೆಯ ಸಾಲಿನಂತೆ ನಡೆದು, ಕೈಪಿಡಿಯನ್ನು ಓದಿಕೊಳ್ಳುತ್ತ, ಕತ್ತು-ಕೈಗಳನ್ನು ಆಡಿಸುತ್ತ ತಮ್ಮತಮ್ಮೊಳಗೆ ಪ್ರಶಂಸೆ-ಟೀಕೆಗಳ ಮಾತನ್ನಾಡಿಕೊಳ್ಳುತ್ತ ಪ್ರದರ್ಶನವನ್ನು ನೋಡಿಕೊಂಡು ಹೊರಬರುತ್ತಿದ್ದರು. ಆ ರೇಷ್ಮೆ, ಜರತಾರಿ, ಚಿನ್ನ, ವಜ್ರ, ಕಂಪು, ಮುತ್ತು, ತುಟಿರಂಗು, ಪೌಡರು, ತಲೆಯೆಣ್ಣೆ, ಹೇರ್‌ಪಿನ್, ಗಾಗಲ್ಸ್, ವ್ಯಾನಿಟಿಕೇಸ್, ಕೈಗಡಿಯಾರ, ಹೂ, ಹ್ಯಾಟ್, ಸೂಟ್, ನೆಕ್‌ಟೈ, ಕುರ್ತ, ಧೋತಿಗಳ—ಈ ಮೆರವಣಿಗೆಯೂ ಕೂಡ ಆಹ್ಲಾದಕರವಾದ ಪ್ರದರ್ಶನವೇ. ಹಲವು ಪರಿಮಳಗಳ ಕಂಪು, ಸಿಗರೇಟು ಸಿಗಾರ್‌ಗಳ ವಾಸನೆಯೊಂದಿಗೆ ಬೆರೆತು ಅವರಣವನ್ನೆಲ್ಲ ತುಂಬಿತ್ತು. ಕೆಲಕೆಲದ ನಗೆ ತಗ್ಗುಧ್ವನಿಯ ಮಾತು, ಟ್ರಾಂ ಬಸ್ಸು-ಕಾರುಗಳ ಗದ್ದಲ, ಎಲ್ಲವೂ ಸೇರಿದ ಶಬ್ದ, ದೂರದಿಂದ ಕೇಳಿಸುವ ಮುಂಗಾರುಮಳೆಯ ಮೊರೆತದಂತಿತ್ತು. ಆ ನಾಗರಿಕ ದೃಶ್ಯದಲ್ಲಿ ಎಲ್ಲೆಲ್ಲೂ ಐಶ್ವರ್ಯ, ಉತ್ಸಾಹ, ಸಂತೋಷಗಳು ತಾಂಡವಾಡುತ್ತಿದ್ದುವು— ಆ 'ಅರಮನೆಗಳ ನಗರ'ದ ಘನತೆ-ಕೀರ್ತಿಗಳಿಗೆ ತಕ್ಕಂತೆ. ಆಹಾ, ಕಲ್ಕತ್ತೆಯ ಜನನೇ ಜನ! ಎಂತಹ ಕಲಾಪ್ರೇಮ, ಶ್ರೇಷ್ಠ ಅಭಿರುಚಿ, ಸಂಸ್ಕೃತಿ!

ಈ ಲಕ್ಷಾಂತರ ಜನರ ಸಂತೋಷವೆಲ್ಲ ಒಂದು ತೂಕವಾದರೆ, ಆಗ ಚಿತ್ರಕಾರ ನರೋತ್ತಮ ಬಸುವಿನ ಸಂತೋಷವೇ ಒಂದು ತೂಕ. ದೇಶದ ಮೂಲೆಮೂಲೆಗಳಿಂದಲೂ, ರಾಯಭಾರಿಗಳ ಮೂಲಕ ಪರದೇಶಗಳಿಂದಲೂ ಬಂದಿದ್ದ ಸುಮಾರು ಆರು ಸಾವಿರ ಚಿತ್ರಗಳಲ್ಲಿ, ಅವನ ಚಿತ್ರಕ್ಕೆ ಎರಡು ಸಾವಿರ ರೂಪಾಯಿನ ಮೊದಲನೆಯ ಬಹುಮಾನ ದೊರೆಕಿದ್ದಿತು. ಅಷ್ಟೇ ಅಲ್ಲ, ಅಂದಿನ ಪ್ರಮುಖ ಆಹ್ವಾನಿತರಲ್ಲಿ ಒಬ್ಬರಾದ ಸೇಕ್ ಬಿರ್ಲಾರವರು, ಆಗ ತಾನೆ ಆ ಚಿತ್ರವನ್ನು ಐದು ಸಾವಿರ ರೂಪಾಯಿಗೆ ಕೊಂಡು ಹುಂಡಿಯನ್ನು ಕೊಟ್ಟಿದ್ದರು. ಇಷ್ಟು ಹಣದ ಸುಖವೇನು ಕಡಿಮೆಯಿಲ್ಲದಿದ್ದರೂ ನರೋತ್ತಮನಿಗೆ ತನ್ನ ಕಲಾಶಕ್ತಿ ಸಂಪಾದಿಸಿದ್ದ 'ಮೊದಲ ಬಹುಮಾನ'ದ ಹೆಮ್ಮೆ ಅದಕ್ಕೂ ಒಂದು ಕೈ ಹೆಚ್ಚು. ಅದು ಅವನೊಳಗೆ ಹಿಡಿಸಲಾರದೆ ಮುಖದಿಂದ ಹೊರಸೂಸುತ್ತಿತ್ತು. ಅವನು ಅಲ್ಲಲ್ಲೇ ತನ್ನ 'ಮಾಸ್ಟರ್ ಪೀಸ್'ನ ಸುತ್ತುಮುತ್ತುಸುಳಿದಾಡುತ್ತ, ಚಿತ್ರವನ್ನೂ 'Ist Prize'ನ ವಿವರದ ಚೀಟಿಯನ್ನೂ ಮತ್ತೆ ಮತ್ತೆ ದೂರದಿಂದಲೇ ನೋಡಿಕೊಳ್ಳುತ್ತ, ಅದರ ಮುಂದೆ ಯಾವಾಗಲೂ ನೆರೆದಿರುತ್ತಿದ್ದ ಜನರ ಗುಂಪನ್ನು ಗಮನಿಸುತ್ತ, ಪ್ರಶಂಸೆಯ ಮಾತುಗಳನ್ನೂ ತನ್ನ ಹೆಸರಿನ ಉಚ್ಚಾರಣೆಯನ್ನೂ ಕೇಳುತ್ತ ಮೈಮರೆಯುತ್ತಿದ್ದ. ಹಾಗೇ ಅವನನ್ನು ಗುರುತಿಸಿದ ದೊಡ್ಡ ಮನುಷ್ಯರ ಕೈಕುಲುಕುಗಳ, ಅಭಿನಂದನೆಗಳ ಸುರಿಮಳೆಗೆ ಮಗುವಿನಂತೆ ಮೈಯೊಡ್ಡುತ್ತಿದ್ದ. ಒಂದು ಸಾರಿ ಸ್ನೇಹಿತರು ಪೀಸಿಕೆ. ಸಿ. ದಾಸ್ ಹೋಟಲಿಗೆ ಎಳೆದುಕೊಂಡು ಹೋಗಿದ್ದರು. ಎಂಟುನೂರು ರೂಪಾಯನ್ನು ಸಂತೋಷದಿಂದ ಕಕ್ಕಿದ್ದ. ಅಂತೂ ಅದು ಅವನ ದಿನ!

ನರೋತ್ತಮನ ಇಷ್ಟು ಸುಖಕ್ಕೆ ಕಾರಣವಾಗಿ, ಆ ಮಹಾಪ್ರದರ್ಶನಕ್ಕೆ ಕೇಂದ್ರವಾಗಿದ್ದ ಚಿತ್ರ ಮುದಿ ತಿರುಕಿಯೊಬ್ಬಳದು! ಸೊಗಸಾದ ಚಿತ್ರ. ಈಗಿನ 'ಕ್ಯೂಬಿಜಸಂ'ನ ಮಂಕು-ಬೂದಿಯೂ ಇಲ್ಲ; 'ಸಿಂಬಾಲಿಜಸಂ'ನ ಊಹಾಪೋಹವೂ ಇಲ್ಲ; ರಜಪೂತ ಮೊಗಲಾಯಿಗಳ ಮಾಯಾಜಾಲವೂ ಇಲ್ಲ—ಅದು ಸಜೀವ ಚಿತ್ರ; ತಿರುಕಿಯ ಆ ನಿರ್ಜೀವತೆಯದು; ಮೈತುಂಬಿ ಬಂದ ಚಿತ್ರ, ಆ ನಶಿಸಿಹೋದ ಮೈಯಿನದು; ಬಹಳ ಸುಂದರ ಚಿತ್ರ, ಆ ವಿಕಾರ ರೂಪಿನದು. ನೋಡಿದವರಿಗೆ ಮುದುಕಿಯೊಬ್ಬಳು ನಿಜವಾಗಿಯೂ ಒಂದು ಹೆಜ್ಜೆ ಮುಂದೆ ಬಂದು, ಭಿಕ್ಷೆಗಾಗಿ ಕೈ ನೀಡುತ್ತಿರುವಳೋ ಎಂದೆನ್ನಿಸಿ, ಅವರು ಹುಬ್ಬುಗಂಟಿಕ್ಕಿ ಸ್ವಲ್ಪ ಹಿಂದೆಗೆಯುವಂತೆ ಮಾಡುವಷ್ಟು ಸಹಜವಾಗಿತ್ತು. ಆ ತಿಗ [illegible]ಸಿಚಿತ್ರ. ಆತ್ಯಂತ ಕರುಣಾಜನಕವಾದ ಆ ಚಿತ್ರದ ಕಲಾಪ್ರೌಢಿಮೆ ರಸಿಕರಾದವರಿಗೆಲ್ಲ ಮಹದಾನಂದವನ್ನುಂಟುಮಾಡುವಂತಹದು; ಬಡತನವೇ ಮೈವೆತ್ತಂತಿದ್ದ ಅದರ ಸತ್ಯತೆ ಕಲಾಪ್ರೇಮದ ಕಣ್ಣಿಗೊಂದು ದೊಡ್ಡ ಹಬ್ಬ.

ಚಿತ್ರಕಾರನ ಕುಂಚದಲ್ಲಿ ಅದೇನು ಮೋಡಿಯಿತ್ತು! ಚಿತ್ರದಲ್ಲಿ ಆ ಬೀದಿಯ ದೀಪದ ಬೆಳಕಿನಿಂದಲೇ ಅವಳ ಕುರುಚಲು ಬಿಳಿಗೂದಲಿನ ವರ್ಷಾಂತರಗಳ ಮಾಸಲನ್ನು ಎಷ್ಟು ಜೆನ್ನಾಗಿ ಕಾಣಿಸಿದ್ದ! ಹುಳುಗಳು ಹರಿದಂತೆ ಮೇಲಿದ್ದ ರಕ್ತನಾಳಗಳಿಂದ ಕೂಡಿ ಮುಂದುಬ್ಬಿದ ಹಣೆಯ ಮೇಲಿನ ಅಡ್ಡಗೆರೆಗಳಲ್ಲಿ, ಕಂಡೂ ಕಾಣದಂತಿದ್ದ ಹುಬ್ಬುಗಳ ಮಧ್ಯದ ಉದ್ದಗೆರೆಗಳ ಒಂದು ಜೀವಮಾನದ ಚಿಂತೆಯನ್ನೇ ತುಂಬಿದ್ದ. ಕೂದಲಿಲ್ಲದ ರೆಪ್ಪೆಗಳ ನಡುವೆ ಅಳದಲ್ಲಿ, ಕತ್ತಲಕೋಣೆಯ ಹಣತೆಯಂತೆ ಮಂಕಾಗಿ ಮಿಣುಕುತ್ತಿದ್ದ ಸಣ್ಣ ಕಣ್ಣುಗಳಲ್ಲಿ ನಿರಾಶೆಯನ್ನೇ

ನಿರ್ಮಿಸಿ, ದೈನ್ಯತೆಯ ತೆಳುತೆರೆಯನ್ನು ಮುಂದೆ ಇಳಿಬಿಟ್ಟಿದ್ದ—ಅಂತಹ ಕಲಾ ಚಾತುರ್ಯ. ಸವೆದು ಜಿಪ್ಸಾದ ಆ ಪುಟ್ಟ ಮೂಗಿನಲ್ಲಿ, ಎದ್ದ ಮೂಳೆಯಿಂದ ಇಳಿಬಿದ್ದು ನಿಂಬೆಯ ಚಟ್ಟಿನಂತೆ ಸುಕ್ಕುಬಿದ್ದು ಜಿಬ್ಬು ಪತ್ತಿದ್ದ ಕೆನ್ನೆಯ ಚರ್ಮದಲ್ಲಿ ಕ್ಷಯದ ಛಾಯೆಯನ್ನು ಆಶ್ಚರ್ಯಕರವಾಗಿ ಕಾಣಿಸಿದ್ದ ಅರೆತೆಗೆದ ಬೊಚ್ಚುಬಾಯಿಯಿಂದ ಆರ್ತನಾದವೇ ಹೊರಬರುತ್ತಿದೆಯೆಂಬ ಭ್ರಾಂತಿಯನ್ನುಂಟುಮಾಡಿದ್ದ. ಮುದುರಿದ ಕಿವಿಗಳಲ್ಲಿ ಜೋಕುಬಿದ್ದಿದ್ದ ದೊಡ್ಡ ಸೊನ್ನೆಯ ತೂತು, ಅವಳ ಜೀವನಕ್ಕೆ ಸೂತ್ರಪ್ರಾಯ. ಗಂಟಿದ್ದ ಗಳುವಿನ ತುಂಡಿನಂತಹ ಕೊರಳು ಆ ತಲೆಯನ್ನು ಹೇಗೆ ಹೊತ್ತಿರೆಯೋ--ಎನ್ನಬೇಕು. ಸೂರಿನ ಮೇಲಿಸಿದ ಸಾರಿಸುವ ಬಟ್ಟೆ ಜೋತು ಬಿದ್ದಂತೆ, ಆ ಅಸ್ಥಿಪಂಜರದೆದೆಯ ಮೇಲೆ ನೇತಾಡುತ್ತ ಗಾಳಿ, ತೆಗೆದ ಬಲೂನುಗಳಾಗಿದ್ದ ಮೊಲೆಗಳಲ್ಲಿ, ಹೀರಿ ಹಿಂಡಿಹೋದ ಹೆಣ್ಣುತನ-ತಾಯ್ತನಗಳನ್ನು ಅನೋಳವಾಗಿ ಸ್ಪಷ್ಟಪಡಿಸಿದ್ದನಲ್ಲದೆ, ವಸ್ತ್ರಹೀನವಾದ ಆ ಮುದಿಯೆದೆಗೆ ನಿರ್ಲಕ್ಷ್ಯ–ನಿರ್ಲಜ್ಜೆಗಳನ್ನೇ ನೆಯ್ದು ಹೊದಿಸಿದ್ದ — ಅದು ಹೇಗೋ, ಏನು ಕಲಾಮಾಯೆಯೋ, ವಿಚಿತ್ರ! ಈ ತಿರುಕೆಯ ಹೊಟ್ಟೆಯ ಜಾಗದ ಮೇಲಿನ ಸುಕ್ಕು-ಸುರುಳಿಗಳ ಚಿತ್ರಣ, ಅವಳ ನಿರಂತರವಾದ ಹೊಟ್ಟೆಯ ಹೋರಾಟದ ಸೋಲನ್ನು ವಿವರಿಸುವಲ್ಲಿ ಅತ್ಯಂತ ಯಶಸ್ವಿಯಾಗಿದ್ದಿತು. ಕೊಳೆ ಮೆತ್ತಿಕೊಂಡಿದ್ದ ಹೊಕ್ಕುಳು ಕೂಡ ಇವಳು ತನ್ನ ತಾಯಿಯ ಬಸಿರಿನಿಂದ ಬೇರೆಯಾದ ಗಳಿಗೆ ಒತ್ತಿದ್ದ ಶಂಖಮುದ್ರೆಯಾಗಿತ್ತು. ಅದೆಷ್ಟು ಸೂಕ್ಷ್ಮವಾಗಿ ಗೆರೆಗೆರೆಗಳನ್ನೂ ಬಿಡಿಸಿದ್ದ, ಆಡಿಸಿದ್ದ! ಸೊಂಟದಿಂದ ಅರ್ಧ ತೊಡೆಯವರೆಗೆ ಆ ದೇಹವನ್ನು ಮುಚ್ಚಲು ಯತ್ನಿಸಿದ್ದ ಆ ಚಿಂದಿಯರಿವೆ, ಅವಳ ಬೆತ್ತಲೆಯನ್ನು ಪೂರ್ತಿಮಾಡಿತ್ತೆನ್ನುವಂತೆ ಕೌಶಲ್ಯವನ್ನು ಪ್ರದರ್ಶಿಸಿದ್ದ. ಒಣಗಿದ ಬಾಳೆಯ ಪಟ್ಟೆ ಸುತ್ತಿದಂತಿದ್ದ ಬತ್ತಿದ ತೊಡೆ, ನುಣ್ಣಗೆ ತೆಯ್ದ ಚಿಪ್ಪಿನ ಚೂರಿನಂತಿದ್ದ ಮಂಡಿ, ಬಿದಿರು–ಮೊಣಕಾಲು, ಸುತ್ತಿ ಸುತ್ತಿ ಥಳುಮುಚ್ಚಿದ ಮೂಳೆಗಾಲು, ಒಡೆದ ಉಗುರು—ಪ್ರತಿಯೊಂದೂ ಕಲಾವಿದನ ತೀಕ್ಷ್ಣ ದೃಷ್ಟಿಗೆ, ಬೆಳಗಿನ ಜಮತ್ಕಾರಕ್ಕೆ ಮತ್ತೆ ಮತ್ತೆ ಸಾಕ್ಷಿ ಈ ಕಾಲುಗಳೊಡನೆ ಪೈಪೋಟಿ ನಡೆಸುವ ಕೈಗಳು—ಒಂದು ಪೇನಿನ ತಲೆಗೂದಲಿನಲ್ಲಿ, ಇನ್ನೊಂದು ತಿರುಪೆಗಾಗಿ ಮುರುಕು ಡಬ್ಬಿಯೊಂದನ್ನು ಮುಂದೆ ಚಾಚಿ ಹಿಡಿದು. ಕೈಯೊಂದೇ ಏಕೆ, ಆ ಕಣ್ಣಿನ ದೃಷ್ಟಿ, ಮುಖದ ಭಾವ—ತಿರುಕೆಯ ಒಂದೊಂದು ಭಾಗವೂ ಭಿಕ್ಷೆ ಬೇಡುತ್ತಿತ್ತು. ಆಹಾರದ ಭಿಕ್ಷೆ, ಕನಿಕರದ ಭಿಕ್ಷೆ, ಮಾನವತೆಯ ಭಿಕ್ಷೆ.

ಈ ಚಿತ್ರಕ್ಕೆ ತಕ್ಕ ಹಿನ್ನೆಲೆ: ದೊಡ್ಡ ಸೌಧವೊಂದರ ಪೆಟ್ಟಾಗಿಲಿನ ಮುಂದೆ, ಕಾಲ್ವಾರಿಯಲ್ಲಿ, ಬುರುಡೆ ದೀಪದ ಬಳಿ. ಲಕ್ಷಕ್ಕೆ, ಪತ್ತು ಲಕ್ಷಕ್ಕೆ, ಎಲ್ಲೋ ಒಂದು ಎನ್ನಬಹುದಾದ ಇಂಥ ಚಿತ್ರಕ್ಕೆ ನೊವಲನೆಯ ಬಹುಮಾನ ಬಂದದ್ದೇನು ಆಶ್ಚರ್ಯವಾಗಿರಲಿಲ್ಲ. ಅದು ಪ್ರದರ್ಶನಕ್ಕೆ ಬಂದವರೆಲ್ಲರ ಮನಸ್ಸನ್ನೂ ಸೆಳೆದು ಸೂರೆಗೊಂಡಿದ್ದುದೂ ಸರಿಯೇ ಸರಿ. ಕಲಾವಿದನ ಹೆಮ್ಮೆ-ಸಂತೋಷಗಳೂ ನ್ಯಾಯವೇ.

ಆ ದಿನ ಪ್ರಾರಂಭೋತ್ಸವದ ಹೊತ್ತಿಗಿಂತ ಎರಡು ಗಂಟೆ ಮುಂಚೆಯೇ, ಮ್ಯೂಝಿಯಂ ಭವನಕ್ಕೆ ಒಂದಿದ್ದ ನರೋತ್ತಮ, ಪ್ರದರ್ಶನ ಮುಚ್ಚುವ ವರೆಗೂ ಅಲ್ಲಿಯೇ ಇದ್ದ. ತಿರುಕೆಯ ಚಿತ್ರದ ಮುಂದೆ ಜನರಿಲ್ಲದಂತಾಗಿ, ಬಿಲ್ಲಲ್ಲೇ ಇದ್ದ ಕೆಲವು ಜನರೂ ಹೊರಗೆ ಹೋದಾಗ, ಅವನೂ ಒಂದು ಸಿಗರೇಟನ್ನು ಹತ್ತಿಸಿ ಸೇದುತ್ತ ಹೊರಟ. ಆಗ ಬೌರಿಂಗ್ ರಸ್ತೆಯಲ್ಲಿ ಜನರು ಬಹಳವಾಗಿ ಓಡಾಡುತ್ತಿರಲಿಲ್ಲ. ಮೊದಲನೆಯ ಪ್ರದರ್ಶನದ ಸಿನಿಮಾಜನರೂ ಹೋಗಿದ್ದರು. ಆಂಗ್ಲೋ ಇಂಡಿಯನ್ ಹುಡುಗಿಯರು ತಮ್ಮ ಪ್ರಣಯಿಗಳೊಂದಿಗೆ ಪಕ್ಕದ ದಾರಿಗಳಲ್ಲಿ, ಮುಂದೆ ಎಸ್‌ಪ್ಲನೇಡ್‌ನಲ್ಲಿ ಅಲ್ಲಲ್ಲಿ ಸುಳಿದಾಡುತ್ತ ಮುಖ್ಯವಾಗಿದ್ದರು. ಸಂಜೆ ಎಲ್ಲೆಲ್ಲೂ ಸಾಲುಸಾಲಾಗಿ ನಿಂತಿದ್ದ ಕಾರುಗಳು, ಈಗ ಮೆಟ್ರೋ ಸಿನಿಮಾ, ಗ್ರಾಂಡ್ ಹೋಟೆಲುಗಳ ಮುಂದೆ ನಾಲ್ಕಾರು ಟ್ಯಾಕ್ಸಿಗಳಿಗೆ ಎಡೆಗೊಟ್ಟಿದ್ದುವು. ಹವೆ ತಂಪಾಗಿತ್ತು. ನರೋತ್ತಮ ಮ್ಯೂಝಿಯಂ ಕಟ್ಟಡದ ಮೆಟ್ಟಿಲುಗಳನ್ನಿಳಿದು ಕಾಲ್ವಾರಿಯ ಬುರುಡೆದೀಪದ ಬಳಿಗೆ ಬರುತ್ತ, ಟ್ಯಾಕ್ಸಿಯೊಂದಕ್ಕಾಗಿ ದೃಷ್ಟಿಯನ್ನು ಅತ್ತಿತ್ತ ಹೊರಳಿಸುತ್ತಿದ್ದ. ಈ ಸಿರಿಯ ದಿನದಲ್ಲಿ ಅವನ ಗಮನ ಟ್ರಾಂ, ಬಸ್ಸುಗಳ ಮೇಲೆ ಹೋಗಲಿಲ್ಲ. ಸ್ವಲ್ಪ ದೂರದಲ್ಲಿ ಬರುತ್ತಿದ್ದ ಖಾಲಿ ಟ್ಯಾಕ್ಸಿಯೊಂದಕ್ಕೆ ಕೈಸನ್ನೆ ಮಾಡಿದ. ತಿರಿಗಿಕೊಂಡು ಅವನೆಡೆಗೆ ಬರುತ್ತಿದ್ದ ಟ್ಯಾಕ್ಸಿಯನ್ನೇ ನೋಡುತ್ತಿದ್ದ.

" ಬಾಬೂಜೀ! "

ಪಕ್ಕದಲ್ಲೇ ಕೇಳಿತು, ಆರ್ತಸ್ವರ. ನರೋತ್ತಮ ಅತ್ತ ತಿರುಗಿದ. " ನೀವೇ ಬಾಬೂಜಿ!..... ಸಂಜೆಯಿಂದ ಇಲ್ಲೇ ಬೇಡ್ತಾ ನಿಂತಿದೀನಿ. ಇಷ್ಟೊಂದು ಜನ ಬಂದು ಹೋಗ್ತಿದಾರೆ. ನನ್ನ ಕಡೆ ನೋಡೋರು ಯಾರೂ ಇಲ್ಲ. ನೀವಾದರೂ ಏನಾದರೂ ಧರ್ಮಮಾಡಿ..... ಇನ್ನೊಂಬು ಸಾರಿ ಚಿತ್ರ ಬರಕೊಂಡು, ಇನ್ನೂ ಒಂದು ರೂಪಾಯಿ ಕೊಡಿ ಬಾಬೂಜೀ! " ಅಂಗಲಾಚಿದಳು.

" ಇನ್ನೊಂದು ಸಾರಿಯೇ! ಏನಿದೆ, ಮತ್ತೆ ಬರೆದುಕೊಳ್ಳೋದಕ್ಕೆ ? " ನರೋತ್ತಮ ನಸುನಗುತ್ತ ಕೇಳ, " ತಗೋ, " ಎಂದು ಕುರ್ತಬ ಜೇಬಿನಿಂದ ಹಿಡಿ ದುಡ್ಡನ್ನು ತೆಗೆದು, ನಾಲ್ಕಾಣೆಯ ನಾಣ್ಯವನ್ನಾರಿಸಿ ಅವಳ ಚಾಚಿದ ಮೂಳೆಕೈಯಿನ ಮುರುಕುಡಬ್ಬಕ್ಕೆ ಹಾಕಿ, ಆಗ ತಾನೆ ಮುಂದೆ ನಿಂತ ಟ್ಯಾಕ್ಸಿಯನ್ನು ಹತ್ತಿ, ' ಬಾಲಿಗಂಜ್ ' ಎಂದ.

" ನಿಮ್ಮ ಹೊಟ್ಟೆ ತಣ್ಣಗಿರಲಿ ಬಾಬೂಜೀ! " ಅವಳ ಹರಕೆಯ ಮಾತು, ಟ್ಯಾಕ್ಸಿ ಹೊರಡುವ ಶಬ್ದದಲ್ಲಿ ಮುಳುಗಿಹೋಯಿತು.

ವಿಚಾರಕ್ಕೆ ಬಹಿಷ್ಕಾರ!

(ಒಂದು ವಿಮರ್ಶೆ)

ಪ್ರೊ. ಬಿ. ಎಚ್. ಶ್ರೀಧರ ಎಂ. ಎ.
ಕ್ಯಾನರಾ ಕಾಲೇಜ್ ಕುಮಟಾ

●

ಹಿಂದಿನ ಕಾಲದಲ್ಲಿ ಅಂಧಶ್ರದ್ಧೆಯು ಮಾನವಸಮಾಜದಲ್ಲಿ ಹಾವಳಿಯನ್ನು ನಡೆಸಿದ್ದರೆ, ಇಂದಿನ ಕಾಲದಲ್ಲಿ ವಿಚಾರಾಂಧತೆಯು ಮಾನವಜೀವನನನ್ನು ಕ್ಷಣ ಕ್ಷಣಕ್ಕೂ ಬಾಧಿಸುತ್ತಲಿದೆ. ಕುಶ್ರದ್ಧೆಯಿಂದ ಹಾಳಾಗುವುದೂ ಒಂದೇ, ಕುವಿಚಾರದಾಸ್ಯದಿಂದ ಹಾಳಾಗುವುದೂ ಒಂದೇ! ಅಹಂಕಾರಿಗಳಿರುವಲ್ಲಿ ಯಾವುದೂ ಶುದ್ಧಸ್ವರೂಪದಲ್ಲಿ ಉಳಿಯದು.

●

ನಿತ್ಯವೂ ನಾವಿಂದು ಬುದ್ಧಿವಂತರ ಬಾಯಿಂದ, ವಿಚಾರ ಮಾಡುವುದಕ್ಕೆ ಅನುಕೂಲವಾದ ಪ್ರಚಾರವನ್ನು ಕೇಳುತ್ತಿದ್ದೇವೆ. ನಿಜ—ಅದರ ಅನುಕೂಲಾರ್ಥವನ್ನು ತಿಳಿದುಕೊಂಡವ ಸುವಿಚಾರಿ, ಆ ವಿಚಾರದಂತೆ ಅವನ ಕೆಲಸವಾಗದಾಗಲೂ ಜೀವನಿಗೆ ನಿರಾಶೆಯ ಹಿಂಸೆ ಬಹಳವಾಗುವುದು-ಅದರೂ ತಡೆದುಕೊಂಬ ಶಕ್ತಿಯುಂಟಾಗುವುದು. ಇದು ಪ್ರಸಿದ್ಧ ವಿಚಾರಪ್ರಣಾಲಿ. ಆದರೆ ಈ ಪದ್ಧತಿಯನ್ನು ಅದರ್ಶರೀತಿಯಿಂದ ಅನುಸರಿಸಿದರೆ ಶಾಂತಿ ಲಭ್ಯವೆಂಬಂತೆ ವಿಚಾರವನ್ನು ಮನದಿಂದ ಓಡಿಸುವುದು ಸ್ಥಿರಶಾಂತಿದಾಯಕ ಎಂಬುದು ಪ್ರಸಿದ್ಧ ತತ್ತ್ವಜ್ಞಾನಿ ಜೆ. ಕೃಷ್ಣಮೂರ್ತಿಯವರ ವಿಚಾರ.

ವಿಚಾರವು ಅನೈಕಾಂತಿಕ, ಅನಂತ, ಅವಿರತ ಎಂಬ ಅರಿವಿನಿಂದ ವಿಚಾರಬಹಿಷ್ಕಾರವನ್ನು ಹೇಳಲಾಗಿದೆ. ಆದರೆ ಶಾಂತಿಲಾಭಕ್ಕೆ ಯಾವ ಪ್ರಮುಖ ಸ್ಥಾಯಿಯಿದ್ದರೂ ಅದಕ್ಕೆ ಅಂತವಾಗಬೇಕು. 'ಅಂತವೇ ಶಾಂತಿ, ಅನಂತವೇ ಭ್ರಾಂತಿ; ಏಕವೇ ಸುಖ ಅನೇಕವೇ ದುಃಖ' ಎಂಬ ಪ್ರತಿವಾದವೂ ವಿಚಾರಾರ್ಹ. ವ್ಯಾವಹಾರಿಕವಾಗಿ ವಿಚಾರಿಸಿದರೆ, ವಿಚಾರದಲ್ಲಿ ಸುವಿಚಾರ ದುರ್ವಿಚಾರಗಳೆಂಬುದು ನಮಗೆ ಚಿರಪರಿಚಿತ. ಮೆಚ್ಚಿದವನಿಗೆ ಮರಣ ಸುಖವೆಂಬುದೂ ಜಗತ್ತಿನ ಎಲ್ಲವೂ ಸಾಪೇಕ್ಷ, ಅಪೂರ್ಣ ಎಂಬುದೂ ವಿಚಾರವೆಂಬುದು ಊಹನೆಯರೂಪದ್ದೆಂಬುದೂ ಎಲ್ಲ ಜ್ಞಾನವೂ ಅಂತ್ಯದಲ್ಲಿ ವೈಯಕ್ತಿಕ ಮಾನಸದಿಂದ ಪರಿಮಿತ—ಅದರ ದರ್ಶನದಿಂದ ಪರಿಚ್ಛಿನ್ನ ಎಂಬುದೂ ಸತ್ಯವಾದರೆ, ಸತ್ಯವೆನಿಸಿದರೆ, ಅನುಭವಕ್ಕೆ ಬಂದರೆ 'ತರ್ಕೋಽಪ್ರತಿಷ್ಠಃ' ಎಂಬ ಉದ್ಗಾರಕ್ಕೆ ಮನ್ನಣೆಯಿತ್ತು ಯಾವನಾದರೂ ಆತ್ಯಂತಿಕ ಸತ್ಯ, ಶಾಂತಿ, ಸುಖಗಳ ಶೋಧನೆಗೆ ಹೊರಟಾಗ, ವಿಚಾರತ್ಯಾಗ ಮಾಡಿ ಮೌನ ಧಾರಣೆ ಮಾಡಬೇಕಾಗುತ್ತದೆ. ಅದೂ ಕೇವಲ ಬಾಯಿಮುಚ್ಚಿಕೊಂಬ ಮೌನವನ್ನಲ್ಲ ಹಿಡಿಯುವುದು; ಮನಸ್ಸನ್ನು ವಿವಿಧವಾಗಿ ಚರಿಸದಂತೆ ನಿಷ್ಪಂದಗೊಳಿಸುವುದನ್ನು ಅನುಸರಿಸುವುದು. ಮನಸ್ಸು ಹೀಗೆ ಅಚಲ, ಸ್ಥಿರ, ಸ್ತಬ್ಧ ಆದಾಗಲೇ ಶಾಂತವಾಗುತ್ತದೆ. ಅಂಥ ಸ್ತಿಮಿತ ಮನಸ್ಸಿಂದೇ ನಿರ್ಮಲ, ನಿಷ್ಪಕ್ಷಪಾತ, ನಿರ್ಗ್ರಹ ಮತ್ತು ನಿರ್ವಿಕಾರ; ಅಂಥ ಮನಸ್ಸಿಗೆ ಮಾತ್ರ ಪರಮಾರ್ಥ ಅಥವಾ ಕೊನೆಯ ಸತ್ಯ ಗೋಚರವಾಗಬಲ್ಲುದು—ಎಂದು ಹೇಳಿದರೆ, ಯಾರಾದರೂ ಒಪ್ಪಬೇಕಲ್ಲವೆ? ವಿಶ್ವಪ್ರೇಮ, ಸತ್ಯಪ್ರೇಮ ಅಚಲಪ್ರೇಮ ಮುಂತಾದುವು ಅಂಥ ಮನಸ್ಸಿಗಲ್ಲದೆ ಇನ್ನಾವ ಮನಸ್ಸಿಗೆ ಜೀರ್ಣವಾದಾವು? ಅಂಥದಲ್ಲದ ಮನಸ್ಸಿನ ವಿಚಾರಗಳೆಲ್ಲ :—

"ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ" ಎಂಬ ಬಗೆಯ ಮಿಂಚಿ ಮಾಯವಾಗುವ ಕ್ಷಣಿಕ ಕಲ್ಪನೆಗಳಲ್ಲದೆ ಮತ್ತೇನು? ಆಗ ವಾಸ್ತವವಾದಿ ಯಾರೇ ಆದರೂ "ಸರ್ವಂ ಕ್ಷಣಿಕಂ, ಕ್ಷಣಿಕಂ, ಸರ್ವಂ ದುಃಖಂ, ದುಃಖಂ, ಸರ್ವಂ ಸ್ವಲಕ್ಷಣಂ, ಸ್ವಲಕ್ಷಣಂ" ಎಂದು ಸಿದ್ಧಾಂತಿಸದೆ ಉಳಿಯಲಾದೀತೇ? ಚಂಚಲಮನದ ಸದಸದ್‌ವಿಚಾರ ಹಾಗೂ ಭಾವನೆಗಳೆಲ್ಲವೂ ಚಂಚಲ, ಅನವಲಂಬನೀಯ, ಅನಾದೇಯ ಎನಿಸದಿರುವುವೇ? ಸರ್ವಕ್ರಿಯೆಯೂ ಚಂಚಲ, ಕಾಲಿಕ ದೇಶಿಕ ಪರಿಮಿತಿಗಳಿಂದ ಬದ್ಧ. ಆದುದರಿಂದ ಮಾನಸ ನಿಷ್ಕ್ರಿಯದಿಂದಲೇ ಸ್ಥಿರಶಾಂತಿ, ಸತ್ಯ, ಪ್ರೇಮಗಳು ಸಾಧ್ಯವೆಂದೆನಿಸುವುದು ಸಹಜ. ಆದುದರಿಂದ ಶಾಂತಿಯ ಭಾವನೆಯ ಚಾಂದ್ರಿಕೆ ಮಾನಸಚಕಾಶದಲ್ಲಿ ಉದಯಿಸಿ ಆತ್ಮತೃಪ್ತಿ ಹೊಂದಬೇಕಾದರೆ, ವಿಚಾರದ ಮೋಡಗಳನ್ನು ಓಡಿಸಬೇಕೆಂದು ಹೇಳಲಾಗಿದೆ.

ನನ್ನ ಜೀವನವು ಇಡಿಯಾಗಿ ಸದಾ ಕ್ರಿಯಾತ್ಮಕವಾದರೆ ಅಂಥ ಕ್ರಿಯೆಗೆ ಭಾವನೆಯೇ ಕಾರಣ. ಭಾವನೆಗೆ ಬುದ್ಧಿ ಪ್ರೇರಕ. ಆ ಪ್ರೇರಕವನ್ನು ಸ್ಥಗಿತಗೊಳಿಸಿದರೆ ಭಾವನಾಸಮತ್ವ ಸಿದ್ಧಿಸುತ್ತದೆ. ಭಾವನಾಸಮತ್ವನೇ ಶಾಂತಿ, ಭಾವನೆಯ ಕ್ಷೋಭೆಯೇ ಅಶಾಂತಿ. ವಾಸ್ತವಿಕ ಅನುಭವವೆಂದರೇ ಭಾವನೆ; ಬುದ್ಧಿಯ ಕಾರ್ಯಗಳೆಲ್ಲ ನಿಜಾರಾತ್ಮಕ, ಅನೇಕ, ಚಂಚಲ, ಊಹಾತ್ಮಕ, ಕಾಲ್ಪನಿಕ, ಅನನುಭವಾತ್ಮಕ. ಸುಖ-ದುಃಖ, ಶಾಂತಿ-ಅಶಾಂತಿ, ಆನಂದ-ಅಸಂತೋಷ ಎಂಬಿವು ಭಾವನಾರೂಪದುವಲ್ಲದೆ, ಬುದ್ಧಿ—ವಿಚಾರಗಳ ರೂಪದುವಲ್ಲ. ಭಾವನೆಯ ಏಕೀಕರಣವೇ ಸಮತ್ವ; ಬುದ್ಧಿ ಅದನ್ನು ಅನೇಕೀಕರಿಸಿ ಕ್ಷುಬ್ಧಗೊಳಿಸುವಂಥದು. ಬುದ್ಧಿಯು ಏಕೀಕೃತವಾಗುವುದೆಂದರೆ ತಟಸ್ಥವಾಗುವುದೆಂದರ್ಥ; ಅದು ಭಾವನೆಯ ಏಕೀಕರಣವನ್ನು ಬೆಂಬಲಿಸುವುದೆಂದರೆ ಸಂನ್ಯಾಸ ತೆಗೆದುಕೊಂಬುದೆಂದರ್ಥ. The liberating process must begin with the choiceless awareness of what you will and of your reactions to the symbol system which tells you or ought not, to milk it—ನೀವು ಬಯಸುವ ಮತ್ತು ನೀವು ಬಯಸಬೇಕು ಅಥವಾ ಬಾರದು ಎಂದು

ಕ್ಷಣದ ಸಂಕೇತಜಾಲರೂಪದ ವಿಚಾರಕ್ಕೆ ನಿಮ್ಮಲ್ಲಾಗುವ ಪ್ರತಿಕ್ರಿಯೆಯ ರಾಗದ್ವೇಷರಹಿತ ಪ್ರಜ್ಞೆಯಿಂದಲೇ ಮುಕ್ತಿ ಸಾಧನೆಯನ್ನು ಆರಂಭಿಸಬೇಕು." ಎಂಬ ಜೆ. ಕೆ. ಅವರ ವಾಕ್ಯ ಮೇಲಿನ ಮಾತಿಗೆ ಉಪಸ್ಪಂಭಕವಾಗಿದೆ. ಎಲ್ಲ ವಿಚಾರವೂ ಒಂದು ಅಭ್ಯಸ್ತವಾದ ಸಾಂಪ್ರದಾಯಿಕ ಅರ್ಥವಾಹಕ (ಪ್ರತೀಕ, ಚಿಹ್ನ ಅಥವಾ) ಸಂಕೇತಗಳ ವ್ಯವಸ್ಥಿತ ಸಮೂಹ. ವಿಚಾರಶೋಧೆಯೆಲ್ಲವೂ ಸಂಕೇತಜನ್ಯಜ್ಞಾನ. ಅದು. ಅನುಭವೇತರ ಭಾವನಾತ್ಮಕ ಹಾಗೂ ಬೌದ್ಧಿಕ ಬೇಕು-ಬೇಡಗಳಿಂದ ಮುಕ್ತವಾಗಿ ಉಳಿಯಬಲ್ಲ ಮನಸ್ಸಿಂದೇ ನೋಕ್ಷಾರ್ಹ, ಶಾಂತ್ಯರ್ಹ, ಸತ್ಯಜ್ಞಾನಾರ್ಹ. ಹಳೆಯ ಮಾತಿನಲ್ಲಿ ಈ ತರಬೇತಿಗೆ ನಿತ್ಯಾನಿತ್ಯವಸ್ತುವಿವೇಕ, ಇಹಾಮುತ್ರಭೋಗವಿರಾಗ, ಶಮದಮಾದಿ ಸಾಧನಸಂಪತ್ತಿ ಮತ್ತು ಮುಮುಕ್ಷುತ್ವ ಎಂಬ ಮಾನಸಸಂಸ್ಕಾರ ಎನ್ನಲಾಗುತ್ತದೆ. ಮುಕ್ತಿಯೆಂದರೆ Inner freedom of creative Reality—ರಚನಾತ್ಮಕ ಸತ್ಯ ಸ್ವರೂಪದ ಆಂತರಿಕ ಅನಿರ್ಬಂಧ ಎನ್ನುತ್ತಾರೆ. ಶ್ರೀ. ಜೆ. ಕೆ. ಈ ಅನಿರ್ಬಂಧವೆಂಬುದೇ ಅತ್ಯಂತಿಕ ಅಭಯ ಅಥವಾ ಶಾಂತಿ ಇಲ್ಲವೆ ಸಚ್ಚಿದಾನಂದ.

ಇಂದಿನ ಹೊಸ ಪ್ರಗತಿಯ ನಮ್ಮ ಚಿಕ್ಕ ಇತಿಹಾಸದ ಪುಟಗಳನ್ನು ತೆರೆದರೆ, ಅವಿಚಾರ-ಕುವಿಚಾರಗಳಿಂದಾದ ಹಾನಿಗಳನ್ನು ಕಿಸಿದರೆ, ವಿಚಾರವೆಂಬುದು ಅಧಿಕಾರ-ಪ್ರಭಾವಗಳ ದಾಸರ ಸುತ್ತಿಗೆಯಾಗಿರುವುದನ್ನು ಅವಲೋಕಿಸಿದರೆ, ಅನಧಿಕಾರಿಗಳಿಗೆ ಧಿಕಾರ-ಪ್ರಭಾವಗಳನ್ನು ನಡೆಸುವ ಅವಕಾಶವನ್ನು ಕೊಟ್ಟ, ನಮ್ಮ ಜನತಾಜನಾರ್ದನನ ಮುಗ್ಧತೆಯನ್ನು ಪರಾಮರ್ಶಿಸಿದರೆ, ವಿಚಾರವಂತರೆಂದು ಅಹಮಹಮಿಕೆಯುವ ಅತಿರಥ-ಮಹಾರಥಿಗಳನ್ನು ನೋಡಿದರೆ, ಒಮ್ಮೆ ಆತ್ಮಸಾಕ್ಷಿಗೆ ಸರಿಯಾಗಿ ಬಾಳುವವನು ಜೆ. ಕೆ. ನವರಂತೆ ವಿಚಾರ ಬಹಿಷ್ಕಾರವನ್ನು ಆಚರಣೆಗೆ ತರಲು ಸಿದ್ಧನಾಗುವುದು ಅಸ್ವಾಭಾವಿಕವಾಗಿ ಕಾಣಲಾರದು. All knowledge is interpretational—ಎಲ್ಲ ಜ್ಞಾನವೂ ವ್ಯಾಖ್ಯಾನಾವಲಂಬಿಯಾಗಿರುವುದೂ As long as there are Lawyers no law is perfect—ವಕೀಲರಿರುವ ವರೆಗೆ ಯಾವ ಕಾಯದೆಯೂ ಪರಿಪೂರ್ಣವಲ್ಲ ಎಂಬುದೂ ಉಗ್ರವಾಗಿ ನಮ್ಮ ಅನುಭವಕ್ಕೆ ಬರುತ್ತಿರುವಾಗ, ಅದೃಷ್ಟದೇವಿ ಚೆನ್ನಾಗಿರುವವ ಕಟ್ಟಿದ ಗುಂಪೇ ಸರ್ವಾಧಿಕಾರಿಯಾಗುತ್ತಿರುವಾಗ, ವಿಚಾರದ ದೇವತ್ವವನ್ನು ಒಪ್ಪುವುದು ಕಷ್ಟವಾಗುತ್ತದೆ. ಆದರಿಂದಲೇ ಗಾಂಧಿಯವರು "Rationalists are admirable beeings; rationalism is a hideous monster when it claims for itself omnipotence—ವಿಚಾರವಾದಿಗಳು ಪ್ರಶಂಸಾರ್ಹರು; ಆದರೆ ವಿಚಾರವೇ ಸರ್ವಶಕ್ತನೆಂದುಕೊಂಡಾಗ ವಿಚಾರವಾದವೊಂದು ಭಯಂಕರ ರಾಕ್ಷಸರೂಪಭೂತ" ಎಂದಿದ್ದಾರೆ. ಪೂರ್ವದಲ್ಲಿ ಅಂಧಶ್ರದ್ಧೆ ತಾಂಡವನಳಿಯನ್ನು ನಡೆಸಿದ್ದರೆ ಇಂದು ವಿಚಾರಾಂಧತೆ ಜೀವನವನ್ನು ಆವರಿಸುತ್ತಿದೆ. ಕುಶ್ರದ್ಧೆಯಿಂದ ಹಾಳಾಗುವುದೂ ಒಂದೇ, ಕುವಿಚಾರದಾಸ್ಯದಿಂದ ಹಾಳಾಗುವುದೂ ಒಂದೇ. ಅಹಂಕಾರಿಗಳಲ್ಲಿ ಯಾವುದೂ ಸ್ವಸ್ವರೂಪದಲ್ಲಿ ಶುದ್ಧವಾಗಿ ಉಳಿಯದು; ಆದರ ಬಣ್ಣ ಎಲ್ಲ ತತ್ತ್ವಕ್ಕೂ ಅಂಟಿ ಅದನ್ನು ಮನುಷ್ಯರ ಆಚಾರದಲ್ಲಿ ಕಲುಷಿತಗೊಳಿಸದಿರದು. ಶ್ರೀರಮಣರ ಪ್ರಕಾರ ಈ ಅಹಂಕಾರವೇ ಮಾಯೆ, ನುಸಿ. ಇದೇ ಎಲ್ಲ ಹಾನಿಗೂ ಹೇತು. ಆದುದರಿಂದ ಮನದಿಂದ ಎಲ್ಲ ವಿಚಾರಗಳನ್ನೂ ಹೊರಹಾಕಬೇಕಾಯಿತು. ಹಾಗಲ್ಲದೆ ಅದು ಹಲ್ಲು ಮುರಿದ ಹಾವಾಗದು. ಆ ಹಲ್ಲು ಮುರಿಯುವ ಕಾರ್ಯವಾದರೋ —

"ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್‌ದೃಢಂ
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ"

ಎಂದು ಅರ್ಜುನ ಹೇಳಿದಂತೆ ಅತ್ಯಂತ ಕಠಿನ. ಆದರೆ ವಿಚಾರದ ವಿಕಟ ಫಲಗಳಿಂದ ಬೇಸತ್ತ ಜೀವಕ್ಕದು ಕಠಿನವಾಗದು. ಅಭ್ಯಾಸದಿಂದಲೂ ವೈರಾಗ್ಯದಿಂದಲೂ ವಿಚಾರ ಬಹಿಷ್ಕಾರ ಸಾಧ್ಯವಾದೀತು

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮೂಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಗಿ**

ಸುಖದ ಅನಂತರ ದುಃಖ ಬರುವಂತೆ ಸುವಿಚಾರದ ಅನಂತರ ದುರ್ವಿಚಾರ ಬರುವ ಅವಕಾಶ ಪ್ರಾಪಂಚಿಕರಿಗೆ ತಪ್ಪಿದ್ದಲ್ಲ. ಕೆಲವೊಮ್ಮೆ ವಿಚಾರದ ಸುಮ್ಮುತ್ವ–ದುಸ್ಸತ್ವಗಳು ಅನಿರ್ಣೀಯಗಳಾಗಿಬಿಡುತ್ತವೆ. ಏಕೆಂದರೆ ವಿಚಾರಕ್ಕೆ ವ್ಯಕ್ತಿಹಿತ, ಸಮಾಜಾಹಿತ, ರಾಷ್ಟ್ರಹಿತ, ವರ್ಗಹಿತ, ಕುಟುಂಬಹಿತ, ಜಾತಿಹಿತ – ಮುಂತಾದ ಅನೇಕ ಸರ್ಪಗಳು ಪರಿಬಂಧನಗಳಾಗುತ್ತವೆ. ವ್ಯಕ್ತಿಯಲ್ಲೇ ಪ್ರಿಯ ಮತ್ತು ಹಿತಗಳಲ್ಲಿ ವಿರೋಧವುಂಟಾಗುವುದುಂಟು. ಈ ಹಿತ–ಪ್ರಿಯಗಳ ವೈಯಕ್ತಿಕ, ಸಾಮೂಹಿಕ, ಐಹಿಕ, ಆಮುಷ್ಮಿಕ ನಿರೋಧಗಳ ತಾಂಡವದಿಂದ ಭ್ರಾಂತಿಯೆದ್ದಿರುವುದನ್ನೆ ಮಾನವೇತಿಹಾಸ ತೋರಿಸುತ್ತದೆ. ಇತಿಹಾಸ, ಪುರಾಣ, ಕಾವ್ಯ, ಶಾಸನಗಳ ಸತ್ಯಗಳೂ ವಿಜ್ಞಾನಸಂಶೋಧಗಳೂ ನಿರ್ವಿಕಾರ, ನಿರ್ವಿಪ್ತ, ವಸ್ತುನಿಷ್ಠ ಎನಿಸುವುದು ದುರ್ಲಭ; ಏಕೆಂದರವೆಲ್ಲ ಅರ್ಥಕಾಮನಾಸಕ್ತ ಮನಸ್ಸಿನ ಕಾರ್ಯಗಳು. ವೇದವಾದಿಗಳಿಂದ ಹಿಡಿದು ವ್ಯಾಪಾರಿಗಳ ವರೆಗೆ ತಮ್ಮ ತಮ್ಮ ಹಿತಸಂರಕ್ಷಕ ತತ್ತ್ವ, ಧ್ಯೇಯ ಆದರ್ಶಗಳ ಆರಾಧನೆ ಅಂತಃಸತ್ಯವಾಗಿದೆ, ಬಹಿರಸತ್ಯವಾಗಿಯೂ ಪ್ರಕಟವಾಗಿದೆ. ಆಚಾರ, ವಿಚಾರ, ಉಚ್ಚಾರ, ಪ್ರಚಾರ, ಅಪಚಾರ, ಉಪಚಾರಗಳೆಲ್ಲವೂ ಒಂದಲ್ಲ ಒಂದು ಸ್ವಪ್ರಿಯ ವಿಚಾರದಿಂದ ಸಮರ್ಥಿಸಲ್ಪಡುವುದು, ಪ್ರತಿಯೊಂದು ವ್ಯಕ್ತಿ ಹಾಗೂ ಗುಂಪಿಗೆ ರೂಢಿಯಾಗಿದೆ. ಆದದರ ನ್ಯಾಯ ಅದದಕ್ಕೇ ಸರಿ. ವಿಚಾರವೊಂದರ ವಿಶ್ವವ್ಯಾಪಕತೆಯೊಮ್ಮೆ ನಿರಪವಾದವಾದರೂ ಆಚಾರದಲ್ಲಿ ಸದಾ ಅಪಚಾರ ಹೊಂದುವುದು ಬಹುಸಂಖ್ಯ ಅನುಭವಗಳಲ್ಲಿ ಕಾಣಬಂದಿದೆ. ಈ ದುರ್ವಿಸಾಕವನ್ನು ಕಂಡೇ "Thought is slave of life—ವಿಚಾರ ಅಥವಾ ಆಲೋಚನೆ ಎಂಬುದು ಜೀವಿತದ ದಾಸ" ಎಂದು ಹೇಳಲಾಗಿದೆ. ಇದು ಒಂದು ದೃಷ್ಟಿಯಿಂದ ವರ್ಣಹೀನವಾದ ಯಾವುದಾದರೊಂದು ಸತ್ತ ಭಾವನೆ; ನಮ್ಮ ಬೇಕು–ಬೇಡಗಳನ್ನು ಸಿರುವ ಬಾಯಿ. ಕಾಮ ಅಥವಾ ಇಚ್ಛೆ ಇಲ್ಲವೆ ರಾಗ ಎಂಬುದು ಮನೋಜಾತ, ಅಂಗಜ; ಎಲ್ಲ ವಿಚಾರವೂ ಆ ಅಂಗಜನಿಂದ ನಿಯಂತ್ರಿತ—ಜಾಗೃತ ಚೈತನ್ಯದಿಂದಲೋ ಸುಪ್ತ ಅಥವಾ ಗುಪ್ತಚೈತನ್ಯದಿಂದಲೋ ಅಥವಾ ಪಾತಾಳ ಇಲ್ಲವೆ ಅಚೈತನ್ಯದಿಂದಲೋ. ಯಾವುದಾದರೊಂದರಿಂದ — ಪ್ರತ್ಯಕ್ಷವಾಗಿ ಅಲ್ಲವಾದರೆ ಅಪ್ರತ್ಯಕ್ಷವಾಗಿ—ನೇರವಾಗಿ ಅಲ್ಲವಾದರೆ ವಕ್ರವಾಗಿ! ಆದುದರಿಂದ ಸರ್ವರೂ ಸರ್ವದೇಶ–ಕಾಲ–ಸಂದರ್ಭಗಳಲ್ಲೂ ಆಚರಣೀಯವೆಂಬಂಥ ಒಂದೇ ಒಂದು ಪರಿಶುದ್ಧ ವಿಚಾರವೂ ಆತ್ಮಸಾಕ್ಷಿಯಾಗಿ ಸಿಕ್ಕದು. ಪ್ರಪಂಚಪ್ರಜ್ಞೆಯುಳ್ಳ ಮನದ ವಿಚಾರ ವ್ಯಂಜಿಸುವ ಸತ್ಯ ಸರ್ವಥಾ ಭಿನ್ನ, ಅವ್ಯಾಪಕ, ಅಸಾರ್ವತ್ರಿಕ ಎಂದು ತಿಳಿದ ಮನ "ನಭವೋ ನ ಚಾಭೋ ನ ಕಾಮೋ ನ ಮೋಕ್ಷಃ | ಚಿದಾನಂದ ರೂಪಃ ಶಿವೋಽಹಂ ಶಿವೋಽಹಂ" ಎಂಬ (Choiceless) ಅವಧೂತ ಸ್ಥಿತಿಯನ್ನಲ್ಲದೆ ಮತ್ತೇನನ್ನು ಹಿಡಿದೀತು?

ವಿಚಾರದ ವ್ಯಭಿಚಾರ ಅನಾಚಾರವಾಗಿ ರೂಪುಗೊಳ್ಳುತ್ತಿರುವುದನ್ನು ಕಂಡೇ ಯುಗಸಹಜವಾದ ವಾಣಿಯಿಂದ ಜೆ. ಕೆ. ಅವರು ವಿಚಾರವನ್ನು ಮನದಿಂದ ಉನ್ಮೂಲನಗೊಳಿಸಲು ಉಪದೇಶಿಸಿದ್ದಾರೆ: "collective thinking may produce individual action but it will be in a field of conditional thought and therefore there is no freedom—ಸಾಮೂಹಿಕ ವಿಚಾರ ವೈಯಕ್ತಿಕ ಆಚಾರಕ್ಕೆ ಕಾರಣವಾದೀತು; ಆದರೆ ಅದು ಸೋಪಾಧಿಕ ವಿಚಾರಕ್ಷೇತ್ರದಲ್ಲಿ—ಆದ್ದರಿಂದ ಅಲ್ಲಿ ಬಿಡುಗಡೆ ಇಲ್ಲ" ಎಂದೂ ಜಾಗೃತ ಅಥವಾ ಸುಪ್ತ–ಯಾವ ಅವಸ್ಥೆಯದೇ ಆಗಲಿ—ಎಲ್ಲ ವಿಚಾರವೂ ಸಾಮೂಹಿಕ ಎಂದೂ ಅವರ ಪ್ರತಿಪಾದನೆ.—"There is no thought which is independent, because thought is the outcome a conditional mind, thought is the symbol of the reaction to memory—ಸ್ವತಂತ್ರವಾದ ವಿಚಾರ ಎಂಬುದೊಂದೂ ಇಲ್ಲ; ಏಕೆಂದರೆ ವಿಚಾರವೆಂಬುದು ಉಪಾಧಿಬದ್ಧ ಮನದ ಮಗು, ಸ್ಮೃತಿಗೆ ನಮ್ಮಲ್ಲುಂಟಾಗುವ ಪ್ರತಿಕ್ರಿಯೆಯ ಸಂಕೇತ!" ಜಾತಿಸಂಕರಕ್ಕಿಂತ ವಿಚಾರಸಂಕರದ ಈ ಯುಗದಲ್ಲಿ, ವ್ಯಾಪಕತೆಯ ಅಂಶ ಕಂಸನಂತೆ ಉಕ್ಕುತ್ತಿರುವ ಈ ಅವಧಿಯಲ್ಲಿ ವಿಚಾರವಾಡುವುದೇ ಪ್ರಮಾದವೆಂದು ವಿಶ್ವವ್ಯಾಪಕ ಚೈತನ್ಯಕ್ಕೆನಿಸಿದರೆ, ಖಂಡಿತ ತಪ್ಪಾಗಲಾರದಲ್ಲವೆ?

ನಮಸ್ಕಾರ-ಚಮತ್ಕಾರ

(ಒಂದು ಕಿರಿಯ ಹರಟೆ)

ಶ್ರೀ. ಎನ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ. ಧಾರವಾಡ

卐

ನಮ್ಮ ಸಾಮಾಜಿಕಜೀವನದಲ್ಲಿ ನಮಸ್ಕಾರದ್ದೊಂದು ಚಮತ್ಕಾರವೇ ಆಗಿದೆ. ನಮಸ್ಕಾರವು ಭಕ್ತಿಭಾವದ ಅನುಭಾವವಾಗಿ ನೂಡಿದುದಾದರೂ, ಇಂದಿನ ವ್ಯಾವಹಾರಿಕ ಜೀವನದಲ್ಲಿ ಅದು ಅನೇಕ ಮನೋಭಾವಗಳ ಪ್ರತಿನಿಧಿಯಾಗಿ ಕಾರ್ಯವನ್ನು ಮಾಡುತ್ತಲಿದೆ

卐

ಜಗತ್ತಿನಲ್ಲಿ ಎಷ್ಟು ದೇಶಗಳು, ಎಷ್ಟು ಜನಾಂಗಗಳು ಇವೆಯೋ, ಅಷ್ಟು ಅಷ್ಟು ನಮಸ್ಕಾರ ಪದ್ಧತಿಗಳಿವೆ. ಇಂಗ್ಲಿಷಿನಲ್ಲಿ ಗುಡ್-ಮಾರ್ನಿಂಗ್, ಗುಡ್ ಇವಿನಿಂಗ್, ಗುಡ್‌ನಾಯಿಟ್—ಎಂದು, ಹೊತ್ತಿಗೆ ಸರಿಯಾಗಿ ನಮಸ್ಕಾರವಿಧಾನಗಳಿದುವಂತೆ ನಮ್ಮಲ್ಲಿಲ್ಲ. ನಮ್ಮಲ್ಲಿ ಒಟ್ಟು ಒಂದು ಶಬ್ದ ' ನಮಸ್ಕಾರ '. ಅದು ಬಿಟ್ಟು ಸುಪ್ರಭಾತ, ಒಳ್ಳೀಯ ಸಂಜೆ, ಶಿವರಾತ್ರಿ ಎಂಬ ಭಾಷಾಂತರ ನಮಸ್ಕಾರಗಳನ್ನು ಸಲ್ಲಿಸಿದರೆ, ಸ್ವೀಕರಿಸುವವರಿಗೆ ಅರ್ಥವಾದೀತೋ ಇಲ್ಲವೋ ಹೇಳಲು ಬರುವಂತಿಲ್ಲ. ನಮ್ಮ ನಮಸ್ಕಾರಗಳಲ್ಲೂ ಹೊರಗಿನ ಅರ್ಥ, ಒಳಗಿನ ಅರ್ಥ, ಒಳ-ಒಳಗಿನ ಅರ್ಥ—ಹೀಗೆಲ್ಲಾ ಅಯಾ ನಮಸ್ಕಾರದ ಧ್ವನಿಯಿಂದ ಹೊರಡುತ್ತವೆ:'ದೊಡ್ಡವರಿದ್ದೀರಿ ನಮಸ್ಕಾರ' ಎಂದಾಗ, ನಮಸ್ಕಾರ ಸ್ವೀಕರಿಸುವವನು ಹೇಗೆತಾನೆ ಸ್ವೀಕರಿಸಿಯಾನು? ಮಾಡುವುದೇನೋ ನಮಸ್ಕಾರ; ಆದರೆ 'ದೊಡ್ಡವರಿದ್ದೀರಿ' ಎಂಬ ನುಡಿಯೊಳಗಿನ ಉಡುಗೊರೆ ಮಾತ್ರ ಸಣ್ಣದಲ್ಲ. ' ದೊಡ್ಡ ನಮಸ್ಕಾರ ನಿಮಗ ' ' ದೀರ್ಘನಮಸ್ಕಾರ ನಿಮಗ, ' ' ಉದ್ದಂಡ ನಮಸ್ಕಾರ ನಿಮಗ ' ಹೀಗೆ ಯಾವ ಪ್ರಯೋಗವನ್ನು ಮಾಡಿದರೂ ಸರಿಯೆ, ಅರ್ಥವಾಗುವುದು ಒಂದೇ,—ನಮಸ್ಕಾರ ಮಾಡಿಸಿಕೊಂಡವನ ಮಂಗಳಾರತಿ, ಎಂದು.

ಹಳ್ಳಿಗಳಲ್ಲಿ, ಸಂಪ್ರದಾಯವಂತರಲ್ಲಿ Good morning ಗೆ ಸರಿಹೋಗುವಂತೆ— ' ಎದ್ಯಾ ' ಎಂದು ಕೇಳುವ ಪರಿಪಾಠ. ' ಎದ್ದದ್ದು ಕಾಣುವುದಿಲ್ಲೇನು? ' ಎಂದು ಮಾತ್ರ ಉತ್ತರ ಕೊಡಬಾರದು. ಗೊತ್ತಿದ್ದರೂ ಕೇಳುವುದು ಪರಿಪಾಠ. ' ಎದ್ದಿ, ನೀವು ಎನ್ಯಾ? ' ಎಂದು ಮಾತ್ರ ಕೇಳಬೇಕು. ಇನ್ನೂ ಉಳಿದ ಪ್ರಸಂಗಗಳಲ್ಲಿ ' ಶರಣ್ರಿ ', ' ಶರಣಾರ್ಥಿ ', ' ಶರಣ-ಶರಣಾರ್ಥಿ ' ಎಂದೂ ಹೇಳುವುದುಂಟು. 'ರಾಮರಾಮ' ಎಂದು ಕೆಲವು ಪ್ರದೇಶಗಳಲ್ಲಿಯೂ ' ನಮಸ್ತೇ ' ಎಂದು ಕೆಲವರೂ ಹೇಳುತ್ತಾರೆ. ' ಆದಾಬ್ ಅರಜ್ ' ಎಂದು ಮತ್ತೆ ಕೆಲವರು ಹೇಳಿದರೆ ' ನಮೋನ್ನಮಃ, ನಮೋನ್ನಮಃ ' ಎಂದು ಮತ್ತೂ ಕೆಲವರು ಹೇಳುತ್ತಾರೆ. ಪಾಪ, ತುಕಾರಾಮನು 'ಅಮ್ಹಿ ಜಾತೋ ಅಮುಚ್ಯಾ ಗಾವಾ, ಅಮುಚಾ ರಾಮುರಾಮ ಘ್ಯಾವಾ' ಎಂದು ಹೇಳಿದ್ದರಿಂದ, 'ರಾಮ' ಎನ್ನುವುದು ಎಂದರೆ 'ಅಮ್ಹಿ ಜಾತೋ ಅಮುಚ್ಯಾ ಗಾವಾ ' ಎಂದೇ ಅರ್ಥ ಮಾಡುವವರು ಬಹಳ. ' ಜೈ ಹಿಂದ್ ' ಎಂಬ ನಮಸ್ಕಾರಪದ್ಧತಿ ಹತ್ತುವರುಷಗಳಿಗೆ ಈಚಿನದು.

ನಮಸ್ಕಾರ ಮಾಡುವ ರೀತಿಯಿಂದಲೆ ಅಯಾ ಮನುಷ್ಯ-ಮನೋಧರ್ಮವನ್ನು ಹೇಳಬಹುದು. ನಮಸ್ಕಾರ ಮಾಡುವ ರೀತಿ-ಹಾವ-ಭಾವಗಳ ಮೇಲಿಂದ ಅವರ ದರ್ಪ, ದೈನ್ಯ, ದೇಶಾವರಿಗಳನ್ನು ಹೇಳಬಹುದು. ಎರಡೂ ಕೈ ಜೊಸೆಯುತ್ತ ' ಹೆ ಹೆ ಹೆ ಹೆ — ನಮಸ್ಕಾರ್ರಿ..... ಹೆ ಹೆ ಹೆ ಹೆ ಮತ್ತೇನು? ' ಹೀಗೆ ದೇಶಾವರಿ ಆರಂಭ ಮಾಡುವವರು, ಏನೋ ಮುಷ್ಟೀಭಂಡು ಎತ್ತುವುದಕ್ಕೆ ಬಂದಿದ್ದಾರೆಂದು ಕೂಡಲೆ ಅರ್ಥ ಮಾಡಿಕೊಂಡು, ಮುಷ್ಟೀಭಂಡಿಗೆ ಅರ್ಥಚಂದ್ರವನ್ನೊ ಸುದರ್ಶನವನ್ನೊ ತೋರಿಸಲು ನಾವೂ ಸಜ್ಜು ಮಾಡಬೇಕು. ನಮಸ್ಕಾರ ಎನ್ನವೆ ' ಏನು ಗುಂಡೇರಾವ್ ' ಎಂದು ಡುಬ್ಬ ಚಿಪ್ಪರಿಸಿ ಹೆಗಲ ಮೇಲೆ ಕೈ ಹಾಕಿ ಬಿಡುವವರು ನಿಷ್ಕಪಟಿಗಳೆಂದು ತಿಳಿಯತಕ್ಕದ್ದು. ' ಏನಪಾ ಗುಂಡ್ಯಾ ' ಎಂದು ಡುಬ್ಬ ಬಾಯು. ವಂತೆ ಜೆಪ್ಪರಿಸಿದಾಗ, ಸ್ನೇಹ ಇನ್ನೂ ಗಾಢವೆಂದೇ ತಿಳಿಯಬೇಕು. ' ನಮಸ್ಕಾರ ನಮಸ್ಕಾರ! ಏನು ಸ್ವಾರಿ ಎತ್ತಾಗ? ' ಎಂದು ನಮಸ್ಕಾರ ಹೇಳುವವರು, ಏನೋ ಸ್ವಲ್ಪ ಗೌರವ ಕೊಟ್ಟು ಮಾತನಾಡುತ್ತಾರೆಷ್ಟೆ ಎಂದು ತಿಳಿಯಬೇಕು. ಅವರಲ್ಲಿ ಯಾವುದೇ ಸ್ವಾರ್ಥಸಾಧನೆಯು ಇರುವುದಿಲ್ಲ, ಗಾಢಸ್ನೇಹವೂ ಇರುವುದಿಲ್ಲ. ಕೆಲವರಿಗೆ ನಮಸ್ಕಾರ ಎನ್ನುವುದಕ್ಕೂ ನಾಚಿಕೆ ಬರುತ್ತದೆ ನಮಸ್ಕಾರ ಮಾಡಲಿಯೇ ಬೇಡವೊ-ಎಂದು ಅನುಮಾನಿಸುತ್ತ, ಎರಡೂ ಕೈಯ ಬೆರಳುಗಳನ್ನು ಎದೆಯ ಮೇಲೆ ಕೇಲಿಸಲು ಪ್ರಯತ್ನಿಸುತ್ತಾರೆ. ಇದರಿಂದ ಉಭಯತರ ಸ್ನೇಹವು ಔಪಚಾರಿಕ ಮಟ್ಟವನ್ನೂ ಮೀರಿ ನಿಂತಿದೆ; ಆದರೆ ಉಭಯತರು ಸಮಾನಸ್ಕಂದರಲ್ಲ—ಒಬ್ಬರು ಎಂದರೆ ನಮಸ್ಕಾರ ಮಾಡುವವರು ಸಣ್ಣವರು, ಮಾಡಿಸಿಕೊಳ್ಳುವವರು ದೊಡ್ಡವರು.

ಹಿರಿಯರು—ಎಂತರ್ಥವಾಗುತ್ತದೆ. ದಿನದಿನವೂ ಬೆಟ್ಟಿಯಾಗುವವರು, ಒಂದೇ ಕಂಪೌಂಡಿನಲ್ಲಿರುವವರು, ಕೇವಲ ಮುಗುಳ್ನಗೆಯಿಂದಲೆ ನಮಸ್ಕಾರ ಸೂಚಿಸುತ್ತಾರೆ.

ನಮಸ್ಕಾರ ಮಾಡುವ ಅಭಿನಯ ಇಲ್ಲನೆ ಹಾವಭಾವಪದ್ಧತಿಗಳೂ ಭಿನ್ನಭಿನ್ನವಾಗಿರುತ್ತವೆ. ಸಾಹೇಬರು ಬಂದರೆ, ಸಿವಾಯರು ಜಿಗಿದು ನಿಂತು, ಕಾಲು ನೆಲಕ್ಕೆ ಚೆಪ್ಪರಿಸಿ ಐದು ಬೆರಳು ಹಣೆಗೆ ಹಚ್ಚುವುದು ಮಿಲಿಟರಿ ನಮಸ್ಕಾರ ಎನಿಸುವುದು. ನಾಲ್ಕು ಬೆರಳಿನಿಂದ ನಮಸ್ಕಾರ ಮಾಡುವುದು ಸರ್ವಸಾಮಾನ್ಯ ಕಚೇರೀಪದ್ಧತಿ ಎನ್ನಬಹುದು. ಮೂರು ಬೆರಳಿನಿಂದ ನಮಸ್ಕಾರ ಮಾಡುವುದು ಸ್ಕೌಟ್ ಪದ್ಧತಿ. ಎರಡು ಬೆರಳಿನಿಂದ ನಮಸ್ಕಾರ ಮಾಡುವುದು ಚರ್ಚಿಲರ V to victory ಎಂಬ ಸಾಂಕೇತಿಕ ಪದ್ಧತಿ. ಬಹಳ busy ಇದ್ದೇವೆಂದು ನಟಿಸುವವರು ಮಾತ್ರ ಒಂದೇ ಬೆರಳಿನಿಂದ ನಮಸ್ಕಾರ ಮಾಡಿ, ಮುಖ ಕೂಡ ಮೇಲಕ್ಕೆತ್ತದೆ ಬಿರಿ ಬಿರಿ ಸಾಗಿಬಿಡುವರು.

'It blesseth him that gives and him that takes' ಎಂಬಂತೆಯೆ ನಮಸ್ಕಾರದ ಮಾತೂ. ನಮಸ್ಕಾರ ಮಾಡುವುದರಿಂದ ಲುಕ್ಸಾನು ಏನೂ ಇಲ್ಲ; ಆದರೆ ಏನಾದರೂ ಲಾಭವೇ ಆಗಬೇಕು. ಆದರೆ ಒಮ್ಮೊಮ್ಮೆ ಯಾರು ಮೊದಲು ನಮಸ್ಕಾರ ಮಾಡಬೇಕು?—ಎಂಬ ಅಹಮ್ಮಿನ ಪ್ರಶ್ನೆ ಬರುತ್ತದೆ. ಇದರಿಂದಾಗಿ, ನೋಡಿಯೂ ನೋಡದಂತೆ ಮುಖ ಓರೆ ಮಾಡಿಕೊಂಡು ಹೋಗಬೇಕಾಗುತ್ತದೆ. ಒಬ್ಬೊಬ್ಬರು ತಮಗೆ ಬರುವ ಸಲಾಮುಗಳ ಲೆಕ್ಕ ಹಾಕುತ್ತಲೆ ಹೊರಟಿರುತ್ತಾರೆ. ಅಂಥವರಿಗೆ ಯಾರಾದರೂ ಎದುರಿಗೆ ಬರುವವರು ಸುಮ್ಮನೆ ಕಣ್ಣು ಒರಸಿಕೊಂಡರೆ, ಹಣೆ ತುರಿಸಿಕೊಂಡರೆ ತಮಗೇ ನಮಸ್ಕಾರ ಮಾಡಿದರೆಂದುಕೊಂಡು 'ಹಲೋ' ಎಂದು ಪೋಕ್ಕಾಗಿ ನಗುತ್ತಾರೆ. ಆದರೂ ಅದು ತಮಗಾಗಿ ನಮಸ್ಕಾರವಿರಲಿಲ್ಲವೆಂದು ಗೊತ್ತಾದಾಗ, ಅವರ ಕಹಿಮೋರೆಯನ್ನು ನೋಡಲಾಸಲ್ಲ.

ಬರಿ ನಮಸ್ಕಾರ—ಚಮತ್ಕಾರದ ಮಾತುಕತೆಯಲ್ಲಿ ಹಾರ್ದಿಕತೆ ಇರುವುದಿಲ್ಲ. ಅದು ಬೇಸರದ ವಿಷಯ. 'ಏನು ಮಾತು! ಬರೀ ನಮಸ್ಕಾರ ಚಮತ್ಕಾರ!' ಎನ್ನುತ್ತಾರೆ—ತಮಗೆ ಇನ್ನೊಬ್ಬರ ಮಾತಿನಲ್ಲಿ ತೃಪ್ತಿಯಾಗದಾಗ.

ನಮಸ್ಕಾರಗಳು ಒಮ್ಮೊಮ್ಮೆ ಉದ್ದಂಡವಾಗಿರಬೇಕಾಗುತ್ತದೆ. ಆದರೆ ಆಸ್ಪತ್ರೆ ದೀರ್ಘಕ್ಕೆ ಹೋಗಬೆ ಮಣಿದು ನಮಸ್ಕರಿಸಿದರೂ ಒಮ್ಮೊಮ್ಮೆ ನಡೆಯುತ್ತದೆ. ಸೊಸೆ ಅತ್ತೆ-ಮಾವಂದಿರನ್ನು ಬೀಳ್ಕೊಳ್ಳುವಾಗ; ಅಳಿಯ ಆರತಿ ಮಾಡಿಸಿಕೊಂಡು ಅತ್ತೆ-ಮಾವಂದಿರಿಗೆ ನಮಸ್ಕಾರ ಮಾಡುವಾಗ. ಒಬ್ಬೊಬ್ಬ ಅಳಿಯಂದಿರು ಅತ್ತೆಗೆ ಉದ್ದಂಡ ಪಾಕೆ ನಗಿಸಿಕೊಂಡುದೂ ಉಂಟು. ತಾನು ಭಕ್ತಶ್ರೇಷ್ಠನೆಂದು ದೇವರಿಗೆ ಉದ್ದಂಡ ಹಾಕುವ ಕಚೇರಿ ಕಾಮುಗಾರನ ಸಕಾಮ ನಮಸ್ಕಾರವು ಒಮ್ಮೊಮ್ಮೆ ಡಬಲ್ ಉದ್ದಂಡವಾಗುವುದು, ಅವನ ವಾಕಿಂಗ್ ಸ್ಟಿಕ್ಕೂ ಅವನುದ್ದ ಮತ್ತೆ ಮುಂದೆ ಬಿದ್ದಾಗ. ದೇವರಿಗೆ ಬಿಟ್ಟು ಮನುಷ್ಯರಿಗೆ ಉದ್ದಂಡ ಹಾಕುವವರು 'ಕಾಲು ಬಿದ್ದು ಕಾಲುಂಗರ ಬಿಚ್ಚಿಕೊಳ್ಳುವೆ' ವರ್ಗದವರೆಂದು ತಿಳಿಯಬೇಕು.

ನಮಸ್ಕಾರದ ನೀತಿ, ಸ್ವಾಗತದ ರೀತಿಗಳು ದೇಶ-ದೇಶಕ್ಕೆ ಜನಾಂಗ-ಜನಾಂಗಕ್ಕೆ ಭಿನ್ನ ಬಿನ್ನವಾಗಿವೆಯೆಂದು ಹೇಳಿತಷ್ಟೆ? ಒಂದು ದೇಶದಲ್ಲಿ ಚಪ್ಪಾಳೆ ತಟ್ಟಿದರೆ, ಇನ್ನೊಂದು ದೇಶದಲ್ಲಿ ಚಪ್ಪಾಳೆ ತಟ್ಟದೇನೇ ತಟ್ಟುವ ಹಾಗೆ ಕೈ ಹಿಡಿಯಬಹುದು. ಒಂದು ದೇಶದಲ್ಲಿ ಒಂದೇ ಕೈಮೇಲೆ, ಅಂಗೈ ತೋರಿದರೆ, ಇನ್ನೊಂದು ದೇಶದಲ್ಲಿ ನೆಲಕ್ಕೆ ಸಮಾಂತರವಾಗಿ ಟೊಂಕದೆತ್ತರದಲ್ಲಿ ಅಂಗೈ ಹಿಡಿಯಬಹುದು. ಒಂದು ದೇಶದಲ್ಲಿ ಕೈಕುಲಿಕಿದರೆ, ಇನ್ನೊಂದು ದೇಶದಲ್ಲಿ ಅಪ್ಪಿಕೊಳ್ಳಬಹುದು, ಮಗದೊಂದು ದೇಶದಲ್ಲಿ ಚುಂಬಿಸಬಹುದು ಒಂದು ದೇಶದ ಪದ್ಧತಿಯ ಪರಿಪಾಠವಿಲ್ಲದವರಿಗೆ ಈ ನಮಸ್ಕಾರ ಪದ್ಧತಿಗಳು ಚಮತ್ಕಾರಗಳಾಗಿ ತೋರಿಯಾವು; ಆದರೆ ಒಂದು ಮಾತು ನಿಜ, ನಮಸ್ಕಾರದ ಅಭಿವ್ಯಕ್ತಿ ಅನೇಕ ರೀತಿಯದಾದರೂ ನಮಸ್ಕಾರ ಸಲ್ಲಿಸುವ ಅಂತಃಕರಣದ ಹೃದಯ ಒಂದೇ. ಅದಕ್ಕೆ ಮಾತ್ರ ಎಲ್ಲ ಹಾವಭಾವಗಳ ಭಾಷೆಯೂ ಅರ್ಥವಾಗುತ್ತದೆ.

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ	೧೫-೦-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಹಾಲು-ಹಣ್ಣು (ಕವನ ಸಂಗ್ರಹ)	೧-೮-೦
ಶ್ರೀ. ಭುಜೇಂಪ್ರ ಮಹಿಷವಾಡಿ	
ನೂಲತಿಪ್ಪಣದ ಮೌಲ್ಯಮಾಪಣ	೦-೧೨-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಬಾಳ-ಬಂಡಿ (ಕವನ ಸಂಗ್ರಹ)	೧-೮-೦
ಶ್ರೀ. ಬಾಳ ಬಿ. ಉಪಾಧ್ಯೆ	
ಭರತೇಶನ ನಾಲ್ಕು ಚಿತ್ರಗಳು	೧-೪-೦
ಶ್ರೀ. ಮಿರ್ಜಿ ಅಣ್ಣಾರಾಯರು	

ಅಚ್ಚಿನಲ್ಲಿ:

ಸಂಸ್ಕೃತಿಯ ಹೃದಯ

ಭಾರತದ ಬಿಳಿಕು

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾ ಸದನ, ಸೇಡಬಾಳ

ಪೊ. : ಸೇಡಬಾಳ (ಜಿಲ್ಲಾ ಬೆಳಗಾಂವಿ)

ಬಲಿದಾನ

(ಒಂದು ಐತಿಹಾಸಿಕ ರೂಪಕ)

ಶ್ರೀ. 'ಎಸ್ಪೀಶಂ' ಮದರಾಸು

●

ಪಾತ್ರಗಳು:

ಕೆಂಪೇಗೌಡ, ಮಂತ್ರಿ, ೧ನೆಯ ನಾಗರಿಕ, ೨ನೆಯ ನಾಗರಿಕ, ಲಕ್ಷ್ಮಮ್ಮ, ಮಲ್ಲವ್ವ.

(ಕೆಂಪೇಗೌಡನ ಕೋಡ--ಕೆಂಪೇಗೌಡ ಕುಳಿತಿದ್ದಾನೆ.)

ಮಂತ್ರಿ:—(ಓಡಿ ಬಂದು, ಏದುತ್ತ) ಪ್ರಭೂ, ಪ್ರಭೂ, ತಿರುಗಿ.....

ಕೆಂಪೇಗೌಡ:—(ನಡುವೆ ಬಾಯಿಹಾಕಿ) ಆ? ಏನೆಂದಿರಿ? ತಿರುಗಿ? ಮೂರನೆಯಬಾರಿ?

ಮಂತ್ರಿ:— ಹೌದು ಮಹಾಸ್ವಾಮಿ, ತಿರುಗಿ ಬಿದ್ದುಹೋಗಿದೆ. ಊರಿನ ಪ್ರಜೆಗಳೆಲ್ಲ ಅಲ್ಲಿ ಸೇರಿದ್ದಾರೆ. ಅನೇಕರು ಅನೇಕರೀತಿ ಮಾತನಾಡಿಕೊಳ್ಳುತ್ತಾ ಇದ್ದಾರೆ.

ಕೆಂಪೇಗೌಡ:— ಜನರ ಮಾತು ಹಾಗಿರಲಿ ಮಂತ್ರಿಗಳೇ ಕೋಟೆಯಬಾಗಿಲು ತಿರುಗಿ ಬಿದ್ದುಹೋಯಿತೆ? ಈಗ ಏನು ಮಾಡುವುದು? ಪರಮಾತ್ಮಾ! ನಿನ್ನ ಆಜ್ಞೆಯಂತೆ ಈ ಊರನ್ನು ಕಟ್ಟಿದೆ, ಆದರೆ ಕೋಟೆಗೆ ಬಾಗಿಲೇ ನಿಲ್ಲುವುದಿಲ್ಲವಲ್ಲ? ಕೋಟೆಗೆ ಬಾಗಿಲಿಲ್ಲದೆ ಜನರ ರಕ್ಷಣೆ ಹೇಗೆ? ಒಂದೇ, ಕೋಟೆಯ ಬಾಗಿಲು ನಿಲ್ಲಬೇಕು; ಇಲ್ಲವೆ ಇಪ್ಪತ್ತು ವರ್ಷಗಳ ಸತತ ಪ್ರಯತ್ನ ನೀರಿನಲ್ಲಿ ಮಾಡಿದ ಹೋಮವಾಗಬೇಕು! ಈ ಊರನ್ನೇ ತ್ಯಜಿಸಬೇಕು! ನಿಮ್ಮ ಸಲಹೆ ಏನು ಮಂತ್ರಿಗಳೇ?

ಮಂತ್ರಿ:— ಏನೆಂತ ಹೇಳಲಿ ಪ್ರಭೂ! ಊರಿನ ಜನರಲ್ಲಿ ಬಲು ಮಂದಿ, ಇದೇನೋ ಒಳಸಂಚಿರಬೇಕು....ಯಾರೋ ಗುಪ್ತವಾಗಿ ಸೇರಿಕೊಂಡು ಕೋಟೆಯ ಬಾಗಿಲೇ ನಿಲ್ಲದಂತೆ ಮಾಡುತ್ತಿದ್ದಾರೆ....ಈ ಕೋಟೆ ಭದ್ರವಾದರೆ, ಅಲ್ಲಿಗೆ ಈ ಪ್ರಾಂತ್ಯದಲ್ಲಿ ತಮ್ಮನ್ನು ಮೀರಿಸುವವರೇ ಇಲ್ಲದಂತೆ ಆಗುವುದರಿಂದ ಶತ್ರುಗಳು ಬಹಳ ಹಣ, ಬುದ್ಧಿ ಖರ್ಚುಮಾಡಿ ಈ ರೀತಿಯ ಕೆಲಸಮಾಡಿಸುತ್ತಿದ್ದಾರೆ— ಹೀಗೆಲ್ಲಾ ಮಾತನಾಡಿಕೊಳ್ಳುತ್ತಾ ಇದ್ದಾರೆ.

ಕೆಂಪೇಗೌಡ:— ತಿರುಗಿ ಅದೇ ಮಾತು. ನನಗೆ ಜನರ ಅಭಿಪ್ರಾಯಬೇಡ. ನಿಮ್ಮ ಸಲಹೆಬೇಕು.

ಮಂತ್ರಿ:— ನನಗೂ ಹಾಗೇ ಅನ್ನಿಸುತ್ತೆ ಸ್ವಾಮೀ! ಸಾವನದುರ್ಗವನ್ನೇ ಕಂಡು ಕಣ್ಣು ಕೆಂಪೇರಿದ ನಮ್ಮ ಶತ್ರುಗಳಿಗೆ, ಈ ಕೋಟೆಯಂತೂ ಹೊಟ್ಟೆಗೆ ಬೆಂಕಿಹಾಕಿದಂತೆ ಮಾಡಿದೆ. ಇಂತಹ ಎರಡು ಕೋಟೆಗಳು ತಮ್ಮ ಅಧೀನದಲ್ಲಿದ್ದರೆ, ತಮ್ಮನ್ನು ಎಮರಿಸುವವರು ಯಾರು? ಅದಕ್ಕೇ ಈ ಫಿತೂರಿ! ನಮ್ಮ ಕೋಟೆಯ ಎಲ್ಲ ಮುಖ್ಯಸ್ಥರ ವಿಚಾರಣೆ ಆಗಬೇಕು.

ಕೆಂಪೇಗೌಡ:— ಎರಡನೆಯ ಸಾರಿ ದ್ವಾರಬಿದ್ದಾಗಲೇ ನಾವು ವಿಚಾರಿಸಲಿಲ್ಲವೇ?

ಮಂತ್ರಿ:— ನಿಜ ಮಹಾಸ್ವಾಮಿ. ವಿಚಾರಣೆ ನಡೆಯಿತು; ಆದರೆ ಕೂಲಂಕಷವಾಗಿ ಆಗಲಿಲ್ಲವೆಂದು ನನ್ನ ಅಭಿಪ್ರಾಯ. ಅಲ್ಲದೆ, ಈಗ ಮೂರನೆಯ ಬಾರಿ ಬಾಗಿಲು ನಿಲ್ಲಿಸುವಾಗ ನಾವು ತೆಗೆದುಕೊಂಡ ಮುನ್ನೆಚ್ಚರಿಕೆಗಳು ಬಿಟ್ಟಿಪ್ಪಲ್ಲ.....

ಕೆಂಪೇಗೌಡ: ನೀವೆಲ್ಲರೂ ಹಿಂದಿನಂತೆಯೇ ತಿರುಗಿ ತಿರುಗಿ ಅದೇ ಮಾತು ಹೇಳುತ್ತಾ ಇದ್ದೀರಿ ಮಂತ್ರಿಗಳೇ! ಈ ಮೂರು ಬಾರಿಯೂ—ಕಟ್ಟಿ ಮುಗಿದ ಒಂದು ರಾತ್ರಿಯೊಳಗೇ ದ್ವಾರ ಬಿದ್ದು ಹೋಗಿದೆ. ಒಂದು ರಾತ್ರಿಯೊಳಗೆ ಒಂದು ಕೋಟೆಯ ದ್ವಾರ ಉರುಳಿಸುವ ಆ ಕುಟಿಲ ಒಳಸಂಚು ಅದೆಂತಹದಾಗಿರಬೇಕು? ನಿಜವಾಗಿ ಇದು ಫಿತೂರಿಯೇ ಆಗಿದ್ದರೆ, ನಾವು ನಮ್ಮ ರಾಜ್ಯ, ಅಧಿಕಾರಗಳನ್ನು ಆ ಫಿತೂರಿಮಾಡಿದವನಿಗೇ ಒಪ್ಪಿಸಿ ಆರಂಭಮಾಡುವುದು ಉತ್ತಮ! ಈ ಒಳಸಂಚನ್ನು ಅವರು ಹೇಗೆ ಮಾಡಿರಬಹುದು ಎಂದು ಅಭಿಪ್ರಾಯ ಪಡುತ್ತೀರಿ?

ಮಂತ್ರಿ:— ಕಟ್ಟುವಾಗಲೇ ಕಟ್ಟುವವರಿಗೆ.....

ಕೆಂಪೇಗೌಡ:—(ಮಧ್ಯೆ ಬಾಯಿಹಾಕಿ) ಮತ್ತೆ ಹಳೆಯ ಕತೆ! ಕಟ್ಟುವಾಗಲೇ ಕಟ್ಟುವವರಿಗೆ ಲಂಚ ಕೊಟ್ಟು....ಅದೇ ತಾನೆ?

ಮಂತ್ರಿ:— ಹೌದು ಮಹಾಸ್ವಾಮಿ. ಅದಲ್ಲದೇ ಬೇರೆ ಇರಲಾರದು.

ಕೆಂಪೇಗೌಡ:— ಈ ಸಾರಿ ದ್ವಾರಕಟ್ಟುವಾಗ ನೀವು, ತಪ್ಪಿದರೆ ನಾನು—ಮೇಲ್ವಿಚಾರಣೆ ನಡೆಸುತ್ತಾ ಇದ್ದೆವಲ್ಲಾ ಮಂತ್ರಿಗಳೇ! ನಿಮ್ಮ ಮಾತು ಒಪ್ಪಿಕೊಂಡರೆ ನಾನು, ಇಲ್ಲವೇ ನೀವು ಫಿತೂರಿಗೆ ಸೇರಿದವರಾಗುತ್ತೇವಲ್ಲಾ? ನನಗೇನೋ ಈ ಲಂಚದ ಕತೆಯಲ್ಲಿ ನಂಬಿಕೆ ಇಲ್ಲ.

ಮಂತ್ರಿ:— (ತುಸು ಅಸಮಾಧಾನದಿಂದ) ಹಾಗಾದರೆ ತಾವು ಹೇಳುವುದೇನು ಮಹಾಸ್ವಾಮಿ? ಯಾವುದಾದರೂ ಪಿಶಾಚಿ ಬಂದು ರಾತ್ರಿಯಲ್ಲಿ ಉರುಳಿಸಿ ಹೋಗುತ್ತಿತ್ತೇ?

ಕೆಂಪೇಗೌಡ: ಯಾಕಿರಬಾರದು?

ಮಂತ್ರಿ:— ಇರಬಹುದು ಪ್ರಭು! ಆದರೆ ನಾನು ಇದುವರೆಗೆ, ಲೋಕದಲ್ಲಿ ಕೋಟೆಯ ದ್ವಾರ ಉರುಳಿಸುವ ಪಿಶಾಚಿಗಳ ವಿಷಯ ಕೇಳಿರಲಿಲ್ಲ.

ಕೆಂಪೇಗೌಡ:— ಇನ್ನು ಮೇಲೆ ಕೇಳಬಹುದು.

ಮಂತ್ರಿ:— ನನಗಂತೂ ಏನೂ ಅರ್ಥವೇ ಆಗುವುದಿಲ್ಲ ಪ್ರಭು! ನಾವು ಈ ಊರನ್ನೇ ಬಿಡಬೇಕಾಗುವುದೋ.... ...

ಕೆಂಪೇಗೌಡ:— (ತಟ್ಟನೆ) ಆಮಾತು ಮಾತ್ರ ಇಲ್ಲ ಮಂತ್ರಿಗಳೇ! ಇಪ್ಪತ್ತು ವರ್ಷಗಳು ಹಗಲೂ ರಾತ್ರಿ ಕನಸುಕಂಡು, ಊರು

ಕಟ್ಟಿ, ಇದು ಮುಂದೆ ಲೋಕಪ್ರಸಿದ್ಧವಾಗಬೇಕು, ಇಲ್ಲಿಯ ಜನ ಸಂತೃಪ್ತರಾಗಿರಬೇಕು, ಇವನ್ನು ಕಂಡು ಹತ್ತು ಜನ ಸಂತೋಷ ಪಡಬೇಕು—ಎಂದೆಲ್ಲಾ ಹಿರಿಯಾಸೆಗಳನ್ನು ಹೊತ್ತು, ಕೋಟೆಯ ಬಾಗಿಲು ಬಿದ್ದುಹೋಯಿತು ಎಂಬ ಕಾರಣಕ್ಕೆ ಊರನ್ನೇ ಖಾಲಿ ಮಾಡುವುದೇ ? ಉಹುಂ! ಅದೊಂದು ಕೆಲಸ ಮಾತ್ರ ಈ ಕೆಂಪೇಗೌಡನಿಂದ ಸಾಧ್ಯವಿಲ್ಲ.

ಮಂತ್ರಿ :— ಹಾಗಾದರೆ..... ಕೋಟೆಗೆ ಬಾಗಿಲೇ ಇಲ್ಲದೆ ಊರಿನ ರಕ್ಷಣೆ ಹೇಗೆ ಸ್ವಾಮಿ ?

ಕೆಂಪೇಗೌಡ :— ಇನ್ನೊಮ್ಮೆ ದ್ವಾರಕಟ್ಟಿ ಬಾಗಿಲು ನಿಲ್ಲಿಸೋಣ. ಈ ಸಾರಿ ಅದು ನಿಲ್ಲುತ್ತದೆ. ಕಟ್ಟಲು ಆರಂಭಿಸುವುದಕ್ಕೆ ಮುಂಚೆ ಕೋಟೆಯ ಮಹಾಕಾಳಿಯ ಬಳಿ ಪ್ರಶ್ನೆ ಕೇಳೋಣ.... ಯಾಕೆ ಹೀಗೆ ಆಗುತ್ತಿದೆ—ಎಂತ ! ಮಹಾತಾಯಿಯ ಆಜ್ಞೆಪೆ ತಿಳಿದು ಮುಂದಿನ ಕೆಲಸ ಮಾಡೋಣ.

ಮಂತ್ರಿ :— ಆಜ್ಞೆಪೆ ಪ್ರಭು.

× × × ×

(ಮಹಾಕಾಳಿಯ ಗುಡಿ. ಜನಸಂದಣಿ)

ಮಂತ್ರಿ :— (ಗಟ್ಟಿಯಾಗಿ) ಸದ್ದು ! ಸದ್ದು ! (ಆ ಸದ್ದು ಅಡಗುತ್ತಾ ಬರುವುದು) ಕೊಂಚಕಾಲ ಸಕಲರೂ ನಿಶ್ಶಬ್ದರಾಗಿರಬೇಕು. ನಮ್ಮ ಪ್ರಭುಗಳಾದ ಕೆಂಪೇಗೌಡರು ಬರುತ್ತಾ ಇದ್ದಾರೆ.

ಕೆಂಪೇಗೌಡ :—(ಬಂದು) ಮಂತ್ರಿಗಳೇ, ಪೂಜೆಗೆ ಎಲ್ಲಾ ಸಿದ್ಧವಾಗಿದೆಯೇ ?

ಮಂತ್ರಿ :—ಸಕಲವೂ ಸಿದ್ಧ ಪ್ರಭು!

ಕೆಂಪೇಗೌಡ :—ಹಾಗಾದರೆ ಪೂಜೆ ನಡೆಯಲಿ.

(ಪೂಜೆ ನಡೆಯುವುದು. ಗಂಟೆಗಳ ಸದ್ದು. ಕಡೆಗೆ ಎಲ್ಲರೂ ಸೇರಿ 'ಜೈ ಮಹಾಕಾಳಿ' ಎಂದು ಘೋಷಿಸುವರು)

ಕೆಂಪೇಗೌಡ :—(ವಿನಯದಿಂದ) ತಾಯೀ, ಮಹಾಕಾಳೀ, ಸಕಲವನ್ನೂ ಅರಿತವಳಾದ ನಿನಗೆ ನಾನು ಏನನ್ನೂ ತಿಳಿಸಬೇಕಾಗಿಲ್ಲ! ನಿನ್ನನ್ನು ಬಿಟ್ಟು ಈಗ ಬೇರೆಯಾರೂ ಗತಿಯಿಲ್ಲ. ಕೋಟೆಗೆ ಮೂರು ಬಾರಿ ಮಹಾದ್ವಾರ ಕಟ್ಟಿದೆ, ಮೂರು ಬಾರಿಯೂ ಮುರಿದು ಬಿತ್ತು. ಕೋಟೆಗೆ ಬಾಗಿಲಿಲ್ಲದೇ ನಿನ್ನ ಮಕ್ಕಳ ರಕ್ಷಣೆ ಹೇಗೆ ತಾಯೇ? ನಾನಾಗಿ ಇಲ್ಲಿಗೆ ಬಂದು ಊರು ಕಟ್ಟಿದವನಲ್ಲ! ನೀನು ಆಜ್ಞೆಪೆ ಮಾಡಿದ್ದರಿಂದಲೇ ಅಲ್ಲವೇ ನಾನು ಊರು ಕಟ್ಟಿದ್ದು ? ನಮ್ಮ ತಪ್ಪುಗಳನ್ನಿದ್ದರೂ ಕ್ಷಮಿಸು. ಕೋಟೆಯ ಬಾಗಿಲು ನಿಲ್ಲಲು ನಾವೇನು ಮಾಡಬೇಕು, ಆಜ್ಞೆ ಮಾಡು ತಾಯೇ !

(ಕ್ಷಣಕಾಲ ನಿಶ್ಶಬ್ದ)

(ಆಶರೀರವಾಣಿ) "ದ್ವಾರದ ಬಳಿ ಒಬ್ಬ ಗರ್ಭಿಣಿಯ ಬಲಿ. ಯಾಗಲಿ. ಕೋಟೆಯ ಬಾಗಿಲು ನಿಲ್ಲುತ್ತದೆ."

(ತಿರುಗಿ ಕ್ಷಣಕಾಲ ನಿಶ್ಶಬ್ದ)

ಕೆಂಪೇಗೌಡ :—ಆ! ಗರ್ಭಿಣೀ ಸ್ತ್ರೀಯ ಬಲಿಯೇ ?

× × ×

(ಕೆಂಪೇಗೌಡನ ಕೋಣೆ. ವಿಚಾರಾಕ್ರಾಂತನಾಗಿದ್ದಾನೆ.)

ಕೆಂಪೇಗೌಡ :—ಕೋಟೆಯ ಬಾಗಿಲು ನಿಲ್ಲಲು ಒಬ್ಬ ಗರ್ಭಿಣೀ ಸ್ತ್ರೀಯ ಬಲಿ! ನನ್ನ ರಾಜ್ಯಸ್ಥಾಪನೆಗೆ ಈಗಾಗಲೇ ಹರಿದ ರಕ್ತದ ಕೋಡಿ ಸಾಲದೇ? ಈ ನಶ್ವರವಾದ ರಾಜ್ಯಕ್ಕೆ ನರಬಲಿ! ಬರಿಯ ನರಬಲಿಯೂ ಅಲ್ಲ, ಶಿಶುಹತ್ಯೆ, ಸ್ತ್ರೀಹತ್ಯೆ ಎರಡೂ! ತಾಯೇ, ಕಾಳೀ, ಕ್ಷಮಿಸು! ಬಾಗಿಲು ನಿಂತರೆ ನಿಲ್ಲಲಿ, ಬಿದ್ದರೆ ಬೀಳಲಿ. ಈ ಬಲಿಮಾತ್ರ ಸಾಧ್ಯವಿಲ್ಲ! ಯಾವ ಮುಖದಿಂದ ಹೋಗಿ, ಒಬ್ಬ ಗರ್ಭವತಿಯನ್ನು 'ನೀನು ಬಲಿಯಾಗು' ಎಂದು ಕೇಳುವುದು? ಒಳ್ಳೆಯ ಧರ್ಮ ಸಂಕಟವಾಯಿತು. ಇಷ್ಟತ್ತು ವರ್ಷಗಳ ಸತತ ಕಾರ್ಯ ನಿಷ್ಫಲ; ಇಲ್ಲವೇ ಈ ಬಲಿ! (ಮಂತ್ರಿ ಬರುವನು) ಮಂತ್ರಿಗಳೇ, ಎಂತಹ ಕತ್ತರಿಯಲ್ಲಿ ಸಿಕ್ಕಿಬಿದ್ದ ಹಾಗಾಯಿತು ?

ಮಂತ್ರಿ :—ಹೌದು ಪ್ರಭು, ಯಾವುದನ್ನೂ ಮಾಡುವಂತಿಲ್ಲ, ಬಿಡುವಂತಿಲ್ಲ.

ಕೆಂಪೇಗೌಡ :—ಯಾವ ಗರ್ಭಿಣಿಯನ್ನು ತಾನೇ ಬಲಿ. ಯಾಗು ಎನ್ನೋಣ ? ಎಷ್ಟೋ ಆಶೆಯಿಂದ ತನ್ನ ವಂಶವೃಕ್ಷ ಚಿಗುರುವುದನ್ನೇ ಕಾಯುತ್ತಿರುವ ಯಾವ ಗಂಡನನ್ನು ತಾನೇ ನಿನ್ನ ಹೆಂಡತಿಯನ್ನು ಮೃತ್ಯುಮುಖಕ್ಕೆ ತಳ್ಳು ಎನ್ನೋಣ ? ಹರಕೆ ಹೊತ್ತು ಗರ್ಭತಾಳಿ, ಎಂದು ಕಂದನ ಮುದ್ದುಮುಖವನ್ನು ಕಂಡೇನು, ಎಂದು ಅದರ ನಗುವನ್ನು, ಕಂಡೇನು, ಎಂದು ಅದರ ತೊದಲು ನುಡಿಗಳು ಕಿವಿಗೆ ಬಿದ್ದಾವು ಎಂದು ಕಾಯುತ್ತಾ ಇರುವ ಯಾವ ಹೆಂಗುಸನ್ನು ತಾನೇ ಎಳೆದು ತಂದು ಕತ್ತರಿಸಲು ಸಾಧ್ಯ, ಮಂತ್ರಿಗಳೇ ?

ಮಂತ್ರಿ :—ಹಾಗಾದರೆ ಕೋಟೆಯ ಬಾಗಿಲು ನಿಲ್ಲುವುದಿಲ್ಲ. ವಲ್ಲಾ ಮಹಾಸ್ವಾಮೀ! ಕೋಟೆಯ ಬಾಗಿಲು ನಿಲ್ಲಬೇಕಾದರೆ ಕನಿಕರವನ್ನು ಕ್ಷಣಕಾಲ ಮರೆಯಬೇಕು. ಕರ್ತವ್ಯದ ಕಡೆಗೆ ಗಮನಕೊಡಬೇಕು.

ಕೆಂಪೇಗೌಡ :—ಇದೆಂತಹ ಕರ್ತವ್ಯ ! ನನ್ನನ್ನು ಬಲಿಯಾಗು ಎಂದು ದೇವಿಯು ಆಜ್ಞಾಪಿಸಿದ್ದರೆ, ನಾನು ಒಂದು ಕ್ಷಣಕಾಲ ಹಿಂದೆ ಮುಂದೆ ನೋಡುತ್ತಿರಲಿಲ್ಲ. ದೇವಿಯ ಆಜ್ಞಾಪಾಲನೆಗಾಗಿ, ಹತ್ತು ಮಂದಿಯ ಸುಖ-ಶಾಂತಿಗಳಿಗಾಗಿ ಪ್ರಾಣತ್ಯಾಗ ಮಾಡುವುದಕ್ಕಿಂತ ಪುಣ್ಯಬೇಕೆ ? ಆದರೆ ಈ ಕರ್ತವ್ಯ ? ಇಲ್ಲ ಮಂತ್ರಿಗಳೇ, ನಾನು ಹೋಗಿ ಯಾರನ್ನೂ ಬಲಿಯಾಗು ಎಂದು ಕೇಳುವುದಿಲ್ಲ.

ಮಂತ್ರಿ :— ನೀವು ಹೋಗಿ ಕೇಳುವುದು ಬೇಡ! ನಾವೇ ಯಾರಾದರೂ ಹೋಗಿ ಕೇಳುತ್ತೇವೆ.

ಕೆಂಪೇಗೌಡ :—ನೀವು ಕೇಳಿದರೇನು, ನಾನು ಕೇಳಿದರೇನು? ವಿಷಯ ಒಂದೇ ತಾನೇ! ಕೋಟೆಯ ದ್ವಾರ ನಿಲ್ಲಲು ಬಲಿಯಾಗು—ಎಂದು, ನಿಮಗೆ ಒಬ್ಬ ಮಗಳಿದ್ದಿದ್ದರೆ ಕಳಿಸುತ್ತಿದ್ದಿರಾ ಹೇಳಿ!

ನೀವೆ ಹೆಂಗುಸಾಗಿ ಹುಟ್ಟಿ, ಹೊಟ್ಟೆಯಲ್ಲಿ ಮಗುವೊಂದನ್ನು ಹೊತ್ತಿದ್ದರೆ, ನಿಮ್ಮನ್ನು ಯಾರಾದರೂ ಈ ಮಾತನ್ನು ಕೇಳಿದ್ದರೆ ಏನು ಹೇಳುತ್ತಿದ್ದಿರಿ ಮಂತ್ರಿಗಳೇ? ಹಾಗೆ ಕೊಲೆಯಾಗಲು ಒಪ್ಪಿದರೂ ಅಕೆ ಮನಸ್ಸಿನಲ್ಲೇ ಹಾಕುವ ಶಾಪಕ್ಕೆ, ಇಂತಹ ನೂರು ಕೋಟೆಗಳು ಭಸ್ಮವಾದಾವು.

ಮಂತ್ರಿ:—ನನಗೂ ಇದೆಲ್ಲದರ ಅರಿವಿದೆ ಮಹಾಪ್ರಭು. ಆದರೆ....ನಾವು ಇದರ ಬಗ್ಗೆ ಎಲ್ಲ ಯೋಚಿಸಿದರೆ, ಕೋಟೆಯ ರಕ್ಷಣೆ ಹೇಗೆ ? ಕೋಟೆಯು ಬಾಗಿಲು ನಿಲ್ಲಬೇಡವೇ ?

ಕೆಂಪೇಗೌಡ:—ನಿಲ್ಲದೇ ಇದ್ದರೆ ಬೇಡ ಮಂತ್ರಿಗಳೇ. ಕೋಟೆಯ ರಕ್ಷಣೆಗೆ ಮತ್ತೂ ಎರಡು ತುಕಡಿ ಸೈನ್ಯ ನಿಯಮಿಸುತ್ತೇನೆ. ಬಾಗಿಲೇ ಬೇಡ. ದೇವರು ತನಗೆ ತೋ ಚಿದಂತೆ ಮಾಡಲಿ!

ಮಂತ್ರಿ:—ತಾಯಿಯೇ ಅಪ್ಪಣೆ ಕೊಡಿಸಿ ಆಯಿತಲ್ಲಾ ಸ್ವಾಮಿ! ಈಗ ಇದನ್ನು ಉಲ್ಲಂಘಿಸಿದರೆ ಆಕೆಯ ಕೋಪಕ್ಕೂ ತುತ್ತಾಗಬೇಕು.

ಕೆಂಪೇಗೌಡ:—ಅದನ್ನೆಲ್ಲಾ ಯೋಚಿಸಿಯೇ ನಿಶ್ಚಯ ಮಾಡಿದ್ದೇನೆ ಮಂತ್ರಿಗಳೇ! ಯಾವ ದೇವಿಗೆ ಕೋಪವಾದರೂ ಬರಲಿ, ಅಥವಾ ಈ ಕೋಟೆ ಹಾಳಾಗುವುದೇ ಎಂದಿದ್ದರೆ ಹಾಳಾಗಿ ಹೋಗಲಿ! ಆದರೆ ಈ ಬಲಿಗೆ ಮಾತ್ರ ನಾನು ವಿರುದ್ಧ. ನಾನಾಗಲೀ ನನ್ನ ಕಡೆಯವರಾಗಲೀ ಹೋಗಿ, ಯಾರನ್ನೂ ಬಲಿಯಾಗು ಎಂದು ಕೇಳಬೇಕಾಗಿಲ್ಲ. ಬಾಗಿಲು ನಿಲ್ಲದೇ ಇದ್ದರೆ ಬೇಡ ಅಷ್ಟೆ! ಒಬ್ಬ ಹೆಂಗುಸಿನ ಸಂತಪ್ತಹೃದಯದಿಂದ ಬರುವ ಶಾಪಕ್ಕೆ ಗುರಿಯಾಗಿ, ಸ್ತ್ರೀಹತ್ಯೆ. ಭ್ರೂಣಹತ್ಯೆಗಳ ಪಾಪವನ್ನು ತಲೆಗೆ ಕಟ್ಟಿಕೊಂಡು ನಾವು ರೌರವನರಕ ಕ್ಕೆ ಸಪ್ತಿಯಾದೇವು! ಊರಿನ ಜನಗಳಿಗೆಲ್ಲ. ಡಂಗುರ ಸಾರಿಸಿ ಬಿಡಿ. 'ಈ ರೀತಿಯ ಬಲಿಗೆ ಗೌಡರು ಒಪ್ಪಲಿಲ್ಲ; ಕೋಟೆ ಬಾಗಿಲಿಲ್ಲದೇ ಹಾಗೇ ಇರುತ್ತದೆ' ಎಂತ.

ಮಂತ್ರಿ:—ಅಪ್ಪಣೆ ಪ್ರಭು!

× × ×

(ಡಂಗುರ ಸಾರುವವನು ತನುಟೆ ಹೊಡೆದುಕೊಂಡು ಬರುತ್ತಾನೆ)

"ಮೊನ್ನೆ ಕಾಳಿಯ ಗುಡಿಯಲ್ಲಿ ಅಮ್ಮನವರ ಅಪ್ಪಣೆಯಾದಂತೆ, ಕೋಟೆಯ ಬಾಗಿಲಿಗೆ ಒಬ್ಬ ಗರ್ಭಿಣೀ ಸ್ತ್ರೀಯನ್ನು ಬಲಿಕೊಡಲು ಗೌಡರು ಸಿದ್ಧರಿಲ್ಲ. ಕೋಟೆ ಬಾಗಿಲಲ್ಲದೇ ಹಾಗೇ ಇರುತ್ತದೆ."

(ಸಾರಿಕೊಂಡು ಹೋಗುವನು)

೧ನೆಯ ನಾಗರಿಕ:— ಕೇಳಿದೆಯೇನಯ್ಯ ಗೌಡರ ನಿಶ್ಚಯ. ನನ್ನ ? ಬಹಳ ಕರುಣಾವಂತ.

೨ನೆಯ ನಾಗರಿಕ:—ಕರುಣೆ! ಬಿಡಯ್ಯಾ, ಒಂದು ಊರಿನ ರಕ್ಷಣೆಯೇ ಕಷ್ಟವಾಗಿದೆ. ಈಗ ಒಬ್ಬ ಗರ್ಭಿಣಿಯನ್ನು ಬಲಿ ಕೊಡುವುದಕ್ಕೆ ಹಿಂತೆಗೆಯುವುದೇ ? ನನಗೇನೋ ಹಿಡಿಸಲಿಲ್ಲಪ್ಪ.

೧ನೆಯ ನಾಗರಿಕ:—ಹಾಗಾದರೆ ನೀನೂ ಒಂದ ಕಟುಕರ ಬೀಗಡಿಗೆ ಬಾಯಕ್ಕಯ್ಯ. ಅಲ್ಲಾ, ಯಾರು ತಾನೇ ಒಬ್ಬ ಗರ್ಭವತೀನ ಬಲಿಯಾಗೇ ಅನ್ನುತ್ಯಾಗುತ್ತೆ? ನಿನ್ನ ಹೆಂಡತಿ, ಮಗಳು ಯಾರಾದರೂ ಇದಾರೇನೋ ?

೨ನೆಯ ನಾಗರಿಕ:—(ಹೆದರಿ) ನನ್ನ ಮಗಳು, ಹೆಂಡತಿ! ಹಾಗಲ್ಲ ನಾನು ಹೇಳಿದ್ದು. ನೋಡು, ಈಗ ಊರಲ್ಲಿರೋ ಸಾವಿರಾರು ಜನರ ಜೀವ ಜಾಸ್ತೀನೋ, ಒಬ್ಬಳ ಜೀವ ಜಾಸ್ತೀನೋ ?

೧ನೆಯ ನಾಗರಿಕ:— ತಪ್ಪು, ತಪ್ಪು, ಒಬ್ಬಳಲ್ಲಾ, ಇಬ್ಬರ ಜೀವ!

೨ನೆಯ ನಾಗರಿಕ:—ಹೂಂ ಹಾಗೇ ಇಟ್ಟುಕೋ. ಯಾವುದು ಜಾಸ್ತಿ ?

೧ನೆಯ ನಾಗರಿಕ:— ಸಾವಿರಾರು ಜನರ ಜೀವ.

೨ನೆಯ ನಾಗರಿಕ:— ಹಾಗೆ ಬಾ ಹಾದಿಗೆ. ಎಂದ ಮೇಲೆ, ಸಾವಿರಾರು ಜನರನ್ನ ಉಳಿಸೋದಕ್ಕೆ ಒಂದು ಹತ್ಯೆ.

೧ನೆಯ ನಾಗರಿಕ:— ಹಾಗಂತೀಯಾ?

೨ನೆಯ ನಾಗರಿಕ:—ಹಾಗಲ್ಲದೇ ಮತ್ತೇನೋ ? ಯಾರೋ ಹೇಳ್ತಾ ಇದ್ರಪ್ಪ, ಮನುಧರ್ಮಶಾಸ್ತ್ರದಲ್ಲೇ ಹೇಳಿದೆಯಂತೆ: 'ಒಂದು ಮನೆಗಾಗಿ ಒಂದು ಜೀವ, ಒಂದು ಊರಿಗಾಗಿ ಒಂದು ಮನೆ, ಒಂದು ದೇಶಕ್ಕಾಗಿ ಒಂದು ಊರು, ಹೀಗೆ ತ್ಯಾಗ ಮಾಡಲೇಬೇಕಾಗಿ ಬಂದರೆ ಮಾಡಲೇ ಬೇಕು' ಅಂತ.

೧ನೆಯ ನಾಗರಿಕ:— ನೀನು ಏನೇ ಹೇಳಪ್ಪ. ನನಗೇನೋ ಗೌಡರ ಮಾತೇ ಸರಿ ಅನ್ನಿಸುತ್ತೆ.

೨ನೆಯ ನಾಗರಿಕ: - ನಿನ್ನ ಹತ್ತಿರ ಮಾತನಾಡತಾ ನಿಂತರೆ ನನ್ನ ಕೆಲಸವೆಲ್ಲ ಹಾಳು. ಸೆಟ್ಟರ ಮನೇಲಿ ಏನೋ ವಿಶೇಷವಂತೆ, ಬರ್ತೀನಿ.

(ತಿರುಗಿ ಡಂಗುರ ಸಾರುವ ಸದ್ದು)

[ಗೌಡರ ಸೊಸೆ ಲಕ್ಷ್ಮಿಯ ಕೋಣೆ]

ಲಕ್ಷ್ಮಿ:— ಮಲ್ಲವ್ವಾ, ಮಲ್ಲವ್ವಾ!

ಮಲ್ಲವ್ವ:— ಏನಮ್ಮಣ್ಣೋ. ವಾಂತಿ ಆಯ್ತುದಾ ತಿರಿಗೀ?

ಲಕ್ಷ್ಮಿ:— ಇಲ್ಲವ್ವಾ ಅದೇನೋ ಸಾರುತ್ತಾ ಇದ್ದಾರೆ. ಏನು ಕೇಳು!

(ಸಾರುವವನು ಕೂಗುವನು) "ಮೊನ್ನೆ ಕಾಳಿಯ ಗುಡಿಯಲ್ಲಿ ಅಮ್ಮನವರ ಅಪ್ಪಣೆಯಾದಂತೆ ಕೋಟೆಯ ಬಾಗಿಲಿಗೆ ಒಬ್ಬ ಗರ್ಭಿಣೀ-ಸ್ತ್ರೀಯನ್ನು ಬಲಿ ಕೊಡಲು ಗೌಡರು ತಯಾರಿಲ್ಲ. ಕೋಟೆ ಬಾಗಿಲಿಲ್ಲದೇ ಹಾಗೇ ಇರುತ್ತದೆ." (ಡಂಗುರದ ಸದ್ದು)

ಮಲ್ಲವ್ವ:— ಅದೇ ಕಣಮ್ಮಣ್ಣೋ. ನೊನ್ನೆ ದಿನ ಗೌಡರು ಅಮ್ಮನವರ ಗುಡಿಗೆ ಓಗಿದ್ರು. ಕೋಟೆಯ ಬಾಗಿಲು ನಿಲ್ಲಾಕೆ ಏನು ಮಾಡಬೇಕು ಮಾತಾಯಿ ಅಂತ ಪ್ರಶ್ನೆ ಕೇಳಿದ್ರು. 'ಒಬ್ಬಳು ಬಸುರಿ ಎಂಗ್ಸನ ಬಲಿ ಕೊಡು' ಅಂತ ಅಮ್ಮಾವ್ರು ಅಪ್ಣೆ ಮಾಡಿದ್ರಂತೆ.

ಲಕ್ಷ್ಮಿ:— ಹಾಗೇನು? ನನಗೆ ಯಾರೂ ಹೇಳಲಿಲ್ಲವಲ್ಲಾ ?

ಮುಲ್ಲವ್ವ:— ಪೂರ್ತಾ ಕೇಳ್ಕೋಳ್ಳಮ್ಮಣ್ಣೀ. ಈಗ ಗೌಡರು ಆಂಗೆ ಮಾಡೋಕೆ ಆಗೋಕಿಲ್ಲ ಅಂತ ಸಾರಸ್ತಾ ಅವ್ರೆ.

ಲಕ್ಷ್ಮಿ:— ಹಾಗಾದರೆ ಕೋಟೆಯ ಬಾಗಿಲ ಗತಿ ಏನು?

ಮುಲ್ಲವ್ವ:— ಅಂಗೇ ಇರ್ತದಂತವ್ವ!

× × × ×

(ರಾತ್ರಿ ಲಕ್ಷ್ಮಿಯ ಕೋಣೆ)

ಲಕ್ಷ್ಮಿ:— ಒಂದು ಊರಿಗೆ ಒಂದು ಜೀವ! ಊರಿಗಿಂತ ಒಂದು ಜೀವ ಹೆಚ್ಚೇ? ಹುಟ್ಟುತ್ತೇವೆ, ಸಾಯುತ್ತೇವೆ! ಎಂದಿದ್ದರೂ ಸಾಯುವುದು ಶತಸ್ಸಿದ್ಧ. ನಾಲ್ಕು ದಿನ ಮುಂದೆ ಆಥವಾ ನಾಲ್ಕು ದಿನ ಹಿಂದೆ ಅಷ್ಟೆ! ನಾಲ್ಕು ದಿನ ಹೆಚ್ಚಾಗಿ ಜೀವಿಸಿ ನಾವು ಸಾಧಿಸುವುದೇನು? ಪರರ ಸಂಕಟನಿವಾರಕ್ಕೆ ಪ್ರಾಣತ್ಯಾಗ ಮಾಡುವುದಕ್ಕಿಂತಲೂ ಪುಣ್ಯಕಾರ್ಯ ಯಾವುದುಂಟು? ಇನ್ನು ಇಂತಹ ಅವಕಾಶ ಸಿಕ್ಕುವುದಿಲ್ಲ ....ಆದರೆ ಹೊಟ್ಟೆಯಲ್ಲಿರುವ ಈ ಕಂದ..... ಮತ್ತೆ ನಮ್ಮ ಸಂತತಿ.... ನಾನು ಹೋದರೆ ಬೇರೆ ಯಾವಳಾದರೂ ಬರುತ್ತಾಳೆ. ಈ ಅವಕಾಶ ತಪ್ಪಿಸಿಕೊಳ್ಳಬಾರದು. ಆದಿನ ಪುರಾಣದ ಭಟ್ಟರು ಹೇಳಲಿಲ್ಲವೇ. ' ಒಂದು ಮನೆಗೆ ಒಂದು ಜೀವ, ಒಂದು ಊರಿಗೆ ಒಂದು ಮನೆ, ಒಂದು ದೇಶಕ್ಕೆ ಒಂದು ಊರು ತ್ಯಾಗ ಮಾಡಲೇಬೇಕಾಗಿ ಬಂದರೆ ಮಾಡಲೇಬೇಕು.' ಈಗ ಈ ಕೋಟೆಗೆ ಬಾಗಿಲು ನಿಲ್ಲದಿದ್ದರೆ, ... ಪಾಪ! ಮಾವನವರ ಪ್ರಯತ್ನಗಳೆಲ್ಲಾ ನೀರಿನಲ್ಲಿ ಮಾಡಿದ ಹೋಮವಾಗುತ್ತವೆ.... ಸುತ್ತಮುತ್ತಲೂ ಶತ್ರುಗಳು- ಊರಿಗೆ ಕೋಟೆಯ ಬಾಗಿಲಿಲ್ಲದೇ ರಕ್ಷಣೆ ಹೇಗೆ? ಶತ್ರುಗಳು ಊರನ್ನು ವಶಪಡಿಸಿಕೊಂಡರೆ ನಾವಂತೂ ಹೋಗುತ್ತೇವೆ; ಜೊತೆಗೆ ಎಷ್ಟು ಪ್ರಾಣಹಾನಿ, ಎಷ್ಟು ಸ್ತ್ರೀಯರ ಮಾನಭಂಗ, ಎಷ್ಟು ಮಕ್ಕಳು ನಿರಾವಲಂಬನರಾಗುವರು, ಎಷ್ಟು ರಕ್ತ ಕಾಲುವೆಯಾಗಿ ಹರಿಯುವುದು? ಇದಿಷ್ಟನ್ನೂ ತಪ್ಪಿಸುವುದು ಈಗ ನನ್ನ ಕೈಯಲ್ಲಿದೆ! ಇದು ಯಾರಿಗೂ ತಿಳಿಯಬಾರದು. ತಿಳಿದರೆ ಇದಕ್ಕೆ ಅಡ್ಡಿಮಾಡುತ್ತಾರೆ. ಈ ರಾತ್ರಿಯೇ ಈ ಕಾರ್ಯ ಮುಗಿಯಬೇಕು. ನಾಳೆ ಎಂದ ಕೆಲಸ ಹಾಳು. (ಎದ್ದು ಕಾಳಿಯ ಗುಡಿಗೆ ಹೊರಡುವಳು.)

(ಕಾಳಿಯ ಗುಡಿ)

ತಾಯೇ, ಮಹಾಕಾಳಿ, ನನ್ನ ಈ ಅಲ್ಪಜೀವ ನಿನ್ನ ಪಾದಕ್ಕೆ ಅರ್ಪಿತ. ಕೋಟೆಯ ಬಾಗಿಲು ನಿಂತರೆ ಸಾಕು. ದೇವಿ, ಎಂದೆಂದಿಗೂ ಈ ಊರು ಶಾಂತವಾಗಿರಲಿ! ಇಲ್ಲಿಯ ಹೆಂಗಸರ ಮಾನ ಭದ್ರವಾಗಿರಲಿ! ಮಾವನವರು ನಿನ್ನ ಆಜ್ಞೆಯನ್ನು ನೆರವೇರಿಸದೇ ಇದ್ದುದಕ್ಕೆ ಕೋಪಗೊಳ್ಳಬೇಡ. ಹೆತ್ತ ಮನೆಗೂ, ಸೇರಿದ ಮನೆಗೂ ಇನ್ನು ಹೆಚ್ಚು ಮಾಡಲು ನಾನು ಅಶಕ್ತಳು. ಈ ಕಂದನ ಕೊಲೆಯನ್ನು ಕ್ಷಮಿಸು.

ಕಂದಾ, ಹೊರಲೋಕವನ್ನು ಕಾಣಲು ಕಾತರಿಸುತ್ತಿರುವ ನಿನ್ನನ್ನು ನಾನೇ ಕೈಯಾರ ಕೊಲ್ಲುತ್ತಿದ್ದೇನೆ ಮನ್ನಿಸು.

ನನ್ನ ಈ ತೃಣಮಾತ್ರ ಜೀವದಿಂದ ಕೋಟೆಯ ಬಾಗಿಲು ನಿಲ್ಲುತ್ತದೆ. ಸಾವಿರಾರು ಪ್ರಜೆಗಳು ಸುರಕ್ಷಿತರಾಗುತ್ತಾರೆ. ನೂರಾರು ಸ್ತ್ರೀಯರ ಮಾನ-ಮಾಂಗಲ್ಯಗಳು ಜೋಪಾನವಾಗುತ್ತವೆ, ಎಷ್ಟೋ ಮಕ್ಕಳ ತಬ್ಬಲಿತನ ತಪ್ಪುತ್ತದೆ. ನಾನು ಎಷ್ಟು ಪುಣ್ಯವಂತೆ!

ನಿನ್ನ ಪಾದಸೇರುವ ಮುನ್ನ ಅಂತಿಮಪ್ರಾರ್ಥನೆ ತಾಯೇ! ಎಂದೆಂದಿಗೂ ನಮ್ಮ ಮಾವ ಕೆಂಪೇಗೌಡರ ಕುಲವನ್ನು ಶಾಶ್ವತಗೊಳಿಸು. ಅವರ ರಾಜ್ಯಕ್ಕೆ ಸುಖ-ಸಂತೋಷಗಳನ್ನು ಶರುಣಿಸು. ಕ್ಷಾಮ-ಡಾಮರಗಳು, ರೋಗ-ರುಜಿನಗಳು ಈ ನಾಡನ್ನು ಕಾಡದಿರಲಿ. ಶತ್ರುಗಳು ಈ ನಾಡನ್ನು ಹೊಗದಿರಲಿ. ಬೆಂಗಳೂರಿನ ಕೀರ್ತಿ ಹತ್ತುಕಡೆ ಹರಡಲಿ! ತಾಯೇ, ಜನ್ಮ ಜನ್ಮಕ್ಕೂ ನನ್ನನ್ನು ಇದೇ ಕುಲಕ್ಕೆ ಸೇರಿಸು! ನನ್ನ ರಕ್ತವೇ ಈ ಊರಿನ ಕಡೆಯ ರಕ್ತತರ್ಪಣವಾಗಲಿ .....

ತಾಯೇ, ಮಹಾಕಾಳಿ.....

(ತನ್ನನ್ನೇ ಇರಿದುಕೊಂಡು ಬೀಳುವಳು)

× × × ×

(ಮರುದಿನ ಬೆಳಗ್ಗೆ)

ಮುಲ್ಲವ್ವ:— (ಓಡಿ ಬಂದು) ಬುದ್ದೀ, ಬುದ್ದೀ.... ...

ಕೆಂಪೇಗೌಡ:— ಓ, ನೀನಾ ಮುಲ್ಲವ್ವಾ, ಏನು?

ಮುಲ್ಲವ್ವ:— ಬುದ್ದೀ, ಲಕ್ಷ್ಮವ್ವ ಅವರು ಕೋಣೇಲಿ ಇಲ್ಲ ಬುದ್ದೀ.

ಕೆಂಪೇಗೌಡ:— ಆ, ಏನಂದೆ, ಲಕ್ಷ್ಮಿ ಇಲ್ಲವೇ?

ಮುಲ್ಲವ್ವ:— ಔದು ಬುದ್ದೀ, ರಾತ್ರಿ ಮನೀಕ್ಕೊಳೋವಾಗ ನೋಡಿವ್ನಿ.

ಮಂತ್ರಿ:— (ಓಡಿ ಬಂದು) ಮಹಾಸ್ವಾಮೀ, ಮಹಾಸ್ವಾಮೀ, ಅನಾಹುತ.... ....

ಕೆಂಪೇಗೌಡ:— ಏನು ಮಂತ್ರಿಗಳೇ ಏನಾಯಿತು?

ಮಂತ್ರಿ:— ಪ್ರಭು, ತಮ್ಮ ಸೊಸೆ ಲಕ್ಷ್ಮಮ್ಮನವರು, ಕಾಳಿಯ ಗುಡಿಯಲ್ಲಿ....

ಕೆಂಪೇಗೌಡ:— ಏನು ಲಕ್ಷ್ಮಿಯೇ? ನಡೆಯಿರಿ. (ಹೋಗುವರು)

(ಕಾಳಿಯ ಗುಡಿ. ಜನರ ಗುಂಪು. ಕೆಂಪೇಗೌಡನು ಬರುತ್ತಾ ಸದ್ದು ಕಡಿಮೆಯಾಗುವುದು.)

ಕೆಂಪೇಗೌಡ:— (ಓಡಿಬಂದು) ಲಕ್ಷ್ಮಿ, ಲಕ್ಷ್ಮಿ, ಏನು ಕೆಲಸ ಮಾಡಿಬಿಟ್ಟೆ? ಚೆನ್ನದಂತಹ ಹುಡುಗಿ ಅಂತ ಮನೆಗೆ ಸೊಸೆಯಾಗಿ ತಂದೆನಲ್ಲೇ ತಾಯಿ ನಿನ್ನ! ಮೊಮ್ಮಗನ ಮುಖ ಕಾಣುತ್ತೇನೆ ಅಂತ ಆಸೆಪಡುತ್ತಾ ಇದ್ದೆ. ಅದಕ್ಕೆ ಕಲ್ಲುಹಾಕಿದೆ. ನಿನ್ನ ಅಪ್ಪ ಅಮ್ಮ ಈ ವಿಷಯ ಕೇಳಿದರೆ ಏನು ಹೇಳಿಯಾರು? ಹೂವಿನಂತಹ ಹುಡುಗಿಯನ್ನು ನುಂಗಿ ನೀರು ಕುಡಿದ ಪಾಪಿ ನಾನು ಎನ್ನುವುದಿಲ್ಲವೇ?

ಮಂತ್ರಿ:— ಪ್ರಭು, ಆಕೆ ಮಾಡಿರುವುದು ಮಹತ್ಕಾರ್ಯ. ಊರಿನ ಜನದ ಸಂಕಟಪರಿಹಾರಕ್ಕಾಗಿ ತನ್ನ ಜೀವವನ್ನೇ ಕೊಟ್ಟು ಮಹಾ ಉಪಕಾರ ಮಾಡಿದ್ದಾಳೆ. ದುಃಖಿಸಿ ಆಕೆಯ ಆತ್ಮಕ್ಕೆ ತೊಂದರೆ ಮಾಡಬಾರದು.

ಕೆಂಪೇಗೌಡ:— (ದುಃಖದಿಂದ) ನಿಜ, ದುಃಖಿಸಬಾರದು. ಹಾಕಾಳೀ, ಈಗ ತೃಪ್ತಿಯಾಯಿತೇ ?

ಲಕ್ಷ್ಮೀ, ನೀನು ಈ ದಿನ ತ್ಯಾಗಗಳಲ್ಲಿ ಮಹಾತ್ಯಾಗ ಮಾಡಿ, ಜಗಡಿಗೆ ಸೇವೆ ಸಲ್ಲಿಸಿದ್ದೀ. ನಿನ್ನ ತ್ಯಾಗದ ಮಹದುದ್ದೇಶ ನಿಷ್ಫಲ. ಆಗದಿರಲಿ. ನಿನ್ನ ಆತ್ಮಜ್ಯೋತಿ ಈ ಕನ್ನಡ ನಾಡಗುಡಿಯಲ್ಲಿ ಬೆಳಗಿ ಎಂದಿಗೂ ಬೆಳಗಲಿ. ಕನ್ನಡ ರಮಣಿಯರು, ಕನ್ನಡ ವೀರವುರುಷ ರಿಗಿಂತ ಎಷ್ಟು ಮಾತ್ರಕ್ಕೂ ಕಡಿಮೆ ಇಲ್ಲ ಎಂಬುದಕ್ಕೆ ಇದೇ ಸಾಕ್ಷಿ. ಈ ತುಚ್ಛ ದೇಹ ನಶ್ವರ, ಈ ಲೋಕದ ರಾಜ್ಯಗಳು ನಶ್ವರ. ಇಂದು ಇದ್ದು ನಾಳೆ ಇಲ್ಲವಾಗುವಂತಹವು. ನಾನು ಇಂದಲ್ಲ ನಾಳೆ ಹೋಗುತ್ತೇನೆ. ಈ ರಾಜ್ಯ ಇಂದಲ್ಲ ನಾಳೆ ನಾಶವಾಗುತ್ತದೆ. ಆದರೆ ನಿನ್ನ ಮಹಾತ್ಯಾಗದ ಕಥೆ ಮಾತ್ರ ಬೆಂಗಳೂರಿನ ಇತಿಹಾಸದಲ್ಲಿ ಮಾತ್ರವಲ್ಲ, ಇಡೀ ಲೋಕದ ವೀರಮಹಿಳೆಯರ ಇತಿಹಾಸದಲ್ಲಿ ಬರೆಯಲ್ಪಡುತ್ತದೆ. ಲಕ್ಷ್ಮೀ, ನಿನ್ನ ಬಾಳದೀವಿಗೆ ನಾಡಿನ ಎಲ್ಲರ ಹೃದಯದ ಅಂಧಕಾರವನ್ನೂ ನೀಗಿಸುವ ದಿವ್ಯ ನಂದಾದೀಪವಾಗಲಿ. ಹೋಗಿ ಬಾ, ಲಕ್ಷ್ಮೀ, ಹೋಗಿಬಾ.

(ಜನರೆಲ್ಲರೂ ' ಜಯ ಲಕ್ಷ್ಮಮ್ಮ ! ' ಎಂದು ಕೂಗುವರು.)

ದೇಗುಲದಲ್ಲಿ....

ಶ್ರೀ. ಕೆ. ಜಿ. ಕೃಷ್ಣಭಟ್ಟ, ಪೆರಡಾಲ ಪ. ಕ.

೧

ದಿವ್ಯ ದೇಗುಲದಲ್ಲಿ ದೇವ ! ನೀನಿಹೆಯೆಂದು
ಭಾವಿಸುತೆ, ತವ ಪುಣ್ಯದರ್ಶನಂಬಡೆದು,
ಜೀವನದ ಸಾರ್ಥಕ್ಯ ಪಡೆವೆನೆಂಬುತ್ಸಹದಿ
ಧಾವಿಸಿದೆನೆನಿತಾನು ಹೆರವಾರಿ ದೂರ.

೨

ಪಯಣದಲಿ ಬಂದೆಡರು–ತೊಡರುಗಳಿಗೆಣೆಯುಂಟೆ ?
ಹಸಿವು–ತೃಷೆಗಳ ಸಹಿಸಿ, ನಿಷ್ಠೆಯಂ ತೋರೆದು
ಬಳಲಿದೆನು; ತೊಳಲಿದೆನು; ಅದೊಡೇನಿದನೆಲ್ಲ
ಗಣಿಸದಿರ್ದೆನು ನಿನ್ನ ದರ್ಶನೋತ್ಸಹದಿ.

೩

ಕೊನೆಗೆ ಚಿತ್ರವಿಚಿತ್ರದಿಂದೆ ರಂಜಿತಮಪ್ಪ
ಭವ್ಯ ದೇಗುಲದೆಡೆಗೆ ಬಂದು ಸೇರಿದೆನು;
ಅಲ್ಲಿ ಕಂಡುದನೆಲ್ಲ ಬಣ್ಣಿಸುವೆನೆನಲೆನ್ನ
ಲೇಖನಿಗೆ ಶಕ್ತಿಯದು ಸಾಲದಿಹುದಿಂದು.

೪

ಭಿಕ್ಷೆಗಾಗಿಯೆ ಹೊರಗೆ ಭಿಕ್ಷುಕರ ಚೀರಾಟ
ದರ್ಶನಕೆ ಪೂಜಕರ ಹೋರಾಟವೊಳಗೆ;
ಹೊಲಬುದಪ್ಪಿದ ಹುಲ್ಲೆ ಬೇಡನಾ ಬಲೆಯಲ್ಲಿ
ಸಿಲುಕಿದಂತಾಯ್ತೆನ್ನ ವಸ್ಥೆಯುಂದಲ್ಲ.

೫

ಎಲ್ಲಿ ನೋಡಿದಡಲ್ಲಿ ಭಕ್ತರೆನ್ನುವ ನಿನ್ನ
ಸುಲಿಗೆಗಾರರ ತಂಡ ಮುತ್ತಿಕೊಂಡಿಹುದು;
ನಿನ್ನ ಹೆಸರಲ್ಲಿವರು ನಡೆಸುವನ್ಯಾಯಕದ-
ಲೆಲ್ಲಿಯೆಲ್ಲಿಹುದಯ್ಯೋ ! ನೀನಿಹೆಯ ಅಲ್ಲಿ !

೬

ಕೊನೆಗೊಮ್ಮೆ ಹುಟ್ಟೂರ ಸೇರಿದರೆ ಸಾಕೆಂದು
ಮನದೊಳೇ ಭಾವಿಸುವ ಬನ್ನವಾಯ್ತೆನಗೆ;
ಈ ಕಟುಕಜನರೆಡೆಯೊಳೆಂತು ವಾಸಿಪೆ ನೀನು ?
ನಾನೊಲ್ಲೆ ನಿನ್ನ ಸಾನ್ನಿಧ್ಯವಲ್ಲಿಹುದ.

೭

ಭವ್ಯಮಂದಿರದಲ್ಲಿ ! ದಿವ್ಯದೇಗುಲದಲ್ಲಿ !
ದಿವ್ಯ ಮೂರ್ತಿಯೆ ! ನಿನ್ನ ದರ್ಶನವು ಬೇಡ;
ಮುರುಕು ಗುಡಿಸಲು ಎನ್ನ ಹೃದಯವಲ್ಲಿಯೆ ನೆಲಸು !
ದರ್ಶನವ ಪಡೆದಿಲ್ಲಿ ನಾ ಪುನೀತನಹೆ.

ದೂರದ ಬೆಟ್ಟ*

(ಪುಸ್ತಕಾವಲೋಕನ)

ಶ್ರೀ. ಲಕ್ಷ್ಮಣ ಜೋಶಿ ಬಿ ಎ, ಬಿ. ಇಡಿ ಕೂಡ್ಲಿಗಿ

●

" ದೂರದ ಬೆಟ್ಟ"ದಲ್ಲಿ ಶ್ರೀಮತಿ ತ್ರಿವೇಣಿಯವರು ಹಿಂದು ಸಮಾಜದಲ್ಲಿಯ, ಅದರಲ್ಲಿಯೂ, ಬ್ರಾಹ್ಮಣ ಸಮಾಜದಲ್ಲಿಯ ಸ್ತ್ರೀಯರ ಸ್ಥಾನವನ್ನು ನಿರೂಪಿಸಲು, ಅವರ ವಿವಿಧ ಸಮಸ್ಯೆಗಳನ್ನೂ ಉತ್ತಮ ರೀತಿಯಲ್ಲಿ ಬಗೆಹರಿಸಲು ಯತ್ನಿಸಿರುವರು; ದೇಶ-ಕಾಲಾನುಗುಣವಾಗಿ ಸಮಾಜಧರ್ಮವು ಮಾನವೀಯತೆಯ ಅಂಶವನ್ನು ಜೀಗೆ ಹೆಚ್ಚುಹೆಚ್ಚಾಗಿ ಅಳವಡಿಸಿಕೊಳ್ಳುವುದೆಂಬುದನ್ನು ಸುಮನೋಹರರೂಪದಲ್ಲಿ ಚಿತ್ರಿಸಿರುವರು. ಇಂದಿನ ಸಮಾಜದಲ್ಲಿ,— ಅನೇಕ ಸಂಸ್ಕೃತಿಗಳ ಸಂಪರ್ಕಪ್ರಭಾವದಿಂದ ಪರಿವರ್ತಿತವಾಗುತ್ತಿರುವ ಸಮಾಜದಲ್ಲಿ—ಬದಲಾವಣೆಗಳಾಗುತ್ತಿರುವುದು ಸಹಜವಾದರೆ, ಅದು ಸುಂದರವೂ ಜೀವನದ್ಯೋತಕವೂ ಆಗುವುದು; ಇಲ್ಲವಾದರೆ, ಆ ಸಮಾಜದ ರೂಪರೇಷೆಗಳು ಕಡಿದು, ಪ್ರಗತಿಪಥದಲ್ಲಿ ರಭಸದಿಂದುರುಳುತ್ತ ಸಾಗಿರುವ ಕಾಲಚಕ್ರದ ಭ್ರಮಣದಿಂದುತ್ಪನ್ನವಾದ ಝಂಝಾವಾತಾಹತಿಗಳಿಗೊಳಪಟ್ಟು, ನುಚ್ಚುನೂರಾಗುತ್ತವೆ.

ಇಂತಹ ಸಮಸ್ಯೆಗಳಲ್ಲಿ ವಿಧವಾವಿವಾಹವು ಮಹಾ ಹೃದಯವಿದ್ರಾವಕ ಸಮಸ್ಯೆಯಾಗಿ, ಬೃಹದಾಕಾರವನ್ನು ತಳೆದು ಬೆಳೆಯುತ್ತ ಹೋಗುವ ಸಮಸ್ಯೆಯಾಗಿದೆ. ವೈಧವ್ಯವು ವಿಧಿಲಿಖಿತವೆಂದು ವಿಪರೀತವಾಗಿ ಚಿಕ್ಕವಯಸ್ಕಳನ್ನು ಸರ್ವವಿದಿತ ಕಠಿಣ ಪರಿಸ್ಥಿತಿಗಳಿಗೊಳಪಡಿಸುವುದು ಧರ್ಮವೋ ಮಾನವೀಯತೆಯೋ ಯೋಚಿಸಲಾಗದು. ಆ ವಿಧವೆ ಮನೆಯ ಮಗಳಾದಾಗ, ವಿದ್ಯಾವತಿಯೂ ಸುಂದರಿಯೂ ತರುಣಿಯೂ ಆದಾಗ, ತಂದೆ-ತಾಯಿಗಳಿಗಾಗುವ ನೋವು ಅವರ್ಣನೀಯವು—ಅಸಹನೀಯವು. ಆಗ ಅವರದನ್ನು ಮಾನವೀಯತೆಯಿಂದ ನೋಡಲು ತೊಡಗುವರು.

ಈ ಕಾದಂಬರಿಯಲ್ಲಿ ಕಾಣುವ ಸುನಂದಾ ವಿದ್ಯಾವತಿ. ೧೯ನೆಯ ವಯಸ್ಸಿನಲ್ಲಿಯೇ ಸುಂದರನಾದ — ಸುಸಂಸ್ಕೃತನಾದ — ಅವಳ ಸ್ನೇಹಿಯನ್ನು ಪಡೆದ—ಪತಿಯನ್ನು ಕಳೆದುಕೊಂಡು ವಿಧ್ವೆಯಾಗುವಳು. ಕೊನೆಗೆ ಓದನ್ನು ಮುಂದುವರಿಸುವಳು. ಅವಳ ದುಃಖದ ಶಮನೋಪಾಯವಾಗಿ ವಿದ್ಯಾಭ್ಯಾಸವು ಉಪಾಯದಿಂದ ವ್ಯವಸ್ಥಿತವಾಯಿತು. ಬಿ. ಎ. ಮುಗಿಸುವುದರೊಳಗೆ ಅರಕ್ಷಿತ ವನಕುಸುಮದತ್ತ ಕಾಮಿಗಳ ಆಶೆ ಹೇಗೆ ಕೈಚಾಚುವುದೆಂಬುದರ ಅರಿವಾಗುವುದು. ಬಿ. ಟಿ. ಮುಗಿಸಿಕೊಂಡನಂತರ ಮಹಾರಾಣಿಯವರ ಪಾಠಶಾಲೆಯಲ್ಲಿ ಉಪಾಧ್ಯಾಯಿನಿಯಾಗಿ ಸೇರುವಳು.

ಸೀತಾರಾಮು ತನ್ನ ತಂಗಿಯ ಮಾನಸಿಕ ವ್ಯಥೆಯನ್ನು ತೊಲಗಿಸಲೋಸುಗವೇ, ಅವಳಿಗೆ ಅನುಮಾನವಾಗದಂತೆ, ಇದು ಪೂರ್ವಯೋಜಿತವೆಂಬ ಶಂಕೆ ಹುಟ್ಟದಂತೆ, ತನ್ನ ಮಿತ್ರನಾದ ಶ್ರೀಧರನ ಸ್ನೇಹವನ್ನು ತಂಗಿಗೆ ಒದಗಿಸುವನು. ಉದ್ದೇಶಪೂರ್ವಕವಾಗಿಯೇ ಜಾಣತನದಿಂದ ಸನ್ನಿವೇಶಗಳನ್ನು ಕಲ್ಪಿಸಿಕೊಟ್ಟು, ಅವರಿರ್ವರ ಪರಿಚಯವು ಸ್ನೇಹವಾಗಿಯೂ ಅದು ಪ್ರೇಮವಾಗಿಯೂ ಪರಿವರ್ತಿತವಾಗಲು, ಅವರಿರ್ವರ ಸಹವಾಸಕ್ಕೆ ದೋಹದವನ್ನೇ ಕೊಡುತ್ತಲಿರುತ್ತಾನೆ. ಹೀಗಾಗಿ ಶ್ರೀಧರನನ್ನು ಮದುವೆಯಾಗಲು ಒಪ್ಪುವ ಹದಕ್ಕೆ ಬರುವಳು ಸುನಂದಾ.

ಪತಿಯ ವಿಯೋಗದಿಂದ ತಪ್ತವಾದ ಸುನಂದೆಯ ಹೃದಯವು ಐದು ವರುಷಗಳಿಂದಲೂ ಒಳಗೊಳಗೆ ಕುದಿಯುತ್ತಲಿದ್ದಿತು. ಬಾಹ್ಯ ಪ್ರವೃತ್ತಿಗಳೆಲ್ಲವೂ ಕೊನೆಗೆ ಶ್ರೀಧರನತ್ತ ಹರಿದಿದ್ದರೂ, ಆಂತರಿಕ ವೃತ್ತಿಗಳಲ್ಲಿ ಹುದುಗಿದ್ದ ಶೇಖರನ ಮೇಲಿನ ಪ್ರೀತಿ-ವಿಶ್ವಾಸಗಳು, ಅವಳಿಗೆ ತಿಳಿಯದಲೆ ಕೆಲಸಮಾಡುವುವು. ಶ್ರೀಧರನನ್ನು ಮದುವೆಯಾಗಲು ಒಪ್ಪಿದ ಮೇಲೆ, ಅವಳು ಒಮ್ಮೆಲೇ ವಿಹ್ವಲಚಿತ್ತಳಾಗುವುದಕ್ಕೆ ಕಾರಣವಿದೆ. ಆತ್ಮಹತ್ಯೆಯೂ ಆಗಿಬಿಡುತ್ತಿತ್ತು. ಅವಳ ಸಿಡುಕುತನ ಒಮ್ಮೆಲೆ ತಲೆದೋರಿದುದು ಮನೆಯಲ್ಲಿ ಎಲ್ಲರಿಗೂ ಮತ್ತು ಅವಳಿಗೂ ಆಶ್ಚರ್ಯವೇ ಆಗುತ್ತದೆ. ಕೊನೆಗೆ ಶೇಖರನ ನೆನಪು ತಂದುಕೊಡುವ ವಸ್ತುಗಳೊಂದೊಂದಾಗಿ ಮಾಯವಾಗುವುದರ ಸಮಸ್ಯೆ ಅವಳನ್ನು ಕಾಡುವುದು. ಮನೋವಿಜ್ಞಾನಿಯ ಸಹಾಯದಿಂದಲೂ, ಅಣ್ಣನ ಸಹಕಾರದಿಂದಲೂ ಅವಳ ವ್ಯಥೆಯ ಮೂಲಕಾರಣವು ಬಯಲಾಗಿ, ಅವಳು ಸ್ವಸ್ಥಳಾಗಿ, ಶ್ರೀಧರನನ್ನು ತನ್ನ ಜೀವನಲತೆಗೆ ಆಧಾರವಾಗಿ ಆಶ್ರಯನವಾಗಿಸಿಕೊಳ್ಳುವಳು.

ಇಷ್ಟು ಕಾದಂಬರಿಯ ಮುಖ್ಯಾಂಶ. ಇದರ ಪ್ರೌಢಕವಾಗಿ ಬ್ರಾಹ್ಮಣಸಮಾಜದಲ್ಲಿಯ ಕೆಲವು ಸಂಪ್ರದಾಯಸಿದ್ಧರ ವಿಪರೀತ ನರ್ತನೆಗಳು, ಇಂದಿನ ಸಹವಿದ್ಯಾಭ್ಯಾಸದ ದೋಷಗಳು, ವಿಧವೆಯಾದ ವಿದ್ಯಾವತಿಯಾದ ರೂಪಸಿಯೆಂದರೆ ಕಳಾಶಾಲೆಯ ವಿದ್ಯಾರ್ಥಿಗಳೆಲ್ಲ ಬಯಸಬಹುದಾದ ವಸ್ತುವೆಂಬ ಮನೋಭಾವನೆ ಅಂತೂ ಸ್ತ್ರೀಗೆ ಸೌಂದರ್ಯಸಂಪತ್ತಿದ್ದಿತೆಂದರೆ ಅದರ ರಕ್ಷಕನೊಬ್ಬನಿರಲೇಬೇಕೆಂಬ ಮಾತು, ಬಾಲಿಕೆಯರ ಪಾಠಶಾಲಾ ವಾತಾವರಣ, ಮಕ್ಕಳ ವಿದ್ಯಾಶಕ್ತಿಗಳನ್ನು ಗಮನಿಸುವ ತಂದೆ-ತಾಯಿಗಳ ಕರ್ತವ್ಯ, ಸ್ತ್ರೀಯರಲ್ಲಿಯ ಪರಸ್ಪರ ಪ್ರೇಮವ್ಯವಹಾರ, ವಿದ್ಯೆಯಿಂದ ಸ್ತ್ರೀಯು ತನ್ನ ಸಹಜಗುಣಗಳಾದ ನಾಚಿಕೆ, ವಿನಯ, ಭೀರುತನ ಅಭಿಮಾನ — ಮೊದಲಾದುವುಗಳನ್ನು ಕಳೆದುಕೊಳ್ಳುವಳೆಂಬುದು ಅರ್ಥವಿಲ್ಲದ ಅಪವಾದನೆಯೆಂಬುದು, ವಿದ್ಯಾಭಾಸಕ್ರಮದಲ್ಲಿ ಗುರುಗಳ ಸ್ಥಾನ, ಕರ್ತವ್ಯ, ಮುಂತಾದ ಅನೇಕ ವಿಷಯಗಳನ್ನು ಅತಿ ಸೂಕ್ಷ್ಮವಾಗಿ—ಅನುಷಂಗಿಕವಾಗಿ—ಸುಂದರವಾಗಿ—ಸರಳವಾಗಿ—

---

* ಇದೊಂದು ಸ್ವತಂತ್ರ ಸಾಮಾಜಿಕ ಕಾದಂಬರಿ. ಶ್ರೀಮತಿ ತ್ರಿವೇಣಿ ಅವರು ಇದರ ಲೇಖಿಕೆಯರು.

ಸೂಕ್ಷ್ಮವಾಗಿ, ಪರಿಣಾಮಕಾರಿಯಾಗಿ ಲೇಖಕಿಯರು ಜೋಡಿಸಿರುವರು.

ಹೆಣ್ಣು ಎಂದರೆ ಒಂದು ಉಪಭೋಗಯೋಗ್ಯ ವಸ್ತುವೆಂಬ ಭಾವನೆ, ಇತ್ತೀಚೆಗೆ ನಮ್ಮ ಸಮಾಜದಲ್ಲಿ ನೆಲೆಯೂರಿದ್ದು, ಪುರುಷರ ಪ್ರಾಮುಖ್ಯತೆಯನ್ನೇ ಹೆಚ್ಚಾಗಿ ಕೂಡಿಸಿಟ್ಟುಕೊಂಡು ಬರುತ್ತಿರುವ ಸಮಾಜದಲ್ಲಿ, ಲೇಖಕರು ತಮ್ಮ ಅನುಭವ, ಕಲ್ಪನಾಶಕ್ತಿಗಳ ಆಧಾರದ ಮೇಲೆಯೇ ಸ್ತ್ರೀ ಚರಿತ್ರಚಿತ್ರಣವನ್ನು ಗೈಯುತ್ತ ಬಂದು, ಸ್ತ್ರೀಯ ಸಹಜ, ಪುರಿದರ, ಮುಗ್ಧರ ವಿಶಾಲಮನೋಭೂಮಿಕೆಯನ್ನು ಸಲಿಯಾಗಿ ಒಕ್ಕಣಿಸುವುದು ಅಷ್ಟೊಂದು ಸರಳವೆನಿಸುವುದಿಲ್ಲ. ಇತ್ತೀಚೆಗೆ ಶ್ರೀಮತಿ ಸಾವಿತ್ರಮ್ಮ, ಶ್ರೀಮತಿ ತ್ರಿವೇಣಿ ಮುಂತಾದ ಕಥೆ-ಕಾದಂಬರಿಕಾರ್ತಿಯರು, ಕನ್ನಡ ಸಾಹಿತ್ಯೋದ್ಯಾನದಲ್ಲಿ ಸ್ತ್ರೀಯ ಗುಣಸೌರಭವನ್ನು ಬೀರುತ್ತಿರುವ ಬಳ್ಳಿಗಳಂತೆಸೆಯುತ್ತಿರುವರು. ಇವರು ಸ್ತ್ರೀಯ ಮಾನಸಿಕ ವ್ಯವಹಾರವನ್ನು ಸೊಗಸಾಗಿ ಪ್ರತಿಬಿಂಬಿಸುವ ಮುಕುರದಂತಿರುವರು. ಇಂತಹರ ಲೇಖನಿಯಿಂದ ಕನ್ನಡಸಾಹಿತ್ಯದೇವಿಯು ಸರ್ವಾಂಗೀಣ ಸುಂದರವಾಗಿ ಚಿತ್ರಿತವಾಗುವುದರಲ್ಲಿ ಸಂದೇಹವಿಲ್ಲ. ಇಲ್ಲಿಯವರೆಗೂ ಬರಿಯ "ಪುರುಷಸರಸ್ವತಿ"ಯಂದ ಪ್ರಜ್ವೋದಿತವಾದ ಸಾಹಿತ್ಯಾಂಗನೆ, ತನ್ನ ಪೂರ್ಣ ರೂಪವನ್ನು ಪಡೆಯದೇ ಇದ್ದು, ಇಂದು "ಸ್ತ್ರೀಸರಸ್ವತಿ"ಯರ ಸಹಯೋಜನೆಯಿಂದ ತನ್ನ ವ್ಯಕ್ತಿತ್ವವನ್ನು ಪೂರ್ಣಮಾಡಿಕೊಳ್ಳುವಳೆಂದು ನನ್ನ ವಿಶ್ವಾಸ.

ಪುರುಷರು ತಮ್ಮ ದೃಷ್ಟಿಯಲ್ಲಿ ಸ್ತ್ರೀಯು ಸಮಾಜದಲ್ಲಿ ಹೇಗಿರಬೇಕೆಂದು ಹೇಳುತ್ತಿದ್ದರೇ ಆಗಲಿ, ಸ್ತ್ರೀಯು ಹೇಗಿರುವಳು, ಅವಳು ಪುರುಷರನ್ನು ಹೇಗಿರಲು ಇಚ್ಛಿಸುವಳು, ಅವಳು ಮಾನ-ಅಭಿಮಾನಗಳೇನು, ಎಂಬುದರ ಬಗ್ಗೆ ಸೌಹಾರ್ದದಿಂದ ಬರೆದುದಿಲ್ಲ. ಸ್ತ್ರೀಯಾಗಿ ಅನುಭೂತಿಯಿಂದ ಸ್ತ್ರೀಯನ್ನು ಪರಿಕಿಸಿದ ಪುರುಷರಿಲ್ಲ. ಅಂಥವರು ಅತಿವಿರಳ. ಅಷ್ಟು ಸಾಲದು.

ವ್ಯಕ್ತಿಚಿತ್ರಣದಲ್ಲಿ ಶ್ರೀಮತಿ ತ್ರಿವೇಣಿಯವರು ನಿಪುಣರು ಇವರ ವ್ಯಕ್ತಿಗಳು ತಮ್ಮ ವ್ಯಕ್ತಿತ್ವದಿಂದಲೇ ಓದುಗರ, ಸಮಾಜದ ಮನವನ್ನು ಸೆಳೆಯುವರು. ಹೆಚ್ಚಿನ ಮಾತುಗಳನ್ನಿವರು ಬಳಸದೆ ಅವರ ಸ್ವಭಾವನವನ್ನು ಅವರವರ ಸಂಭಾಷಣೆಗಳಲ್ಲಿ, ಅವರ ಸೂಕ್ಷ್ಮತಾನಾಗಿ ಸೂಚಿಸಲ್ಪಡುವ ನಡೆನಳಿಯಿಂದ ತೋರಿಸುವರು.

ಶೇಖರನ ಮನಂದಾಳೊಂದಿಗಿನ ಸಹಜೀವನ ಅತ್ಯಲ್ಪ ಕಾಲದ್ದಾದರೂ ಎಷ್ಟು ಪರಿಣಾಮಕಾರಿಯಾಗಿದೆ! ಕಲಿತ ರಸಿಕಳಾದ ನವತರುಣಿ ಸುನಂದೆಯನ್ನು ಮೆಚ್ಚಿಸುವಂತಹ ಶೇಖರನನ್ನು ಚಿತ್ರಿಸಿ, ಅಲ್ಪಾವಧಿಯಲ್ಲೇ ಚಿರಸ್ಥಾಯಿಕ ಪರಿಣಾಮವನ್ನುಂಟುಮಾಡುವಂತೆ ಅವನನ್ನು ಚಿತ್ರಿಸಿ, ಅನರ್ವಿರ ಬಾಳನ್ನು ಭಗ್ನಗೊಳಿಸಿ ಅದರ ಅಗಾಧಪರಿಣಾಮವನ್ನ ಕಾದಂಬರಿಯ ಕೊನೆಯವರೆಗೂ, ಮೊದಲಿಗೆ ವ್ಯಕ್ತವಾಗಿ ಅನಂತರ ಅದು ಗುಪ್ತವಾಗಿ ಅವ್ಯಕ್ತವಾಗುವಂತೆ ಯೋಜನೆ ಮಾಡಿಕೊಂಡು, ಸುನಂದಾಳ ವ್ಯಕ್ತಿಚಿತ್ರಣಕ್ಕೆ ನಡೆದಿರುವರು ಶ್ರೀಮತಿಯವರು.

ವಿದ್ಯಾವತಿ, ಯುವತಿ, ಸುಂದರಿಯಾದ ವಿಧವೆ ಸುನಂದೆಯ ವ್ಯವಹಾರವನ್ನು ನಿಜವಾಗಿಯೂ, ಸಹಜವಾಗಿಯೂ ಚಿತ್ರಿಸಿರುವರು. ಅನಳಲ್ಲಿ ತಾರುಣ್ಯದ ಹೊನಲಿನ ಭಾವನಾತರಂಗಗಳನ್ನು ತಡೆಗಟ್ಟುವ ವ್ಯಾವಹಾರಿಕ ಸಂಯಮವಿದೆ. ವಿಧವೆಯಾಗಿ ತುಂಬಲಾರದ ನಷ್ಟವನ್ನು ಪಡೆದು ಮುದುಕಿಯ ಮನೋಭಾವನೆಯನ್ನು ತಳೆದು, ತನ್ನ ಪತಿಯ ವಿಯೋಗಾನಲದಲ್ಲಿ ದಗ್ಧಳಾಗುತ್ತಿದ್ದರೂ ವಿರಕ್ತಿಯನ್ನು ತಂದುಕೊಂಡ ಸುನಂದೆಯಲ್ಲಿ, ಕಾಲಕ್ರಮೇಣ, ಸಾವಕಾಶವಾಗಿ ತರುಣಭಾವನೆಗಳು ಪಲ್ಲವಿಸುವಂತೆ ಅವಳ ಅಣ್ಣನು ತಾಯಿಯನ್ನು ಒಪ್ಪಿಸಿ, ಶ್ರೀಧರನ ಸಹವಾಸದ ಸಹಜಸನ್ನಿವೇಶವನ್ನು ಕಲ್ಪಿಸುವನು. ಶ್ರೀಧರ-ಸುನಂದಾರ ಪಾರಸ್ಪರಿಕ ವ್ಯವಹಾರವು ಎಷ್ಟು ಕೋಮಲ, ಎಷ್ಟು ವಿನಯಸಂಪನ್ನ, ಶೀಲಮಯ ಸಂಯಮಯುತ! ಶ್ರೀಧರನು ಸುನಂದೆಯ ಮನವನ್ನು ತನ್ನೆಡೆಗೆ ಸೆಳೆದುಕೊಂಡ ವಿಧಾನವು ಅತ್ಯಂತ ಸಹಜ ಮತ್ತು ಉತ್ತಮವಾಗಿದೆ. ಹೆಣ್ಣಿಗೆ ಮನಸೋತರೂ ಸಂಯಮಿಸಿ ಸಮಯವನ್ನರಿತು ತನ್ನಿಚ್ಛೆಯನ್ನು ಪ್ರಕಟಗೊಳಿಸುವ, ಸರಳವಾಗಿ ಸೋಲನ್ನೇ ಗೆಲವನ್ನಾಗಿ ಸವಿಯಾಗಿ ಪರಿವರ್ತಿಸಿಕೊಳ್ಳುವ ಶ್ರೀಧರನ ವ್ಯಕ್ತಿಚಿತ್ರಣ ಮನೋಜ್ಞವಾಗಿದೆ. ಸುನಂದಳು ತನ್ನಲ್ಲಿ ಉಂಟಾಗುತ್ತಿದ್ದ ಮೋಹಾಚ್ಛನ್ನ ಪರಿಕಿಸಿ, ಅದಕ್ಕೆ ಬಳವಡಿಸಿಕೊಳ್ಳುವುದು ಉಚಿತವೇ ಎಂಬ ಯೋಜನೆಗೆ ಒಲುಕಿ, ಶ್ರೀಧರನ ಅಸಾಧಾರಣ, ಮನಮೋಹಕ, ಸಪ್ಪದಯತಾಭಾವಪೂರ್ಣ, ವ್ಯಕ್ತಿತ್ವದ ಪರಿಣಾಮದಿಂದ ಬಿಡುಗಡೆ ಹೊಂದಲಾರದೆ, ಕೊನೆಗೆ ಅವನನ್ನು ತನ್ನವನನ್ನಾಗಿಯೇ ಭಾವಿಸಿಕೊಳ್ಳುತ್ತಾಳೆ.

ಆದರೆ ಅವಳು ಶ್ರೀಧರನ ಸಹಧರ್ಮಿಣಿಯಾಗಬೇಕಾದರೆ ಎಷ್ಟು ದುಃಖಪಟ್ಟಿರುವಳು! ಒಂದು ಪ್ರಿಯಕರ ವಸ್ತುವನ್ನು ಕಳೆದುಕೊಂಡು, ಅದರ ಸಹವಾಸಸುಖದ ಅನುಭವಗಳನ್ನು ಮರೆತು ಬೇರೆ ವಸ್ತುವನ್ನು ಪ್ರೀತಿಸುವುದಷ್ಟು ಸುಲಭವಲ್ಲವೆಂಬುದನು ನಿರ್ದಿಷ್ಟರೂಪದಲ್ಲಿ ನಿರೂಪಿಸಿರುವ ಶ್ರೀಮತಿ ತ್ರಿವೇಣಿಯವರ ರೀತಿ ಅನುಪಮವಾಗಿದೆ ಗಂಡಸರು ಒರ್ವಳಲ್ಲ—ಇರ್ವರು ಹೆಂಡಿರನ್ನು ಕಳೆದುಕೊಂಡಂತೆಲ್ಲ, ಹಳೆಯ ಹೆಂಡತಿಯ ಸಹವಾಸದ ಸವಿನೆನಪನ್ನು ಹಿನ್ನೆಲೆಯಾಗಿಟ್ಟುಕೊರಿಡು; ಹೊಸ ಹೆಂಡತಿಯೊಡನೆ ಸುಖಭೋಗಭ್ರಮಣದಲ್ಲಿ ತಲ್ಲೀನರಾಗುವರು; ಅದು ಅವರಿಗೆ ಎನಿತೂ ಕಠಿಣವೆನಿಸದು. ಒಬ್ಬ ಪ್ರಿಯತಮನಿಗೆ, ತನ್ನ ತನುಮನಗಳನ್ನು ನಿಸ್ವಾರ್ಥಬುದ್ಧಿಯಿಂದ ಸಂಪೂರ್ಣ ಪ್ರೀತಿಯಿಂದ ಅರ್ಪಿಸಿ, ಅವನಲ್ಲಿ ತಾದಾತ್ಮ್ಯವನ್ನು ಪಡೆದವಳು, ತನ ತನುಮನಗಳನು ಸೂರೆಗೊಂಡ ತನ್ನ ಸ್ವಾಮಿಯನ್ನು ಕಳೆದುಕೊಂಡ ಮೇಲೆ, ಅತನಿಗರ್ಪಿತವಾದ ತನ್ನ ತನುಲತಾಂತವನ್ನು, ಮನಃಕುಸುಮವನ್ನು ಚಿತ್ತಮಧುಮಾಧುರ್ಯವನ್ನು ಇತರರಿಗೆ ಅರ್ಪಿಸುವುದು ನಿಜವಾಗಿಯೂ ಸಾಮಾನ್ಯವಾಗಿಯೂ ಸಾಧ್ಯವಾಗುವ ಮಾತಲ್ಲ.

ಪೂರ್ವದಿಂದಲೂ ಸ್ತ್ರೀಯರ ಮನೋಭಾವನೆ ಹಾಗೆ ಬಂದಿದೆ.

ವೈಧವ್ಯಕ್ಕಿಂತಲೂ ಪತಿಯೊಡನೆ ಸಹಗಮನವೇ ಸುಲಭವೆಂದು ಭಾವಿಸುವ ಮನೋಭೂಮಿಕೆ ಸ್ತ್ರೀಯರಲ್ಲಾಗಿದೆ. ಇಂದು ಕಾಲ-ಧರ್ಮ ಬದಲಾಗಿದೆ. ಅಂದಿನಿಂದಲೂ ಧರ್ಮದ ಜೊತೆಗೆ ಮಾನವತೆಯೂ ತಲೆದೋರುತ್ತ ಬಂದಿದೆ. ಇಂದು ಮಾನವತೆಯು ಹೆಚ್ಚು ಹೊಸ್ತ ಹೆಜ್ಜೆಗಳನ್ನಿಟ್ಟುಕೊಂಡು ಬಂದಿದೆ. ಧರ್ಮವೂ ದೇಶ-ಕಾಲಾನುಗತವಾಗುವುದು ಸಹಜವಿದೆ. ಧರ್ಮವ ಅರ್ಥಾನುಕರಣೆಗೆ ಬದಲು ಅಂಧಾನುಕರಣೆಯಿಂದ ಆಗುವ ಅನರ್ಥಕಾರೀ ಪ್ರಸಂಗಗಳ ಪರಂಪರೆಗೆ ತಡೆಹಾಕಲು ವಿಧವಾವಿವಾಹವೂ ಒಂದು ಪರಿಪೂರ್ಣ ಮಾರ್ಗ. ಸಮಾಜವು ಈ ಸಮಸ್ಯೆಯ ಬಗ್ಗೆ ಕನಿಕರದ ದೃಷ್ಟಿಯನ್ನು ಬೀರಬೇಕು. ಇಲ್ಲವಾದರೆ ಬಡಲಾವಣೆ ಹೊಂದುತ್ತಲಿರುವ ದ್ರುತ-ಗಮನಿಯಾದ ಇಂದಿನ ಸಮಾಜದಲ್ಲ, ಅದರ ಜೀವನದ ನೈತಿಕ ನುಟ್ಟವು ಕಡಿಮೆಯಾಗುವ ಭೀತಿ ಇದೆ. ಅದರಲ್ಲೂ ಸುನಂದಳಂತಹ ಪರಿಣೀತ ಸುಂದರ ನವತರುಣಿಯ ಗತಿಯನ್ನು ಕಂಡು ಮರುಗಿ, ಅವಳ ಮರುಮದುವೆಯನ್ನು ಮಮತೆಯಿಂದ ಮಾಡಿಸುವುದು ಸಮಾಜಕ್ಕೆ ಒಪ್ಪಿಗೆಯಾಗಬೇಕು.

ಸ್ತ್ರೀಯು ತನ್ನ ಸರ್ವಸ್ವವನ್ನು ಅರ್ಪಿಸಿ ಗಂಡನ್ನು ಮೆಚ್ಚುವಳು. ಇವಳಿಂದ ಅರ್ಪಿತವಾದುದನ್ನು ತೃಪ್ತಿಯಿಂದ ಭೋಗಿಸುವುದನ್ನು ಕಂಡರೆ–ಹೆಣ್ಣಿಗೆ ಆನಂದ. ತನ್ನ ಗಂಡನು ತನ್ನ ಶ್ರದ್ಧೆಯಿಂದಲೇ ಸೊಗಯಿಸಬೇಕೆಂಬ ಆಶೆಯಿರುತ್ತದೆ. ಅವನಿಗಾದಷ್ಟು ಶುಶ್ರೂಷೆ ಮಾಡುವ ಅತೀವ ಕೋರಿಕೆ ಅವಳದಾಗಿರುತ್ತದೆ. ಅದರಲ್ಲೂ ಯಾವುದಾದರೊಂದು ಚಿಕ್ಕ ನಿರಪಾಯಕರ ದೋಷವು ಪತಿಯಲ್ಲಿದ್ದರೆ, ಅವನ ಸಕಲ ಸದ್ಗುಣಗಳು ಎದ್ದುಕಾಣುವುವೆಂಬ ಭಾವನೆಯುಳ್ಳ ಸ್ತ್ರೀಯರಿರುತ್ತಾರೆ. ಆ ದೋಷದಿಂದಾಗುವ ಕೊರತೆಯನ್ನು ತುಂಬಿ-ಸುವ ಅವಕಾಶವು ದೊರೆತಂತೆಲ್ಲ ಅವಳಿಗೆ ಆನಂದ. ಸುಂದರ ನವಮೋಹನಾಂಗಿಯ ಮೃದು ದರ್ಪಣಸದೃಶ ಕಪೋಲದಲ್ಲಿ ಒಂದು ಕಪ್ಪನೆಯ ಚುಕ್ಕೆಯಿದ್ದರೆ, ಎಷ್ಟು ಆನಂದದಾಯಕವೋ ಹಾಗೆ, ಪತಿಗಳಲ್ಲಿ ಲೇಶಮಾತ್ರ ದೋಷವಿದ್ದರೆ ಅಷ್ಟು ಸಂಭ್ರಮಕರ ವೆಂದು ಕೆಲವರ ಅಭಿಪ್ರಾಯ. ಸುನಂದಳು ಈ ವರ್ಗಕ್ಕೆ ಸೇರಿದ ಮಳು. ಶ್ರೀಧರನ ಆ ವಿಶಾಲಲಕ್ಷಣಯುತವಾದ ಹಣೆ, ಬೊಗಸೆ-ಕಣ್ಣುಗಳು, ಉಂಗುರುಗೂದಲು, ಸೌಷ್ಠವಯುತ ದೃಢಕಾಯ, ವಿನಯಸಂಪನ್ನತೆ, ಸಂಭಾಷಣ ಕುಶಲತೆಗಳಿಂದ ಮುಗ್ಧಳಾದವಳು, ಅವನ ಮರಿವುದನ್ನು ಕಂಡು ಆನಂದಿತಳಾಗುತ್ತಿದ್ದಳು.

ಸೀತಾರಾಮುನಂತಹ ಅಣ್ಣನನ್ನು ಪಡೆದಿರುವುದು ಸುನಂದಳ ಸುಕೃತ. ಶೇಖರನು ಸತ್ತ ದುಃಖದಿಂದ ಸುನಂದಳು ತೃಪ್ತಳಾಗುತ್ತಿದ್ದರೆ, ಸೀತಾರಾಮು ದುಃಖಾತಿರೇಖದಿಂದ ಅದನ್ನು ಮರೆಯ-ಲಾರದೆ ಕೊನೆಗೆ ಕುಡಿಯಲು ಮೊದಲಿಡುವನು. ಅದನ್ನು ತಪ್ಪಿಸಲು ಮತ್ತೂ ಸುನಂದಳೇ ತನ್ನ ದುಃಖವನ್ನು ನುಂಗಿ ಅಣ್ಣನ ಬಗ್ಗೆ ಯೋಜನೆ ಮಾಡುವಳು. ಶೇಖರ ಸುನಂದಾರ ಪ್ರೇಮಮಯ ಜೀವನವು ಅಗಾಧಕೂಪದೊಳು ಬಿದ್ದು ಸುನಂದಳು ಮಾತ್ರ ಉಳಿದು ಘೋರವ್ಯಥೆಗೆ ಪಾತ್ರಳಾದಾಗ, ಅವಳ ಬಾಳ್ವೆಯನ್ನು ಹೊತನ ಕಾಸಾರದೆಡೆಗೆ ಸೇರಿಸಲು ಯತ್ನಿಸುವನು. ಅವಳು ಶ್ರೀಧರನನ್ನು ಒಪ್ಪುವಂತೆ ಆಗಲು ಕೆಲವು ವರ್ಷಗಳು ಸೂತ್ರ-ವತ್ತಾಗಿ ಯೋಜನೆಗಳನ್ನು ಸಿದ್ಧಗೊಸುತ್ತ ಪೂರ್ವಸಂಪ್ರದಾಯನಿ-ಯಾದ ತನ್ನ ತಾಯಿಯಾದ ಸುಂದರಮ್ಮನನ್ನು ಒಪ್ಪಿಸಲೋಸುಗ ವಿಶ್ವಪ್ರಯತ್ನ ಮಾಡುವನು. ತಂಗಿಯ ಭಗ್ನಜೀವನದ ಭೀಕರ ಭವಿಷ್ಯದ ದೃಶ್ಯವನ್ನು ತಾಯಿಯ ಕಣ್ಣೆದುರಿಗೆ ಕಟ್ಟುವನು. ಸುನಂದಳ ಒಣಗಿದ ಜೀವನಲತೆಯನ್ನು ಪಲ್ಲವಿಸುವಂತೆ ಮಾಡಿದ ಅಮೃತಸೇಚಕ ಸೀತಾರಾಮು. ಇದಕ್ಕೆ ಸಹಾಯಕಳಾಗಿ ಅವನ ಹೆಂಡತಿ ದಮಯಂತಿಯೂ ನಿಲ್ಲುವಳು. ಕೊನೆಗೆ ಶ್ರೀಧರನನ್ನು ಒಪ್ಪಿದನಂತರ, ಸುನಂದಳ ವಿಚಿತ್ರವ್ಯವಹಾರದ ಸಮಸ್ಯೆಯನ್ನು ಬಗೆಹರಿಸಲು ಸೀತಾರಾಮು ಕಷ್ಟಪಟ್ಟು ಜಾಣತನದಿಂದ ವ್ಯವಹರಿ-ಸುವನು.

ಈ ಕಾದಂಬರಿಯಲ್ಲಿ ವಿಧವಾವಿವಾಹವೇ ಮುಖ್ಯವಾದ ಸಮಸ್ಯೆ. "ಪ್ರಕೃತಿ"ಯಲ್ಲಿ ಶ್ರೀರಂಗರು, "ಅಭಯ"ದಲ್ಲಿ ನಿರಂಜ-ನರು. "ಕಾಲ್ತೊಡರಿದ ಬಳ್ಳಿ"ಯಲ್ಲಿ ಅರಸಿಕೇರಿಯ ಬಿ. ಎಸ್" ಕರ್ಮಾರವರು ಇನ್ನೂ ಕೆಲವರು ಈ ಸಮಸ್ಯೆಯನ್ನು ಬಗೆ ಹರಿಸಲು-ಯತ್ನಿಸಿರುವರು. ಶ್ರೀಮತಿ ತ್ರಿವೇಣಿಯವರು ತಮ್ಮ ಈ ಕಾದಂಬರಿ-ಯಲ್ಲಿ ಹಿಡಿದ ಪರಿಹಾರಮಾರ್ಗವು ವಿಕಾಸಯುಕ್ತವಾದುದು. ಇವರ ರೀತಿ ವಿಪ್ಲವಾತ್ಮಕವಾಗಿಲ್ಲ. ಮಾನವೀಯತೆಯ ದೃಷ್ಟಿಯನ್ನು ಈ ಸಮಸ್ಯೆಯ ಮೇಲೆ ಪ್ರಸರಿಸಿರುವರು. ಅವರು ಧೈರ್ಯಮಾಡಿ ವಿಧವಾವಿವಾಹವನ್ನು ಸ್ಪಷ್ಟವಾಗಿ ಮಾಡಿಸಿರುವರು—ಓದುಗ ಸೊಗಸಾಗಿ—ಓದುಗರಲ್ಲಿ ವಿಪ್ಲವವಾಗದಂತೆ—ಕಾವ್ಯದ ರೀತಿಯಲ್ಲಿ —ಸುನಂದಾಳು ಶ್ರೀಧರನನ್ನು ಮದುವೆಯಾದುದಕ್ಕೆ ಸಂತೋಷ ಹುಟ್ಟುವ ಚಿತ್ರವರ್ಧಿಸುವಂತೆ ಮನೋಭಾವನೆ ಹುಟ್ಟುವಂತೆ.

ಇದೊಂದು ಮನೋವೈಜ್ಞಾನಿಕ ಕಾದಂಬರಿಯೆಂದು ಶ್ರೀಮತಿ ಯವರು ಹೇಳಿರುವರು. ಹಾಗೆಂದರೆ, ಯಾವುದು ಮನೋವೈಜ್ಞಾ-ನಿಕವಲ್ಲ? ಇವರ ದೃಷ್ಟಿಯ ಮನೋವಿಜ್ಞಾನವು ಕೊನೆಯವರೆಗೂ ತಲೆದೋರಿಲ್ಲ ಸುನಂದಾಳು ಶ್ರೀಧರನನ್ನು ಲಗ್ನವಾಗಲು ಒಪ್ಪಿ-ಕೊಂಡ ಮೇಲೆ, ಮನೋವಿಜ್ಞಾನವು ತಲೆದೋರುತ್ತದೆ ಇವಳ ಮದುವೆಗೆ ಇವಳಲ್ಲಿ ಅಡಗಿದ್ದ ಶೇಖರನ ಪ್ರತಿಪ್ರೇಮ ವಿಶ್ವಾಸಗಳು. ಅವೇನು ಸಾಮಾನ್ಯವಾದುವುಗಳಲ್ಲ. ಅವನ್ನು ಸಂಪೂರ್ಣವಾಗಿ ಸ್ಮೃತಿಯಿಂದ ಅರಿಸುವ ಯತ್ನದ ಪರಿಣಾಮವದು. "ಕಾಲ್ತೊಡರಿದ, ಬಳ್ಳಿ"ಯಲ್ಲಿಯ ಸನ್ನಿವೇಶವು ಇಲ್ಲಿಯ ಸನ್ನಿವೇಶಕ್ಕೆ ಎಷ್ಟು ಬಿಡುತ್ತದೆ ನೋಡಿ. 'ಕಾಲ್ತೊಡರಿದ ಬಳ್ಳಿ"ಯಲ್ಲಿ ವಿಧವಾ ವಿವಾಹಕ್ಕೆ ಲೇಖ-ಕನು ಕಂಡ ಪರಿಹಾರ. ಇಲ್ಲಿ ಸುನಂದಾಳ ವಿವಾಹಕ್ಕೆ ಲೇಖಿಕೆ-ಯರು ಕಂಡ ಪರಿಹಾರ. ಅಂತೂ ಕಾದಂಬರಿಯಲ್ಲಿ ಹೊತ್ತಾಗಿ ಯಾದರೂ, ಪ್ರವೇಶಿಸಲ್ಪಟ್ಟ ಮನೋವಿಜ್ಞಾನಪ್ರಸಂಗವು ದೋಷ ರಹಿತವಾಗಿಯಿದೆ.

ಇನ್ನು "ದೂರದ ಬೆಟ್ಟ" ಎಂಬ ಶಿರೋನಾಮವನ್ನು ಕುರಿತು ವಿಚಾರಿಸುವ. ಕಥೆಯ ಕೊನೆಯವರೆಗೂ ಇವರ ಸಂಬಂಧವನ್ನು

ಹೊಲಿಗೆಯ ಪುಸ್ತಕಗಳು

ಹೊಲಿಗೆಯ ಅತ್ಯಾಧುನಿಕ ಜ್ಞಾನಕೊಡುವ ಪುಸ್ತಕಗಳನ್ನು ಇಂದೇ ತರಿಸಿಕೊಂಡು ನಿಮ್ಮ ಉದ್ಯೋಗ ಬೆಳೆಸಿಕೊಳ್ಳಿರಿ.

೧. ಮನೆಯಲ್ಲಿ ಹೊಲಿಗೆ ೧-೮-೦
(ಮಕ್ಕಳ, ಮಹಿಳೆಯರ ಉಡುಪುಗಳು)

೨. ಸೂಚಿ ಶಿಲ್ಪಕಲೆ (ಭಾಗ ೨) ೩-೦-೦
(ಕೋಟು, ಪ್ಯಾಂಟು, ಶೇರವಾನಿ ಮುಂ.)

೩. ಈಝಿಕಟಿಂಗ್ (ಕನ್ನಡ) ಮುಂಬೈಪ್ರಕಟನೆ. ೪-೮-೦
(ಮಕ್ಕಳ, ಮಹಿಳೆಯರ ಫ್ಯಾಶನೆಬಲ್ ಬಟ್ಟೆಗಳು.)

ಕಸೂತಿಕಲೆ (೨ ಭಾಗಗಳು ಕೂಡಿ) ೨-೮-೦
(ಕೈ, ಹಾಗೂ ಯಂತ್ರದ ಕಸೂತಿ)

ವಿವರಕ್ಕೆ :— **ಹಳಪೇಟಿ ಮತ್ತು ಕಂಪನಿ**
ಗಾಂಧೀಚೌಕ, ಧಾರವಾಡ

ಕಾದಂಬರಿಯೊಡನೆ ಕಾಣೆವು. ಆದರೆ ಈಗ ಕೊನೆಯಲ್ಲಿ ಆ ಸನ್ನಿವೇಶವನ್ನು ಕಂಡಾಗ "ಅಬ್ಬಾ" ಎನಿಸುತ್ತದೆ. ಸುನಂದಳ ಬಾಹ್ಯಸೌಂದರ್ಯ, ಅವಳ ಸುಶಿಕ್ಷಿತ ಸುವ್ಯವಸ್ಥಿತ ವ್ಯವಹಾರ, ತನಗಾಗಿ ಅವಳಲ್ಲಿ ಕಂಡು ಬಂದ ಕಾತರ ಭಾವ, ನಡೆ-ನುಡಿಗಳ ಸುಮನೋಹರತೆ, ನಸುನಗುವನ್ನು ಬೀರುತ್ತಲಿರುವ ಅವಳ ಕೋಮಲ ಮುಖಕಮಲ, ಅವಳ ವಿವಿಧ ಸದ್ಗುಣಗಳು ತನ್ನೊಡನೆ ಅವಳ ಆನಂದಕರ ಸಂಭಾಷಣೆ, ಕರ್ತವ್ಯಪರಾಯಣತೆ, ಮುಂತಾದುವುಗಳನ್ನು ನೋಡಿ ಆನಂದವನ್ನು ಅನುಭವಿಸಿದ ಶ್ರೀಧರನು ಅವಳ ಅಲ್ಪ ಸಮಯದ ವಿರಹದಿಂದುಂಟಾದ ವ್ಯಥೆಯನ್ನು ಸುನಂದಳಲ್ಲಿ ವ್ಯಕ್ತಗೊಳಿಸುವನು. ಆದರೆ ಸುನಂದಳು ತನ್ನನ್ನು ಮದುವೆಯಾಗಲು ನಿರ್ಧರಿಸಿದನಂತರ, ಅವಳಿಗಾದ ಮನೋವ್ಯಥೆ, ಅವಳ ಆತ್ಮಹತ್ಯ ಪ್ರಯತ್ನ, ಅವಳ ಕೋಣೆಯಲ್ಲಿಯ ಕಳವಿನ ಪ್ರಸಂಗಗಳು, ಮನೋವಿಜ್ಞಾನಶಾಸ್ತ್ರಜ್ಞನೊಡನೆ ಅವಳ ಪ್ರಸಂಗ, ಕೊನೆಗೆ ಅವಳ ಅಣ್ಣನಿಂದ ಅದರ ಪರಿಹಾರ—ಇತ್ಯಾದಿಗಳಿಂದ, ತನಗಾಗಿ ಅವಳು ವಿಹ್ವಲಗೊಂಡಿದುದು ತಿಳಿದು "ಅಬ್ಬ ನೀನು ನನಗೆ ಇಷ್ಟೆಲ್ಲವನ್ನು ತಿಳಿಸಲಿಲ್ಲನೆ. ಇಷ್ಟು ದುಃಖವನ್ನು ತುಂಬಿಕೊಂಡಿದ್ದೀಯಾ ? "ಎನ್ನುತ್ತಾ ಶ್ರೀಧರನು ಮುಖಭಂಗಿಯನ್ನು ಮಾಡಲು, ಅವಳು 'ದೂರದ ಬೆಟ್ಟ' ಎನ್ನುವಳು.

ಅಬ್ಬ ! ಸ್ತ್ರೀಯನ್ನು ಹೇಗೆ ನಮ್ಮ ಸಮಾಜ ಹೀಯಾಳಿಸುವುದು ! ಬಾಯಿಯಲ್ಲಿ ಮಾತು ನಿಲ್ಲೋಲ್ಲ ಎಂದಲ್ಲವೆ ? — ಸುನಂದನನ್ನು ನೋಡಿ ನಿಮಗೇನೆನಿಸುವುದು ? ನಿಜವಾಗಿ ಸ್ತ್ರೀಯು ಗಂಭೀರಳು. ಸಹನಶೀಲೆ, ಪರಹಿತಕಾರಿ, ಕಷ್ಟನಿಷ್ಠುರಗಳನ್ನು ತಡೆದುಕೊಳ್ಳುವವಳು, ಪತಿಯ ರಕ್ಷಣೆ ಪತಿಯ ಸುಖಗಳನ್ನೇ ರಕ್ಷಿಸುವವಳು, ಎಷ್ಟಿದ್ದರೂ ನುಂಗಿಕೊಂಡು, ನಗುನಗುತ್ತ ಸಮಾಜದಲ್ಲಿ ನಡೆಯಾಡಿ ನಗುವನ್ನು ಹರಡುವಳು. ತನ್ನ ಗೋಳನ್ನೆಂದಿಗೂ ತೋಡಿಕೊಳ್ಳುವವಳಲ್ಲ. ಹಾಗೆಂದೇ ತಾನು ಪ್ರೀತಿಸಿದ ಶ್ರೀಧರನಿಗೆ ತನ್ನ ಸುಖದ ಮುಖವನ್ನೇ ತೋರಿಸಿದಳಾಗಲಿ, ದುಃಖವ್ಯಥೆಗಳಿಂದ ಪೀಡಿತ ಹೃದಯವನ್ನು ತೋರಗೊಡಲಿಲ್ಲ. ಆ ಹೃದಯದಿಂದ ದೌರ್ಬಲ್ಯ ಪುರುಷರಿಗಿದೆಯೆಂದು ಹೇಳದಿದ್ದರೂ, ಸ್ತ್ರೀಯರಿಗಿಲ್ಲವೆಂದು ವಾಸ್ತ್ರ ನಿಶ್ಚಿತವಾಗಿ ಹೇಳಬಹುದು. ಹಾಗೆ ತನ್ನೊಳಗಿನ ದುಗುಡವನ್ನು ಹೊರಗೆಡಹದೆ ಇರಲು ಯತ್ನಿಸುವ ಸತಿಯರ ನಡೆ-ನುಡಿಗಳ ಅರ್ಥವನ್ನು ಮಾಡಿಕೊಳ್ಳದೆ, ವ್ಯರ್ಥ ಅವರೊಡನೆ ಜಗಳವಾಡುವ, ಅವರಿಗೆ ಇನ್ನಿಷ್ಟು ವ್ಯಥೆಕೊಡುವ ಪತಿಗಳಿಗೆ ಈ "ದೂರದ ಬೆಟ್ಟ" ಒಳ್ಳೆಯ ಪಾಠವನ್ನೇ ಕಲಿಸುತ್ತದೆ.

ಪಾತ್ರಪೋಷಣೆ, ಸಂಭಾಷಣೆಯ ರಚನೆ, ಕಥಾತಂತ್ರ, ಶೈಲಿ ಯಾವುದನ್ನು ಕುರಿತು ಯೋಚಿಸಿದರೂ ಕಾದಂಬರಿಕಾತಿ ಉತ್ತಮ ವರ್ಗಕ್ಕೆ ಸೇರುವರು. ಒಂದಾದರೂ ವ್ಯರ್ಥವಾದ ಸನ್ನಿವೇಶವಾಗಲಿ, ಮಾತಾಗಲಿ ಇಲ್ಲ. ಸಣ್ಣ ಸಣ್ಣ ವಿಷಯಗಳಾದರೂ ಕಾದಂಬರಿಯ ಉದ್ದೇಶದ ಪೂರಕವಾಗಿವೆ; ಪಾತ್ರದ ವ್ಯಕ್ತಿತ್ವವನ್ನು ಪ್ರಭಾವಶಾಲಿಯಾಗುವಂತೆ ಮಾಡಲು ಪೋಷಕವಾಗಿವೆ. ಇದರಲ್ಲಿ ಶೃಂಗಾರವಿದೆ; ಆದರೆ ಅಶ್ಲೀಲತೆಯ ಸೋಂಕಿಲ್ಲ. ಸ್ತ್ರೀಯ ವರ್ಣನೆಯಿದೆ; ಅವಳ ಸೌಂದರ್ಯವು ನಮ್ಮ ಕಣ್ಣಿಗೆ ಕಟ್ಟುವಂತಿದೆ; ಆದರೆ ಇವಳ ನಗ್ನಚಿತ್ರವಿಲ್ಲ. ಈ ಕಾದಂಬರಿಯಲ್ಲಿಯ ಪಾತ್ರಗಳೆಲ್ಲ ಸುಸಂಸ್ಕೃತವಾಗಿವೆ; ಅನುಕರಣೀಯವಾಗಿವೆ. ಉದಾಹರಣೆಗಾಗಿ ಹೇಳುತ್ತೇನೆ: ಶೇಖರನ ಮರಣದನಂತರ ಸುಂದರಮ್ಮನವರು ಸೊಸೆಯನ್ನು ಕರೆಯಲು ಹೋದಾಗ, ದಮಯಂತಿಯ ಅಜ್ಜಿಯು ಅವಳನ್ನು ಕಳಿಸಲು ಒಪ್ಪಲಾರದೆ ಇರಲು, ಅಜ್ಜಿಯ ಸೊಸೆ, ಅಜ್ಜಿಯನ್ನು ದಂಡಿಸಿ ದಮಯಂತಿಯನ್ನು ಅತ್ತೆಯ ಮನೆಗೆ ಕಳಿಸಿಸುವಳು. "ಅವರು ಅಂತಹ ಕಷ್ಟದಲ್ಲಿರುವಾಗ ನಾವು ನಮ್ಮ ಮಗಳನ್ನು ಕಳಿಸದೆ ಇರುವರೆ ?" ಎನ್ನುವಳು. ಸಮಾಜದಲ್ಲಿ ಬೀಗಿತ್ತಿಯರು ಹೀಗೆ ಇದ್ದರೆ, ಕುಟುಂಬಗಳಲ್ಲಿಯ ವಾತಾವರಣವು ಸುಖಕರವಾಗಿರುತ್ತದೆ.

ಇರಲಿ. ಹೀಗೆ ಹೇಳುತ್ತ ಹೋದರೆ ಇದಕ್ಕೆ ಅಂತವಿಲ್ಲ ಶ್ರೀಮತಿ ತ್ರಿವೇಣಿಯಂತಹವರು ಸಾಹಿತ್ಯಸೇವೆಗೈಯುತ್ತ ಬಂದರೆ, ಅವರು ಸಮಾಜಸೇವೆಮಾಡಿದಂತಾಗಿ ಸ್ತ್ರೀಯರ ಬಗ್ಗೆ ಸುಹೃದ್ಭಾವ ಉಂಟಾಗುವುದೆಂದು, ಸಾಹಿತ್ಯವು ಸತ್ತ್ವಪೂರ್ಣವಾಗಬಹುದೆಂದು ನನ್ನ ವಿಶ್ವಾಸ.

ನವದರ್ಶನ!

(ಸಣ್ಣಕತೆ)*

ಶ್ರೀಮಾನ್ ಎಸ್. ಭೀಮಭಟ್ಟರು
'ಸಾಹಿತ್ಯಶಿರೋಮಣಿ,' ಕನ್ಯಾನ ದ. ಕ.

●

ವ್ಯಾವಹಾರಿಕಮುಕ್ತಿಯೆ ಆಗಲಿ, ಪಾರಮಾರ್ಥಿಕಮುಕ್ತಿಯೆ ಆಗಲಿ, ಎರಡೂ ತ್ಯಾಗ–ತಪಸ್ಸುಗಳಿಂದಲೇ ಸಿದ್ಧಿಸಬೇಕಾಗುವುದುಗಳು. ಕೇವಲ ಭೋಗವಿಲಾಸಗಳು ಬೇಕೆನ್ನುವವನಿಗೆ ಬಂಧನವು ಬಿನ್ನು ಹತ್ತಿಯೇ ಇರುವುದು. ಮಧುಕರನಿಗೆ ಇದರ ಅರಿವಾಯಿತು. ಅವನೂ ಒಬ್ಬ ಮನುಷ್ಯನಾದ.

●

ಕುಸುಮಬಾಲೆಯು ಅರಳಿದ ಕಣ್ಣುಗಳಿಂದ, ಉತ್ಸುಕ ಹೃದಯದಿಂದ ಅಣ್ಣನನ್ನು ನಿರೀಕ್ಷಿಸುತ್ತಿದ್ದಳು. ಅವಳ ಅಣ್ಣನಿಂದು ತನ್ನ ಜೀವನದಲ್ಲಿ ಪ್ರಥಮವಾಗಿ ಸಂಬಳ ಪಡೆದು ಮನೆಗೆ ಬರುವ ದಿನ! ಬರುವಾಗ ಸಿಹಿತಿಂಡಿ ತಂದಾನು, ಸೊಗಸಾದ ಅರಿವೆ, ಪೌಡರ್, ಪರಿಮಳದ್ರವ್ಯಗಳನ್ನೂ ತರಬಹುದು.

ಮೊದಲ ಸಂಬಳ! ಸ್ವಾವಲಂಬನದ ಸೊಗಸಾದ ನೋಟ! ದಾರುಣಜೀವನವು ನಿರಸ್ತವಾಗಿ, ಅರಳಿದ ಆಶೆ-ಆಕಾಂಕ್ಷೆಗಳ ವಿವಿಧ ರೀತಿಯ ಕಲ್ಪನೆಯ ಹಕ್ಕಿಗಳು! ಮೊದಲ ಸಂಬಳ ನೂರು ರೂಪಾಯಿ ಇರಲಿ, ಸಾವಿರ ರೂಪಾಯಿ ಇರಲಿ, ಅದರಲ್ಲಿ ಇಂದ್ರಜಾಲದಂತಹ ಆಕರ್ಷಣೆಯಿದೆಯಲ್ಲವೆ? ಅದರಲ್ಲೂ ಕಷ್ಟಪರಂಪರೆಗಳನ್ನು ಸಹಿಸಿ ಅಪ್ರತಿಹತೋತ್ಸಾಹದಿಂದ ಮುಂದುವರಿದವನಿಗೆ, ಮೊದಲ ಸಂಬಳ ಕೈಸೇರುವುದೆಂದರೆ, ಬಿರುಗಾಳಿಯ ಆಘಾತದ ತರುವಾಯ ಕಾಣಿಸುವ ಸೂರ್ಯನ ಬೆಳಕಿನಂತೆ ಆನಂದಪ್ರದವಲ್ಲವೆ?

'ಐದು ಗಂಟೆಯಾಯಿತು! ಅಣ್ಣನೇಕೆ ಬಂದಿಲ್ಲ?' ಕುಸುಮಬಾಲೆಯ ಮನಸ್ಸು ಚಂಚಲವಾಯಿತು. ಶರೀರವೂ ಹಾಗೆಯೇ ಸರಿ. ಬೆಕ್ಕಿನ ಮರಿಗಳನ್ನಾಡಿಸಿದಳು. ಹೂಗಳನ್ನೆತ್ತಿಕೊಂಡಳು. ನೆಲದ ಮೇಲೆ ಬಿದ್ದ ಹರಳುಗಳನ್ನು ಎತ್ತಿ ಎಸೆದಳು. ಎದುರಿನ ಮನೆಯ ಮಾಳಿಗೆಯಲ್ಲಿ ಪಾರಿವಾಳಗಳ ಜೋಡಿಯೊಂದು ಪರಸ್ಪರ ಸೇರಿಕೊಂಡು, ತುಂಬಿದ ಕುತ್ತಿಗೆಯಿಂದ ಆನಂದದಿಂದ ಕೂಗುತ್ತಿತ್ತು. ಕೆಲಸಮಯ ಆಕೆ ಅತ್ತ ನೋಡಿದಳು. ಅಷ್ಟರ ತನಕವೂ ಅಣ್ಣ ಬಂದಿರಲಿಲ್ಲ. ಆಕೆ ಕಾದು ಬಳಲಿ ಬೀದಿಗಿಳಿದಳು. ದೂರ ನೋಟ ಬೀರಿದಾಗ, ಗ್ರಾಮದ ಕೆರೆಯನ್ನು ದಾಟಿ ದೇವಾಲಯ ಪ್ರವೇಶಿಸುತ್ತಿದ್ದ ಅಣ್ಣನು ಆಕೆಯ ಕಣ್ಣಿಗೆ ಬಿದ್ದನು. ಹುಡುಗಿ ಆನಂದಪರವಶಳಾಗಿ ಕೂಗಿಕೊಂಡಳು: "ಅಣ್ಣ! ಅಣ್ಣ! ಅಮ್ಮಾ ಅಣ್ಣ ಬಂದ!"

ನೆರೆಮನೆಯ ಅಂಗಳದಲ್ಲಿ ಆಡುತ್ತಿದ್ದ ಮಕ್ಕಳು ಆಕೆಯನ್ನು ನೋಡಿ ನಕ್ಕರು. 'ಅಮ್ಮಾ, ಅಣ್ಣ ಬಂದ!' ಎಂದು ಅವರೂ ಅಣಕಿಸಿ ಕೂಗಿದರು. ಆಗ ಅವರು ತನ್ನನ್ನು ಹಾಸ್ಯ ಮಾಡುವುದಾಗಿ ತಿಳಿದು, ಆಕೆಗೆ ತುಸು ನಾಚಿಕೆಯಾಯಿತು. ಇಷ್ಟರಲ್ಲಿ ಅಣ್ಣ ಬಂದು. ದನ್ನು ಕಂಡು ಆಕೆ ಓಡಿಹೋಗಿ ಮುಂದೆ ನಿಂತಳು. ಅವನ ಕೈಯಲ್ಲಿದ್ದುದನ್ನು ಎಳೆದಳು. ಅಣ್ಣ ಬಂದುದನ್ನು ತಾಯಿಗೆ ತಿಳಿಸಲು ಆಕೆ ಮನೆಯೊಳಗೆ ನಡೆದಳು. ಮಧುಕರನೂ ಆಕೆಯ ಹಿಂದೆಯೇ ದೇವರ ಕೋಣೆಯನ್ನು ಹೊಕ್ಕನು. ಅವನ ತಾಯಿ ದೇವರ ಧ್ಯಾನ ಮಾಡುತ್ತ ಅಲ್ಲಿ ಕುಳಿತಿದ್ದಳು. ಅವಳ ಮನೆಯಲ್ಲಿ ಸುಖದ ಬಂಗಾರದ ಕಿರಣರೇಖೆಯ ಪ್ರಥಮ ನರ್ತನವಿದಾಗಿತ್ತು. ಈ ಸಂದರ್ಭದಲ್ಲಿ ಆಕೆಯ ಮನಸ್ಸು ಆನಂದಭರಿತವಾಗಿದ್ದಷ್ಟೇ ಶಂಕಾಕುಲವೂ ಆಗಿತ್ತು. ದಾರುಣ ಭೂತಕಾಲ! ಸುಂದರ ಭವಿಷ್ಯತ್ಕಾಲ! ಇವುಗಳ ಎಳೆಬೆಳಕು ಆಕೆಯ ಅಂತಃಕರಣದಲ್ಲಿ ಕುಣಿಯುತ್ತಿತ್ತು. ಆಕೆಯ ಕುತ್ತಿಗೆ ಬಿಗಿದು. ಹೋಗಿತ್ತು. ಕಣ್ಣುಗಳಲ್ಲಿ ನೀರು ಚಿಮ್ಮುತ್ತಿತ್ತು!

ಮಧುಕರನು ಸಂಬಳದ ಹಣವನ್ನು ತಾಯಿಯ ಕೈಗಿತ್ತನು. ಆಕೆ ಅದನ್ನು ದೇವರ ಮುಂದಿರಿಸಿ ನಮಸ್ಕರಿಸಿದಳು ಮಧುಕರನೂ ಕೈಮುಗಿದನು ಕುಸುಮಬಾಲೆಯೂ ಅವನನ್ನು ಅನುಕರಿಸಿದಳು. ಸನಿಯದಲ್ಲಿ ಆಡುತ್ತಿದ್ದ ಬೆಕ್ಕಿನ ಮರಿಗಳಂತೆ ಅವರ ಮನಸ್ಸು ಹಾರಾಡುತ್ತಿತ್ತು. ಮಧುಕರನು ತಾಯಿಯ ಮುಖ ನೋಡಿದನು. ಅದು ಅತಿ ಗಂಭೀರವಾಗಿತ್ತು. ಮೊದಲ ಸಂಬಳವೆಂದರೆ 'ಕ್ಲೇಶಫಲೇನ ಹಿ ಪುನರ್ನವತಾಂ ವಿಧತ್ತೇ' ಎಂಬ ಮಾತಿನ ಪ್ರತ್ಯಕ್ಷಾನುಭವವಾಗಿತ್ತು—ಆಕೆಯ ವಿಷಯದಲ್ಲಿ!

ಮಧುಕರನಿಗೆ ಹತ್ತುವರ್ಷವಾಗುವುದರೊಳಗಾಗಿ, ಅವನ ತಂದೆ ತೀರಿಹೋಗಿದ್ದನು. ಮಕ್ಕಳು ಮೂವರೂ ಅನಾಥರಾದರು. ನಂಟರ ಮನೆಯಲ್ಲಿ ಉಳಿದುಕೊಂಡು ತಾಯಿ ಅವರನ್ನು ಬೆಳೆಸಿ ಕಲಿಸಿದಳು. ಪಪ್ಪಳ ಮಾರಿಯೊ, ನೆರೆಹೊರೆಯವರ ಚೆಲ್ಲಣಗಳನ್ನು ಹೊಲಿದುಕೊಟ್ಟೋ, ಹೇಗೆ ಹೇಗೋ—ಆಕೆ ಅಲ್ಪ ಸ್ವಲ್ಪ ಹಣ ಸಂಪಾದಿಸುತ್ತಿದ್ದಳು. ಮಧುಕರನು ದೊಡ್ಡವನಾದಾಗ ಪ್ರೌಢಶಿಕ್ಷಣಕ್ಕಾಗಿ ಪೇಟೆಗೆ ಹೋದನು. ಕಳೆದ ವರ್ಷ ಅವನ ಓದು ಮುಗಿಯಿತು. ಕಳೆದ ತಿಂಗಳಲ್ಲಿ ಪೋರ್ಚುಗೀಸ್ ಪ್ರಾಥಮಿಕ ಶಾಲೆಯಲ್ಲಿ ಅವನಿಗೆ ಅಧ್ಯಾಪಕವೃತ್ತಿ ಸಿಕ್ಕಿತು.

ತಾಯಿ ದೇವರ ಮುಂದೆ ಸಿಹಿತಿಂಡಿಯನ್ನಿರಿಸಿದಳು. ಅಮೇಲೆ ಸಿಹಿತಿಂಡಿಯ ಕಟ್ಟನ್ನು ಕುಸುಮಬಾಲೆಯ ಕೈಗಿತ್ತು, ನೆರೆಮನೆಯವರಿಗೆ ಹಂಚಿಬರುವಂತೆ ಹೇಳಿದಳು. ಆಕೆ, ತನಗೆ ಸ್ವಲ್ಪ ಇರಿಸಿಕೊಂಡು

---

* ಗೋವೆಯು ಪೋರ್ಚುಗಲ್ಲಿನ ಭಾಗವೆಂಬುದಾಗಿ ಗೋವಾಶಾಲೆಗಳ ಪಾಠ್ಯಪುಸ್ತಕಗಳಲ್ಲೂ ಬರೆಸಿ ಪೋರ್ಚುಗೀಸರು ಪ್ರಚಾರ ಮಾಡುತ್ತಿದ್ದಾರೆ ಈ ಕಥೆಯನ್ನು ಬರೆದ ಶ್ರೀ. ಲಕ್ಷ್ಮಣರಾವ ಸರದೇಸಾಯಿಯವರು ಗೋವೆಯವರು. ಇವರು ಅಲ್ಲಿ ಪ್ರೊಫೆಸರರಾಗಿದ್ದರು. ಗೋವೆಗಾಗಿ ಚಳವಳಿ ಹೂಡಿ ಪೋರ್ಚುಗೀಸರಿಂದ ಬಹಿಷ್ಕರಿಸಲ್ಪಟ್ಟು ಈಗ ಮುಂಬಯಿಯಲ್ಲಿದ್ದಾರೆ. ಈ ಕಥೆಯನ್ನು ಕಿರ್ಲೋಸ್ಕರ್ ಪತ್ರಿಕೆಯಿಂದ ನಾಗಪುರದ 'ಸಂಸ್ಕೃತ ಭವಿತವ್ಯ' ದವರು ಅನುವಾದಿಸಿದ್ದರು. ಅದನ್ನು ಕನ್ನಡಿಸಲಾಗಿದೆ. —ಲೇ.

ಸ್ವಲ್ಪ ತಿಂದು, ಅಣ್ಣನಿಗೂ ತಾಯಿಗೂ ಕೊಟ್ಟು, ಹಾಡುತ್ತಾ ಕುಣಿಯುತ್ತಾ ಹೊರಗೋಡಿದಳು. ನೆರೆಮನೆಯ ಹುಡುಗರಿಗೆ ಅದನ್ನು ಕೊಟ್ಟು "ನನ್ನ ಅಣ್ಣನೀಗ ಹಣ ಸಂಪಾದಿಸುತ್ತಾನೆ, ಬೇಗನೆ ಅತ್ತಿಗೆ ಬರಲಿದ್ದಾಳೆ, ನಮ್ಮ ಮನೆ ಬೇಗನೆ ಬೆಳಗಲಿದೆ, ಹತ್ತಾಳೆಯ ಪಾತ್ರೆಗಳನ್ನು ಮನೆಗೆ ತರುವೆವು" ಎಂಬುದಾಗಿ ಹೇಳಬೇಕೆಂದಿತ್ತು ಆಕೆಗೆ! ಈಗ ಆಕೆಗೆ ಹಣದ ಚಿಂತೆ--ದೈನ್ಯಗಳು ದೂರವಾಗಿದ್ದುವು.

ಮಧುಕರನು ದೇವರ ಕೋಣೆಯಲ್ಲಿ ಮಣೆಯ ಮೇಲೆ ಕುಳಿತು ವಿಚಾರಿಸತೊಡಗಿದನು: ಕುಮುದಬಾಲೆ ಮಾವನ ಮನೆಗೆ ಹೋಗಿದ್ದಳು. ಅಕೆಗೀಗ ಹದಿನೆಂಟು ವರ್ಷದ ಪ್ರಾಯ! ಆಕೆಯ ಮದುವೆ ನಡೆಸಬೇಕೆಂದು ತಾಯಿಯ ಮನಸ್ಸು ಬಯಸುವುದು ಸಹಜವೇ. ಆಕೆಯ ಮದುವೆ ಆಗಬೇಕು. ಮಧುವೆಯಾದರೆ ತಾಯಿಯ ಮನಸ್ಸು ಪ್ರಸನ್ನವಾದೀತು. ಮನೆಯ ಜೀರ್ಣೋದ್ಧಾರ ಮಾಡಬೇಕು. ಹೊಸ ಬಟ್ಟೆ-ಪೌಡರ್-ರಂಗುಗಳಿಗಾಗಿ ತುಂಬ ಹಣ ಖರ್ಚಾಗಬೇಕಾಗುತ್ತದೆ! ಆದರೆ ಇದಕ್ಕಿಂತ ಎಲ್ಲಾ ದೊಡ್ಡ ಅಕಾಂಕ್ಷೆಯೊಂದು ಆತನ ಮನಸ್ಸಿನಲ್ಲಿತ್ತು. 'ತಾಯಿಯ ಕೈಯಲ್ಲಿ ಮೊದಲು ಬಂಗಾರದ ಬಳೆಗಳಿದ್ದುವು. ತನ್ನ ಶಿಕ್ಷಣಕ್ಕಾಗಿ ತಾಯಿ ಅವನ್ನು ಮಾರಿದ್ದಾಳೆ. ದೇವಾಲಯಕ್ಕೋ ನಂಟರಲ್ಲಿಯೋ ಹೋದಾಗ ಆಕೆ ಬರಿಗೈಯಲ್ಲೇ ಇರಬೇಕು!' ಹೀಗೇ ಆತನ ಮನಸ್ಸಿನಲ್ಲೊಂದು ರಮ್ಯ ಕಲ್ಪನೆ ಹೊಳೆಯಿತು!.....

"ಮಧುಕರ! ಮನೆಗೆ ಬೇಗನೆ ಸೊಸೆ ಬರಬೇಕು" ಆತನು ಚಿಂತಿಸುತ್ತಿದ್ದಾಗಲೇ ತಾಯಿ ಕರೆದು ಹೇಳಿದಳು. ತಾಯಿಯು ಹುರುಪನ್ನು ಕಂಡು ಅವನ ಮನಸ್ಸು ಪ್ರಸನ್ನವಾಯಿತು. ಕಂಠವು ಸ್ತಂಭಿತ ಬಾಷ್ಪವೃತ್ತಿಕಲುಷಿತವಾಯಿತು. ಹಾಳಾದ ತನ್ನ ಮನೆಯಿಂದ ಹೊಸ ಮನೆಯನ್ನು ನಿರ್ಮಿಸಬಯಸುವ ತಾಯಿಯ ಧೈರ್ಯ ಎಷ್ಟು?

ಆತನು ಮೌನವಾಗಿದ್ದುದನ್ನು ನೋಡಿ ತಾಯಿಯು "ಮದುಮಗಳಂತೆ ಅದೇಕೆ ನಾಚುವೆ?" ಎಂದು ಛೇಡಿಸಿದಳು.

"ನಿನ್ನ ಬಯಕೆ ಹಾಗಿದ್ದರೆ ನನ್ನ ಆತಂಕವಿಲ್ಲ!" ಮಧುಕರನು ಹೇಳಿದನು.

"ಹಾಗಿದ್ದರೆ ಕನ್ಯಾನ್ವೇಷಣೆಗೆ ತೊಡಗುವೆ."

ಮೆಲ್ಲನೆ 'ಹುಂ' ಎಂದಿಷ್ಟೇ ಹೇಳಿದನಾತ. ಗುಣವಂತನೂ ಬುದ್ಧಿವಂತನೂ ಸರಕಾರೀ ನೌಕರನೂ ಆದ ವರನು! ಹೀಗಾಗಿ ಸುಲಭದಲ್ಲೇ ಒಳ್ಳೆಯ ಹುಡುಗಿ ಸಿಕ್ಕಿದಳು. ಎರಡು ತಿಂಗಳಲ್ಲಿ ಮದುವೆ ಜರುಗಿತು. ಸೊಸೆ ಮನೆಗೆ ಕಾಲಿಟ್ಟಳು. 'ಮಧುಕರನು ಭಾಗ್ಯಶಾಲಿ' ಎಂದು ನೆರೆಮನೆಯವರೂ ಅಸ್ತರೂ ಹೊಗಳಿದರು ಆವರ ಈ ಮಾತು ಯಥಾರ್ಥವಾಗಿತ್ತು. ಲಕ್ಷ್ಮೀಬಾಯಿಯ ಸೊಸೆ ಗುಣವತಿಯೂ ತಾಳೆಯಂತೆ ಬೆಡಗಿನವಳೂ, ಕಷ್ಟಸಹಿಷ್ಣುವೂ, ಸ್ನೇಹಮಯಿಯೂ ಆಗಿದ್ದಳು. ಅನತಿರಲ್ಲೇ ಆಕೆ ಮಧುಕರನ ಮನಸ್ಸನ್ನು ಗೆದ್ದುಕೊಂಡಳು. ಜಯಶ್ರೀಯ ಹೊರತು ಅತನ ಮನಸ್ಸು ಮತ್ತೆಲ್ಲೂ ನೆಲಸುತ್ತಿರಲಿಲ್ಲ ತಿನ್ನುವುದನ್ನು ಕುಡಿಯುವುದನ್ನು ಸಹ ನೆನಪಿಟ್ಟು ಆತ ವಿಚಾರಿಸುತ್ತಿದ್ದನು. ಶಾಲೆಯಿಂದ ಮನೆಗೆ ಬಂದು ಆತನು ಸುಮ್ಮನೆ ಕೂಡುತ್ತಿರಲಿಲ್ಲ. ಆಕೆ ಬಾವಿಯಿಂದ ನೀರು ಸೇದುತ್ತಿದ್ದರೆ, ಇಲ್ಲವೆ ಇನ್ನೇನಾದರೂ ಕೆಲಸ ಮಾಡುತ್ತಿದ್ದರೆ, ಆತನ ಅಂತಃಕರಣವು ಸಂಭ್ರಮದಿಂದ ತುಡಿಯುತ್ತಿತ್ತು. ತಾನೇ ಅದನ್ನು ಮಾಡಬೇಕೆಂದು ಆತನು ಬಗೆಯುತ್ತಿದ್ದನು. ಆದರೆ ತಾಯಿ ನಗೆಯಾಡಬಹುದೆಂದು ಹಿಂದರಿಯುತ್ತಿದ್ದನು.

ಜಯಶ್ರೀ ಅಲಂಕರಿಸಿಕೊಂಡು ಗಂಡನೊಂದಿಗೆ ವಿಹಾರಕ್ಕಾಗಿ ಹೊರಟಾಗ, ನೆರೆಮನೆಯ ಕಮಲಾಬಾಯಿಯು ಮೊಗವನ್ನೋರೆ ಮಾಡಿಕೊಂಡು ವಕ್ರಸ್ವರದಿಂದ "ಲಕ್ಷ್ಮಮ್ಮಾ! ಮಗ-ಸೊಸೆಯರ ತೋಜು ನೋಡಿದೆಯಾ?" ಎಂದು ಕೇಳುತ್ತಿದ್ದಳು. "ಹೊಸ ಹುರುಪು, ಅದನ್ನು ನೋಡಿ ನಾನಲ್ಲದೆ ಮತ್ತಾರು ಆನಂದಿಸಬೇಕು? ಹೀಗೆಯೇ ದೇವರು ಮುಂದುವರಿಸಲಿ!" ಎಂದುಕೊಂಡು ಮಗ-ಸೊಸೆಯರನ್ನು ಉತ್ಸುಕ ದೃಷ್ಟಿಯಿಂದ ಪ್ರತಿದಿನವೂ ಲಕ್ಷ್ಮೀಬಾಯಿ ನೋಡುತ್ತಿದ್ದಳು.

ಮಗನ ಈ ಸುಖವನ್ನು ನೋಡಿದರೆ ಅಷ್ಟೇ ಸಾಕು- ಎಂದು ಆಕೆ ಯೋಚಿಸಿದಳು. ಮಧುಕರನ ತಂದೆ ಸತ್ತ ತರುವಾಯ, ಬಲವಾದ ಮಾನಸಿಕ ಆಘಾತವನ್ನು ಆಕೆ ಸಹಿಸಿದ್ದಾಳೆ. ವಿಪತ್ತನ್ನು ಸಹಿಸಲೆಂದೇ ಅಲ್ಲವೇ ಚೈತನ್ಯವಿರುವುದು? ಹುಟ್ಟಿನಿಂದ ಜೀವನ-ಕಲಹವೇ ಅವರ ಭಾಗ್ಯ. "ಭವಿಷ್ಯತ್ತಾಲವೂ ಹೀಗೆ ಅಪನ್ಮಯವಾಗಿದ್ದರೆ..." ಎಂಬ ಹೆದರಿಕೆಯಿಂದ ಆಕೆಯ ಮನಸ್ಸು ವ್ಯಾಕುಲವಾಯಿತು. ಆದರೆ ಇಂದು ದೈವವು ಅನುಕೂಲವಾಗಿರುವುದರಿಂದ, ಆ ಹೆದರಿಕೆಯಿಲ್ಲ. ಮಧುಕರನು ಪ್ರತಿತಿಂಗಳೂ ನೂರು ರೂಪಾಯಿ ಸಂಪಾದಿಸುತ್ತಾನೆ ಐವತ್ತು ರೂಪಾಯಿಗಳಲ್ಲಿ ಮನೆಯ ಕೆಲಸ ನಡೆಯಬಹುದು. ಐವತ್ತನ್ನು ಮುಂದಕ್ಕೆ ಉಳಿಸಿಕೊಳ್ಳಬಹುದು. ಮಗಳಿಗೆ ಮದುವೆ ಮಾಡಬೇಕು. ಮನೆಯನ್ನುದ್ಧರಿಸಬೇಕು.... ..!

ಮಧುಕರನ ಪ್ರಪಂಚವು ಸಂಕುಚಿತವಾಗಿತ್ತು. ಮನೆ-ಶಾಲೆ ಇವುಗಳಲ್ಲೇ ಅದು ಸಮಾವಿಷ್ಟವಾಗಿತ್ತು. ನಿಯತ ಸಮಯಕ್ಕೆ ಶಾಲೆಗೆ ಹೋಗಿ ಗಮನವಿಟ್ಟು ಕಲಿಸಬೇಕು; ಮನೆಗೆ ಬಂದಾಗ ನಲ್ಲೆಯೊಂದಿಗೆ ಲಲ್ಲೆ ನಡೆಸಬೇಕು.

ಒಂದು ದಿನ ಮಧುಕರನು ತರಗತಿಯಲ್ಲಿ ಪಾಠ ಹೇಳುತ್ತಿದ್ದನು. ಪಾಠದ ಶೀರ್ಷಿಕೆ A Nossa Patria! (ಸ್ವದೇಶ) ಎಂದಾಗಿತ್ತು. "ಪೋರ್ಚುಗಲ್ ನಮ್ಮ ಮಾತೃಭೂಮಿ" ಎಂದು ಆತನು ಕಲಿಸತೊಡಗಿದನು. ಆದರೆ ಅದೇಕೋ ಅವನ ಮನಸ್ಸು ಖಿನ್ನವಾಯಿತು. ಇಂದಿನ ತನಕ ಸಾವಿರಾರು ಅಧ್ಯಾಪಕರು ನಾನ್ನೂರೈವತ್ತು ವರ್ಷಗಳಿಂದ ಇಪನ್ನೇ ಕಲಿಸುತ್ತಾ ಬಂದಿದ್ದರು. ಅದನ್ನೇ ಇಂದು ಆತನು ಯಂತ್ರದಂತೆ ಹೇಳಿಕೊಟ್ಟಿದ್ದಾನೆ. ಆದರೂ ಆತನ ಮನಸ್ಸು ಸಂಭ್ರಾಂತವಾಯಿತು. ಹೇಳಿಕೊಟ್ಟ ಶಬ್ದಗಳು ಹೃದಯದಿಂದ ನೇರವಾಗಿ ಹೊರಹೊಮ್ಮಿದುವುಗಳಾಗಿರಲಿಲ್ಲ!

ಇದೇ ಹೊತ್ತಿಗೆ ಏಳೆಂಟು ವರ್ಷದ ಚುರುಕಿನ ಹುಡುಗನೊಬ್ಬ ಎದ್ದುನಿಂತು ಹೇಳಿದ: "ಪ್ರೊಫೆಸರರೆ!" ಮಧುಕರನು ಅವನನ್ನು

ನೋಡಿದನು. ಅವನ ಕೆನ್ನೆಗಳು ಸಿಟ್ಟಿನಿಂದ ಕೆಂಪೇರಿದ್ದುವು. ಗುಟಿಗಳು ನಡುಗುತ್ತಿದ್ದುವು. "ಏನು ಕೇಳಬಯಸುತ್ತಿರುವೆ?" ಮಧುಕರನು ಪ್ರಶ್ನಿಸಿದನು.

"ನಾನಿಲ್ಲಿ ನಿಲ್ಲುವುದಿಲ್ಲ" ನಿರ್ಭಯಸ್ವರದಿಂದ ಹುಡುಗ ಉತ್ತರಿಸಿದ.

"ಏಕೆ? ಏಕೆ?" ಆಶ್ಚರ್ಯದಿಂದ ಕೇಳಿದ ಮಧುಕರ

ತರಗತಿಯ ಹುಡುಗರೆಲ್ಲಾ ಹೆದರಿದ್ದರು. ಹೆದರಿಕೆ, ಆಶ್ಚರ್ಯಗಳಿಂದ ಅವರ ಮುಖಗಳೆಲ್ಲ ತುಂಬಿನಿಂತಿದ್ದುವು. "ಪ್ರೊಫೆಸರರೇ! ನಾವು ಕಲಿಸುತ್ತಿರುವುದನ್ನು ನಾನು ಕೇಳಲಾರೆ" ಹುಡುಗನೆಂದ.

"ಅದೇಕೆ ನಿನಗೆ ಸಹಿಸಲಾಗುವುದಿಲ್ಲ?"

ವಿಶ್ವಾಸನು ತನ್ನ ಪುಸ್ತಕಗಳನ್ನು ಚೀಲಕ್ಕೆ ಸೇರಿಸಿದ ಅದನ್ನು ಹೆಗಲಿಗೆ ಹಾಕಿಕೊಂಡು ಮಧುಕರನ ನೋಟಕ್ಕೆ ತನ್ನ ನೋಟವನ್ನು ಸಾಹಸದಿಂದ ಸೇರಿಸಿ ಆತ ಹೇಳಿದ:

"ಪೋರ್ಚುಗಲ್ ನನ ಮಾತೃಭೂಮಿಯಲ್ಲ" ಹೀಗೆ ಹೇಳಿ ಆತನು ತರಗತಿಯಿಂದ ಹೊರನಡೆದ. ಹೆದರಿದ ಮಕ್ಕಳೆಲ್ಲಾ ಅವನನ್ನೇ ನೋಡಿದರು ಮಧುಕರನ ಮೋರೆ ಬಾಡಿತು. ವಿಶ್ವಾಸನ ಕಣ್ಣುಗಳಲ್ಲಿದ್ದ ತೇಜಸ್ಸು, ಮುಖದಲ್ಲಿದ್ದ ಆವೇಶ ಇವುಗಳನ್ನು ನೋಡಿ ಮಧುಕರನ ಅಂತಃಕರಣವು ಅಶಾಂತವಾಯಿತು. ವಿಶ್ವಾಸನನ್ನು ತಡೆಯಲು ಇಲ್ಲವೆ ಹೊಡೆಯಲು ಆತನು ಇಚ್ಛಿಸಲಿಲ್ಲ. ವಿಶ್ವಾಸನೆದ್ದು ಹೊರನಡೆದ; ಆದರೆ ಶಾಲಾವಾತಾವರಣದಲ್ಲಿ ಬೆಂಕಿಯುಂಡೆಯನ್ನಿಟ್ಟೇ ಆತ ಹೊರಹೋಗಿದ್ದ. ಮಧುಕರನಿಗೆ ಆ ಪಾಠವನ್ನೋದಲು, ಓದಿಸಲು ಧೈರ್ಯ ಬರಲಿಲ್ಲ. ಅರಿಯದ ಆ ಹಸುಳೆ ತನ್ನ ಗೆಳೆಯರ ಹಾಗೂ ಶಿಕ್ಷಕರ ಹೆದರಿಕೆಯನ್ನು ಲೆಕ್ಕಿಸದೆ, ಮನೋಂತರಾಳದಲ್ಲಿದ್ದ ರಹಸ್ಯವನ್ನು ನಿರ್ಭಯವಾಗಿ ಹೊರಪಡಿಸಿದ್ದ. ಮಧುಕರನು ಇದನ್ನೇ ವಿಚಾರಿಸುತ್ತಿದ್ದನು.

"ಈಗ ನಾನು ಶಿಕ್ಷಕನು. ಪ್ರತಿ ತಿಂಗಳು ನೂರು ರೂಪಾಯಿ ಸಂಪಾದಿಸುತ್ತೇನೆ. ಹುಡುಗರಿಗೆ ಕಲಿಸುವುದೇನನ್ನು? ಸುಳ್ಳನ್ನೇ! "ಗೋವೆಯೊಂದಿಗೆ ನಿಮಗೆ ಸಂಬಂಧವಿಲ್ಲ. ಭಾರತದ ಸಂಪರ್ಕವೂ ನಿಮಗಿಲ್ಲ. ಪೋರ್ಚುಗಲ್ ನಿಮ್ಮ ಮಾತೃಭೂಮಿ! ಅಲ್ಬುಕರ್ಕ್, ವಾಸ್ಕೋಡಿಗಾಮಾ ನಿಮ್ಮ ಹಿರಿಯರು!...."

ಅವನ ಮನಸ್ಸಿನಲ್ಲಿ ಆಂದೋಲನವಾಯಿತು. 'ನಾನು ಶಿಕ್ಷಕನು. ಆದರೆ ಏಳೆಂಟರ ಹರೆಯದ ಆ ಹುಡುಗನೇ ನನ್ನನ್ನು ಶಿಕ್ಷಿಸಿದ' ಎಂದು ಆತನು ಭಾವಿಸಿಕೊಂಡನು. ಪುಸ್ತಕವನ್ನು ಮುಚ್ಚಿದನು; ಗಣಿತವನ್ನು ಕಲಿಸಲು ತೊಡಗಿದನು. ಆದರೂ ಆತನು ವಿನುನಸ್ಯನಾಗಿದ್ದನು. ವಿಶ್ವಾಸನ ಪ್ರಶ್ನೆಗೆ ಆತನು ಹೆದರಿಹೋಗಿದ್ದನು. ಆ ಪ್ರಶ್ನೆ ಆತನ ಮನಸ್ಸಿನಲ್ಲಿ ಬೆಳೆಯುತ್ತಾ ನಿರಾಡ್ರೂಪ ತಾಳುತ್ತಿತ್ತು. ಆ ಪ್ರಶ್ನೆ ಅಗಸದವರೆಗೂ ಬೆಳೆದು ನಿಂತಿತು. ಆತನ ಉಸಿರು ತಡೆದಂತಾಗಿತ್ತು.

"ಮಧುಕರಾ, ನಿನ್ನ ಸ್ವದೇಶ ಯಾವುದು? ಹೇಳು! ನೂರು ರೂಪಾಯಿಗಳಿಗೆ ಸೋತು ನೀನು ಜೀವಮಾನವಿಡೀ "ಮಕ್ಕಳೇ! ಪೋರ್ಚುಗಲ್ ನಿಮ್ಮ ಮಾತೃಭೂಮಿ!" ಎಂದು ಮಕ್ಕಳಿಗೆ ಕಲಿಸುವೆಯಾ?

ಗಂಟೆ ಬಾರಿಸಲಾಯಿತು ಹುಡುಗರು ಅಧ್ಯಾಪಕರನ್ನು ನೋಡಿ ಮೆಲುದನಿಯಿಂದ ಮಾತನಾಡತೊಡಗಿದರು. ಆ ಮಕ್ಕಳಲ್ಲಿ ಗಾಳಿಯ ಕೇಂದ್ರವೇ ನಿರ್ಮಿತವಾಗಿದೆಯೆಂದು ಆತನು ಭಾವಿಸಿದನು.

ಮಧುಕರನು ಮನೆಗೆ ಹಿಂದಿರುಗಿದನು. ಆತನ ಮನಸ್ಸು ಕಲ್ಪನಾಮಯವಾಗಿತ್ತು. ಎಂದಿನಂತೆ ಅವನು ಅಡಿಗೆಕೋಣೆಗೆ ಹೋಗಲಿಲ್ಲ; ಜಯಶ್ರೀಯನ್ನು ಕರೆಯಲಿಲ್ಲ; ಆಕೆ ಎಂತಹ ಸೀರೆ ಉಟ್ಟಿದ್ದಾಳೆ? ಎಂತಹ ಕುಪ್ಪಸ ತೊಟ್ಟಿದ್ದಾಳೆ? ಕೇಶರಚನೆ ಹೇಗಿದೆ? ಮುಡಿಯಲ್ಲಿ ಯಾವ ಹೂಗಳನ್ನು ಮುಡಿದಿದ್ದಾಳೆ?—ಇದನ್ನೆಲ್ಲಾ ವಿಚಾರಿಸಲು ಆತನಿಂದು ಮರೆತಿದ್ದನು. ನಲ್ಲೆಯ ಗೌರವರ್ಣದ ತೋಳುಗಳು, ಶೋಭಾಯಮಾನವಾದ ಮೊಗ, ಸೊಗಸಾದ ಗಮನ, ದಂತಮೌಕ್ತಿಕಗಳಿಂದ ಹೊರಹೊಮ್ಮಿದ ಸಿಹಿಯಾದ ಮಾತುಗಳು ಇವುಗಳನ್ನೆಲ್ಲಾ ಹೊಗಳಲು ಆತನಿಂದು ಮರೆತಿದ್ದನು. ಕುರ್ಚಿಯಲ್ಲಿ ಕುಳಿತು ಆತನು ಅಂಗಾಂಗಗಳನ್ನು ಸಡಿಲಿಸಿ ಕಿಟಕಿಯಿಂದ ಆಗಸದ ಕಡೆಗೆ ನೆಟ್ಟನೋಟದಿಂದ ನೋಡುತ್ತಿದ್ದನು. ಅಲ್ಲೂ A Nossa Patria (ಸ್ವದೇಶ) ಎಂಬ ಅಕ್ಷರಗಳೇ ಆತನಿಗೆ ಕಾಣಿಸುತ್ತಿದ್ದುವು. ಅವುಗಳನ್ನು ನೋಡಿ ಆತನು ಕಣ್ಣುಮುಚ್ಚಿದನು. "ಅಮ್ಮಾ, ಅಮ್ಮಾ" ಎಂದು ಗಟ್ಟಿಯಾಗಿ ತಾಯಿಯನ್ನು ಕೂಗಿಕೊಂಡನು.

ಮದುವೆಯಾದ ತರುವಾಯ ಇಂತಹ ಆರ್ತಸ್ವರದಿಂದ ತಾಯಿಯನ್ನು ಕೂಗಿದುದು ಅದೇ ಮೊದಲ ಬಾರಿ! ಲಕ್ಷ್ಮೀಬಾಯಿಯು ಓಡುತ್ತಲೇ ಕೋಣೆಗೆ ಬಂದಳು ಆಕೆ ಆಶ್ಚರ್ಯಚಕಿತಳಾಗಿದ್ದಳು. ಕೋಣೆಯಲ್ಲಿ ಜಯಶ್ರೀ ಇರಲಿಲ್ಲ. ಮಧುಕರನು ತಾಯಿಯನ್ನು ಕರೆದನು. ಆದೆಂತು ಈ ಪರಿವರ್ತನೆ ನಡೆಯಿತಂ?

ಮಗನ ಬಳಿಯಲ್ಲಿ ಕುಳಿತು ಆಕೆ ಕೇಳಿದಳು: "ಮಧುಕರ! ಅದೇಕೆ ಕರೆದೆ? ಆರೋಗ್ಯ ಚೆನ್ನಾಗಿಲ್ಲವೇ?"

ಇಷ್ಟರಲ್ಲಿ ಜಯಶ್ರೀಯು ಕಾಫಿಯ ಲೋಟಗಳನ್ನು ಹಿಡಿದು ಕೊಂಡು ಒಳಗೆಬಂದಳು. ಅವಳ ಕೈಯಿಂದ ಒಂದು ಲೋಟ ತೆಗೆದುಕೊಂಡು ಮಧುಕರನಿಗೆ ನೀಡಿ "ಇದನ್ನು ಮೊದಲು ಕುಡಿದುಬಿಡು" ಎಂದಳು ಲಕ್ಷ್ಮೀಬಾಯಿ.

"ನಾನು ಆರೋಗ್ಯವಾಗಿದ್ದೇನೆ" ಮಧುಕರ ನುಡಿದ.

"ಹಾಗಿದ್ದರೆ, ಹುಚ್ಚನಂತೆ ಆಗಸವನ್ನೇ ಅದೇಕೆ ನಿಟ್ಟಿಸುತ್ತಿರುವೆ?"

ತನ್ನ ಮನೋವ್ಯಥೆಯನ್ನು ತಾಯಿ ಅರಿತುಕೊಂಡಳೆಂದು ಮಧುಕರನ ಹೃದಯ ತುಂಬಿಬಂದಿತು. ತಾಯಿಯ ಸಂದೇಹ ನಿವಾರಿಸಲೆಂದು ಮತ್ತೊಮ್ಮೆ ಹೇಳಿದ: "ನಾನು ಆರೋಗ್ಯವಾಗಿಯೇ ಇದ್ದೇನೆ"

"ಹಾಗಿದ್ದರೆ, ಶಾಲೆಯ ಕೆಲಸವನ್ನು ನಿರ್ವಹಿಸುವೆಯಾ?"

"ಹುಂ," ತಾಯಿಯನ್ನು ಸಮಾಧಾನಪಡಿಸಲು ಆತನು ಯತ್ನಿಸಿದನು. ಆದರೆ ತನಗೆ ಆಶ್ವಾಸನೆ ಸಿಗಲಿಲ್ಲ

ಕೆಲದಿನಗಳು ಕಳೆದುವು ಮಧುಕರನ ಮನಸ್ಸು ಸಂಭ್ರಾಂತ ವಾಗಿತ್ತು. ಶಾಲೆಯಲ್ಲಿ ಅತನಿಗೆ ಸ್ಥೈರ್ಯಾನುಭವವಿರಲಿಲ್ಲ. ಮನಸ್ಸು ಮನೆಯಲ್ಲೂ ಸಂತುಷ್ಟವಾಗಿರಲಿಲ್ಲ. ಗೃಹಸ್ಥಾಶ್ರಮದ ಚಿತ್ರವಿಂದು ಅತನಿಗೆ ಅಸ್ಪಷ್ಟವಾದಂತೆ ಕಂಡಿತು. ಜಯಶ್ರಿ, ಹಿತ್ತಾಳೆಯ ಸಾಮಾನುಗಳಿಂದ ತುಂಬಿದ ಮನೆ, ಅಲಂಕಾರಗಳು, ವನವಿಹಾರ, ಸೀರೆಗಳು ಯಾವುದೂ ಅತನ ಮನಸ್ಸನ್ನು ಸೂರೆಗೊಳ್ಳದಾಯಿತು.

ಒಂದು ದಿನ ಶಾಲೆ ತೀರಿಸಿ ಮಧುಕರನು ಮನೆಗೆ ಹಿಂತಿರುಗುತ್ತಿದ್ದ. ಎಲ್ಲೆಲ್ಲೂ ಸೆಕೆ ಬಹಳ! ಉಸಿರುಗಟ್ಟಿದಂತಾಗುತ್ತಿತ್ತು. ಆಕಾಶವು ಮೋಡಗಳಿಂದ ತುಂಬಿತ್ತು. ಗಾಳಿಯೂ ಬೀಡತೊಡಗಿತು. ಸರ್ವತ್ರ ಧೂಳಿ ಹಾರತೊಡಗಿತು. ದಿಕ್ಕುಗಳೆಲ್ಲಾ ಕಪ್ಪಾದುವು. ಬಳಿಗಾಳಿಯು ಒಣಗಿದ ಎಲೆಗಳನ್ನು ಹೇಲೊಯ್ದಿತು. ಜನರೂ ಚಿತ್ತ ಓಡತೊಡಗಿದರು. ಸನಿಯದ ಜನಸಮ್ಮರ್ದದಿಂದೆದ್ದ ಅಸ್ಪಷ್ಟ ಜಾಮೂಹಿಕ ದನಿಯೊಂದು ವಾತಾವರಣದಲ್ಲಿ ಮಾರ್ದುಡಿಯುತ್ತಿತ್ತು.

'ತುಸುಹೊತ್ತಿನಲ್ಲಿಯೇ ಮಳೆ ಬರಬಹುದು. ಅದಕ್ಕಿಂತ ಮೊದಲೇ ಮನೆಗೆ ಹೋಗಬೇಕು!' ಎಂದುಕೊಂಡು, ಮಧುಕರನು ಜೋರಾಗಿ ನಡೆಯತೊಡಗಿದನು. ಇದೇ ಸಂದರ್ಭದಲ್ಲಿ ಡಾ. ಲೊಹಿಯಾ ಘೋಷಿಸಿದ ಸತ್ಯಾಗ್ರಹವು ಅತನಿಗೆ ನೆನಪಾಯಿತು. ಕೂಡಲೇ ಅತನ ಕಾಲುಗಳು ಪೇಟೆಯ ಮೈದಾನಿನ ಕಡೆಗೆ ಸಾಗಿದುವು. ಸುಳಿಗಾಳಿ, ಧೂಳಿ, ಮುಗಿಲು ಒಂದೂ ಅವನಿಗೆ ಗಣ್ಯವೆನಿಸಲಿಲ್ಲ. ಹೋದಾಗ ಅಲ್ಲಿ ಜನಸ್ತೋಮ ಕಿಕ್ಕಿರಿದಿತ್ತು. ಆ ಜನಸ್ತೋಮವನ್ನು ನೋಡಿ ಅವನ ಹೃದಯವು ಅಜ್ಞಾತ ಹಾಗೂ ಅಸ್ಪಷ್ಟಭಾವನೆಯಿಂದ ಉತ್ಸಲ್ಲೋಲವಾಯಿತು ಮುಂದೆ ಕಾಣಿಸುವ ರೋಮಾಂಚಕಾರಿ ದೃಶ್ಯದಲ್ಲಿ ಅತನ ದೃಷ್ಟಿ ಲಗ್ನವಾಗಿತ್ತು.

'ಜೈಹಿಂದ್' ಘೋಷವು ಎಲ್ಲೆಲ್ಲೂ ಪ್ರತಿಧ್ವನಿಸುತ್ತಿತ್ತು. ತ್ರಿವರ್ಣಾಂಕಿತ ಧ್ವಜಗಳು ಸರ್ವತ್ರ ಹಾರಾಡುತ್ತಿದ್ದುವು. ಬಿಸಿಲಿನಿಂದ ನನೆಯುತ್ತಿರುವ ಧರೆಗೆ ಮಳೆ ಬೀಳತೊಡಗಿತು. ಮಣ್ಣಿನ ಪರಿಮಳ ಸುತ್ತಲೂ ಹರಡಿತು. ಆದರೆ ಅದಕ್ಕಿಂತಲೂ ಹೆಚ್ಚು ಪ್ರಭಾವಯುತವೂ ಜನಮನೋಮೋಹಕವೂ ಆದ ಅಪೂರ್ವಭಾವವೊಂದು ಉಚ್ಚೈಃಖಿಲಕಾರಕವಾಗಿತ್ತು. ಹಿಂದೆ ಇಪ್ಪತ್ತೈದು ಜನರಿದ್ದಾಗ ಈ ಭಾವವುಂಟಾಗಿರಲಿಲ್ಲ. ಅನಂತರ ಸುಖ-ಸ್ವಾಸ್ಥ್ಯಗಳ ಭಾವವನ್ನು ಬಿಟ್ಟು ಸಾವಿರಾರು ಜನರು ಅಲ್ಲಿ ಬಂದು ಸೇರತೊಡಗಿದರು. ಮಧುಕರನೂ ಮೆಲ್ಲಮೆಲ್ಲನೆ ಮುನ್ನಡೆದನು. ತುಸು ಹೊತ್ತಿನಲ್ಲೇ ಆ ಸುಹಾಜನಸಮ್ಮರ್ದದಲ್ಲಿ ಅವನು ಲೀನನಾಗಿಹೋದನು. "ಇದೆಂತಹ ಚಮತ್ಕಾರವನ್ನಿಂದು ನಾನು ನೋಡುತ್ತಿದ್ದೇನೆ. ನಾನು ಸರಕಾರಿ ನೌಕರ! ಸರಕಾರದ ಕಾನೂನುಗಳಿಗೆ ಕಟ್ಟುಬಿದ್ದ ಗುಲಾಮ! 'ಜೈಹಿಂದ್' ಎಂದು ಘೋಷಿಸಿದರೇನಾಗಬಹುದೆಂಬ ಹೆದರಿಕೆ ನನಗುಂಟಾಗುತ್ತಿಲ್ಲ ಆದೇಕೆ ನನ್ನ ಹೃದಯ ಹೆದರುವುದಿಲ್ಲ? ಇಷ್ಟು ಸ್ಥೈರ್ಯ ನನಗೆಲ್ಲಿಂದ ಬಂತು?" ಎಂದು ಅತನ ಮನಸ್ಸು ವಿಚಾರಿಸಿತು.

ಈ ಕಾಲದಲ್ಲಿ ಧೂಳಿಯು ಕಡಿಮೆಯಾಗಿತ್ತು ಮಳೆಯಿಂದ ಎಲ್ಲರೂ ಒದ್ದೆಯಾಗಿದ್ದರು. ಎಲ್ಲೆಲ್ಲೂ ಕೋಲಾಹಲ ತುಂಬಿತ್ತು. ಸಂತಾಪ ತುಂಬಿಹೋಗಿತ್ತು. ಎಲ್ಲೆಡೆಗಳಲ್ಲೂ ಸೈನಿಕರು ಕಾಣಿಸಿಕೊಂಡರು. ಬಾಯಿತೆರೆದ 'ಮಶೀನ್‌ಗನ್' ಮುಂದೆ ನಿಂತಿತ್ತು. ಪೋಲೀಸರು ಜನರನ್ನು ಹೊಡೆದರು, ಬಂಧಿಸಿದರು. ಜನರು ನಿಶ್ಚಿಂತರಾಗಿ ಮುಂದುವರಿದರು. ಮಹಾಪ್ರವಾಹದಂತೆ ಮುಂದೆ ಸಾಗಿದರು. ಮಹಾತ್ಮಾಜಿಗೆ ಜಯವಾಗಲೆಂದು ಎಲ್ಲರೂ ಘೋಷಿಸುತ್ತಿದ್ದರು.

ಅಲ್ಲಿ ವ್ಯಷ್ಟಿಯು ಸಮಷ್ಟಿಯಲ್ಲಿ ವಿಲೀನವಾಯಿತು. ಪ್ರತಿದಿನ ಕಾಣಿಸುವ ಭೇದಗಳು ದೂರವಾದುವು. ಸಾಮಾಜಿಕ ಪ್ರತಿಷ್ಠೆ—ಮಾನಾಪಮಾನಗಳೆಲ್ಲಾ ಅಲ್ಲಿ ಮರೆಯಾದುವು. ಕೃಷಿಕರು, ಶಿಲ್ಪಿಗಳು, ಚಿತ್ರಕಾರರು, ಅಂಬಿಗರು, ಮುಕಗ್ರಾಮದ ಪಾಶ್ಚಾತ್ಯ ವೇಷಧಾರಿಗಳಾದ ಮಾಲಿಕರು, ಭಿನ್ನಜಾತಿಯ ಭಿನ್ನವ್ಯವಸಾಯದ ಭಿನ್ನಗ್ರಾಮದ ಸಕಲರೂ ಒಂದು ಮಹಾಪ್ರವಾಹದಲ್ಲಿರುವಂತೆ ಮಧುಕರನಿಗೆ ಕಾಣಿಸಿದರು. ಹೆಂಗಸರು, ಮಕ್ಕಳು, ಮುದುಕರು, ರೋಗಿಗಳು ಸರ್ವರೂ 'ಗಾಂಧಿಯವರಿಗೆ ಜಯವಾಗಲಿ, ಭಾರತ ಅಖಂಡವಾಗಲಿ, ಜೈಹಿಂದ್' ಎಂದು ಘೋಷಿಸುತ್ತಿದ್ದರು. ಎಲ್ಲರೂ ಮಳೆಯಿಂದ ಒದ್ದೆಯಾಗಿದ್ದರು. ಅದರ ಮೇಲೆ ಪೆಟ್ಟನ ಸುರಿಮಳೆಯೂ ಬೀಳುತ್ತಿತ್ತು. ಆದರೂ ಆಚಲ ನಿರ್ಧಾರದಿಂದ ಅವರು ಮುನ್ನಡೆದರು.

ಮನಸ್ಸು ಈ ಉತ್ಕಟಪರಿಸ್ಥಿತಿಯಲ್ಲಿದ್ದಾಗ, ಮಧುಕರನಿಗೆ ವಿದ್ಯಾರ್ಥಿ ವಿಶ್ವಾಸನ ನೆನಪಾಯಿತು. ಇಪ್ಪರ ತನಕ ಸಂಯಮದಿಂದ ಬಿಗಿದುಕೊಂಡಿದ್ದ ಅತನ ತುಟಿಗಳು ಅಲುಗಾಡಿದುವು. ಅತನು 'ಜೈಹಿಂದ' ಘೋಷಣೆಯನ್ನು ಮಾಡಿದ. "ಪೋರ್ಚುಗಲ್ ನಮ್ಮ ಮಾತೃಭೂಮಿ" ಎಂದು ಸಾವಿರಾರು ಶಿಕ್ಷಕರು ಲಕ್ಷಗಟ್ಟಲೆ ವಿದ್ಯಾರ್ಥಿಗಳಿಗೆ ಹಾನ್ನೂರೈವತ್ತು ವರ್ಷಗಳಲ್ಲಿ ಬೋಧಿಸಿದ್ದರು ಆದರೆ ಇದೇನು? ಈ ಜಯಘೋಷದ ಅರ್ಥವೇನು? ಹೃದಯಗಹ್ವರದಲ್ಲಿ ವಿಲೀನವಾದ, ರಕ್ತದ ಪ್ರತಿಕಣದೊಂದಿಗೆ ಉಲ್ಲಸಿತವಾಗುತ್ತಿರುವ ಈ ಭಾವನೆಯು ಸಹಜವೇ! ಇಲ್ಲವಾದರೆ ಏಕೆ ಇಂತಹ ಚಮತ್ಕಾರ ನಡೆಯಬೇಕು? ಸತ್ಯ. ಈ ಭಾವನೆಯು ಸಾಮರ್ಥ್ಯವೇನು? ಭೀರುವನ್ನೂ ವೀರನನ್ನಾಗಿಸುವ, ದುರ್ಬಲರಿಗೆ ಸಾಮರ್ಥ್ಯವನ್ನೀವ, ಪಶುಗಳನ್ನು ಮಾನವರನ್ನಾಗಿ ಪರಿವರ್ತಿಸುವ, ಕ್ಷುದ್ರರಲ್ಲಿ ಮಹಾನುಭಾವತ್ವವನ್ನುಂಟುಮಾಡುತ್ತಿರುವ, ಮನುಷ್ಯರೊಳಗಿನ ಭೇದದ ಕಣಿನೆಯನ್ನು ಮುಚ್ಚುತ್ತಿರುವ. ಮನಸ್ಸಿನ ವಿಷಕಿಲ್ಬಿಷಗಳನ್ನು ಸುಟ್ಟುರಿಸುವ, ಈ ಭಾವನೆಯು, ಗುಲಾಮರೆಂದು ಹೆಸರಾಂತ ಗೋವಾನಿವಾಸಿಗಳಾದ ನಮ್ಮ ಮನಸ್ಸಿನಲ್ಲಿ ಎಷ್ಟು ಓತಪ್ರೋತವಾಗಿದೆ! ಎಷ್ಟೇ ತಡೆದರೂ ಅದು ಅನುಕೂಲ ಪ್ರಸಂಗದಲ್ಲಿ ಉಲ್ಲಸಿತವಾಗುತ್ತಿದೆ

ಮಧುಕರನು ಮನೆಗೆ ಬಂದಾಗ ಮುಸ್ಸಂಜೆ ಕಳೆದಿತ್ತು. ಮನೆಯಲ್ಲಿ ದೀಪ ಉರಿಸಿದ್ದರು. ಮಧುಕರನ ತಾಯಿ ಮಗನನ್ನು ಕಾಯುತ್ತಾ ಹೊರಗೆ ನಿಂತಿದ್ದಳು. ಜನತಾಂದೋಲನದ ವಾರ್ತೆ ಅಕೆಗೆ ಮೊದಲೇ ತಿಳಿದಿತ್ತು. ಮಧುಕರನು ಈ ಆಂದೋಲನದಲ್ಲಿ ಸಹಭಾಗಿಯಾಗಲೂ ಬಹುದು—ಎಂಬ ಹೆದರಿಕೆ ಅಕೆಗೆ ಉಂಟಾಗಿತ್ತು!

ಒದ್ದಿಯಾದ ಮಧುಕರನನ್ನು ನೋಡಿದಾಗ, ಅತನೂ ಜೈಹಿಂದ ಆಂದೋಲನಕ್ಕೆ ಸೇರಿರಬಹುದೆಂದು ಆಕೆ ನಿರ್ಣಯಿಸಿದಳು. ಆಕೆ ಕೇಳಿದಳು: "ಜೈಹಿಂದ್ ಆಂದೋಲನಕ್ಕೆ ಹೋಗಿದ್ದೆಯಾ?"

"ಇಲ್ಲ ಅಮ್ಮಾ!"

"ಅದರೆ ಅದಕ್ಕೆ ಪ್ರೇಕ್ಷಕನಾಗಿ ಹೋಗಿರುವೆಯಾ?"

"ಅಲ್ಲಿ ಸಾವಿರಾರು ಜನರು ಬಂದು ಸೇರಿದ್ದರು. ನಾನೂ ಅವರಲ್ಲಿ ಒಬ್ಬನಾಗಿದ್ದೆ"

"ಮಧುಕರ, ನೀನು ಸರಕಾರಿ ನೌಕರನಷ್ಟೆ!"

"ಸರಕಾರಿ ನೌಕರರಲ್ಲದವರು ಪೋರ್ಚುಗೀಸ್ ನಾಗರಿಕರೇನು? ಅವರೂ ಇದನ್ನು ನೋಡಬಾರದೆಂದು ನಿಷೇಧವಿದೆ"

"ಅದರೆ ನಿನ್ನಂಥವರು ಹೆಚ್ಚು ಎಚ್ಚರಿಕೆ ವಹಿಸಬೇಕು. ಹೊಸತಾಗಿ ಕೆಲಸಕ್ಕೆ ತೊಡಗಿರುವೆ. ಎಲ್ಲಾದರೂ ನೌಕರಿತಪ್ಪಿದರೆ...." ತಾಯಿಯೇನು ಹೇಳಬಯಸುವಳೆಂಬುದು ಅವನಿಗರಿಯಿತು. ಅವನೇ ಅವಳ ಆಶೆಯ ಕೇಂದ್ರ! ಅವನಿಂದಲೇ ಮನೆಯು ಏಳಿಗೆಯಾಗಬೇಕು. ಕುಮುದಬಾಲೆಯ ವಿವಾಹಗೈಯುವುದೂ ಅವನ ಹೊಣೆಗಾರಿಕೆಯೇ; ತಾಯಿಯ ಕೈಗಳಿಗೆ ಬಂಗಾರದ ಬಳೆಗಳನ್ನು ಹಾಕಿಸಬೇಕು ಎಂದು ಅವನು ಬಯಸುತ್ತಿದ್ದನು. ಇಷ್ಟಲ್ಲದೆ ನಲ್ಲೆಯ ಕಾಮನೆಗಳನ್ನೆಲ್ಲಾ ನೆರವೇರಿಸಬೇಕೆಂದು ಅವನು ಆಶಿಸುತ್ತಿದ್ದನು.

ಅದನ್ನೆಲ್ಲಾ ಅವನು ಅರಿತಿದ್ದನು. ಆದರೆ ಈ ವ್ಯಾವಹಾರಿಕ ವಿಚಾರಗಳಿಗಿಂತಲೂ ಪ್ರಬಲವಾದ ಭಾವನೆಯೊಂದು ಅವನ ಮನಸ್ಸಿನಲ್ಲಿ ನೆಲಸಿತ್ತು.

ಅತನು ಬಟ್ಟೆ ಬದಲಿಸಿಕೊಂಡನು. ತಾಯಿಯು ಕೆಟ್ಟದೃಷ್ಟಿದೋಷವನ್ನು ನಿವಾಳಿಸಿದಳು. ಜಯಶ್ರೀಯು ಪಾತ್ರೆಗಳನ್ನು ಸುತ್ತುತಂದಳು. ಬಳಿಯಲ್ಲಿ ಕುಳಿತು ತಾಯಿ ಮಾತುಕತೆ ತೊಡಗಿದಳು. ಆದರೆ ಜನಸ್ತೋಮದ ಶಕ್ತಿಯು ಅತನ ಮನಸ್ಸನ್ನು ಆಕ್ರಮಿಸಿತ್ತು. ಬಾಲಕ ವಿಶ್ವಾಸನ ಪ್ರಶ್ನೆಯಿಂದ ಈ ಶಕ್ತಿಯು ನಿಗಡಿತವಾಗಿದೆಯೆಂದೂ ಅತನು ಕಂಡುಕೊಂಡನು. ಆದುದರಿಂದ ತಾಯಿಯ ವಾತ್ಸಲ್ಯ ಮನದನ್ನೆಯ ಶೃಂಗಾರ–ಪ್ರೇಮಗಳಾವುವೂ ಅವನನ್ನು ತಡೆಯಲು ಸಮರ್ಥವಾಗಲಿಲ್ಲ.

ಆದರೆ ಇಂದು ಸಂಭ್ರಮಾವಸ್ಥೆಯು ಕೊನೆಗೊಂಡಿತು. ವಿಶ್ವಾಸನು ಕೇಳಿದ್ದ ಪ್ರಶ್ನೆಗೆ ಎರಡು ತಿಂಗಳುಗಳ ತನಕ ಅವನಿಂದ ಉತ್ತರಿಸಲಾಗಲಿಲ್ಲ. ಇಂದು ಜನಸಮ್ಮರ್ದವು ಉತ್ತರಿಸಿತ್ತು ಆ ಪ್ರಶ್ನೆಯನ್ನು!

ಅವನ ಮನಸ್ಸು ಗಾಳಿಯೊಂದಿಗೆ ಆಗಸದಲ್ಲಿ ಹಾರಾಡುತ್ತಿತ್ತು. ನಮ್ಮ ಜನಸಮಾಜವು ಕೇವಲ ಗೋಮಯಪಿಂಡವಲ್ಲ. ವಿದ್ಯುಚ್ಛಕ್ತಿಯಿದು! ಕೇವಲ 'ಗುಂಡಿ' ಯನ್ನೊತ್ತಿದರೆ ಸಾಕು. ಅದನ್ನೇ ಡಾ. ಲೋಹಿಯಾ ಮಾಡಿದ್ದಾರೆ. ಆದುದರಿಂದಲೇ ಈ ದೀಪಗಳು ಬೆಳಗಿವೆ!

ಭ್ರಾಂತಿ ಕೊಲಗಿತು. ಅತನು ಪ್ರಸನ್ನನಾದನು. ಸುತ್ತಣ ಕಗ್ಗತ್ತಲೆಯಿಂದ ವಾರಾಗುವ ದಾರಿಯನ್ನು ಎರಡು ತಿಂಗಳುಗಳ ತರುವಾಯ ಅತನು ಕಂಡುಹಿಡಿದನು. ನೂತನ ಗೋವಾ ನಿರ್ಮಾಣದ ಈ ದಾರಿಯು ಅವನನ್ನು ಕರೆಯುತ್ತಿತ್ತು.

ಊಟದ ತರುವಾಯ ಜಯಶ್ರಿಯು ಅವನ ಕೋಣೆ ಸೇರಿದಳು. ಕೆಲದಿನಗಳ ತರುವಾಯ ಅವನು ಆಕೆಯನ್ನು ಚೆನ್ನಾಗಿ ನೋಡಿದನು. ಆಕೆಯನ್ನು ಗಟ್ಟಿಯಾಗಿ ಅಪ್ಪಿಕೊಂಡನು. ಮದುವೆಯಾಗಿ ಮೂರು ತಿಂಗಳೂ ಕಳೆದಿರಲಿಲ್ಲ. ನವೋಢೆಯ ನಾವೀನ್ಯವಿನ್ನೂ ಹಳತುದಾರಿಯನ್ನು ಹಿಡಿದಿರಲಿಲ್ಲ. ಹೊಸಪ್ರೇಮಸ್ಪರ್ಶಸಂಗದಲ್ಲಿ ಕೊಟ್ಟ ಮಾತನ್ನು ಅವನು ಪೂರಯಿಸಿರಲಿಲ್ಲ. ನೂತನ ಗಾರ್ಹಸ್ಥ್ಯದ ವಿವಿಧರಂಗಗಳ ಸುಂದರಸ್ವಪ್ನಗಳನ್ನು ಕಾಣುತ್ತಾ ಆಕೆಯೂ ವ್ಯಗ್ರಳಾಗಿದ್ದಳು.

ನಿನ್ನೆಯ ಮಹಾಪ್ರವಾಹದಲ್ಲಿ ಅವನ ಸಾಂಸಾರಿಕ ಬಂಧನಗಳೆಲ್ಲಾ ಕಳಚಿ ಹರಿದುಹೋಗಿದ್ದುವು. ಸಕಲ ಗೋವಾನಿವಾಸಿಗಳ ಒಡೆದ ಕುಟುಂಬಜೀವನವನ್ನು ವಿಲೀನೀಕರಿಸಿ, ಗೋವೆಯ ಸಮಗ್ರ ಹಾಗೂ ವಿಶಾಲವಾದ ಕುಟುಂಬಜೀವನವನ್ನು ನಿರ್ಮಿಸಬೇಕೆಂದು ಅತನು ಯೋಚಿಸಿದನು. ಇಂತಹ ಕನಸುಗಳನ್ನು ಕಾಣುತ್ತಲೇ ಅತನು ನಿದ್ದೆಹೋದನು.

ರಾತ್ರಿ ಕಳೆದಾಗ ಅವನು ಎಚ್ಚತ್ತನು. ಬಾಗಿಲುತೆರೆದು ಹೊರಗೆ ಬಂದನು. ಬೆಕ್ಕಿನ ಮರಿಗಳೊಂದಿಗೆ ಆಡಿದನು. ಹೂಗಳನ್ನು ಕೊಯ್ದು ಗಂಧವತಿಯಾದ ವಸುಂಧರೆಯ ಸೌಗಂಧ್ಯವನ್ನಾಸ್ವಾದಿಸಿದನು.

ಉದ್ಯಾನದ ಹಸುರುಬಣ್ಣದ ಶೈತ್ಯ, ನೀರಿನ ಸ್ವಚ್ಛತೆ ಗದ್ದೆಯ ಸೊಬಗು ಇವುಗಳನ್ನೆಲ್ಲಾ ಅತನು ಉಲ್ಲಾಸದಿಂದ ಆಸ್ವಾದಿಸಿದನು.

ಒಂಬತ್ತು ಗಂಟೆಗೆ ಶಾಲೆಸೇರಿದನು. ಹುಡುಗರನ್ನೆಲ್ಲಾ ನೋಡಿದನು. ಯೋಚಿಸಿದನು: ನಿನ್ನೆಯ ಸಮಾರಂಭವನ್ನಿವರು ನೋಡಿರಬಹುದು. ನಿನ್ನೆಯ ಮಳೆಯಲ್ಲಿ ಒದ್ದೆಯಾಗಿ ಇವರು ಆನಂದಿಸಿರಬಹುದು. ಸ್ಫೂರ್ತಿಜಲವನ್ನು ಇವರು ಕುಡಿದಿರಬಹುದು. ಇವರ ಹೃದಯದೀಪ ಅವಶ್ಯ ಬೆಳಗಬಹುದು—ಈ ರೀತಿ ಕಲ್ಪಿಸುತ್ತಾ ಕುತೂಹಲ್ಯ ವಾತ್ಸಲ್ಯ, ಒಲೆಗಳಿಂದ ಅವನು ವಿದ್ಯಾರ್ಥಿವೃಂದವನ್ನು ನೋಡಿದನು. ಇಂದಿನ ತನಕ ಈ ಶಕ್ತಿಯನ್ನು ನಾವು ಉಪೇಕ್ಷಿಸಿದ್ದೇವೆ. ಇಂದೀಗ ಇದನ್ನು ಉಪಯೋಗಿಸಿಕೊಳ್ಳಬೇಕು.

ಅವನ ಮನಸ್ಸು ಉದ್ರಿಕ್ತವಾಗಿತ್ತು. ಕುತ್ತಿಗೆಯು ಗದ್ಗದಿತವಾಗಿತ್ತು. ಅತನು ವಿಶ್ವಾಸನನ್ನು ಕರೆದನು. ವಿದ್ಯಾರ್ಥಿಗಳ ಕಣ್ಣುಗಳು ಥಳಥಳಿಸುತ್ತಿದ್ದುವು. ಎಳೆಯನಾದರೂ ವೀರನಾದ ವಿಶ್ವಾಸನು ನೂತನ ಗೋವಾನಿರ್ಮಾಣ ಸಮುದ್ಯತನೆಂದು ಅತನು ಬಗೆದನು.

ವಿಶ್ವಾಸನು ಉಪಸ್ಥಿತನಾದನು. ಮಧುಕರನು ಅವನನ್ನು ನೇಪರಿಸಿ ಹೇಳಿದನು: "ಈ ದಿನ ನಿನಗೆ ಉತ್ತರ ಕೊಡುತ್ತೇನೆ" ಮಕ್ಕಳೆಲ್ಲಾ ಹೆದರಿ ಎದ್ದುನಿಂತರು. ಎಲ್ಲೆಲ್ಲೂ ಹೊಳೆಯುವ ಕಣ್ಣುಗಳ ಬೆಳಕು ಹರಡಿತು.

ಮಧುಕರನು ಕೂಡಲೇ ಎದ್ದು ಕರಿಹಲಿಗೆಯತ್ತ ನಡೆದನು. ಫಲಕವನ್ನು ತೆಗೆದು ದೊಡ್ಡ ದೊಡ್ಡ ಅಕ್ಷರಗಳಿಂದ ಬರೆದನು. "A Nossa patria i India" ಭಾರತವು ನಮ್ಮ ಮಾತೃಭೂಮಿ!

ವಿಶ್ವಾಸನು ಘೋಷಿಸಿದನು: "Viva a India" "ಜೈ ಹಿಂದ್!"

ಮಕ್ಕಳೂ ಅದನ್ನು ಅನುಕರಿಸಿದರು. ಇಡೀ ಕರಗತಿಯು ಪ್ರಾಣಮಾನವಾಯಿತು. ಮಧುಕರನು ಹೇಳಿದನು: "ಮಗುವೆ, ನೀನೇ ನನ್ನ ಗುರು"

ಮಧುಕರನ ಕಣ್ಣುಗಳಲ್ಲಿ ನೀರುತುಂಬಿತ್ತು. ತುಟಿಗಳು ನಡುಗುತ್ತಿದ್ದುವು. ಅವನು ಕುಳಿತುಕೊಂಡನು. ಬಿಡುಗಡೆಯ ಅರ್ಜಿಯನ್ನು ಬರೆದು ಕವರಿನಲ್ಲಿರಿಸಿ, ಮೇಲಧಿಕಾರಿಗಳ ವಿಳಾಸ ಬರೆದನು. ಬಿಡುಗಡೆಯ ಪತ್ರದ ಪರಿಣಾಮವು ಭೀಷಣವಾಗಿ ಬಹುದೆಂದು ಅತನಿಗೆ ತಿಳಿದಿತ್ತು.

ಕೊನೆಗೆ ಅವನು ಎದ್ದು ನಿಂತನು. ಪ್ರತಿ ವಿದ್ಯಾರ್ಥಿಯ ಬಳಿಗೆ ಹೋದನು. ಪ್ರತಿಯೊಬ್ಬನನ್ನೂ ಮುದ್ದಿಸಿದನು. ಗಂಭೀರ, ವಾತ್ಸಲ್ಯ-ಪೂರ್ಣ ಸ್ವರದಿಂದ ಗಟ್ಟಿಯಾಗಿ ಹೇಳಿದನು: "Adeus! Rapayes Adeus! viva India!" ಮಕ್ಕಳು ಅದನ್ನು ಘೋಷಿಸಿದರು. ಅದನ್ನು ನಿಲ್ಲಿಸಿ ಮಕ್ಕಳನ್ನು ಸರಿಯಾಗಿ ನೋಡಿ-ಕೊಂಡು, ಅವನು ಕ್ಲಾಸಿನಿಂದ ಹೊರಗೆ ನಡೆದನು.

ಆಗಸದಲ್ಲಿದ್ದ ಬಣ್ಣ ಬಣ್ಣದ ಮೋಡಗಳಲ್ಲಿ, ನಿರಂತರ ವನರಾಜಿಗಳಲ್ಲಿ ದುಡಿಯುತ್ತಿರುವ ಕೃಷಿಕರಲ್ಲಿ, ಪರ್ವತಗಳಲ್ಲಿ ಸಂಚರಿಸುತ್ತಿರುವ ಗೋವುಗಳಲ್ಲಿ, ನೂತನ ಗೋವೆಯ ಸ್ವರ್ಣಮಯ ಚಿತ್ರ ಹೊಳೆಯುತ್ತಿರುವುದನ್ನು ಅತನು ನೋಡಿದನು.

ಕ್ಷೋಭೆ

ಶ್ರೀ. ಯಮ್ಮುಂಜ ರಾಮಚಂದ್ರ

ಕುದಿದು ಕುದಿದು ಆರುತಿದೆ
ಈ ಕ್ಷುಬ್ಧಸಾಗರ—
ವಿಷವ ಕಾರಿ ಕಾರಿ ಬಳಲಿ
ಮೈನೀಡಿದೆ ಸಾಗರ.
ಆಗ ಒಮ್ಮೆ ಈಗ ಒಮ್ಮೆ
ನೆನೆವು ಮರುಕಳಿಸುತಿರೆ
ಸುಳಿಗಾಳಿಯು ಬೀಸುತಿರೆ
ಬೂದಿರಾಶಿಯೊಳಗಿನಿಂದ
ಬೆಂಕಿಯ ಕಿಡಿ ಸಿಡಿಯುತಿರೆ
ಗಗನವನೇ ಸಿಗಿಯುವಂತೆ ಏಳುತಿದೆ ಕುದಿವ ತೊರೆ.
ಮುಂದೆ ನೋಡೆ ಗಾಳಿಯಿಲ್ಲ
ದಂಡೆಯಿಲ್ಲ, ಬಂಡೆಯಿಲ್ಲ
ಹೊಡೆವುದೆಲ್ಲಿ? ಎಲ್ಲಿ? ಎಂದು
ಮುಗಿಲಿನೆಡೆಗೆ ಭೋಂಕನೆದ್ದು
ಮತ್ತೆ ಸೋತು ನರಳಿ ನರಳಿ
ಸುರುಳಿ ಸುರುಳಿಯಾಗಿ ಹೊರಳಿ
ತಳಕೆ ತಲೆಯ ಬಡಿಯುತಿದೆ
ಮಡಿಯುತಿದೆ.....
ಒಳಗೆಲ್ಲೋ ಉಳಿದ ಕಿಡಿ
ಉಸಿರಿನ ಹೊಗೆ ಉಗುಳಿ ಉಗುಳಿ
ಮಡಿಯುತಿದೆ.....
ಈ ಕ್ಷುಬ್ಧ ಸಾಗರ—
ಕುದಿದು ಕುದಿದು ಆರುತಿದೆ!
ರಕ್ತ ಮಾಂಸದಾಗರ—
ಆರಿ ಆರಿ ಕುಸಿಯುತಿದೆ—
ಈ ಕ್ಷುಬ್ಧಸಾಗರ!

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಮೇರೆಗೆ '**ನೀಲಾಂಬಿಕೆಗಾಗಿ**' ಎಂಬ ಕಥೆಯ ವಿಮರ್ಶೆಗಳು ೧೭ ಜನರಿಂದಲೂ '**ಹೃದಯವೇದನೆ**' ಎಂಬ ಕಥೆಯ ವಿಮರ್ಶೆಗಳು ೧೫ ಜನರಿಂದಲೂ ಬಂದಿವೆ. ಒಬ್ಬರು ಮಾತ್ರ ಎರಡೂ ಕಥೆಗಳನ್ನೂ ಸೇರಿಸಿ ಒಂದೆ ವಿಮರ್ಶೆಯನ್ನು ಬರೆದು ಕಳುಹಿದ್ದಾರೆ.

'**ನೀಲಾಂಬಿಕೆಗಾಗಿ**' ಕಥೆಯ ವಿಮರ್ಶಕರು:

೧. ಶ್ರೀ. ವಸಂತ ಗಾಡಗೀಳ, ಶಿವಾಜಿನಗರ, ಪುಣೆ ೨. '**ಜಯಂತ**' ಸುರತಕಲ್ಲು ೩. ಶ್ರೀ. ಆರ್. ರಾಮರಾವ್, ತೊಂಡೆಭಾವಿ ೪. ಶ್ರೀ. ಅ. ಹನುಮಂತರಾಯ, ಹೊಸಪೇಟೆ ೫. ಶ್ರೀ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ, ಕಾಸರಗೋಡು ೬. ಶ್ರೀ. ಪಂಚಾಕ್ಷರಿ ಶಿವಬಸಯ್ಯ ಹೊಸಮಠ, ಗೋಕಾಕ ೭. ಶ್ರೀ. ಕುಲಕರ್ಣಿ ಶಂಕರರಾಯ, ಆಕ್ಕಲಕೋಟೆ. ೮. ಶ್ರೀ. ಡಿ. ಗುರುರಾಜರಾವ್ ಜೂನಿಯರ್ ಬಿ. ಎಸ್ಸಿ., ಸೆಂಟ್ರಲ್ ಕಾಲೇಜ್, ಬೆಂಗಳೂರು ೯. ಶ್ರೀ ಕೆ. ಎಸ್. ಶರ್ಮಾ, ಕಾಸರಗೋಡು ೧೦. ಶ್ರೀ. ಎಂ. ಆರ್. ಭಟ್ಟ, ಮದ್ಗುಣಿ (ಉ. ಕ.) ೧೧. ಶ್ರೀ. ಲಕ್ಷ್ಮೀಕಾಂತ, ಹುಬ್ಬಳ್ಳಿ ೧೨. ಶ್ರೀ. ಮು. ಸು. ಜೋಶಿ, ಧಾರವಾಡ. ೧೩. ಶ್ರೀ. ಸೂಗಣ್ಣಾ ಹುಂಡೇಕಾರ್, ಜೂನಿಯರ್ ಇಂಟರ್, ಶಂಕರ ಕಾಲೇಜು, ಯಾದಗಿರಿ. ೧೪. ಶ್ರೀ. ಜಿ. ವಿ. ಕುಲಕರ್ಣಿ ಸೀನಿಯರ್ ಬಿ. ಎ., ಜನತಾ ಕಾಲೇಜ್, ಧಾರವಾಡ. ೧೫. ಶ್ರೀ. ಆರ್. ಎ. ಕುಸುಗಲ್, ಬಿ. ಎ. (ಆನರ್ಸ್) ವಿಜಾಪುರ. ೧೬. ಶ್ರೀ. ಎಚ್. ಆರ್. ಶಾಸ್ತ್ರಿ, ಸುರಪುರ. ೧೭. ಶ್ರೀ. ಯು. ಮೋಹನರಾವ, ಬನ್ನಂಜೆ.

'**ಹೃದಯವೇದನೆ**' ಕಥೆಯ ವಿಮರ್ಶಕರು:

೧. ಶ್ರೀ. ಪಿ. ಅನಂತ ಜಹಾಗೀರದಾರ, ಕಲಬುರ್ಗಿ ೨. "ವಾಣಿ" ಹುಬ್ಬಳ್ಳಿ ೩. ಶ್ರೀ. ಶಿವಾನಂದ ಮುಳಗುಂದ, ಹುಬ್ಬಳ್ಳಿ ೪. ಶ್ರೀ. ಬಿ. ವಿರೂಪಾಕ್ಷಭಟ್ಟ, ಹೊಸಪೇಟೆ, ೫. ಶ್ರೀ. ಎನ್. ಭೀಮಭಟ್ಟ, ಕನ್ಯಾನ (ದ. ಕ.). ೬. "ಮಠಪತಿ ಅಣ್ಣಾ" ೭. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು ೮. ಶ್ರೀ. ಮು. ರಾ. ಭಟ್ಟ, ಮದ್ಗುಣಿ (ಕುಮಟಾ) ೯. ಶ್ರೀ ಕಾಳಪ್ಪ ಬಸಪ್ಪ ಪತ್ತಾರ, ಪಿ. ಬಿ. ಹಾಯಸ್ಕೂಲ್, ಜಮಖಂಡಿ. ೧೦. ಕುಮಾರ ಕೆ. ವಿ. ಫಡಣೀಸ್, ಶಿರಹಟ್ಟಿ ೧೧. ಶ್ರೀ ಬಿ. ಟಿ. ಪಾಟೀಲ, ತಿಗಡೊಳ್ಳಿ ೧೨. ಶ್ರೀ. ಆರ್. ರಾಮರಾವ್, ತೊಂಡೆಭಾವಿ (ಕೋಲಾರ ಡಿ.)

ಶ್ರೀ. ಎಸ್. ಬಿ. ಇನಾಮದಾರ ಗುರುಜಿ, ಹಳ್ಳೂರ ಅವರು ಎರಡೂ ಕಥೆಗಳನ್ನು ವಿಮರ್ಶಿಸಿದ್ದಾರೆ.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕಸಮಿತಿಯೇ ನೋಡಿ ತನ್ನ ತೀರ್ಮಾನವನ್ನು ಕೊಟ್ಟಿದೆ.

ಈ ಸಲ ಸಾಕಷ್ಟು ಜನರು ಮೇಲಾಟದಲ್ಲಿ ಭಾಗವಹಿಸಿದುದು ತುಂಬ ಸಂತೋಷದ ಸಂಗತಿ. ಯಾವುದೇ ಸಾಹಿತ್ಯ ಕೃತಿಯನ್ನು ಓದಿ ಪ್ರತಿಯೊಬ್ಬರೂ ಅದರ ಬಗೆಗೆ ತಮ್ಮದೊಂದು ವಿಶಿಷ್ಟವಾದ ಅಭಿಪ್ರಾಯವನ್ನು ಮಾಡಿಕೊಳ್ಳಬಹುದು; ಆದರೆ ತಮ್ಮ ಅಭಿಪ್ರಾಯದ ಸುಸಂಗತತೆ-ಅಸಂಗತತೆಗಳನ್ನು ಸರಿಯಾಗಿ ನೋಡಿಕೊಳ್ಳಬೇಕೆನ್ನುವವರೆಲ್ಲರೂ ಈ ಬಗೆಯ ವಿಮರ್ಶೆಯ ಮೇಲಾಟದಲ್ಲಿ ಭಾಗವಹಿಸುತ್ತಲಿದ್ದರೆ ತುಂಬ ಪ್ರಯೋಜನವಿದೆ. ಸರಿಯಾದ ಸಾಹಿತ್ಯವಿಮರ್ಶೆ ಯೆಂದರೆ ಬುದ್ಧಿ-ಹೃದಯಗಳ ವಿಕಾಸದ ಗುರುತಾಗಿರುವುದು.

"**ನೀಲಾಂಬಿಕೆಗಾಗಿ**" ಕತೆಯನ್ನು ವಿಮರ್ಶಿಸಿದವರಲ್ಲಿ **ಶ್ರೀ. ಎಚ್. ಆರ್. ಶಾಸ್ತ್ರಿ**, ಸುರಪುರ ಮತ್ತು **ಶ್ರೀ. ಕೆ. ಎಸ್. ಶರ್ಮಾ**, ಕಾಸರಗೋಡು ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಪುಂಡೂರು ವೆಂಕಟರಾಜ, ಶ್ರೀ. ಆರ್. ರಾಮರಾವ್, ಶ್ರೀ. ವಸಂತ ಗಾಡಗೀಳ ಮತ್ತು ಶ್ರೀ. ಕುಸುಗಲ್ ರಾಮಚಂದ್ರ ಅವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ ಜಯಂತ ಸುರತಕಲ್ಲು, ಶ್ರೀ. ಲಕ್ಷ್ಮೀಕಾಂತ, ಶ್ರೀ. ಯು. ಮೋಹನರಾವ್, ಶ್ರೀ. ಕುಲಕರ್ಣಿ ಶಂಕರರಾಯರು ಶ್ರೀ. ಡಿ. ಗುರುರಾಜಾರಾವ್, ಶ್ರೀ. ಜಿ. ವಿ. ಕುಲಕರ್ಣಿ, ಶ್ರೀ. ಮು. ಸು. ಜೋಶಿ ಇವರ ವಿಮರ್ಶೆಗಳು ಚೆನ್ನಾಗಿವೆ. ನಿಕ್ಕುವೆಲ್ಲ ತೀರ ಸಾಮಾನ್ಯವಾಗಿವೆ.

'ಹೃದಯವೇದನೆ' ಕಥೆಯನ್ನು ವಿಮರ್ಶಿಸಿದವರಲ್ಲಿ ಶ್ರೀ. ಕೆ. ಎಸ್. ಕರ್ಮಾ, ಕಾಸರಗೋಡು ಮತ್ತು ಶ್ರೀ. ಎನ್. ಭೀಮಭಟ್ಟ, ಕನ್ಯಾನ ಇವರ ವಿಮರ್ಶೆಗಳು ಅತ್ಯುತ್ತಮವಾಗಿವೆ. 'ಮಲಪತಿ ಅಣ್ಣ', ಶ್ರೀ. ಆರ್. ರಾಮ ರಾವ್ ಇವರ ವಿಮರ್ಶೆಗಳು ಉತ್ತಮವಾಗಿವೆ. "ವಾಣಿ" ಅವರ ವಿಮರ್ಶೆ ಚೆನ್ನಾಗಿದೆ. ಮಿಕ್ಕುವೆಲ್ಲ ತೀರ ಸಾಮಾನ್ಯ ವಿಮರ್ಶೆಗಳು.

ಮುಂದಿನ ಸಲದ ವಿಮರ್ಶೆಯ ಮೇಲಾಟಕ್ಕಾಗಿ 'ಕನಸಲ್ಲ ನನಸು' ಎಂಬ ಸಣ್ಣ ಕಥೆಯನ್ನಾಗಲಿ, 'ಬಲಿದಾನ' ನಂಬ ಐತಿಹಾಸಿಕ ರೂಪಕವನ್ನಾಗಲಿ ವಿಮರ್ಶೆಗೆ ತೆಗೆದುಕೊಳ್ಳಬೇಕು. ಈ ತಿಂಗಳ ೨೨ನೆಯ ದಿನಾಂಕದೊಳಗಾಗಿ ತಲ್ಪುವಂತೆ ವಿಮರ್ಶೆ ಕಳುಹುವುದನ್ನು ದಯೆಯಿಟ್ಟು ಎಲ್ಲರೂ ಲಕ್ಷ್ಯದಲ್ಲಿಡಬೇಕು.

—ಸಂಪಾದಕ

ನೀಲಾಂಬಿಕೆಗಾಗಿ

(ವಿಮರ್ಶೆ)

ಶ್ರೀ. ಎಚ್. ಆರ್. ಶಾಸ್ತ್ರಿ, ನಿಜಾಮ ಕಾಲೇಜ್, ಸುರಪುರ

ಇದೊಂದು ದುಃಖಾಂತ-ಐತಿಹಾಸಿಕ ಕಥೆ. ಪತಿವ್ರತೆಯೊಬ್ಬಳು ಪತಿವ್ರತೆಯಾಗಿಯೇ ಉಳಿಯುವುದಕ್ಕಾಗಿ ನಡೆದ ಬಲಿಪ್ರಯೋಗವಿದು. ಪತಿವ್ರತೆಯ ಪಾತಿವ್ರತ್ಯವೇನೋ ಉಳಿಯುತ್ತದೆ ದಿವ್ಯಜೀವವೊಂದರ ಆತ್ಮತ್ಯಾಗದಿಂದ; ಆದರೆ ತಾನೇ ಉಳಿಯುವುದಿಲ್ಲ. ಪವಿತ್ರಳಾಗಿಯೇ ಸ್ವೇಚ್ಛೆಯಿಂದ ಆಕೆ ಇಹಲೋಕದ ಯಾತ್ರೆಯನ್ನು ಮುಗಿಸುತ್ತಾಳೆ. ನಿರೀಕ್ಷಿತ ಸುಖಸನ್ನಿವೇಶವು ದುಃಖದಲ್ಲಿ ಪರಿವರ್ತಿತವಾಗುತ್ತದೆ. ಅಂದು ಆನಂದಸಾಗರದಲ್ಲೋಲಾಡಬೇಕಾಗಿದ್ದ ಚಂದಗಡವು, ಶೋಕಸಾಗರದಲ್ಲಿ ಮುಳುಗುತ್ತದೆ ಎಲ್ಲ ಒಬ್ಬಳಿಗಾಗಿ; ಒಂದು ದಿವ್ಯಜೀವಕ್ಕಾಗಿ; ಚಂದಗಡದ ಸಾಮ್ರಾಜ್ಯಲಕ್ಷ್ಮಿ ನೀಲಾಂಬಿಕೆಗಾಗಿ.

ನೀಲಾಂಬಿಕೆ ಚಂದಗಡದ ಹೂಳೆಯಗಾರ ತಿಮ್ಮರಸನ ಪತ್ನಿ. ಸತ್ಕುಲದಲ್ಲಿ ಜನಿಸಿದವಳು. ಮೇಲಿ-ಕಣ್ಣು ಕಳಿಸುವಂತಹ ಸೌಂದರ್ಯವನಳೆದು. ಆದರೆ ಇವೆಲ್ಲಕ್ಕೂ ಅವಳ ಪತಿ ತಿಮ್ಮರಸ ಅಯೋಗ್ಯನಾಗಿದ್ದ. ಪರಂಪರಾಗತವಾಗಿ ಬಂದಿದ್ದ ರಾಜ್ಯವನ್ನು ಬೆಟ್ಟರಿ ಉಳಿದ ಯಾವ ಪ್ರಶಂಸನೀಯ ಗುಣವೂ ಅವನಲ್ಲಿರಲಿಲ್ಲ. ಅವನೊಬ್ಬ ಕಡು ರಣಹೇಡಿ! ತನ್ನ ಸಿಂಹಾಸನವನ್ನುಳಿಸಿಕೊಳ್ಳುವುದಕ್ಕಾಗಿ ಶತ್ರುಗಳೊಡನೆ ಎಂತಹ ಕೀಳು ಸಂಧಿಕಾರ್ಯಕ್ಕೂ ಹೇಸದವನು. ಎಂತಲೆ ನೀಲಾಂಬಿಕೆಗಾಗಿಯೇ ಚಂದಗಡದ ಮೇಲೆ ದಂಡೆತ್ತಿ ಬಂದಿದ್ದ ಸವಣೂರಿನ ನವಾಬನೊಡನೆ ಯುದ್ಧಕ್ಕಂಜಿ, ಅವನು ಹೇಳಿದಂತೆಯೇ ಅವಳನ್ನು ಅವನಿಗೊಪ್ಪಿಸಲೂ ಸಿದ್ಧನಾಗಿದ್ದ. ಆದರೆ ರಣವೀರನೂ, ತೇಜೋಭಿಮಾನಿಯೂ, ಸದ್ಗುಣಗಳ ಪ್ರತೀಕನೂ ಆಗಿದ್ದ ತಿಮ್ಮರಸನ ತಮ್ಮ ರಾಮನಾಯಕನು, ನವಾಬನ ಮಾತುಗಳಿಗೆ ಕೆರಳಿ ಯುದ್ಧ ಮಾಡುತ್ತಾನೆ; ಕೊನೆಗೆ ಅಣ್ಣನ ನೀಚ ದೃಢನಿಶ್ಚಯವೇ ಮುಂದಾಗುತ್ತದೆ. ನೀಲಾಂಬಿಕೆಯೂ ಗಂಡನನ್ನು ಸಾಕಷ್ಟು ಪ್ರತಿಭಟಿಸುತ್ತಾಳೆ. ಆದರೆ ಅಬಲೆ; ಅನಿವಾರ್ಯವಾಗಿ ಸುಮ್ಮನಿರುತ್ತಾಳೆ.

ಆ ರಾತ್ರಿ ನೀಲಾಂಬಿಕೆಯನ್ನು ತಿಮ್ಮರಸನು ನವಾಬನ ಬಳಿಗೆ ಗುಪ್ತವಾಗಿ ಕಳಿಸುವನೆಂಬುದನ್ನು ಕೇಳಿ ರಾಮನಾಯಕನು, ಅವಳ ಬದಲು ತಾನೇ ಸ್ತ್ರೀವೇಷಧಾರಿಯಾಗಿ ಹೋಗಿ, ನವಾಬನನ್ನು ಕೊಲ್ಲುತ್ತಾನೆ. ಆದರೆ ತನ್ನಂತಹ ಯುದ್ಧವೀರನಿಗೆ ಸಲ್ಲದ ಮೋಸಗುಣದಿಂದ ಕೊಂದೆನಲ್ಲ—ಎಂದು ಪರಿತಪಿಸಿ, ತಾನೇ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ. ಇತ್ತ ನೀಲಾಂಬಿಕೆಯು, ಹೆಂಡತಿಯನ್ನೂ ಪರರಿಗೊಪ್ಪಿಸಲು ಹೇಸದ ಅಧಮ ಗಂಡನ ಮೇಲೆ ಕೆರಳಿ, ಅವನನ್ನು ಕೊಂದು ತಾನೂ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಹೀಗೆ ಒಂದೇ ರಾತ್ರಿಯಲ್ಲಿ ನಡೆಯಬಾರದುದೆಲ್ಲ ನಡೆದು, ಸುಖಾಂತವಾಗಿ ಮುಕ್ತಾಯವಾಗಬೇಕಾಗಿದ್ದ ಕಥೆಯು ದುಃಖಾಂತವಾಗಿ ಕೊನೆಗೊಳ್ಳುತ್ತದೆ. ಒಬ್ಬರಿಗಾಗಿ ಅನೇಕ ಜೀವಿಗಳನ್ನು ನುಂಗಿದ ಆ ಭೀಷಣರಾತ್ರಿಯು, ಬೆಳಗಾಗುವುದರೊಳಗಾಗಿ ಚಂದಗಡದ ಸಮಸ್ತ ಪ್ರಜೆಗಳೆದುರು ಅಪಾರವಾದ ದುಃಖಜಲಧಿಯನ್ನೇ ಸೃಷ್ಟಿಸಿ ಕೃತಕೃತ್ಯವಾಗುತ್ತದೆ.

ಇದಿಷ್ಟು ಕಥಾವಸ್ತು. ಕಥೆ ಐತಿಹಾಸಿಕವಾದುದು. ಐತಿಹಾಸಿಕವಾದುದಕ್ಕೆ ಕಥಾರೂಪವನ್ನು ಕೊಡಲು ಪ್ರಸಂಗೋಚಿತ ಸನ್ನಿವೇಶಗಳನ್ನು ರೂಪಿಸುವಾಗ, ಲೇಖಕನು ಅದಕ್ಕೆ ತನ್ನ ಕಲ್ಪನೆಯ ಆಧರಣವನ್ನಿಡುತ್ತಾನೆ. ಹಾಗೆ ಮಾಡುವಾಗಲೇ ಅತನ ಕಲಾನಿರ್ಮಾಣಕೌಶಲ್ಯವು ವ್ಯಕ್ತವಾಗುತ್ತದೆ. ಅದೇ ಅತನ ಯೋಗ್ಯತಾಯೋಗ್ಯತೆಗಳನ್ನು ಪರೀಕ್ಷಿಸುವ ನಿಕಷವು. ಅತ ಇತಿಹಾಸಕ್ಕೆ ದ್ರೋಹ ಬಗೆಯದಂತೆ, ರಸಾಭಾಸವಾಗದಂತೆ ವರ್ಣನೆಗಳನ್ನೂ ಸನ್ನಿವೇಶಗಳನ್ನೂ ಚಿತ್ರಿಸುವ ಕಲಾಕಾರನಾಗಿಯೂ ಇರಬೇಕು. ಮೊದಲನೆಯ ಕಾರ್ಯ ವಿಶೇಷವಾಗಿ ಕೇವಲ ಬೃಹತ್ಕೃತಿಗಳ ನಿರ್ಮಿತಿಯಲ್ಲಿ ನಡೆಯುತಕ್ಕುದಾದರೆ, ಎರಡನೆಯದು ಉಭಯಸಾಮಾನ್ಯ. ಈ ಕಾರ್ಯ ಪ್ರಸ್ತುತ ಕಥೆಯಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆಯೆಂಬುದನ್ನು ನೋಡಿದರೆ, ಪ್ರಾರಂಭದಲ್ಲಿ ನಮಗೆ ಕೊಂಚ ನಿರಾಶೆಯಾಗದಿರದು.

ಕಥಾಪ್ರಾರಂಭದಲ್ಲಿ, ರಾಜಧಾನಿ ಶತ್ರುಗಳಿಂದ ಮುತ್ತಲ್ಪಟ್ಟು ಹೊರಗೆ ಭಯಂಕರವಾದ ಯುದ್ಧ ನಡೆದಿದೆ ಎಂದು ಹೇಳುವಾಗ, ಅರಮನೆಯಲ್ಲಿಯ ಗಂಭೀರ ಪರಿಸ್ಥಿತಿಯ ವರ್ಣನೆಯು ಅತ್ಯುಯಶಸ್ವಿಯಾಗಿ ಕಾಣುವುದಿಲ್ಲ.

ನೀಲಾಂಬಿಕೆಯು "ಪ್ರಸಾಧನಗಳನ್ನು ಹರಡಿಕೊಂಡು ದರ್ಪಣ ಬೆದುರು ನಿಂತು, ತನ್ನನ್ನು ತಾನೇ ಅಲಂಕರಿಸಿಕೊಳ್ಳುತ್ತಿದ್ದಳು" ಎನ್ನುವ

ಮಾತೂ, 'ದೇಹದುದ್ದಕ್ಕೂ ಇದ್ದ ದರ್ಪಣದೆದುರು ನಿಂತು ಮತ್ತೆ ಮತ್ತೆ ತನ್ನ ಹೆಳಲನ್ನು ನೋಡಿ, ಅಲಂಕಾರವು ಸರಿಯಾಗದೆ ಎಂಬ ಸಮಾಧಾನದಲ್ಲಿಯೇ ಸ್ನಾನಗೃಹಕ್ಕೆ ತೆರಳಿದಳು"—ನೊದಲಾದ ಮಾತುಗಳೂ ಅವಳ ಮನಸ್ಸಿನಲ್ಲುಂಟಾದ ಸಂದೇಹ–ಭಯ ಭಾವನೆಗಳನ್ನು ಎತ್ತಿ ತೋರಿಸದೆ, ಅದಕ್ಕೆ ವಿರೋಧವಾಗಿವೆ. ಅವಳ ಈ ಅಲಂಕಾರವರ್ಣನೆಯನ್ನು ಲೇಖಕರು ಅಲ್ಲಿ ಮಾಡಬಾರದಾಗಿತ್ತು. ನೀಲಾಂಬಿಕೆಗಾದ ಅಪಶಕುನಸೂಚನೆಯ ವಾಕ್ಯಗಳು ಅಲ್ಲಿದ್ದರೂ, ಅವು ಪೂರ್ವೋಧೃತ ವಾಕ್ಯಗಳ ಭಾವವನ್ನು ಜಯಿಸಲಾರವು.

ಉದಾಹರಣೆಗಾಗಿ 'ಇಂದು ನನಗೇಕೋ ಬಲಗಣ್ಣು ಹಾರುತ್ತಿದೆ. ರಾಮನಾಯಕರಿಗೆ ಯುದ್ಧದಲ್ಲಿ ಏನಾದರೂ ಅಪಾಯ ಸಂಭವಿಸಿತೋ ಏನೋ!' ಎಂದು ನೀಲಾಂಬಿಕೆ ಉಸುರುವ ಪೂರ್ವದಲ್ಲಿ, ಲೇಖಕರು ಅವಳು 'ಪ್ರಸಾಧನಗಳನ್ನು ಹರಡಿಕೊಂಡು ದರ್ಪಣದೆದುರು ನಿಂತು, ತನ್ನನ್ನು ತಾನೇ ಅಲಂಕರಿಸಿಕೊಳ್ಳುತ್ತಿದ್ದಳು; ತನ್ನ ಕಪ್ಪುವರ್ಣದ ವಿಶಾಲ ಕೇಶರಾಶಿಯನ್ನು ಹಸ್ತಿದಂತದ ಹಣಿಗೆಯಿಂದ ಹಿಕ್ಕಿಕೊಳ್ಳುತ್ತಿದ್ದಳು' ಎಂದು ಹೇಳಿರುವುದರಿಂದ, ಆ ಮುಕ್ಯಕುನಸೂಚಕ ವಾಕ್ಯದ ಸಾರ್ಥಕತೆ ಅಷ್ಟೊಂದು ಗೋಚರವಾಗುವುದಿಲ್ಲ.

ಮುಂದೆ ಅವಳು ತಿಲಕವನ್ನಿಡುವಾಗ ಕಡ್ಡಿ ಕೆಳಗೆ ಜಾರಿ ಬಿದ್ದಿತೆಂದು ಹೇಳುವಾಗ, ಅವಳು ವಿಹ್ವಲಗೊಂಡು ನವಿಲಾಸನದ ನೇಲೆ ದೇಹ ಚಿಲ್ಲಿ ಯಾವುದೋ ವಸ್ತುವಿನ ಮೇಲೆ ದೃಷ್ಟಿ ನೆಟ್ಟು ಕುಳಿತಿದ್ದಳೆಂಬುದೂ, ಆಗ ಅವಳ ಮನಸ್ಸಿನಲ್ಲುಂಟಾದ ವಿಚಾರತರಂಗಗಳ ವರ್ಣನೆಯೂ ಮಾತ್ರ ಯಶಸ್ವಿಯಾಗಿವೆ. ಅವು ಅರಮನೆಯ ಗಂಭೀರತೆಯನ್ನೂ, ನೀಲಾಂಬಿಕೆಯ ಅಂತರಂಗದಲ್ಲಿ ಮೂಡಿದ್ದ ಭಯಾನುಮಾನಗಳನ್ನೂ ಸುಸ್ಪಷ್ಟವಾಗಿ ಬಿಂಬಿಸುತ್ತವೆ.

ಮುಂದೆ ಕೊನೆಯ ವರೆಗೂ ವರ್ಣಿತವಾದ ಎಲ್ಲ ವಿಷಯಗಳೂ ಹೃದ್ಯವಾಗಿವೆ. ಕ್ಷಾತ್ರವೀರನಾದ ರಾಮನಾಯಕನ ಶೌರ್ಯ–ಧೈರ್ಯಗಳೂ, ವೀರರ ಸಲ್ಲಕ್ಷಣಗಳಾದ ನಯ–ವಿನಯಗಳೂ, ಅತ್ತಿಗೆಯಲ್ಲಿಯ ಅತನ ಭಕ್ತಿ ಮೊದಲಾದುವುಗಳೂ ಚೆನ್ನಾಗಿ ವ್ಯಕ್ತವಾಗಿವೆ.

ಹಾಗೆಯೇ ನೀಲಾಂಬಿಕೆಯೂ ಒಂದು ಆದರ್ಶ ಪಾತ್ರವಾಗಿ ಚಿತ್ರಿಸಲ್ಪಟ್ಟಿದ್ದಾಳೆ. ಪತಿ ಎಷ್ಟು ಅಯೋಗ್ಯನಾಗಿದ್ದರೂ ಅವನನ್ನು ಪತಿಯೆಂದೇ ಭಾವಿಸಿದವಳು ನೀಲಾಂಬಿಕೆ; ಆದರೆ ಪ್ರತ್ಯಕ್ಷವಾಗಿ ಕೈಹಿಡಿದವನೇ ತನ್ನ ಪುರುಷತ್ವವನ್ನು ಕಳೆದುಕೊಂಡು 'ಕೈಹಿಡಿದವಳನ್ನು ಕೈಹಿಡಿದು' ಪರಪುರುಷರಿಗೊಪ್ಪಿಸುವ ನರಾಧಮನಾದಾಗ, ಅವಳು ಆ ಸಂಬಂಧವನ್ನು ಕಡಿದೊಗೆಯುತ್ತಾಳೆ. ಇಂತಹ ಗಂಡನಿರುವುದು ನಾಚಿಕೆಗೇಡುತನವೆಂದು ಬಗೆದು, ಕರಾಳೆಯಾಗಿ ಪತಿಯ ಪ್ರಾಣವನ್ನು ಹೀರಿ, ಪತಿವ್ರತೆಯರ ಧರ್ಮದಂತೆ ತಾನೂ ಅವನ ಮಾರ್ಗವನ್ನೇ ಹಿಡಿದು, ಸ್ತ್ರೀಯರ ಹೃದಯವು 'ವಜ್ರಾದಪಿ ಕಠೋರಾಣಿ' ಎಂಬುದನ್ನು ಸಾಧಿಸಿತೋರಿಸುತ್ತಾಳೆ.

ರಣಹೇಡಿ ತಿಮ್ಮರಸನ ಪಾತ್ರವೂ ಎಷ್ಟು ಬೇಕೋ ಅಷ್ಟು ಮಾತ್ರ ಅಲ್ಲಲ್ಲಿ ಸುಳಿದು, ತನ್ನ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದೆ.

ಇನ್ನೊಂದು ವಿಷಯ: ನವಾಬ–ರಾಮನಾಯಕರಲ್ಲಿ ಆದ ಯುದ್ಧದ ವರ್ಣನೆ ಕಥೆಯಲ್ಲಿ ಇನಿತೂ ಬರುವುದಿಲ್ಲ. ಇದೂ ಒಂದು ಲೇಖಕರ ವಿಶೇಷ ಚಾತುರ್ಯ. ಆದಸ್ಟು ಲೇಖಕರು ವರ್ಣಿಸುತ್ತ ಕುಳಿತಿದ್ದರೆ, ಮತ್ತೆ ರಸಾಭಾಸವಾಗುವ ಭಯವಿರುತ್ತಿದ್ದಿತು. ಆದ್ದರಿಂದ ಹಿಂಬದಿಯಲ್ಲೇ ಯುದ್ಧ ನಡೆದುದು ವಸ್ತುಪರಿಪೋಷಣೆಗೆ ಸಹಾಯಕವಾಗಿದೆ.

ಒಟ್ಟಿನಲ್ಲಿ ಪ್ರಾರಂಭದ ಸ್ವಲ್ಪಭಾಗವನ್ನು ಬಿಟ್ಟರೆ, ಕಥೆಯ ಉಳಿದೆಲ್ಲವೂ ಉತ್ತಮವಾಗಿದೆ. ಭಾಷೆಯೂ ಸುಂದರವಾಗಿ ಭಾವಸ್ಪಷ್ಟತೆಗೆ ಸಹಾಯಕವಾಗಿದೆ. ಲೇಖಕರು ರಾಮನಾಯಕ–ನೀಲಾಂಬಿಕೆಯರಂತಹ ಉತ್ತಮ ಮತ್ತು ಆದರ್ಶಪಾತ್ರಗಳನ್ನು ಇತಿಹಾಸ. ಗರ್ಭದಿಂದ ಆಯ್ದು, ನಮ್ಮ ಕಣ್ಮುಂದಿಟ್ಟು, ಭಾರತೀಯ ಸ್ತ್ರೀಯರ ಧೀರ–ಪವಿತ್ರಜೀವನವನ್ನು ಚಿತ್ರಿಸಿದುದಕ್ಕಾಗಿ ಅವರಿಗೆ ನಾವು ಋಣಿಗಳು. ಇನ್ನೂ ಇಂತಹ ಅನೇಕ ಕಥೆಗಳು, ಇವರಲ್ಲಿದ್ದ ಅಲ್ಪದೋಷಗಳನ್ನೂ ಕಳೆದುಕೊಂಡು, ಸರ್ವಾಂಗಸುಂದರವಾಗಿ ಲೇಖಕರ ಲೇಖನಿಯಿಂದ ಮೂಡಲೆಂದು ಹಾರೈಸುವೆವು.

ಹೃದಯವೇದನೆ

(ಸಣ್ಣಕತೆಯ ವಿಮರ್ಶೆ)

ಶೀ. ಕೆ. ಎಸ್. ಶರ್ಮಾ, ವಾಣಿಮಂದಿರಂ, ಕಾಸರಗೋಡು

ಹೃದಯದೌರ್ಬಲ್ಯವನ್ನೋಣ; ತನ್ನಿಮಿತ್ತವಾಗಿ ಬಂದೊದಗುವ ಮಾನಸಿಕ ಕ್ರಾಂತಿಯನ್ನೋಣ. ಒಂದು ಮತ್ತೊಂದರೊಡನೆ ಹೋರಾಡುವ ಸಮಯದಲ್ಲಿ, ಅಜ್ಞಾನವೆರಬು ಸುಳಿಯಲ್ಲಿ ಸಿಕ್ಕಬದುಳು ತನ್ನ ಮುಂದೆ ಕೆಲವೊನ್ಮೆ ದುರಂತವನ್ನು ತಂದೊಡ್ಡುತ್ತಿದೆಯೆಂಬುದಿದು ಕಣ್ಣಾರಿಕ ನಿಲುವು. ಹೃನಾದ ಬಾಳೂ ಕೆಡುವುದು. ಬಾಳನ್ನು ರೂಪಿಸಿ ಬಗೆದ ಆಶೆಯೂ ಒಡೆದುಹೋಗುವುದು. ಇದೇ ಈ ಮಾಪಸಿಕಕ್ರಾಂತಿಯ ಪ್ರತಿಫಲ.

ಕುಸುಮಾ ಅವಿವಾಹಿತ ತರುಣಿ. ಅಧ್ಯಾಪಿಕೆ. ತಾನು ಉದ್ಯೋಗದಲ್ಲಿರುವ ಶಾಲೆಯಲ್ಲೇ, ಅಧ್ಯಾಪಕವೃತ್ತಿಯಲ್ಲಿರುವ ಶ್ರೀಕಾಂತನನ್ನು ಮನಸಾ ಪ್ರೇಮಿಸಿದ ಸೌಂದರ್ಯತೃಷಿತೆ. ಆಗಾಗ ಶಾಲೆಯಲ್ಲಿ–ಮನೆಯಲ್ಲಿ–ಕಾಣಸಿಗುವ ಆ ಪ್ರೇಮಕುಸುಮವನ್ನು ತನ್ನೆದೆಯಲ್ಲರಿಸಿ, ಒಲವಿನಿಂದದನ್ನು ಪರಿಮಳಿಸಿ ಹೃದಯದ ಬೇಗೆಯನ್ನು ಶಾಂತಗೊಳಿಸಬೇಕೆಂದು ಕುಸುಮಾ ಬಗೆದಿದ್ದರೂ—ಅವಿಶೇಷ ಸಲುಗೆಯಿಂದಿದ್ದು ನಡೆದಾಡುವ ಶ್ರೀಕಾಂತರ ಮುಂತಪ್ಪಾಗಲಾರದು. ಹೀಗಿದೆ ಆ ಜೀವನಗಳ ಒಗ್ಗೂಟದ ಅಂತರ್ಗಾ ಆದರೆ ಪರಿಸ್ಥಿತಿಯು ಕೆಲವೊಂದು ಚಿಕ್ಕ ತೊಡರುಗಳು ಮಾತ್ರ

ಸವಿಯನ್ನು ದೂರದಲ್ಲಿರಿಸಿ ನಗೆಯಾಡಿಸುತ್ತಿತ್ತು ಯೆಂದರದು, ನೈವಾಹಿಕ ಸಮಸ್ಯೆಯ ಮುಂದೆ ಅಸ್ವಾವಿಕವಲ್ಲ!

ಒಂದು ದಿನ ಶ್ರೀಕಾಂತರು ಮೂವತ್ತು ರೂಪಾಯಿಗಳನ್ನು ಕೇಳಲು ಕುಸುಮಾಳ ಬಳಿ ಬಂದಿದ್ದರು. ಕುಸುಮಾಗೆ ಸಂಬಳ ಸಿಕ್ಕಿತ್ತು. ರೂಪಾಯಿಯ ಮಾತಿನ ಮೊದಲು—ದುರಂತಚಿತ್ರದ ಪೂರ್ವಪೀಠಿಕೆಯೋ ಎಂಬಂತೆ, ಮೇರೆ ವಿಹಾರಿದ ಸರಸಗಳು ನಲಿದಾಡುವುವು. ರೂಪಾಯಿಯನ್ನು ಕೊಡಲು—ಪರ್ಸಿನ ಬಳಿ ಹೋದ ಕುಸುಮಾ, ಪರ್ಸನ್ನು ಕಾಣದೆ ಚಡಪಡಿಸಿ, ಅದರ ಹುಡುಕಾಟದ ಮುಂದೆ ಶ್ರೀಕಾಂತರಲ್ಲೇ ಸಂಶಯ ತಾಳುವಳು. ಶ್ರೀಕಾಂತರು ಸಲುಗೆಯ ಪರಮಾವಧಿಯಲ್ಲಿ, ಒಂದೆರಡು ಬಾರಿಯಲ್ಲ ಕುಸುಮಾಳನ್ನು ಇಂತಹ ಪೇಚಿನಲ್ಲಿ ಸಿಲುಕಿಸಿದ್ದು. ಅದುದರಿಂದಲೇ ಕುಸುಮಾ ಮನವನ್ನು ಸಂಶಯಕ್ಕೆರವಾಗಿಸಿದಳು. ಅದರೆ ಪರ್ಸಿನ ವಿಚಾರವನ್ನೇ ಅರಿಯದ ಶ್ರೀಕಾಂತರು ಹೃದಯವನ್ನು ತೆರೆದು ಹೇಳಿದರೂ, ಕುಸುಮಾಳದನ್ನು ನಂಬಲಿಲ್ಲ. ಪರಿಸ್ಥಿತಿ ವಿಕೋಪದ ಕಡೆ ಮಾಲಿತು. ಶ್ರೀಕಾಂತರು ತೆರಳಿದರು. ಮರುದಿನ ಪುನಃ ಅದೇ ವಿಚಾರ ಶಾಲೆಯಲ್ಲಿ ಮೊಳಗಿದರೂ, ಸಂಶಯದ ಮರೆಯಲ್ಲಿ ತೇಲಿ ಹೋಯಿತು. ಕುಸುಮಾಳ ಮುಂದೆ ನಾಚಿದ ಶ್ರೀಕಾಂತರು, ಊರಿಗೆ ತೆರಳಿ ಒಂದು ವಾರದೊಳಗೆ ಪತ್ರವನ್ನೂ ಪೂರಾಮೂವತ್ತು ರೂಪಾಯಿಗಳನ್ನೂ ಕಳುಹಿದರು. ಕುಸುಮಾ ತನ್ನಲ್ಲಿದ್ದ ಸಂಶಯವು ಸತ್ಯಪೂರ್ಣವೆಂದು ಬಗೆದು, ಏನೇನೋ ಯೋಚನೆ ತಾಳಿ ಮನೆಗಡಿಯಿಡುವಾಗಲೇ, ಅವಳಕ್ಕನ ಮಗುವಿನ ಆಟಗೆಯ ಸಾವಾನುಗಳೆಡೆಯಲ್ಲಿ ನೆಲೆನಿಂತ ಪರ್ಸನ್ನೂ—ಹಣವನ್ನೂ ತಾನಿಟ್ಟ ತೆರದಲ್ಲೇ ಕಾಣುವಂತಾದಳು. ಅವಳ ತಲಮಲಕ್ಕೆ ಮೇರೆಯಿಲ್ಲದಾಯಿತು; ಅದು ಭೀಕರವಾಗಿ ವೊರೆಯಿತು. ಈ ವೊರೆತದ ಮುಂದೆ 'ಶ್ರೀಕಾಂತ'ರ ಅನಿರೀಕ್ಷಿತ ಹೃದಯವೇದನಾಯತ್ತ ಮರಣವನ್ನು ಕಣ್ಣೀರೆ ಕೋಡಿಯಲ್ಲಿ ಕಾಣುವಂತಾದಳು. ಅಂತೂ ಒಂದು ಬಗೆಯ ಅಜ್ಞಾನ, ಬಾಳಿನ ರೂಪವನ್ನು ಕೆಡಿಸಿತು. ಮನಸಾವರಿಸಿದ ಪತಿದೇವರ ತಾಯಿಗೆ, ಪ್ರತಿಕಿಂಗಳೂ ಯಥಾಶಕ್ತಿ ಸೇವೆಸಲ್ಲಿಸಿ, ತನ್ನ ಜೀವನದ ಬೇಗೆಯನ್ನು ಕಣ್ಣೀರಿಂದ ತಣಿಸಿಕೊಳ್ಳುವಳು.

ಇದಿಷ್ಟು ಕಥಾವಸ್ತು.

ಸಣ್ಣ ಕತೆಗಳ ರಚನೆಯೆಂದರೆ ಅದು ಸಾಮಾನ್ಯವಲ್ಲ! ಅರಿಸಿದ ವಸ್ತುವಿನ ಕೂಲಂಕಷ ಪ್ರಜ್ಞಾನದ ಮುಂದೆ, ಶದಂಗಗಳನ್ನು ಚಿಕಿತ್ಸಾವಿದಗ್ಧನಂತೆ–ವಿಶ್ಲೇಷಣೆಗೊಳಿಸಿ ತೋರಿ–ಸತ್ಯವನ್ನು ಕಾಣಿಸುವ ಕುಶಲ ನೈಪುಣ್ಯವಿರಬೇಕು. ಅರಿಸಿದ ವಸ್ತು ಒಂದು ಪೂರ್ಣ ಜೀವನವಿರಬಹುದು; ಇಲ್ಲವೆ ಜೀವನದ ಒಂದು ವಿಶಿಷ್ಟ ಸಂಧಿಯ ಕಥನವಿರಬಹುದು. ಹೇಗಿದ್ದರೂ ಎತ್ತಿಕೊಂಡ ವಸ್ತುವಿನ ಪೂರ್ಣತೆಯನ್ನು ಆಕರ್ಷಕ ಸನ್ನಿವೇಶದ ರಸನಿಮಿಷಗಳಲ್ಲಿ ತೇಲಾಡಿಸುವ ಚೈತನ್ಯ ಕಥನಕಾರನಲ್ಲಿರಬೇಕು. ಅದುದರಿಂದಲೆ 'ಸಣ್ಣ'ದು ಎಂಬುದು ಪುಟಪರಿಮಿತಿಗಲ್ಲ ವಿಾಳಲು; ಹೃದಯಾವರ್ಜಕ ಮಧುರ ಕಥನದ ಸತ್ವರ ಗತಿಗಿರುವುದೆಂಬುದನ್ನು ನುನಗಾಣಬೇಕು.

'ಹೃದಯವೇದನೆ'ಯೆಂಬ ಈ ಹೆಸರೇ ಕಥಾಂತರ್ಗತವಾದ ಹೃದಯಕ್ಕೆ ಬಕುವಾಗಿ ಒಪ್ಪಿತ್ತಿದೆ. ಕೊನೆಯ ಮಾತಾದ "ಶ್ರೀಕಾಂತರು ವ್ಯತಿರಾದುದು ಹೃದಯವೇದನೆಯಿಂದ.... .. ನಾನು ಬದುಕಿಯೂ ಸತ್ತವಳಂತಿರುವ ಕಾರಣವೂ–ಹೃದಯವೇದನೆ....." ಎಂಬುದು, ಕಥೆಯ ಇಡಿಯ ವೃತ್ತವನ್ನು ಎತ್ತಿ ತೋರುತ್ತಿದೆ. ಈ ಬಗೆಯ ಈ ಮಾರ್ಮಿಕ ಸನ್ನಿವೇಶಕ್ಕನುಗುಣವಾಗಿ, ಲೇಖಕರು ಸ್ವಾಭಾವಿಕವಾಗಿಯೇ ಇರುವ ಒಂದು ವಸ್ತುವನ್ನಿರಿಸಿದ್ದಾರೆ. ವಸ್ತುವಿನ ವಿಸ್ತಾರವೂ ಬಹುಕ್ಷೇತ್ರವ್ಯಾಪಿಯಾಗಿರದೆ, ಕೇವಲ ಎಂಡೇ ಭಾವತಂತುಗಳಲ್ಲಿ ನಿಲುಕಿದ ಗತಿಯುಳ್ಳದೆ. ಸ್ತ್ರೀ–ಪುರುಷಜೀವನಾಯತ್ತವಾಗಿ ನೆಲೆನಿಂತ ಈ ಭಾವಗತಿಯ ವಿಶ್ಲೇಷಣಕ್ಕೆ—ಕೇವಲ ಒಂದೇ ಒಂದು ಸಂದರ್ಭ, ಅದು ಅಜ್ಞಾನಾಯತ್ತವಾಗಿ ತಲೆದೋರಿದ ಹೃದಯದೌರ್ಬಲ್ಯ ಕಾರಣವಾಯಿತು. ಪರಿಸ್ಥಿತಿಯು ಇದಕ್ಕೆ ಸಹಕಾರಿಯಾಯಿತು. ಹೃದಯಗಳನ್ನು ಕುಲುಕಿತು. ತಡೆಯಲಾರದ ನೋವನ್ನೆಬ್ಬಿಸಿತು. ಈ ನೋವಿನಲ್ಲಿ ಒಂದು ಜೀವ ಈ ಲೋಕದಿಂದ ಬಿಡುಗಡೆಯನ್ನೈದಿದರೆ, ಮತ್ತೊಂದು ಬದುಕಿರುವಂತೆಯೆ ಜೀವನದ ಸುಖ-ಸಂತೋಷಗಳನ್ನು ಸಮಾಧಿಮಾಡಿತು. ಇರಲಿ! ಇದು ಕೇವಲ ಕಥೆಯ ಆಯ್ಕೆಯ ನೋಟ ಹಾಗೂ ಕಥಾವಸ್ತು ವಿಸ್ತರಣದ ವಿಚಾರದಲ್ಲಾಡಿದ ಮಾತು ಮಾತ್ರ!

ಕಥಾಘಟನೆಗಳು ಎಂತಿವೆ?—

ಒಂದು ಹಂತದಿಂದ ಮೇಲೇರಿದ ಕತೆ, ಮಧ್ಯದಲ್ಲೆ ನೂತನರೇಖೆಯೊಂದನ್ನೆಳೆದು ಗತೇತಿವೃತ್ತದ ಪುನಃಸ್ಮರಣೆಯನ್ನು ತಂದೊಡ್ಡಿ, ಪುನಃ ಮೊದಲ ಹಂತದಿಂದ ದಾಟಿ ಮುಂದೆ ಸರಿಯುತ್ತಿದೆ. ಅರ್ಥಾತ್ ಕತೆಯಿದು ಗತಕಾಲದ ಜೀವನಸ್ಮರಣೆಯನ್ನು ತಂದೊಡ್ಡುವ ಬಗೆಯಲ್ಲಿ ರಚಿತವಿದ್ದಂತಿದೆ. ಆ ಸ್ಮರಣೆಯಲ್ಲೊಂದು ಬಗೆಯ ನೆಲೆತವನ್ನೊಳಗೊಳ್ಳಲೆಂದೇ ಲೇಖಕರು, ವರ್ತಮಾನದ ಸೊಗಸನ್ನು ಒಳಗೊಳಿಸಿದಂತೆ ಕಾಣುತ್ತದೆ ಆದಕ್ಕಾಗಿಯೆ ಮಧ್ಯದಲ್ಲೇ ಶ್ರೀಕಾಂತರ ದಿನಾಚರಣೆಯ ಪ್ರಸಕ್ತಿಯನ್ನು ತಂದೊಡ್ಡಿ, ವಿಚಾರವನ್ನು ಕೆರಳಿಸಿ, ಒಡನೆಯೆ ವಸ್ತುವಿನ ಉತ್ತರಾರ್ಧವನ್ನು ನೆಳೆದಿದ್ದಾರೆ. ಇದೊಂದು ಬಗೆಯ ನೂತನಾವಿಷ್ಕಾರವೆಂದೆಂದರೆ· ಈ ಬಗೆಯ ರಚನೆಯನ್ನು ಮೆಚ್ಚುವುದು ನ್ಯಾಯವಿದೆ. ಈ ರಚನಾನುಗುಣವಾಗಿಯೆ ಪಾತ್ರರಚನೆಯೂ ಸಾಗಿದರೆ ಮಾತ್ರ ವಸ್ತುವು ಬೆಳಗುವುದ..

'ಹೃದಯವೇದನೆ'ಯಲ್ಲಿ ಪ್ರಮುಖವಾಗಿ ನೆಲೆನಿಲ್ಲುವ ಪಾತ್ರವೆಂದರೆ 'ಕುಸುಮಾ–'! ಕುಸುಮಾಳ ಹೃದಯ ಪ್ರೇಮಪೂರಿತವಾಗಿದೆ. ಪ್ರಾಯಕ್ಕನುಗುಣವಾಗಿ ನೆಲೆನಿಂತ ಆಕೆಯ ಮನೋಧರ್ಮ, ಸಹೋದ್ಯೋಗಿಯಾದ ಶ್ರೀಕಾಂತರನ್ನು ಬಯಸಿದುದು

ಅಸ್ವಾಭಾವಿಕವಲ್ಲ! ಆದರೆ, ಇಲ್ಲಿ ಈ ಪಾತ್ರದ ಸೌಂದರ್ಯ ಪೂರ್ಣರೂಪದಲ್ಲಿಲ್ಲವೆಂದು ನಾವು ಮನಗಾಣುತ್ತೇವೆ. ಅಧ್ಯಾಪಿಕೆಯಾಗಿದ್ದ ಆಕೆ, ಸುಸಂಸ್ಕೃತೆಯಾಗಿರಬೇಕಾದ ಆಕೆ, ತನ್ನ ಮನೆಯಲ್ಲಿ ಶ್ರೀಕಾಂತರೊಡನೆ ವ್ಯವಹರಿಸಿದ ರೀತಿ, ಶ್ರೀಕಾಂತರನ್ನು ಕನಸಿನಲ್ಲಿ ಕಂಡರೀತಿ, ಆ ಕನಸಿನಲ್ಲಿ ಆಕೆ ಪಡೆದ ಯೌವನದ ಸುಖಲಾಭ, ಗೆಳತಿ ವಿಮಲೆ ಮನೆಗೆ ಬಂದಿದ್ದರೂ ಶ್ರೀಕಾಂತರು ಶಾಲೆಯಲ್ಲಿ ವ್ಯವಹರಿಸುತ್ತಿದ್ದ ಸಂಪ್ರದಾಯವನ್ನೇ ಮನಸ್ಸಿನಲ್ಲಿ ಹಚ್ಚಿಕೊಂಡು ವಿಶೇಷ ಪರಾಮರ್ಶೆಯಿಲ್ಲದೆ ನಡೆದ ರೀತಿ, ಇವು ಕುಸುಮಾಳ ಹೃದಯದೌರ್ಬಲ್ಯವನ್ನು ಪ್ರಕಾಶಗೊಳಿಸುತ್ತಿದ್ದಂತೆ, ಹೃದಯವೇದನೆಯ ಅಂತರಿಕ ಗತಿಯನ್ನು ತಡೆಹಿಡಿದು ನಿಲ್ಲಿಸಿನೆಯೆಂದಾಡಬೇಕು. ಕುಸುಮಾ ಶ್ರೀಕಾಂತರನ್ನು ಮನಸಾವರಿಸಿದ್ದರೆ, ಅವರಲ್ಲಿ ತನ್ನ ಪೂರ್ಣತೆಯನ್ನು ರೂಪಿಸಿದ್ದರೆ, ಶ್ರೀಕಾಂತರಲ್ಲಿ ನೆಲೆಗೊಂಡಿದ್ದ ಗುಣಗಳನ್ನು ಮೆಚ್ಚಿದ್ದರೆ, ಆ ಸಂದರ್ಭದಲ್ಲಿ–ಶ್ರೀಕಾಂತರು ತನ್ನೆದೆಯನ್ನು ವ್ಯಕ್ತವಾಗಿ ತೋಡಿ "ನಾಲ್ಕು ಜನರೆದುರು ವಿನೋದ ಮಾಡುತ್ತೀನೆಂದು ಕಳ್ಳತನದಲ್ಲಿ (ಏಕಾಂತ)? ವಿನೋದಮಾಡುವ ವ್ಯಕ್ತಿ ನಾನಲ್ಲ ಕುಸುಮಾ—" ಎಂದಾಡುವ ಸಂದರ್ಭದಲ್ಲಿ—ವಿಶ್ವಾಸವನ್ನು ದೂರವೆಸೆದು ಸಂಶಯಕ್ಕೆ ಮನವನ್ನೆರವಾಗಿಸುವುದು, ಈ ಬಗೆಯ ಚರಿತ್ರ ಚಿತ್ರಣದಲ್ಲಿ ಖಂಡಿತವಾಗಿ ಒಪ್ಪತಕ್ಕ ಮಾತಲ್ಲ. ಹೃದಯ ದೌರ್ಬಲ್ಯದ ಮೂರ್ತಿಮತ್ತಾದ ಕುಸುಮಾ, ಎಷ್ಟೊಂದು ಮೆಚ್ಚಿನಿಲದ ಶ್ರೀಕಾಂತರನ್ನು ವರಿಸಿದ್ದರೂ–ಅದು ಈ ಸಂದರ್ಭದಲ್ಲಿ ಕುಸಿಯದೆ ಸಾಗಿಲ್ಲ. ಆಕೆಯ ದೌರ್ಬಲ್ಯಕ್ಕೆ ಸಾಕ್ಷಿ "ಒಂದೆರಡು ರೂಪಾಯಿಗಳೇ? ಒಂದುನೂರಾಮೂವತ್ತು ರುಪಾಯಿಗಳು, ನಾನು ತಾಳ್ಕೆ ತಪ್ಪಿ ಮಾತನಾಡಬೇಕಾಯಿತು" ಎಂಬೀ ವ್ಯವಹಾರವು! ಶ್ರೀಕಾಂತರು ವಿನೋದಿಗಳೆಂದಾಕೆ ಬಗೆದಿದ್ದರೆ, ಈ ಬಗೆಯ ಸಲುಗೆಯಸ್ನವರು ನೋದಲು ಉಪಯೋಗಿಸಿದ್ದರೆ–ಆಕೆ ಈ ಸಂದರ್ಭದಲ್ಲಿ ಅವರನ್ನು ಅನ್ಯಥಾ ಬಗೆಯುವುದು ಅಸ್ವಾಭಾವಿಕವೆಂದಾಡುವಂತೆ, ಅನೌಚಿತ್ಯವೆಂದೂ ತಿಳಿಯಬೇಕಾಗಿದೆ. ಏಕಾಂತದಲ್ಲಿ–ಹೃದಯಾನುಭಾವವು ಪೂರ್ಣಸ್ವರೂಪದಲ್ಲಿ ನೆಲೆನಿಂತ ಕಾಲದಲ್ಲಿ, ಹಿಂದಿನ ಸಲುಗೆಯನ್ನು ಎತ್ತುವುದಾದರೂ, ಅದನ್ನೇ ಕೊನೆಯವರೆಗೆ ಎತ್ತಿ ಹಿಡಿದು ಸಾಗುವುದು ಧರ್ಮವಲ್ಲ. ಮನೆಯಲ್ಲಿರುವ ಉಳಿದ ಪರಿಸ್ಥಿತಿ, ವಿಮಲೆಯ ಗತಿ, ಮಕ್ಕಳ ವ್ಯಾಪಾರ, ಇವನ್ನು ಅಧ್ಯಾಪಿಕೆಯಾದ ಕುಸುಮಾ ಕಾಣಬೇಕಾದುದು ತಪ್ಪಲ್ಲ. ಹಾಗೆ ಆಕೆ ಮಾಡಿದ್ದರೆ? ಕತೆಯೇನೋ ತಡೆಯಿಲ್ಲದೆ ಸಾಗುವುದಾದರೂ, ಪಾತ್ರರಚನೆ, ಅನುಭಾವಗತಿ, ಸಾಂದರ್ಭಿಕತೆಗಳು ಕೊಂಚ ಕೊಡರನ್ನೊಡ್ಡುವುವು.

'ಶ್ರೀಕಾಂತರು–' ಆದರ್ಶವ್ಯಕ್ತಿ. ಬಡಜೀವನ. ಕುಸುಮಾಳಲ್ಲಿ ವಿಶೇಷ ಸಲುಗೆಯುರಿಸಿಕೊಂಡ ವ್ಯಕ್ತಿಯಾದರೂ, ಯಾರೂ ಇಲ್ಲದ ಕಾಲದಲ್ಲಿ ಕುಸುಮಾಳ ಹಾಸಿನಲ್ಲಿ ಬಂದು ಮಂಡಿಸುವುದು, ತನ್ನ ಅಗತ್ಯದ ಕೇಳಿಕೆಯ ಮುಂದೆ ನೆಲೆನಿಂತ ಪ್ರೇಮಸಲ್ಲಾಪಗಳನ್ನು ಸವಿಯುವುದು—ಇದು ಅಷ್ಟೊಂದೊಪ್ಪುವುದಿಲ್ಲ. ಮುಖ್ಯವಾಗಿ ಈ ಬಗೆಯ ರಜನೆ ಈ ಜೀವನಗಳಲ್ಲಿ ಸಾಗುವುದು–ಅಷ್ಟೊಂದು ಜೆಲುವನ್ನಿತ್ತಿಲ್ಲ. ಇದೊಂದನ್ನುಳಿದರೆ ಮುಂದಿನ ಎಲ್ಲಾ ಭಾಗಗಳಲ್ಲೂ ಶ್ರೀಕಾಂತರೊಬ್ಬರು ಆದರ್ಶವ್ಯಕ್ತಿಯೆಂದಾಡಿದರೆ ತಪ್ಪಾಗಲಾರದು ಸರಳ ಮನಸ್ಸಿನ ಶ್ರೀಕಾಂತರು ಅಶ್ರುವಾದನ ಹೊರೆಯನ್ನು ಹೊತ್ತು ಭಗ್ನಹೃದಯರಾಗುವುದು ನ್ಯಾಯವಿದ್ದರೂ, ದಿನಗಳ ಬಳಿಕ ಮರಣಕ್ಕೀಡಾಗುವುದು ಸರಿಯೆನಿಸುವುದೋ—ನಾನರಿಯೆ. ಶ್ರೀಕಾಂತರು ಸಾಯಬಾರದಿತ್ತೆಂದೇ ತೋರುತ್ತದೆ. ಆದರೆ ಅಲ್ಲೂ ಮಾನವಗತ ದೌರ್ಬಲ್ಯ ಮುಂದೆ ನಿಂತಿರಬಹುದು. ಇದು ಲೋಕವಿರುದ್ಧ ಮಾತಲ್ಲವಾದರೂ, ಕಥಾಮಾರ್ಗದಲ್ಲಿ ಸರಿಯೆನಿಸುವುದೋ ಎಂಬ ಸಂದೇಹ ಮಾತ್ರ ಮುಂದೆ ಬರುತ್ತದೆ. ಅಂತೂ ಕಥಾಪ್ರಗುಣವಾಗಿ ಪಾತ್ರರಚನೆಯೊಗಿಲ್ಲವೆಂದು ಹೇಳಲೇಬೇಕಾಗಿದೆ. ಅಜ್ಞಾನ ನಿಮಿತ್ತವಾಗಿ ಒರಬಹುದಾದ ಕೆಲವೊಂದು ಘಟನೆಗಳು–ದುರಂತಕ್ಕೆರವಾಗುವುದದು ಸತ್ಯಪೂರ್ಣವೆ. ಅಂತಹ ಉದಾಹರಣೆಗಳು ಜೀವನದಲ್ಲಿ ಒಂದೆರಡಲ್ಲ. ಸಾವಿರಾರು! ಆದರೆ ಪ್ರಕೃತಕೋಪಾತ್ತ ರಚನೆಯಲ್ಲಿ ಮಾತ್ರ ಅದು ಕೆಲವೆಡೆ ಅಪೂರ್ಣತೆಯನ್ನು ತಂದಿರಿಸಿದೆ; ಕಾರಣ ಲೇಖಕರೆತ್ತಿದ ಪಾತ್ರಗಳಂತಹವು.

ಇದರಂತೆಯೆ ಇನ್ನೊಂದು ಮಾತು:—ಘಟನೆಗೆ. ಕತೆಯ ಪೂರ್ವಾರ್ಧವು ಕೊನೆಗೊಂಡು, ಉತ್ತರಾರ್ಧದ ಸರಾಕಾಷ್ಠೆಗೆ ಕಾಲಿರಿಸುವಲ್ಲೇ ಲೇಖಕರು, 'ಐದು ವರ್ಷಗಳ ಹಿಂದಿನ' ಘಟನೆಯ ಪ್ರಸಕ್ತಿಗೆಡೆಯಿತ್ತು, ಪುನಃ ಉತ್ತರಾರ್ಧವನ್ನು ತಳೆದ ರೀತಿಯಿದು ಕಳೆಗೂಡಿಸಲಿಲ್ಲ ಈ ಬಗೆಯ ರಚನೆಯು ಕತೆಗೆ ದ್ರುತಗತಿಯನ್ನು ಇತ್ತಂತೆ, ಆಕರ್ಷಣೆಯನ್ನು ಮಾರ್ಮಿಕವಾಗಿ ನೀಡಬೇಕು ಆದರೆ ಈ ಸಂದರ್ಭದಲ್ಲಿ ಲೇಖಕರು ಸಫಲಂರಾಗಿಲ್ಲ. ಆದರೆ....

ಇಷ್ಟೆನ್ನಬಹುದು: ಇದೊಂದು ಜೀವನಧರ್ಮಕ್ಕನುಗುಣವಾಗಿ ಬಂದ ಕತೆ. ಸುಪುಷ್ಟ–ರಸಾವಹ ಸಾಂದರ್ಭಿಕ ವಚನ ನಿಚಯಗಳಿಂದೊಪ್ಪಿನಿಂತ ಕತೆ. ಸೂಕ್ಷ್ಮವಾಗಿ ಒಂದು ಜೀವನವನ್ನು ಸಾರಿನಿಂತ ಕತೆ. ಇಷ್ಟೊಂದು ವಿಚಾರದಲ್ಲಿ ಮಾತ್ರ ಈ ಕತೆಯನ್ನು ಮೆಚ್ಚಬಹುದು. ಈ ಮೆಚ್ಚಿಕೆಯ ನುಡಿಯಾಗಿ ಮತ್ತೊಂದು ಮಾತನ್ನು ಪೋಣಿಸುವುದೆಂದಾದರೆ, ಅದು "ಕತೆಗೊಂದು ಸ್ವಾಭಾವಿಕ ಅನುಭಾವ ಸಂಪತ್ತಿದೆ; ನೂತನಾವಿಷ್ಕಾರವಿದೆ" ಎಂದು.

ಸಾದರ ಸ್ವೀಕಾರ

೩೭ **ಪ್ರದೀಪ** (ಹೊಸ ಮಾಸಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ವಿನೀತ ರಾಮಚಂದ್ರ ರಾಯರು, ಗಾಂಧೀಜೌಕು, ಧಾರವಾಡ. ಕ್ರೌ. ೧೫೪ ಪುಟಗಳು, ವಾರ್ಷಿಕ ಚಂದಾ ೫ ರೂಪಾಯಿ. ಬಿಡಿಸಂಚಿಕೆಗೆ ೦-೮-೦.

ಶ್ರೀ. ವಿನೀತ ರಾಮಚಂದ್ರರಾಯರು ಕರ್ನಾಟಕದ ವಾಚಕಪ್ರಪಂಚಕ್ಕೆ ಹೊಸಬರೇನೂ ಇಲ್ಲ. ಅನೇಕ ವರ್ಷ ಜಯಕರ್ನಾಟಕ ಮಾಸಪತ್ರಿಕೆಯನ್ನು ನಡೆಸಿ, ಸಾಕಷ್ಟು ಪರಿಚಿತರಾಗಿರುವರು. ಇವರೀಗ ಅಧ್ಯಾತ್ಮಿಕ ವಿಷಯ ಪ್ರಾಧಾನ್ಯವಾಗಿರುವ ಈ ಮಾಸಪತ್ರಿಕೆಯನ್ನು ಹೊಸತಾಗಿ ಪ್ರಾರಂಭಿಸಿರುವರು. ಅಧ್ಯಾತ್ಮಿಕ ವಿಷಯಾಭ್ಯಾಸಿಗಳಾದ ಅನೇಕ ಜನ ಲೇಖಕಮಿತ್ರರ ನೆರವು ಇವರಿಗೆ ಇದೆಯೆಂಬುದಕ್ಕೆ, ಈ ಮೊದಲನೆಯ ಸಂಚಿಕೆಯಲ್ಲಿ ಬಂದ ಒಳ್ಳೊಳ್ಳೆಯ ಲೇಖನಗಳು ಪ್ರತ್ಯಕ್ಷ ಉದಾಹರಣೆಗಳಾಗಿವೆ.

ವ್ಯವಹಾರದ ಬೆನ್ನು ಹಿಡಿದೇ ನಡೆದಿರುವ ನಮ್ಮ ಜನತೆಯ ಇಂದು ಮನಸ್ಸು ವಿಕ್ಷಿಪ್ತವಾಗಿದೆ. ಹೃದಯಗಳು ಕಲುಷಿತವಾಗಿವೆ. ಇಂತಹ ಸಂದರ್ಭದಲ್ಲಿ ಮನಸ್ಸು-ಹೃದಯಗಳಿಗೆ ಸಂಯಮನ-ಸಂಸ್ಕೃತಿಗಳ ಅಗತ್ಯವಿದೆ. ಅಧ್ಯಾತ್ಮವಲ್ಲದೆ ಬೇರೆಯು ಯಾವ ವಿಷಯಗಳೂ ಕಾಲೋಚಿತ ಸಂಯಮ-ಸಂಸ್ಕೃತಿಗಳನ್ನು ಒದಗಿಸಲಾರವು ಇದರ ನೈಜವನ್ನರಿತ-ಶ್ರೀ. ವಿನೀತರಾಮಚಂದ್ರರಾಯರು, ಈ ಪತ್ರಿಕೆಯ ಪ್ರಾರಂಭದ ಮೂಲಕ, ಆ ಮಾರ್ಗದಿಂದ ಜನತೆಗಾಗಿ ಆ ಕಾರ್ಯಮಾಡಲಿಕ್ಕೆ ಮುಂದುವರಿದಿದ್ದಾರೆ ಇಂತಹ ಕಾರ್ಯದ ಪ್ರಯೋಜನ-ಶ್ರೇಯಸ್ಸುಗಳಿಗೆ ಸಂಪಾದಕರ ವ್ಯಕ್ತಿತ್ವ ವೈಶಿಷ್ಟ್ಯಗಳೂ ಜನತೆಯ ಸಹಾಯ-ಸಹಕಾರಗಳೂ ತುಂಬ ಆವಶ್ಯಕ. ಅವೆರಡೂ ಇಲ್ಲದೆ ಹೋದರೆ; ಪ್ರದೀಪದಂತಹ ಪತ್ರಿಕೆಯನ್ನು ನಡೆಸುವ ಹೊಣೆಗಾರಿಕೆ ಸಂಪಾದಕರಿಗೊಂದು ದೊಡ್ಡ ಹೊರೆಯಾಗಿ ನಿಲ್ಲಬಹುದು. ಶ್ರೀ. ವಿನೀತ ರಾಮಚಂದ್ರರಾಯರ ಈ ಸಾಹಿತ್ಯಕಾರ್ಯವು ಜನತೆಗೆ ಪ್ರಿಯವಾಗಿ ಬಹುಕಾಲ ಬಾಳಲಿ.

೩೮ A Discriptive Catalogue of Manuscripts —volume II. (ಕೈಬರಿಹದ ಗ್ರಂಥಗಳ ಸೂಚೀಗ್ರಂಥ). ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿರುವ ಕೈಬರಿಹದ ಪ್ರಾಚೀನ ಗ್ರಂಥಗಳ ಪರಿಚಯಾತ್ಮಕ ಸಂಪುಟವಿದು. ಇದಕ್ಕೆ ಪ್ರಧಾನ ಸಂಪಾದಕರು ಪ್ರೊ. ಎಸ್. ಎನ್. ಮಾಳವಾಡ ಎಂ. ಎ. ಡೈರೆಕ್ಟರ್ ಆಫ್ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡ—ಅವರು. ಡಿ. ಅ. ೧೨+೧೨೫ ಪುಟಗಳು. ಬೆಲೆ ೩-೦-೦.

೩೯ **ಗ್ರಾಮಾಭ್ಯುದಯ ಮತ್ತು ಸಹಕಾರ** (ಮೈಸೂರು ಸರಕಾರದ ಭೂದಾನ) ವಿದ್ಯಾದಾನ ಚಳವಳಿ ವಿಷಯಕ ವಿಶೇಷಾಂಕ). ಸಂಪಾದಕರು ಶ್ರೀ. ಕೆ. ಸಿ ಚೌಡಪ್ಪರೆಡ್ಡಿ ಬಿ. ಎ. ಅವರು. ಮೈಸೂರು ಸರಕಾರದ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳ ಶಾಖೆಯವರಿಂದ ಪ್ರಕಾಶನ. ಕ್ರೌ. ೧೫೮ ಪುಟಗಳು.

ಸಂಚಿಕೆಯು ತನ್ನ ಉದ್ದೇಶಕ್ಕನುಗುಣವಾದ ವಿವಿಧ ಲೇಖನಗಳಿಂದ ತುಂಬಿ ನಿಂತಿದೆ. ಶ್ರೀಮಾನ್ ದೇವುಡು ಮತ್ತು ಶ್ರೀಮಾನ್ ತಾತಾಚಾರ್ಯ ಶರ್ಮ ಅವರ ಲೇಖನಗಳು, ನಮ್ಮ ಪ್ರಾಚೀನ ಕಾಲದ ಸಾಂಸ್ಕೃತಿಕ ಮಹತಿಯನ್ನು ಚೆನ್ನಾಗಿ ತಿಳಿಸಿಕೊಡುವಂತಹವಾಗಿವೆ.

೪೦ **ಗಾದೆಗಳು** (ವಿಮರ್ಶೆ-ವಿವೇಚನೆಗಳಿಂದ ಕೂಡಿದ ಕಿರುಹೊತ್ತಿಗೆ) ಬರೆದವರು ಶ್ರೀ. ಎ. ಕೆ. ರಾಮಾನುಜನ್ ಎಂ. ಎ. ಲಿಂಗರಾಜ ಕಾಲೇಜ್, ಬೆಳಗಾಂವಿ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯ ಆನೆಯ ಪುಷ್ಪವಿದು ಪ್ರೂ. ಕ್ಯಾ. ಅ. ೯೦ ಪುಟಗಳು. ಬೆಲೆ ೦-೪-೦.

೪೧ **ರಾಷ್ಟ್ರಗೀತ ಮತ್ತು ನಾಡಗೀತ** (ಗೀತ ಸಂಕಲನ). ಪ್ರಕಾಶಕರು ಕನ್ನಡ ಸಾಹಿತ್ಯ ಪರಿಷತ್ ಕೇಂದ್ರ, ಗಂಗಾವತಿ. ಪ್ರೂ. ಕ್ಯಾ. ಅ. ೮ ಪುಟಗಳು. ಬೆಲೆ ೦-೧-೦.

೪೨ **ಕನ್ನಡ ಸಾಹಿತ್ಯಸಂಘ, ಶಹಾಬಾದ** (ವಾರ್ಷಿಕ-ವರದಿ ಮತ್ತು ಲೆಕ್ಕಪತ್ರದ ವಿವರಣೆ). ಕಾರ್ಯದರ್ಶಿಗಳು ಶ್ರೀ. ವ. ಹ. ಜಹಗೀರದಾರ್ ಮತ್ತು ಶ್ರೀ. ತ. ರಾ. ಹೆರಕಲ್. ಕ್ರೌ. ಅ. ೧೨ ಪುಟಗಳು.

ಕನ್ನಡನಾಡು-ನುಡಿಗಳ ಪ್ರೀತಿಯನ್ನು ಹೆಚ್ಚಿಸುವಂತಹ ಅನೇಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಈ ಸಂಸ್ಥೆಯು ಬಹುದಿನಗಳಿಂದಲೂ ನಡೆಸಿಕೊಂಡು ಬಂದಿದೆ. ಶಹಾಬಾದು ಒಂದು ಉದ್ಯಮಕೇಂದ್ರನಗರ. ನಾಡಿನ ಎಲ್ಲ ಭಾಗಗಳಿಂದಲೂ ಕೆಲಸಕ್ಕಾಗಿ ಹೋದ ಕನ್ನಡಿಗರು ಅಲ್ಲಿ ಇದ್ದಾರೆ ಅವರೂ ಸ್ಥಳೀಯ ಕನ್ನಡಿಗರೊಂದಿಗೆ ಬೆರೆತು ಈ ಸಂಘಕ್ಕಾಗಿ ದುಡಿಯುತ್ತಿರುವುದು ಸಂತೋಷದ ಸಂಗತಿ ವಿರೋಧಕವಾತಾವರಣದಲ್ಲಿಯೂ ನಿಷ್ಠೆಯಿಂದ ಕಾರ್ಯಮಾಡುತ್ತ ಬಂದಿರುವ ಈ ಸಂಸ್ಥೆಯು, ಇಂದಿನ ಸ್ವಾತಂತ್ರ್ಯವಾತಾವರಣದಲ್ಲಿ ಇನ್ನೂ ಪ್ರಭಾವಶಾಲಿಯಾಗಿ ಕಾರ್ಯಮಾಡುವುದೆಂಬುದರಲ್ಲಿ ಸಂದೇಹವಿಲ್ಲ.



ಬಸ್ ನಡೆಸುವವರು ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್ ಪೂರ್ಣ ಶಕ್ತಿಯನ್ನು ಕೊಡುತ್ತದೆ ಮತ್ತು ಮಿತವ್ಯಯಿಸದು ಎಂದು ಹೇಳುತ್ತಾರೆ — ಅದುದರಿಂದಲೇ ಅವರಲ್ಲಿ ಅನೇಕ ಮಂದಿ ತಪ್ಪದೆ ಅದನ್ನೇ ತೆಗೆದುಕೊಳ್ಳುತ್ತಾರೆ!

ದ್ವಿಶಕ್ತಿಯುತವಾದ

ಮೋಬಿಲ್‌ಗ್ಯಾಸ್ ಉಪಯೋಗಿಸಿ

ಅಧಿಕ ಎಂಜಿನ್ ಶಕ್ತಿಯನ್ನು ಪಡೆಯಿರಿ

ಇಂದಿನ ಪೆಟ್ರೋಲುಗಳ ಸೈಜ಼ ಅಭ್ಯುದ್ಧಿಕ ಶಕ್ತಿಯನ್ನು ಕೊಡುವುದು ಬಂದೇ — ಅದೆಂದರೆ ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್. ಏಕೆಂದರೆ ಅದು ಬೇರೆ ಯಾವ ಪೆಟ್ರೋಲಿನ ಸಂತಲೂ ಹೆಚ್ಚು ಎಂಜಿನ್ ಕೋಷ್ಟಕಗಳನ್ನು ನಿವಾರಣೆ ಮಾಡುತ್ತದೆ!

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್ ಸುಗಮವಾಗಿ ಹೆಚ್ಚು ಆಕ್ಸಲರೇಷನ್ ಮತ್ತು ಕ್ರಿಗ್ಯಾಲನ್ನಿಗೂ ಹೆಚ್ಚು ಮೈಲೇಜನ್ನು ಕೊಡುತ್ತದೆ. ನಿಮ್ಮ ಕಾರು ಅಥವಾ ಟ್ರಕ್ಕು ನಿಮ್ಮ ನಿರೀಕ್ಷಣೆಯ ಪ್ರಕಾರ ಕೆಲಸಮಾಡುತ್ತದೆ.

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್ ಉಪಯೋಗಿಸಲು ಈಗಲೇ ಪುರು ಮಾಡಿರಿ. ಮೋಬಿಲ್‌ಗವರ್ ಕಾಂಪೌಂಡನ್ನೊಳಗೊಂಡ ಪೆಟ್ರೋಲು ಇದೊಂದೇ. ಈ ಕಾಂಪೌಂಡಿನಲ್ಲಿ ನಮ್ಮ ಬಲವಾದ ಆಂಟಿವ್‌ಗಳ ಮಿಶ್ರಣವು ಇದುವರೆಗೆ ಪೆಟ್ರೋಲಿನಲ್ಲಿ ಸೇರಿಸಲ್ಪಟ್ಟಿರಲೇ ಇಲ್ಲ. ಮೋಬಿಲ್‌ಗ್ಯಾಸ್ ಉಪಯೋಗಿಸಲು ಪುನು ಮಾಡುವುದು ಲಾಭಕರ, ಏಕೆಂದರೆ ಅದು ನಿಮ್ಮ ಹಣಕ್ಕೆ ಹೆಚ್ಚು ಪರಿಣಾಮವನ್ನು ಕೊಡುತ್ತದೆ.

ಹಾರುವ ಕೆಂಪು ಕುದುರೆಯ ಗುರುತಿರುವಲ್ಲಿ

ಸ್ಟ್ಯಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ

(ಕಂಪೆನಿಯ ಸದಸ್ಯರುಗಳ ಜಂಟಿಗಾರಿಕೆಯು ಮಿತವಾದದ್ದು)

V. 2056

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Betgeri at the Jayanti Office, Dharwar

ನವಂಬರ್

೧೯೫೫

ಬೆಲೆ:

೮ ಆಣೆಗಳು

ಬನ್ನಿ ಇದೊ!

ಬನ್ನಿ ಇದೋ, ಬನ್ನಿರಿದೋ, ಬನ್ನಿ ಇದುವೆ ಚಿನ್ನ !
ಬನ್ನಿ ಕೊಟ್ಟು-ಕೊಂಡರಿಲ್ಲ, ನಮಗಾವುದು ಬನ್ನ !

೧

ಇರುಳ ಕಳೆವ ಮೊದಲ ಬೆಳಕ ಕರೆದುದಿದೇ ಬನ್ನಿ....
ಕರುಳಲಿಯೇ ದಿವ್ಯಾಗ್ನಿಯ ಮುರಿಗೊಳಿಸಿದೆ ಬನ್ನಿ ...
ನರರ ಹವಿಯ ಸುರಲೋಕಕೆ ನಿಲುಕಿಸಿತಿದೆ ಬನ್ನಿ....
ಸುರರನೆಲ್ಲ ಧರಣಿಗೆ ತಂದಿರಿಸಿತಿದೇ ಬನ್ನಿ....
ಬನ್ನಿ ಇದೋ, ಬನ್ನಿರಿದೋ ಬನ್ನಿ ಇದುವೆ ಚಿನ್ನ,
ಬನ್ನಿ ಕೊಟ್ಟು-ಕೊಂಡರಿಲ್ಲ ನಮಗಾವುದು ಬನ್ನ !

೨

ವಿಜಯದಶಮಿಯಿಂದು ಶಮಿಯ ಪೂಜೆಗಾಗಿ ಬನ್ನಿ....
ಭುಜಬಲ-ನಿರ್ಭಯದ ಮುಡಿಪ ತುಂಬಿ ತುಂಬಿ ತನ್ನಿ ...
ಗಜಸತ್ತ್ವದ ವೈರಿದಳವು ಆಗುವುದೈ ಕುನ್ನಿ....
ವಿಜಯ ಬೇಕೆ ? ಬೇಕಾದರೆ ಕೊಡಿರಿ ಕೊಳಿರಿ ಬನ್ನಿ !
ಬನ್ನಿ ಇದೋ, ಬನ್ನಿರಿದೋ, ಬನ್ನಿ ಇದುವೆ ಚಿನ್ನ !
ಬನ್ನಿ, ಕೊಟ್ಟು-ಕೊಂಡರೆಲ್ಲ ಲೋಕವು ಸಂಪನ್ನ !

ಈ ಸಂಚಿಕೆಯಲ್ಲಿ :

●

ಇಷ್ಟೆಂಥ ಕರ್ನಾಟಕ ರಾಜ್ಯ? (ಸಂಪಾದಕೀಯ)
ಸಂಪಾದಕರು ೨೦೧

ಜಯಂತಿಗೆ ಸಹಾಯಧನ ೨೦೩

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೨೦೩

ಹಿಮಗಿರಿಯ ಅಡಿಯಲ್ಲಿ (ಸಣ್ಣಕತೆ)
ಶ್ರೀ ಪ್ರ. ನು. ಗಲಗಲಿ ಬಿ. ಎ (ಆನರ್ಸ್), ಬಿ. ಕಾಮ್. ಮುಂಬಯಿ ೨೦೫

ಮರೆಯಲಾಗದ ಯಾತ್ರೆ (ಪ್ರವಾಸ ಪ್ರಬಂಧ)
ಶ್ರೀ. ಎಸ್. ಎಸ್. ಗವಗಕರ ಬಿ. ಎ ಧಾರವಾಡ ೨೧೦

ಮೋಹನನು ಮೈದೋರೆ (ಕವನ)
'ಆನಂದಕಂದ' ೨೧೪

ಗೆಲವು (ಚಕ್ಕಕಥೆ)
ಶ್ರೀ. ಮಿರ್ಜಿ ಅಣ್ಣಾರಾಯರು, ಸೇಡಬಾಳ ೨೧೫

ಕನ್ನಡ ನವ್ಯಕಾವ್ಯದ ರೀತಿ-ನೀತಿ (ಒಂದು ವಿಮರ್ಶೆ)
ಶ್ರೀ. ಆರ್. ಜಿ. ಕುಲಕರ್ಣಿ ಬೆನಕಟ್ಟಿ ಕರ್ನಾಟಕ ಕಾಲೇಜ್, ಧಾರವಾಡ ೨೧೮

ಕಹಿನೆನಪುಗಳು (ಕಿರುಗತೆ)
ಶ್ರೀ. ಹಾ. ಮಂ. ನಾಗೇಶ, ಗುಲ್ಬರ್ಗಾ ೨೨೦

ಆನಂದಯಜ್ಞ (ಒಂದು ದೃಶ್ಯಕವನ)
ಶ್ರೀ ಆರವಿಂದ ನಾಡಕರ್ಣಿ ಬಿ. ಎಸ್ಸಿ., ಎಲ್ ಎಲ್. ಬಿ. ಮುಂಬಯಿ ೨೨೧

ಟೊಂಪೂವಿನ ಕ್ರಿಸ್‌ಮಿಸ್ (ಅನುವಾದಿತ ಕಥೆ)
ಶ್ರೀಮತಿ 'ಕಲಾ' ಮಲ್ಲೇಶ್ವರಂ, ಬೆಂಗಳೂರು ೨೨೩

ವ್ಯಷ್ಟಿ ಸಮಷ್ಟಿನಾದಗಳು (ವಿ. ಪ್ರ. ಪ್ರಬಂಧ)
ಶ್ರೀ. ಬಿ. ಎಚ್. ಶ್ರೀಧರ ಎಂ. ಎ ಕೆನರಾ ಕಾಲೇಜ್, ಕುಮಟಾ ೨೨೭

ಅಮೇರಿಕನ್ ಕೂಲಿಕಾರನ ಸಿರಿನಂತಿಕೆ (ಪರಿಚಯ)
ಶ್ರೀ. ಸಂಜೀವ ಲಕ್ಷ್ಮೀಶ್ವರ ಬಿ ಎ. ಮುಂಬಯಿ ೨೩೦

ಕೋಗಿಲೆಗೆ (ಅನುವಾದಿತ ಕವನ)
ಶ್ರೀ. ಜ ಶ್ರೀ. ದೇಸಾಯಿ (ಜರಕುಂಟೆ) ಬಿ. ಎ., ಬಿ. ಟಿ. ಶಹಾಪುರ ೨೩೧

ಪರಪತ್ರ ವಾಚನಾಭಿರುಚಿ (ಪ್ರಭಾವ ಚಿತ್ರ)
ಶ್ರೀ ಎಸ್. ಆರ್. ಬಾಲೇಹೊಸೂರ ಬಿ. ಎ. (ಆನರ್ಸ್) ಪುಣೆ ೨೩೨

ವಿಮರ್ಶೆಯ ಶಿಕ್ಷಣರಂಗ (ಕಥೆ–ನಾಟಕ)
ಶ್ರೀ ಹಾ. ಕಸ್ತೂರಿ ಮತ್ತು ಶ್ರೀ. ಎಸ್. ಕೆ. ಕಟ್ಟಿ ೨೩೫

ಸಾದರ ಸ್ವೀಕಾರ ಜಾಹಿರಾತಿನ ಕೊನೆಯ ಪುಟದಲ್ಲಿ

ಜಯಂತಿ

ಸಂಪುಟ ೧೪ ಸಂಚಿಕೆ ೬

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಇದೆಂಥ ಕರ್ನಾಟಕ ರಾಜ್ಯ?

ರಾಜ್ಯ ಪುನರ್ಘಟನಾ ಆಯೋಗ 'ಕರ್ನಾಟಕ ರಾಜ್ಯ' ಎಂಬುದೊಂದು ವಿಭಾಗವನ್ನು ನಿರ್ಮಿಸಿರುವುದು. ಬಹುದಿನಗಳಿಂದಲೂ ಕನ್ನಡಿಗರು ಬಯಸುತ್ತಿದ್ದ ಏಕೀಕೃತ ಕರ್ನಾಟಕವು ಕನ್ನಡಿಗರಿಗೆ ದೊರೆಯಿತೆಂದು ಕೆಲವು ಜನರು ಸಮಾಧಾನದ ಉದ್ಗಾರಗಳನ್ನು ತೆಗೆಯುತ್ತಿದ್ದಾರೆ. ರಾಜಕೀಯ ಮುಂದಾಳುಗಳಂತೂ, ಆಡಳಿತ ನಡೆಯಿಸಲಿಕ್ಕೆ—ಎಂತಹದೇ ಇರಲಿ—ತಮಗೊಂದು ಸ್ವತಂತ್ರರಾಜ್ಯ ದೊರೆಯಿತೆಂದು ಹಿರಿಹಿರಿ ಹಿಗ್ಗುತ್ತಿರಲೂ ಬಹುದು. ಅಹುದೆ? ಆಯೋಗದವರು ನಿರ್ಮಿಸಿಕೊಟ್ಟಿರುವ ಕರ್ನಾಟಕ ರಾಜ್ಯವು, ಕನ್ನಡಿಗರು ಬಯಸುತ್ತಿದ್ದ ಅಖಿಲಕರ್ನಾಟಕ ರಾಜ್ಯ ಆಹುದೆ?

ಕರ್ನಾಟಕ ಏಕೀಕರಣವಾದಿಗಳು ಮೊದಲಿನಿಂದಲೂ ಉಗ್ಗಡಿಸುತ್ತಿದ್ದ ಉಗ್ಗಡಣೆಯೆಂದರೆ: 'ನನುಗೆ ಇನ್ನೊಬ್ಬರ ನೆಲವು ಸ್ವಲ್ಪವೂ ಬೇಕಾಗಿಲ್ಲ; ಕನ್ನಡದ ನೆಲವನ್ನು ಒಂದು ಕಾಸಿನಗಲದಷ್ಟೂ ಕಳೆದುಕೊಳ್ಳಲು ನಾವು ಒಪ್ಪುವುದಿಲ್ಲ!' ಎಂದು. ಬರಲಿರುವ ಕರ್ನಾಟಕರಾಜ್ಯವು ಈ ಉಗ್ಗಡಣೆಗೆ ಸರಿಯಾದುದು ಇರುವುದೆ?

ನಮಗೆ ಬೇಕಾಗಿರುವ ಕರ್ನಾಟಕರಾಜ್ಯವೆಂದರೆ ಕನ್ನಡಿಗರೆಲ್ಲರ ಒಗ್ಗೂಟದ ರಾಜ್ಯವು ಬೇಕು. ಕನ್ನಡಿಗರೆಲ್ಲರ ಮನಸ್ಸು, ಹೃದಯ ಒಂದುಗೂಡಿದರೆ, ಅದು ಇಲ್ಲದಲ್ಲಿಯೂ ಬಂಗಾರದ ಗಣಿಗಳನ್ನು ಹುಡುಕಿ ಹಿಡಿಯಬಹುದು. ತನ್ನಲ್ಲಿಯ ಅರಣ್ಯದ ಸಂಪತ್ತು, ನದಿಗಳ ನೀರಿನ ಅನುಕೂಲತೆಗಳಿಂದ ಬಂಗಾರದ ಬೆಟ್ಟವನ್ನೇ ನಿರ್ಮಿಸಬಹುದು. ಬಂಗಾರದ ಆಸೆಯಿಂದ ಹಿರಣ್ಯಾಕ್ಷ–ಹಿರಣ್ಯಕಶಿಪುಗಳಾಗಿ, ನಮ್ಮ ಇಂದಿನ ರಾಜಕಾರಣಿಗಳು ಕನ್ನಡ ಮಾನವಸಂಪತ್ತನ್ನು ಕಳೆದುಕೊಳ್ಳುವುದು ಬೇಡ. ಬಂಗಾರದ ಗಣಿಗಳು ಬರತುಹೋದಾವು; ಕನ್ನಡ ಕುಲದ ಸಂಪತ್ತು ಅಕ್ಷಯವಾದುದು, ಶಾಶ್ವತವಾದುದು.

ನಮಗಾಗಿ ರಾ. ಪು. ಆಯೋಗವು ನಿರ್ಮಿಸಿಕೊಟ್ಟಿರುವ ಕರ್ನಾಟಕದ ರಾಜ್ಯವೆಂದರೆ, ಅದು ಕನ್ನಡನಾಡಿನ ಕಬಂಧವು ಮಾತ್ರ ಆಗಿದೆ. ಕರ್ನಾಟಕ ರಾಜ್ಯದೇವತೆಗೆ ಕೈಯಿಲ್ಲ, ಕಾಲಿಲ್ಲ; ಮೂಗಿಲ್ಲ, ಕಿವಿಯಿಲ್ಲ. ಎಲ್ಲವನ್ನೂ ಸವರಿಹಾಕಿದ್ದಾರೆ ರಾ. ಪು. ಆಯೋಗದವರು. ಈ ಕಬಂಧದಲ್ಲಿ ಕನ್ನಡದೇವತೆಯ ಸಂಪೂರ್ಣ ಆತ್ಮವನ್ನು ಆಹ್ವಾನಿಸಲು ಸಾಧ್ಯವಾದೀತೆ? ಕನ್ನಡತಾಯಿಯ ಪಂಚಪ್ರಾಣಗಳನ್ನು ಧರಿಸಲು ಇದು ತಕ್ಕುದಾದೀತೇ?

ಭಾಷಾನುಗುಣ ರಾಜ್ಯನಿರ್ಮಿತಿಯ ಬೇಡಿಕೆ ಭಾರತದಲ್ಲಿ ಎಲ್ಲ ಕಡೆಗೂ ಇದ್ದಿತು. ದಕ್ಷಿಣ ಭಾರತದಲ್ಲಂತೂ ಆ ಬೇಡಿಕೆಯು, ಆ ಆ ಭಾಷೆಯ ಜನರ ಜೀವ–ಸಾವಿನ ಕೂಗಾಗಿದ್ದಿತು. ಅದರಲ್ಲಿಯೂ ನೂರಾರು ವರ್ಷಗಳಿಂದಲೂ ಹರಿದು ಹದಿನೈದು ಖಂಡಾಗಿದ್ದ ಕರ್ನಾಟಕದ ಜನರ ಬೇಡಿಕೆಯಂತೂ ವಿಶಿಷ್ಟ ರೀತಿಯದಾಗಿತ್ತು. ರಾಷ್ಟ್ರೀಯ ಮಹಾಸಭೆ, ಭಾಷಾನುಗುಣ ರಾಜ್ಯವಿಭಾಗತತ್ತ್ವವನ್ನು ಮೊದಲೇ ಒಪ್ಪಿತ್ತು. ಬ್ರಿಟಿಷರ ಆಡಳಿತದಲ್ಲಿಯ ರಾಜಕೀಯ ವಿಭಾಗಗಳು ಹೇಗೊ ಹೇಗೋ ಇದ್ದರೂ, ರಾಷ್ಟ್ರೀಯ ಮಹಾಸಭೆಯು ತನ್ನ ಚಳವಳಿಯ ಆಡಳಿತದಲ್ಲಿ, ಭಾಷಾನುಗುಣ ಪ್ರಾಂತಗಳನ್ನೇ ನಿರ್ಮಿಸಿಕೊಂಡಿತ್ತು.

ಸ್ವಾತಂತ್ರ್ಯ ದೊರೆತು ರಾಜಕೀಯ ಸೂತ್ರ ಕೈಗೆ ಬಂದೊಡನೆಯೆ, ನಮ್ಮಲ್ಲಿಯ ಅನೇಕ ನಾಯಕರ ವಿಚಾರಗಳೇ ಬದಲಾದುವು. ಅವರು ತಮ್ಮ ವರ್ತಮಾನ ಶಾಸನ ಸೌಕರ್ಯದ ಕಡೆಗೇ ನೋಡತೊಡಗಿದರಲ್ಲದೆ, ಜನತೆಯ ಆಕಾಂಕ್ಷೆಗಳ ಕಡೆಗೆ ಕೀಳ್ಗಣ್ಣಿಗಳಿಂದ ನೋಡಲು ತೊಡಗಿದರು. ಅಂತಹ ಕಾಲದಲ್ಲಿಯೂ ಕರ್ನಾಟಕದವರಾದ ಆಂಧ್ರರು, ತಮ್ಮ ಭಾಷಾನುಗುಣ ಪ್ರಾಂತದ ಚಳವಳಿ.

ಯನ್ನು ಬಿಡುಸುಗೊಳಿಸಿ, ಜನು ಬೇಡವೆನ್ನುವ ನಾಯಕರನ್ನು ಬಿಕ್ಕಟ್ಟಿಗೆಡಿಸಿದರು; ತಮ್ಮ ರಾಜ್ಯಸೂತ್ರವನ್ನು ಜನರು ಪ್ರತ್ಯೇಕವಾಗಿ ನಿರ್ಮಿಸಿಕೊಂಡೇ ಬಿಟ್ಟರು.

ಆಂಧ್ರರಿಗೆ ಪೊರೆತ ಅನುಕೂಲತೆ ಕನ್ನಡಿಗರಿಗೇಕೆ ಬೇಡ? ಮಲೆಯಾಳಿಗಳಿಗೇಕೆ ಬೇಡ? ಮಹಾರಾಷ್ಟ್ರೀಯರಿಗೇಕೆ ಬೇಡ?—ಎಂಬ ವಿಚಾರ, ರಾಜ್ಯಪುನರ್ಘಟನಾ ಆಯೋಗವನ್ನು ನಿರ್ಮಿಸಹಚ್ಚಿತು—ನಮ್ಮ ಕೇಂದ್ರ ಸರಕಾರಕ್ಕೆ. ಜನರ ಮೂಗಿಗೆ ತುಪ್ಪಹಚ್ಚಿಕುಳ್ಳಿರಿಸಿ, ಕಾಲವನ್ನು ಮುಂದೆ ತಳ್ಳುವುದಕ್ಕೆ. ಆಯೋಗ, ಸಮಿತಿ, ವಿಶೇಷ ಸಮಿತಿ—ಇವುಗಳನ್ನು ನಿಯಮಿಸುವುದೊಂದು ರಾಜತಂತ್ರದ ಕೈಚಳಕ. ಬರಲಿರುವ ಮಹಾಚುನಾವಣೆಯೊಂದು ಇಲ್ಲದೆ ಹೋಗಿದ್ದರೆ, ಈ ಆಯೋಗ ಇನ್ನೂ ಹಲವಾರು ವರ್ಷ ತನ್ನ ಕೆಲಸವನ್ನು ನಡೆಸಬಹುದಾಗಿತ್ತು; ಆದರೆ ಚುನಾವಣೆ ಸಮೀಪಕ್ಕೆ ಬಂದಿತು. ಆದುದರಿಂದಲೇ ಭಾಷಾನುಗುಣ ಪ್ರಾಂತಗಳನ್ನು ಬೇಡುವವರಿಗೆ ಉತ್ತರವಾದಿಯಾಗಿರುವ ಸರಕಾರ, ಆಯೋಗದ ವರದಿಯನ್ನು ಈಗ ಹೊರಗೆ ಹಾಕಲು ಹಚ್ಚಿತು. ಇವರ ಪರಿಣಾಮವೇನು? ಪ್ರತಿಯೊಬ್ಬರೂ ವರದಿಯ ವಿಚಾರದಲ್ಲಿ ನಿರಾಶೆಯ ಉದ್ಗಾರಗಳನ್ನು ತೆಗೆಯತೊಡಗಿದ್ದಾರೆ. ಇದಕ್ಕೆ ಕಾರಣವೆಂದರೆ, ಆಯೋಗವು ಯಾವುದೇ ಒಂದು ನಿರ್ದಿಷ್ಟ ತತ್ತ್ವದಿಂದ ಪ್ರಾಂತಗಳನ್ನು ಪುನರ್ಘಟಿಸದಿರುವುದು.

ರಾಜಕೀಯ ಅಡಳಿತವೇ ಆಯೋಗದ ಮುಖ್ಯ ಗುರಿಯಾಗಿದ್ದರೆ, ಭಾಷಾನುಗುಣ ರಾಜ್ಯರಚನೆಯನ್ನು ಅಪೇಕ್ಷಿಸುವ ಜನರಿಗೆ ಅದು ಕೊಡುವ ಸಮಾಧಾನವೇನು? ಭಾಷಾನುಗುಣ ರಾಜ್ಯರಚನೆಗೆಂದೇ ಪ್ರಾಮುಖ್ಯವಾಗಿ ಸೃಷ್ಟಿಗೊಂಡ ಈ ಆಯೋಗ, ರಾಜಕೀಯ ಅಡಳಿತದ ಅನುಕೂಲತೆಯ ವಿಚಾರವನ್ನು ತಲೆಯಲ್ಲಿ ಏಕೆ ಹಾಕಿಕೊಂಡಿತು? ರಾಜಕೀಯ ಅಡಳಿತದ ಅನುಕೂಲತೆಯೇ ರಾಜ್ಯಪುನರ್ಘಟನೆಯ ಗುರಿಯಾಗಿದ್ದರೆ, ಈಗಿದ್ದ ರಾಜ್ಯವಿಭಾಗಗಳಿಂದ ಅನನುಕೂಲವೇನಿದ್ದಿತು? ಈಗಿದ್ದಂತೆಯೇ ಇದ್ದುಬಿಡಲೆಂದು ಆಯೋಗ ತನ್ನ ನಿರ್ಣಯವನ್ನು ಕೊಟ್ಟುಬಿಟ್ಟಿದ್ದರೆ, ಕೇಂದ್ರಸರಕಾರದ ಒಂದು ದೊಡ್ಡ ತೊಂದರೆಯನ್ನಾದರೂ ತಪ್ಪಿಸಿದಂತಾಗುತ್ತಿದ್ದಿತಲ್ಲ! ಈಗ ರಾಜ್ಯಗಳ ಪುನರ್ನಿರ್ಮಾಣದ ತೊಂದರೆಗಳೇನೋ ಹದಿನಾರಾಣೆಯಷ್ಟು ಇವೆ; ಆದರೆ ಜನರು ಇದರಿಂದ ಪಡಬಹುದಾದ ತೃಪ್ತಿ-ತುಷ್ಟಿಗಳು ಒಂದು ಅಣೆಯಷ್ಟೂ ಇಲ್ಲ.

ರಾ. ಪು. ಆಯೋಗವು ಭಾಷಾನುಗುಣ ರಾಜ್ಯರಚನೆಯ ಮಾರ್ಗದಿಂದಲೇ ಹೊಂಟಿದ್ದರೆ. ಅನರ ವರದಿ ಇದಕ್ಕಿಂ ಲೂ ಹೆಚ್ಚಾಗಿ ಜನರಿಗೆ ತೃಪ್ತಿಕರವೆನಿಸಬಹುದಿತ್ತು. ಆ ತತ್ತ್ವದಿಂದ ಹೊರಟು, ಗಡಿಯ ನಿರ್ಣಯಕ್ಕಾಗಿ ಬಲಿಷ್ಠವಾದ ನಿರ್ಣಾಯಕ ಸಮಿತಿಯೊಂದನ್ನು ನಿಯಮಿಸಬೇಕೆಂದು ಹೇಳಿಬಿಟ್ಟಿದ್ದರೆ, ಈಗಾಗಲೇ ಗಡಿಗಳಲ್ಲಿ ನಡೆದಿರುವ ಜಗಳಾಟಗಳನ್ನು ಅದು ತಪ್ಪಿಸಬಹುದಾಗಿತ್ತು. ಗಡಿ-ಸಮಿತಿಯು ಸತ್ಯನಿಷ್ಠುರ ನಿರ್ಣಯದಿಂದ ಇಬ್ಬದಿಯವರೂ—ತಾತ್ಕಾಲಿಕವಾಗಿ ಅಸಮಾಧಾನಪಟ್ಟರೂ, ಮೌನವಾಗಿ ನಿರ್ಣಯಕ್ಕೆ ತಲೆಬಾಗುವಂತಾಗುತ್ತಿತ್ತು.

ಈಗ ಕರ್ನಾಟಕರಾಜ್ಯದ ಗಡಿಗಳ ವಿಚಾರವನ್ನೇ ನೋಡಬಹುದು. ಚಂದಗಡ ತಾಲೂಕು ಕನ್ನಡಿಗರದಲ್ಲವೆಂದು ನಿರ್ಣಯಿಸಿ ಆಯೋಗವು ಬೇರೆಯ ರಾಜ್ಯಕ್ಕೆ ಸೇರಿಸಿದೆ; ಇದರಂತೆಯೇ ಕಾಸರಗೋಡನ್ನು ಮಲೆಯಾಳಕ್ಕೆ ಕೊಟ್ಟಿದೆ. ಸರಿ; ಇದೇ ರೀತಿಯನ್ನು ಸಾಂಗಲಿ, ಕೊಲ್ಹಾಪುರ, ಸೊಲ್ಹಾಪುರ ಭಾಗದ ಗಡಿಪ್ರದೇಶಕ್ಕೆ ಏಕೆ ಹಚ್ಚಲಿಲ್ಲ? ಅಲ್ಲಿಯೂ ಸಂಪೂರ್ಣ ತಾಲೂಕಗಳೇ ಕನ್ನಡಿಗರ ಸಂಖ್ಯಾಬಾಹುಳ್ಯದಿಂದ ತುಂಬಿವೆ. ದಕ್ಷಿಣದ ಗಡಿಯಲ್ಲಿರುವ ಪೊಸೂರು, ಕೃಷ್ಣಗಿರಿ, ಮಡಕಸಿರಾ, ನೀಲಗಿರಿ ಪ್ರದೇಶ ಇವೂ ನಾಕಷ್ಟು—ಕನ್ನಡಿಗರ—ಬಹುಸಂಖ್ಯೆಯಿಂದ ತುಂಬಿವೆ. ಚಂದಗಡ, ಕಾಸರಗೋಡುಗಳನ್ನು ಹರಿದ ದೃಷ್ಟಿಯಿಂದಲೇ ಈ ಭಾಗಗಳನ್ನೂ ಹರಿದು ಕರ್ನಾಟಕ ರಾಜ್ಯಕ್ಕೆ ಏಕೆ ಕೂಡಿಸಲಿಲ್ಲ? ಇದರಿಂದ ರಾಜ್ಯದ ಅಡಳಿತಕ್ಕೆ ಅನನುಕೂಲವೇನು ಆಗುತ್ತಿತ್ತು?

ಬಳ್ಳಾರಿಯ ಅದವಾನಿ, ಆಲೂರು, ರಾಯದುರ್ಗ ತಾಲ್ಲೂಕುಗಳು ಹೋದುದೇ ಕನ್ನಡಿಗರ ಮೇಲೆ ಮಾಡಿದ ದೊಡ್ಡ ಅನ್ಯಾಯವೆಂದು ದುರ್ಮಾನಗೊಳ್ಳುತ್ತಿರುವಾಗ, ಹೊಸಪೇಟೆ, ಬಳ್ಳಾರಿ, ಸಿರಗುಪ್ಪಿ ತಾಲ್ಲೂಕುಗಳಂತಹ ವಿವಾದರಹಿತ ಕನ್ನಡ ಪ್ರದೇಶಗಳನ್ನೂ ಆಂಧ್ರರಾಜ್ಯಕ್ಕೆ ಒಪ್ಪಿಸುವುದೆಂದರೆ, ಆಯೋಗದ ಸದಸ್ಯರಿಗೆ ಹೇಗೆ ನ್ಯಾಯವೆನಿಸಿತೋ ಏನೋ! ಹಂಪೆ-ವಿಜಯನಗರಗಳನ್ನು ಕಳೆದುಕೊಂಡ ಕರ್ನಾಟಕದಿಂದ ಕನ್ನಡಿಗರಿಗೆ ಸಮಾಧಾನವೆನಿಸೀತೆ? ಸುಮಾರು ೨೦ ಲಕ್ಷದಷ್ಟು ಕನ್ನಡ ಬಾಂಧವರನ್ನು ಕಳೆದುಕೊಂಡು ಗಳಿಸಿದ ಕರ್ನಾಟಕ ರಾಜ್ಯ ನಮಗೆ ಸುಖಮಯವೆನಿಸೀತೆ?

ಕನ್ನಡ ಪ್ರದೇಶವನ್ನೂ ಕನ್ನಡ ಜನತೆಯನ್ನೂ ಕಳೆದುಕೊಳ್ಳುವಂತಹ ಕರ್ನಾಟಕ ರಾಜ್ಯ ನಮಗೆ ಯಾವಾಗಲೂ ಬೇಕಿಲ್ಲ. ಕನ್ನಡಿಗರೆಲ್ಲರ ಒಗ್ಗೂಟದ ಹೃದಯ-ಬುದ್ಧಿ-ಕಾರ್ಯಗಳ ಅಧಿಷ್ಠಾನಕ್ಕಾಗಿ ನಮಗೆ ಕರ್ನಾಟಕ ಬೇಕಾಗಿದೆ. ಮಂತ್ರಿಗಳಾಗಿ ಅಳಿಯೇ ನ್ನುವವರ ಅಪೇಕ್ಷೆಯನ್ನು ಪೂರಯಿಸುವಂತಹ ಕರ್ನಾಟಕರಾಜ್ಯ ನಮಗೆ ಬೇಕಾಗಿಲ್ಲ. ಕನ್ನಡ ಜನತೆಯ ಉಚ್ಚಸಂಸ್ಕೃತಿಯ ಪ್ರದರ್ಶನದಿಂದ, ಭಾರತದ ಬೆಲೆಯನ್ನು ಹೆಚ್ಚಿಸುವಂತಹ ಕರ್ನಾಟಕವು ನಮಗೆ ಬೇಕಾಗಿದೆ. ರಾ. ಪು. ಆಯೋಗವು ಕೊಟ್ಟ ಕಬಂಧಕರ್ನಾಟಕ ರಾಜ್ಯವು ಇದೆಂಥ ಕರ್ನಾಟಕ?

—ಸಂಪಾದಕ

ನಾಡನಡೆ

ಜಯಂತಿಗೆ ಸಹಾಯಧನ

ಸಹಾಯದ ಒಂದು ಹೊಸಬಗೆ

ಜಯಂತಿಯ ಹಿತಚಿಂತಕರಾದ ನನ್ನ ತರುಣ ಸ್ನೇಹಿತ. ರೊಬ್ಬರು, ತಮ್ಮ ಆಕಸ್ಮಿಕ ನೆರವಿನಿಂದ ನನ್ನನ್ನು ಬೆರಗು-ಗೊಳಿಸಿದರು.

ಆ ನನ್ನ ಸ್ನೇಹಿತರು, ಹೊಸದಾಗಿ ತೆಗೆದುಕೊಂಡ ತಮ್ಮ ಮನೆಯನ್ನು ನೋಡಲು, ನನ್ನನ್ನು ನಾಲ್ಕಾರು ಸಲ ಆಮಂತ್ರಿ-ಸಿದ್ದರು. ಏನೇನೋ ಕಾರಣಗಳ ಮೂಲಕ, ನನಗೆ ಹೋಗು-ವುದಕ್ಕೇ ಸಾಧ್ಯವಾಗಿರಲಿಲ್ಲ. ಮೊನ್ನೆಯ ದಸರೆಯ ಹಬ್ಬದ ದಿನ ನಾನು ಸನಿಯೂಟ ಉಂಡು ಮಲಗಿಕೊಂಡಿದ್ದೆ. ಇಳಿ-ಹೊತ್ತಿನ ವೇಳೆಯಲ್ಲಿ ನನ್ನ ಸ್ನೇಹಿತರು ಮನೆಗೆ ಬಂದರು. 'ನಮ್ಮ ಮನೆ ನೋಡಲಿಕ್ಕೆ ಇಂದು ನೀವು ಬರಲೇ ಬೇಕು!' ಎಂದರು. ನಾನು ಮನದೊಳಗೇ ಯೋಚಿಸಿದೆ :

"ಇಂದು ಹಬ್ಬ! ಏನಾದರೂ ಮೃಷ್ಟಾನ್ನ ಮಾಡಿಸಿರ ಬಹುದು. ಪ್ರೀತಿಯಿಂದ ನನಗಾಗಿ ಕೊಡಬಹುದು. ಹೊಟ್ಟೆ ತುಂಬಿದ ನಾನು ಅವರನ್ನು ನಿರಾಶೆಗೊಳಿಸಬೇಕಾಗುವುದು!"

ಈ ವಿಚಾರದಿಂದಲೆ 'ಇನ್ನೆಂದಾದರೂ ಬಂದರಾಗದೆ?' ಎಂದೆ. 'ಇಂದೆಯೆ ಬರಬೇಕು' ಎಂದರು ಸ್ನೇಹಿತರು.

ಅವರ ಪ್ರೀತಿಯ ಕರೆಯನ್ನು ಮುರಿಯಲಾರದೆ ನಾನು ಅವರ ಮನೆಗೆ ಹೋದೆ ಸೊಗಸಾಗಿರುವ ಮನೆಯನ್ನು ನೋಡಿ ತುಂಬ ಸಂತೋಷಪಟ್ಟೆ. ಅವರ ಚಿಕ್ಕ ಮಗನು ಮಾಡಿದ ಪದರು ಹಲಗೆಯಲ್ಲಿಯ ವಿಧ್ಯುಚಿತ್ರ (ಫ್ರಟ್‌ವರ್ಕ್)ಗಳನ್ನು ನೋಡಿ ಯಂತೂ ಬಹಳ ಹಿಗ್ಗಿಹೋದೆ. ಹೊಟ್ಟೆತುಂಬಿದರೂ ತಿಂಡಿ-ತೀರ್ಥಗಳ ತಟ್ಟೆಗಳು ಬಂದೆ ಬಂದುವು.

ನನ್ನ ಸ್ನೇಹಿತರು ದಸರೆಯ ಬನ್ನಿಯನ್ನು ಕೊಡುವ ಸಂಪ್ರ-ದಾಯವನ್ನು ಹೊಸಪದ್ಧತಿಯಲ್ಲಿ ನಡೆಸಿದರು. ತಮ್ಮ ಮಗನು ಮಾಡಿದ ಚಿತ್ರವಿಚಿತ್ರದ ಪತ್ರದಾನಿಯೊಂದರಲ್ಲಿ ಬನ್ನಿಯನ್ನಿರಿಸಿ ನನ್ನ ಕೈಯಲ್ಲಿ ಕೊಟ್ಟರು. ಪತ್ರದಾನಿಯಲ್ಲಿ ಕಾಗದದ ಚೀಲವೊಂದು ಕಂಡಿತು. ಇದೇನೆಂದು ನಾನು ಕೇಳಿದೆ. ಸ್ನೇಹಿತರು ಸುಮ್ಮನೆ ಇದ್ದರು ಕುತೂಹಲದಿಂದ ನಾನೇ ಚೀಲವನ್ನು ತೆರೆದು ನೋಡಿದೆ. ಒಳಗೆ

೨೫ ರೂಪಾಯಿಗಳು!

ನನ್ನ ಸ್ನೇಹಿತರು 'ಜಯಂತಿಗೆ ಇದು ನನ್ನ ದಸರೆಯ ಕೆರು-ಗಾಣಿಕೆ' ಎಂದರು. ಇಂತಹ ಕೆರುಗಾಣಿಕೆಗಳು ಜಯಂತಿಯ ಬಲವನ್ನು ಬೆಳೆಸುತ್ತಿರುವುದು ಹೆಮ್ಮೆಯ ಸಂಗತಿ.

ಇನ್ನೊಂದು ನೆರವು

ಬೆಳಗಾಂವಿಯ ಜಯಂತಿಯ ಹಿತಚಿಂತಕರೊಬ್ಬರು, ಹತ್ತು ಜನ ಚಂದಾದಾರರನ್ನು ಮಾಡಿ, 'ಜಯಂತಿಯ ಆರೋಗ್ಯ ವರ್ಧನೆಗಾಗಿ ನಾನು ಮಾಡಿದ ಕರ್ತವ್ಯ' ಎಂಬ ಒಳ್ಳೆಯ ಮಾತಿನೊಂದಿಗೆ ೫೦ ರೂಪಾಯಿಗಳನ್ನು ಮನಿಯಾರ್ಡರ್ ಮೂಲಕ ಕಳುಹಿಸಿದ್ದಾರೆ.

ಪ್ರಿನ್ಸಿಪಾಲ್ ಆರ್. ವೈ. ಧಾರವಾಡಕರರು ತಮ್ಮ ಕೊಡುಗೆ ೨೫ ರೂ ಗಳಲ್ಲಿ ೧೦ ರೂ. ಗಳನ್ನು ಈ ಮೊದಲೇ ಕೊಟ್ಟಿದ್ದರು. ಮಿಕ್ಕ ೧೫ ರೂ. ಗಳನ್ನು ಮೊನ್ನೆ ಮೊನ್ನೆ ಸಲ್ಲಿಸಿದರು.

ಜಯಂತಿಯನ್ನು ಪ್ರೀತಿಯಿಂದ ಕಂಡು ನೆರವು ಕೊಟ್ಟ ಮಹನೀಯರಿಗೆಲ್ಲ ಕೃತಜ್ಞತೆಯ ವಂದನೆಗಳು.

ಶ್ರೀ. ದೇವ ಶಂಕರರಾಯರ ದಿವ್ಯಬುದ್ಧಿ

ಕನ್ನಡಿಗರಿಗೆ ತಮ್ಮ ಪ್ರದೇಶವನ್ನು ತಮಗಾಗಿ ಉಳಿಸಿಕೊಳ್ಳು ವುದರಲ್ಲಿಯೇ ಸಾಕುಬೇಕಾಗಿ ಹೋಗುತ್ತಿದೆ; ಆದರೆ ನಮ್ಮ ನೆರೆ-ಹೊರೆಯ ಭಾಷೆಗಳ ಜನರು, ಕರ್ನಾಟಕ ಪ್ರದೇಶಗಳನ್ನು ಆಕ್ರಮಿಸಿ ಕೊಳ್ಳುವುದಕ್ಕೆ ಎಡೆಬಿಡದೆ ಹೋರಾಟವನ್ನು ನಡೆಸಿದ್ದಾರೆ. ಈ ಆಕ್ರಮಣದ ಕಾರ್ಯವನ್ನು, ಆ ಪ್ರದೇಶಗಳಲ್ಲಿಯ ಕಾಲಾಳಿನಿಂದ ತಲೆಯಾಳಿನ ಪರಿಗ ಎಲ್ಲರೂ ನಡೆಸಿದ್ದಾರೆ. ನ್ಯಾಯದೃಷ್ಟಿಯಿಂದ— ಸಮಂಜಸ ಬುದ್ಧಿಯಿಂದ— ಕನ್ನಡಿಗರ ಹಕ್ಕು-ಬಾಧ್ಯತೆಗಳನ್ನು ನೋಡುವವರು ಒಬ್ಬರೂ ಇಲ್ಲದಿರುವುದು ಆಶ್ಚರ್ಯಪಡಬೇಕಾದ ಸಂಗತಿ.

ಕೇಂದ್ರ ಸರಕಾರದಲ್ಲಿ ಪ್ರಭಾವಶಾಲಿಗಳಾಗಿರುವ ಆಂಧ್ರ ದುರೀ-ಣರ ಕೈವಾಡದಿಂದ, ಆಯೋಗದ ಸದಸ್ಯರೇ ಕನ್ನಡಿಗರ ಹಕ್ಕು-ಬಾಧ್ಯತೆಗಳ ಮೇಲೆ ಆಘಾತವನ್ನು ಎಸಗುವಂತಾಯಿತು ಈಗ ಮಹಾರಾಷ್ಟ್ರ ಧುರೀಣರು ಕರ್ನಾಟಕದ ಉತ್ತರಗಡಿಯ ಭಾಗಗಳನ್ನು ಕಬಳಿಸಲು ಹೊಂಚು ನಡೆಸಿದ್ದಾರೆ. ಶ್ರೀಮಾನ್

ಶಂಕರರಾವ ದೇವರಿಂದರೆ ಮಹಾತ್ಮರ ಅನುಯಾಯಿಗಳು. ಭಾರತ-ರಾಷ್ಟ್ರೀಯ ಸಭೆಗೆ ಕಾರ್ಯದರ್ಶಿಗಳಾಗಿದ್ದುಕೊಂಡು ಅಖಿಲ ಭಾರತೀಯ ಧುರೀಣರಾಗಿ ಮೆರೆದವರು. ಇಂತಹ ಮಹನೀಯರೇ ಈಗ ನ್ಯಾಯಾನ್ಯಾಯದ ವಿವೇಕವು ಇಲ್ಲದವರಂತೆ ನಡೆಯಲು ತೊಡಗಿದ್ದಾರೆ. ಕರ್ನಾಟಕದ ಉತ್ತರ ಗಡಿಯಲ್ಲಿ ತಿರುಗಾಡಿ, ಅಲ್ಲಿಯ ಮರಾಠಿಗರನ್ನಿಸಿಕೊಳ್ಳುವವರ ಮನಸ್ಸನ್ನು ಕೆರಳಿಸುತ್ತಲಿದ್ದಾರೆ.

ಬೆಳಗಾಂವಿ-ಕಾರವಾರಗಳಿಗೆ ಬರುವ ಅವಶ್ಯಕತೆ ಶ್ರೀ ಶಂಕರರಾವ ದೇವ ಅವರಿಗೆ ಏನಿದ್ದಿತು? ಬೆಳಗಾಂವಿ ಮಹಾರಾಷ್ಟ್ರಕ್ಕೆ ದೊರೆಯುವುದೆಂಬ ನಂಬುಗೆ ಅವರಿಗಿದ್ದರೆ, ಶ್ರೀ. ದೇವ ಅವರ ರಾಜಕಾರಣ ಬುದ್ಧಿಯ ವಿಚಾರದಲ್ಲಿಯೇ ಸಂದೇಹವನ್ನು ತಾಳಬೇಕಾಗುವುದು. ಕಾರವಾರ ಜಿಲ್ಲೆಯನ್ನು ಮಹಾರಾಷ್ಟ್ರೀಯರು ಅಪೇಕ್ಷಿಸುವುದು ಶುದ್ಧ ತಪ್ಪು— ಎಂದು ಶ್ರೀ. ದೇವರು ತಮ್ಮ ಜನಕ್ಕೆ ಬುದ್ಧಿ ಹೇಳಬೇಕಾಗಿತ್ತು. ಅದನ್ನು ಬಿಟ್ಟು, ತಾವೇ ಕಾರವಾರ ಜಿಲ್ಲೆಯಲ್ಲಿ ಮಹಾರಾಷ್ಟ್ರದ ಪರವಾಗಿ ಪ್ರಚಾರಮಾಡಲಿಕ್ಕೆ ಬರುವುದೆಂದರೆ ಅವರ ಬುದ್ಧಿಗೆ ಏನೆಂದು ಹೇಳಬೇಕು?

ಕೊಡುಕೊಳ್ಳುವ ಮಾತು ಸ್ನೇಹಭಾವದಿಂದ ಸಾಗಲಿ!

ಕಾರವಾರ ಜಿಲ್ಲೆಯಲ್ಲಿ ಶ್ರೀ. ದೇವ ಅವರಿಗೆ ದೊರೆಯಬಹುದಾದ ಸ್ವಾಗತವೆಂತಹದೆಂಬುದನ್ನು ಬೇರೆಯಾಗಿ ಹೇಳಲೇಬೇಕಿಲ್ಲ. ಕಾರವಾರ ಜಿಲ್ಲೆಯಲ್ಲಿಯ ಶಿರಸಿ, ಸಿದ್ದಾಪುರ, ಕುಮಟಾ, ಹೊನ್ನಾವರ ತಾಲ್ಲೂಕುಗಳು ನಿರ್ವಿವಾದ ಕನ್ನಡ ಪ್ರದೇಶಗಳೇ ಆಗಿವೆ. ಅಲ್ಲಿ ಈ ದೇವರು ಹೋಗಿ ಏನೂ ಮಾತಲಾರರು. ಉತ್ತರದ ಕಾರವಾರ, ಅಂಕೋಲಾ, ಹಳಿಯಾಳ, ಯಲ್ಲಾಪುರ ತಾಲ್ಲೂಕುಗಳಲ್ಲಿಯೂ, ಕನ್ನಡಿಗರಿಗಿಂತ ಕೊಂಕಣಿ ಮಾತನಾಡುವವರ ಸಂಖ್ಯೆ ಸ್ವಲ್ಪ ಹೆಚ್ಚಿದೆ, ನಿಜ. ಕೊಂಕಣಿಯೆಂದರೆ ಮರಾಠಿಗೆ ಸಂಬಂಧವಿದ್ದ ಭಾಷೆಯೇನೂ ಅಲ್ಲ. ಇಷ್ಟೇ ಅಲ್ಲ, ಆ ಕೊಂಕಣಿಗರೆಲ್ಲ ನೂರಾರು ವರ್ಷಗಳಿಂದಲೂ ಕನ್ನಡಿಗರೊಂದಿಗೆ ಸಂಬಂಧವನ್ನು ಬೆಳೆಸಿಕೊಂಡು ಬಂದುದರಿಂದ, ಅವರೆಲ್ಲರೂ ಕನ್ನಡ ಭಾಷೆಯನ್ನು ಬಲ್ಲರು. ಇಷ್ಟೇ ಅಲ್ಲ; ಕನ್ನಡ ಭಾಷೆಯನ್ನು ಆತ್ಮೀಯ ಭಾವದಿಂದ ನೋಡುವವರಾಗಿದ್ದಾರೆ

ಕಾರವಾರ ಜಿಲ್ಲೆಯನ್ನು ಬಿಟ್ಟುಹೋಗಿ ಮುಂಬಯಿ--ಪುಣೆಗಳಲ್ಲಿ ಮನೆಮಾಡಿಕೊಂಡು ನೆಂತ ಕೊಂಕಣಿಗರ ವಿಷಯವನ್ನು ನಾವು ಬಿಟ್ಟುಬಿಡೋಣ. ಅವರು ಪರಿಸ್ಥಿತಿಯ ಪ್ರಭಾವಕ್ಕೆ ಒಳಗಾಗಿ ಮರಾಠಿಯ ಮೋಹಕ್ಕೆ ಕಟ್ಟುಬಿದ್ದಿರಬಹುದು. ಆದರೆ ಕಾರವಾರ ಜಿಲ್ಲೆಯಲ್ಲಿ ಇರುವ ಬಹುಸಂಖ್ಯಾಕ ಕೊಂಕಣಿಗರು, ಮರಾಠಿಗೆ ಭ್ರಮಿತರಾದವರಿಲ್ಲ. ಅವರಲ್ಲಿಯು ಅನೇಕರು ಕನ್ನಡ ಸಾಹಿತ್ಯಿಕರಾಗಿದ್ದಾರೆ; ಕನ್ನಡಪತ್ರಿಕಾ ವ್ಯವಸಾಯಿಗಳಾಗಿದ್ದಾರೆ. ಕನ್ನಡ ಸಾಹಿತ್ಯದ ಅಭ್ಯಾಸಿಗಳಾಗಿದ್ದಾರೆ. ಕನ್ನಡ ಜಾನಪದ ನಾಟಕಕಲೆಯಾದ ಯಕ್ಷಗಾನವು ಕಾರವಾರ ಜಿಲ್ಲೆಯಲ್ಲಿ ಕೊಂಕಣಿಗರಿಂದಲೂ ಪೋಷಣೆ ಪಡೆಯುತ್ತಲಿವೆ

ರಾಜ್ಯ ಪುನರ್ಘಟನೆಯ ಆಯೋಗವು ಇಲ್ಲಿಗೆ ಬಂದಾಗ, ಕೊಂಕಣಿಗರು ಕೂಡ, ತಾವು ಕರ್ನಾಟಕದಲ್ಲಿ ಕರ್ನಾಟಕದವರಾಗಿಯೇ ಉಳಿಯುತ್ತೇವೆ—ಎಂದು ಏಕಕಂಠದಿಂದ ಒಪ್ಪಿಗೆ ಕೊಟ್ಟಿದ್ದಾರೆ. ಎಂತಲೇ ಆಯೋಗದವರು ಇಡಿ ಕಾರವಾರ ಜಿಲ್ಲೆಯನ್ನು ನಿರ್ವಿವಾದ ಕನ್ನಡಪ್ರದೇಶವೆಂದು ಒಪ್ಪಿರುವರು. ಪರಿಸ್ಥಿತಿಯು ಹೀಗಿದ್ದರೂ, ಅಕ್ರಮಣಬುದ್ಧಿಯ ಮಹಾರಾಷ್ಟ್ರದ ನಾಯಕರು, ಕಾರವಾರ ಜಿಲ್ಲೆಗೆ ಬಂದು, ಕಲ್ಲಲ್ಲಿ ನಾರೆತ್ತುವಂತಹ ಕೆಲಸಕ್ಕೆ ಏಕೆ ಸಿದ್ಧರಾಗಿಗುವರೋ ಏನೋ!

'ನಾವೆಲ್ಲರೂ ಭಾರತೀಯರು; ಭಾರತದ ಅಭ್ಯುದಯಕ್ಕಾಗಿ ನೆರೆಹೊರೆಯಲ್ಲಿಯೆ ಬಾಳಬೇಕಾದವರು' ಎಂಬ ಸಮಂಜಸ ಬುದ್ಧಿ ಮಹಾರಾಷ್ಟ್ರದ ನಾಯಕರಲ್ಲಿ ಇದ್ದರೆ. ಅವರು ಸಾತಾರೆ, ಸೊಲ್ಲಾಪುರ ಕೊಲ್ಹಾಪುರ ಜಿಲ್ಲೆಗಳಲ್ಲಿರುವ ನಿರ್ವಿವಾದ ಕನ್ನಡ ಪ್ರದೇಶಗಳನ್ನು ಬಿಟ್ಟುಕೊಡಬೇಕು. ಮುಂದೆ ಅದೇ ಬಂಧುಭಾವದಿಂದಲೇ ಕನ್ನಡಿಗರೊಂದಿಗೆ ಮಾತನಾಡಿ, ತಮಗೆ ಸಲ್ಲತಕ್ಕ ಭಾಗವಾವುದಾದರೂ ಇದ್ದರೆ, ಸ್ನೇಹದಿಂದಲೇ ಕೇಳಿ ಪಡೆದುಕೊಳ್ಳಬೇಕು. ಕನ್ನಡಿಗರದಲ್ಲದ ಭಾಗವನ್ನು ಅತಿಕ್ರಮಣಮಾಡುವುದಕ್ಕೆ ಅವರು ಎಂದೂ ಅಪೇಕ್ಷಿಸುವವರಲ್ಲ.

ಕಾಸರಗೋಡಿನ ಕನ್ನಡಿಗರ ಚಟುವಟಿಕೆ

ಕಾಸರಗೋಡು ತಾಲೂಕನ್ನು ಇಡಿಯಾಗಿ ಮಲಯಾಳಕ್ಕೆ ತಳ್ಳಿದುದರಿಂದ, ಅಲ್ಲಿಯ ಜನತೆಯಲ್ಲಿ ಗೊಂದಲವೇ ಎದ್ದು ಬಿಟ್ಟಿದೆ. ಆ ತಾಲೂಕಿನ ದಕ್ಷಿಣಭಾಗದಲ್ಲಿ ಮಲಯಾಳಿಗಳು ಬಹುಸಂಖ್ಯಾಕರಾಗಿ ಇರಬಹುದು; ಆದರೆ ಅವರೊಂದಿಗೆ ಉತ್ತರಭಾಗದ ಬಹುಸಂಖ್ಯಾಕ ಕನ್ನಡಿಗರು ಏಕೆ ಮಲಯಾಳಕ್ಕೆ ಹೋಗಬೇಕು? ತಮ್ಮ ಜನರದೇ ಒಂದು ಸುಸಂಘಟಿತವಾದ ರಾಜ್ಯವು ಇರುವಾಗ, ಅವರನ್ನು ಬಿಟ್ಟು ಈ ಜನರು ಇನ್ನೊಂದು ಭಾಷೆ–ಸಂಸ್ಕೃತಿಗಳ ಜನರ ಗುಂಪಿನಲ್ಲಿ ಏಕೆ ಸೇರಿಕೊಳ್ಳಬೇಕು? ಜನತೆಯ ಸುಖ ಸೌಕರ್ಯಗಳಿಗಾಗಿ ಆಡಳಿತವೋ, ಆಡಳಿತಗಾರರ ಅನುಕೂಲತೆಗಾಗಿ ಜನತೆಯೋ?

ಕಾಸರಗೋಡು ತಾಲೂಕಿನ ಜನರು ಇಂದು ಮಲಯಾಳಕ್ಕೆ ಹೋಗಲು ಸಿದ್ಧರಿಲ್ಲ. ಅವರು ಇದುವರೆಗೂ ಕನ್ನಡ ಸಂಸ್ಕೃತಿಯೊಂದಿಗೆ, ಕರ್ನಾಟಕದ ವ್ಯಾವಹಾರಿಕ ಸಂಬಂಧಗಳಿಗೆ ಹೊಂದಿಕೊಂಡು ಬಂದಿದ್ದಾರೆ. ಎಂತಲೇ ಕನ್ನಡ ಸಾಹಿತ್ಯಸಮ್ಮೇಳನ, ಕರ್ನಾಟಕ ಏಕೀಕರಣ ಸಮ್ಮೇಲನಗಳನ್ನು ಸ್ವಾಗತಿಸಿ, ಕಾಸರಗೋಡಿನ ಜನತೆ ವಿಜೃಂಭಣೆಯಿಂದ ನೆರವೇರಿಸಿತು. ಕಾಸರಗೋಡು ತಾಲೂಕಿನಲ್ಲಿ ಕನ್ನಡ ಸಾಹಿತ್ಯಕ್ಕಾಗಿ ಪ್ರೀತಿಯಿಂದ ದುಡಿಯುವವರು ಹಲವಾರು ಜನರು ಸಿಕ್ಕುವರು. ಆದರೆ ಮಲಯಾಳಿ ಸಾಹಿತ್ಯಕ್ಕಾಗಿ ದುಡಿಯುವ ಜನರು ಅಲ್ಲಿ ಒಂದು ಕೈಬೆರಳಿನಿಂದ ಎಣಿಸುವಷ್ಟೂ ದೊರೆಯಲಾರರು.

(ಮುಂದಿನ ಪುಟ ನೋಡಿರಿ)

ಹಿಮಗಿರಿಯ ಅಡಿಯಲ್ಲಿ

(ಒಂದು ಸಣ್ಣ ಕತೆ)

ಶ್ರೀ. ಪ್ರ. ಮ. ಗಲಗಲಿ ಬಿ. ಎ., (ಆನರ್ಸ್), ಬಿ. ಕಾಮ್. ಮುಂಬಯಿ

ಭಾರತೀಯರು ಋಣಗೇಡಿಗಳಾಗಿರಬಹುದು; ಕರ್ತವ್ಯಗೇಡಿಗಳಾಗಿರಬಹುದು; ಆದರೆ ಎಂದೂ ರಣಹೇಡಿಗಳಲ್ಲ; ಸ್ವಾಭಿಮಾನಶೂನ್ಯರಲ್ಲ! ೧೮೫೭ರ ಕ್ರಾಂತಿಯ ನಾಯಕ ನಾನಾಸಾಹೇಬನ ವೀರಚರಿತ್ರವೆಂದರೆ, ಪ್ರತಿಯೊಬ್ಬ ಭಾರತೀಯನ ನೈಮನಗಳನ್ನೂ ಜುಮ್ಮುದಟ್ಟಿಸುವಂತಹದು!

ನಾನಾಸಾಹೇಬನು ಇಂಗ್ಲಿಷ ಸೇನಾಪತಿಯಾದ ಸರ್ ಹೋಪ್ ಗ್ರ್ಯಾಂಟನಿಗೆ ಕೊನೆಯ ಪತ್ರವನ್ನು ಬರೆಯುತ್ತಿದ್ದನು: "ಹಿಂದುಸ್ತಾನವನ್ನು ಕೈವಶ ಮಾಡಿಕೊಂಡು, ನನ್ನನ್ನೇ ಅಪರಾಧಿಯೆನ್ನಲು ನಿಮಗಾವ ಅಧಿಕಾರವಿದೆ? ಹಿಂದುಸ್ತಾನವನ್ನು ಆಳಲು ನಿಮಗಾರು ಅಧಿಕಾರ ಕೊಟ್ಟವ್ವಾರೆ? ನವ್ಮ ದೇಶದಲ್ಲಿಯೇ ನಾವು ಕಳ್ಳರು, ಮತ್ತು ಫಿರಂಗಿಯವರಾದ ನೀವು ರಾಜರೇ?....." ಪತ್ರ ಬರೆದು ಸವಾರನ ಕೈಯಲ್ಲಿ ಕೊಟ್ಟು ಕಳಿಸಿ, ನಾನಾಸಾಹೇಬನು ಒಬ್ಬನೇ ಕುದುರೆಯ ಮೇಲೆ ಕುಳಿತು, ಮುಂದೆ ಕಾಣುತ್ತಿದ್ದ ಹಿಮಾಲಯದ ಅಡಿಯೆಡೆಗೆ ಹೊರಟನು. ಇಂದು ನಾನಾಸಾಹೇಬನು ಏಕಾಂಗಿ. ನಿರಾಶೆ-ಸೋಲುಗಳಿಂದ ಜರ್ಜರಿತನಾಗಿ ನಾನಾ, ಯುದ್ಧರಂಗದಿಂದ ಕಾಲ್ದೆಗೆದು ಹೋಗುತ್ತಿದ್ದನು. ನಾನಾಸಾಹೇಬನು ನಿಂತ ನೇಪಾಳದಲ್ಲಿ ಫಿರಂಗಿಯವರ ರಾಜ್ಯವಿದ್ದಿಲ್ಲ; ನೇಪಾಳದಲ್ಲಿ ಸ್ವತಂತ್ರನಾದ ಹಿಂದುರಾಜನಾಳುತ್ತಿದ್ದನು. ಆದರೂ ನಾನಾ ಪ್ರಪಂಚದಿಂದ ಕಣ್ಮರೆಯಾಗಿ ಹೋಗುತ್ತಿದ್ದನು. ಏಕೆಂದರೆ ನೇಪಾಳದ ರಾಜನೂ ಇಂಗ್ಲಿಷರೂ ಅವನನ್ನು ಬೆನ್ನಟ್ಟಿದ್ದರು.

ಶೂರರಾದ ಪೇಶ್ವೆಯವರ ವಂಶದ ಕೊನೆಯ ಪೇಶ್ವೆಯಾದ ನಾನಾ—ಹದಿನೆಂಟುನೂರು ಏನತ್ತೇಳರ ಸ್ವಾತಂತ್ರ್ಯಯುದ್ಧದ ಮೆದುಳೆನಿಸಿದ ನಾನಾ—ಲಕ್ಷಾವಧಿ ಸೈನಿಕರನ್ನು ಕಾಳೆಗದಲ್ಲಿ ವಿಜಯ ಪೆಡೆಗೆ ಕೊಂಡೊಯ್ದಿದ್ದ ನಾನಾ—ರಾಣೀ ಲಕ್ಷ್ಮೀಬಾಯಿ, ತಾತ್ಯಾ ಟೋಪಿಯಂಥವರ ಸಂಗಾತಿಯಾದ ನಾನಾ, ಇಂದು ಪರಾಜಿತನಾಗಿ ಶತ್ರುಗಳಿಗಂಜಿ, ಅಡವಿಯ ಕಡೆಗೆ ಒಂದೇಸವನೇ ಪಲಾಯನ ಮಾಡುತ್ತಿದ್ದನು. ನಾನಾಸಾಹೇಬನು ನೇಪಾಳದ ಗಡಿಯನ್ನು ದಾಟಿ, ಹಿಮಾಲಯದ ಅತಿವಿಯಲ್ಲಿದ್ದ ಕಾಡಿನೊಳಗೆ ಕಾಲಿಟ್ಟಾಗ ಕತ್ತಲಾಗಿತ್ತು. ಇಡೀ ದಿನ ಅವನು ಕುದುರೆಯ ಮೇಲೆ ಕುಳಿತು ಓಡಿಯೋಡಿದಣಿದಿದ್ದನು. ಅಲ್ಲಿಯೇ ಇದ್ದ ಸರೋವರವೊಂದರಲ್ಲಿ ನೀರುಕುಡಿದು ಒಂದು ಗಿಡದಡಿಯಲ್ಲಿ ಅವನು ಕುಳಿತುಕೊಂಡನು. ಸುತ್ತೆಲೆಲ್ಲ ಭಯಂಕರವಾದ ಆಂಧಕಾರ. ಅಡವಿಯೊಳಗೆ ನಾನಾತರದ ಪ್ರಾಣಿಗಳ ಚೀತ್ಕಾರ ಕೇಳಬರುತ್ತಿತ್ತು. ಚಂದ್ರೋದಯಕ್ಕೆ ಇನ್ನೂ ಸಮಯವಿತ್ತು. ಅಂತಹ ಕತ್ತಲಲ್ಲಿ, ವೃಕ್ಷವೊಂದರಡಿಯಲ್ಲಿ ಕುಳಿತುಕೊಂಡು ನಾನಾ, ಶೂನ್ಯನುನಶ್ಯನಾಗಿ ಏನನ್ನೋ ದೃಷ್ಟಿಸಿ ನೋಡುತ್ತಿದ್ದನು. ಆಗ ಅವನು ಎಂದುಕೊಂಡನು: "ನನ್ನ ಆತ್ಮದಲ್ಲಿ ಇದಕ್ಕಿಂತಲೂ ಭಯಂಕರವಾದ ಕಾರ್ಗತ್ತಲಿದೆಯಲ್ಲ!"

ನಾನಾಸಾಹೇಬನ ಆಶ್ರುಭರಿತ ದೃಷ್ಟಿಗೆ, ಆ ಕಾರ್ಗತ್ತಲಲ್ಲಿ, ಕಳೆದ ಐದುವರ್ಷಗಳ ಭಾರತದ ಚರಿತ್ರೆ ಮತ್ತೊಮ್ಮೆ ಕಂಡಿತು. ನಾನಾಸಾಹೇಬನ ಕಣ್ಣುಗಳಿಂದ ಕಣ್ಣೀರುದುರಿತು. 'ಅವೆಂತಹ ಪಂಚವರ್ಷಗಳು! ಅಂತಹ ಪರ್ವಕಾಲ ಮತ್ತೆ ಬರುವುದೆಂದೊ!' ಎನ್ನಿಸಿತು ಅವನಿಗೆ. ನಾನಾ ಯೋಚಿಸತೊಡಗಿದನು: 'ಈ ಧರ್ಮ-ಯುದ್ಧದ ಕೊನೆ ಹೀಗೇಕಾಯಿತು?' ನಾನಾಸಾಹೇಬನ ಮನಸ್ಸು ಐದು ವರ್ಷ ಹಿಂದಕ್ಕೋಡಿತು. ಬ್ರಹ್ಮಾವರ್ತದ ತನ್ನ ಅರಮನೆಯಲ್ಲಿ—ದಿವಾಣಖಾನೆಯಲ್ಲಿ—ತಿರುಗುತ್ತಿದ್ದಾನೆ. ಅವನ ಮನಸ್ಸು ಅಸ್ವಸ್ಥವಾಗಿದೆ. ಫಿರಂಗಿಯವರ ಸಂಪನ್ಮಸರಕಾರವನ್ನು ನಾಶಗೊಳಿಸುವ ಉಪಾಯವನ್ನು ಕಾಣದೆ ಚಿಂತಾಕ್ರಾಂತನಾಗಿದ್ದಾನೆ. ಒಮ್ಮೆಲೆ ಮುಖವನ್ನು ಮೇಲೆತ್ತಿ ನೋಡಿದನು. ಎದುರಿಗೆ ಸಂತ ರಾಮದಾಸರ ಚಿತ್ರವಿತ್ತು. ಚಿತ್ರದಲ್ಲಿಯ ರಾಮದಾಸರು ನುಡಿದರು: "ನಾನಾ, ಹಿಂದಕ್ಕೊಮ್ಮೆ ನಾನು ಹೀಗೆಯೇ ಹಾಡಿದ್ದೆ. ಸ್ವಧರ್ಮ-ರಕ್ಷಣೆ ಹಾಗೂ ಸ್ವರಾಜ್ಯಗಳು ಬರೀ ಮಾತಿನಿಂದ ಬೊರಕುವುದಿಲ್ಲ. ಸ್ವಧರ್ಮಕ್ಕಾಗಿ ಬಲಿದಾನಮಾಡು. ಹಾಗೆ ಬಲಿದಾನ ಮಾಡುತ್ತ ಸ್ವಧರ್ಮದ ಶತ್ರುಗಳನ್ನು ಸಂಹರಿಸು. ಹೀಗೆ ಸಂಹರಿಸುತ್ತ ಬಲಿದಾನವೀಯುತ್ತ ಸ್ವರಾಜ್ಯವನ್ನು ಪಡೆದುಕೋ!"

ನಾನಾಸಾಹೇಬನ ಮನಸ್ಸು ಹದಿನೆಂಟುನೂರರ ಏನತ್ತೇಳನೆಯ ಇಸ್ವಿಯನ್ನು ನೆನೆಯಿತು. ಅವನು ಅವಿಶ್ರಾಂತ ಸಾವಧಾನದಿಂದ—ಗೌಪ್ಯದಿಂದ—ಜಾಣತನದಿಂದ ಕ್ರಾಂತಿಯನ್ನು ಯೋಜಿಸಿರಲಿಲ್ಲ!

ನಾನಾಸಾಹೇಬನು ಯೋಜಿಸಿದ ಕ್ರಾಂತಿಯು ಗುರಿ ಭವ್ಯವಾಗಿದ್ದಿತು; ಅವನ ಕನಸಿನ ಭವಿಷ್ಯದ್ಚಾರತ ದಿವ್ಯವಾಗಿತ್ತು. ಕ್ರಾಂತಿಯ ಗುರಿ ಫಿರಂಗಿಯವರ ಉಚ್ಚಾಟನೆಯಷ್ಟೇ ಆಗಿರಲಿಲ್ಲ; ಸ್ವದೇಶ-ಸ್ವಧರ್ಮಗಳ ಪುನರುತ್ಥಾನವೂ ಆಗಿದ್ದಿತು. ಸ್ವದೇಶ ಹಾಗೂ ಸ್ವಧರ್ಮಗಳಿಗೆ ಆತಂಕವಾದುದೆಲ್ಲ ನಾಶಹೊಂದಲೇ ಬೇಕಿತ್ತು. ನಾನಾಸಾಹೇಬನ ಈ ಸಂಕಲ್ಪ—ಸ್ವದೇಶ ಹಾಗೂ ಸ್ವಧರ್ಮಗಳ ರಕ್ಷಣೆಯ ಈ ಸಂಕಲ್ಪ—ಭಾರತಕ್ಕೆ ಮತ್ತೆ ಸ್ವಾತಂತ್ರ್ಯವಾನ ನೂಡುವ ಈ ಸಂಕಲ್ಪ—ನಿಜವಾಗಿಯೂ ಪವಿತ್ರವಾದುದಾಗಿತ್ತು. ಈ ಸಂಕಲ್ಪವಲ್ಲಿ ನಾನಾಸಾಹೇಬನ ಸ್ವಾರ್ಥ ಲವಲೇಶವಾದರೂ ಇದ್ದಿರಲಿಲ್ಲ. ದಿಲ್ಲಿಯ ಸಿಂಹಾಸನವನ್ನು ಕೊನೆಯ ಮೊಗಲ ಚಕ್ರವರ್ತಿ ಏರಿದಾಗ, ನಾನಾ ಹರ್ಷಪಟ್ಟದ್ದಿಲ್ಲನೇ? ಇದೇ ಸಿಂಹಾಸನಕ್ಕಾಗಿ, ಶಿವಾಜಿಯಿಂದ ಮೊದಲಾಗಿ ಒಂದನೆಯ ಬಾಜೀರಾಯನ ವರೆಗೆ ಪ್ರಾಣದ ಹಂಗುತೊರೆದು ಹೋರಾಡಿದ್ದರು. ಕೊನೆಗೆ ಮೊದಲನೆಯ ಬಾಜೀರಾಯನು ದಿಲ್ಲಿಯ ಕೆಂಪುಕೋಟೆಯ ಮೇಲೆ ಮರಾಠರ ಜರೀಪಟಕವನ್ನು ಹಾರಿಸಿಯೇ ಬಿಟ್ಟಿದ್ದನು. ಇಂದು ಅದೇ ಸಿಂಹಾಸನದ ಮೇಲೆ ಮತ್ತೆ ಮೊಗಲ್-ಬಾದಶಹನನ್ನು ಕೂಡಿಸಿದಾಗ, ನಾನಾ ಹರ್ಷಿಸಿದ್ದನು. ಕಾಲಮಾನ ಬದಲಾಯಿಸಿದ್ದುದು ನಾನಾಸಾಹೇಬನಿಗೆ ಜೀರ್ಣಾಗಿ ಗೊತ್ತಿದ್ದಿತು. ಹಿಂದಿನ ವೈರ ಹಿಂದಕ್ಕಿರಲಿ; ಇಂದು ಮೈತ್ರಿಯು ಅವಶ್ಯಕತೆಯಿತ್ತು. ಎಂತಲೇ ನಾನಾಸಾಹೇಬನು ವಿಧರ್ಮೀಯರಾದ ಮುಸಲ್ಮಾನರೊಡನೆ ಒಂದಾಗಿ, ದೇಶದ ಶತ್ರುಗಳಾದ ಫಿರಂಗಿಯವರೊಂದಿಗೆ ಹೋರಾಡ ಬಯಸಿದ್ದನು. ನೂರಾರು ವರ್ಷಗಳ ವೈರವನ್ನು ಹಿಂದಕ್ಕೆ ಸರಿಸಿ, ದೇಶಹಿತದ ದೃಷ್ಟಿಯಿಂದ ಮಿತ್ರತ್ವವನ್ನು ಸ್ವಾಗತಿಸಿದ್ದನು.

ಈ ಕ್ರಾಂತಿಯುದ್ಧದಲ್ಲಿ ನಾನಾಸಾಹೇಬನ ಹಸ್ತಕರಾದವರು ಅಪೂರ್ವ ಶ್ರೇಷ್ಠ ಕರ್ತೃತ್ವಶಾಲಿಗಳು. ಮೌಲ್ವೀ ಅಹಮ್ಮದ್‌ಶಹ, ತಾತ್ಯಾಟೋಪಿ, ಅಜೀಮುಲ್ಲಾಖಾನ್ ರಾಣೀ ಲಕ್ಷ್ಮೀಬಾಯಿ, ಇನ್ನೂ ಅಸಂಖ್ಯ ಅನಾಮಧೇಯಯೋಧರು! ಆ ಮಹಾಯಜ್ಞದಲ್ಲಿ ತಾವೆಲ್ಲ ಸೇರಿ ಅಭೂತಪೂರ್ವವಾದ ಆತ್ಮಾಹುತಿಯನ್ನು ನೀಡಿದ್ದರು. ನಾನಾಸಾಹೇಬನಿಗೆ ಸತ್ಯದ ಜಯದಲ್ಲಿ ವಿಶ್ವಾಸವಿದ್ದಿತು. ಸ್ವದೇಶ-ಸ್ವಧರ್ಮಗಳ ರಕ್ಷಣೆ ಪವಿತ್ರತಮ ಕರ್ತವ್ಯವಲ್ಲನೇ? ತಾನು ಆ ಕರ್ತವ್ಯವನ್ನು ಅತ್ಯಂತ ಶ್ರದ್ಧೆಯಿಂದ ನೆರವೇರಿಸಿದ್ದನಲ್ಲವೆ? ನಾನಾಸಾಹೇಬನಿಗೆ ಜಯದಲ್ಲಿ ಅಚಲ ಶ್ರದ್ಧೆಯಿದ್ದಿತು. ಅದೇ ಸ್ವದೇಶ-ಸ್ವಧರ್ಮಗಳಿಗಾಗಿ ಬಲಿದಾನ ಮಾಡಿದ ಶಿವಾಜಿ, ರಾಮದಾಸರ ಆಶೀರ್ವಾದದಿಂದ ಮತ್ತೊಂದು ಸಾಮ್ರಾಜ್ಯವನ್ನೇ ಕಟ್ಟಿಲಿಲ್ಲನೇ? ಧ್ಯೇಯವು ಪವಿತ್ರವಾಗಿದ್ದರೆ, ಧ್ಯೇಯವು ಸತ್ಯಧರ್ಮಕ್ಕೆ ಅವಿರುದ್ಧವಾಗಿದ್ದರೆ ಜಯವು ಸಿಗಲೇ ಬೇಕು ಸ್ವದೇಶ-ಸ್ವಧರ್ಮಗಳ ರಕ್ಷಣೆ ಪವಿತ್ರವೂ ಪೂಜ್ಯವೂ ಆದ ಧ್ಯೇಯವಾಗಿದ್ದಿತು. ಇಂತಹ ಧ್ಯೇಯ-ಸಾಧನೆಯಲ್ಲಿ ಎಸಗಿದ ಈ ಧರ್ಮಯುದ್ಧದ ಅಂತ್ಯವು ಜಯದಲ್ಲಿ ಆಗುವುದು ಅನಿವಾರ್ಯವಾಗಿದ್ದಿತು.

ನಾನಾಸಾಹೇಬನೂ ಅವನ ಅನುಯಾಯಿಗಳೂ ಯುದ್ಧಭೂಮಿಯಲ್ಲಿ ಅನುಪಮವಾದ ಧೈರ್ಯವನ್ನು ಪ್ರದರ್ಶಿಸಿದ್ದರು. ಅಸಂಖ್ಯ ಸಂಕಷ್ಟಗಳನ್ನು ಛಲದಿಂದ ಈಸಿ ಕೊನೆಯ ವರೆಗೂ ಹೋರಾಟ ಬಿಡಲಿಲ್ಲ. ಆಜಮುಲ್ಲಾಖಾನ ತನ್ನ ಮಂತ್ರಿ. ಅವನಂತಹ ಅಸಮಸಾಹಸಿ, ಮೇಧಾವಿ, ಯೋಧ ಮತ್ತೆಲ್ಲಿ ಸಿಗಬಹುದು? ಆಜೀಮುಲ್ಲಾ ಯಜ್ಞಕುಂಡದಲ್ಲಿ ನಗುನಗುತ್ತ ಬಲಿದಾನವನ್ನರ್ಪಿಸಿದ್ದನು. ಅವನ ಬಲಿದಾನ ವ್ಯರ್ಥವಾಗಲಾರದು!

ತಾತ್ಯಾಟೋಪಿ! ನಾನಾಸಾಹೇಬನ ಕಣ್ಣುಗಳು ಸ್ನೇಹಜಲದಿಂದ ತುಂಬಿದುವು ತಾತ್ಯಾ ಅವನ ಬಾಲ್ಯಸ್ನೇಹಿತ ಇಬ್ಬರೂ ಕೂಡಿ ಆಡಿ ಬೆಳೆದವರು. ತಾತ್ಯಾ ಅದ್ಭುತಶೌರ್ಯದಿಂದ, ಚಾಣಾಕ್ಷತೆಯಿಂದ ಹೋರಾಡಿದನು. ಅವನ ಕಲ್ಪನಾತೀತವಾದ ಕಷ್ಟಗಳನ್ನು ನೆನೆದಾಗ, ಎಂಥ ಸಾಹಸಿಯು ಎದೆಗುಂದಿಗೆಯೂ ನಿಮಿಷಕಾಲ ನಡುಗಬೇಕು. ಸೈನ್ಯವಿಲ್ಲ, ಮದ್ದು-ಗುಂಡುಗಳಿಲ್ಲ, ಆಹಾರವಿಲ್ಲ, ವಿಶ್ರಾಂತಿಯಿಲ್ಲ! ಒಂದೇ ಸವನೇ ಶತ್ರುಗಳನ್ನು ಹೆಜ್ಜೆಹೆಜ್ಜೆಗೂ ತಪ್ಪಿಸುತ್ತ, ಹತ್ತು ತಿಂಗಳುಗಳ ಕಾಲ ಅವಿಶ್ರಾಂತವಾಗಿ ಮಿಂಚಿನ ವೇಗದಿಂದ ಅವನು ಮಧ್ಯಭಾರತದಲ್ಲಿ ತಿರುಗಿದನು. ಅವನ ಮುಂದೆ ನಿರಾಶೆದುಂಬಿದ ಭವಿಷ್ಯವಿತ್ತು; ಹಿಂದೆ ಅತ್ಯಂತ ಶೂರರಾದ ಇಂಗ್ಲಿಷ ಸೇನಾಪತಿಗಳು, ಶ್ರೇಷ್ಠ ದಂಡಾಳುಗಳೊಡನೆ ಅವನ ಬೆನ್ನಟ್ಟಿದ್ದರು. ಒಂದು ಕ್ಷಣವಾದರೂ ನಿಂತಲ್ಲಿ ನಿಲ್ಲದೆ ತಾತ್ಯಾ, ಹತ್ತು ತಿಂಗಳು ತಿರುಗಿದನು. ಅವನ ಶತ್ರುಗಳೂ ಅವನ ಸಾಹಸಕ್ಕೆ ಬೆರಗಾಗಿ ಬಿಟ್ಟುಕಚ್ಚಿದ್ದರು. ಇಂಗ್ಲಿಷ ಸೇನಾಪತಿಗಳಿಗಿಂತ ಹೆಚ್ಚಾಗಿ ತಾತ್ಯಾ ಯುರೋಪಿನಲ್ಲಿ ಪ್ರಸಿದ್ಧನಾಗಿದ್ದನು.

ರಾಣೀ ಲಕ್ಷ್ಮೀಬಾಯಿ! ನಾನಾಸಾಹೇಬನು ತನ್ನ ಬಾಲ್ಯದ ಸಂಗಾತಿಯನ್ನು, ತಂಗಿಯನ್ನು ಕೃತಜ್ಞತೆಯಿಂದ ನೆನೆದನು. ಪ್ರಪಂಚದ ಯಾವ ಕ್ರಾಂತಿಯಲ್ಲಿಯೂ ಇಂತಹ ಒಂದು ತೇಜಪುಂಜ ಜ್ಯೋತಿ ಬೆಳಗಿರಲಿಲ್ಲ. ಅಭಿಮಾನದಿಂದ ನಾನಾಸಾಹೇಬನ ಎದೆಯುಬ್ಬಿತು. ರಾಣಿ ಶೂರರಿಗಿಂತ ಶೂರಳಾಗಿ ಯುದ್ಧರಂಗದಲ್ಲಿ ಹೋರಾಡಿ ಪ್ರಾಣ ನೀಗಿದ್ದಳು.

ಮೌಲ್ವೀ ಅಹಮ್ಮದ್ ಶಹ! ಫಿರಂಗಿಯವರ ಹೃದಯ ಮೌಲ್ವಿಯ ಹೆಸರನ್ನೆತ್ತಿದರೂ ನಡುಗುತ್ತಿದ್ದಿತು ಲಕ್ನೋವಿನ ಸುತ್ತಲಿನ ಪ್ರತಿಯೊಂದು ಅಂಗುಲ ಭೂಮಿಯೂ ಅವನ ಹೆಜ್ಜೆಯಿಂದ ಪವಿತ್ರವಾಗಿದ್ದಿತು. "ಮೌಲ್ವಿ! ಮೌಲ್ವಿ! ಮೌಲ್ವಿ!" ಎಂಬ ಗುಡುಗಿನಿಂದ, ಉತ್ತರ ಭಾರತ ಒಂದು ವರ್ಷದ ವರೆಗೆ ಗದಗದಿಸಿಹೋಗಿತ್ತು. ಅವನ ಬಲಿದಾನದ ನಂತರ ಇಂಗ್ಲಿಷ ಸೇನಾಪತಿಯೊಬ್ಬನು ದೀರ್ಘೋಶ್ವಾಸ ಬಿಟ್ಟು ಹೇಳಿದ್ದನು: "ಭಾರತದಲ್ಲಿ ಫಿರಂಗಿಯವರ ಸರ್ವಶ್ರೇಷ್ಠ ಶತ್ರು ಇನ್ನಿಲ್ಲವಾದನು!"

ನಾನಾಸಾಹೇಬನು ಉತ್ತರಭಾರತದ ತೀರ ಉತ್ತರದ ಅರಣ್ಯದಲ್ಲಿ ಕುಳಿತು, ಮಧ್ಯರಾತ್ರಿಯಲ್ಲಿ ಇವರನ್ನೆಲ್ಲ ಮತ್ತೊಮ್ಮೆ ನೆನೆದನು. ಅವನು ಅಸಂಖ್ಯ ಅನಾಮಧೇಯ ಯೋಧರನ್ನೂ ಕೃತಜ್ಞತೆಯಿಂದ ನೆನೆದನು; ಕಣ್ಮುಂದೆ ಆ ಸ್ವಾತಂತ್ರ್ಯಯೋಧರ ಅಸಮಸಾಹಸಗಳನ್ನು ಮತ್ತೊಮ್ಮೆ ಕಂಡು ಪುಲಕಿತನಾದನು. ಜಗದೀಶಪುರದ

ಎಂಬತ್ತು ವರ್ಷದ ವೃದ್ಧ ಕುಮಾರಸಿಂಹನನ್ನು ನಾನಾ ನೆನೆದನು. ನಾನಾಸಾಹೇಬನು ಪುಲಕಿತನಾಗಿ ಕೂಗಿ ಹೇಳಿದನು: "ವೀರ ಯೋಧನೇ! ನಿಮ್ಮ ಜೀವನದಿಂದ ಪ್ರಪಂಚವು ಪಾವನವಾಯಿತು! ನಿಮ್ಮ ಪಾದಧೂಳಿಯಿಂದ ಭರತಭೂಮಿ ಪವಿತ್ರವಾಯಿತು! ನಿಮ್ಮ ಕೃತಗಳಿಂದ—ಬಲಿದಾನಗಳಿಂದ—ಇತಿಹಾಸವೇ ಪಾವನವಾಯಿತು!"

ನಾನಾಸಾಹೇಬನ ಹೃದಯವು ದುಃಖಭಾರದಿಂದ ಕುಗ್ಗಿ ಹೋಗಿತ್ತು. ಅವನನ್ನು ನಿರಾಶೆ ಮುತ್ತಿಬಿಟ್ಟಿತ್ತು. ಇಂತಹ ಅಸಂಖ್ಯಾತ ವೀರರ ಬಲಿದಾನಗಳ ಕೊನೆ ಹೀಗೇಕಾಯಿತು? ಅವನು ಮತ್ತೇ ಯೋಚಿಸತೊಡಗಿದನು. ಕ್ರಾಂತಿಯ ಧ್ಯೇಯ ಪವಿತ್ರವಾಗಿದ್ದಿತು. ಕ್ರಾಂತಿಯ ವೀರರು ಅನುಪಮೇಯರಾಗಿ ಬೇಡಿದ ಬಲಿದಾನವನ್ನು ಹಸನ್ಮುಖರಾಗಿ ನೀಡಿದ್ದರು. ಧ್ಯೇಯಸಾಧನೆಯಲ್ಲಿ ಅಪವಿತ್ರತೆಯಾಗಲೀ ಸಾರ್ಥವಾಗಲೀ ಸುಳಿದಿರಲಿಲ್ಲ. ಕ್ರಾಂತಿಯ ಖಡ್ಗಕ್ಕೆ ಅನ್ಯಾಯದ ರಕ್ತ ಹತ್ತಿರಲಿಲ್ಲ. ಕ್ರಾಂತಿಯ ವೀರರು ಕೊಲೆಗಡುಕರಾಗಿರಲಿಲ್ಲ. ಅದರೂ ನಾನಾಸಾಹೇಬನು ಸೋತಿದ್ದನು. ಕ್ರಾಂತಿಯು ನಿಂತಿದ್ದಿತು. ಫಿರಂಗಿಯವರು ಗೆದ್ದಿದ್ದರು.

ನಾನಾಸಾಹೇಬನು ಯೋಚಿಸುತ್ತಿದ್ದನು: ಕ್ರಾಂತಿಯ ಮುಖಂಡರು ಸ್ವಾರ್ಥಿಗಳಾಗಿದ್ದರೆ? ಹಾಗೆಂದೂ ಒಬ್ಬರೂ ಸ್ವಾರ್ಥಿಯಾಗಿರಲಿಲ್ಲ. ಹಿಂದುವಾದ ನಾನಾಸಾಹೇಬನು, ಮರಾಠರ ಪೇಶ್ವೆಯಾದ ನಾನಾಸಾಹೇಬನು, ಬಹಾದ್ದೂರ್‌ಶಹನನ್ನು ಚಕ್ರವರ್ತಿಯೆಂದು ಮನ್ನಿಸಿದ್ದನು. ಕ್ರಾಂತಿಯ ನಂತರ ಪೇಶ್ವೆಯು ರಾಜ್ಯವನ್ನು ಸ್ಥಾಪಿಸಬೇಕೆಂಬುದು ಅವನ ಇಚ್ಛೆಯಾಗಿರಲಿಲ್ಲ. ಕ್ರಾಂತಿಯ ಪೂರ್ವದಲ್ಲಿ ನಾನಾಸಾಹೇಬನು ಕನಸಿನಲ್ಲಿ ಕಾಣುತ್ತಿದ್ದ ಭವಿಷ್ಯದ್ಭಾರತವು ಯಾವನೊಬ್ಬ ರಾಜನ ಸೊತ್ತಾಗಿರದೆ ಭಾರತೀಯ ಸಂಯುಕ್ತ-ಸಂಸ್ಥಾನಗಳು ಎಂದು ರೂಪುಗೊಳ್ಳುವುದಿತ್ತು. ತನ್ನ ಜೀವನದ ಮುಚ್ಚಂಜೆಯಲ್ಲಿ ಕ್ರಾಂತಿಯ ಮುಖಂಡನಾಗಿದ್ದ ಮೊಗಲ ಬಾದಶಹ ಬಹಾದ್ದೂರ್‌ಶಹನೂ ಭಾರತದ ಕಲ್ಯಾಣವನ್ನೇ ಕುರಿತು ಚಿಂತಿಸುತ್ತಿದ್ದನು. ಮೊಗಲವಂಶ ಇದ್ದರೆಷ್ಟು, ಬಿಟ್ಟರೆಷ್ಟು! ಅವನಿಗೂ ಭಾರತದ ಸ್ವಾತಂತ್ರ್ಯವೇ ಜೀವಾಳದ ಪ್ರಶ್ನೆಯಾಗಿತ್ತು. ವೃದ್ಧನಾದ ಚಕ್ರವರ್ತಿಗೆ ತನ್ನ ಅಸಹಾಯತೆ ಅಪರಿಚಿತವಾಗಿರಲಿಲ್ಲ. ದಿಲ್ಲಿಯ ಸಿಂಹಾಸನದ ಮೇಲೆ ಅಂದು ಕೂಡಬೇಕಾದವನು ವೃದ್ಧನಲ್ಲ. ಹಾಗೆಂದೇ ಮೊಗಲ ಚಕ್ರವರ್ತಿಯು ಸ್ವಹಸ್ತದಿಂದ ಶ್ರೇಷ್ಠ ಸೇನಾಪತಿಗಳಿಗೆ, ಹಿಂದು ಅರಸರಿಗೆ ಪತ್ರ ಬರೆದಿದ್ದನು: "ಮುಂದೆ ಬನ್ನಿರಿ! ವೀರರೇ! ಯಾರಾದರೂ ಕರ್ತೃತ್ವಶಾಲಿಗಳು ಮುಂದೆ ಬಂದು ಈ ಸ್ವಾತಂತ್ರ್ಯಾಯುದ್ಧವನ್ನು ಮುನ್ನಡೆಸಿ, ಮಾತೃಭೂಮಿಗೆ ಸ್ವರಾಜ್ಯದ ಆಭರಣ ತೊಡಿಸುವವರಿದ್ದರೆ, ನಾನು ಸ್ವೇಚ್ಛೆಯಿಂದ ಈ ಸಿಂಹಾಸನವನ್ನು ತ್ಯಜಿಸಿ ಅವರ ಹಿಂದೆ ನಿಲ್ಲುವೆನು...."

ಹೀಗೆ ಕ್ರಾಂತಿಯ ಧ್ಯೇಯವೂ ಆ ಧ್ಯೇಯಸಾಧನವೂ ಅತ್ಯಂತ ಪವಿತ್ರವಾಗಿದ್ದುವು. ಕ್ರಾಂತಿಯ ಧ್ಯೇಯ ಭಾರತದ ಸ್ವಾತಂತ್ರ್ಯ! ಅದರ ಸಾಧನೆ ನ್ಯಾಯಸಮ್ಮತವಾದ ನಿಃಸ್ವಾರ್ಥ ಯುದ್ಧ! ಅದರೂ ಇಂದು ಕ್ರಾಂತಿಯು ವಿಫಲವಾಗಿದ್ದಿತು. ತನ್ನ ದೇಶದಲ್ಲಿಯೇ ನಾನಾಸಾಹೇಬನು ಇಂದು ಪರದೇಶಿ—ಪರದೇಶೀಯರು ರಾಜರು! ಇಂಥ ಈ ಪರಿಸ್ಥಿತಿಗೆ ಕಾರಣವೇನು? ಫಿರಂಗಿಯವರು ಗೆದ್ದರೇಕೆ?

ಮಧ್ಯರಾತ್ರಿ ಮೀರಿಹೋಗಿತ್ತು. ನಾನಾಸಾಹೇಬನು ಇನ್ನೂ ಹಾಗೆಯೇ ಯೋಚಿಸುತ್ತಲೇ ಕುಳಿತಿದ್ದನು. ಅವನು ಈಗ ಯಾರನ್ನೂ ದ್ವೇಷಿಸುತ್ತಿರಲಿಲ್ಲ ಸೋತ ಕ್ರಾಂತಿವೀರರಿಗೂ ದೋಷಾರೋಪಣೆ ಮಾಡಲಿಲ್ಲ. ಅವನಿಗೆನ್ನಿಸಿತು: 'ರಣರಂಗದಲ್ಲಿ ಧೀರರಾಗಿ, ಸ್ವಧರ್ಮಕ್ಕಾಗಿ ಸ್ವದೇಶಕ್ಕಾಗಿ ಜೀವದ ಹಂಗುದೊರೆದು ಹೆಗಲಿರುಳೆನ್ನದೇ ಹೋರಾಡಿದ ಅಸಂಖ್ಯಾಕ ಅನಾಮಧೇಯ ಯೋಧರಿಂದ ಭರತಭೂಮಿ ಪಾವನವಾಯಿತು. ಅವರ ಜಯವೂ ಪೂಜನೀಯವೇ, ಅವರ ಅಪಜಯವೂ ಪೂಜನೀಯವೇ!' ಅವನು ಬಲಿದಾನವಿತ್ತ ಮುಖಂಡರನ್ನು ನೆನೆದನು. ಲಕ್ಷ್ಮೀಬಾಯಿಯು ರಾಜ್ಯ ವಿಶ್ವಾಸಘಾತದಿಂದ ಹಾಳಾಗಿತ್ತು. ರಾಣಿ ಧೈರ್ಯಗೆಡದೆ ಹೋರಾಡಿ ಪ್ರಾಣ ತ್ಯಜಿಸಿದ್ದಳು. ತಾತ್ಯಾಟೋಪಿ ಇಂಗ್ಲಿಷರಿಂದ ಗಲ್ಲಿಗೇರಿಸಲ್ಪಟ್ಟಿದ್ದನು. ಅಹಮ್ಮದ ಶಹನನ್ನು ದೇಶಬಾಂಧವನೊಬ್ಬನು ದ್ರೋಹದಿಂದ ಗುಂಡಿಕ್ಕಿ ಕೊಂದಿದ್ದನು. ಎಂಬತ್ತೆರಡು ವರ್ಷದ ವೃದ್ಧ ಕುಮಾರಸಿಂಹನು ಸ್ವತಂತ್ರನಾಗಿ, ತನ್ನ ಧ್ವಜದಡಿಯಲ್ಲಿ ಯುದ್ಧದಲ್ಲಾದ ಗಾಯಗಳಿಂದ ಮೃತನಾದನು. ನೋಡಿ ಬಾದಶಹನ ಮಕ್ಕಳನ್ನು, ಪ್ರಾಣಿಗಳಂತೆ ಬೇಟೆಯಾಡಿ ಇಂಗ್ಲಿಷರು ಕೊಂದಿದ್ದರು. ಭಾವದುಂಬಿದ ಮನದಿಂದ ಯೋಧರನ್ನೆಲ್ಲ ನೆನೆದನು.

ಒಮ್ಮೆಲೇ ನಾನಾಸಾಹೇಬನ ಹೃದಯ ಸ್ತಂಭಿತವಾಯಿತು. ಅವನ ದುಂಡುಮುಖವು ಗಂಟಿಕ್ಕಿತು. ಹುಲಿಯ ಕಣ್ಣುಗಳಂತೆ ಹೊಳೆಯುವ ಅವನ ಚಂಚಲವಾದ ಕಣ್ಣುಗಳು ಸಿಟ್ಟಿನಿಂದ ಕೆಂಪಾದುವು. ಅವನು ಸಿಟ್ಟಿನಿಂದ ಕೆಂಪಾದ ಕಣ್ಣುಗಳಿಂದ ಒಂದೇಸವನೇ ಆ ಕಾರ್ಗತ್ತಲನ್ನು ಭೇದಿಸಿ, ಅದೃಶ್ಯವಾದ ದೃಶ್ಯವೊಂದನ್ನು ನೋಡತೊಡಗಿದನು. ರೋಷದಿಂದ ಅವನ ಅಂಗಾಂಗವೆಲ್ಲ ನಡುಗತೊಡಗಿತು. ನಡುಗುವ ಕೈಗಳಿಂದಲೇ ಕತ್ತಿಯನ್ನು ಹಿರಿದು ಆ ಕಾರ್ಗತ್ತಲನ್ನು ಇರಿಯಲು ಧಾವಿಸಿದನು. ಅವನ ಬಗೆಗಣ್ಣಿನಿದಿರು ದೇಶದ್ರೋಹಿಗಳ ತಂಡವೇ ಗೋಚರಿಸಿತು. ತಾತ್ಯಾಟೋಪಿಯನ್ನು ಸೆರೆಹಿಡಿದು ಕೊಟ್ಟ ಮಾನಸಿಂಹನು, ಅಹಮ್ಮದಶಹನನ್ನು ಕೊಂದ ಪಾವನದ ಮಹಾರಾಜನತಮ್ಮ, ಝಾಂಸಿಯ ಕೋಟೆಯನ್ನು ಶತ್ರುಗಳಿಗೊಪ್ಪಿಸಿದ ವಿದ್ರೋಹಿ, ಫಿರಂಗಿಯವರ ಬೆನ್ನುಕಟ್ಟಿ ಕ್ರಾಂತಿವೀರರನ್ನು ಸದೆಬಡಿಯಲು ಯತ್ನಿಸಿದ ನಿಜಾಮರು, ಇವರಂತಹ ಅನೇಕ ಸಂಸ್ಥಾನಾಧೀಶ್ವರರು, ಆಸರೆಯನ್ನು ಯಾಚಿಸಿದಾಗ ಸೆರೆಹಿಡಿಯಲು ಬಂದ ನೇಪಾಳದ ಹಿಂದೂಅರಸು ಜಂಗ್ ಬಹದ್ದೂರ್—ಇವರೆಲ್ಲರೂ ಆ ಕತ್ತಲಲ್ಲಿ ಅವನ ಮುಂದೆ ಮತ್ತೊಮ್ಮೆ ನಡೆದುಹೋದರು.

ನಾನಾಸಾಹೇಬನು ಶಾಂತನಾಗಿ ಕುಳಿತುಕೊಂಡು ಚಿಂತಿಸತೊಡಗಿದನು: ಭಾರತವೆಂದು ಅದೆಂತಹ ಪಾಪಕೂಪದಲ್ಲಿಳಿದಿದೆಯಲ್ಲ? ತನ್ನ ದೇಶಬಾಂಧವರಿಗೆ ಸ್ವದೇಶ-ಸ್ವಧರ್ಮಗಳ ಕಲ್ಪನೆಯೇ ಇಲ್ಲವಾ-

ಗಿದೆಯಲ್ಲ? ಸ್ವಧರ್ಮಕ್ಕಾಗಿ ಹೋರಾಡಿದ ದೇಶಬಾಂಧವರನ್ನೇ ಈ ಅಜ್ಞಾನಿಗಳು ಹತ್ತಿಕ್ಕಿ ಬಯಸಿದರು. ಬಾಂಧವರ ವಿರುದ್ಧವೇ ಫಿರಂಗಿಯವರಿಗೆ ಸಹಾಯಮಾಡಿ, ಬಾಂಧವರನ್ನು ನಾಶಮಾಡಲು ಈ ದ್ರೋಹಿಗಳು ಶಕ್ತಿಮೀರಿ ಪ್ರಯತ್ನಿಸಿದರು. ನಾನಾಸಾಹೇಬನಿಗೆ ಬಹಳ ಕೆಡುಕೆನಿಸಿತು. ಸ್ವಾತಂತ್ರ್ಯಕ್ಕಿಂತ ದಾಸ್ಯನೇ ಮೇಲೆನಿಸುವ ಮಟ್ಟಿಗೆ ಭಾರತೀಯರ ಅಧಃಪತನವಾಗಿತ್ತು. ಅವರ ಅಧಃಪತನವನ್ನು ಕಂಡು ಅವನಿಗೆ ಅನುಕಂಪವುಂಟಾಯಿತು. ಶತ್ರು-ಮಿತ್ರರ ಭೇದವನ್ನು ತಿಳಿಯದ ಅವರ ಅಜ್ಞಾನವನ್ನು ಕಂಡು ಅವನಿಗೆ ದುಃಖವುಂಟಾಯಿತು. ಅಜ್ಞಾನಜನ್ಯವಾದ ಅವರ ದುಷ್ಕೃತ್ಯವನ್ನು ಕಂಡು ಅವನಿಗೆ ರೋಷವುಂಟಾಯಿತು. ಅವರ ಈ ದುಷ್ಕೃತ್ವದಿಂದಲೇ ಕೊನೆಗೆ ಫಿರಂಗಿಯವರಿಗೆ ಜಯವಾಯಿತು. ಸ್ವಾತಂತ್ರ್ಯಯುದ್ಧ ಸೋಲಿನಲ್ಲಿ ನುಕ್ತಾಯವಾಯಿತು. ಸ್ವಾತಂತ್ರ್ಯಸಮರದ ಯೋಧರು ಮೃತ್ಯುವಿಗೀಡಾದರು. ಯೋಚಿಸುತ್ತ ನಾನಾಸಾಹೇಬನು ರೋಷದಿಂದ ಹುಚ್ಚಾದನು.

ಪವಿತ್ರ ಸ್ವಾತಂತ್ರ್ಯಸಮರದ ಕೊನೆ ಹೀಗಾದುದರ ರಹಸ್ಯ ನಾನಾಸಾಹೇಬನಿಗೆ ಹೊಳೆಯಿತು. ದೇಶದ್ರೋಹಿಗಳಿಂದಲೇ ಸ್ವಾತಂತ್ರ್ಯಯುದ್ಧವು ಅರ್ಧಕ್ಕೆ ನಿಂತಿದ್ದಿತು. ಶೂರರಾದ ಫಿರಂಗಿಯವರನ್ನು ಎಷ್ಟೋ ಯುದ್ಧಗಳಲ್ಲಿ ಕ್ರಾಂತಿವೀರರು ಸೋಲಿಸಿದ್ದರು. ಹತ್ತುಸಲ ನೂರುಸಲ ಫಿರಂಗಿಯವರು ರಣರಂಗದಿಂದ ಹಿಂದೆ ಸರಿದಿದ್ದರು. ಆ ಕ್ರಾಂತಿವೀರರನ್ನು ನೆನೆಯುತ್ತ ನಾನಾ ಅಭಿಮಾನದಿಂದ ಉಬ್ಬಿಹೋದನು. ಅವರ ಕಾರ್ಯವನ್ನು ಶತ್ರುಗಳೂ ಮಿತ್ರರೂ ಕೂಡಿಯೇ ಹೊಗಳಿದ್ದರು. ಆದರೂ ಕೆಲವೇ ದೇಶದ್ರೋಹಿಗಳು ಇಡೀ ಕ್ರಾಂತಿಯನ್ನೇ ಬುಡಮೇಲು ಮಾಡಿದ್ದರು. ಫಿರಂಗಿಯವರನ್ನು ರಣರಂಗದಲ್ಲಿ ಸೋಲಿಸುವುದು ಅಸಾಧ್ಯವೇನಲ್ಲವೆಂದು ನಾನಾಸಾಹೇಬನಿಗನಿಸಿತು. ಅದರೆ ಸ್ವಕೀಯರಾದ ಈ ಭ್ರಾತೃಘಾತಕಿಗಳನ್ನು ನಿವಾರಿಸುವ ಬಗೆ ಯಾವುದು? ಈ ಮುಳ್ಳುಗಳನು ಕಿತ್ತೊಗೆಯದೇ ಸ್ವಾತಂತ್ರ್ಯದ ದಾರಿ ಸುಗಮವಾಗಲಾರದು. ಇಂತಹ ದ್ರೋಹಿಗಳಿಲ್ಲದಿದ್ದರೆ ನಿಜವಾಗಿಯೂ ತಾವು ಸ್ವಾತಂತ್ರ್ಯಯುದ್ಧವನ್ನು ಗೆಲ್ಲಬಹುದಾಗಿತ್ತು.

ನಾನಾಸಾಹೇಬನ ವಿಚಾರಧಾರೆ ನಿಂತಿತು. ಅವನಿಗೆ ನಾಚಿಕೆಯೆನಿಸಿತು. ಕ್ರಾಂತಿಯ ಮುಖಂಡರಲ್ಲಿ ಅವನೊಬ್ಬನನ್ನುಳಿದು ಎಲ್ಲರೂ ರಣರಂಗದಲ್ಲಿ ಬಲಿದಾನನಿತ್ತಿದ್ದರು. ಕ್ರಾಂತಿಯ ಮೈದುಳಿಸಿದ ನಾನಾಸಾಹೇಬನೊಬ್ಬನೇ ಇಂದು ಎಲ್ಲರನ್ನೂ ತಪ್ಪಿಸಿ ಬಂದು ಅಡವಿಯಲ್ಲಿ ಕುಳಿತಿದ್ದನು. ಆ ಕತ್ತಲಲ್ಲಿ ಕ್ರಾಂತಿಯ ಹುತಾತ್ಮರೆಲ್ಲ ಬಂದು ಅಣಕಿಸಿದಂತೆ ಅವನಿಗೆನಿಸಿತು. ತಾನು ಓಡಿಬಂದುದೇತಕ್ಕೆ? ಏನು ಶತ್ರುವಿಗಂಜಿಯೇ? ಅಥವಾ ಪ್ರಾಣರಂಕ್ಷಣೆಗಾಗಿಯೇ? ಇಲ್ಲವೆ ಮರಳಿ ಇನ್ನೊಮ್ಮೆ ಯತ್ನಮಾಡುವುದಕ್ಕೋಸ್ಕರವೇ? ತಾನು ಓಡಿಬಂದುದೇತಕ್ಕೆ? ನಾನಾಸಾಹೇಬನು ಆ ದಿನ ರಾತ್ರಿಯಲ್ಲಿ, ಹಿಮಾಲಯಕ್ಕೆದುರಾಗಿ ಮತ್ತೆ ಪ್ರತಿಜ್ಞೆ ಮಾಡಿದನು: "ನಾನು ಮತ್ತೆ ಅಜಿಂಕ್ಯವಾದ ಸೈನ್ಯವನ್ನು ಕಟ್ಟುವೆನು. ಫಿರಂಗಿಯವರನ್ನು ದೇಶಬಿಟ್ಟು ಓಡಿಸಿ ಸ್ವಾತಂತ್ರ್ಯವನ್ನು ದೊರಕಿಸುವವರೆಗೆ ವಿಶ್ರಮಿಸಲಾರೆನು!"



ಅವನಿಗೆ, ಐದು ವರುಷಗಳ ಹಿಂದೆ ನಾವಿನಲ್ಲಿ ಕುಳಿತು ಗಂಗಾಜಲ ಹಿಡಿದು ಇದೇ ಪ್ರತಿಜ್ಞೆ ಮಾಡಿದ ಸಂದರ್ಭ ನೆನಪಿಗೆ ಬಂದಿತು. ನಾನಾಸಾಹೇಬನಿಗೆ ಹರ್ಷವೆನಿಸಿತು. ಮನಸ್ಸು ಹಗುರಾಗಿತ್ತು. ಅವನು ಕಣ್ದೆರೆದು ನೋಡಿದಾಗ ನಿಶೆಯು ಹೋಗಿ ಉಷೆ ಆಗಮಿಸಿದ್ದಳು. ಇನ್ನು ಕೆಲವು ನಿಮಿಷಗಳಲ್ಲಿಯೇ ಸುರ್ಯೋದಯವು ಆಗಲಿತ್ತು. ನಾನಾಸಾಹೇಬನು ಪುರಾತನ ಭರತಭೂಮಿಗೂ ಸೂರ್ಯನಾರಾಯಣನಿಗೂ ಸಾಷ್ಟಾಂಗ ನಮಸ್ಕರಿಸಿ ಎದ್ದುನಿಂತನು. ಅವನ ಮನಸ್ಸಿನಲ್ಲಿ ವಿಚಾರಗಳ ತಾಕಲಾಟವಿರಲಿಲ್ಲ. ಅವನ ಮನಸ್ಸನ್ನು ಶುಂಬಿದ ಒಂದೇ ಒಂದು ಪ್ರಶ್ನೆಯೆಂದರೆ, ಸೈನ್ಯವನ್ನು ಕಟ್ಟುವ ಬಗೆ ಹೇಗೆ? ಆಳಿದುಳಿದ ತನ್ನ ಸಂಗಾತಿಗಳೆಲ್ಲಿ? ....ನಾನಾಸಾಹೇಬನಿಗೆ ಕೂಡಲೇ ದಾರಿ ಕಾಣಲಿಲ್ಲ. ಮೊದಲನೆಯ ಸಲ ಅವನಿಗೆ ಬೆಳಕು ತೋರಿಸುವ ವ್ಯಕ್ತಿಯೊರ್ವನ ಅವಶ್ಯಕತೆ ಬಂದೊದಗಿತ್ತು. ಅವನು ಹಾಗೆಯೇ ವಿಚಾರಮಗ್ನನಾಗಿ ಸೂರ್ಯನನ್ನು ನೋಡುತ್ತ ನಿಂತಿದ್ದನು. ಆಗ ಅವನ ಕರ್ಣಗಳಲ್ಲಿ ಅಮೃತವಾಣಿಯೊಂದು ಕೇಳಬಂತು. ನಾನಾಸಾಹೇಬನು ತಿರುಗಿನೋಡಿದನು.

ಜಟಾಧಾರಿಯಾದ ವೃದ್ಧಮಹರ್ಷಿಯೊಬ್ಬನು ದಂಡ-ಕಮಂಡಲುಗಳನ್ನು ಹಿಡಿದುಕೊಂಡು ಸರೋವರದ ಕಡೆಗೆ ಬರುತ್ತಿದ್ದನು. ಮಹರ್ಷಿ ಪ್ರಾತಃಕಾಲದಲ್ಲಿ ಸೂರ್ಯನನ್ನು ಸ್ತುತಿಸಿದನು. ಮಧುರಕಂಠದಿಂದ ಹಾಡುತ್ತಿದ್ದನು. ಸುತ್ತಲಿನ ಪ್ರಪಂಚವೆಲ್ಲ ಹೊಸ ಜೀವನವನ್ನು ಪಡೆದುಕೊಂಡು ಹೊಸ ಚೈತನ್ಯದಿಂದ ಕುಣಿಯುತ್ತಿತ್ತು. ಹಿಮಗಿರಿಯ ಉತ್ತುಂಗ ಶೃಂಗಗಳು ಬಾಲಸೂರ್ಯನ ಕಿರಣಗಳಿಂದ ಅಚ್ಛಾದಿತವಾಗಿ ಹೊಂಗಳಸಗಳಂತೆ ಕಂಗೊಳಿಸುತ್ತಿದ್ದುವು. ಮಹರ್ಷಿ ಹಾಡುತ್ತಿದ್ದನು. "ಅಸತೋ ಮಾ ಸದ್ಗಮಯ! ತಮಸೋ ಮಾ ಜ್ಯೋತಿರ್ಗಮಯ!! ಮೃತ್ಯೋರ್ಮಾ ಅಮೃತಂ ಗಮಯ!!!"

ಮಹರ್ಷಿಯು ತನ್ನ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಕಮಂಡಲದಲ್ಲಿ ನೀರನ್ನು ತುಂಬಿಕೊಂಡು, ತನ್ನ ಆಶ್ರಮದತ್ತ ಹೊರಟನು. ನಾನಾಸಾಹೇಬನ ಹೃದಯದಲ್ಲಿ ಪೂಜ್ಯಭಾವನೆ ಉದ್ದೀಪ್ತವಾಯಿತು. ಅವನು ಶಾಂತಮನಸ್ಸಿನಿಂದ ನಿಸ್ಸಂಶಯನಾಗಿ ಹೋಗಿ ಮಹರ್ಷಿಯ ಅಡಿಗೆರಗಿದನು. ಮಹರ್ಷಿಯು ಅವನನ್ನು

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ್ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಎಬ್ಬಿಸಿ ಅತಿ ದೂರದಲ್ಲಿರುವ ತನ್ನ ಆಶ್ರಮವತ್ತ ಕರೆದುಕೊಂಡು ಹೊರಟನು. ಮಧ್ಯಾಹ್ನದಲ್ಲಿ ಮಹರ್ಷಿಯು, ನಾನಾಸಾಹೇಬನಿಂದ ಅವನ ಪೂರ್ವಾಪರವನ್ನು ವಿಚಾರಿಸಿದನು. ಅದೇನೋ, ನಾನಾಸಾಹೇಬನಿಗೆ ಯಾವುದನ್ನೂ ಬಚ್ಚಿಡಬೇಕೆನಿಸಲಿಲ್ಲ ಅವನು ಮಹರ್ಷಿಗೆ ತನ್ನ ಚರಿತ್ರೆಯನ್ನು ಕ್ರಾಂತಿಯನ್ನು, ಕ್ರಾಂತಿಯ ವಿಫಲತೆಯನ್ನು ವಿವರಿಸಿ ಹೇಳಿ ವಿಷಣ್ಣನಾಗಿ ಕುಳಿತನು. ಕೆಲವು ನಿಮಿಷಗಳ ಮೌನದ ನಂತರ ಮಹರ್ಷಿಯು ಮಾತನಾಡತೊಡಗಿದನು. "ವತ್ಸ, ನಿನ್ನ ಜನ್ಮ ಸಾರ್ಥಕವಾಯಿತು. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಆರ್ಯೋಕ್ತಿಯನ್ನು ಕೃತಿಯಲ್ಲಿ ಮಾಡಿ ತೋರಿಸಿರುವಿ. ಆದರೆ ಕ್ರಾಂತಿಯು ವಿಫಲವಾದುದೇಕೆ? ತಾರ್ಕಿಕ ಬುದ್ಧಿಗೆ ಯಾವುದೋ ಒಂದು ಕಾರಣ ಹೊಳೆದಿರಬಹುದು; ಆದರೆ ಜ್ಞಾನದ ದೃಷ್ಟಿಯಿಂದ ನೋಡು, ಎಂದರೆ ಸತ್ಯವನ್ನು ಕಾಣಬಹುದು. ದೈವೇಚ್ಛೆಯಿಂದಲೇ ಕ್ರಾಂತಿಯು ಅಯಶಸ್ವಿಯಾಗಿದೆ. ಇಲ್ಲವಾದರೆ ನೀನೆನ್ನುವ ಹತ್ತು ಜನ ದ್ರೋಹಿಗಳು ದೈವಾಜ್ಞೆಯನ್ನು ಬದಲಿಸಬಲ್ಲರೇ? ಇಲ್ಲ, ನಾನಾ ಇಲ್ಲ! ಕ್ರಾಂತಿಯು ದೈವೇಚ್ಛೆಯಿಂದಲೇ ವಿಫಲವಾಗಿದೆ!"

ನಾನಾಸಾಹೇಬನು ವಿಸ್ಮಯಗೊಂಡು ಕೇಳಿದನು: "ಪೂಜ್ಯರೇ, ಪುರಾತನ ಪುಣ್ಯಕರ್ಮಭೂಮಿಯಾದ ಭರತವರ್ಷವೂ ಚಿರಂತನ ದಾಸ್ಯದಲ್ಲಿರಬೇಕೆಂದು ದೈವೇಚ್ಛೆಯೇ? ಈ ಆರ್ಯಭೂಮಿ ಮತ್ತೊಮ್ಮೆ ಸ್ವತಂತ್ರವಾಗಿ ಮೆರೆದಾಡುವುದು ಧರ್ಮವಿರುದ್ಧವೇ?"

ಮಹರ್ಷಿಯು ನಗುನಗುತ್ತ ಉತ್ತರವಿತ್ತನು: "ಹಾಗಲ್ಲ. ನಾನಾ! ಭಾರತಿಯ ಸ್ವಾತಂತ್ರ್ಯವು ದೈವೇಚ್ಛೆಯ ವಿರುದ್ಧವೆಂದಾದರೂ ಆದೀತೆ? ಈ ಪುಣ್ಯಭೂಮಿ ಇನ್ನೂ ಅನೇಕ ಮಹತ್ಕಾರ್ಯಗಳನ್ನು ಸಾಧಿಸಬೇಕಾಗಿದೆ. ಆ ಕಾರ್ಯಗಳಿಗೆ ಸ್ವಾತಂತ್ರ್ಯ ಅವಶ್ಯ. ಪೂರ್ವಭೂಮಿಯಾಗಿದೆ. ಒಂದು ದಿನ ಭರತಭೂಮಿ ಪ್ರಪಂಚದ ಸರ್ವಶ್ರೇಷ್ಠ ರಾಷ್ಟ್ರವಾಗಿ ಮೆರೆಯಬೇಕಾಗಿದೆ. ಆದರೆ ಇಂದು ಭಾರತಿಯು ಹೊಸ ಪ್ರಯೋಗವೊಂದನ್ನು ನಡೆಸಬೇಕಾಗಿದೆ. ಈ ಪ್ರಪಂಚದಲ್ಲಿ ಇಂದು ಕಾಣುವ ಎಷ್ಟೋ ಶ್ರೇಷ್ಠಸಂಗತಿಗಳು, ಭಾರತಿಯು ಒಂದಿಲ್ಲೊಂದು ರೂಪದಿಂದ ಪ್ರಪಂಚಕ್ಕೆತ್ತ ಕಾಣಿಕೆಗಳೇ! ಪ್ರತಿಸಲವೂ ಭಾರತಿಯೇ ಪ್ರಪಂಚದ ಜನಾಂಗಗಳಿಗೆ ಹೊಸ ಪ್ರಯೋಗ ಮಾಡಿ, ಹೊಸ ತತ್ತ್ವಗಳನ್ನು ಹೇಳಿ, ಹೊಸ ದಾರಿಯನ್ನು ತೋರಿದ್ದಾಳೆ. ಬರಲಿರುವ ಯುಗದಲ್ಲಿ ಭಾರತಿ ಇದಕ್ಕೂ ಮಹತ್ತ್ವದ ಭಾರ ವಹಿಸಿ ಪ್ರಪಂಚದ ನೇತಾರಳಾಗಬೇಕಾಗಿದೆ. ಅದಕ್ಕಾಗಿ ಅವಶ್ಯವಿದ್ದ ಸ್ವಾತಂತ್ರ್ಯವನ್ನು, ಈ ಪುಣ್ಯಭೂಮಿಯಿಂದು ನಿಶ್ಶಸ್ತ್ರಳಾಗಿ ಮೊರಕಿಸಬೇಕಾಗಿದೆ. ಈ ಪ್ರಪಂಚಕ್ಕೆ ಶಸ್ತ್ರಸಂನ್ಯಾಸವನ್ನು ಕಲಿಸಬೇಕಾಗಿದೆ. ನಿಶ್ಶಸ್ತ್ರನಾಗಿ, ವಿಶ್ವಾಮಿತ್ರನ ಸರ್ವಶಸ್ತ್ರಗಳಿಗೂ ಬಗ್ಗದೇ ಅವನನ್ನು ಸೋಲಿಸಿದ ವಸಿಷ್ಠನಂತಹ ಮಹರ್ಷಿಗೆ ಜನ್ಮವಿತ್ತ ಪುಣ್ಯಭೂಮಿಯಿದು. ಇಂದು ಈ ಪ್ರಪಂಚದ ಶಸ್ತ್ರಾಗಾರದಲ್ಲಿ ಮತ್ತೊಮ್ಮೆ ಆ ವಸಿಷ್ಠನ ಜನ್ಮವಾಗಬೇಕಾಗಿದೆ. ಭರತಭೂಮಿಯ ಉದ್ಧಾರವಿಂದು ಶಸ್ತ್ರಾಸ್ತ್ರಗಳಿಂದ ಸಾಧ್ಯವಿಲ್ಲ. ವೀರಯೋಧನೇ, ಸತ್ಯದ ದೃಷ್ಟಿಯಿಂದ ಜ್ಞಾನದ ದೃಷ್ಟಿಯಿಂದ—ವೀಕ್ಷಿಸು. ಇಂದು ಭರತವರ್ಷವನ್ನು ಉದ್ಧರಿಸುವವರು ಕ್ಷತ್ರಿಯರಲ್ಲ. ಸಂನ್ಯಾಸಿಗಳು! ಭಾರತಿಯ ಸೇವೆಗಾಗಿ ಇಂದು ರಕ್ತಚೆಲ್ಲಬೇಕಾಗಿಲ್ಲ. ಇಂದು ಬೇಕಾಗಿರುವುದು ತ್ಯಾಗ, ಜ್ಞಾನ, ಧರ್ಮ! ಅವುಗಳನ್ನು ಸಂಪಾದಿಸು. ಸಂನ್ಯಾಸಿಗಳಿಂದು ಅವತರಿಸಿ ಭಾರತಿಯನ್ನು ಉದ್ಧರಿಸಬೇಕಾಗಿದೆ. ನಿನ್ನಲ್ಲಿ ಶಕ್ತಿಯಿದ್ದರೆ, ನಿನ್ನಲ್ಲಿ ಭಕ್ತಿಯಿದ್ದರೆ, ನಿನ್ನಲ್ಲಿ ಜ್ಞಾನತೃಷ್ಣೆಯಿದ್ದರೆ, ನೀನು ಭರತವರ್ಷದ ಕಲ್ಯಾಣವನ್ನು ಚಿಂತಿಸುತ್ತಿದ್ದರೆ, ಸೈನ್ಯದ ತಾಣೆಯನ್ನು ಬಿಟ್ಟು ಗಿರಿಗುಹೆಗಳನ್ನು ಸೇರಿ ತಪಸ್ಸನ್ನಾಚರಿಸು!"

ಮಹರ್ಷಿಯು ಎದ್ದುಹೋದ ನಂತರ, ಎಷ್ಟೋ ವೇಳೆಯು ವರೆಗೆ ನಾನಾಸಾಹೇಬನು ಅಲ್ಲಿಯೇ ಶೂನ್ಯಮನಸ್ಕನಾಗಿ ಕುಳಿತಿದ್ದನು. ಮೆಲ್ಲನೇ ನಾನಾಸಾಹೇಬನು ಎದ್ದು ಹೊರಬಂದು ನೋಡಿದನು. ಸಂಧ್ಯಾಸೂರ್ಯನು ಕೆಂಪಾಗಿ ಹಿಮಗಿರಿಯ ಹಿಂದೆ ಕಳಗಿಳಿಯುತ್ತಿದ್ದನು. ನಾನಾಸಾಹೇಬನು ಸಾವಕಾಶವಾಗಿ ಸರೋವರದ ಬಳಿಗೆ ಹೋದನು. ಸರೋವರವ ದಂಡೆಯ ಮೇಲೆ ನಿಂತು ಅವನು ಒಂದೊಂದಾಗಿ ತನ್ನ ಸೈನಿಕ ಉಡುಸನ್ನು ಕಳಚಿ ಸರೋವರದಲ್ಲಿ ಚೆಲ್ಲಿದನು. ಅವನು ವಿನಮ್ರನಾಗಿ ಸಂಧ್ಯಾಸೂರ್ಯನಿಗೆ ಸಾಷ್ಟಾಂಗ ಪ್ರಣಾಮಗೈದು ಎದ್ದು ನಿಂತನು. ಕ್ರಾಂತಿವೀರನಾಗಿ, ಕೊನೆಯ ಪೇಶ್ವೆಯಾಗಿ ಮೆರೆದ ಶ್ರೀಮಂತ ನಾನಾಸಾಹೇಬನು, ಕಾಷಾಯವಸ್ತ್ರವನ್ನು ಧರಿಸಿ ಭಾರತಿಯ ಸೇವೆಗಾಗಿ ಆಶ್ರಮೋಕ್ಕಭಿಮುಖನಾಗಿ ಹೊರಟುಹೋದನು.

ಮರೆಯಲಾಗದ ಯಾತ್ರೆ

(ಪ್ರವಾಸ ಪ್ರಬಂಧ)

ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ

ಹಂಪೆ-ವಿಜಯನಗರಗಳ ಹಾಳನ್ನು ನೋಡುತ್ತಿರುವಾಗ, ಕನ್ನಡಿಗರ ಐತಿಹಾಸಿಕ ಕಾಲದ ವೈಭವದ ನೆನಪಾಗಿ, ಹೃದಯವು ಹೆಮ್ಮೆಯಿಂದ ತುಂಬುತ್ತದೆ. ಕೂಡಲೆ, ಅಂತಹ ವೈಭವವು ಹುಡಿಗೂಡಿ ಹಾಳುಕೊಂಪೆಯಾಯಿತಲ್ಲ—ಎಂದು ದುಃಖವೂ ಉಮ್ಮಳಿಸುತ್ತದೆ! ಕನ್ನಡಿಗರಿಗೆ ಹಂಪೆ-ವಿಜಯನಗರಗಳ ಯಾತ್ರೆ ಒಂದು ಪುಣ್ಯಯಾತ್ರೆ!

'ಇದೇನು ಮಹಾಯಾತ್ರೆಗೆ ಈ ಮಹನೀಯರು ಹೊರಟಿದ್ದು, ಏನು ಕಾತಿಯೇ ರಾಮೇಶ್ವರವೆ!' ಎಂದು ಸಂಶಯ ತಳೆದು ಮೂಗು ಏರಿಸುವವರಿಗೆ, ನನ್ನದೇನೂ ಪ್ರವಾಸವೇ ಎನಿಸಲಿಕ್ಕಿಲ್ಲ. ಮಹಾ-ಪ್ರವಾಸವಂತೂ ಮೊದಲಲ್ಲ. ಇನ್ನು ಮರೆಯಲಾಗದ್ದೆ? ನೆನಪಿಡುವ ಸಂಗತಿ ಇದ್ದರೆ ಅದರ ಪ್ರಸ್ತಾಪ! ಸರಿ. ಹೊರಡುವ ಮುನ್ನಾದಿನ ಸಹ, ಹಲವಾರು ವಾರಪತ್ರಿಕೆಗಳಲ್ಲಿ ನನ್ನ ಪ್ರವಾಸದ ಯೋಗಾ-ಯೋಗವಿದ್ದಿಲ್ಲವೆಂದ ಮೇಲೆ, ನನ್ನ ಪ್ರವಾಸವು ಕಾರ್ಯರಂಗಕ್ಕಿಳಿ-ದೀತೇ ಇಲ್ಲವೆ—ಎಂದು ಸಂಶಯ ಬರುವಂತಿತ್ತು. ಇರಲಿ. ನನ್ನದಷ್ಟೆ ಅಲ್ಲದೆ, ೩೦ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಹಾಗೂ ನಾಲ್ವರು ಶಿಕ್ಷಕರ ತಂಡವೇ ಅಂದಿನ ಸುಪ್ರಭಾತದಲ್ಲಿ ಹೊರಟಿತೆಂದ ಮೇಲೆ, ಯಾರ ಭವಿಷ್ಯ-ವರ್ತಮಾನವನ್ನೂ ನೋಡುವ ಔಚಿತ್ಯ ಕಾಣಲಿಲ್ಲ.

ಅಂದು ರವಿವಾರ. ಗಾಡಿ ಎಂಟು ಇಪ್ಪತ್ತಕ್ಕೆ ಹೊರಡುವುದಿ-ದ್ದರೂ, ಎಂಟಕ್ಕೆ ಸಹ ನನ್ನ ಇತಿಹಾಸಕಾರ ಮಿತ್ರ ಬಾರದ್ದಕ್ಕೆ-ಅವನ ಸುಳಿವೂ ಹತ್ತದ್ದಕ್ಕೆ-ಮೊದಮೊದಲು ನಿರಾಶೆಯ ಕಾರ್ಮೋ-ಡವೇ ನನ್ನ ಮನವನ್ನಾವರಿಸಿತ್ತು. ಏನೇ ಆಗಲಿ, ಹತ್ತು ನಿಮಿಷ ಗಾಡಿ ತಡಮಾಡಿ ಬಿಡುವುದಕ್ಕೂ ಗೆಳೆಯ ಅರ್ಧ ಮರ್ಧ ಅಂಗ್ಲ ಉಡುಪಿನಲ್ಲಿ ಬಂದು ಹತ್ತುವುದಕ್ಕೂ ಸರಿ ಹೋಯಿತು. ಅಂತೂ ಬಹಳ ಗುದ್ದಾಡದೆ, ಒಂದೇ ಡಬ್ಬಿಯಲ್ಲಿ ವಿದ್ಯಾರ್ಥಿ-ಶಿಕ್ಷಕವೃಂದವು ಹತ್ತಿತು; ಬೇರೆಯವರು ಪ್ರತಿ ನಿಲ್ದಾಣದಲ್ಲಿ ಹತ್ತದಂತೆ ವ್ಯವಸ್ಥಿತ-ವಾಗಿ ಪರೋಪಕಾರ ಕೈಕೊಂಡಿತು! ವಯಸ್ಸಿನಲ್ಲಿ ಚಿಕ್ಕವರಿದ್ದು ಬುದ್ಧಿಯಲ್ಲಿ ಉಡಾಳರಿದ್ದ ಕಲಾಪ್ರೇಮಿಗಳು, ಎಷ್ಟುಹೊತ್ತು ಹಾಗೇ ಸುಮ್ಮನೆ ಕುಳಿತಾರು? ಅದು ಹೇಳಿ ಕೇಳಿ ಶಾಲೆಯ ಪ್ರಾಂಗಣ-ವಂತೂ ಅಗಿರಲಿಲ್ಲ ಅಂತೇ ಪರಿ ಬಿಚ್ಚಿದ ಹಾವಿನಂತೆನಿಸಿ ಅವರು ತಮ್ಮ ಲೀಲಾಲಹರಿಗೆ ಅವಕಾಶವಿತ್ತರು. ತಮ್ಮ ಅವಿಚ್ಛಿನ್ನ ತಲೆ-ಹರಟೆ, ಸಂಗೀತ (?) ಸಾಗಿತ್ತು. ನಮ್ಮ ಮಿತ್ರಮಂಡಳಿಯ ರಸಿಕ ಮಾತುಗಳೂ ಇತ್ತ ನಡೆದಿದ್ದುವು. ನಮ್ಮಲ್ಲಿ ಒಬ್ಬನಂತೂ ಜಾತ್ಯಾ ಕಲಾವಿದ; ಮೇಲಾಗಿ ಫ್ಯಾಶನ್ನಿನ ಪುರಸ್ಕರ್ತ. ವೃಷಭರಾಶಿ-ಯೊಂದೂ ಅವನದಿದ್ದ ಮೇಲೆ ಅರ್ಧಟಿಗೆ, ಉಸಟಳಕ್ಕೆ, ಯೋಜ-ನೆಯ ತಿರುಗಣಿ ಮಡುವಿಗೆ ಕೊನೆ ಎಲ್ಲಿ? ಗಾಡಿ ತನ್ನದೇ ಆದ ದೈನೀವೇಗದಿಂದ ಸಾಗಿದಾಗಲೇ, ಅವನು ತನ್ನ ಕ್ಯಾಮರಾ ಸಜ್ಜು-ಗೊಳಿಸುತ್ತಿದ್ದ. ಪುಣ್ಯಕ್ಕೆ ಗಾಡಿಯು ನಿಂತ ನಿಲ್ದಾಣಕ್ಕೆಲ್ಲ ಇಳಿದು, ಹೊಸಪೇಟೆ-ಹಂಪಿ-ವಿಜಯನಗರಗಳ ಸೆರಗಿಗೆ ಬರುವ ಮೊದಲೇ ತನ್ನ ಎಲ್ಲ ಫಿಲ್ಮ್ ರೋಲ್ ಹಾಳುಮಾಡಿಕೊಳ್ಳಲಿಲ್ಲ! ಇತಿಹಾಸಕಾರ-ಮಿತ್ರ, ಈ ರಿಂಗ್ ಲೀಡರರನ್ನು ಹೊರತುಪಡಿಸಿ ಉಳಿದ ಬೇರೊಬ್ಬ ನೆಂದರೆ ತಾಳ್ಮೆಯ ಅವತಾರ. ಅಲ್ಲದೆ ಹೈಸ್ಕೂಲಿನ ಫಟ್ಟ ದಿಂದಲೂ ನನ್ನೊಡನಿದ್ದು ನನ್ನ ರಸ-ವಿಷಯಮಿಷಗಳಲ್ಲಿ ಪಾಲು-ಗಾರನಾದವ. ಆಕಾರಮಾನದಿಂದ ನಿಟ್ಟಗಿದ್ದಂತೆ, ಸ್ವಭಾವದೃಷ್ಟಿ-ಯಿಂದಲೂ ಅತಿ ಸೌಮ್ಯ, ಸದ್ಗುಣಿ—ಹೆಚ್ಚು ಬಣ್ಣಿಸಹೋದಲ್ಲಿ ವಿಡಂಬನೆಗೆ ಎಡೆ ದೊರೆತೀತೆಂದು ಬಿಡಬೇಕಷ್ಟೆ!

ನಮ್ಮೂರನ್ನು ಬಿಡುವಾಗಲೇ ಉಪಹಾರದ ಸಿದ್ಧತೆ ತಾಳಗೆಟ್ಟಿದ್ದ ರಿಂದ, ಹುಬ್ಬಳ್ಳಿಯಲ್ಲಿ ಅವಸರದಲ್ಲಿಯೇ ಮತ್ತೊಂದು ಚಹದ ಮಜಲು ಆಯಿತು. ಎಲ್ಲರ ಆಂತಃಸ್ಫೂರ್ತಿಗೆ ಸಹಜವಾಗಿ ಕಳೆಯು ಕಟ್ಟಿತು. ಗಾಡಿ ಸಾಗಿ ೨-೩ ತಾಸಾಗಿ ಸೂರ್ಯ ನೆತ್ತಿಯ ಮೇಲೆ ಬಂದಿದ್ದನಿಲ್ಲವೊ ಎನ್ನುವಷ್ಟರಲ್ಲಿ, ಎಲ್ಲರೂ ಹಸಿದು ಕಕ್ರಾಂತರಾದವ-ರಂತೆ ಬುತ್ತಿ-ಚಪಾತಿಯ ಗಂಟಿಗೆ ಕೈ ಇಕ್ಕಿದರು. ಇಂತಹ ಕಾರ್ಯ-ಕ್ರಮಕ್ಕೆ—ಅದರಲ್ಲಿಯೂ ಪ್ರವಾಸದಲ್ಲಿ—ಅಡೆತಡೆ ಉಂಟುಮಾಡು-ವವರಾರು? ನಾನಾರೀತಿಯ ಪರಿಹಾಸದ ಮಾತಿನ ಮಾಲೆಯಲ್ಲಿ ಊಟಕ್ಕೂ ವಿಶೇಷ ಕಳೆಕಟ್ಟಿತು. ತದನಂತರ ವಾಮಕುಕ್ಷಿಯಾಗಲು ಅಲ್ಲಿ ಅಸಾಧ್ಯವಿದ್ದುದರಿಂದ, ಬೇಕುಬೇಕಾದವರು ತಮ್ಮತಮ್ಮಲ್ಲಿ ಇಸ್ಪೇಟಿನ ಆಟಕ್ಕೆ ಮೊದಲು ಮಾಡಿದರು. ಗಂಭೀರವೃತ್ತಿಯವರು ಲೋಕಾರೂಢಿಯ ಮಾತಿನತ್ತ ತಿರುಗಿದರು.

ಇಷ್ಟಾಗಿ ಎಲ್ಲರೂ ನೈಯಕ್ತಿಕ ಜಟುವಟಿಕೆಯಲ್ಲಿ ತನ್ಮಯರಾಗಿರುವಾಗಲೇ ಎದುರಿಗೇ ಹೊಸಪೇಟೆ! ಬೇರೆಯವರ ವಸ್ತುಗಳಿಂದ ಪ್ರಾಮಾಣಿಕವಾಗಿ ತಮ್ಮವಸ್ತುನ್ನೇ ಸರಿಪಡಿಸಿಕೊಳ್ಳಲು ಒಂದು ಪಂಗಡವು ತೊಡಗಿದಾಗ, ಮೇಲ್ವಿಚಾರಕಮಂಡಲವು ಟೀಕೇಟಿನ ಲೆಕ್ಕ ಮಾಡುವುದರಲ್ಲಿತ್ತು. ಅಂತೂ ಪ್ಲಾಟ್‌ಫಾರ್ಮ್ ಬಿಟ್ಟು, ಜಟಕಾ ಸ್ಟ್ಯಾಂಡಿಗೆ ಎಲ್ಲರೂ ಒಟ್ಟುಗೂಡುವುದು ಕಷ್ಟವೇ ಆಯಿತು. ವಿದ್ಯಾರ್ಥಿವೃಂದದ ರಸಿಕತೆ, ಉತ್ಸಾಹ, ಮೋಜಿನ ಗುಣಕ್ಕೆ ಅನರೂಪನೆನಿಸುವಂತೆ ಜಟಕಾವಾಲಾಗಳು ದೊರೆತರು. ಅವರ ಜಟಕಾಗಳೊ? ದೇವರೇ ಕಾಪಾಡಬೇಕು! ಕುದುರೆ ಪರವಾ ಇಲ್ಲವೆನ್ನುವಾಗ ಅವು ವಿರೂಪವಾದವು; ತದ್ವಿರುದ್ಧ—ನೋಡಲು ಅಂದವಿದ್ದ ಜಟಕಾಗಳಿಗೆ ಕುದುರೆಗಳು ಮಂಡವಾಗಿದ್ದು, ಕಂಡಲ್ಲಿ ಥಕ್ ಎಂದು ನಿಲ್ಲುತ್ತಿದ್ದುವು; ಇಲ್ಲನೆ ಮನಬಂದಂತೆ ಮುಂದೊ ಹಿಂದೊ, ಎಡಕ್ಕೊ ಬಲಕ್ಕೊ ಕ್ರಮಿಸುತ್ತಿದ್ದುವು. ಒಂದು ಗಿಡ್ಡ ಕೆಂಪು ಕುದುರೆಯಂತೂ ಹದಿನೈದು ನಿಮಿಷ ಜಪ್ಪೆಂದರೂ ಕದಲಲಿಲ್ಲ. ಮಳೆ 'ಛೋ ಛೋ' ಎಂದು ಸುರಿಯುತ್ತಿದೆ ಎಂದು ಹೀಗಿದ್ದೀತು—ಎಂದು ನಾವು ಸಮಾಧಾನ ತಳೆದಾಗ ಅದರ ಬುದ್ಧಿವಂತ (?) ಒಡೆಯನು, ಅದರ ಮನೆಯೇ ಅಲ್ಲಿ ಎಂದು ರಹಸ್ಯವನ್ನು ಬಯಲಿಗೆಳೆದನು. ಇಂತು ಒಂದುವರೆ ತಾಸಿನಲ್ಲಿ ಎಲ್ಲ ಕುದುರೆ, ಜಟಕಾ ಅದರೊಡೆಯರು, ಒಳಗಿನವರು ಡ್ಯಾಮ್ ಸ್ಟೈಟ್ ಮುಟ್ಟಿದರು. ಉಸ್ಸೆಂದು ಉಸುರುಗರೆದರು ನಮ್ಮ ಮೇಲ್ವಿಚಾರಕ. ಗೆಳೆಯನೊಬ್ಬ ಪ್ರಾಜೆಕ್ಟರೆಸ್ಟೋರೆಂಟಿನಲ್ಲಿ ಉಪಾಹಾರದ ವ್ಯವಸ್ಥೆಯನ್ನು ಕ್ಷಿಪ್ರದಲ್ಲಿಯೇ ಮಾಡಿರದಿದ್ದರೆ, ಹಿಂದಕ್ಕೇ ಹಲವರು ಕಾಲ್ದೆಗೆಯುತ್ತಿದ್ದರೇನೋ! ಸುದೈವದಿಂದ ಯಾರಿಗೂ ಹಾಗಾಗದೆ, ತದ್ವಿರುದ್ಧ ನಮ್ಮಲ್ಲಿಯ ಬಾಯಿಮುಂದಿದ್ದ ಇತಿಹಾಸಕಾರ ಗೆಳೆಯನ (ಕೋಲಂಬಸನನು ನೆನಪಿಗೆ ತರುವ) ಸಾಹಸದ ಮೂಲಕ, ಸಂಸ್ಥಾನಿಕರಿಗೇ ಉಚಿತವಾದ—ಈಗ ದುರ್ದೈವದಿಂದ ಅವೂ ನಿರ್ನಾಮವಾಗಿದ್ದರೂ—ಭವ್ಯ ದಿವ್ಯ ಕಟ್ಟಡವೊಂದು ನಮ್ಮ ಪಾಲಿಗೆ ದೊರೆಕಿತು. ಸರಿ, ಎರಡು ದಿನ ನಮ್ಮದೇ ಅದರ ಮೇಲೆ ಸ್ವಾಮಿತ್ವ!

ಸಂಜೆ ಮತ್ತು ಮರುದಿನ ಮುಂಜಾವು ತುಂಗಭದ್ರೆಯ ಆಣೆಕಟ್ಟು ನೋಡುವುದರಲ್ಲಿ ಕಳೆಯಿತು. ಸಂಜೆಗೆ ಇಡೀ ಆಣೆಕಟ್ಟನ್ನೂ ಗುಡ್ಡದ ಮೇಲಿನ ಅತ್ಯುನ್ನತ ಗೋಪುರವನ್ನೂ ಸೋಪಾನಗಳ ಸೀಳುದಾರಿಯ ಮುಖಾಂತರವಾಗಿ ಹತ್ತಿ ಹೋಗುವುದೆಂದರೆ ಹಲವರಿಗೆ ಸಾಕುಸಾಕಾಯಿತು. ಏರಿದಂತೆಲ್ಲ ಸುತ್ತಲೂ ವಿಸ್ತೃತವಾಗಿ ಕಾಣುವ ನಯನಮನೋಹರ ದೃಶ್ಯವನ್ನು ಕಂಡು ತಣಿದೆವು. ಗೋಪುರದ ತುಟ್ಟ ತುದಿಗೇರಿ ಹತ್ತಿನಿಂತಾಗಂತೂ ಹಿಂದಿನ ಶ್ರಮವೆಲ್ಲ ಪರಿಹಾರವಾಯಿತು. ನನ್ನ ಗೆಳೆಯ ಎಲೆಯುಡಕೆಯ ಬಾರನ್ನು, ಹತ್ತುವಾಗಲೆಲ್ಲ ಇಬ್ಬರಿಗೂ ಮಾಡಿಸುತ್ತಿದ್ದನೆಂದು, ಆಗೀಗ ಶ್ರಮವಾದರೂ ಮರುಕ್ಷಣ ಮಾಯವಾಗುತ್ತಿತ್ತು. ಪಾಪ! ಕೈಲಾಸ—ಪರ್ವತದ ದಿಕ್ಕಿನ ನಿರ್ಮಾನುಷ ಅಡವಿಯಲ್ಲಿ ಅಲೆದಾಡಿ ಕಿನ್ನರ ಮಿಥುನಗಳನ್ನು ಬೆಂಬತ್ತಿ ನಿರಾಸೆಹೊಂದಿ, ಕೊನೆಗೆ ಅಂದವಾದ ಅಚ್ಚೋದಸರಸ್ಸನ್ನು ಕಂಡಾಗ ಆ ಚಂದ್ರಾಪೀಡನಿಗೆ ಅಷ್ಟು ಆನಂದವಾಗಿತ್ತೊ ಇಲ್ಲವೊ! ನೈಸರ್ಗಿಕ ಏಸಿರಿ ಈಂಟುತ್ತ ಕುಳಿತೆ; ಹಾಗೇ ಕುಳಿತೆ. ಇತಿಹಾಸಕಾರಮಿತ್ರ ಕೊಂಚ ಎಚ್ಚರಿಸಿದಾಗ ವಾಸ್ತವಲೋಕದ ಪ್ರಜ್ಞೆಯುಂಟಾಯಿತು.

ಮರುದಿನ ಮುಂಜಾವಿನ ಕಾರ್ಯಕ್ರಮವೆಲ್ಲ ಆಣೆಕಟ್ಟಿನ ಮೇಲಿರದಿದ್ದರೂ, ಕೆಳಗಿನ ವಲಯದಲ್ಲೆಲ್ಲ ಹರಿದು ಹಂಚಿಹೋಯಿತು. ಬಣ್ಣಬಣ್ಣದ ಕಾರಂಜಿ, ಹಚ್ಚಹಸುರು ಮುರಿಯುತ ಭೂದೇವಿಯ ದುಕೂಲದ ಬಳಿ ಅಲೆದಾಡುವಾಗ ತೆಗೆದ ಛಾಯಾಚಿತ್ರ ಎಷ್ಟೆಂಬುದು ಆ ಮೇಲ್ವಿಚಾರಕರಿಗೇ ಗೊತ್ತು. ಆಣೆಕಟ್ಟಿನಿಂದ ಜಲಪಾತವಾಗಿ ಧುಮುಕುವ ನೀರಿನ ರಾಶಿಯನ್ನು ನೋಡಲು ಕಣ್ಣು ಸಾಲವು. ಏನು ಅದರ ರಭಸ? ಹಾಲಿನ ವರ್ಣ! ನೋಡಿಯೇ ತಣಿಯುವುದು; ಬಣ್ಣಿಸುವುದದಲ್ಲ. ರಾತ್ರಿ ವಿದ್ಯುದ್ದೀಪಗಳಿಂದ ಅಲಂಕೃತವಾದಾಗ ಅಲ್ಲಿಯ ಸೊಬಗನ್ನು ಸವಿಯುವುದು ಸ್ವರ್ಗೀಯ ಸುಖವೇ ಸರಿ!

ಮಧ್ಯಾಹ್ನದ ಊಟ ವಿಶ್ರಾಂತಿ ಮುಗಿದು ಹಾಯಾಗಿ ಕುಳಿತಾಗ, ಹೊಸಪೆಗೆ ನಮ್ಮನ್ನು ಕರೆದೊಯ್ಯುವ ಬಸ್ಸು ಸಿದ್ಧವಾಗಿ ಬಂದಿತ್ತು — ತಾನಾಗಿಯೇ ಅಲ್ಲ; ಗುದುಮುರಿಗೆ ಹಾಕಿ ಗೊತ್ತುಮಾಡಿದುದಕ್ಕೆಂದು! ಬಸ್ಸಿನ ಹನ್ನೆರಡುಮೈಲು ಪ್ರವಾಸ ಅಷ್ಟೊಂದು ರುಚಿಕರವಾಗದಿದ್ದರೂ, ಆಗೀಗ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಹಾಡಿನ (ಚಲಚ್ಚಿತ್ರದವು ತೀರ ಇತ್ತೀಚಿನವೇ ಹೆಚ್ಚು—ನಾಗಿನ್ ಗೀತಗಳ ಪದ್ಯಾವಲಿಗುಂಟ!) ಸ್ಪರ್ಧೆ ಉತ್ಸಾಹಕರವಾಗಿ ಸಾಗಿತೆಂದು, ನಿಂತು ನಿಂತು ಹೋಗುವ ಮೋಟರಿನ ಅಲೌಕಿಕ ವೇಗದೆಡೆಗೆ ವಿಶೇಷವಾಗಿ ಎಲ್ಲರ ಲಕ್ಷ್ಯ ಹೋಗಲಿಲ್ಲ. ಗಂಡುಹುಡುಗರಂತೂ ಕಂಠಪಾಠ ಮಾಡಿದ್ದೊಂದನ್ನೇ ಉಳಿದ ವಿದ್ಯಾರ್ಥಿನಿಯರೊಡನೆ ಒಪ್ಪಿಸುತ್ತಿದ್ದರೇನಿನಾ ರಾಗನಿಲ್ಲ ತಾಳವಿಲ್ಲ. ಒಬ್ಬಿಬ್ಬರ ಧ್ವನಿ ಮಧುರವೇನೊ ಇದ್ದಿತು. ಆದರೂ ಸುಮ್ಮನಿರುವುದುಚಿತವಲ್ಲವೆಂದು ತಮ್ಮವೆರಡು ಅಕ್ಕಿಯ ಕಾಳನ್ನು ಮುಂದುಮಾಡುತ್ತಿದ್ದರು. ಮಧ್ಯವಯಸ್ಕರಾದ ನಮ್ಮ ಶಿಕ್ಷಕ ಮಿತ್ರರು ಹಾಗೂ ನಾನು, ಇದರಲ್ಲಿ ಶ್ರೋತೃಗಳಾದದ್ದೇ ಕ್ಷೇಮವೆನಿಸಿತು ಇಲ್ಲದಿದ್ದರೆ ಸಣ್ಣಸಣ್ಣ ಸಳ್ಳಿಗಳಲ್ಲಿ ಬಸ್ಸು ನಿಂತಾಗ, ಸಮ್ಮಿಶ್ರ ವಿಲಕ್ಷಣ ಧ್ವನಿಯನ್ನು ಕೇಳಿದ ಗಂಡಸರು ಹೆಂಗಸರು—ಇವರೆಲ್ಲ ಆಸ್ಪತ್ರೆಗೆ (ಯಾವದು) ದಾಖಲು ಆಗುವುದು ಯೋಗ್ಯವೇ ಎಂದೆನ್ನುತಿದ್ದರೇನೊ! ಸರಿ! ಹಂಪೆ ಬಂದಿತು. ಮುನ್‌ಸೂಚನೆ ಕಂಡುವು: ಕಲ್ಲಿನ ಬೃಹದ್ರಾಶಿ, ಛಿನ್ನವಿಚ್ಛಿನ್ನ ಗುಡಿ, ಕಲ್ಲಿನ ಭವ್ಯ ಕಂಬಗಳು,—ಭಕ್ತರಾದ ನಮ್ಮನ್ನು ಕೈಮಾಡಿ ಕರೆದುವು; ಸ್ವಾಗತಿಸಿದುವು.

ಎಲ್ಲರೂ ಕಾಫೀಪಾನ ಮುಗಿಸಿಕೊಂಡು, ವಿರೂಪಾಕ್ಷ ದರ್ಶನದ ನಂತರ ವಿಜಯವಿಟ್ಠಲನ ಗುಡಿಯ ದಿಸೆಯಲ್ಲಿ ಹೊರಟಾಗ, ಸಂಜೆಯು ಐದಾಗಿರಬಹುದು. ಭಗ್ನಾವಶೇಷಗಳ ನಡುವೆ ನಡೆಯುತ್ತ ಸಾಗಿದೆವು. ತುಂಗಭದ್ರೆಯ ಸುಲಲಿತ ಸಲಿಲಪ್ರವಾಹವನ್ನು ನೋಡುವಷ್ಟು

ವೇಳೆ ಇರಲಿಲ್ಲ. ಹಾಗೇ ಕಣ್ಣು ಹಾಯಿಸಿ, ನೈಸರ್ಗಿಕ ನೋಟಕ್ಕೆ ಮನ ಸೋತರೂ—ಹಾಗೆಯೇ ಸಾಗಿದವು. ಎಲ್ಲಿ ಕತ್ತಲಾದೀತೋ ಎಂದು ಯಂತ್ರೋದ್ಧಾರ ಪ್ರಾಣದೇವರನ್ನು ಹೊರಗಿನಿಂದಲೇ ಕಿಟಕಿಯಲ್ಲಿ ನೋಡಿ ಮಣಿದು ಸಾಗಿದೆವು. ಆ ತುಲಾಭಾರದ ಮಂಟಪವು ಈಗ ಕೇವಲ ಕಲ್ಲಿನ ಕಟ್ಟಡ. ಆದರೆ ಆ ಕಾಲಕ್ಕೆ ರಾಯರ ಐಸಿರಿ ಎಷ್ಟಿತ್ತು, ವಿಜಯನಗರದ ರಾಯರು ಎಂತಹ ಕೊಡುಗೈ ದೊರೆಗಳು—ಎಂದು ಭಾವಪರವಶನಾಗಿ, ನನ್ನ ಇತಿಹಾಸಮಿತ್ರ ತನ್ನ ಹಳೆಯ ಬುದ್ಧಿಯನ್ನು ಪಾಲಿಶ್ ಮಾಡಿ ಉಸುರಿದ. ಕೇವಲ ಕಲ್ಲಿನ ಕುಸುರಿನ ಮೂರು ಭವ್ಯ ಕಂಬಗಳಿಂದ, ಹಿಂದಿನ ಐತಿಹಾಸಿಕ ಪ್ರಪಂಚವನ್ನೇ ಕಣ್ಣೆದುರು ಕಲ್ಪಿಸಬೇಕಾಯಿತೆಂದು ಕೆಡುಕೆನಿಸಿದರೂ, ರಾಯರ ತ್ಯಾಗ-ಉಪಾರಸಂಪತ್ತಿಗೆ ನಮ್ಮ ಮನಸ್ಸು 'ಮಾರುಹೋಗಿ ಹೃದಯ ಪುಲಕಿತವಾಯಿತು. ಮರುಕ್ಷಣ 'ಹೇಗಿದ್ದು ಎಂಥ ಅವಸ್ಥೆ ಅಯಿತ ಆ ಮಹಾಮಹಿಮರದು!' ಎಂದು ಕಣ್ಣೀರಿಡುವಂತಾಯಿತು—ಮನಸ್ಸಿನಲ್ಲಿಯೆ! ಆದರೆ ಎಷ್ಟು ಹೊತ್ತು ನಿಂತೀವು ಒಂದೆಡೆಗೆ? ಏನಾದರೂ ನೋಡಲು ಬಂದವರ-ಇತರರ-ಒತ್ತಾಯಕ್ಕೆ ಸಾಗಿದೆವು ಕಾಲು ಎಳೆಯುತ್ತ ಜುಕ್ಕುಜುಲುನೆಯಿಂದ. ಅನತಿದೂರದಲ್ಲಿಯೇ ಅದೋ ವಿಜಯವಿಟ್ಠಲನ ಮಂದಿರ! ಏನು ಕುಸುರಿನ ಕೆಲಸ! ಮೂರ್ತಿ, ಮಂಟಪ, ಪೌರಾಣಿಕ ದೃಶ್ಯಗಳ ನಿರ್ಮಿತಿ! ಒಂದೊಂದು ಕಂಬ, ಗೋಡೆ, ಗೋಪುರದ ವಿಭಾಗವೆಂದರೆ ಜೀವಂತ ಸೃಷ್ಟಿಯೇ—ಚೆಲುವಿನ ಕಣಿಯೆ! ೧೮ಚಕ್ಕಾಕು ಪೂಟಿನಲ್ಲಿ ಎಂತಹ ಅಂದವಾದ ಆನೆ, ಪುರುಷವಿಗ್ರಹ, ಸ್ತ್ರೀವಿಗ್ರಹ, ಮಂಟಪ! ಮಹಾಕಾವ್ಯದ ಸಮಗ್ರ ಪಾತ್ರ-ಸನ್ನಿವೇಶಗಳ ಸುಂದರ ಸರಪಳಿಯೇ ಅಲ್ಲಿ! ಕೃಷ್ಣನ ಕಾಲಿಯಾಮರ್ದನ, ಗೋಪಾಣಿಯರ ವಸನ ಬಚ್ಚಿಟ್ಟದ್ದು, ರಾಮ-ರಾವಣರ ಯುದ್ಧಪ್ರಸಂಗ, ಅಶೋಕವನದಲ್ಲಿಯ ಸೀತಾದೇವಿ, ಹತ್ತವತಾರಗಳು—ಎಲ್ಲ ಮನಸೆಳೆದುವು. ಕಲೆಯ ಬಲೆಯಿಂದ, ಪವಿತ್ರ ಭಕ್ತಿ ಸಾನ್ನಿಧ್ಯದಿಂದ ನಮ್ಮನ್ನೆಲ್ಲ ಪುಲಕೆತರನ್ನಾಗಿಸಿದುವು.

ಮರಳಿ ಹೋಗುವುದೆಂದೆ—ಎಂಬ ಕಲ್ಪನೆ ಮಿಂಚಿ, ಅವಸರ ಮಾಡಿ ಹಿಂದಿರುಗಲಾರಂಭಿಸಿದೆವು. ಆ ರಭಸದಲ್ಲಿಯೇ ನಮ್ಮ ಮೇಲ್ವಿಚಾರಕ ಕಲಾವಿದ ಗೆಳೆಯ, ಕಟ್ಟಡಗಳ ಹಾಗೂ ನೋಡಲು ಬಂದವರ ಭಾವಚಿತ್ರ ತೆಗೆದ—ಕೈಕ್ಯಾಮರಾದಿಂದ! ಗಾಡಿ ಸಾಗಿತು. ಸುತ್ತಲೂ ಹುಚ್ಚು ಹಿಡಿಸುವ ಬೆಳ್ದಿಂಗಳು. ಕಾನನದ ಬೆಳ್ದಿಂಗಳೇ ಅಹುದು! ಅದರಲ್ಲಿಯೂ ಭಗ್ನಾವಶೇಷಗಳ ನುಧ್ಯದಲ್ಲಿ! ಪ್ರತಿಯೊಂದು ಅಲ್ಲಿಯ ಕಲ್ಲು, ಕಂಬ, ಗೋಪುರ, ಮಂಟಪ—ಐತಿಹಾಸಿಕ ಹೆಬ್ಬೊತ್ತಿಗೆ—ಸುಂದರ ಸೃಷ್ಟಿ ಎಂದು ನನ್ನ ತಾತ್ಕಾಲಿಕ ಗೆಳೆಯ ಉಸಿರಿಡುವಾಗ, ಇನ್ನಿತರ ತಾಣೆಕ ಮಾತಿನ ಮಲುಕಿನಲ್ಲಿ—ಆಗಾಗೀನ ನಗೆಯ ಲಹರಿಗಳಲ್ಲಿ—ತಗ್ಗುದಿನ್ನೆ ಇದ್ದರೂ—ತಿಳಿಯದೆ ದಾರಿ ಕ್ರಮಿಸಿತು. ಮರಳಿ ವಿರೂಪಾಕ್ಷ ಮಂದಿರದ ಛತ್ರದ ಬಳಿ ಬಂದಾಗ ಎಂಟಾಗಿದ್ದಿತೇನೊ! ಸರಿ ನನ್ನ ಸಹಪಾಠಿ ಮಿತ್ರನ ಕಾಟಕ್ಕೆಂದು ಹಂಪೆಯ ಆ ಕೊಂಪೆಯಲ್ಲಿಯೂ—'ಯಾರಿಗೂ ಹೇಳೋಣೂ ಬೇಡವೆಂದು—' ಒಂದು ಉಪಾಹಾರ ಮಂದಿರ ಸಂಶೋಧಿಸಿ, ಆ ಕೈಚಿಮಣಿಯ ದೀದೀಪ್ಯಮಾನ (ಮಂದವಿದ್ದರೂ ಆಗೀಗ) ಪ್ರಕಾಶದಲ್ಲಿ, ದೃಷ್ಟಿಯಾಗುವ ಚಹ ಸೆಡ್ಡುವ ಚಟ ಪೂರಯಿಸಿದೆವು. ಅನಂತರ ಕ್ರಯೋದಶವಲ್ಲದಿದ್ದರೂ ತ್ರಿತಾಂಬೂಲದ ಶಾಸ್ತ್ರ ಮುಗಿಸಿದೆವು.

ಇಷ್ಟು ವೈಯಕ್ತಿಕ ಚಟ ನಡೆಯಿತೆಂದು ಸಮಾಧಾನದ ನಿಟ್ಟುಸಿರು ಬಿಟ್ಟು, ಅಡಿಗೆಗೆ ಸಹಾಯ ಮಾಡಬೇಕೆಂದು ಮನೆಯೊಳಗೆ ಬರುತ್ತೇನೆ; ಅಲ್ಲಿ ಜ್ವಾಲಾಮುಖಿ ಭೂಕಂಪ ನಡೆದಂತೆನಿಸಿತು! ಏನು ಹೊಗೆ, ಏನು ಅಸ್ತವ್ಯಸ್ತ ಊರಿ! ಅಂತೂ ಇತಿಹಾಸಕಾರ ಗೆಳೆಯ-ಮೇಲ್ವಿಚಾರಕ ಕಲಾವಿದರ ಹಾಗೂ ನಮ್ಮಂತಹ (?) ಇತರರ ನೆರವಿನಿಂದ ಹಂಜಕ್ಕೆ ಅನ್ನ, ಉಪ್ಪು-ಖಾರ ಕಡಿಮೆಯಾದ ಝುಣಕ ಎಲ್ಲರಿಗೂ ದೊರೆತು, ಮಲಗಬೇಕಾದರೆ ಮಧ್ಯರಾತ್ರಿಗೆ ಕೇವಲ ಐದೋ ಹತ್ತೋ ನಿಮಿಷಗಳು! ಇಂತಹ ಅಡಿಗೆಯ ವಸ್ತುಗಳೇ ಸಿದ್ಧವಾಗುವುವೇನೊ—ಎಂಬ ಪೂರ್ವಸಂಶಯದಿಂದ, ಎಲ್ಲರೂ ಸಾಕಷ್ಟು (ಉಳಿಯುವಷ್ಟೂ ಸರಿ!) ತಿಂಡಿ ತಿನಿಸು ತಂದದ್ದರಿಂದ, ಅನ್ನ-ಝುಣಕದ ಕೊರತೆ ನೀಗಿತು, ಪೂರ್ಣ ನೀಗಿತು. ತದ್ವಿರುದ್ಧ ಸ್ವಾನಲಂಬನದ ಪ್ರಥಮಪಾಠದ ಜ್ಞಾನವನ್ನು ಪ್ರವಾಸದಲ್ಲಿ ಉಪಯೋಗಿಸಿದ್ದರಿಂದ, ಶಿಕ್ಷಕಲೋಕವೆಲ್ಲ ತಮ್ಮ ಬೆನ್ನು ತಟ್ಟಿಕೊಂಡಿತು. ಇಂತು ಈ ಎಲ್ಲ ಅಡಿಗೆಯ ಸಿದ್ಧತೆಯ ಗಲಾಟೆಯ ಮೂರು ತಾಸಿನ ಅವಧಿಯಲ್ಲಿ, ನನ್ನ ಸೋದರಿ ಶಿಕ್ಷಿಕೆಯೊರ್ವರು ತಮ್ಮ ಜಾಣಾಕ್ಷತನ, ರಸಿಕತೆ, ಹಾಡುಗಾರಿಕೆ, ಆಟದ ಲಹರಿಯಿಂದ ಎಲ್ಲ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಒಟ್ಟಿಗೆ ಕಲೆಹಾಕಿ, ಉಪಯುಕ್ತ ವಿವಿಧ ವಿನೋದಾವಳಿ ಕಾರ್ಯಕ್ರಮದಲ್ಲಿ (Varity Entertainments) ತೊಡಗಿಸಿರವಿದ್ದರಿ—ದೊಡ್ಡ ಬಂಡಾಯ, ದಂಗೆ, ರಸಕಸಿ—ಎಲ್ಲಿ ಏಳುತ್ತಿತ್ತೊ!

ಇರಲಿ. ಅರುಣೋದಯಕ್ಕೂ ಮೊದಲೇ, ವಿರೂಪಾಕ್ಷ ಮಂದಿರದ ಚೌಘಡದ ಮಂಗಲರವವನ್ನಾಲಿಸುತ್ತ ನಮ್ಮಲ್ಲನೇಕರು ಎದ್ದೆವು. ಪ್ರಾತರ್ವಿಧಿಯ ನಂತರ ಚಹದ ವಿಧಿಗೆ ಅಣಿಯಾಗಿ ಮುಗಿಸಿದೆವು. ಅನಂತರ ವಿರೂಪಾಕ್ಷದರ್ಶನ—ಪುಕ್ಕಟೆಯಾಗಿ ಸಿಗುವ ಕಾಲದಲ್ಲಿ! ಯಾಕೆಂದರೆ ಎಂಟರ ನಂತರ ದರ್ಶನಕ್ಕೆ ಹಣ! 'ಇದೇನು ಅಸಹ್ಯ ಪದ್ಧತಿ, ದೇವರ ದರ್ಶನಕ್ಕೂ ಹಣವೇ?' ಎಂದು ನನ್ನ ಮುಂಗೋಪಿ ಇತಿಹಾಸ ಮಿತ್ರ (ಸ್ವಲ್ಪೀಕೆ ಬಹಳ) ಕೊಡೆಗಾಟ (ಚಿಕ್ಕ ಪ್ರಮಾಣದಲ್ಲಿ ಮಾತಿನ, ಇಲ್ಲವೆ ವಾದದ)ಕ್ಕೇಳುವಷ್ಟರಲ್ಲಿ, ನಾನು ಮುಂದಾಗಿ ವಿಷಯಾಂತರನ್ಯಾಸ ಮಾಡಿಸಬೇಕಾದರೆ ಕುರಿ-ಕೋಣ ಬಿದ್ದುವು. ಸರಿ. ಈ ತುಮುಲಯುದ್ಧ ತಪ್ಪಿ ವಿಜಯನಗರದೆಡೆಗೆ ಜೊರಡಲು ಪಾರ್ಟಿ ಸಜ್ಜಾಯಿತು. 'ಒಂಬತ್ತೇ ಹೊಡೆಯಿತಲ್ಲ ಎಷ್ಟು ತಡ!' ಎಂದು ನನ್ನ ಮೇಲ್ವಿಚಾರಕ ಮಿತ್ರ ಗುಡುಗಿದರೂ ವಿದ್ಯಾರ್ಥಿನಿಯರ ಬಳಗವು ಅವನ ಮಾತನ್ನು ಲೆಕ್ಕಿಸಲಿಲ್ಲ ಪ್ರವಾಸದ ವೇಷ-ಭೂಷಣದಲ್ಲಿಯೇ ತೊಡಗಿದ್ದರು. ಮನುಷ್ಯ ಮಾತ್ರಕ್ಕೆ ಅಂದ-ಚೆಂದದ ರೀತಿ ಇರುವಾಗ ಒಬ್ಬರನ್ನು ದೂಷಿಸುವುದೇಕೆ?—ಎಂದು ನಾನು ಹಾಗೂ

ನನ್ನ ಇತಿಹಾಸಕಾರ ಗೆಳೆಯ ನಡುವೆ ಬಾಯಿ ಹಾಕಿ (ಶಬ್ದತಃ ಅಲ್ಲ) ಮೇಲ್ವಿಚಾರಕ ಕಲಾವಿದನ ಬಾಯಿಕಟ್ಟಿ, ಎಲ್ಲರೂ ಅಪರಿಮಿತ ಶ್ರದ್ಧೆ ಉತ್ಸಾಹ-ಸಂಭ್ರಮಗಳ ಮಧ್ಯೆ ಸಾಗಿದೆವು ರಥಬೀದಿಗುಂಟ!

ಮುಂಜಾವಿನ ಈ ನಮ್ಮ ಸಂಚಾರ, ಹಿಂದಿನ ದಿನದ ಸಾಯಂಕಾಲಕ್ಕಿಂತಲೂ ದೀರ್ಘವಾದದ್ದೇ ಎನ್ನಿರಿ. ಸುಮಾರು ೮-೧೦ ಮೈಲಾದರೂ ತಿರುಗಾಡಿದ್ದೇವು. ಮೊದಲಿನ ೨-೩ ತಾಸಂತೂ ಒಂದು ಏಳ್ಗೆ ಸಹ ದಣಿಯಲಿಲ್ಲ; ನೀರು ಬೇಡಲಿಲ್ಲ. ಬಿಸಿಲು ಕ್ರಮೇಣ ಚುರುಕು ಎನಿಸುತ್ತ ನಡೆದರೂ ಯಾರಿಗೂ ಅದರ ಅರಿವಿರಲಿಲ್ಲ. ರಾಯರ ರಸಿಕತೆಯ ವೈಭವದ ವಿಜಯನಗರದಲ್ಲೆಲ್ಲ ಅತಿ ಶ್ರದ್ಧೆಯಿಂದ ಅಲ್ಲಲ್ಲಿ ನೋಡುತ್ತ ಭಾಯಾಚಿತ್ರದಲ್ಲಿ ಮೂಡುತ್ತ ನಡೆದುದರಿಂದ, ಸೂರ್ಯನು ಪೂರ್ಣ ನೆತ್ತಿಯ ಮೇಲೆ ಬಂದ ಮೇಲೆಯೇ ಒಬ್ಬಿಬ್ಬರಲ್ಲಿ 'ಈಗ ಊಟಕ್ಕೆ ಮರಳಿದರೆ ಚೆನ್ನು ಅಲ್ಲವೆ' ಎಂಬ ಭಾವನೆ ಮೊಳಗಹತ್ತಿತು ನಾನಂತೂ ನನ್ನ ಇತಿಹಾಸಕಾರ ಗೆಳೆಯನ ಕೈಬಿಟ್ಟರಲಿಲ್ಲ. ಅವನು ಕೇವಲ ಸಂದರ್ಶಕನಲ್ಲದೆ ನಾಲ್ಕಾರು ಸಲ ಇಲ್ಲಿಗೆ ಬಂದವನಂತೆ; ಮೇಲಾಗಿ ಸಾಹಿತಿ; ಇತಿಹಾಸದ ನೈಜ-ವಿದ್ಯಾರ್ಥಿ. ಅಂತೇ ಏನು ನೋಡಿದರೂ ತನ್ನ ಐತಿಹಾಸಿಕ ಜ್ಞಾನದ ಸರ್ಚ್‌ಲಾಯಿಟ್ ಕೆಡವದೆ ಮುಂದೆ ಹೋಗುತ್ತಿರಲಿಲ್ಲ. ಉದ್ದಾನ ವೀರಭದ್ರನ ಭವ್ಯಮೂರ್ತಿ, ಕಡಲೆ-ಸಾಸಿವೆ ಗಣಪತಿಗಳು, ಕಮಲ ಮಹಲು, ಮಹಾನವಮಿಯ ದಿಬ್ಬ, ಗಜಶಾಲೆ, ಅರಸರ ಅಲೋಚನೆಯ ಗುಪ್ತಸಭಾ ಗುಹೆ,—ಎಲ್ಲದರ ಮೇಲೆ ಚಿಕ್ಕವರಿಗೆ ದೊಡ್ಡವರಿಗೆ ನಮ್ಮ ಬಳಿ ಬಂದ ಗೈಡ್‌ನಿಂದ ರುಚಿಕಟ್ಟಾದ ಸಂಗತಿ, ಸಮಗ್ರ ಇತಿಹಾಸ, ಸೂಕ್ಷ್ಮ ವಿವರಣೆ ದೊರೆತುವು. ಒಂದು ಕಂಬವೇ, ಒಂದು ಕಲ್ಲೆ, ಒಂದು ಭಗ್ನಮೂರ್ತಿಯೆ, ಅನೆಯೆ, ಕಟ್ಟಡವೇ—ಎಲ್ಲವೂ ನಾಮಶೇಷಾವಸ್ಥೆಗೆ ಬಂದಂತೆನಿಸಿದರೂ — ಹಿಂದಿನ ಇತಿಹಾಸದ ವೈಭವವನ್ನು ಮೂಕವಾಗಿದ್ದೇ ನಿನೇದಿಸಿದುವು. ಅಕ್ಕ-ತಂಗಿಯರ ಬಂಡೆಗಳು ನಮ್ಮ ಮನಸ್ಸು ಕರಗಿಸಿದಂತೆ ಒಂದೊಂದು ಸುರಂಗಮಾರ್ಗವೂ, ಕಾಲುವೆಯ ರೀತಿಯೂ ನಮ್ಮನ್ನು ಮುಗ್ಧರನ್ನಾಗಿಸಿದುವು. ರಾಯರ ಕಲಾಪ್ರೇಮಕ್ಕೆ, ವೈಭವಕ್ಕೆ, ಕಾರ್ಯನಿರ್ವಹಣೆಯ ಅಖಂಡ ಸಾಮರ್ಥ್ಯಕ್ಕೆ ಇಷ್ಟು ಅವಶೇಷಗಳೇ ಸಾಕಷ್ಟು ನಿದರ್ಶನವೆನಿಸಿದುವು. ಅಂದಿದ್ದು ಇಂದಿಲ್ಲದಾದ ನಾಡಿಗಾಗಿ ಕಣ್ಣೀರಿನ ಕಾಲುವೆ ಕರೆಯಿಸಹೆಚ್ಚಿದುವು. ಮಾತಂಗ ಬೆಟ್ಟವೇರುವುದು ದೊಡ್ಡವರಿಗೆ ಕೊಂಚ ಬಿಗಿ ಎನಿಸಿದಾಗ, ಚಿಕ್ಕವರು ಹಾಹಾ ಎನ್ನುವುದರಲ್ಲಿ ಮೇಲೆ ಹೋಗಿ ನಿಂತು ನಮ್ಮನ್ನು ಕೈಮಾಡಿ ಕರೆದು ನಾಚಿಸಿದರು. ಅಲ್ಲಿಂದ ಸುತ್ತಲಿನ ದಿವ್ಯ ನೋಟ ಕಂಡು ಮನಸ್ಸು ಒಂದು ಕ್ಷಣ ಆನಂದತುಂದಿಲವಾದರೂ, ಮರುಕ್ಷಣ ಮತ್ತೆ ವಿಜಯನಗರ, ಜಚ್ಯುತರಾಯನ ಗುಡಿ (ಅರ್ಧ ಮುಗಿದದ್ದು) ಕಂಡು ಹೃದಯವು ಕಂಪಿಸಿತು. ಕೋಡಿ ಒಡೆದು ಕಣ್ಣೀರು ಬರುವಂತೆ ಭಾಸವಾಯಿತು. ಭಗ್ನತೆಯಲ್ಲಿಯೇ ಕಲೆಯ ಸಾನ್ನಿಧ್ಯ, ಪಾವಿತ್ರ್ಯ, ಭಕ್ತಿಯ ಸೆಲೆ, ಜಿಲುವು ಕಂಡು ಆನಂದಿಸಿ ಇಳಿಯಹತ್ತಿದೆವು. ಮಾರ್ಗವು ಇಕ್ಕಟ್ಟಾಗಿದ್ದರೂ ಇಳಿಜಾರಾದುದರಿಂದ ಹಾಹಾ ಎನ್ನುವುದರಲ್ಲಿ ನಾವು ಇಳಿದುಕೊಂಡ ಛತ್ರಕ್ಕೆ ಬಂದೆವು; 'ಮನ ಸೋಕ್ತವಾಗಿ' ಊಟಮಾಡಿದು ವಿಶ್ರಾಂತಿಪಡೆದೆವು.

ಸರಿಯಾಗಿ ನಾಲ್ಕಕ್ಕೆ ಹೊಸಪೇಟೆಗೆ ಹೋಗುವ ನಮ್ಮ ಬಾಡಿಗೆಯ ಬಸ್ ವಾಹನವು ಬರಲು, ನಾ ಮುಂದು ನೀ ಮುಂದೆಂದು ಎಲ್ಲರೂ ಹತ್ತಿದರು. ಗಾಡಿಯ ವೇಳೆಯು ರಾತ್ರಿ ಹನ್ನೊಂದರ ವರೆಗೆ ಇದ್ದುದರಿಂದಲೊ ಏನೊ, ನಡುವೆ ಹತ್ತಾರು ಸಲ ಮೋಟರು—ಕಂಡಕ್ಟರ್ ಡ್ರಾಯ್‌ವ್ವರರ ಮತಭೇದದಲ್ಲಿ ಸಿಕ್ಕು—ಯಾರ ಮಾತನ್ನೂ ಕೇಳದೆ ತಟಸ್ಥವೃತ್ತಿಯನ್ನವಲಂಬಿಸಿತು! ಸರಿ. ಒಳಗಿದ್ದವರು ನೂಕುವುದು, ಮತ್ತೆ ಅವೇಶ-ಕುತೂಹಲಭರದಲ್ಲಿ (ನೆಟ್ಟಗೆ ಸಾಗೀತೇನೊ ಎಂದು) ಹತ್ತುವುದು ನಡೆಯಿತು. ಸಾಮೂಹಿಕ ಗೀತ, ಭಾವಗೀತ, ಚಲಚ್ಚಿತ್ರದ ಹಾಡು, ಹಾಳುಹರಟೆ—ಎಷ್ಟಾದರೂ, ೬ ಮೈಲು ಸಹ ಮೋಟರು ಕ್ರಮಿಸಿರಲಿಲ್ಲ. ಡ್ರಾಯ್‌ವ್ವರನು ತನ್ನ ಅಧಿಕಾರ-ಬುದ್ಧಿಯ ಘಟ್ಟದಿಂದ ಕೆಳಗೆ ಇಳಿಯನು; ಕಂಡಕ್ಟರನು ತನಗೆ ಯೋಗ್ಯ ಟೀಪಾರ್ಟಿಯಾಗಲಿಲ್ಲವೆಂದು ಸೆಡವು ಮಾಡುವನು. ಹೀಗೆ ಸುವ್ಯವಸ್ಥಿತವಾದ ರೋಮಾಂಚಕಾರಿ ಹೋರಾಟ ಸಾಗಿತು. ಅದರಲ್ಲಿ ಬೇರೆ ಎಸ್. ಟಿ. ಗೆಳೆಯರು ಬಂದು—ನಮ್ಮೆಲ್ಲರ ಸುದೈವ—ಮೂಲ ಡ್ರಾಯ್‌ವ್ವರ್ ಕಂಡಕ್ಟರರ ದುರ್ದೈವವೆಂಬಂತೆ—ಮೋಟರನ್ನು ದಾರಿಗೆ ತಂದರು. ಹೆಟಮಾಡುವ ಮಗುವನ್ನು ರಮಿಸಿದಂತೆ ಮತ್ತೆ ಮೋಟರು ಸಾಗಿತು. ಹೊಸಪೇಟೆ ಬಂದಿತು. ಗಾಡಿ ಹಿಡಿದೆವು ರಾತ್ರಿಯಲ್ಲಾಗಲಿ, ಗಾಡಿಯಿಂದಿಳಿದ ಮರುದಿನವಾಗಲಿ, ನಮ್ಮೆಲ್ಲರ ಕಣ್ಣೆದುರು ಆ ಡ್ರಾಮ್ ಸಾಯಿಟ್, ಆ ಹಂಪೆ, ಆ ವಿಜಯನಗರ, ಆ ನಮ್ಮ ರಸ-ವಿಷ ನಿನಿಷಗಳು!

" A thing of beauty is a joy forever; its loveliness increases but never passes into nothingness and still will keep a bower quiet for us and a sleep full of sweet dreams " ಎಂಬ ಕೀಟ್ಸ್‌ಕವಿಯ ಉಕ್ತಿಯಂತೆ ನಮ್ಮ ಮನದಾಗಸದಲ್ಲಿ ಎಂದೂ ಈ ನೋಟಗಳು ಉಳಿಯತಕ್ಕುವೆ. ಕಾಲ ಉರುಳಿದಂತೆ ಮಸುಕೆನಿಸುವ ಬದಲು ಅವರ್ಣನೀಯ ಅಪಾರ ಆನಂದವೇ ಇವುಗಳಿಂದ ಉಬ್ಬವಿಸೀತೆಂಬ ಆತ್ಮವಿಶ್ವಾಸ ನಮಗಿದೆ.

ಮೋಹನನು ಮೈದೋರೆ *

'ಆನಂದಕಂದ'

卐

ಮೋಹನನು ಮೈದೋರೆ — ಭಾರತದೇವಿಯಾದಳು ಧೀರೆ!

೧

ಮೂಡಣದ ಬಾನೊಳಗೆ ಮೂಡಿತು
ಬೆಳಗುಬೆಳ್ಳಿಯ ತಾರೆ....
ಕಾಡಿಗೆಯ ಕಾರಿರುಳ ತಾಮಸ
ನೋಡು, ಹೋಯ್ತುದೊ ಸೂರೆ....
ಮೋಹನನು ಮೈನೋರೆ....
ಮೋಹನನು ಮೈದೋರೆ ಭಾರತ-
ದೇವಿಯಾದಳು ಧೀರೆ!

೨

ತೆಗೆದು ತೆರೆ ಹೊಂಬೊಗರನೊಗೆಯುತ
ನಗೆಯ ತೂರಿದಳಾ ಉಷೆ....
ಮುಗುಳುಗಳ ಮೈದಡಹಿ ನಗೆಯದು
ಬಿಗಿದ ಮೈಗಳನರಳಿಸೆ....
ಬಂದಿತೈ ಮೆಲುಗಾಳಿ....
ಬಂದಿತೈ ಮೆಲುಗಾಳಿ ಸುಮಸೌ-
ಗಂಧವನ್ನದು ತಾಳಿ!

೩

ನಿಶೆಯೊಳಾಳಿದ ಆಸುರರಾಜ್ಯಕೆ
ವಿಷಮಕಾಲವು ಬಂದಿತೋ....
ಅಸುವಿನಾಶವು ಕೋಳ-ನರಿಗಳ
ಬಾಳು ಗವಿಗಳನೊಂದಿತೋ!
ಹುಸಿ-ಕವಡು ಮರೆಸಂದಿತೋ....
ಹುಸಿ-ಕವಡು ಮರೆಸಂದು ನಾಡಿಗೆ
ನಸುಕುಹೊಗರೈತಂದಿತೋ!

೪

ಅರುಣನೇರಿದ ರಥವ, ಸಾರಿದ
ಸುರಪನಾ ಗಿರಿಶೃಂಗ....
ಹರಡಿತೈ ಬನಬನದಿ ಕಲಕಲ-
ರವವನುದಯವಿಹಂಗ....
ಮಧುಕರಂಗಳ ಸಂಘ....
ಮಧುಕರಂಗಳ ಸಂಘ ಹಾಡಿತು
ಮೃದುಲ ತಾನತರಂಗ!

೫

ಭಾರತಕೆ ಹೊಸಯುಗವನರುಹಲು
ಬಂದನವ ವೈತಾಳಿ ...
ಪಾರತಂತ್ರ್ಯ ಪಿಶಾಚಿಯೋಡಿತು
ಅವನ ಗೀತವ ಕೇಳಿ,
'ಭಾರತೀಯರೆ ಏಳಿ!'
'ಭಾರತೀಯರೆ, ಬೇಗನೇಳಿರಿ'
ಎನುತೆ ಕೂಗಿತು ಕೋಳಿ!

೬

ಕರೆಯ ಕೇಳುತ ಭಾರತದ ಜನ
ಹಿರಿ-ಕಿರಿಯರಿವರೆನ್ನದೆ....
ಸರುವರೂ ಸಂಭ್ರಮಿತರಾದರು.
ಮಿರುಗು ಸುತ್ತಲು ತುಂಬಿದೆ!
ಮೋಹನನು ಮೊಗದೋರೆ....
ಮೋಹನನು ಮೊಗದೋರೆ ಭಾರತ-
ದೇವಿಯಾದಳು ಧೀರೆ!

---

* ಕಳೆದ ಅಕ್ಟೋಬರ್ ೨ನೆಯ ದಿನಾಂಕದಂದು, ಧಾರವಾಡದ ಆಕಾಶವಾಣಿ ಕೇಂದ್ರದಿಂದ ಬಿತ್ತರಗೊಂಡ ಗೀತವಿದು.

ಗೆಲವು

(ಚಿಕ್ಕಕಥೆ)

ಶ್ರೀ. ಮಿರ್ಜಿ ಅಣ್ಣಾರಾಯರು, ಸೇಡಬಾಳ

●

ಗೆಲವು ಏತರಲ್ಲಿದೆ? ವ್ಯಾವಹಾರಿಕ ವೀರತನದಲ್ಲಿಯೆ? ಅಂತಹ ವೀರತನದಲ್ಲಿ ಮಾನವನಿಗೆ ತೃಪ್ತಿಯಿದೆಯೆ? ಶಾಂತಿ ಇದೆಯೆ ಗೆಲವಿನ ಮುಖ್ಯ ಲಕ್ಷಣ ಶಾಂತಿ-ಸಮಾಧಾನಗಳು!

●

"ಎರಡು ಗಂಟೆಗಳ ಹಿಂದೆ ನಾನೊಬ್ಬ ಮಹಾರಾಜ! ಈಗ ಸೇವಕ!! ಈಗ ನೀನು ವಿಜಯಿ! ಇನ್ನೊಂದು ಘಳಿಗೆಯಲ್ಲಿ ನಿನಗೇನು ಕಾದಿದೆಯೋ ಯಾರಿಗೆ ಗೊತ್ತು?"

ಈ ಮಾತುಗಳು ಅಲೆಕ್ಸಾಂಡರನ ಹೃದಯದ ಹೊಡೆತದೊಡನೆ ಇನ್ನೂ ಧ್ವನಿಗೊಡುತ್ತಿದ್ದುವು. ತನ್ನೊಡನೆ ಯುದ್ಧದಲ್ಲಿ ಸೋತು, ನೆರೆಯಾಳಾಗಿ, ಎದುರಿಗೆ ನಿಂತ ಭಾರತದ ಅರಸನೊಬ್ಬನ ನುಡಿಗಳವು, ಗ್ರೀಕ ಸಮ್ರಾಟನ ಕಣ್ಣಿನ ಮಂಜನ್ನು ಹರಿಯಿಸಿದ್ದುವು; ವಿಚಾರದಲ್ಲಿ ಕೆಡಹಿದ್ದುವು; ಆತ್ಮನಿರೀಕ್ಷಣೆಯ ದಿವ್ಯ ಕನ್ನಡಕವನ್ನು ಕೊಟ್ಟಿದ್ದುವು.

ಜಗಜ್ಜೇತ! ಅಲೆಕ್ಸಾಂಡರ!!

ಆಂ! ನನ್ನಂಥವನ ಎದುರಿನಲ್ಲೂ ಭಾರತದ ಈ ಅಂಗೈ ಅಗಲ ನೆಲವನ್ನು ಅಳುವ—ಅಲ್ಲ—ಅಳುತ್ತಿದ್ದ ಈ ಪೋರಸ, ನಸುವೂ ಅಂಜದೆ ಅಳುಕದೆ, "ನನ್ನನ್ನು ರಾಜನಂತೆ ನಡೆಯಿಸಿಕೊಳ್ಳು!" ಎಂದು ಹೇಳಿದನಲ್ಲ! ಅದೆಂತಹ ಗಂಭೀರಧ್ವನಿ! ಆಃ ಅದೆಂತಹ ನಿಲುವು!! ನನಗಿಂತ - ಊಂ ಹೂಂ!—ಸ್ವಲ್ಪ ಗಿಡ್ಡವಾದರೇನಂತೆ. ಆತನ ಆತ್ಮಶ್ರೀಯೊಂದು ಹಿಮಾಲಯ, ಗೌರೀಶಂಕರ, ಮಹಾಮೇರು! ಪರಾಜಿತನಾಗಿದ್ದರೂ ತಪ್ಪಿಯಾದರೂ, ತಲೆ ತಗ್ಗಿಸಿದನೆ? ಇಲ್ಲ. ಏನವ ಪೋರಸ—ಪೌರುಷ!

ಜಗತ್ತನ್ನೇ ಗೆದ್ದೆನೆಂದೆ ಸೃಥ್ವಿಯೊಂದು ಅಂಗೈನೆಲ್ಲಿಯೆಂದು ಭಾವಿಸಿದೆ. ಇಲ್ಲಿಯೂ ವಿಜಯ ನನ್ನದೇ. ಜಗತ್ತಿನ ಕಣ್ಣಿಗೆ ಪೋರಸ ನನ್ನ ಸೆರೆಯಾಳು. ಆಂತರಂಗದಲ್ಲಿ ನನ್ನಾತ್ಮಪಕ್ಷಿ ಪೋರಸನ ಪೌರುಷದ ಪಂಜರದಲ್ಲಿ ಸಿಲುಕಿದ ಒಂದು ಗುಬ್ಬಿ! ಬಣ್ಣದ ಗುಬ್ಬಿ!!

ನಿಜವಾಗಿಯೂ ಅಲೆಕ್ಸಾಂಡರನ ಆತ್ಮವಿಹಂಗವ ವಿಲಿವಿಲಿ ಒದ್ದಾಡುತ್ತಿತ್ತು, ಆ ಆದಿಕವಿಯ ಎದುರಿಗೆ ಬೇಡನ ಬಾಣದ ಹೊಡೆತಕ್ಕೆ ಬಲಿಯಾದ ಅಂದಿನ ಕ್ರೌಂಚಪಕ್ಷಿಯಂತೆ. ಇದರಿಂದ ಇನ್ನಾವ ಮಹಾಕಾವ್ಯ ಸೃಷ್ಟಿಯಾಗಲಿದೆಯೊ!

ಮುಂದಿನದೇನನ್ನೂ ಯೋಚಿಸದೆ ನಾಗಿದ್ದಾನೆ. ಅಲೆಕ್ಸಾಂಡರ. ಪೂರ್ವದಿಕ್ಕಿನಲ್ಲಿ ಇನ್ನೂ ದಿನಮಣಿ ಉದಯಿಸಿಲ್ಲ. ನಾಲ್ಕು ಮೂರಿನ ಆಚೆಯ ನೆಲವೂ ಕಾಣದಂತೆ ಮಂಜು ಮುಸುಕಿದೆ. ಹಿಂದೆ ಹೊರಳಿ ನೋಡಿದರೆ, ಸಮಾಪದಲ್ಲಿ ಇದ್ದ ತನ್ನ ಅಸಾರ ಸೇನೆಯೂ ಕಾಣದು. ಮಗ್ಗುಲಲ್ಲೇ ಹರಿಯುತ್ತಿದ್ದ ವಿಸ್ತಾರವಾದ ಸಿಂಧುವು ತನ್ನ ಹೃದಯದ ನಂಜನ್ನು ಹೊರದೂಡುವಂತೆ, ಮಂಜನ್ನು ತೆರೆ ತೆರೆಯಾಗಿ ಭೂಮಿಯತ್ತ ಕಳಿಸುತ್ತಿದೆ. ಅದೇನು ಮಂಜೋ, ಭಾರತಭೂಮಿಯ ಯಜ್ಞ-ಯಾಗಗಳ ಧೂಪಧೂಮವೋ! ಏನಿದ್ದರೇನು? ಅಲೆಕ್ಸಾಂಡರನ ಮೈ-ಮನಗಳನ್ನದು ಮುತ್ತುತ್ತಿದೆ, ಸುತ್ತುತ್ತಿದೆ. ಎಲ್ಲೆಲ್ಲಿಯೋ ಕೊಂಡೊಯ್ಯುತ್ತಿದೆ.

ಜಗಜ್ಜೇತ! ಅಲೆಕ್ಸಾಂಡರ!!

ಭಾರತದ ಈ ವಾತಾವರಣದಲ್ಲಿ ಹಿಂಜಿದರಳಿಗಿಂತ ಹಗುರಾಗಿ ಹಾರುತ್ತಿದ್ದಾನೆ. ಪೋರಸನನ್ನು ಗೆದ್ದಿದ್ದಾನೆ. ಪೋರಸನ ಎದುರಿನಲ್ಲಿಂದು ಸೋತಿದ್ದಾನೆ. ಆ ಗೆಲವು, ಈ ಸೋಲು; ಎರಡರಲ್ಲಿ ಯಾವುದು ಮಿಗಿಲು? ಗೆಲವೋ ಸೋಲೋ?—ಏನೂ ತಿಳಿಯದ ಹಾಗಿತ್ತು. ಎಲ್ಲಾ ಅದರೊಳಗೇ ಅಡಗಿದೆ—ಎನಿಸಿತ್ತು.

ಯಾವುದರಲ್ಲಿ?

ಮುಖಕ್ಕೆ ಮುತ್ತಿದ ಮಂಜಿನ ಹನಿಗಳನ್ನು ತನ್ನ ಅಂಗೈಗಳಿಂದ ಒರಸಿಕೊಂಡ, ಅಲೆಕ್ಸಾಂಡರ. ಹುಬ್ಬು, ರೆಪ್ಪೆಯ ಕೂದಲುಗಳ ಮೇಲೆ ಸಣ್ಣ ಮುತ್ತಿನಂತೆ ನಿಂತ ಪೀರ್ಷನಿಗಳು, ಇದ್ದಲ್ಲಿಯೇ ನೀರಾಗಿ ಅವನ ಕೈಗಳನ್ನು ಒದ್ದೆಗೊಳಿಸಿದುವು. ಸಹಸ್ರಾರು ಜೀವಗಳನ್ನು ಹೆತ್ತಿಕ್ಕಿದ ಆ ಕರಗಳಿಗೆ ಈ ಹನಿಗಳ ಇರುವು ಗಮನಕ್ಕೂ ಬಾರದೆ ಜೋಗಿರಬೇಕು. ಆದರೆ ಕೈ ಮಾತ್ರ ಒದ್ದೆಯಾಗದೆ ಹೋಗಲಿಲ್ಲ.

ಇನ್ನೂ ಮುಂದೆ ನಾಗಿದ್ದಾನೆ ಅಲೆಕ್ಸಾಂಡರ! ಏಕಾಕಿಯಾದರೇನಂತೆ! ಜಗಜ್ಜೇತನಿಗೆ ಎದುರುಂಟೆ?

ನಡೆದ; ಹಾಗೆಯೇ ನಡೆದ ಅಲೆಕ್ಸಾಂಡರ. ಅವನ ಜೊತೆಯಲ್ಲಿಯೇ ಸಿಂಧೂನದಿಯು ಪ್ರವಹಿಸುತ್ತಿತ್ತು, ಸಾಗರದೆಡೆಗೆ ಧಾವಿಸುತ್ತ. ಬೆಳಗಿನ ಹೊತ್ತು. ಅಲೆಕ್ಸಾಂಡರನಿಗೆ ಎಷ್ಟು ದೂರ ನಡೆದರೂ ಪ್ರಯಾಸವೆಂಬುದಿಲ್ಲ. ಮನಸ್ಸು ಮಲ್ಲಿಗೆಯಂತೆ ಅರಳಿತ್ತು. ಹೊರಗೆ ಮಾತ್ರ ಇನ್ನೂ ಮಂಜು ಮುಸುಕಿತ್ತು. ಅದನ್ನೂ ಹೊಡೆದೋಡಿಸಲು ಬರುವಂತೆ ಪೂರ್ವದಿಕ್ಕಿನಲ್ಲಿ ರವಿಯು ಬಂದ. ಮೆಲ್ಲನೆ ಮಂಜು ಕರಗಹತ್ತಿತು. ಒಳಗಿನ ಬೆಳಕು ಹೊರಗೆ ಹರಿಯಹತ್ತಿತು.

ಪರರಾಷ್ಟ್ರ. ಎರಡು ದಿನಗಳ ಹಿಂದೆಯೇ ಇಲ್ಲಿಯ ಜನಪ್ರಿಯ ಅರಸ—ಪೋರಸನನ್ನು—ಗೆದ್ದು ಬಂಧಿಸಿದ್ದಾಗಿದೆ. ಭಾರತೀಯರ ಹೃದಯ ತಕಪಕಸೆ ಇನ್ನೂ ಕುದಿಯುತ್ತಿರಬೇಕು. ಗ್ರೀಕಸೈನ್ಯ ವಿಜಯದ ನುಬ್ಬಿನಲ್ಲಿ ಮೈಮರೆತು ಮಲಗಿದೆ. ಚತುರ ಸೇನಾನಿಯಾದ ಅಲೆಕ್ಸಾಂಡರನಿಗೆ ಇಂದು ಇದಾವುದರ ಅರಿವೂ ಇಲ್ಲ-ಇದ್ದರೂ ಅದರ ಹೆದರಿಕೆಯೂ ಇಲ್ಲ. ಬೆಳಗಿನಲ್ಲಿಯೇ ಎದ್ದು,

ಸ್ವಚ್ಛಂದವಾಗಿ ನಿಹರಿಸುತ್ತ ಸಿಂಧುನಿನ ತೀರದಗುಂಟ ಸಾಗಿದ್ದಾನೆ. ಇಂತಹ ಪರಿವರ್ತನ ಏತರಿಂದ? ಆದೇತರಿಂದ?

ಇನ್ನೂ ಪೂರ್ಣ ಮಂಜು ಮಾಯವಾಗಿರಲಿಲ್ಲ. ದೂರದವರೆಗೆ ದೃಷ್ಟಿಯು ಹರಿಯುತ್ತಿರಲಿಲ್ಲ. ಏನೋ ಒಂದು ಅಸ್ಪಷ್ಟ ಸ್ವರ ಚಕ್ರವರ್ತಿಯ ಕಿವಿಗೆ ಬಂದು ತಗುಲಿತು. ನದಿಯ ತೀರದೆಡೆಯಿಂದ ಬರುವ ಪಲ್ಲವಿಯದು:

"ಸತ್ತ್ವೇಷು ಮೈತ್ರೀ ಗುಣಿಷು ಪ್ರಮೋದಂ
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ ॥
ಮಾಧ್ಯಸ್ಥ ಭಾವಂ ವಿಪರೀತ ವೃತ್ತೌ
ಸದಾ ಮಮಾತ್ಮಾ ವಿದಧಾತು ದೇವ!"

ಅಲೆಕ್ಸಾಂಡರ ನೆಟ್ಟನೆ ನಿಂತಲ್ಲಿಯೇ ನಿಂತ. ಧ್ವನಿಬಂದತ್ತ ಕಿವಿಗೊಟ್ಟು ಆಲಿಸಿದ. ಏನೋ ಗುಣು ಗುಣು ನಾದ—ಭಾರತೀಯ ಭಾಷೆ. ಅರ್ಥ ಹೊಳೆಯದು. ಅರಿಯದ ಭಾವ. ಆದರೂ ಏನೋ ಒಂದು ಪ್ರಸನ್ನತೆ. ಇನ್ನೂ ಕೇಳಬೇಕೆಂಬ ಆಶೆ. ಅದನ್ನೆ....

ಮರುಕ್ಷಣದಲ್ಲಿಯೇ ಅಲೆಕ್ಸಾಂಡರನಲ್ಲಿ ತನ್ನ ಯೋಧವೃತ್ತಿ ಜಾಗೃತವಾಯಿತು. ಆಂ? ಭಾರತವನ್ನು ಪಾದಾಕ್ರಾಂತ ಮಾಡಲು ಬಂದ ವೀರನು ನಾನು. ಇನ್ನೂ ಈ ಗಡಿಯಲ್ಲಿಯೇ ಇರುವೆ. ವಿಶ್ವ ವಿಜಯ ಹೀಗೆ ವಿಲಂಬ ಮಾಡಿದರೆ ಹೇಗೆ? ಏನು ಕವಿದಿದ್ದಿತು ನನ್ನ ಬುದ್ಧಿಗೆ...? ಅದೆಂಥ ಕಾವಳ ಕವಿಯಿತೋ ಏನೋ!

ಕೂಡಲೆ ಸೈನ್ಯವಿದ್ದಲ್ಲಿ ಮರಳಬೇಕು. ಪ್ರಸ್ಥಾನಭೇರಿಯನು ಹೊಡೆಯಿಸಬೇಕು. ವಿಶ್ವದಾಕಾಶದಲ್ಲೆಲ್ಲ ಜಗಜ್ಜೈತ್ರನಿನ ವಿಜಯ ದುಂದುಭಿ ಮೊಳಗಲಿ!

ಆ ಕ್ಷಣದಲ್ಲಿಯೇ ಅಲೆಕ್ಸಾಂಡರನ ಮೈ ಗವಗದ ನಡುಗಿತು. ಹೊರಗಿನ ತಂಗಾಳಿಯ ಪರಿಣಾಮವೇ? ಅಲ್ಲ; ಅಲ್ಲ. ಒಳಗಿನ ನಡುಕ. ಹೃದಯದಾಳದಿಂದ ಹೊರಹೊಮ್ಮಿ ಬರುವ ಹೆದರಿಕೆಯ ಬಾಣಗಳು ಅಂಗಾಂಗಗಳಲ್ಲಿ ಮೂಡಿ ನಿಲ್ಲುವಂತೆ ಮೈಯೆಲ್ಲ ಮುಳ್ಳುಗಳೆದ್ದುವು. ಅದೊಂದು ಕ್ಷಣ ಅಧೀರನಾದ. ತಾನು ಏಕಾಕಿಯಾಗಿ ಈ ನಿರ್ಜನ ನದೀತೀರದಲ್ಲಿ ವಿಹರಿಸುತ್ತ ಬಂದುದರ ಅರಿವಾಯಿತವನಿಗೆ. ಶತ್ರುಪ್ರದೇಶದಲ್ಲಿ, ಸೈನ್ಯವನ್ನು ದೂರ ಬಿಟ್ಟು, ಮೈಗಾವಲಿಗೆ ಯಾರೂ ಇಲ್ಲದೆ, ಇಷ್ಟು ದೂರ ಬಂದುದು. ಸುತ್ತಲೂ ಮಂಜು. ಸಮೀಪದಲ್ಲಿ ಭಯಂಕರ ಜಲರಾಶಿ. ಪ್ರಕೃತಿಯೆಲ್ಲವೂ ಮಾಯೆಯಾಗಿ ಅವನನ್ನು ಹೆದರಿಸಹತ್ತಿತು.

ಎಷ್ಟಾದರೂ ಯೋಧ. ಸ್ವಾಭಾವಿಕವಾಗಿ ಅವನ ಬಲಗೈಯು ಎಡದ ನಡುವಿನಲ್ಲಿ ನೇತಾಡುವ ಕತ್ತಿಯತ್ತ ಧಾವಿಸಿತು. ಎಡಗೈಯಿಂದ ಹಿಂದೆ ಬೆನ್ನಿಗೆ ನಿಂತ ಬರ್ಜಿಯನ್ನು ಮುಟ್ಟಿ ನೋಡಿದ. ಆ ಆಯುಧಗಳ ಸಂರಕ್ಷಣೆಯಿಂದ ಸ್ವಲ್ಪ ಧೈರ್ಯ ಬಂದಿರಬೇಕವನಿಗೆ 'ಹೂಂ! ಪರದೇಶ! ಸಿಂಹನಿಗೆ ಯಾವುದಾದರೇನು?' — ಎಂದು ಹೂಂಕರಿಸಿದ. ಎದೆ ನೆಟ್ಟಿಸಿ ನಿಂತ.

'ಹೇ! ಹೇ! ಹೇ!!'

ಯಾರೋ ತನ್ನನ್ನೇ ನೋಡಿ ನಕ್ಕಂತಾಯಿತವನಿಗೆ. ಮುಖದ ವೀರಶ್ರೀ ಒಂದುಕ್ಷಣ ಇಳಿಯಿತು. ಪೌರುಷದ ಮೂರ್ತಿ ಒಂದು ನಿಮಿಷ ಬಗೆಗಣ್ಣಿನೆಮರಿಗೆ ಸುಳಿಯಿತು.

'ಹೂಂ! ಪರಾಜಿತ!'

ತುಟಿಯಲ್ಲಿಯೇ ಪುಟಪುಟಿಸಿದ. ಮುಖದಲ್ಲಿ ವಿಜಯೋನ್ಮಾದ ಮೂಡುವುದರಲ್ಲಿತ್ತು.

ಮತ್ತೆ ಆ ನಗುನಿನ ಸದ್ದು!

ಸುತ್ತಲೂ ದಿಟ್ಟಿಯಿಟ್ಟು ನೋಡಿದ ಅಲೆಕ್ಸಾಂಡರ. ಸಮೀಪದ ಬಂಡೆಯೊಂದರಿಂದ ಮೆಲ್ಲನೆ ಕೆಳಗೆ ಇಳಿಯುತ್ತ ಒಂದು ಮೈಕ್ಕೆ ಬಯಲಿಗೆ ಬರುತ್ತಿದೆ! ಮೈಮೇಲೆ ಒಂದು ಚೂರೂ ವಸ್ತ್ರವಿಲ್ಲ. ಹುಟ್ಟಿ ಬಂದಂತೆಯೇ ಬೆಳೆದು ನಿಂತ ಜೀವ. ತುಂಬ ಬೆಳೆದ ಗಡ್ಡ, ಉದರಲ್ಲಿ ತೆರೆವ ತುಟಿಗಳಿಂದ ಒಡೆದು ತೋರುವ ಬಿಳಿಯ ದಂತಪಂಕ್ತಿ.

ಮಕ್ಕಳ ಸದೃಢತೆಗಾಗಿ
"ಬಗೆನ ಬಾಲಾಮೃತ"

ಹಲ್ಲು ಬರುವಾಗ
"ಎಸ್ಪನ್ ಗ್ರಾಇಪ್" ಹೀಲರ್

ಜಂತು ಉದರ
"ವರ್ಮ್ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು

The National Pharmacies & Pharmaceuticals Ltd., Dharwar

ತುಂಬ ಕೃಶವಾದ ಮೈಯು. ತನ್ನಲ್ಲಿಯೇ ತಾನು ಮಗ್ನನಾದಂತೆ ಇದ್ದ. ಇಳಿದುಬರುತ್ತ ಇದ್ದ.

ಅದಾಗಲೇ ಮಂಜು ಅಳಿಯುತ್ತಿದ್ದಿತು. ಸೂರ್ಯದೇವ ಮೇಲೇರಿ ಬರುತಲಿದ್ದ. ಸುತ್ತಲೂ ಸ್ವಚ್ಛವಾದ ಪ್ರಕಾಶ ಪಸರಿಸುತ್ತಲಿತ್ತು.

ಆ ಪ್ರಕಾಶದಲ್ಲಿ ಆ ಅಪರಿಚಿತ ವ್ಯಕ್ತಿಯು ನಗ್ನತ್ವ ಇನ್ನಿಷ್ಟು ಒಡೆದು ತೋರಿತು, ಅಲೆಕ್ಸಾಂಡರನಿಗೆ.

ಅಯ್ಯೋ ಕಾಡು ಜೀವ!

ಇನ್ನೂ ದಿಗಂಬರ!

ನಾಗರಿಕತೆಯನ್ನೇ ಅರಿಯದ ಪಾಮರ!

ನನ್ನ ಬಟ್ಟೆ, ಬರೆಗಳನ್ನು ನೋಡಿ ನಕ್ಕೆರಬೇಕು. ದಿಙ್ಮೂಢನಾಗಿರಬೇಕು.

ಒಂದರ್ಧಕ್ಷಣದಲ್ಲಿ ಹಲವಾರು ವಿಚಾರಗಳು ಸುಳಿದುಹೋದುವು, ವಿಶ್ವವಿಜಯಿಯ ತಲೆಯಲ್ಲಿ. ನೂತನನಾಡಿಸಿ ನೋಡಬೇಕೆಂದು ಬಗೆದ ಕೂಡಲೆ ಸೈನ್ಯಾಧಿಪತಿಯ ಗಡುಸುಸ್ವರದಲ್ಲಿ :—

"ಅದಾರು? ಬಾಯಿಲ್ಲಿ...."

ಅಜ್ಞಾಪಿಸಿದ ಅಲೆಕ್ಸಾಂಡರ. ಈ ಕರಿಗೆ, ನುಡಿದ ಠೀವಿಗೆ, ಮೂರು ಲೋಕವೇ ಮಣಿದು ಎದುರಿಗೆ ಬಂದಿರಬೇಕು—ಎನ್ನುವ ಭಾವ ನುಡಿಯಲ್ಲಿ ತುಂಬಿ ತುಳುಕುತಲಿತ್ತು.

ಇದಾವುದನ್ನೂ ಗಮನಿಸದೆ ಆ ವ್ಯಕ್ತಿ ತನ್ನ ದಾರಿಯಲ್ಲಿ ತಾನು ಮುಂದರಿಯಿತು.

"ಎಲೋ!" ಗುಡುಗಿದ ಅಲೆಕ್ಸಾಂಡರ.

ಒಂದುಕ್ಷಣ ನಿಂತು, ಹೊರಳಿ ನೋಡಿ, ಮಂದಹಾಸ ಒಂದನ್ನು ಬೀರಿ, ಮೆಲ್ಲನೆ ನಡೆಯಿತಾ ವ್ಯಕ್ತಿ.

ಆ ಮಂದಹಾಸ! ಅದರಲ್ಲೆಂಥ ಉಪಹಾಸ!!

ಜಗಜ್ಜೇತನನ್ನು ಕೆರಳಿಸಿತು ಆ ಮನುಷ್ಯನ ನಗೆ.

"ನಿಲ್ಲು; ಮುಂದೆ ಹೆಜ್ಜೆ ಇಟ್ಟಿಯಾದರೆ ಅಲ್ಲಿಯೇ ಕಡಿದು ಬೆಲ್ಲಿಯೇನು!"

ಅಜ್ಞಾಪಿಸಿದ, ಹತ್ತು ಸಾವಿರ ಸೇನೆಯ ನಾಯಕ.

"ನನ್ನನ್ನೇ?"

ಅದೇ ಶಾಂತ-ಗಂಭೀರ ಮುಖಭಾವದಲ್ಲಿ ನುಡಿದು, ಅಲೆಕ್ಸಾಂಡರನ ಕಡೆಗೆ ಹೊರಳಿ ನೋಡಿದ ಆ ಭಾರತೀಯ ಮುನಿ.

ಅವನಲ್ಲೇನೂ ಹೆದರಿಕೆಯ ಚಿಹ್ನೆಗಳು ಕಂಡುಬರಲಿಲ್ಲ, ಅಲೆಕ್ಸಾಂಡರನಿಗೆ. ಮೈ ಜುಮ್ಮೆಂದಿತು. ಒಂದು ಕ್ಷಣ ನಿಂತಲ್ಲಿಯೇ ನಿಂತ.

ತಿಗುಗಿ ನಿಂತ ಆ ವ್ಯಕ್ತಿ ಒಂದರೆಕ್ಷಣ ಅಲೆಕ್ಸಾಂಡರನನ್ನು ದಿಟ್ಟಿಸಿತು. ಆ ದೃಷ್ಟಿಯ ಶಕ್ತಿಯ ಎದುರಿಗೆ ಜಗಜ್ಜೇತನಿಗೆ ತಲೆಯೆತ್ತಿ ನಿಲ್ಲಲಾಗಲಿಲ್ಲ; ಅದನ್ನು ಎದುರಿಸುವುದಾಗಲಿಲ್ಲ. ತಾನಾಗಿಯೇ ಶಿರಬಾಗಿತು, ಬಾಳೆಗೊನೆಯಂತೆ. ಎರಡು ಕ್ಷಣ ಹಾಗೆಯೇ ಶಿಲಾ-ಸ್ತಂಭದಂತೆ ಚಲಿಸದೆ ನಿಂತ ಚಕ್ರವರ್ತಿ!

ಮೆಲ್ಲನೆ ಮುಖವನ್ನು ಮೇಲೆತ್ತಿ ನೋಡಿದ.

ಸಾವಧಾನವಾಗಿ ನಡೆದಿತ್ತಾ ವ್ಯಕ್ತಿ! ಯಾರ ಹಂಗೂ ಇಲ್ಲ. ಹೆದರಿಕೆಯೂ ಇಲ್ಲ.

"ನಿಜವಾದ ವಿಶ್ವವಿಜಯಿ ಈತ!"

ತನ್ನಿಂದ ತಾನೇ ಅಲೆಕ್ಸಾಂಡರನ ತುಟಿಗಳಿಂದ ಮಾತೊಂದು ಹೊರಹೊಮ್ಮಿತು.

ಪೂರ್ವದಲ್ಲಿ ಸೂರ್ಯ ಮೇಲಕ್ಕೇರುತಲಿದ್ದ. ಲೋಕದಲ್ಲೆಲ್ಲ ಅತನ ಪ್ರಕಾಶ ಬೆಳಗುತಲಿದ್ದಿತು.

ಸೋಲಿನ ಸವಿಯನ್ನುಂಡು ಆ ಸೇನಾಪತಿ ಸೈನ್ಯದತ್ತ ಮರಳಿದ್ದ. ಆದರೆ ಗೆಲವಿನ ಆನಂದವನ್ನು ಅನುಭವಿಸುತ್ತಿತ್ತು, ಅವನ ಹೃದಯ!

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ	೧೫-೦-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಹಾಲು-ಹಣ್ಣು (ಕವನ ಸಂಗ್ರಹ)	೧-೮-೦
ಶ್ರೀ. ಭುಜೇಂದ್ರ ಮಹಿಷವಾಡಿ	
ಮೂಲಶಿಕ್ಷಣದ ಮೌಲ್ಯಮಾಪಣ	೦-೧೨-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಬಾಳ-ಬಂಡಿ (ಕವನ ಸಂಗ್ರಹ)	೦-೮-೦
ಶ್ರೀ. ಬಾಳ ಬಿ. ಉಪಾಧ್ಯೆ	
ಭರತೇರನ ನಾಲ್ಕು ಚಿತ್ರಗಳು	೧-೪-೦
ಶ್ರೀ. ಮಿರ್ಜಿ ಅಣ್ಣಾರಾಯರು	

ಅಚ್ಚಿನಲ್ಲಿ :

ಸಂಸ್ಕೃತಿಯ ಹೃದಯ

ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ :

ಶಾಂತಿ ಸೇವಾ ಸದನ, ಸೇಡಬಾಳ

ಪೊ. : **ಸೇಡಬಾಳ** (ಜಿಲ್ಲಾ ಬೆಳಗಾಂವಿ)

ಕನ್ನಡ ನವ್ಯಕಾವ್ಯದ ರೀತಿ-ನೀತಿ

(ಒಂದು ವಿವೇಚನೆ)

ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ), ಧಾರವಾಡ

卐

ನವ್ಯಕಾವ್ಯಕಾವ್ಯವೆಂಬ ಕವನರೀತಿಯೊಂದು ನಮ್ಮ ನಾಡಿನಲ್ಲಿಯೂ ಪ್ರಾರಂಭವಾಗಿದೆ. ಅನೇಕ ಜನರು ಕೇವಲ ಬೆರಗಿನ ನೋಟದಿಂದಲೇ ಇದನ್ನು ನೋಡುತ್ತಲಿದ್ದಾರೆ. ಇಂದಿನ ಅನೇಕ ಸಂಸ್ಕಾರಗಳಿಂತೆ ನವ್ಯಕವನ ರೀತಿಯೂ ಪಶ್ಚಿಮದ ಗಾಳಿಯೊಂದಿಗೆ ನಮ್ಮ ನಾಡಿನಲ್ಲಿ ಒಳನುಗ್ಗಿದೆ. ಗುಣವಿದ್ದರೆ ಇದೂ ಬದುಕೀತು!

卐

ಜೀವನದ ಅನಂತಸತ್ಯತೆ, ಕಾಂತಿಮಯ ಆವಿರ್ಭಾವ, ರುದ್ರಗಂಭೀರ ರಹಸ್ಯ, ಆನಂದಮಯ—ಪ್ರಜ್ವಲ ಜ್ಞಾನಪ್ರಕಾಶಗಳಲ್ಲಿ ಸ್ವಯಂಭುವಿನ ಕಾವ್ಯಪ್ರಕಾಶವಿದೆ. ಜೀವನವೆನ್ನುವುದೇ ಒಂದು ಆನಂತ ನಾದತರಂಗಗಳಿಂದ ಕೂಡಿದ ಕಾವ್ಯವಾಣಿ. ಅದು ಅನಂತ ರೀತಿಯಲ್ಲಿ ಅಭಿವ್ಯಕ್ತವಾಗುತ್ತಿರುತ್ತದೆ. ಎಲ್ಲಿ ಚೈತನ್ಯವಿದೆಯೋ ಅಲ್ಲಿ ಅದು ಗಂಗಾಸಲಿಲದಂತೆ ಹರಿದು ಬಂದೀತು. ಜೀವನ ಜಡವಾದಲ್ಲಿ ಕೊಳಚೆಗುಂಡಿಯಾಗಿ ನಿಂತೀತು. ಹಾಗಾದಾಗ ಹಿಂದಿನಿಂದ ಹೊಸ ಪ್ರವಾಹ ರಭಸದಿಂದ ಹರಿದು ಬಂದಾಗ ಸಮಸ್ತವೂ ಪುನಃ ಪಾವನಸಲಿಲವಾಗುವುದು.

ಕನ್ನಡದ ಕಾವ್ಯಪ್ರಪಂಚದಲ್ಲಿಯೂ ಈ ಬಗೆಯ ಅಂತಃಪರಿವರ್ತನೆ ನಡೆದಿದೆ. ಕೆಲವು ಕಡೆ ಸುಳಿವು-ಸುಳಿವಾಗಿ, ಕೆಲವು ಕಡೆ ಚಿತ್ರವಿಚಿತ್ರವಾಗಿ ಮುಳ್ಳು-ಕಂಟಿಗಳಲ್ಲಿ ಕೊಚ್ಚಿ ಹೊರಬರತೊಡಗಿದೆ. ಈಗ ಅದು ವಿಚಿತ್ರವಾಗಿ ಕಂಡೀತು. ಏನೆಂದು ತಿಳಿಯದಿದ್ದೀತು. ಆದರೂ ಹೊಸ ಪ್ರವಾಹ ಬರಬೇಕಾಗಿದೆ; ಎಂತಲೇ ಬರತೊಡಗಿದೆ. ಅದು ಎರವಿನ ನೀರಲ್ಲ. ಕಾಲುವೆಯ ನೀರಲ್ಲ.

ಕನ್ನಡದಲ್ಲಿ ಹೊಸತನದ ಆವಶ್ಯಕತೆ ಏನುಂಟು? ಇಂದಿನ "ನವ್ಯಕಾವ್ಯ" ಎಂದು ಹೇಳಿಸಿಕೊಳ್ಳುವ ಕಾವ್ಯರಂಗದಲ್ಲಿ ಅದರ ಲಕ್ಷಣಗಳೇನುಂಟು? ಅದರಲ್ಲಿಯ ಅಸ್ತವ್ಯಸ್ತತೆ, ವಿಚಿತ್ರಭಾಷೆ, ಅರ್ಥವಾಗದ ಪ್ರತಿಮಾಸೃಷ್ಟಿಗಳು ಏನನ್ನು ಹೇಳುತ್ತವೆ? ಇವನ್ನು ವಿಚಾರಿಸಬೇಕಾಗಿದೆ.

ಈ ದೃಷ್ಟಿಯಿಂದ ನೋಡಿದಾಗ, ಕೆಲವು ಮುಖ್ಯ ಅವಶ್ಯಕತೆಗಳು ಕನ್ನಡದ ಕಾವ್ಯಪ್ರಪಂಚವನ್ನು ಎದುರಿಸಿದ್ದು ಅವು ಇಂದಿನ ಕಾವ್ಯದಲ್ಲಿ ಮೂಡುತ್ತಿವೆ; ಅವುಗಳನ್ನು ಗಮನಿಸಿದರೆ ಕಾವ್ಯದ ಅರ್ಥವಾದೀತು. ೧) ಮೊಲನೆಯದು ಭಾಷೆ:—ಭಾಷೆಯಿಂದ ಕಾವ್ಯವೇ, ಕಾವ್ಯದಿಂದ ಭಾಷೆಯೇ?—ಎಂಬ ಸಮಸ್ಯೆ ಪುರಾತನ ಕಾಲದ್ದು. "ವಾಗರ್ಥಾವಿವ ಸಂಪೃಕ್ತೌ" ಎಂದು ವಾಗರ್ಥಗಳ ಸಂಬಂಧವನ್ನು ಶಿವ-ಶಕ್ತಿಗೆ ಕಾಳಿದಾಸನು ಹೋಲಿಸಿದಾಗ, ಭಾಷೆಯಲ್ಲಿ ಕಾವ್ಯಶಕ್ತಿಯಿದೆ ಎನ್ನುವ ಮಾತನ್ನು ಹೋಲಿಸಿದ್ದಾನೆ. ಅದನ್ನು ಆವಿರ್ಭಾನಗೊಳಿಸುವುದು ಕವಿಯ ಕಾರ್ಯ.

ನಮ್ಮ ಕನ್ನಡಭಾಷೆ ಇಂದು ಯಾವ ರೀತಿಯಲ್ಲಿದೆ? ಹಲವಾರು ಭಾಷೆಗಳು, ಶಬ್ದಗಳು, ನಮ್ಮಲ್ಲಿ ಬಂದು ಸೇರಿಕೊಂಡಿವೆ. ಅನೇಕ ಪಾರಿಭಾಷಿಕ ಶಬ್ದಗಳು. ಇಂಗ್ಲೀಷ್ ಶಬ್ದಗಳೂ ನಮ್ಮ ಜನಜೀವನದೊಡನೆ ಬೆರೆತಿವೆ. ಅವುಗಳಲ್ಲಿ ನಮ್ಮ ಜನದ ಭಾವನೆಗಳು ಅಭಿವ್ಯಕ್ತವಾಗತೊಡಗಿವೆ. ಈ ಶಬ್ದಗಳು ಎಲ್ಲಿಯವರೆಗೆ ಪರದೇಶಿಗಳಾಗಿ ನಮ್ಮಲ್ಲಿರಬೇಕು? ಅವುಗಳಿಗೂ ತಮ್ಮತನದ ಮುದ್ರೆಯೊತ್ತಿ ನಮ್ಮ ಮಕ್ಕಳನ್ನಾಗಿ ಮಾಡಬೇಡವೇ! ಹಾಗೆ ಮಾಡಬೇಕಾದರೆ ನಮ್ಮ ಸಂಸ್ಕೃತಿಯ "ನಾದ"ವನ್ನು ಅವುಗಳಲ್ಲಿ ತುಂಬಬೇಕು. ಅದನ್ನು ಕಾವ್ಯ ಮಾಡಬಲ್ಲದು; ಕಾವ್ಯದಲ್ಲಿ ಇಂದು ವಿಕೃತವಾಗಿ ಕಂಡುಬರುವ ಶಬ್ದಗಳು ಮುಂದೆ ಕನ್ನಡ ಸಂಪತ್ತುಗಳಾದಾವು.

(೨) ಛಂದೋವೈವಿಧ್ಯ:— ಇದು ಛಂದೋವೈವಿಧ್ಯವೆನ್ನುವುದಕ್ಕಿಂತ ಸಮಸ್ತಭಾಷೆಯನ್ನು ಕಾವ್ಯದ ಭಾಷೆಯನ್ನಾಗಿ ಮಾಡಿ, ಬರಲಿರುವ ಮಹಾಕವಿಗೆ ಪೂರ್ವಸಿದ್ಧತೆಯನ್ನು ಮಾಡಿಕೊಡಲು ಇಂದು ನಾನಾ ಪ್ರಯತ್ನಗಳು ನಡೆದಿವೆ. ಅದರ ಪರಿಣಾಮವಾಗಿ ತುಂಡು ತುಂಡು ಸಾಲುಗಳೂ, ವಕ್ರ ವಕ್ರ ಪದಸ್ವರೂಪಗಳೂ ಕಂಡುಬರುತ್ತವೆ.

(೩) ಮೂರನೆಯ ವಿಚಿತ್ರವೆಂದರೆ ಬುದ್ಧಿಪ್ರಧಾನತೆ:—ಒಂದು ಭಾವನೆ ಕೆಲಕಾಲದ ನಂತರ ದುರ್ಬಲ ಕಲ್ಪನಾವಿಲಾಸನಾಗುತ್ತದೆ. ಬುದ್ಧಿಗಮ್ಯ ಸತ್ಯದಲ್ಲಿ ಭಾವವನ್ನು ತುಂಬಿ ಚೈತನ್ಯಪೂರ್ಣವ್ಯಕ್ತಿಯನ್ನಾಗಿ ಮೂರ್ತಿಸಿಸುವುದು ಕಾವ್ಯದ ಕಾರ್ಯ. ಇಂದು ರೇಲ್ವೆ

ಎಂಜಿನು, ವಿದ್ಯುತ್ಪ್ರಪಂಚ, ಅಣುಬಾಂಬುಗಳಿಂದ, ಪ್ರಭಾವಿತವಾಗಿ ನಾನಾ ದೇಶ-ವಿದೇಶಗಳ ವೈಜ್ಞಾನಿಕ ಜೀವನಕ್ಷೇತ್ರಗಳಲ್ಲಿ ಜನತೆ ಬದುಕುತ್ತಿಲ್ಲವೆ? ಅಲ್ಲಿ ವಿದ್ಯುತ್ತಿನಿಂದ, ಅಣುಬಾಂಬಿನಿಂದ, ರೇಲ್ವೆಗಳ ಎಂಜಿನುಗಳಲ್ಲಿ ಕೆಲಸಮಾಡುವುದರಿಂದ, ವಿಚಿತ್ರ ತೀಕ್ಷ್ಣ ವಿಚಾರಸರಣಿಯಿಂದ, ಭಾವನೋದ್ರೇಕವಾಗುವುದಿಲ್ಲವೆ? ಭೀತಿ, ಶಾಂತಿ, ಕ್ಷಾಂತಿ, ಸಾಕ್ಷೀಭಾವ, ಬಾಂಬಿನ ರೌದ್ರತೆ, ವಿದ್ಯುತ್ತಿನ ವಿಸ್ಮಯತೆಗಳು, ರಸಗಳಲ್ಲವೇ? ಈ ನೂತನ ರಸಾವಿಷ್ಕಾರವೇ ನವ್ಯಕಾವ್ಯ! ಅದರೆ ದುರ್ದೈವದಿಂದ ಈ ಮೂರು ಅಂಶಗಳಿಗೇ "ನವ್ಯಕಾವ್ಯ" ನಿಲ್ಲುವುದೆಂಬ ಕಲ್ಪನೆ ನಮ್ಮದಾಗಿದೆ. ಇದರ ಸಂಗಡ,

(೪) ಅಸ್ತವ್ಯಸ್ತ ಭಾವದ ಬಗೆಗೆ ಟೀಕೆ ಇದೆ. ವ್ಯಥೆ, ನಿರಾಶೆಗಳೂ, ಸಂಬಂಧ ತಿಳಿಯದ ಭಾವಗಳೂ ಮೂಡುತ್ತಿವೆಯೆಂಬ ಕೂಗು ಕೇಳಿಬರುತ್ತದೆ. ಇದು ಸರಿಯೇ? ವಿಚಾರ ಮಾಡಬೇಕು. ಕಾವ್ಯವು ಎರಡು ಪ್ರಕಾರದಿಂದ ಬರುತ್ತದೆಂದು (Matthew Arnold) ಮ್ಯಾಥ್ಯೂ ಅರ್ನಾಲ್ಡ್ ಹೇಳಿದ್ದಾನೆ:

(1) Tumult of the soul.
(2) Depth of the soul.

ಜೀವನವು ತನ್ನ ಸಮಸ್ತ ನೂತನಶಕ್ತಿಗಳೊಡನೆ ಧುತ್ತೆಂದು ನಮ್ಮೆದುರು ನಿಂತಾಗ, ನಾವು ಉದ್ವಿಗ್ನಗೊಂಡು ಗಾಬರಿಯಾಗುವುದು ಸಹಜವಾಗಿದೆ. ಯಾವುದೋ ನೂತನವಾದ ಜೀವನದರ್ಶನದೆಡೆಗೆ ಸಾಗುತ್ತೇವೆಂದು ಕೆಲಸಾರೆ ಎನ್ನಿಸುತ್ತದೆ. ಕೆಲಸಾರೆ ಎನ್ನಿಸುವುದಿಲ್ಲ. ಅದರ ಪರಿಣಾಮವಾಗಿ ಮಧ್ಯಂತರ ಅವಧಿಯ ಉದ್ವಿಗ್ನಭಾವದ ಕಾವ್ಯ ಬರುವುದು. ಈ ಎಲ್ಲ ಅಂತರಂಗದ ಗಲಿಬಿಲಿ ನಿಂತು ಆತ್ಮವು ಪ್ರಶಾಂತವಾದಾಗ, ಆ ಪ್ರಶಾಂತಿಯಿಂದ ಬೆಳೆದು ಬಂದ ಅಂತರ್ದರ್ಶನದ ಅಳದಿಂದಲೂ ಕಾವ್ಯ ಬರುತ್ತದೆ. ಇದನ್ನು ಅರ್ನಾಲ್ಡ್, ಆತ್ಮನ ಉದ್ವಿಗ್ನತೆ (Tumult of the soul)ಯಿಂದ ಬಂದ ಕಾವ್ಯದರ್ಶನದ ಆಳದಿಂದ ಬಂದ ಕಾವ್ಯ (Depth of the soul) ಎಂದು ಕರೆದಿದ್ದಾನೆ. ಅವನ್ನು ಹುಸು ಬದಲಿಸಿ ಇಂದಿನ ನವ್ಯಕಾವ್ಯಕ್ಕೆ ಹೊಂದುವಂತೆ ಹೀಗೆ ಹೇಳಬಹುದು: (೧) ನವ್ಯತೆಯ ಅಂತಃಪರಿವರ್ತನೆ.

ನವ್ಯತೆಯ ಅನುಭಾವ.

ಕರ್ನಾಟಕದ ಅಂತಃಪರಿವರ್ತನೆ ಮೂರು ಮುಖಿಯಾಗಿದೆ: (೧) ಸಾಮಾಜಿಕ ಪ್ರಜ್ಞೆ, (೨) ಅಂತರ ರಾಷ್ಟ್ರೀಯ ಪ್ರಜ್ಞೆ. (೩) ಅಂತರ್ಜೀವನದ ಪ್ರಜ್ಞೆ.

ಸ್ವಾತಂತ್ರ್ಯೋತ್ತರ ಸಮಸ್ಯೆಗಳಲ್ಲಿ ಕನ್ನಡದ ಸಾಮಾಜಿಕ ಪುನರುಜ್ಜೀವನವು ಅತ್ಯಂತ ಮಹತ್ತ್ವದ್ದು. ಹೇಗೆ ನಾವು ಭಾರತದ ಪ್ರಗತಿಯೊಪನೊಂದಾದೇವು—ಎಂಬ ಪ್ರಜ್ಞೆ ಇಂದು ಸುತ್ತಲಿನ ಸಮಾಜವನ್ನು ವಿಸ್ಮಯಿಸಹತ್ತಿದೆ.

ಕಲವು ಕಡೆ ನಿರಾಶೆ ಕಂಡುಬರುತ್ತದೆ. ಅದರಂತೆ ಅಂತರ ರಾಷ್ಟ್ರೀಯ ಸಮಸ್ಯೆ. ಪ್ರಪಂಚದ ದೂರದ ನಾಡುಗಳ ಏರಿಳಿತ ಅಲ್ಲಿಯ ವಿಚಾರಸರಣಿ ನಮ್ಮ ಬಾಳನ್ನು ದಿಗ್ಭ್ರಮೆಗೊಳಿಸುತ್ತಿದೆ.

ಸಾಮ್ಯವಾದವೇ? ಪ್ರಜಾಪ್ರಭುತ್ವವೇ? ಗಾಂಧಿವಾದವೇ? ಯುದ್ಧವೆ? ಶಾಂತಿಯೆ? ವಿಜ್ಞಾನವೇ? ಗ್ರಾಮಜೀವನವೇ? ಹೋರಾಟವೇ? ತ್ಯಾಗವೆ? ಏನು? ಏನು? ಏನು? ಏನು? ಈ ಸಮಸ್ಯೆಗಳು ಇಂದು ನಮ್ಮನ್ನು ಬಾಧಿಸುತ್ತಿರುವಂತೆಯೇ ಒತ್ತಡದಿಂದ ನಮ್ಮ ಸಾಹಿತ್ಯದಲ್ಲಿ ಹೊರಬೀಳತೊಡಗಿವೆ.

"ಹಿಮಗಿರಿಯ ಕಂದರ"ದಂತಹ ಅಡಿಗರ ಕವನವಾಗಲಿ, ಶ್ರೀ. ರಾಮಚಂದ್ರಶರ್ಮರ "ಏಳುಸುತ್ತಿನ ಕೋಟೆ" ಆಗಲಿ, ಇದನ್ನು ಪ್ರತಿಬಿಂಬಿಸುತ್ತವೆ. ಇಲ್ಲಿ ಒಂದು ಮಾತನ್ನು ನೆನೆಯಬೇಕು. ಈ ಕಾವ್ಯ ಇಲ್ಲಿಗೆ ನಿಲ್ಲುವುದಿಲ್ಲ. ಇದರ ಮುಂದಿನ ಹೆಜ್ಜೆಯಿದೆ. ಅದೇ.

(೧) ವ್ಯಕ್ತಾತೀತ ವಾತ್ಸಲ್ಯಭಾವ. (Impersonal Universal love). ಈ ಎಲ್ಲ ಗೊಂದಲದಲ್ಲಿ ಪ್ರಪಂಚ ದಿಗ್ಭ್ರಮೆಗೊಂಡಾಗ ಏನಾದರೂ ಬಾರದಿದ್ದೀತೆ? ಯುದ್ಧದ ಕಾರ್ಮುಗಿಲಿಂದ ಪ್ರಪಂಚ ಮುಸುಕಿದಾಗ ಗಾಂಧೀಜಿಯ ಅಂಹಿಸೆ ಬರಲಿಲ್ಲವೇ? ಸಾಮ್ಯವಾದದ ಭೂತ ನಮ್ಮ ನಾಡಲ್ಲಿ ತಲೆ ಎತ್ತಿದಾಗ, ಶ್ರೀ. ವಿನೋಬಾ ಭಾವೆಯವರ "ಭೂದಾನ ಚಳವಳಿ" ಬರಲಿಲ್ಲವೇ? ಹಾಗಿದೆ ಈ ನವ್ಯಕಾವ್ಯದ ನೂತನ ಸೆಲೆ.

"ಬಂಗಾರದ ಮೂಡಣದಿಂದ ಬೀಸಿತು ಉರಿಗಾಳಿ" ಎಂದು ಬೇಂದ್ರೆಯವರು, ಶ್ರೀಅರವಿಂದರ ಕವನವನ್ನು ಭಾಷಾಂತರ ಮಾಡಿದಾಗ ಇಂಥದೊಂದು ಕಾವ್ಯದೃಷ್ಟಿಯನ್ನು ಕೊಟ್ಟರು. "ಬಂಗಾರದ ಮೂಡಣ" ಯಾವುದು? ಆತ್ಮನ ವಿಜ್ಞಾನಭೂಮಿಕೆ ಅಥವಾ ಅಧಿಮನದ ಪ್ರಾಂತ. ಅಲ್ಲಿಂದ ಬಂದ ಆ ಪ್ರಕಾಶದ ರಭಸವು ಉರಿಗಾಳಿಯಾಗಿ ಕಂಡಿದೆ. ಹೀಗೆ ನೂತನ ಪ್ರತಿಮಾಸೃಷ್ಟಿಯಿಂದ ನವ್ಯಕಾವ್ಯ ಬೆಳಗಬೇಕಾಗಿದೆ. ಅದು ಅವಶ್ಯ. ಏಕೆಂದರೆ ನಾಳೆ ನಮ್ಮಲ್ಲಿ ವ್ಯಕ್ತವಾಗಲಿರುವ ಬಾಳು ಅತ್ಯಂತ ನೂತನವಾಗಿದೆ. ಆಗ ನಮ್ಮ "ನವ್ಯಕಾವ್ಯದಲ್ಲಿ" ಬರಿ "ಚಂಡಿ-ಮದ್ದಳೆಯ ಉಗ್ರ



ಡೊಳ್ಳು ಕೇಳದು. ಅದಕ್ಕೆ ಹೊಸ ದೃಷ್ಟಿ ಬೇಕಾಗಿದೆ. ಕೀಟ್ಸ್ ಕರೆದಂತೆ ಬಾಳನ್ನು "Vale of Teers" ಎಂದು ನೋಡುವ ದೃಷ್ಟಿಯೀರಿ Apollos' vision. ಅಥವಾ ವೈದಿಕ ಮಹಾವಿನಯದ "ಆನಂದದೃಷ್ಟಿ" ಬರಲಿದೆ.

ಅದರ ಸೂಕ್ಷ್ಮ ಸುಳುವು-ಹೊಳವುಗಳು, ಪೂರ್ಣದೃಷ್ಟಿಯಿಂದ ಬರೆಯುತ್ತಿರುವ ಶ್ರೀ. ಗೋಕಾಕರ ಸಮುದ್ರಗೀತಗಳಲ್ಲಿ ಕಂಡುಬರುತ್ತವೆ. ಅಲ್ಲಿಯ ಅಂತರರಾಷ್ಟ್ರೀಯ ದೃಷ್ಟಿ, ಶ್ರೀ. ಬೇಂದ್ರೆಯವರಲ್ಲಿಯ ಅನುಭಾವದೃಷ್ಟಿಯಲ್ಲಿ ಪರಿಣತವಾಗಿ ಕನ್ನಡ ನಾಡಿನ ಇನ್ನೂ ನೂರಾರು ಜೀವಿಗಳಲ್ಲಿ ಅರಳುತ್ತಿರುವ ನವಪ್ರಜ್ಞೆಗೆ ದಾರಿ ಮಾಡಿಕೊಡುತ್ತಲಿದೆ.

ಈ "ಅನುಭಾವ" ವೆಂಬುದು ಜೀವನದಿಂದ ಓಡಿಹೋಗುವುದಿಲ್ಲ. ಜೀವನವನ್ನು ಸಾಕ್ಷೀಭಾವದಿಂದ ಅವಿಭಾಜ್ಯದೃಷ್ಟಿಯಿಂದ ನೋಡುವ (Cosmic Vision) ಪೂರ್ಣಪ್ರಜ್ಞೆ. ಅದೇನೂ ಅಶಕ್ಯ ಕೋಟಿಯ ಮಾತಲ್ಲ. ಬರಲಿರುವ ದೃಷ್ಟಿಯ ದುರ್ಬಲವರ್ಣನೆ ಮಾತ್ರ ಇಲ್ಲಿದೆ. ಯಾವಾಗ ವಿಶ್ವಾಮಿತ್ರ ಮಹರ್ಷಿಯ:—

"ಓಂ ಭೂಃ ಭುವಃ ಸ್ವಃ
ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋನಃ ಪ್ರಚೋದಯಾತ್."

ಎಂದು ಮಂತ್ರವಾಣಿಯನ್ನು ಹಾಡಿದಾಗ ಅಲ್ಲಿ ಕಂಡದ್ದೇನು?

'ಕನ್ನಡ, ಭಾರತ, ವಿಶ್ವಗಳಷ್ಟೇ ಅಲ್ಲ! ಸಮಸ್ತ ಬ್ರಹ್ಮಾಂಡಕ್ಕೂ ನನಗೂ ಸಂಬಂಧವಿದೆ. "ಭೂಃ ಭುವಃ ಸ್ವಃ" ಭೂಮಂಡಲ, ಆಕಾಶಮಂಡಲ, ನಕ್ಷತ್ರಮಂಡಲ ಪರಿಯಂತ ಸಮಸ್ತ ಬ್ರಹ್ಮಾಂಡದ ನಾಗರಿಕ ನಾನು!'—ಎಂಬ ದರ್ಶನ ಅದು. ಅಂತಹ ವಿಶಾಲ ದೃಷ್ಟಿಯನ್ನು ಗಾಂಧೀಜಿ ನಮಗೆ ಪುನಃ ರಾಷ್ಟ್ರೀಯ ಧರ್ಮವನ್ನಾಗಿಸಿದ್ದಾರೆ. "ಸತ್ಯಕ್ಕಾಗಿ ಭಾರತವನ್ನು ಬಲಿ ಕೊಡಲಿದ್ದೇನೆ." ಎಂಬ ಅವರ ಮಾತಿನಲ್ಲಿ ಈ ವಿಶ್ವಪ್ರಜ್ಞೆಯಿದೆ.

ಆಂತರರಾಷ್ಟ್ರೀಯ ದೃಷ್ಟಿಯಿಂದ ಮಾತನಾಡುವ ಜವಹರಲಾಲ್ ನೆಹರು ಅವರಲ್ಲಿ ಈ ಅವ್ಯಕ್ತಸತ್ತ್ವದ ಸೆಳೆತವಿದೆ. ಈ ಮುಖದಲ್ಲಿ ಕನ್ನಡ ನವ್ಯಕಾವ್ಯದ ಭವಿತವ್ಯವಿದೆ. ಅದರ ಪೂರ್ವ ಚಿಹ್ನವಾದ ಅಸ್ತವ್ಯಸ್ತತೆಯೆಂದರೆ, ಬರಲಿರುವ ಮಂಗಲ ಪ್ರಭಾತದ ಪೂರ್ವದ ಮುಂಗತ್ತಲು. ಆ ಕತ್ತಲು ಕಳೆದೀತು. ಬೆಳಕು ಬಂದೀತು.

"ನೈರಾಶ್ಯದುಸುಬಿನಲಿ ಆಶೆಯೊರತೆಯ ತೋಡಿ
ರಸಗಂಗೆ ಬರುವಳೆಂದಾಶಿಸುತಲಿರುವೆ!"

ಕರಿನೆನಪುಗಳು

(ಭಾವತರಂಗ)

ಶ್ರೀ. ಹಾ. ವೆಂ. ನಾಗೇಶ, ಗುಲ್‌ಬರ್ಗಾ

卐

ನಾನು ತೀರ ಹಸಿದು ನಿನ್ನಲ್ಲಿಗೆ ಬಂದಿದ್ದೆ. ನೀನು ನನಗೆ ಯಥೇಚ್ಛ ಸವಿಯನ್ನವನ್ನೇ ನೀಡಿದೆ. ನಾನು ಬಹಳ ದಿನಗಳ ಹಸಿವೆಯನ್ನು ಹಿಂಗಿಸುವ ಅತ್ಯಭಿಲಾಷೆಯಿಂದ ಒಂದೇಸವನೆ ಮುಕ್ಕುತ್ತಿದ್ದೆ. ನಿನಗಾಗಿ ಒಂದೇ ಒಂದು ಕೃತಜ್ಞತೆಯ ಸ್ವರವನ್ನೂ ಉಚ್ಚರಿಸಲಿಲ್ಲ. ಏಕೆಂದರೆ ನೀನಿತ್ತ ತುತ್ತೇ ನನಗೆ ಮಹತ್ತಾಗಿತ್ತು. ಕೃತಜ್ಞತೆಯನ್ನು ಸಲ್ಲಿಸುವ ಅವಕಾಶವೇ ನನಗೆ ಇದ್ದಿಲ್ಲ!

ನಾನು ಅಗಮ್ಯ ಅಭೇದ್ಯವಾದ ಕತ್ತಲಿನಲ್ಲಿಯ ಏರುಪೇರುಗಳಲ್ಲಿ ತಗ್ಗುಮುಗ್ಗುಗಳಲ್ಲಿ ಮುಗ್ಗರಿಸುತ್ತ ಬೆಳಕಿಗಾಗಿ ಹಂಬಲಿಸುತ್ತ ದಾರಿ ಸಾಗುತ್ತಿದ್ದೆ. ಆಗ ನೀನು ಬೆಳಕುನೀಡಿದೆ. ಕಾಲಾನುಕಾಲದಿಂದ ಬೆಳಕು ಕಾಣದ ನನ್ನ ಕಣ್ಣುಗಳು ಎಡೆಬಿಡದೆ ನಿನ್ನ ಬೆಳಕನ್ನು ನುಂಗುತ್ತಿದ್ದುವು. ನಿನ್ನ ವರಕ್ಕಾಗಿ ಒಮ್ಮೆಯಾದರೂ ನಾನು ಉಪಕಾರ ಸ್ಮರಣೆ ಮಾಡಲಿಲ್ಲ. ಏಕೆಂದರೆ ನಾನಾಗ ನೀನು ಕರುಣಿಸಿದ ಬೆಳಕಿನಲ್ಲೇ ಸ್ವರತನಾಗಿದ್ದೆ. ಉಪಕಾರಸ್ಮರಣೆಯ ಸೈರಣೆಯೂ (ಪಾಪ!) ನನಗಾಗ ಇದ್ದಿಲ್ಲ.

ನಾನು ಅಸಹನೀಯವಾದ ದಣಿವಿನಿಂದ ಹತಬಲನಾಗಿ ನಿನ್ನಲ್ಲಿಗೆ ಬಂದಿದ್ದೆ. ನೀನು ನಿನ್ನಂಕ-ಪರ್ಯಂಕಗಳಲ್ಲಿ ನನ್ನನ್ನು ಆಶ್ರಯಿಸಿ ದಣಿವಾರಿಸಿದೆ; ಹೊಸ ಬಲವನ್ನು ನನ್ನ ಅಂಗಾಂಗಗಳಲ್ಲಿ ಸ್ಫುರಿಸಿದೆ. ಭೀತೋಹೀನನಾಗಿ ಬಾಳಿದ ನಾನು ಹೊಸದಾಗಿ ನೀನು ಕರುಣಿಸಿದ ಬಲವನ್ನು ಸ್ವಲ್ಪವೂ ಬಿಡದೆ ತುಂಬಿಕೊಳ್ಳುತ್ತಿದ್ದೆ. ನಿನ್ನ ವರಪ್ರಸಾದಕ್ಕಾಗಿ ಒಮ್ಮೆಯಾದರೂ ನಿನ್ನ ಋಣಭಾರವನ್ನು ಮನ್ನಿಸಲಿಲ್ಲ. ಏಕೆಂದರೆ ನೀನು ದಯೆಪಾಲಿಸಿದ ನನ್ನ ಬಲವೇ ನನಗೆ ಮಹತ್ತಾಗಿತ್ತು. ನಿನ್ನ ಋಣಕ್ಕಾಗಿ ವಂದಿಸುವ ವ್ಯವಧಾನವೇ ನನ್ನಲ್ಲಿ ಇದ್ದಿರಲಿಲ್ಲ.

ನಿನ್ನ ಶಾಪಗಳೆಲ್ಲ ನನ್ನನ್ನು ನಿನ್ನ ಕೃತಜ್ಞತೆಗಾಗಿ ಕಾತರಿಸುವಂತೆ ಮಾಡುತ್ತಿದ್ದುವು. ಆದರೆ ನಿನ್ನ ವರಗಳು ಮಾತ್ರ ನನ್ನನ್ನು ಕೃತಜ್ಞನಲ್ಲದೆ ಮತ್ತೇನನ್ನೂ ಮಾಡಲು ಸಮರ್ಥವಾಗುತ್ತಿರಲಿಲ್ಲ.

ಆನಂದಯಜ್ಞ

(ಒಂದು ದೃಶ್ಯಕವನ)

ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್ಸಿ., ಎಲ್‌ಎಲ್. ಬಿ. ಮುಂಬೈ

ಸನ್ನಿವೇಶ :— (ಯಜ್ಞಕುಂಡದ ಸುತ್ತಲು ನಾಲ್ಕಾರು ಮುನಿಗಳು ಕುಳಿತಿದ್ದಾರೆ. ಯೋಗ್ಯ ಧಾಟಿಯಲ್ಲಿ ಯಾಗದ ಸೂಕ್ತ ಹಾಡುತ್ತಿದ್ದಾರೆ.)

ಮುನಿಗಳು:— ಎಲ್ಲೆಲ್ಲು ಆನಂದವಿರಲಿ, ಎಲ್ಲೆಲ್ಲು ಶಾಂತಿಯಿರಲಿ,
ಸರ್ವತ್ರ ಸುಖದ ಶಾಖೆ ಪಸರಿಸಲಿ,
ಮರಮರಕೊಂದು ಜೋಕಾಲಿ, ಮನೆಮನೆಗೊಂದು ತೋರಣ.
' ಲೋಕಾಃ ಸಮಸ್ತಾಃ ಸುಖಿನೋ ಭವಂತು! '

(೧ನೆಯ ಮಾನವನು ಪ್ರವೇಶಿಸುವನು. ಸೂಕ್ತಗಾನದ ಧ್ವನಿ ಸಣ್ಣ ವಾಗುವುದು.)

೧ನೆಯ ಮಾನವ :— ಲೋಕಾಃ ಸಮಸ್ತಾಃ ಸುಖಿನೋ ಭವಂತು ?
ಹ್ಹಾ. ಹ್ಹಾ. ಹ್ಹಾ!
ಪೊಳ್ಳು ಮಂತ್ರಕೆ ಒಡೆಯುತಿದೆ ರುಗ್ಣಕಂತ,
ಇವನನ್ನೂ ನಡೆದಿಲ್ಲ ಜಗದ ಸಂತೆಯ ಗಾಳಿಗುಂಟ.
ರುಗ್ಣಭಾವಮಂಥನದ ಕಾಳಕೂಟಜ್ವಾಲೆ ಮೆರೆಯುತಿದೆ ಛತ್ರಸತಿ
ಭೋಗಸಂಪನ್ನ.
ಅಮೃತಕುಂಭ ಕಿಂಕರಕುನ್ನಿ ಕಾಯುವನು ತನ್ನನ್ನೆ ದೂರಿ
ಹೊಲೆಗೇರಿ ಮಸಣ
ಲಾಭಪಾನಿಯ ಲೆಕ್ಕಕ್ಕೆ ಸದ್ಗುಣಗಳು ವ್ಯರ್ಥ.
ಅನುಕಂಪ ನಿರ್ಮಿಸುತಿದೆ ಒಳ್ಮೊಮ್ಮೆ ಅನರ್ಥ.
ಅಣ್ಣತಮ್ಮಂದು ಬೊಗಳುವವ ಬಿದ್ದ ಗಟಾರಕ್ಕೆ.
ಉಪಕರಿಸುವ ಪೆದ್ದ ನರಳುವನು ಎದೆಬಾಚಿ ಕುತಾರಕ್ಕೆ.
ಸತ್ಯನುಡಿದರೆ ಅದು ಪುರಾವೆಯಿಲ್ಲದೇ ಹುಸಿಹುಸಿ.
ಮಚಕ ಜಾರಲು ಸುಖರೂಪ, ಅಜ್ಞನ ಮೊಗಕೆ ಬಳಿಯುವರು
ಮಸಿಮಸಿ.
ಆದೋ ಕೇಳಿರಿ, ಒಳಿತು ಎಂಬುದರ ಕುನ್ನಿ ಬಾಳು.
ಅದೋ ನೋಡಿರಿ, ಒಳ್ಳೆಯವರ ಪತನಗೋಳು.
ವಿಶ್ವ ವಿಶ್ವ ನಿಮ್ಮ ಈ ಆನಂದಯಜ್ಞ.
ಸ್ವಂತ ಮಹಿಷನು ಕಟ್ಟೆ ಭೋಗಿಸುವನನೆ ತಜ್ಞ, ಹ್ಹಾ. ಹ್ಹಾ. ಹ್ಹಾ!

(೧ನೆಯ ಮಾನವನ ನಿರ್ಗಮನ.)

೧ನೆಯ ಮುನಿ :— ಇದೊಂದು ವಿಪಸ್ವರದ ಡಂಗುರ.
೨ನೆಯ ಮುನಿ :— ಪ್ರಕಾಲದ ಶುನಕರೋದನದ ಶ್ರುತಿಭಂಗುರ.
೩ನೆಯ ಮುನಿ :— ಇಂಥ ಸಮಯದಿ ಕಿವಿಮುಚ್ಚುವುದೇ ವಾಸಿ.
೪ನೆಯ ಮುನಿ :— ನಮ್ಮ ಯಾಗವೇ ಅಂತ್ಯದಿ ಗೆಲ್ಲುವುದು
ಬೆಳಕ ಸೂಸಿ
ಎಲ್ಲರೂ ಕೂಡಿ :— ಎಲ್ಲೆಲ್ಲು, ಆನಂದವಿರಲಿ.....
ಮೇಲಿನ ಸ್ವಸ್ತಿಸೂಕ್ತ ಹಾಡುವರು. ....
' ಲೋಕಾಃ ಸಮಸ್ತಾಃ ಸುಖಿನೋ ಭವಂತು.

(೩ನೆಯ ಮಾನವನ ಪ್ರವೇಶ. ಸೂಕ್ತದ ಧ್ವನಿ ಸಣ್ಣದಾಗುವುದು.)

೩ನೆಯ ಮಾನವ:— ಲೋಕಾಃ ಸಮಸ್ತಾಃ ಸುಖಿನೋ ಭವಂತು ?
ಹ್ಹಾ ಹ್ಹಾ ಹ್ಹಾ!
ಮಂತ್ರಜ್ಞಾನ ತೇಲಬಿಡಿ ಗಾಳಿಯಲೆಗೆ
ನೀವಿನ್ನೂ ಇಳಿದಿಲ್ಲ ಶೋಧಪ್ರಯೋಗ ಶಾಲೆಗೆ.
ರಾವ್ಣಸನ ಕೈಯಲಿತ್ತ ಪಾರ್ವತಿಯನ್ನು ಹುಂಬತಿವ.
ಈಗವಳ ನಿಜರೂಪ ನೋಡಿ ತನ್ತ್ರರಿಸುವನು ಅಸುರದೇವ.
ಕಣ್ಣಳಿಂದ ಒಸರುತಿದೆ ನಿಟಿಲಾಕ್ಷಿಯ ಮಹಾನಲ; ಎಲ್ಲಿದ್ದರೂ
ಜೋಲುನಾಲಗೆ ನೆಕ್ಕುತಿದೆ ಕುರುಕ್ಷೇತ್ರದ ಅತ್ತರು!
ಕೆದರಿದ ಜಡೆಯಿಂದಿಳಿದು ಭುಸುಗುಟ್ಟುತಿವೆ ಕಾಳಿಯ ಹೆಡೆಹೆಡೆ.
ಉಚ್ಛ್ವಾಸಕೆ ಮುಸುಕುತಿದೆ ವಿಷವಾಯು ಎಲ್ಲೆಡೆ.
ಎರಡೂ ದಿಶೆಗಳಲಿ ಗುಡುಗುತಿವೆ ಜ್ವಾಲಾಮುಖಿ ಬ್ರಹ್ಮಾಂಡ
ನಡುಗಿಸಿ.
ಜ್ಞಾನಪಿಶುರೆವ ಜೊಗಳುವರು ಜನ ಥರಥರಿಸುತ ಲಜ್ಜೆಯನು
ಅಡಗಿಸಿ.
ಎಂದು ಜರಿದು ಬೀಳುವುದುಂಟೊ ಮನೆದ ವಜ್ರಾಯುಧ ನೆತ್ತಿಯ.
ಮೇಲೆ!
ಎಂದು ಜಗವ ದಹಿಸುವುದುಂಟೊ ದ್ವೇಷ-ರೋಷದ ಮಹಾಜ್ವಾಲೆ!
ಇಂಥ ಸಮಯದಿ ಮಾಡುವರೀ ಹಳಬರು ಆನಂದಯಜ್ಞ;
ಪರಮಾಣು ಬಾಂಬುಗಳ ಕಟ್ಟೆ ನಿಂದುಳ ಮನೆದವನೆ ತಜ್ಞ—
ಹ್ಹಾ. ಹ್ಹಾ. ಹ್ಹಾ.

(೩ನೆಯ ಮಾನವನ ನಿರ್ಗಮನ)

೧ನೆಯ ಮುನಿ :— ಇದು ಇನ್ನೊಂದು ನುರುಕುಸನಾದಿ
೨ನೆಯ ಮುನಿ :— ನೂರಲ್ಲಿ ನೂರಪ್ಪ ನಿರಾಶಾವಾದಿ.
೩ನೆಯ ಮುನಿ :— ಇಂಥ ಸಮಯದಿ ಕಿವಿಮುಚ್ಚುವುದೇ ವಾಸಿ.
೪ನೆಯ ಮುನಿ :— ನಮ್ಮ ಯಾಗವೇ ಅಂತ್ಯದಿ ಗೆಲ್ಲುವದು
ಬೆಳಕ ಸೂಸಿ.
ಎಲ್ಲರೂ ಕೂಡಿ :— ಎಲ್ಲೆಲ್ಲು ಆನಂದವಿರಲಿ..... ....
ಮೇಲಿನ ಸ್ವಸ್ತಿಸೂಕ್ತ ಹಾಡುವರು. ....
' ಲೋಕಾಃ ಸಮಸ್ತಾಃ ಸುಖಿನೋ ಭವಂತು! '

(೩ನೆಯ ಮಾನವನ ಪ್ರವೇಶ. ಸೂಕ್ತದ ಧ್ವನಿ ಸಣ್ಣಗಾಗುವುದು)

೩ನೆಯ ಮಾನವ:— ಲೋಕಾಃಸಮಸ್ತಾಃ ಸುಖಿನೋ ಭವಂತು?
ಹ್ಹಾ! ಹ್ಹಾ! ಹ್ಹಾ!

ಅಗ್ಗವಾಗಿದೆ ಇಂಥ ಮಂತ್ರೋಚ್ಚಾರ—
ಇವರಿನ್ನೂ ಕಂಡಿಲ್ಲ ಜಗದ ವ್ಯವಹಾರ.

ಊನವಿರಪ್ರಾಣಿ ನೌಕರಿಬಾಹ್ಯನಾಗಿ ಮಾಡುವನು ನರಕವಾಸ.
ವ್ಯಾಧಿಮಂಚವಪ್ಪಿದವನ ಹಗಾರು ಯೋಗ್ಯ ಚಿಕಿತ್ಸೆಗೆ ಅಳಿದು
ಉಳಿದುದೊಂದುಪವಾಸ.
ಮಂದಮತಿ ಬುದ್ಧಿವಂತರ ಬಲಿಗೆ ಸಿಲುಕಿ ಒದ್ದಾಡುವನು
ಅಸಹಾಯನಾಗಿ;
ಮತಿಹೀನನನು ಹೊಟ್ಟೆಹೊರೆಯದೇ ಉಳಿವನು ಸಾಯದೇ
ಭೂಭಾರವಾಗಿ.
ದುಶ್ಯಾಸನ ಹಿಡಿತದಲಿ ಒನರುವಳು ಅನಾಥೆ ಪಾಂಚಾಲಿ.
ಧನಬಲದಿ ಹಾಕುವನು ಮಾನವ ಸಾಕಷ್ಟು ಧಾಂದಲೆ.
ದೇಶದೇಶದ ಜಿದ್ದಿಗೆ ಲಕ್ಷಗಟ್ಟಿ ಹುಲುಮಾನವರ ಕೊಯಲು
ಕೊಯಲು-
ಗೂಳಿಗೂಳಿಯ ಧಿಕ್ಕಿಗೆ ನಿಷ್ಪಾಪ–ದುರ್ಬಲರ ಮರಣಹುಯ್ಯಲು.
ದೌರ್ಬಲ್ಯ ಒಗೆದಿದೆ ನರನನ್ನು ಹೊಂಡದಲ್ಲಿ.
ಇಂಥವರ ಗೋಳಿಗಿಲ್ಲ ಯೋಗ್ಯ ವಿಚಾರಣೆ ಜನಹಿಂಡಿನಲ್ಲಿ.
ಶೂನ್ಯ ಶೂನ್ಯ ನಿಮ್ಮ ಈ ಆನಂದಯಜ್ಞ.
ವಜ್ರಮುಷ್ಟಿಯಲಿ ದುರ್ಬಲರ ಅಳುವವನೆ ತಜ್ಞ.
ಹ್ಹಾ! ಹ್ಹಾ! ಹ್ಹಾ!

(೩ನೆಯ ಮಾನವನ ನಿರ್ಗಮನ)

೧ನೆಯ ಮುನಿ:—ಓಹೋ ಇದೂ ಒಂದು ಅವೇಳೆಯ ಸೊಳ್ಳೆ-
ಕೆರಲು.

೨ನೆಯ ಮುನಿ:— ಈ ಶಬ್ದತೋಪ್ಪುಖಾನೆಯೆಲ್ಲವೂ ಪೊಳ್ಳು ಪೊಳ್ಳು.

೩ನೆಯ ಮುನಿ:—ಇಂಥ ಸಮಯದಿ. ಕವಿ ಮುಚ್ಚುವುದೇ ವಾಸಿ

೪ನೆಯ ಮುನಿ:—ನಮ್ಮ ಯಾಗವೇ ಅಂತ್ಯದಿ ಗೆಲ್ಲುವುದು
ಬೆಳಕ ಸೂಸಿ.

ಎಲ್ಲರೂ ಕೂಡಿ:— ಎಲ್ಲೆಲ್ಲು ಆನಂದವಿರಲಿ ....

ಮೇಲಿನ ಸ್ವಸ್ತಿಸೂಕ್ತ ಹಾಡುವರು. } .... 'ಲೋಕಾಃ ಸಮಸ್ತಾಃ ಸುಖಿನೋ ಭವಂತು.'

(೪ನೆಯ ಮಾನವನ ಪ್ರವೇಶ. ಸೂಕ್ತದ ಧ್ವನಿ ಸಣ್ಣಗಾಗುವುದು)

೪ನೆಯ ಮಾನವ:– ' ಲೋಕಾಃ ಸಮಸ್ತಾಃ ಸುಖಿನೋಭವಂತು? '
ಹ್ಹಾ! ಹ್ಹಾ! ಹ್ಹಾ!

ನಿಮ್ಮ ಮಂತ್ರೋಚ್ಚಾರಕಿರಲೆಲ್ಲ ಅತ್ಮವಂಚನೆ,
ಪಾತಾಳಪ್ರಾಣಿಗಳಿಗಿಲ್ಲ ಶೋಕವಿನೋಚನೆ.
ಉಚ್ಚ ಜೀವಿಗಳಿಗೇ ಈ ಭೂಲೋಕ ವೀಸಲು—
ಎನುವವರ ತುಳಿತಕೆದ್ದಿದೆ ದೀನಜೀವಿಗಳ ಹುಯ್ಯಲು,
ಹೆಣ್ಣಾವೆರೋಧಕ್ಕೆ ಗುರುಗುಟ್ಟುವನು ಗಂಡು ಕೆರಳಿ,
ಅಲ್ಪಬಡವನ ಪುನಮೆಟ್ಟುವನು ಧನಜಂಭದ ಹುಲಿ,
ಕರಿಚರ್ಮವ ಸುಲಿಯುವರು ಭಾಂಡನಲುಶಾಹಿ ಭೂಪರು.
ಕಾರಕೂನಗೂಳಿಯ ಮೇಲೆ ಸೀನುವರು ಆಫೀಸರರನೇಕರು,
ಪದವೀಭೂಷಿತನು ಹಲ್ಲು ಕಿಸಿಯುವನು ಅಶಿಕ್ಷಿತನ ಕಂಡು.
ಸಮತಾವಾದ ಶಾಂತಿಯಲಿ ನೋಡಿರೀ ವಿಷಮತೆಯ ಬಂಡು.
ಅವರ ಹೊಡೆತಕೆ ಸಿಕ್ಕಿದ ಪಾಪಿ ನುಗ್ಗುನುಗ್ಗಾದ ಮೇಣದಂತೆ,
ಅವನ ಅಸ್ತಿತ್ವವೇ ಪಶಿಸುತಿದೆ ಜಗಕೆ ಕಾಣದಂತೆ.
ಇಂಥ ಸ್ಥಿತಿಯಲ್ಲಿ ಸುಳ್ಳುಸುಳ್ಳೇ ಆನಂದಯಜ್ಞ
ಗದ್ದುಗೆಯೇರಿ ತೊತ್ತಿಗನ ತುಳಿದವನೆ ತಜ್ಞ. ಹ್ಹಾ! ಹ್ಹಾ! ಹ್ಹಾ!

(೪ನೆಯ ಮಾನವನ ನಿರ್ಗಮನ)

೧ನೆಯ ಮುನಿ:—ಇದೇನು ನಾಲ್ಕನೆಯವನ ಬಡಬಡಿಕೆಯ ರೀತಿ.

೨ನೆಯ ಮುನಿ:— ಇದು ಬರೇ ಬಿದ್ದವರಿಗಿದ್ದ ಭ್ರಾಂತಿ!

೩ನೆಯ ಮುನಿ.—ಇಂಥ ಸಮಯದಿ ಕವಿಮುಚ್ಚುವುದೇ ವಾಸಿ.

೪ನೆಯ ಮುನಿ:—ನಮ್ಮ ಯಾಗವೇ ಅಂತ್ಯದಿ ಗೆಲ್ಲುವುದು
ಬೆಳಕ ಸೂಸಿ.

ಎಲ್ಲರೂ ಕೂಡಿ:— ಎಲ್ಲೆಲ್ಲು ಆನಂದವಿರಲಿ ....

ಮೇಲಿನ ಸ್ವಸ್ತಿಸೂಕ್ತ ಹಾಡುವರು. } .... 'ಲೋಕಾಃ ಸಮಸ್ತಾಃ ಸುಖಿನೋ ಭವಂತು.'

[೧, ೨, ೩, ೪ನೆಯ ಮಾನವರ ಪ್ರವೇಶ. ಎಲ್ಲರೂ ಒಟ್ಟಿಗೇ ನಗುವರು]

ಮಾನವರು:— ಹ್ಹಾ! ಹ್ಹಾ! ಹ್ಹಾ! ಹ್ಹಾ! ಹ್ಹಾ!

(ಸೂಕ್ತದ ಧ್ವನಿ ಸಣ್ಣಗಾಗುತ್ತ ಬರುವುದು. ಮಾನವರು ಒಟ್ಟಿಗೆ ಹಾಡುವರು)

೧, ೨, ೩, ೪ ಮಾನವರು ಎಲ್ಲರೂ ಕೂಡಿ } ಮಿಥ್ಯ ಮಿಥ್ಯ ನಿಮ್ಮ ಈ ಆನಂದಯಜ್ಞ!

ಸ್ವಂತನುಹೆಲನು ಕಟ್ಟಿ ಭೋಗಿಸುವವನೆ ತಜ್ಞ.
ಸುಳ್ಳುಸುಳ್ಳೀ ನಿಮ್ಮ ಆನಂದಯಜ್ಞ
ಗದ್ದುಗೆಯೇರಿ ತೊತ್ತಿಗನ ತುಳಿವವನೆ ತಜ್ಞ.
ಶೂನ್ಯ ಶೂನ್ಯ ನಿಮ್ಮ ಈ ಆನಂದಯಜ್ಞ
ವಜ್ರಮುಷ್ಟಿಯಲಿ ದುರ್ಬಲರ ಅಳುವವನೆ ತಜ್ಞ
ಪೊಳ್ಳು ಪೊಳ್ಳು ನಿಮ್ಮ ಈ ಆನಂದಯಜ್ಞ
ಪರಮಾಣಾಬಾಂಬುಗಳ ಕಟ್ಟಿ ಮಿದುಳ ಮಸೆನವನೆ ತಜ್ಞ.
ಆನಂದವೆಂಬುದಿದು ಕೆಲವರದೇ ಸೊತ್ತು,
ಮಿಕ್ಕವರ ಗೋಳೆಲ್ಲ ಅವರವರಿಗೆ ಗೊತ್ತು.
ಹಾರಾಡುವವರು ಹಾರಾಡುವರು ಹೊಸಹೊಸರಿಕ್ಕೆಹಡೆದು.
ಬಿದ್ದವರು ಲಕ್ಷೋಪಲಕ್ಷ ನರಳುವರು ಹೊಟ್ಟೆಯೊಡೆದು
ಸರ್ವತ್ರ ಮುಸುಕುತಿದೆ ತೋಪ್ಪುಖಾನೆಯ ಧೂಮ.
ಗತಜನ್ಮದ ವುಣ್ಯದಿಂದ ಬದುಕುವವನೆ ಸಾರ್ವಭೌಮ..
ಮಿಥ್ಯ ಮಿಥ್ಯ ನಿಮ್ಮ ಈ ಆನಂದಯಜ್ಞ—ಹ್ಹಾ! ಹ್ಹಾ! ಹ್ಹಾ!

(ಪರದೆ ಬೀಳುವುದು)

—ಸಮಾಪ್ತ—

ಟಿಂಪೂವಿನ ಕ್ರಿಸ್‌ಮಸ್

(ಅನುವಾದಿತ ಕಥೆ)

ಶ್ರೀಮತಿ 'ಕಲಾ' ಮಲ್ಲೀಶ್ವರಂ ಬೆಂಗಳೂರು

ಅಜ್ಞಾನಜನ್ಯವಾದ ಭಾವನೆಗಳು, ಸಾಮಾನ್ಯ ಮನುಷ್ಯನನ್ನು ಬೇರೆ-ಬೇರೆ ಮತಧರ್ಮ-ಸಂಪ್ರದಾಯಗಳಲ್ಲಿ ಶ್ರದ್ಧೆಯನ್ನು ಹುಟ್ಟಿಸುತ್ತವೆ. ಎಂತೆಂತಹ ಕರ್ಮಠ ಹಿಂದುಗಳೂ ಮುಸಲ್ಮಾನ್ ಪೀರನಿಗೆ ಲೋಬಾನಸುಟ್ಟು ಸಕ್ಕರೆ ಹಂಚುವುದನ್ನು ನಾವು ನೋಡುವುದಿಲ್ಲವೆ? ಬೌದ್ಧಧರ್ಮೀ ಟಿಂಪೂ ಕ್ರಿಸ್‌ಮಿಸ್ಸಿನ ಚಿನ್ನುಹತ್ತಿದುದು ಇಂತಹ ಭಾವನೆಗಾಗಿಯೆ!

ಹಿಮಾಲಯ ಬೆಟ್ಟದ ತಪ್ಪಲಿನಲ್ಲಿದ್ದ ಒಂದು ಊರಿನ—ರಿಕ್ಷಾ ಎಳೆಯುವ – ಟಿಂಪೂ ಭೂತಾನಿ; ಅವನ ಧರ್ಮವೋ ಬೌದ್ಧ. ಆದರೂ ಕ್ರಿಸ್‌ಮಿಸ್ ಹಬ್ಬವನ್ನು ಶ್ರದ್ಧೆಯಿಂದ ಆಚರಿಸುತ್ತಿದ್ದವರಲ್ಲಿ ಅವನೊಬ್ಬ. ಕ್ರಿಸ್‌ಮಿಸ್‌ಗೆ ಮುಂಚೆ ತನ್ನ ರಿಕ್ಷಾಕ್ಕೆ ಮೆರಗುಕೊಟ್ಟು, ಮೆತ್ತೆಗಳನ್ನು ಬದಲಾಯಿಸಿ, ರಿಕ್ಷಾದ ಮುಸುಕಿಗೆ ಬಣ್ಣ ಬಳಿದು, ರಿಕ್ಷಾದ ಇಕ್ಕಡೆಗಳಲ್ಲಿದ್ದ ಎರಡು ದೀಪಗಳ ಗಾಜಿಗೆ ಅದೆಷ್ಟು ಒಪ್ಪ ಹಾಕುತ್ತಿದ್ದನೆಂದರೆ: ಅವು ರಾತ್ರಿಯಲ್ಲಿ ದೀಪಗಳನ್ನು ಹಚ್ಚಿದ ಮೇಲೆ ಎಷ್ಟು ಪ್ರಕಾಶಮಾನವಾಗಿರುತ್ತಿದ್ದುವೊ, ಬೆಳಗಿನಲ್ಲಿಯೂ ಅಷ್ಟೇ ನಿಂಚುತ್ತಿದ್ದುವು

ಅದಲ್ಲದೆ ಒಂದು ದೊಡ್ಡ ಕ್ರಿಸ್‌ಮಿಸ್ ಹಾರವನ್ನು ತನ್ನ ಗಾಡಿಯ ಮುಸುಕಿಗೆ ಹಾಕಿ. ತನ್ನ ಹೆರಳಿನ (Pig tail) ತುದಿಗೆ ಕೆಂಪು ಬಣ್ಣದ ಸಿಲ್ಕಿನ ಕುಚ್ಚು ಕಟ್ಟಿ, ಹಬ್ಬದುಡುಗೆಯಾದ ತುಪ್ಪಳದ —ಜರತಾರಿ ಕೆಲಸ ಮಾಡಿದ – ದೊಡ್ಡ ಟೊಪ್ಪಿಗೆಯನ್ನು ಹಾಕಿ-ಕೊಂಡು, ದಾರಿಯಲ್ಲಿ ಸಿಕ್ಕಿದವರಿಗೆಲ್ಲಾ ಕ್ರಿಸ್‌ಮಿಸ್ ಹಬ್ಬದ ಶುಭಾಶಯಗಳನ್ನು ಹೇಳುತ್ತಾ ಹೊರಡುತ್ತಿದ್ದ. ಕ್ರಿಸ್‌ಮಿಸ್ ಹಬ್ಬದ ಮಹಾದಿನ ಬಂದಂದು ಮಾತ್ರ, ತನ್ನ ರಿಕ್ಷಾವನ್ನು ಲಾಯ-ದಲ್ಲಿಯೇ ಬಿಟ್ಟು, ತಾನು ಶಾಸ್ತ್ರೋಕ್ತವಾಗಿ ರಜೆ ತೆಗೆದುಕೊಳ್ಳುತ್ತಿದ್ದ.

"ಆದೇನು? ನೀನು ಬೌದ್ಧನಾದರೂ ಕ್ರಿಸ್‌ಮಿಸ್ ಹಬ್ಬವನ್ನೇಕೆ ಆಚರಿಸುವೆ?" ಎಂದು ಪ್ರಶ್ನಿಸಿದಲ್ಲಿ, ಅವನು ದೂರದ ಮಂಜನ್ನು ನೋಡುತ್ತಾ, ಮಂದಹಾಸವನ್ನು ಬೀರುತ್ತಾ, ಉತ್ತರ ಕೊಡುವುದನ್ನೇ ಮರೆಯುವನು. ಆಗ ಮಾತ್ರ ಅವನು ರಿಕ್ಷಾದ ಯಜಮಾನ ದೊಡ್ಡ ಟಿಂಪೂ ಆಗಿರದೆ 'ಎವರೆಸ್ಟ್' ಶಿಖರದ ಕೂಲಿಯಾಳಿನ ಮಗ ಎಂಟು ವರ್ಷದ ಟಿಂಪೂ ಆಗುತ್ತಿದ್ದ.

ಅವನು ಎಂಟು ವರ್ಷದ ಹುಡುಗನಾಗಿದ್ದಾಗ, ಕೆಂಪುಕೆನ್ನೆಯ, ಹೊಳಪಾದ ಓಲುಗಣ್ಣಿನ, ಕರಿಯ ಕೂದಲಿನ, ಬರಿಗಾಲು ಹುಡುಗ-ನಾಗಿದ್ದ. ಪಟ್ಟೆಪಟ್ಟೆಯ ಸಣ್ಣ ನಿಲುವಂಗಿಯನ್ನು ಹಾಕಿಕೊಂಡು, ಅದೇ ತಾನೇ ಮೇಲುಪ್ರಾಂತದಿಂದ ಬಂದ ಟಿಂಪೂ, ಊರಿನ ರೀತಿ ನೀತಿಗಳಿಗೆ ಹೊಸಬನಾಗಿದ್ದ. ಅವನ ತಂದೆ ಬಿಳಿಯವರೊಡನೆ ಹಿಮ-ಪರ್ವತಕ್ಕೆ ಅಪಾಯಕರವಾದ ಪ್ರಯಾಣ ಬೆಳಸಿದ ಮೇಲೆ, ಅವನೂ, ಅವನ ತಾಯಿಯೂ ಊರಿಗೆ ಬಂದು ನೆಲಸಬೇಕಾಯಿತು.

ಯಥಾಪ್ರಕಾರ, ಬಿಳಿಯರು ಹಿಮಾಲಯದಿಂದ ಹಿಂದಿರುಗಿ-ದಾಗ, ಕೆನ್‌ಟುಪ್-ಟಿಂಪೂವಿನ ತಂದೆಯೊಬ್ಬನನ್ನು ಬಿಟ್ಟು ಮಿಕ್ಕೆಲ್ಲಾ ಕೂಲಿಯಾಳುಗಳೂ ವಾಪಸ್ಸಾದರು. ಆತ, ಊರಿಗೆ ಹಿಂದಿರುಗಲು ಮೂರು ರಾತ್ರಿಗಳ ದಾರಿಯಿದೆ ಎನ್ನುವಾಗ, ಯಾರಿಗೂ ತಿಳಿಯ-ದಂತೆ ಕಾಣೆಯಾಗಿದ್ದ. ಒಬ್ಬರಿಗೂ ಇದರ ನಿಜಾಂಶ ತಿಳಿದಿರಲಿಲ್ಲ.

"ಕರಡಿ ಆತನನ್ನು ಹೊತ್ತುಕೊಂಡು ಹೋಯಿತು" ಎಂದು ಬಿಳಿಯರೆಂದರು.

"ಇಲ್ಲ — ಕರಡಿ ಕೆನ್‌ಟುಪ್‌ನನ್ನು ಹೊತ್ತುಕೊಂಡು ಹೋಗಲು ಸಾಧ್ಯವೇ? ಅದು ಕರಡಿಯಲ್ಲ, ಕರಿಯ ಭೂತ. ಅದೇದಿನ ಸಂಜೆ ನಾವೆಲ್ಲಾ ತಾಣ್ಯದಲ್ಲಿರುವಾಗ, ಬಿಸಿರಕ್ತಕ್ಕಾಗಿ ಅಳುತ್ತಿದ್ದ ಆ ಕರಿಯ ಭೂತದ ಕೂಗು ಕೇಳಿಸುತ್ತಿರಲಿಲ್ಲವೆ?" ಎಂದು ಮಿಕ್ಕ ಕೂಲಿ-ಯಾಳುಗಳು ಹೇಳಿದರು. "ಆ ದೊಡ್ಡ ಹಿಮಮಾನವನೇ ಅವನನ್ನು ಹಿಡಿದಿರಬೇಕು ಏಕೆಂದರೆ ಕೆನ್‌ಟುಪ್ ಬಹಳ ಒಳ್ಳೆಯ ದಯಾಳು ವಾದ ವ್ಯಕ್ತಿ. ಆ ಹಿಮಮಾನವನು ಅವನನ್ನು ಹಿಡಿದು ಒಂದು ಗುಪ್ತಗವಿಯೊಳಗೆ ಕೂಡುಹಾಕಿ, ನೀರು, ಸಣ್ಣ ಸಣ್ಣ ಕ್ರಿಮಿಗಳ ಆಹಾರವನ್ನು ಒದಗಿಸಿ, ಅವನು ಎಲ್ಲರಿಗಿಂತ ಪವಿತ್ರನಾಗಿ -- ಜ್ಞಾನಿ-ಯಾಗುವವರೆಗೂ ಇಟ್ಟುಕೊಂಡಿದ್ದು, ಬಹುಶಃ, ಒಂದಲ್ಲ ಒಂದು ದಿನ ಬಿಡಬಹುದು!" ಎಂದು ಊರಿನ ಸಂತೆಯಲ್ಲಿ ಜನರು ಮಾತನಾಡಿಕೊಳ್ಳುತ್ತಿದ್ದರು.

ಆದರೆ ಟಿಂಪೂವಿನ ತಾಯಿ ಮಾತ್ರ, "ಟಿಂಪೂವಿನ ತಂದೆ ಖಂಡಿತ ಹಿಂದಿರುಗುವುದಿಲ್ಲ ಪರ್ವತದ ದೇವತೆಗಳಿಗೆ, ಎಲ್ಲರಿಗಿಂತಲೂ ಮೇಲಕ್ಕೆ—ತಮ್ಮ ಪವಿತ್ರವಾದ ಗರ್ಭಗೃಹಗಳ ಹತ್ತಿರಕ್ಕೆ—ಏರಿದ

ಕಿನ್ಟುಪ್‌ವಿನ ಮೇಲೆ ಹೊಟ್ಟೆಕಿಚ್ಚಾಗಿ, ಅವನನ್ನು ಹಿಡಿದುಕೊಂಡಿದ್ದಾರೆ" ಎನ್ನುತ್ತಿದ್ದಳು; "ಹಾಯ್! ಹಾಯ್! ಪರ್ವತದ ದೇವತೆಗಳು ಅವನನ್ನು ಹಿಂದಿನುಕೊಂಡಿದ್ದಾರೆ. ಅವನು ಮತ್ತೆ ಹಿಂದಿರುಗುವುದಿಲ್ಲ" ಎಂದು ಕೈಪಾವಡೆಯನ್ನು ಮುಖದ ನೇರಕ್ಕೆ ಹಾಕಿಕೊಂಡು ಗಟ್ಟಿಯಾಗಿ ಅಳುತ್ತಿದ್ದಳು. ಆದರೆ ಟಂಪೂವಿಗೆ ಜೆನ್ನಾಗಿ ಗೊತ್ತು: ತಾಯಿಗೆ ತಂದೆ ಹಿಂದಿರುಗುವನೆಂಬ ಆಶೆ ಇಷ್ಟೆ—ಎಂಬುದು.

ಆದಕ್ಕಾಗಿಯೇ ಅಲ್ಲವೆ, ಅವಳು ಈ ಸುದ್ದಿ ಬಂದಾಗಿನಿಂದ, ಪ್ರತಿದಿನ ಬೆಳಿಗಿನ ಜಾವ ಗುಡ್ಡದ ಮೇಲಿರುವ ದೇವಸ್ಥಾನದ, ಸ್ತೋತ್ರಪಾಠಗಳನ್ನೊಳಗೊಂಡಿರುವ ಗುಡಿಗಳ ಕೆಳಗಿರುವ ಆ ಬೌದ್ಧ ಗುರುವನ್ನು ನೋಡಲೋಸುಗ ಹೋಗುತ್ತಿದ್ದುದು? ದಿನವೂ ತನ್ನ ಕೈಲಾದಷ್ಟು ಅಕ್ಕಿ, ಹಣ್ಣು, ಮತ್ತು ಮಡ್ಡನ್ನು ತೆಗೆದುಕೊಂಡು ಹೋಗಿ ಅವನಿಗೆ, ತನಗಾಗಿ ಪ್ರಾರ್ಥನೆಯಚಕ್ರ*ವನ್ನು ತಿರುಗಿಸಲೋಸುಗ ಕೊಡುತ್ತಿರಲಿಲ್ಲವೆ? ಆ ಪ್ರಾರ್ಥನೆಗಳಿಂದ, ಕೋಪಗೊಂಡಿದ್ದ ಗುಡ್ಡದ ದೇವತೆಗಳನ್ನು ಶಾಂತಿಗೊಳಿಸಿ, ಟಂಪೂವಿನ ತಂದೆಯನ್ನು ಮನೆಗೆ ಹಿಂದಿರುಗಿಸಬಹುದೆಂಬ ಆಲೆಯಿಂದಲ್ಲವೇ. ನಿತ್ಯವೂ ಅವಳು ಅಲ್ಲಿಗೆ ಹೋಗುತ್ತಿದ್ದುದು!

ಊರಿನ ಹತ್ತಿರ ಇದ್ದ ಬೆಟ್ಟದ ಮೇಲಿನ ಹೋಟೆಲಿನಲ್ಲಿ, ತೋಟದ ಕೆಲಸ ಸಿಕ್ಕಿದಾಗಿನಿಂದ ಅವಳೂ, ಅವಳ ಮಗನೂ, ಹತ್ತಿರ ವಿದ್ದ ಒಂದೇ ಕೊಠಡಿಯುಳ್ಳ ಮನೆಯೊಳಗೆ ವಾಸಿಸುತ್ತಿದ್ದರು. ತಂದೆಯ ನಾಪತ್ತೆಯ ಸುದ್ದಿ ಬಂದಾಗಿನಿಂದ, ಅಕ್ಕಪಕ್ಕದವರು ಕರೆದುಕೊಂಡು ಬಂದ ಆ ಸುಂತ್ರವಾದಿಯನ್ನು ಮನೆಯೊಳಗೆ—ಆ ಒಂದು ಕೊಠಡಿಯೊಳಗೆ—ಬಿಡುತ್ತಿದ್ದಳು. ಅವನ ಆಜ್ಞೆಯಂತೆ ತಾಯಿ. ಉತ್ತಪ್ಪ ಖಾನೀಯಗಳನ್ನೂ, ಹೆಂದಿಯ ಬರುಗೂದಲುಗಳು, ಕೋಳಿ. ಮರಿ, ಒಂದು ಕನ್ನಡಿ ಮತ್ತು ಅವಳ ಗಂಡನ ಒಂದು ಪಟೆಯ ಜಾಗಿ ಇಷ್ಟನ್ನೂ ನೆಲದ ಮೇಲಿಟ್ಟು, ಟಂಪೂವನ್ನೊಡಗೂಡಿ, ಪೂರ್ವಕ್ಕೆ ಶೀತಲವಾದ ನಕ್ಷತ್ರಗಳ ಬೆಳಕಿನಲ್ಲಿ ಬಂದು ಕೂತುತ್ತಿದ್ದಳು. ಗುಡಿಯಲ್ಲಿ ಒಳಗೆ ಮಂತ್ರವಾದಿಯ ಏರಿಳಿಯುತ್ತಿದ್ದ ಧ್ವನಿ. ಅವನ ಮಂತ್ರ-ಮಾಟಗಳ ಮೂಲಕ ಕಿನ್ಟುಪ್‌ನನ್ನು ಮನೆಗೆ ಹಿಂದಿರುಗಿಸುವುದಕ್ಕೋಸ್ಕರ ತಾಯಿ ಇಷ್ಟನ್ನೂ ಮಾಡುತ್ತಿದ್ದಳು—ಎಂದು ಟಂಪೂವಿಗೆ ತಿಳಿದಿತ್ತು.

ಆದರೆ ಕಿನ್ಟುಪ್‌ನು ಮಾತ್ರ ಹಿಂದಿರುಗಲಿಲ್ಲ. ಪ್ರತಿ ಹೊಸ ದಿನವೂ ಟಂಪೂವಿನ ಮನೆಯಲ್ಲಿ ಬಿನ್ನಣವಾಗಿ ಕಳೆದುಹೋಗುತ್ತಿತ್ತು. ರಾತ್ರಿಯ ಹೊತ್ತು ತಾಯಿಯ ನಿಸ್ತೇಜ ಕಣ್ಣುಗಳ ಮೂಕವಂಕಳ, ನಿರಾಸೆ, ಶೋಕಕ್ಕೆ ಎಡೆಮಾಡುತ್ತಿತ್ತು. ಅವಳ ಅಳು ಕೇಳಿ ಟಂಪೂವಿಗೆ ಎಷ್ಟೋ ರಾತ್ರಿ ಎಚ್ಚರವಾಗಿ, ಅವಳನ್ನು ಸಮಾಧಾನ ಮಾಡಲು ಬಹಳ ಹೊತ್ತೇ ಹಿಡಿಯುತ್ತಿತ್ತು. ನಿಜವಾಗಿಯೂ ಅವನ ತಂದೆಯನ್ನು ಮನೆಗೆ ಕರೆತರುವ ಮಾರ್ಗವೊಂದಿದ್ದೇ ಇರಬೇಕು! ಅದರೆ ತಾಯಿ ತಲೆ ಅಲ್ಲಾಡಿಸುತ್ತಾ "ದೇವತೆಗಳಿಗೇ ಇಷ್ಟವಿಲ್ಲದಿರುವಾಗ, ಎಂಟು ವರ್ಷದ ಹುಡುಗನೇನು ಮಾಡಬಲ್ಲ?" ಎನ್ನುತ್ತಿದ್ದಳು.

ಟಂಪೂವಿಗೆ ಈ ಉತ್ತರ ಸಮಂಜಸವೆನಿಸಲಿಲ್ಲ. 'ತಂದೆಯನ್ನು ಬೆಟ್ಟಗಳಲ್ಲಿ ಹುಡುಕುವ' ಎಂದು ಯೋಚಿಸಿದ. 'ಯಾವ ದಾರಿಯಲ್ಲಿ, ಯಾವ ದಿಕ್ಕಿನಲ್ಲಿ ಹೊರಡಬೇಕು?' ಎಂದು ಯೋಚಿಸುತ್ತಿರುವಾಗಲೇ, ಊರಲ್ಲಿ ಮೊಡ್ಡ ಹಬ್ಬದ ಸಲುವಾಗಿ ಏರ್ಪಾಡಾಗುತ್ತಿದ್ದುದನ್ನು ನೋಡಿದ. ತಾಯಿಯನ್ನು ಕುರಿತು "ಯಾವ ಪೂಜೆಗಾಗಿ ಇಷ್ಟೊಂದು ಕಮ್ಮಟತನದ ಏರ್ಪಾಡು?" ಎಂದು ಕೇಳಿದ. ತಾಯಿ ತನಗೆ ತಿಳಿದಿಲ್ಲವೆಂದು ತಲೆ ಅಲ್ಲಾಡಿಸಿದಳು. ಅವಳ ದುಃಖದಲ್ಲಿ ಹಬ್ಬದ ಮಾತುಗಳಿಗೆ ಎಡೆಯೇ ಇರಲಿಲ್ಲ.

ಆದರೆ ಹೋಟಲಿನಲ್ಲಿ ಬಹಳ ಹಿಂದಿನಿಂದ ತೋಟದ ಕೆಲಸ ಮಾಡುತ್ತಿದ್ದ ಮುದುಕ ಜೇಳಿದಳು: ಅದು 'ಕ್ರಿಸ್‌ಮಿಸ್' ಹಬ್ಬವೆಂದು! ಹಬ್ಬಕ್ಕಾಗಿ ಮರ ಕಡಿಯಲು ಸಹಾಯಮಾಡಲು ಬಂದ ಟಂಪೂವನ್ನೂ ಜೊತೆಗೆ ಸೇರಿಸಿಕೊಂಡರು. ಆ ಮರವನ್ನು ಹೋಟೆಲಿನ ದೊಡ್ಡ ಪಡಸಾಲೆಯೊಳಗೆ ಹೇಗೆ ತೆಗೆದುಕೊಂಡು ಹೋಗಿ, ಒಂದು ದೊಡ್ಡ ಬಾನಿಯೊಳಗಿಟ್ಟು ಹಬ್ಬದ ಮುಡುಪುಗಳನ್ನು ಆ ಮರದ ಕೊಂಬೆಗಳಿಗೆ ಕಟ್ಟಿ, ಹೇಗೆ ಎಲೆಗಳ ಮಧ್ಯೆ ದೀಪಗಳನ್ನು ಹಚ್ಚುತ್ತಾರೆ—ಎಂಬುದನ್ನೆಲ್ಲ ವರ್ಣಿಸಿದರು.

"ಆ ಹಬ್ಬದ ಮಹಾದಿನದಂದು ರಾತ್ರಿ, ಊರಿನ ಕ್ರಿಸ್ತಿಯನ್ ಮಕ್ಕಳೆಲ್ಲಾ ಬಂದು, ಆ ಅಲಂಕಾರಮಯ ಮರದ ಸುತ್ತ ನಿಲ್ಲುವರು. ಆಗ ಅವರ ಕ್ರಿಸ್‌ಮಿಸ್ ತೇವರು ಇಳಿದು ಬಂದು ದರ್ಶನ ಕೊಡುತ್ತಾನೆ. ಇದೆಲ್ಲಾ ಖಂಡಿತ, ನಿಜ. ಏಕೆಂದರೆ, ಪ್ರತಿ ವರ್ಷವೂ ನಾವೇ ಕಣ್ಣಾರೆ ಆ ದೇವರು ಬಾಗಿಲ ಮೂಲಕ ಒಳಗೆ ಹೋಗುವುದನ್ನು ನೋಡಿದ್ದೇನೆ!" ಎಂದು ಕೂಲಂಕಷವಾಗಿ ಹಬ್ಬದ ವಿವರಣೆಯನ್ನು ವರ್ಣಿಸಿದರು.

ಟಂಪೂ ಓಲುಗಣ್ಣಿನ ಓರೆನೋಟದಿಂದ ಈ ಅದ್ಭುತ ಕಥೆಯನ್ನು ಕೇಳಿದ. ದಿನವೂ ರಾತ್ರಿ ತಂದೆಯ ಬರುವಿಕೆಯ, ತಾಯಿಯ ದುಃಖದ ಬಗ್ಗೆ ಎಷ್ಟು ಆಲೋಚಿಸುತ್ತಿದ್ದನೋ, ಅಷ್ಟೇ ಅಂದು ರಾತ್ರಿ ಮಲಗಿದಾಗ, ಅವನ ಮನಸ್ಸು ಮುಂಬರುವ ಕ್ರಿಸ್ತಿಯನ್ ಹಬ್ಬದ ಆಲೋಚನೆಗಳಲ್ಲಿ ತುಂಬಿದ್ದಿತು.

ಮರುದಿನ ಬೇಗ ಎದ್ದು ಹಬ್ಬದ ಮರಕ್ಕೆ ಅಲಂಕರಿಸಲು ಕೆಂಪು ಹೂಗಳ ಗುಚ್ಛವನ್ನೂ, ಹಸುರೆಲೆಗಳನ್ನೂ ತೆಗೆದುಕೊಂಡು ಹೋಗಿ ಕೊಟ್ಟು, ಅವರಿಗೆ ಕೆಲಸಮಾಡಲು ಸಹಾಯ ಮಾಡುತ್ತಿದ್ದನು. ಕೆಲಸ ಮಾಡುತ್ತಲೇ, ಮತ್ತೆ ಮತ್ತೆ ಕ್ರಿಸ್‌ಮಿಸ್ ದೇವರ ಆಗಮನದ ವಿಚಾರವನ್ನು ಕೇಳಲು ಶುರುಮಾಡಿದನು. ಇವನ ಉತ್ಸುಕತೆಯನ್ನು ಕಂಡು ಅಲ್ಲಿದ್ದವರೆಲ್ಲಾ ನಗುತ್ತಿದ್ದರೂ, ಇವನ ಮನಸ್ಸು ಅವುದೋ ಒಂದು ಸಂಚನ್ನು—ಅದ್ಭುತವಾದ ಸಂಚನ್ನು—ತನ್ನ ತಂದೆಯನ್ನು ತಾಯಿಯ ಬಳಿಗೆ ಬರುವಂತೆ ಮಾಡಿ, ಅವಳಿಗೆ ಸಂತೋಷವನ್ನುಂಟುಮಾಡುವ ವಿಧಾನವನ್ನು ಕುರಿತು ಚಿಂತಿಸುತ್ತಿತ್ತು.

---

* Prayer-wheel :— ಸ್ತೋತ್ರಪಾಠಗಳನ್ನು ಸೇಲೆ ಬರೆದಿರುವ, ಉರುಳಿಯಾಕಾರದ ಸುತ್ತು ತಿರುಗುವ ಪೆಟ್ಟಿಗೆ. ಬೌದ್ಧರು, ಟಿಬೆಟ್ಟಿನ ಜನ, ಇದನ್ನು ಒ್ರಾರ್ಥನೆ ಮಾಡುವಾಗ ಇಟ್ಟುಕೊಂಡಿರುತ್ತಾರೆ.

ದೇವರನ್ನು ಸಂದರ್ಶಿಸಲು ಹೊಸ್ತಿಲೇ ಸರಿಯಾದ ಸ್ಥಳವೆಂದು ತೀರ್ಮಾನಿಸಿದನು. ಆ ಮುದುಕ ಹೇಳಿರಲಿಲ್ಲವೆ? "ದೇವರು ಬಾಗಿಲಿಂದ ಒಳಗೆ ಹೋಗುವುದನ್ನು ನೋಡಿರುವೆ'" ಎಂದು?

ಅಂದು ಸಂಜೆ, ಮುಳುಗುತ್ತಿದ್ದ ಸೂರ್ಯನ ಹೊಂಗಿರಣಗಳು ಮುಂಜಿನ ಮೇಲೆ ಬಿದ್ದು, ಒಂದು ಅಪೂರ್ವ ಶೋಭೆಯನ್ನುಂಟುಮಾಡಿದ್ದುವು. ಕತ್ತಲು ಮೆಲ್ಲಮೆಲ್ಲನೆ ಕವಿಯುತ್ತಿತ್ತು. ಬೆಟ್ಟದ ಕೆಳಗೆ, ಊರಿನಲ್ಲಾಗಲೇ ದೀಪಗಳು ಮಿನುಗುಟ್ಟುತ್ತಿದ್ದುವು. ಟೊಂಪುವಿನ ಉತ್ಸುಕದ ಓಲುಗಣ್ಣುಗಳು, ಗೊಂಚಲು-ಗೊಂಚಲಾಗಿದ್ದ ಎಲೆಗಳ ಹಿಂದಿನಿಂದ, ಹೋಟಲಿನ ಬಾಗಿಲ ಪಕ್ಕದಲ್ಲಿ ಮರೆಯಿಂದ ಇಣುಕಿ ನೋಡುತ್ತಿದ್ದುವು.

ಆ ಕಾಲುದಾರಿಯಲ್ಲಿ ಬರುತ್ತಿದ್ದಾತನನ್ನು ನೋಡಿದ ಕೂಡಲೆ, ಟೊಂಪುವಿಗೆ ಅವನಾರೆಂದು ತಿಳಿದುಹೋಯಿತು. ಬರುತ್ತಿದ್ದಾತ ಮುದುಕ. ಬಿಳಿಯದಾದ ಗಡ್ಡವಿತ್ತು. ಕೆಂಪುಬಣ್ಣದ ದೊಡ್ಡ ನಿಲುವಂಗಿಯನ್ನು ಧರಿಸಿ ಲಾವಾಗಳು—ಪವಿತ್ರ ಪುರುಷರು—ಹಾಕಿಕೊಳ್ಳುವಂಥ ಮೊನೆಯಾದ ಕೊನೆಯುಳ್ಳ ಟೋಪಿಯನ್ನು ಧರಿಸಿದ್ದ. ಅವನ ಬಟ್ಟೆಯ ಮೇಲೆ ನುಂಜು ದಟ್ಟವಾಗಿ ಬಿದ್ದಿತ್ತು. ನ್ಯಾಯವೆ! ಆ ದೇವತೆಗಳ ಊರಿನಿಂದ ಇಲ್ಲಿಯವರೆಗೂ ಬರಬೇಕಾದರೆ? ಇದರಲ್ಲಿ ಖಂಡಿತ ತಪ್ಪಿರಲಾರದು. "ಅವನೇ ಕ್ರಿಸ್‌ಮಿಸ್ ದೇವರು" ಎಂದು ಟೊಂಪೂ ಎಣಿಸಿಕೊಂಡ.

ಟೊಂಪೂ ಮೆಲ್ಲನೆ ತಾನು ಅವಿತುಕೊಂಡಿದ್ದ ಜಾಗದಿಂದ ಮುಂದೆ ಬಂದ. ಆ ಕಾಲುದಾರಿಯಲ್ಲಿ ಬರುತ್ತಿದ್ದ ಆಗಂತುಕನ ಬಳಿಗೆ ನೆಲ್ಲಗೆ ಮುಂದುವರೆದ. ತನ್ನ ದೇವರನ್ನು ಇದಿರುಗೊಳ್ಳುವಾಗ ಹೇಗೆ ಭಯ, ಭಕ್ತಿ, ಪ್ರೀತಿಗಳಿಂದ ಅವನ ಪುಟ್ಟ ಹೃದಯ ತುಂಬಿರುತ್ತಿತ್ತೋ, ಅದೇ ರೀತಿ ಇಂದೂ ತುಂಬಿತ್ತಿತು ದೇವರಿಗಾಗಿ ಅರ್ಪಿಸಲು ಕೆಲವು ಕತ್ತಳೆ ಹಣ್ಣುಗಳು, ಮಿಠಾಯಿ, ಜೊಂಡುಹೂವಿನ ಹಾರ, ಎರಡಾಣೆ ಪಾವಲಿ-ಇಷ್ಟನ್ನೂ ತೆಗೆದುಕೊಂಡು, ಅತನ ಬಳಿಗೆ ಮೆಲ್ಲನೆ ನಡೆದ.

ಮೊದಲು ಆ ಕೆಂಪು ನಿಲುವಂಗಿಯ ದೇವರಿಗೆ ಇವನ ಪ್ರಾರ್ಥನೆ ಕಿವಿಗೆ ಬೀಳಲಿಲ್ಲವೆಂದು ಕಾಣುತ್ತದೆ; ಹುಡುಗನನ್ನು ನೋಡದವನಂತೆ, ಮಗ್ಗುಲಲ್ಲಿ ನಡೆದುಕೊಂಡು ಮುನ್ನಡೆದನು. ಆದರೆ ಉತ್ಸುಕತೆಯಿಂದ ನಡುಗುತ್ತಿದ್ದ ಆ ಮೃದುಧ್ವನಿಯನ್ನು ಕೇಳಿದ ಕೂಡಲೇ ಅವನ ಅಸಹಿಷ್ಣುತೆ ಮಾಯವಾಯಿತು; ತನ್ನ ಹೆಗಲಮೇಲಿದ್ದ ಭಾರವಾದ ಚೀಲವನ್ನು ಕೆಳಗಿಳಿಸಿ, ಟೊಂಪುವಿನ ಕೈಯಲಿದ್ದ ವಸ್ತುಗಳನ್ನು ಸ್ವೀಕರಿಸಿ, ಅವನು ಹೇಳಿದ ಮಾತುಗಳನ್ನು ಮತ್ತೆ ನುಡಿಯಲು ಅಜ್ಞಾಪಿಸಿದ.

ಟೊಂಪೂ, ಮೊಣಕಾಲೂರಿ, ಅದ್ಭುತವಾದ ದೈವತ್ವವನ್ನು ಹೊಂದಿದ್ದ, ತನ್ನ ಎಸುರಿನಲ್ಲಿದ್ದ ದೇವರ ಕಡೆಗೆ ತನ್ನ ಭಯಭರಿತವಾದ ಕಂದುಬಣ್ಣದ ಕಣ್ಣುಗಳಿಂದ, ಕ್ರಿಸ್‌ಮಿಸ್ ದೇವರ ನೀಲಿ ಕಣ್ಣುಗಳನ್ನೇ ನಿಷ್ಕಪಟವಾಗಿ ನೋಡುತ್ತಾ, ನಡುಗುವ ಧ್ವನಿಯಲ್ಲಿ ತನ್ನ ಕೋರಿಕೆಯನ್ನು ತಿಳಿಸಿದ.

ಕನ್ನಡ ನಿಬಂಧಗಳು

(ಹೈಸ್ಕೂಲಿನ ಮೇಲಿನ ನರ್ಗಗಳಿಗಾಗಿ)

ನಿಬಂಧ ಬರೆಯುವ ಕ್ರಮವಲ್ಲದೆ, ಅನೇಕ ಮಾದರಿಗಳನ್ನು ಇಲ್ಲಿ ರಸವತ್ತಾದ ಶೈಲಿಯಲ್ಲಿ ಬರೆದು ತೋರಿಸಿದೆ. ವಿದ್ಯಾರ್ಥಿಗಳಿಗೆಲ್ಲ ಪರೀಕ್ಷೆಯ ದೃಷ್ಟಿಯಿಂದಲೂ ತೀರ ಉಪಯುಕ್ತ ಪೊತ್ತಿಗೆ.

ಲೇಖಕರು: ಎಸ್. ರಮಾನಂದ ಬಿ. ಎ.

ಬೆಲೆ: ಹನ್ನೆರಡು ಆಣೆ

ಮುಖ್ಯ ಮಾರಾಟಗಾರರು:

ರಾಮಾಶ್ರಯ ಬುಕ್‌ಡಿಪೊ, ಧಾರವಾಡ

ದೇವರು ತನ್ನ ಉದ್ದವಾದ ಗಡ್ಡವನ್ನು ಸವರಿಕೊಳ್ಳುತ್ತಾ ಎಲ್ಲವನ್ನೂ ಕೇಳಿದ. ಟೊಂಪುವಿಗೆ, ದೇವರ ಗಡ್ಡ-ತಲೆಗೂದಲು ಅಷ್ಟು ಬೆಳ್ಳಗಿದ್ದಾಗ್ಯೂ, ಕೈ ಎಷ್ಟು ಬಲಯುತವಾಗಿ ಕೆಂಪಗಿತ್ತು ಎಂಬುದು ತಿಳಿಯಿತು. ಆಗ ಆ ಮುಂಜಿನಂತಿದ್ದ ಗತ್ತು ಪಾಲಾಯಿತು. ದೇವರು ಮಂದಹಾಸವನ್ನು ಬೀರಿದ. ತನ್ನ ಕೆಂಪನೆಯ ಕೈಯನ್ನು ಜಾಚಿ, ಟೊಂಪುವಿನ ಕರಿಯ ಕೂದಲ ತಲೆಯನ್ನು ಸವರಿದ. ಉತ್ಸಾಹಕರವಾದ ಮಾತುಗಳನ್ನಾಡಿ, ಸಮಾಧಾನಪಡಿಸಿ, ಖಂಡಿತ—ಒಂದಲ್ಲ ಒಂದು ದಿನ—ಅವನ ಪ್ರಾರ್ಥನೆಗೆ ಮನ್ನಣೆ ಉಂಟಾಗಿ, ಅವನ ತಂದೆ ಹಿಂದಿರುಗುವನೆಂದು ಹೇಳಿದ.

ಟೊಂಪೂ ಆ ಮಾತುಗಳನ್ನು ಕೇಳಿ ಆನಂದ-ಕೃತಜ್ಞತೆಗಳಿಂದ ತುಂಬಿ, ಅವನ ಪಾದಗಳಿಗೆ ಬಗ್ಗಿ ನಮಸ್ಕರಿಸಿದ. ಹಾಗೆ ಮಾಡುತ್ತಿದ್ದಾಗ, ಆ ಕ್ರಿಸ್‌ಮಸ್ ದೇವರು ಚೀಲವನ್ನು ಬಿಚ್ಚಿ, ಒಂದು ಲೋಹದ ಬುಗುರಿಯನ್ನು ತೆಗೆದದ್ದನ್ನು ನೋಡಲಿಲ್ಲ. ಅದನ್ನು ಅವನ ಕೈಗೆ ದೇವರು ಕೊಟ್ಟಾಗ ಅವನು, ತನು ಯಾವುದೋ ಪವಿತ್ರವಾದ ರಕ್ಷೆ ಎಂಬಂತೆ ಆಶ್ಚರ್ಯದಿಂದ ಅದನ್ನೇ ನಿಟ್ಟಿಸುತ್ತಿದ್ದ. ಕ್ರಿಸ್‌ಮಿಸ್ ದೇವರು ಅದನ್ನು ಮತ್ತೆ ಅವನ ಕೈಯಿಂದ ತೆಗೆದುಕೊಂಡು, ಅದನ್ನು ನೆಲದಮೇಲಿಟ್ಟು ಒಂದು ಬೆಟ್ಟನಿಂದ ಒತ್ತಿದಲ್ಲಿ, ಹೇಗೆ ಅದರ ಸುಂದರವಾದ ಬಣ್ಣಗಳನ್ನು ತೋರಿಸಿಕೊಂಡು ಗಿರ್ರನೇ ತಿರುಗುತ್ತದೆ—ಎಂಬುದನ್ನು ತೋರಿಸಿದ.

ತಕ್ಷಣ ಟೊಂಪುವಿಗೆ ಅರ್ಥವಾಯಿತು: ಅಹಾ! ಇದು ಒಂದು ಹೊಸ ತರದ ಪ್ರಾರ್ಥನೆಯು ಚಕ್ಕನಿರಬಹುದಲ್ಲವೆ? ಧರ್ಮದ ಅಧಿದೇವತೆ ಎನ್ನಿಸಿದವರೆಲ್ಲಾ ಇದೇ ತರದ ಪ್ರಾರ್ಥನೆಯು ಚಕ್ರವನ್ನು ಹಿಡಿದೇ ಅಲ್ಲವೇ ದೇವರನ್ನು ಒಲಿಸಿಕೊಂಡದ್ದು?

ಅದರ ಮೇಲಿದ್ದ ಬಣ್ಣಗಳೆಲ್ಲಾ, ಪವಿತ್ರವಾದ ಬೌದ್ಧ ಮಂಟಪಗಳಲ್ಲಿರುವ ಸ್ತೋತ್ರದ ಪಟಗಳ ಮೇಲಿರುವಂಥ ರಕ್ಷೆಗಳಲ್ಲವೆ?

ಅದಕ್ಕಾಗಿಯೇ ಅಲ್ಲವೇ ಈ ಕ್ರಿಸ್‌ಮಿಸ್ ದೇವರು. ತನ್ನ "ತಂದೆಯನ್ನು ಹಿಂತಿರುಗಿ ಪಡೆಯಲು ಪ್ರಾರ್ಥನೆಮಾಡು" ಎನ್ನುವಂತೆ ಇದನ್ನು ಕೊಟ್ಟದ್ದು!

ಟಿಂಪೂ ಮಿಂಚಿನ ವೇಗದಲ್ಲಿ ಇದನ್ನು ಗ್ರಹಿಸಿದ. ಆ ಬುಗುರಿಯ ವೇಗ ಕಡಿಮೆ ಆಗುತ್ತಿದ್ದಂತೆ, ತನ್ನ ಪುಟ್ಟ ಕೈಯನ್ನು ಚಾಚಿ ಮತ್ತೆ ಅದನ್ನು ತಿರುಗಿಸಲು ಯತ್ನಿಸಿದ. ಆದರೆ ಅವನು ತನ್ನ ಪ್ರಾರ್ಥನೆಯ ಚಕ್ರದಿಂದ ತಲೆಯನ್ನು ಮೇಲೆತ್ತಿದಾಗ, ಆ ಕೆಂಪು ನಿಲುವಂಗಿಯ ವ್ಯಕ್ತಿ ತನ್ನ ಪಕ್ಕದಲ್ಲಿರಲಿಲ್ಲ. ಕತ್ತಲು ಕವಿಯುತ್ತಿದ್ದ ದಾರಿಯಲ್ಲಿ ಒಬ್ಬನೆ ನಡೆದು ಹೋಗುತ್ತಿದ್ದ.

ಟಿಂಪೂವಿನ ಹೃದಯ ಉದ್ವೇಗದಿಂದ ತುಂಬಿತ್ತು. ಮನೆಗೆ ಅತುರಾತುರವಾಗಿ ಹಿಂದಿರುಗಿದ, ಅವನಿಗೀಗ ತಂದೆ ಮನೆಗೆ ಬರಲು ಮಾಡಬೇಕಾದ ಕಾರ್ಯ ತಿಳಿದಿತ್ತು.

ರಾತ್ರಿ ಕತ್ತಲು ಪೂರ್ತಿ ಕವಿದಿದ್ದಾಗ, ತಾಯಿ ಮಲಗಿದ ಮೇಲೆ, ಟಿಂಪೂ ಮೆಲ್ಲನೆ ಎದ್ದು, ಪವಿತ್ರರಕ್ಷೆಯಾದ ತನ್ನ ಪ್ರಾರ್ಥನೆಯ ಚಕ್ರ–ಆ ಲೋಹದ ಬುಗುರಿಯನ್ನು ಹಿಡಿದುಕೊಂಡು, ಹುಷಾರಿನಿಂದ ಹೊರಗೆ ಹೊರಟನು. ಆ ಹಿಮದ ಗುಡ್ಡದ ಮೇಲೆ ಕುಳಿತು ತನ್ನ ಪ್ರಾರ್ಥನೆಯ ಚಕ್ರವನ್ನು ತಿರುಗಿಸುತ್ತಾ ಪ್ರಾರ್ಥಿಸಿದನಲ್ಲಿ, ದೇವರ ಬಳಿಗೆ ತನ್ನ ಪ್ರಾರ್ಥನೆ ಸುಲಭವಾಗಿ ಕೇಳಿಸಬಹುದೆಂಬ ಆಶೆಯಿಂದ ಹೊರ. ಹೊರಟ, ಆ ಪುಟ್ಟ ಟಿಂಪೂ,

ಕೆಳಗೆ ಊರಿನ ದೀಪಗಳು ಜೋವನಾಲೆಯಂತೆ ಪ್ರಕಾಶಿಸುತ್ತಿದ್ದುವು. ಮೇಲೆ ಮಂಜಿನ ಬೆಟ್ಟಗಳು ಅಗಸದ ಬಳಿಗೆ ಕಣ್ಣಿಗೆ ಕಾಣಿಸುವ ತನಕ ರಜತಪರದೆಯಂತೆ ಥಳಥಳಿಸುತ್ತಿದ್ದುವು. ಇವನು ಮೇಲೆ ಹತ್ತುತ್ತಿದ್ದಂತೆ ಊರಿನ ದೀಪಗಳು ಬಂಪೊಂದಾಗಿ ಕಣ್ಮರೆಯಾದುವು. ನಕ್ಷತ್ರಗಳು ಬೆಳಗುತ್ತಿದ್ದುವು. ಬೆಟ್ಟಗಳ ರಜತವರ್ಣ ಪ್ರಪಂಚವನ್ನೇ ಆಳುತ್ತಿದ್ದಂತೆ ಕಾಣಿಸುತ್ತಿತ್ತು.

ಯಾಂತ್ರಿಕವಾಗಿ ತನ್ನ ಪುಟ್ಟ ಕೈಯಿಂದ ತನ್ನ ಪ್ರಾರ್ಥನೆಯ ಚಕ್ರವನ್ನು ತಿರುಗಿಸಲು ಅನುವಾದ. ರಾತ್ರಿ ಶೀತದಿಂದ ಮೈ ಹೆಪ್ಪು-ಗಟ್ಟಲು ಮೊದಲಾಯಿತು. ಆದರೂ ಟಿಂಪೂವಿನ ನಿರಂತರ ಪ್ರಾರ್ಥನೆ ಮಾತ್ರ ಸಾಗಿದ್ದಿತು.

ನರಿಗಳ ಕೂಗು ಬೆಟ್ಟದ ಸುತ್ತ ಕೇಳಿಸುತ್ತಿತ್ತು. ಕೆಳಗೆ ಊರಿನಲ್ಲಿ, ಮನೆಯ ಕಡೆಗೆ ಹಿಂದಿರುಗುತ್ತಿದ್ದ ಕಡೆಯ ರಿಕ್ಷಾಗಾಡಿಗಳ ಗಂಟೆಯ ನಿನಾದ ಕೇಳಿಸುತ್ತಿತ್ತು. ಮೇಲಿನ ಚರ್ಚ್‌ನಿಂದ ಸಂತೋಷ-ಸಮಾರಂಭದ ಸಲುವಾಗಿ ಹಾಡುತ್ತಿದ್ದುದು ಕೇಳಬರುತ್ತಿತ್ತು. ಒಂದು ಗಂಟೆಯ ಮೇಲೆ ಈ ಎಲ್ಲಾ ಶಬ್ದಗಳೂ ಅಡಗಿ ನೀರವವಾಯಿತು. ಅವನ, ಅವಿಚ್ಛಿನ್ನವಾದ, ಬಿಡುವಿಲ್ಲದ ಪ್ರಾರ್ಥನೆಯ ಚಕ್ರದ ನಾದ, ಕ್ರಿಸ್‌ಮಿಸ್ ದೇವರಿಗಾಗಿ ಅವನ ಪ್ರಾರ್ಥನೆ, ಎರಡನ್ನುಳಿದು, ಈ ಯಾವ ವಸ್ತುತ್ವವೂ ಟಿಂಪೂವಿನ ಪ್ರಪಂಚಕ್ಕೆ ಅರಿವಾಗಲಿಲ್ಲ.

ನಿಧಾನವಾಗಿ ತಾರೆಗಳು, ಆ ಕ್ರಿಸ್‌ಮಿಸ್ ರಾತ್ರಿಯಂದು ತಮ್ಮ ಅದ್ಭುತವಾದ ಮರುಳುಗೊಳಿಸುವ ಸೌಂದರ್ಯವನ್ನು ಬೀರುತ್ತಾ ಮೇಲೇರಿದುವು. ಅವುಗಳ ದಿವ್ಯ ತೇಜಸ್ಸಿನಲ್ಲಿ, ಆ ಲೋಹದ ಬುಗುರಿ, ಮುಗ್ಧವಾಗಿ, ರಮ್ಯವಾಗಿ, ಟಿಂಪೂವಿನ ಹಾರ್ದಿಕ ಪ್ರಾರ್ಥನೆಗೆ ಸರಿಯಾಗಿ ತಿರುಗುತ್ತಿತ್ತು.

ಅವನ ಪುಟ್ಟ ಕೈಗಳು ಹಿಂದಕ್ಕೂ, ಮುಂದಕ್ಕೂ, ಬುಗುರಿಯ ಮೇಲೆ ಆಡುತ್ತಿದ್ದುವು. ಅವುಗಳ ಮೇಲಿನ ಬಣ್ಣಗಳು ಗಿರಗಿರನೆ ತಿರುಗುತ್ತಿದ್ದುವು. ಅವನ ಪ್ರಾರ್ಥನೆ ಮಂಜಿನಲ್ಲಿ ತೂರಿ, ಕೆಳಗಿನ ಊರು, ಮೇಲಿನ ನಕ್ಷತ್ರಗಳು ಎರಡೂ—ಟಿಂಪೂವಿನ ಕಡೆಯಿಲ್ಲದ ಪ್ರಾರ್ಥನೆಯನ್ನು ಕೇಳಿ, ಬುಗುರಿಯಂತೆ ಅವೂ ಸುತ್ತುತ್ತಿದ್ದಂತೆ ಭಾಸವಾಯಿತು. ಅವನ ಕೈಗಳು ಮಾತ್ರ ಕೆಲಸವನ್ನು ಬಿಡಲಿಲ್ಲ.

ಅವನಿಗೆ ಎಚ್ಚರವಾದಾಗ, ಕ್ರಿಸ್‌ಮಿಸ್ ಗಂಟೆಗಳ ಅಖಂಡ ನಿನಾದ ತೂರಿಬರುತ್ತಿತ್ತು. 'ನಿದ್ದೆಮಾಡಿಬಿಟ್ಟೆನಲ್ಲಾ' ಎಂಬ ನಾಚಿಕೆಯಿಂದ, ಅಚ್ಚರಿಯಿಂದ, ಚಳಿಯಿಂದ ಮರಗಟ್ಟದ ಟಿಂಪೂ ಎದ್ದ; ತಕ್ಷಣ ತನ್ನ ಪ್ರಾರ್ಥನೆಯ ಚಕ್ರವನ್ನು ತಿರುಗಿಸಲು ಆಣಿಯಾದ. ಸೂರ್ಯನ ಹೊಂಗಿರಣಗಳು ಪೂರ್ವದಲ್ಲಿ ಕಾಣಿಸಿಕೊಂಡಾಗ, ಬೆಳಗಾಯಿತೆಂಬ ಚಿಹ್ನೆ ತೋರಿದಾಗ, ತನ್ನ ಸೆಟೆದುಕೊಂಡಿದ್ದ ಕೈಕಾಲು-

(೨೫ನೆಯ ಪುಟ ನೋಡಿರಿ)

ಜಯಂತಿಯ ೧೬—೧೭ನೆಯ ಸಂಪುಟಗಳು

ಕೆಲವೇ ಪ್ರತಿಗಳು ಉಳಿದಿವೆ!

ಒಂದೊಂದು ಸಂಪುಟವೆಂದರೆ ಒಂದೊಂದು ಜ್ಞಾನಕೋಶದ ವಿಭಾಗವಿದ್ದಂತೆ.

ವಾಚನಾಲಯಗಳವರು ಈ ಯೋಗವನ್ನು ಕಳೆದುಕೊಳ್ಳಲಾಗದು!

೪ ರೂ. ೬ ಆಣೆಗಳನ್ನು M. O. ಮೂಲಕ ಕಳುಹಿಸಿದರೆ, ಅಂಚೆಯ ವೆಚ್ಚವನ್ನು ನಾನೇ ವಹಿಸಿ ೧೨ ಸಂಚಿಕೆಗಳನ್ನು ಕಳುಹುವೆವು. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಿರಿ.

ವ್ಯವಸ್ಥಾಪಕ 'ಜಯಂತಿ' ಧಾರವಾಡ

ವ್ಯಷ್ಟಿ-ಸಮಷ್ಟಿವಾದಗಳು

(ವಿಚಾರಪ್ರಚೋದಕ ಪ್ರಬಂಧ)

ಶ್ರೀ. ಬಿ. ಎಚ್. ಶ್ರೀಧರ ಎಂ. ಎ., ಕೆನರಾ ಕಾಲೇಜ್, ಕುಮಟಾ

ವ್ಯಕ್ತಿಹಿತ ಮುಖ್ಯವೋ, ಸಮಾಜಹಿತ ಮುಖ್ಯವೋ—ಎಂಬುದು, ಸನಾತನಕಾಲದಿಂದಲೂ ನಡೆದುಕೊಂಡು ಬಂದ ಸಮಸ್ಯೆಯಾಗಿದೆ. ಸಮಸ್ಯೆಗಳೆನಿಸಿಕೊಳ್ಳುವುನೆಲ್ಲ ಸಂಯಮ-ಸಂಸ್ಕೃತಿಗಳಿಂದಲೇ ಬಿಡಬೇಕಲ್ಲದೆ, ಕೇವಲ ತರ್ಕದ ತಗರುಗಾಳಿಗದಿಂದಲ್ಲ.

ಜ್ಞಾನಸಂಗ್ರಹವೆಂದರೆ ಅನೇಕ ಚೂರುಗಳಲ್ಲಿ ಕೆಲವನ್ನು ಆಯ್ದುಕೊಂಬುದು. ಆ ಆಯ್ಕೆಯಲ್ಲಿ ಜ್ಞಾತಾರನ ಬೇಕು-ಬೇಡಗಳ ಪ್ರವೃತ್ತಿ ಕಾರ್ಯಪರವಾಗುತ್ತದೆ; ಬೇಕೆಂದು ಆಯ್ದುಕೊಂಡ ಜ್ಞಾನ-ಲಪಕ್ಕೆ ಮಹತ್ತ್ವವುಂಟಾಗುತ್ತದೆ. ಅಂಥ ಗಣ್ಯತೆಯು ಜ್ಞಾತಾರನ ಎತ್ತಿ ಒತ್ತಿಹಿಡಿವ ಕಾರ್ಯದಿಂದ ಒಂದು ಸಂದರ್ಭದಲ್ಲಿ ಹೆಚ್ಚಿನ ಚೋದಕಶಕ್ತಿಯನ್ನು ಹೊಂದುತ್ತದೆ. ವಾದಗಳೆಂದರೆ ಅಂತಹ ಚೋದನಾಸಮರ್ಥಜ್ಞಾನ ಪದ್ಧತಿಗಳು.

ಉದ್ದೇಶದ ಉಪಾಧಿಯನ್ನು (ಶರ್ತವನ್ನು) ಕಿತ್ತೊಗೆದರೆ ಯಾವ ಜ್ಞಾನಾಂಶವನ್ನೂ ಒಳ್ಳೆಯದು ಅಥವಾ ಕೆಟ್ಟದೆಂದು, ಉಪಯುಕ್ತ ಅಥವಾ ನಿರುಪಯೋಗಿ ಎಂದು ವರ್ಗೀಕರಿಸಲಸದಳ. ಬಹುಶಃ ಅದೇ ಮೇರೆಗೆ ನಿರುದ್ದೇಶವುಳ್ಳ ಕೇವಲ ಅರಿವು ಸತ್ಯ ಅಥವಾ ಸುಳ್ಳು ಎಂಬುದರಿಂದಲೂ ಸುಂದರ ಅಥವಾ ಅಸುಂದರ ಎಂಬುದರಿಂದಲೂ ಮುಕ್ತ. ಅದು ಕೇವಲ ಅದು; ಹಾಗೆಹೀಗಿನದಲ್ಲ, ಅಂಥ ಇಂಥದಲ್ಲ—ಬುದ್ಧಿ, ಭಾವನೆ, ಇಚ್ಛೆ ಎಂಬೀ ಮೂರರಲ್ಲಿ ಯಾವ ಒಂದೇ ಒಂದೂ ಅಲ್ಲ!

ಉದ್ದೇಶಜ್ಞಾನವಿದ್ದೆಡೆ ಬುದ್ಧಿ, ಭಾವನೆ, ಇಚ್ಛೆಗಳ ಕಾರ್ಯ ಆರಂಭವಾಗುತ್ತದೆ—ಅಥವಾ ಆ ಕಾರ್ಯದ ಫಲವೇ ಉದ್ದೇಶಜ್ಞಾನ ಎಂದೂ ಆಗುತ್ತದೆ, ಮತ್ತೊಂದು ದೃಷ್ಟಿಯಿಂದ. ಎಲ್ಲ ಉದ್ದೇಶವೂ ಮೊದಲು ಮತ್ತು ಕೊನೆಗೆ ವೈಯಕ್ತಿಕ; ಮಧ್ಯದಲ್ಲಿ ಸಾಮಷ್ಟಿಕ-ವಾಗಬಹುದು ಅಥವಾ ಆಗದೆ ಉಳಿಯಬಹುದು. ಸ್ವಾರ್ಥಿಯ ಮನದಲ್ಲಿ ವ್ಯಷ್ಟಿಹಿತವಿದೆ; ಸಮಷ್ಟಿಹಿತವಿಲ್ಲ. ಅದರ ಕೇವಲತ್ವವೇ ವ್ಯಷ್ಟಿವಾದ (Individulaism). ಆದರೆ ವ್ಯವಹಾರದಲ್ಲಿ ಎಲ್ಲ ವಾದಗಳೂ ಅಕೇವಲ, ಅಸಂಪೂರ್ಣ. ಆದುದಂದ ವ್ಯಷ್ಟಿವಾದ-ನಿಷ್ಠ ಸಮಾಜದಲ್ಲೂ ಸಮಷ್ಟಿಹಿತ ಸಾಧಿಸಲ್ಪಡುತ್ತಿರುವುದು ಸಂವೇದ್ಯವಾಗಿದೆ; ಆದರಿಂದಲೇ ಅದು ಸಹ್ಯವಾಗಿದೆ. ಕೆಲ ಜನರಿಗೆ ವಾದದಲ್ಲಿ ಇರುವಷ್ಟು ವ್ಯಷ್ಟಿನಿಷ್ಠೆ ವ್ಯವಹಾರದಲ್ಲಿ ಬಾರದಿರುವಾಗ, ವ್ಯಷ್ಟಿವಾದ ಚೆಂದ; ಆದು ಬಂದ ನಿಮಿಷದಲ್ಲಿ ವ್ಯಕ್ತಿ-ವ್ಯಕ್ತಿಗಳಲ್ಲಿ ಘರ್ಷಣವುಂಟಾಗಿ ಮನುಕುಲ ನಾಶವಾಗುವುದು ಕೇವಲಾನುಮಾನ.

ಸಮಷ್ಟಿವಾದನಿಷ್ಠ ಸಮಾಜದಲ್ಲಿ ಸಮಷ್ಟಿಹಿತದ ದೃಷ್ಟಿ ಹುಟ್ಟಿರುವುದ, ವ್ಯಷ್ಟಿಹಿತದ ದೀರ್ಘಕಾಲಿಕ ರಕ್ಷಣೆಯ ದೂರ-ದೃಷ್ಟಿಯ ಅವಲೋಕನದಿಂದ. ವ್ಯಕ್ತಿಕೈವಲ್ಯ ಘರ್ಷಣಾಸ್ಪದ. ವಾಗುವಲ್ಲಿ ಸಮಷ್ಟಿಕೈವಲ್ಯಕ್ಕೆ ಪ್ರಾಧಾನ್ಯವನ್ನು ಕೊಟ್ಟು ಜನ ಬದುಕುತ್ತಿದೆ ಇಲ್ಲಿ ಸಮಷ್ಟಿಹಿತದ ಮೂಲಕ ತದಂಗವಾದ ವ್ಯಷ್ಟಿಹಿತ ಸುಭದ್ರವಾಗುವುದೆಂಬ ಸ್ವಾರ್ಥಪರಾರ್ಥದಲ್ಲಿ ಅಂತರ್ಗತವಾಗಿ ಪ್ರವರ್ತಿಸುತ್ತದೆ. ಅದುದರಿಂದ ವ್ಯಷ್ಟಿವಾದ ಪ್ರಕಟಸ್ವಾರ್ಥ, ಆದಿ-ಮಧ್ಯಾಂತದಲ್ಲಿ ಸ್ವಾರ್ಥಪ್ರಧಾನ; ಸಮಷ್ಟಿವಾದ ಪ್ರಚ್ಛನ್ನ-ಸ್ವಾರ್ಥ, ಆದ್ಯಂತದಲ್ಲಿ ಮಾತ್ರ ಸ್ವಾರ್ಥಪ್ರಧಾನ.

ಸಂನ್ಯಾಸಿಗಳಲ್ಲದೆ ಯಾರೂ ಸ್ಥಾಯಿಸ್ವರೂಪದ ನಿಃಸ್ವಾರ್ಥ-ವುಳ್ಳವರಲ್ಲ. ಅದುದರಿಂದ, ಭಾರತೀಯ ಸಮಾಜ ಮೊದಲಿಂದಲೂ ಸಮಷ್ಟಿಹಿತಕ್ಕೆ ಪ್ರಾಧಾನ್ಯಕೊಡುತ್ತ ಬಂದಿದೆ. ಆದರೆ ಇಲ್ಲಾದರೂ ಅದಕ್ಕೆ ಪ್ರಾಧಾನ್ಯವಲ್ಲದೆ ಕೇವಲತ್ವವಿಲ್ಲ. ಆದುದರಿಂದ ಇಲ್ಲಿ ಬೇಕಾದಷ್ಟು ಸರ್ವಾಧಿಕಾರಿಗಳಂಥವೂ ಕೃಪಣಾಗ್ರೇಸರ ಚಕ್ರವರ್ತಿ-ಗಳೂ ಅಹಂಕಾರ ರಸಾಯನಭೋಕ್ತರೂ ಆಗಿ ಹೋಗಿದ್ದಾರೆ. ಆಗಿದ್ದಾರೆ. ಲೋಕಕಂಟಕ ಅಸುರರ ಹಾವಳಿ ಇಲ್ಲೇನೂ ಕಡಿಮೆ ಆಗಿಲ್ಲ; ಇಂದೂ ಹಿರಣ್ಯಾಕ್ಷ-ಹಿರಣ್ಯಕಶಿಪು, ರಾವಣ-ಕುಂಭಕರ್ಣ, ಶಿಶುಪಾಲ-ದಂತವಕ್ರರು ಇದ್ದೇ ಇದ್ದಾರೆ—ಇಂಥ ವ್ಯಷ್ಟಿವಾದಿಗಳಿಗೆ ಇಲ್ಲೆಡೆಯಿದೆ. ಇವರ ಹಾವಳಿ ಹೆಚ್ಚಾದಾಗಲೆಲ್ಲ 'ಸಮಾಜವಾದಿ ಸ್ವರೂಪದ ಸಮಾಜ ರಚನೆಗೆ' ನಮ್ಮಜನ ನಾನಾರೂಪದಿಂದ ಪ್ರಯತ್ನಿಸುತ್ತ ಬಂದಿದೆ.

ಮೇಲಿನ ವಿಚಾರದಿಂದ ವ್ಯಷ್ಟಿವಾದಿಗಳಲ್ಲೂ 'ಸಮಾಜ' ಇದೆ; ಸಮಷ್ಟಿವಾದಿಗಳಲ್ಲೂ 'ಸಮಾಜ' ವಿದೆ ಎಂಬುದು ಗೊತ್ತಾಗುತ್ತದೆ.

ಇದು ಲೋಕಯಾತ್ರೆ. ಪರಲೋಕಯಾತ್ರೆಯಲ್ಲಿ ಈ ವರೆಗೂ ಇಲ್ಲಿ ತತ್ತ್ವತಃ ವ್ಯಷ್ಟಿವಾದವೇ ಇತ್ತು. ಅದರೀಗೀಗ ಅಲ್ಲೂ ಸಮಷ್ಟಿವಾದ ತಲೆಹಾಕಿದ್ದು ಕಂಡುಬರುತ್ತದೆ. 'ಉದ್ಧರೇದಾತ್ಮನಾತ್ಮಾನಂ' ಅವನವನ ಪಾಪ-ಪುಣ್ಯ ಅವನವನಿಗೆ—ಎಂಬುದರ ಜೊತೆಗೆ, ಸಾಮೂಹಿಕ ಮೋಕ್ಷಸಾಧನೆಯ ಧ್ವನಿ ಕೇಳಬರುತ್ತದೆ; ಆದರೆ ಸಾಧನೆಯಲ್ಲಿ ಸಾಮೂಹಿಕತೆ ಉಳಿದರೂ ಸಿದ್ಧಿಯಲ್ಲಿ ಅದು ಉಳಿಯುವುದು ಅಸಂಭವ. ವ್ಯಷ್ಟಿಮುಕ್ತಿಯ ದ್ವೈತದಲ್ಲೂ ಮುಕ್ತಿಸಿದ್ಧಿಯ ಸಕೃದ್ದೇಶಕಾಲಿಕತೆಯ ಕಲ್ಪನೆಯಿಲ್ಲ. ಸಮಷ್ಟಿರೂಪದ ಅಧ್ಯಾತ್ಮಿಕ ಕೇವಲಾವಸ್ಥೆ ದೇಶಕಾಲಾತೀತವಾದ ಅನೈತ್ಯತೆ; ಅಲ್ಲಿಯೂ ಜಗತ್ತಿನ ವ್ಯಷ್ಟಿಯಿಂದ ಅಂಥ ವ್ಯಷ್ಟಿತ್ವಹೋಗಿ ಸಮಷ್ಟಿತ್ವ ಬರುವುದು ಯಾವುದಾದರೊಂದು ವ್ಯಕ್ತಿಗೆ; ಸರ್ವವ್ಯಷ್ಟಿಗಳು ಏಕಕಾಲ-ದೇಶದಲ್ಲಿ ಆಧ್ಯಾತ್ಮಿಕವಾಗಿ ಸಮಷ್ಟೀಕೃತವಾಗುವ ಭಾವಸಿದ್ಧಿ ಅಸಂಭವವಾಗಿದೆ.

ವ್ಯಷ್ಟಿಯ ಗುರಿ ವ್ಯಷ್ಟಿಯೇ ಆದರೆ, ವಿಕಾಸವೆಂಬ ಮಾತಿಗೆ ಅರ್ಥವಿಲ್ಲ. Becoming ಬದಲಾಗುವುದು—ಎಂಬ ಕಾರ್ಯ ಜಗತ್ತಿನಲ್ಲಿ ಇರುವವರೆಗೆ ಚಿಕ್ಕದು ದೊಡ್ಡದಾಗುವುದನ್ನು ವಿಕಾಸ, ಪ್ರಗತಿ ಎಂದೂ, ಅದು ಮತ್ತಷ್ಟು ಚಿಕ್ಕದಾಗುವುದನ್ನು ಕ್ಷೀಣತೆ, ಅಧಃಪಾತ ಎಂದೂ ಹೇಳಲಾಗುತ್ತದೆ. ವ್ಯಷ್ಟಿಯು Minimum ಕನಿಷ್ಠಾವಧಿಕ; ಸಮಷ್ಟಿಯು Maximum ಪರಮಾವಧಿಕ. ಅಣುಪ್ರಮಾಣದ ಭೌತಿಕ-ಮಾನಸ ಪದಾರ್ಥಘಟಕ ಪರಮ ಮಹತ್ ಪ್ರಮಾಣದ ಮೇರೆಯನ್ನು ಮುಟ್ಟುವ ಪ್ರಯತ್ನವೇ ಪ್ರಗತಿ. ಆದುದರಿಂದ ವ್ಯಷ್ಟಿಗೆ ಸಮಷ್ಟಿಯೇ ಗುರಿ. ವ್ಯಷ್ಟಿಸ್ವದ ಅತ್ಯಂತಿಕ ಭದ್ರತೆ ಇರುವುದು ಸಮಷ್ಟಿಸ್ವವಾಗುವುದರಲ್ಲಿ. ಆದುದರಿಂದ ಲೋಕಜೀವನದ ವ್ಯಷ್ಟಿಸ್ವರಕ್ಷಣದ ಪ್ರಯತ್ನವು ಲೋಕೋತ್ತರವಾದ ಸಮಷ್ಟಿತ್ವದಲ್ಲಿ ಸಮಾವೇಶ ಹೊಂದುವುದರಲ್ಲಿ ಮುಗಿಯುವುದು. ಸಮಷ್ಟಿಯೊಂದು ಬಗೆಯ ಅದ್ವೈತ; ವ್ಯಷ್ಟಿಕಲ್ಪನೆ ನಾನಾತ್ವಘಟಿತ.

"ಜನ ಕುರಿಗಳಂತೆ ನಡೆದುಕೊಂಬುದು ಪ್ರಜಾಸತ್ತೆಯಲ್ಲಿ. ಪ್ರಜಾಸತ್ತೆಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯ, ಅಭಿಪ್ರಾಯ ಹಾಗೂ ಕಾರ್ಯಗಳನ್ನು ಸಂರಕ್ಷಿಸಲಾಗುತ್ತದೆ. ರಾಜ್ಯ (ಸರಕಾರ)ದ ಹಿಂಸೆ, ವ್ಯಕ್ತಿಕೊಡುವ ಹಿಂಸೆಗಿಂತ ಕ್ರೂರತರ" ಎಂದಿದ್ದಾರೆ ಗಾಂಧಿ. ಇದು ಕೆಲ Mass Hystiria ಗುಂಪುಹೆಜ್ಜೆಹಿಡಿದ ಜನಗಳ ಕಾರ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಆಡಿದ ಮಾತು. ಏಕೆಂದರೆ, ಎಲ್ಲಗುಂಪನ್ನು ಕಟ್ಟುವವನೂ ವ್ಯಕ್ತಿಯೇ. ಅವನು ಜನವನ್ನು ತನ್ನ ಹೆಸರಿನಲ್ಲಿ ಕಟ್ಟುತ್ತಾನೆ; ಅದಕ್ಕೆ ಅನುಕೂಲಮತ ಕಂಡುಬಾರದಲ್ಲಿ ಹತ್ತುಸಮಸ್ತರ ಹೆಸರಲ್ಲಿ ಗುಂಪುಗೂಡಿಸುತ್ತಾನೆ. ಮತ್ತು ಸ್ವಾರ್ಥವನ್ನು ಸಮಾಜಹಿತವನ್ನಾಗಿ ತೋರಿಸುತ್ತಾನೆ; ಅಲ್ಲದೆ, ಯಾವ ಒಬ್ಬನೂ ಗುಂಪಿನ ಬಲವಿಲ್ಲದೆ ಉಪಕಾರ-ಅಪಕಾರಗಳನ್ನು ಗಣ್ಯಪ್ರಮಾಣದಲ್ಲಿ ಮಾಡಲಾರನು. ಸರಕಾರವೆಂದರೆ ಒಂದು ಕೇಂದ್ರವ್ಯಕ್ತಿಯ ಸೂತ್ರಧಾರಿತ್ವದಲ್ಲಿ ನಡೆವ ಗುಂಪು. ಆ ವ್ಯಕ್ತಿಗೆ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಜಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಸೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜಿ. ಮುತ್ತಗಿ**

ಬಹುಮತದ ಬೆಂಬಲವಿದೆ, ಖಾಸಗೀವ್ಯಕ್ತಿಗೆ ಅಷ್ಟು ಮತಬಲವಿಲ್ಲ. ಮತಬಲದಲ್ಲಿ ವ್ಯತ್ಯಾಸವಾದಾಗ ಅವರಲ್ಲಿ ಸ್ಥಾನವಿನಿಮಯವಾಗಿಯೇ ಸಿದ್ಧ. ಈ ಮತಬಲಸಂಗ್ರಹವು ವ್ಯಕ್ತಿಯ ಗುಣ, ಹಣ, ಸೇವೆ, ತ್ಯಾಗ, ತತ್ತ್ವಶ್ರಣಾಲಿ, ಸಾಹಸಿಕತೆ ಮುಂತಾದ ಸಂಘಟಕ ಅಥವಾ ಸಂಪಾದಕ ಇಲ್ಲನೆ ಅರ್ಜುನ ಶಕ್ತಿಯನ್ನವಲಂಬಿಸಿದೆ—ಕಮ್ಯೂನಿಜಮ್ಮಿನಲ್ಲೂ ಅಷ್ಟೇ, ಕೆಪಿಟಾಲಿಜಮ್ಮಿನಲ್ಲೂ ಅಷ್ಟೇ, ಮತಾರ್ಜನೆಯೇ ಶಕ್ತಿ. ಅದರ ಸದುಪಯೋಗ ದುರುಪಯೋಗಗಳು ಪ್ರಧಾನವ್ಯಕ್ತಿಯ ಇಚ್ಛೆಯನ್ನವಲಂಬಿಸಿವೆ. ಕೌಶಲವಂತೆಯಶಸ್ವಿಯಾಗುವಂಥದಿದೆ. ಆದುದರಿಂದ ಲೋಕಜೀವನದಲ್ಲಿ 'ಸಮಾಜ' ನಿರುವಾಗ, ಉತ್ತಮಾದಗಳೆರಡಕ್ಕೂ ಅದೇನೇರೆಗೆ ಮತ ಸಂಗ್ರಹ ಸಾಧಾರಣ. ರಾಜಕೀಯ ಪ್ರಚಾರವೆಂಬುದೊಂದು ಮತಾರ್ಜನದ ಸಾಧನ; ಕೆಲವೊಮ್ಮೆ ಅದು ಸಧನವಾದಾಗಲಷ್ಟೇ ಜಯ ಹೊಂದುತ್ತದೆ. ಆದುದರಿಂದ ವ್ಯಷ್ಟಿ-ಸಮಷ್ಟಿವಾದಗಳಲ್ಲಿ ಸಮಷ್ಟಿವಾದ ಪ್ರಗತಿಶೀಲವೆನಿಸಿದರೂ, ವಾದವನ್ನು ವ್ಯವಹಾರಕ್ಕಿಳಿಸಬಲ್ಲ ವ್ಯಕ್ತಿಯ ಕೈಯಲ್ಲಿ ಅನೆರಡರಲ್ಲಿ ಯಾವೊಂದರ ಹಾನಿಕರ ಅತಿಪ್ರಯೋಗ ಸ್ವಾಧೀನವಾಗಿರುವವರೆಗೆ, ವಾದಕ್ಕೆ ಮತಹಾಕಿದರೆ ಯಾವ ಪ್ರಯೋಜನವೂ ಸಿಗದು. ಭಾರತದ ಮುಗ್ಧ ಪ್ರಜೆಗಿಂದು ವಾದದ ಯೋಗ್ಯತೆಯನ್ನು ತಿಳಿಸುವುದು ಅತ್ಯಗತ್ಯ ರಾಜಕೀಯ ಶಿಕ್ಷಣವಲ್ಲ; ವ್ಯಕ್ತಿಯ ಯೋಗ್ಯತೆಯನ್ನು ತಿಳಿಸುವುದೇ ಅತ್ಯನಿವಾರ್ಯ ಶಿಕ್ಷಣ.

ಭಾರತಕ್ಕಿಂದು ಬೇಕಾದ ವ್ಯಷ್ಟಿವಾದ ಮೇಲಿನ ರೀತಿಯದು. ವ್ಯಕ್ತಿಯ ಮೇಲ್ತನ-ಕೀಳ್ತನಗಳು ವಾದಕ್ಕಿಂತ ಬಲಿಷ್ಠ ಪರಿಣಾಮಕಾರಿಗಳಾಗಿರುವುದರಿಂದ, ಸಮಷ್ಟಿಯ ನೇತೃವಿದು ಪ್ರಧಾನವ್ಯಕ್ತಿಯ ರೂಪಣದಲ್ಲಿ ಕೌಶಲ ಪಡೆಯಬೇಕಾಗಿದೆ. ಕೇವಲ ಸಮಷ್ಟಿವಾದಿಯಾಗಿರದೆ, ಸಮಷ್ಟಿಹಿತಕ್ಕಾಗಿ ಪ್ರಾಮಾಣಿಕವಾಗಿ ಗೆಯ್ಯುವ

ವ್ಯಕ್ತಿಗೆ ಮನ್ನಣೆ ಕೊಡುವುದು ನಮಗಿಂದು ಬೇಕಾದ ವಾದ, ಧ್ಯೇಯ, ದೃಷ್ಟಿ, ಮತ, ಆಚಾರ ಅಥವಾ ಶೀಲ.

ಸ್ವಾಮಾಣಿಕತೆಯ ಬೀಜೆಲ್ಲಿದೆ?—ಎಂಬುದನ್ನು ಹುಡುಕುವುದೇ ನಮಗಿಂದು ಸತ್ಯಾಗ್ರಹ, ಸತ್ಯಶೋಧ. "satyagraha is a relentless search for truth and a determination to reach truth—ಸತ್ಯಾಗ್ರಹವೆಂದರೆ ಸತ್ಯವನ್ನು ಹುಡುಕುವ ನಿರ್ದಯ ಪ್ರಯತ್ನ, ನಿಷ್ಕರುಣಶೋಧ, ನಿರ್ಭಿಡೆಯ ತಪಾಸು; ಸತ್ಯವನ್ನು ಮುಟ್ಟಿಯೇ ಸಿದ್ಧ ಎಂಬ ದೃಢಮನೋ ನಿರ್ಧಾರ" ಎಂದಿದ್ದಾರೆ ಗಾಂಧಿ. ಇಂಥ ಸತ್ಯಕ್ಕಾಗಿ ಅಗ್ರಹಿಸುವುದು ಹೋಗಲಿ, ಅದನ್ನು ಗ್ರಹಿಸುವ ಇಚ್ಛೆಯೂ ಮಂದವಾಗುತ್ತಿರುವುದು ದೇಶದ ಪ್ರಗತಿಗೆ ನಿರಾಶಾದಾಯಕವಾಗಿದೆ. ವಿಧ್ಯಾರ್ಥಿಗಳಲ್ಲಿಯ ಶಿಸ್ತುಗೇಡಿತನದ ಬಗ್ಗೆ ಅಹಮ್ಮದಬಾದಿನಲ್ಲಿ (ಆಗಸ್ಟ್ ಅರಲ್ಲಿ) ನಡೆತೆತ್ತಿದ ರಾಧಾಕೃಷ್ಣನ್ನರ ಮೂರು ಮುದ್ದೆಗಳಲ್ಲಿ, ಶಿಕ್ಷಕರ ಭರತಿಯ ಬಗ್ಗೆ ಯೋಗ್ಯ ಮಟ್ಟವನ್ನು ಏರ್ಪಡಿಸಬೇಕೆಂಬುದೂ ಒಂದು. ಇಂದಿನ ಶಿಕ್ಷಕರ ಮಟ್ಟವನ್ನು ನಿರ್ಣಯಿಸುವವರ ಮಟ್ಟವನ್ನು ಯಾರು ನಿರ್ಣಯಿಸಬೇಕೆಂಬುದನ್ನವರು ಹೇಳಿಲ್ಲ. ಈ "ಮಟ್ಟ"ದ ಪ್ರಶ್ನೆಯಾದರೂ ವಾದದಲ್ಲಿ ಬೆಂದ. ವ್ಯವಹಾರದಲ್ಲಿ ಒಬ್ಬ ಅಧಿಕಾರಿಯು ಮೇಲ್ಕೆಳಗಿನ ರಕ್ಷಕ-ಭಕ್ಷಕರ ಮಟ್ಟಗಳು ಅವನ ಮಟ್ಟದ ನಿರ್ಣಾಯಕ ಹಾಗೂ ಪರಿಣಾಮಕ ಕರ್ತೃಗಳಾಗಿರುವ ಅಂಶವನ್ನು ಮರೆತೇ ನಮ್ಮ ದೇಶದ ಅಡಳಿತ ಅಧಃಪಾತ ಹೊಂದುತ್ತ ನಡೆದಿದೆ. ಬಲಿಷ್ಠ ಅಥವಾ ಪ್ರಭಾವಿ ಇಲ್ಲವೆ ಅಧಿಕಾರಯುಕ್ತ ಅರ್ಥಾತ್ ಬಹುಮತ ಸಮರ್ಥಿತ ವ್ಯಕ್ತಿಯೇ 'ಯೋಗ್ಯ'ವನ್ನು 'ಮಟ್ಟ'ವನ್ನು ನಿರ್ಣಯಿಸಿ ಮಿಕ್ಕವರ ಮೇಲೆ ಹೇರುವ ವ್ಯಷ್ಟಿವಾದ ಭಾರತದಲ್ಲಿ ಬೇರೂರಿದ್ದೇ ಸಮಷ್ಟಿಹಿತದ ವಿಕಾಸ ಮಂದಗತಿ ಹಿಡಿಯುವಂತಾಗಲು ಕಾರಣ. ವಾದಸೌಂದರ್ಯದಿಂದ ವ್ಯಾಮೋಹರಾಗುವ ವಿದ್ವಜ್ಜನರ ನೇತೃತ್ವವು ಭಾರತದ ಮೂಕಕೋಟಿಯ ಕಣ್ಣುಕಟ್ಟಿದೆ. ಆದರಿಂದಲೇ ಜೀವನವೇ "ವಾಕ್+ಮಯ"ವಾಗಿಬಿಟ್ಟಿದೆ. ವ್ಯಷ್ಟಿವಾದದ ಉಕ್ತ ಮಟ್ಟ ನಮ್ಮ ಸಮಾಜವಾದಿ ಸ್ವರೂಪದ ಸಮಾಜವಾದದ ಬುಡಕ್ಕೆ ಒರಲೆಯಂತೆ (ಗೆದ್ದಲಂತೆ) ಹಿಡಿದಿದೆ. ಮಟ್ಟ ನಿರ್ಣಾಯಕರು ಕೃಷ್ಣಸತ್ತೆಯವರಾಗಿರುವವರೆಗೆ ಯಾವ ವಾದವಾದರೂ ವಾದಗ್ರಸ್ತವೇ ಅಲ್ಲವೆ?

(೨೨ನೆಯ ಪುಟದಿಂದ ಮುಂದುವರಿದುದು)

ಗಳನ್ನು ಚಾಚಿ, ಮನೆಯ ಕಡೆಗೆ ಹೊರಟ. ಅವನ ದೇಹ ಚಳಿಯಿಂದ ಬೂರುಚೂರಾಗಿ ನಡುಗುತ್ತಿದ್ದರೂ, ಹೃದಯ ತೃಪ್ತಿಯಿಂದ ಆನಂದದ ಅಭಿಲಾಷೆಯಿಂದ ಉಷ್ಣವಾಗಿತ್ತು. ಖಂಡಿತ ಕ್ರೈಸ್‌ಮಿಸ್ ದೇವರು ರಾತ್ರಿಯ ಪ್ರಾರ್ಥನೆಯಿಂದ ತೃಪ್ತಿಹೊಂದಿರಬೇಕು! ಈಗ ಖಂಡಿತವಾಗಿ ಅವನು ತನ್ನ ಮಂತ್ರರಕ್ಷಿತವಾದ ಶಕ್ತಿಗಳನ್ನು ಮುಂದಿನ ಕೆಲಸಗಳಿಗೆ ಬಿಡುವನು!

ಬಹಳ ಹುಷಾರಾಗಿ, ಮೆಲ್ಲನೆ, ತನ್ನ ಗುಡಿಸಿಲೊಳಗೆ ನುಸುಳಿದ. ತಾಯಿ ಇನ್ನೂ ಮಲಗಿದ್ದಳು. ಚಳಿಯಿಂದ ಆಯಾಸಗೊಂಡಿದ್ದ ಟಿಂಪೂ ಮೆಲ್ಲನೆ ಅವಳ ಪಕ್ಕಕ್ಕೆ ಸೇರಿ ಮಲಗಿದ ಅವನ ತಂದೆ ಬೇಗನೆ ಬರುತ್ತಾರೆ—ಎಂದು ಅವನಿಗೆ ಚೆನ್ನಾಗಿ ತಿಳಿದಿತ್ತು. ಆ ತಿಳಿವಳಿಕೆ ಅವನಿಗೆ ಶಾಂತಿಯನ್ನು ಕೊಟ್ಟಿತು. ತಕ್ಷಣ ಅವನಿಗೆ ನಿದ್ದೆಯೂ ಬಂದಿತು.

ನಿಧಾನವಾಗಿ ಬೆಳಗ್ಗೆ ಅವನೆದ್ದಾಗ ನೋಡಿದ ಮೊದಲ ಮುಖ. ವೆಂದರೆ, ಅವನ ತಂದೆಯದು. ತಂದೆಯ ಮುಖ ತೆಳ್ಳಗಾಗಿ, ವಾಯುಬಂಧಿತವಾಗಿದ್ದರೂ, ಆತ ಇವನನ್ನೇ ನೋಡುತ್ತಾ ಮುಗುಳುನಗೆಯನ್ನು ನಗುತ್ತಿದ್ದ. ತಂದೆಯ ಮುಗುಳುನಗೆಗೆ ತನ್ನದೇ ಆದ ಒಂದು ವಿಶಿಷ್ಟ ರೀತಿಯಿತ್ತು. ಅದನ್ನು ಎಂದೂ ಟಿಂಪೂ ಮರೆತಿರಲಿಲ್ಲ. ಅವನ ತಾಯಿಯೂ ನಗುತ್ತಿದ್ದಳು. ನಗುತ್ತಾ, ಹಾಡಿಕೊಳ್ಳುತ್ತಾ, ಅಡಿಗೆಯ ಮನೆಯಲ್ಲಿ ಸಂಭ್ರಮದಿಂದ ಓಡಾಡುತ್ತಿದ್ದಳು. ಅಡಿಗೆಯ ಮನೆಯಿಂದ ಬಂದ ಅಡಿಗೆಯ ಕಂಪು, ಟಿಂಪೂವಿನ ಪುಟ್ಟ ಹೊಟ್ಟೆಯನ್ನು ಕೆಣಕುತ್ತಿತ್ತು. ಊರಿನಲ್ಲಿ ಮೊಳಗುತ್ತಿದ್ದ ಘಂಟಾನಿನಾದ, ಸಂತೋಷದಿಂದ ಹಾಡುತ್ತಿದ್ದ ಧ್ವನಿಗಳು, ಕ್ರೈಸ್‌ಮಿಸ್ ಪೂಜೆಯ ದಿನ ಮಾತ್ರವಲ್ಲ; ಕಿನ್‌ಟುಪ್‌ನ ಸಂಸಾರದ ಪುನರ್‌ಮಿಲನದ ದಿನವೂ ಆಗಿದ್ದಿತು.

ಟಿಂಪೂವಿನ ತಾಯಿ "ಬೆಟ್ಟದ ಮೇಲಿದ್ದ ಬೌದ್ಧ—ಪವಿತ್ರ ಪುರುಷ, ಕಿನ್‌ಟುಪ್‌ನನ್ನು ಕ್ಷೇಮವಾಗಿ ಮನೆಗೆ ತರಿಸಿದ" ಎಂದಳು.

ಟಿಂಪೂವಿನ ಅಕ್ಕ-ಪಕ್ಕದ ಮನೆಯವರು, "ಆ ಮಂತ್ರವಾದಿಯೇ ಕಿನ್‌ಟುಪ್‌ನ ಪ್ರಾಣರಕ್ಷಣೆಗೆ ಕಾರಣ!" ಎಂದರು.

ಟಿಂಪೂವಿನ ತಂದೆ "ನಾವು ಆ ನೇಪಾಳೀ ಕುಟುಂಬಕ್ಕೆ ಕೃತಜ್ಞರಾಗಿರಬೇಕು. ಅವರೇ ಅಲ್ಲವೇ ತಾನು ಬೆಟ್ಟದಿಂದ ಉರುಳಿ ಬಿದ್ದಾಗ, ಕರೆದುಕೊಂಡು ಜೋಗಿ ಉಪಚರಿಸಿ, ಮುರಿದ ಕಾಲು ಸರಿಯಾಗುವವರೆಗೂ ಇಟ್ಟುಕೊಂಡು ಕಳುಹಿಸಿದ್ದುದು?" ಎಂದನು.

ಆದರೆ ಟಿಂಪೂವಿಗೆ ಮಾತ್ರ ಇವರೆಲ್ಲರಿಗಿಂತ ಹೆಚ್ಚಾಗಿ ತಿಳಿದಿತ್ತು. ತನಗೆ ತಾನೇ ಹುಸಿನಗೆಯನ್ನು ನಗುತ್ತಾ, ತನ್ನ ಹೊಸ ರಕ್ಷೆಯಾದ ಪ್ರಾರ್ಥನೆಯ ಚಕ್ರವನ್ನು ತಿರುಗಿಸುತ್ತಾ, ಶಾಸ್ತ್ರೋಕ್ತವಾಗಿ, ದೊಡ್ಡದಾಗಿ ಪ್ರಾರ್ಥನೆ ಸಲ್ಲಿಸಿ, ಅಂದಿನಿಂದ "ತನ್ನ ಸಹಾಯಕ್ಕೆ ಬಂದ ಆ ಕಂಪು ನೀಲುವಂಗಿಯ, ನೀಲಿಗಣ್ಣಿನ, ಬಿಳಿಯ ಗಡ್ಡದ ಮುದುಕನ ದಿನವನ್ನು ಆಚರಿಸುತ್ತೇನೆ" ಎಂದು ಪ್ರತಿಜ್ಞೆ ಮಾಡಿದ. *

* ಇಂಗ್ಲೀಷ್ ಮಾಸಪತ್ರಿಕೆಯಾದ "Argosy"ಯಲ್ಲಿ ಆಚ್ಚಾಗಿದ್ದ Edith Mac-Whirter ರವರ "Keeper of Christmas" ಎಂಬ ಕಥೆಯ ಅನುವಾದ. —ಲೇ.

ಅಮೇರಿಕನ್ ಕೂಲಿಕಾರನ ಸಿರಿವಂತಿಕೆಯ ಜೀವನ

ಶ್ರೀ. ಸಂಜೀವ ಲಕ್ಷ್ಮೇಶ್ವರ, ಬಿ. ಎ. ಮುಂಬೈ

ಒಬ್ಬ ಸಾಮಾನ್ಯ ಕೂಲಿಕಾರ ಬ್ರಾಕೆಟ್, ನಮ್ಮಲ್ಲಿಯ ಸಿರಿವಂತಿಕೆಯ ಬಾಳಿಗಿಂತ ಹೆಚ್ಚಿನ ಬಾಳನ್ನು ಬಾಳುತ್ತಿದ್ದಾನೆ. ಆದರೂ ಅವನು ಕೂಲಿಯವ. ಮೋಟರ್‌ಕಾರಿನ ಒಡೆಯನಾದರೂ ತನ್ನ ಶ್ರಮಜೀವನವನ್ನು ಅವನು ಬಿಟ್ಟಿಲ್ಲ.

ಇಂದು ಅಮೇರಿಕನ್ ಕೂಲಿಕಾರನ ವೇತನವು, ಜಗತ್ತಿನ ಯಾವುದೇ ದೇಶದ ಕೂಲಿಕಾರನ ವೇತನಕ್ಕಿಂತ ಹೆಚ್ಚು ಇರುವುದು ಕೂಲಿಕಾರನಿಗೆ ಕನಸಿನ ಸೊತ್ತಾದ ಆಸ್ತಿ-ಪಾಸ್ತಿಗಳು, ಅಮೇರಿಕನ್ ಕೂಲಿಕಾರನಿಗೆ ನನಸಿನ ಮಾತಾಗಿವೆ. ಇಂದು ಅಲ್ಲಿಯ ಕೂಲಿಕಾರನು ಕೆಲಸವಿಲ್ಲದೆ ಆಲಸಿಗನಾಗಿ ಕುಳಿತರೂ, ನಿರ್ದಿಷ್ಟವಾದ ವರ್ಷಾಶನ ಸಿಗುವಷ್ಟು ಅವನ ಜೀವನವು ಮುಂಪುವರೆದಿದೆ.

ಅಮೇರಿಕೆಯ ಕೂಲಿಕಾರನ ಹೆಚ್ಚಿನ ಮಟ್ಟದ ಜೀವನದ ಪರಿಚಯ ಬೇಕಿದ್ದರೆ, ಅಲ್ಲಿಯ ಆಟೋಮೊಬಾಯಿಲ್ಲಿನ ಕೂಲಿಕಾರನಾದ ಬ್ರಾಕೆಟ್ ಎಂಬವನ ಜೀವನದಿಂದ ತಿಳಿಯಬಹುದು. ಫೋರ್ಡ್ ಕಂಪನಿಯಲ್ಲಿ ಅವನೊಬ್ಬ ಕೂಲಿಕಾರ. ಅವನ ಶಿಕ್ಷಣವು ಕೂಡ ಮಾಧ್ಯಮಿಕಶಿಕ್ಷಣದ ವರೆಗೆ ಆಗಿದೆ. ಪ್ರತಿವಾರವೂ ಕಾರಖಾನೆಯ ನಿಯಮಿತ ವೇಳೆಗಿಂತ ಹೆಚ್ಚು ವೇಳೆ ದುಡಿದು, ವಾರಕ್ಕೆ ೧೨೦ ಡಾಲರಿನಷ್ಟು ಕೂಲಿಯನ್ನು ಸಂಪಾದಿಸುತ್ತಾನೆ. ಒನ್ಮೊಮ್ಮೆ ರವಿವಾರ ಕೂಡ ಅವನು ಕೆಲಸಕ್ಕೆ ಹೋಗುವುದುಂಟು.

೧೯೫೨ರಲ್ಲಿ ಅವನ ಆದಾಯವು ೬೦೬ ಡಾಲರಿನಷ್ಟು ಇದ್ದಿತು ಮುಂದಿನವರುಷವೇ ಹೆಚ್ಚು ವೇಳೆ ದುಡಿದು, ಅದನ್ನು ೪೫೬೯ ಡಾಲರಿಗೆ ಏರಿಸಿದನು. ೧೯೫೪ರಲ್ಲಿ ಅವನ ಆದಾಯವು ೫೬೭೮ ಡಾಲರಿನಷ್ಟು ಆಯಿತು. ಏನೇ ಆದರೂ ಅವನ ಆದಾಯವು ವರ್ಷಕ್ಕೆ ಸರಾಸರಿ ೫೦೦೦ ಡಾಲರಿಗಿಂತ ಕಡಿಮೆ ಇಲ್ಲದಾಗಿದೆ. ಅವನ ಈ ಆದಾಯದಿಂದ ಅಲ್ಲಿಯ ಕೂಲಿಕಾರರ ಹೆಚ್ಚಿನ ತರಗತಿಯ ಜೀವನವಿಟ್ಟದ ಕಲ್ಪನೆ ಬರುವುದು.

ಇತರ ದೇಶದ ಕೂಲಿಕಾರರಂತೆ, ಗಳಿಸಿದ ಹಣವನ್ನೆಲ್ಲ ಮನಬಂದಂತೆ ಖರ್ಚು ಮಾಡುವುದು ಅಮೇರಿಕನ್ ಕೂಲಿಕಾರನಿಗೆ ಸಲ್ಲದ ಮಾತು. ಅದನ್ನು ಜಾಣತನದಿಂದ ವಿನಿಯೋಗಿಸಿ ಅದರಿಂದ ಅಜನ್ಮ ಲಾಭ ದೊರೆಯುವಂತೆ ಮಾಡಿಕೊಳ್ಳುವುದೇ ಅಮೇರಿಕನ್ ಕೂಲಿಕಾರನ ಜಾಣತನ. ಬ್ರಾಕೆಟ್‌ನು ಜೀವವಿಮೆ, ಹಾಸ್ಪಿಟಲ್‌ವಿಮೆ, ನಿರುದ್ಯೋಗ-ಊನತೆ ಮುಂತಾದ ಜೀವನದಲ್ಲಿ ಬರಬಹುದಾದ ಆಪತ್ತುಗಳಿಗಾಗಿ ವಿಮೆ—ಇಳಿಸಿದ್ದಾನೆ. ತನ್ನ ಆದಾಯದ ಕೆಲಭಾಗವನ್ನು ಇವುಗಳಿಗಾಗಿ ವಿನಿಯೋಗಿಸುವನು. ಅವನ ಹಾಸ್ಪಿಟಲ್ ವಿಮೆಯು, ಅವನ ಹಾಗು ಕುಟುಂಬದ ಜನರ ಆಸ್ಪತ್ರೆಯ ವೆಚ್ಚವನ್ನು ಕೊಡುವುದಲ್ಲದೇ, ಪ್ರತಿದಿನವೂ—ಬೇನೆಬಿದ್ದರೆ—೫ ಡಾಲರಿನಂತೆ ೭೦ ದಿನಗಳವರೆಗೆ ಕೊಡುವುದು. ಆರೋಗ್ಯವಿಮೆಯು, ಅವನು ಬೇನೆ ಬಿದ್ದರೆ ೨೬ ವಾರಗಳ ವರೆಗೆ ಪ್ರತಿವಾರ, ೫೦ ಡಾಲರಿನಂತೆ ಸಹಾಯ ಮಾಡುವುದು. ಅವನ ಜೀವನವಿಮೆಯು ಹಣವು ೪೫೦೦ ಡಾಲರಿನಷ್ಟಿದೆ

ಸಾಮಾನ್ಯ ಕೂಲಿಕಾರನಿಗೆ ಇರಬೇಕಾದ ನಿರುದ್ಯೋಗದ ಭಯವು ಅಮೇರಿಕನ್ ಕೂಲಿಕಾರನಿಗೆ ಇಲ್ಲ. ಅವನು ಗಾಯಗೊಂಡು ಕೆಲ ದಿನಗಳವರೆಗೆ ಕೆಲಸಕ್ಕೆ ಹೋಗದೆ ಹಾಗೆಯೆ ಉಳಿದರೆ, ಅವನಿಗೆ ನಿರುದ್ಯೋಗದ ಲಾಭ ದೊರೆತು, ಅವನ ಉಪಜೀವನವು ನಿರಾತಂಕವಾಗಿ ನಡೆಯುವುದು. ಈ ನಿರುದ್ಯೋಗದ ಲಾಭವು ೨೬ ವಾರಗಳ ವರೆಗೆ ದೊರೆಯುವುದು.

ಹೊಸ ಕಾಯದೆಯ ಮೇರೆಗೆ ಫೋರ್ಡ್ ಕಂಪನಿಯು ತನ್ನ ಕೆಲಸಗಾರನಿಗೆ, ನಿರುದ್ಯೋಗದ ಲಾಭವೆಂದು ಅವನ ಸರಾಸರಿ ಗಳಿಕೆಯ ೧೦೦ಕ್ಕೆ ೬೫ರಷ್ಟು ಹಣವನ್ನು ಕೊಡುವುದು. ಈ ಲಾಭವು ಅವನಿಗೆ ೨೬ ವಾರಗಳವರೆಗೆ ದೊರೆತು ಅವನ ಉಪಜೀವನವು ನಿರಾತಂಕವಾಗಿ ನಡೆಯುವುದು ವಿಶೇಷ ಸಂಗತಿ ಎಂದರೆ, ಅಮೇರಿಕನ್ ಕೂಲಿಕಾರರು ಆರ್ಥಿಕ ಮಗ್ಗಟ್ಟಿನಿಂದ ದೂರ ಉಳಿಯುವಂತಾಗಿದೆ. ಅವರು ಬೇನೆ ಬಿದ್ದರೆ ಅಥವಾ ಗಾಯಗೊಂಡರೆ, ಇಂಥ ಆಪತ್ತಿನಲ್ಲಿ ಅವರಿಗೆ ನಿರ್ದಿಷ್ಟವಾದ ವೇತನದ ಆಶ್ವಾಸನವಿದೆ. ಇವೆಲ್ಲ ಸೌಕರ್ಯಗಳ ಮೂಲಕ, ಅವರ ವೇತನವೆಲ್ಲ ಉಚ್ಚಮಟ್ಟದ ಜೀವನ ಸಾಗಿಸಲು ವಿನಿಯೋಗಿಸಲ್ಪಡುವುದು.

ಬ್ರಾಕೆಟ್‌ನ ಜೀವನದ ಮಟ್ಟವು ಜಗತ್ತಿನ ಯಾವುದೇ ಕೂಲಿಕಾರನ ಜೀವನಕ್ಕಿಂತ ಹೆಚ್ಚಿನ ಮಟ್ಟದ್ದಿರುವುದು. ಅವನಿಗೆ ಒಂದು ಎರಡಂತಸ್ತಿನ ಮನೆಯುಂಟು. ಈಸಲಿಕ್ಕೆ ಬರುವಂತಹ ಬಾವಿ, ವಿಶಾಲವಾದ ಬಯಲುಜಾಗೆ ಮುಂತಾದುವುಗಳಿಂದೊಡಗೂಡಿನ ಸ್ವಂತ ಮನೆಯು ಬ್ರಾಕೆಟ್‌ನ ವೈವಿಧ್ಯಮಯ ಜೀವನವನ್ನು ಎತ್ತಿ ತೋರಿಸುವುದು. ಈ ಮನೆಯನ್ನು ಅವನು ೧೯೫೦ರಲ್ಲಿ ೧೨೦೦೦ ಡಾಲರು ಕೊಟ್ಟು ಕೊಂಡಿದ್ದಾನೆ. ಬ್ರಾಕೆಟ್‌ನ ಮನೆಯು ಕೇವಲ ನಾಲ್ಕು ಗೋಡೆ, ಚಪ್ಪರಗಳ ಮಳಿಗೆಯಾಗಿರದೇ, ಒಂದು ಭವ್ಯ ಹಾಗೂ

ಸುಂದರವಾದ ಇಮಾರತಿಯಾಗಿದೆ. ಮನೆಯ ಸೌಂದರ್ಯವನ್ನು ಹೆಚ್ಚಿಸಲು ಅಲ್ಲಿ ಅನೇಕ ಆಧುನಿಕ ಉಪಕರಣಗಳು ಇವೆ. ಇದಲ್ಲದೆ ಮನೆಯಲ್ಲಿ ಟೆಲಿಫೋನ್, ರೆಫ್ರೆಜರೇಟರ್, ರೇಡಿಯೋ ಹಾಗೂ ಟೆಲಿವ್ಹಿಜನ್ ಸೆಟ್ಟು ಮುಂತಾದ ಆಧುನಿಕ ವಸ್ತುಗಳಿವೆ.

ಬ್ರಾಕೆಟ್‌ನು ಸಾಮಾನ್ಯ ಕೂಲಿಕಾರನಾದರೂ, ಒಂದು ಮೋಟಾರ್‌ಕಾರಿನ ಒಡೆಯನಿದ್ದಾನೆ. ಕಂತಿನ ಮೇಲೆ ಹಣ ಕೊಡುವ ಸೌಲಭ್ಯದ ಮೂಲಕ, ೧೯೫೩ರಲ್ಲಿ ಕೊಂಡ ಈ ಮೋಟರ್‌ಕಾರಿನ ಹಣ ಈಗಾಗಲೇ ಕೊಟ್ಟಿದ್ದಾಗಿದೆ. ಅವನು ಕಾರಖಾನೆಗೆ ಕೆಲಸಕ್ಕೆ ಹೋಗಲು ಮೋಟಾರ್‌ಕಾರನ್ನೇ ಉಪಯೋಗಿಸುವನು. ಅಮೇರಿಕೆಯ ಕೂಲಿಕಾರರಲ್ಲಿ ಬಹಳಷ್ಟು ಜನರು ಮೋಟರಿನ ಒಡೆಯರಿರುವುದರಿಂದಲೂ, ಹಾಗೂ ಅವರೆಲ್ಲರೂ ಮೋಟಾರಿನಲ್ಲಿಯೇ ಕೆಲಸಕ್ಕೆ ಬರುವುದರಿಂದಲೂ, ಕಾರಖಾನೆಗಳ ಮುಂದೆ ಸಾವಿರಾರು ಮೋಟರುಗಳು ನಿಂತಿರುವುದು ಕಂಡುಬರುವುದು. ಇದೊಂದು ಅಮೇರಿಕನ್ ಕೂಲಿಕಾರರ ವೈಶಿಷ್ಟ್ಯವೆಂದೇ ಹೇಳಬಹುದು.

ಇವೆಲ್ಲವುಗಳಿಗಿಂತ ಅಲ್ಲಿಯ ಕೂಲಿಕಾರರ ಮುಂದುವರೆದ ಜೀವನದ ನಿದರ್ಶನವೆಂದರೆ: ಅವರು ತಮ್ಮ ಮಕ್ಕಳ ಶಿಕ್ಷಣಕ್ಕೆ ಕೊಡುವ ಮಹತ್ತ್ವ. ಇದಲ್ಲದೆ ಉಚ್ಚಶಿಕ್ಷಣವನ್ನು ಕೊಡಿಸುವಷ್ಟು ಯೋಗ್ಯತೆ ಸಹ ಅನೇಕರಲ್ಲಿದೆ. ಇಂದು ಬ್ರಾಕೆಟ್‌ನ ಹಿರಿಯ ಮಗಳು ಉಚ್ಚಶಿಕ್ಷಣದ ಪಡೆಯುತ್ತಿದ್ದಾಳೆ ಉಳಿದ ಮಕ್ಕಳಿಗೆ ಕೂಡ ಉಚ್ಚ ಶಿಕ್ಷಣಕೊಡಿಸುವ ಹೆಬ್ಬಯಕೆ ಬ್ರಾಕೆಟ್‌ನಿಗೆ ಇದೆ.

ಅಮೇರಿಕನ್ ಕೂಲಿಕಾರರ ಇನ್ನೊಂದು ಅತಿ ಮುಖ್ಯವಾದ ವೈಶಿಷ್ಟ್ಯವೆಂದರೆ ಅವರು ಎಂದಿಗೂ ಆಲಸಿಗರಾಗಿ ಉಳಿಯಲಾರರು ಕುಂಟುನೆವ ಹೇಳಿ ಕೆಲಸತಪ್ಪಿಸಿ ತಮ್ಮ ವೇತನ ಕಳೆದುಕೊಳ್ಳಲು ಅವರು ಎಂದಿಗೂ ಇಚ್ಛಿಸುವುದಿಲ್ಲ. ಇದರ ಬದಲು ಸಾಧ್ಯವಿದ್ದಷ್ಟು ಹೆಚ್ಚು ವೇಳೆ ದುಡಿದು ಹೆಚ್ಚಿನ ವೇತನ ಪಡೆಯುವರು.

ಒಣ ದುರಭಿಮಾನಕ್ಕೆ ಅಂಟಿಕೊಳ್ಳದೆ, ತಮ್ಮ ಮನೆಯ ಎಲ್ಲ ಕೆಲಸಗಳನ್ನು ತಾವೇ ಮಾಡುವುದು, ಅಲ್ಲಿಯ ಜನರಲ್ಲಿ ಬೆಳೆದು ಬಂದ ಶ್ರೇಷ್ಠ ಗುಣವು. ತನ್ನ ಮನೆಗೆ ಆಗಬೇಕಾದ ಸುಣ್ಣ ಬಣ್ಣ ಮುಂತಾದ ಚಿಲ್ಲರೆ ಕೆಲಸಗಳನ್ನು, ಬ್ರಾಕೆಟ್‌ನು ತಾನೇ ನಿರ್ವಹಿಸುವನು. ಈ ರೀತಿಯಾಗಿ ಅವರ ಉತ್ಪನ್ನವು ಹೆಚ್ಚಾಗಿ ವೆಚ್ಚವು ಕಡಿಮೆಯಾಗುವುದು.

ಕೇವಲ ಗಳಿಕೆ ಹೆಚ್ಚಿದೆ ಎಂಬ ಕಾರಣದಿಂದ, ದುಂದುಗಾರಿಕೆಯಿಂದ ಹಣ ಖರ್ಚುಮಾಡುವುದನ್ನು ಅವರು ಅರಿಯರು. 'ಮನೆಯಲ್ಲಿ ರೇಡಿಯೋ, ಟೆಲಿವ್ಹಿಜನ್ ಇರುವುದರಿಂದ ಸಿನೇಮಾ, ನಾಟಕ ಮುಂತಾದ ಮನರಂಜನೆಯ ವೆಚ್ಚಗಳು ಕಡಿಮೆಯಾಗಿವೆ' ಎಂದ ಬ್ರಾಕೆಟ್‌ನು ಅಭಿಮಾನದಿಂದ ಹೇಳುವನು. ಇದಲ್ಲದೆ ಬಟ್ಟೆ ಒಗೆಯುವ ಯಂತ್ರವಿರುವುದರಿಂದ, ಇತರ ಖರ್ಚು ಕಡಿಮೆ ಇರುವುದಾಗಿ ಅವನ ಹೇಳಿಕೆ.

ಉದ್ಯೋಗಶೀಲತೆ, ಗಳಿಸಿದ ಹಣದ ಜಾಣತನದ ವಿನಿಯೋಗ ಸಾತತ್ಯದ ಜೀವನಗಳಂತಹ ಶ್ರೇಷ್ಠಗುಣಗಳಿಂದ ಕೂಡಿದ ಅಮೇರಿಕನ್ ಕೂಲಿಕಾರನು, ಇಂದು ಜಗತ್ತಿನ ಇತರ ಕೂಲಿಕಾರರ ಕಣ್ಣಿಗೆ ಇಂದ್ರಲೋಕದ ಮನುಷ್ಯನಂತೆ ಕಂಡರೆ ಸೋಜಿಗದ ಮಾತಲ್ಲ.

ಕೋಗಿಲೆಗೆ

ಶ್ರೀ. ಜ. ಶ್ರೀ. ಜ.

(ವರ್ಡ್ಸ್‌ವರ್ಥ್ ಕವಿಯ 'To the Cuckoo' ಎಂಬ ಕವನದ ಅನುವಾದ)

ಹರುಷದಾಗಂತುಕನೆ! ಕೇಳಿಹೆನು ನಿನ್ನುಲಿಯ
ತೋಷಿಸುವೆನದನೀಗ ಮರಳಿ ಕೇಳುತ್ತೆ;
ಪಕ್ಷಿಯೆಂಬೆನೆ ನಿನ್ನ ಹೇಳಿಕೆಗೆ ಕೋಗಿಲೆಯೆ,
ಅಲ್ಲದಿರೆ ಅಲೆಯುತಿಹ ದನಿಯೆನಲೆ ಮತ್ತೆ? ೧

ಹುಲ್ಲಮೇಲೊರಗುತಿರೆ ಕೇಳುವೆನು ಆ ನಿನ್ನ
ಇಮ್ಮೆ ಬಹ ಕೂಜನದ ಸುಸ್ವನವ ನಾನು;
ಸಾನುವಿಂ ಸಾನುವಿಗೆ ಸಾಗುವೊಲು ಕಂಗೊಳಿಸಿ
ಒಮ್ಮೆಲೇ ಬಹುದೂರ, ಸನಿಯವದು ತಾನು. ೨

ಹೂಗಳನೊ ಬಿಸಿಲನ್ನೊ ನೀ ಕುರಿತು ಗಳಪುತಿಹೆ
ಕೊಳ್ಳದೆದುರಿಲಿ ಬರಿದೆ ಆಪರೇನಂತೆ,
ಕಣಸುಗಳ ಕಾಣುತಿಹ ಕಾಲದಾ ಕತೆಯೊಂದ
ತಾ ತಂದು ಒದಗಿಸುವುದೆನಗದುವೆ ಅಂತೆ. ೩

ಮಧುಮಾಸದತಿ ಮುದ್ದೆ! ಮೂರುಸಲ ಸ್ವಾಗತವು!
ಆದರೂ ನೀನಲ್ಲು ಬರಿಹಕ್ಕಿ ಎನಗೆ,
ಕಣ್ಣಾ ನೋಟಕೆ ನಿಲುಕದಿಹ ವಸ್ತು ನೀನೆಂಬೆ
ಆವುದೋ ದನಿಯೆಂಬೆ ಗುಟ್ಟಿಂಬೆ ನಿನಗೆ. ೪

ಶಾಲೆಬಾಲನು ಇರಲು ನಾನಾಪ ದನಿಯನಾ-
ಲಿಸುತಿದ್ದೆನೆಂದಾವ ಕೂಜನವು ನನ್ನನು—
ಸಾಸಿರದ ಕಡಿಗಳಲಿ, ಪೊದೆ, ಕಂಟಿ, ಬಾನಿನಲಿ,
ಹುಡುಕುವೊಲು ತೊಡಗಿಸಿತೊ, ಆ ಅದುವೆ ನೀನು! ೫

ನಿನ್ನನರಸಲು ನಾನು ಎನಿತೊ ಸಲ ಅಲೆದಿಹೆನು,
ಅಡವಿಯೊಳು ಮೇಣಂತೆ ಹುಲ್ಲಬಯಲಿನಲಿ;
ಕಡೆಗು ಕಾಣದೆ ಹೋದೆ ನೀನುಳಿದೆ ಎನಗೊಂದು-
ಮನದೊಲವು, ನಿತುಬಯಕೆ, ಆಶೆಯಾಗುತಲಿ. ೬

ಈಗಲೂ ನಿನ್ನುಲಿಯ ಕೇಳಬಲ್ಲೆನು ನಾನು
ಒರಗಬಲ್ಲೆನು ಹುಲ್ಲ ಹಾಸುಗೆಯ ಮೇಲೆ;
ಆಲಿಸುವೆನೊರಗುತ್ತೆ ಮರಳಿ ದೊರಕುವ ತನಕ
ಹಿಂದಾದ ಆ ಒಂದು ಸ್ವರ್ಣಸಮ ವೇಳೆ! ೭

ಓ ವರಪಡೆದ ಹಕ್ಕಿ! ನಾವು ನಡೆಯುವ ಭೂಮಿ
ಮರಳಿ ಹೊಳೆವುದು ಬಾಲ್ಯದಲಿ ಕಂಡ ತೆರದಿ;
ಕಲ್ಪನೆಯ ಗಂಧರ್ವಲೋಕದೊಲು ಕಾಣುವುದು
ತಕ್ಕುದಾದುದು ಅದುವೆ ನೀನಿರಲು ನಿಜದಿ! ೮

ಪರಪತ್ರ ವಾಚನಾಭಿರುಚಿ

ಶ್ರೀ. ಎನ್. ಆರ್. ಬಾಳೇಹೊಸೂರ ಬಿ. ಎ. (ಅನರ್ಸ್), ಪುಣೆ

ಇನ್ನಿತರ ವಿಷಯಗಳಿಗೆ ರಾಶಿರಾಶಿ ಹಣವನ್ನು ಹಾಳುಮಾಡುವವರೂ, ತಮ್ಮುದಾಗಿ ಒಂದು ಪತ್ರಿಕೆಯನ್ನು ಕೊಳ್ಳಲು ಒಂದು ಆಣೆ ಕೂಡ ವೆಚ್ಚಮಾಡಲಾರರು. ಆದರೆ ಇನ್ನೊಬ್ಬರ ಪತ್ರಿಕೆಯನ್ನು ಓದಲಿಕ್ಕೆ ಇಲ್ಲದ ಹೊಂದರೆ ಕೊಡುವರು.

"ಭಿನ್ನರುಚಿರ್ಹಿ ಲೋಕಾಃ" ಎಂಬ—ಅಮರಕವಿ ಕಾಳಿದಾಸನ ಉಕ್ತಿಯನ್ನು ಕೇಳದ ಜನ ವಿರಳ. ಅವರೆ ಅವರಲ್ಲಡಗಿದ ಸತ್ಯವನ್ನು ಅರಗಿಸಿಕೊಂಡು, ಜೀವನದ ವಿವಿಧರಂಗಗಳಲ್ಲಿ ಅದನ್ನು ಕಾಣುವವರು ಕೆಲವರು ಮಾತ್ರ. ಒಬ್ಬೊಬ್ಬನ ಅಭಿರುಚಿ ಒಂದೊಂದು ವಿಧ. 'ಜೀವಜೀವ'ಗಳಲ್ಲಿ ಭಿನ್ನವಾಗಿವೆ ಈ ಅಭಿರುಚಿ! ಮಾನವ. ಯಂತ್ರದ ರಚನೆಯೇ ಅಷ್ಟೊಂದು ವೈಚಿತ್ರ್ಯಪೂರ್ಣವಾದುದು! ಒಬ್ಬನಿಗೆ ಸೃಷ್ಟಿಯ ಸೊಬಗನ್ನು ನೇರವಾಗಿ ಸವಿಯುವಲ್ಲಿ ಪರಮಾನಂದ ಉಂಟಾದರೆ, ಬೇರೊಬ್ಬನು ಅದೇ 'ಸೊಬಗ'ನ್ನು ಕಾಗದದಲ್ಲೋ, ಕಾಜಿನಲ್ಲೋ ಹಿಡಿದಿಟ್ಟು, ಅದನ್ನೇ ನಿಟ್ಟಿಸುತ್ತ ಅವಿತಾನಂದವನ್ನು ಪಡೆಯಬಹುದು. ಒಬ್ಬನಿಗೆ ಸಂಗೀತದಲ್ಲಿ ಅಪಾರ ಅಭಿರುಚಿ, ಬೇರೊಬ್ಬನಿಗೆ ಮತ್ತೊಬ್ಬರ 'ಇಂಗಿತ'ವನ್ನು ತಿಳಿಯುವಲ್ಲಿ ಆಸಕ್ತಿ! ಇದೇ ರೀತಿ ಹಲವಾರು ಬಗೆಯ ಅಭಿರುಚಿಗಳ ಮಾಲಿಕ್ಯನ್ನೇ ಹೆಣೆಯಬಹುದು.

ರಾಜೀವನಿಗೆ ಪರಪತ್ರವನ್ನು ಓದುವಲ್ಲಿ ತುಂಬಾ ಅಭಿರುಚಿ ಎಂದು ಹೇಳಿದರೆ, ಯಾರ ಮನವೂ ನೋಯದೆಂದು ಭಾವಿಸುವೆ. ಇನ್ನು 'ಪರಪತ್ರ' ಎಂಬ ಶಬ್ದಪ್ರಯೋಗದ ಅಪಾರ್ಥವಾಗದಿರಲೆಂದು ಇಲ್ಲಿ ಅದನ್ನು ಸ್ಥೂಲವಾಗಿ ವ್ಯಾಖ್ಯಾನಿಸಿ ಬಯಸುವೆ, ಪ್ರಸ್ತುತ ಲೇಖನದ ಪ್ರಯೋಜನಾರ್ಥವಾಗಿ :

'ಪರಪತ್ರ' ಎಂದರೆ, ತನ್ನನುಳಿದು ಬೇರೊಂದು ವ್ಯಕ್ತಿಯ ಬಳಿ ಇರುವ ಯಾವುದೇ ದಿನಪತ್ರ, ಸಾಪ್ತಾಹಿಕ, ಮಾಸಿಕ, ತ್ರೈಮಾಸಿಕ, ಷಾಣ್ಮಾಸಿಕ ಇಲ್ಲವೆ ಇಂತಹ ನಿಯತಕಾಲಿಕ ಪತ್ರಿಕೆ ಹಾಗು ಪುಸ್ತಕ—ಅದು ಕಥಾಸಂಕಲನವೇ ಇರಲಿ, ಕಾದಂಬರಿಯೇ ಆಗಿರಲಿ—ಅಥವಾ ಕಾಗದದ ಮೇಲೆ ಮುದ್ರಿತವಾದ, ಕರದಲ್ಲಿ ಸುಲಭವಾಗಿ ಹಿಡಿಯಬಹುದಾದ ಇತರ ಯಾವುದೇ ಸಾಹಿತ್ಯ ಎಂದು ಅರ್ಥ: ಆದರೆ, ಇದರಲ್ಲಿ ಪರಸ್ಪರರ ಮನೋಗತವನ್ನು ಇನ್ನಿವೆ 'ಮನೋವಿಕಾರ'ವನ್ನು ಅಭಿವ್ಯಕ್ತಗೊಳಿಸುವ ಹೆಸ್ತಪ್ರತಿಯ ಹಾಗು ಯಾವುದಾದರೊಂದು ವಿಶಿಷ್ಟ ಉದ್ದೇಶದ ಸಲುವಾಗಿ ಬಹುಕಾಲ ಬಾಳಬೇಕೆಂದು ತಾಪವಾಲೆ, ತಾಮ್ರಪಟ ಇತ್ಯಾದಿಗಳ ಮೇಲೆ ಬರೆದ ಇಲ್ಲವೆ ಶಿಲೆಗಳಲ್ಲಿ ಕೆತ್ತಿದ ಯಾವುದೇ ಅಭಿಲಿಖಿತದ ಸೇರ್ಪಡೆಯಾಗದು.

ಇಂತಹ ಪರಪತ್ರ ಎಂದರೆ ರಾಜೀವನಿಗೆ ಪಂಚಪ್ರಾಣ. ಅವನ ಜೀವನವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದವರಿಗೆ, ಅವನಲ್ಲಿಯ ಈ ಗುಣವಿಶೇಷ, ಎಳೆಯ ವಯಸ್ಸಿನಿಂದಲೂ ಕಾಣುತ್ತಿರುವುದಾಗಿ ಹೇಳುವರು. ಅದೇನೇ ಇರಲಿ, ಇಂದು ಮಾತ್ರ ಅವನ ಪ್ರತಿಯೊಂದು ಕಾರ್ಯದಲ್ಲೂ, ವಿಶೇಷತಃ ಪರಪತ್ರವಾಚನದಲ್ಲಿ ಈ ಅಭಿರುಚಿ ಸ್ಪಷ್ಟವಾಗಿ ದೃಷ್ಟಿಗೋಚರವಾಗುವುದು. ಅದನ್ನು ಕಣ್ಣಾರೆ ಕಂಡುಕೊಳ್ಳುವ ಭಾಗ್ಯ ದೊರೆತ ರಾಜೀವನ ತೀರ ಆಪ್ತ ಸ್ನೇಹಿತರಲ್ಲಿ ನಾನೂ ಒಬ್ಬ ಎಂದು ಹೇಳುವುದು ಹೆಮ್ಮೆಯ ವಿಷಯವಾದರೂ, ವಿನಯದಿಂದ ಒಪ್ಪುವೆ.

'ಸ್ವಾಮೀ ತಾವೇ ಒಂದು ಪತ್ರವನ್ನು ಕೊಂಡು ಓದಿದರೆ ಆಗಲಾರದೇ?' ಎಂದು. ರಾಜೀವನ ಸ್ವಭಾವಪರಿಚಯವಿಲ್ಲದವರು ಯಾರಾದರೂ ಕೇಳಿದರೆ ಸಾಕು, ಅವನ ಮುಖ ಒಡನೆಯೇ ಬಾಡುವುದು, ಮೈ ಬೆಮರುವುದು, ಅಂಗಾಂಗವೇ ಥರಥರನೆ ಕಂಪಿಸುವದು; ಕೆಲಸಲ ಕಣ್ಣೀರಿನ ಕೋಡಿಯೇ ಹರಿಯುವುದೆಂಬದನ್ನು ಸ್ವತಃ ಕಂಡುಕೊಂಡಿರುವೆನಾದರೂ, ಸ್ನೇಹಿತನ ಮೇಲಿನ ಅಪಾರ ಅಂತಃಕರಣದಿಂದ, ಅವನ ಮೇಲೆ ಆ ಪ್ರಯೋಗವನ್ನು ಮಾಡದಿರಿ ಎಂದಿಷ್ಟೇ ಕೇಳಿಕೊಳ್ಳುವೆ. ಒಮ್ಮೊಮ್ಮೆ ರಾಜೀವ ತಾನೇ ತನ್ನ 'ಅಭಿರುಚಿ'ಯ ನಿಲುವನ್ನು ತಿಳಿಯಪಡಿಸಲು ಯತ್ನಿಸಿದ್ದುಂಟು. ಅಂತಹ ಒಂದೆರಡು ಸನ್ನಿವೇಶಗಳಲ್ಲಿ ಅವನ ಸಹವಾಸಿಯಾಗಿರುವ ಸೌಭಾಗ್ಯ ನನ್ನದಾಗಿತ್ತು. ಆ ಕಾಲಕ್ಕೆ ತನ್ನೆಲ್ಲ ನೋವನ್ನು ನುಂಗಿ ರಾಜೀವ, ಅತ್ಯಂತ ದೀನವದನನಾಗಿ, 'ಈ ಪ್ರಪಂಚದಲ್ಲಿ ತನ್ನದೆಂಬುದು ಯಾವುದಿವೆ? ಇದೆ ಎಂದು ತಿಳಿದರೆ, ಅದು ಶುದ್ಧ ಮಾಯೆ! ತನ್ನ ಊರು, ತನ್ನ ಮನೆ, ತನ್ನ ವಸ್ತ್ರ, ತನ್ನ ಪತ್ರ ಎಂದು ಹಲುಬುವುದು ನೂರಕ್ಕೆ ಬಲಿಯಲ್ಲಿಯ ಜೀತ್ಯಾಕರ; ಸ್ವಾರ್ಥದ 'ಸಿಳ್ಳು!' ಅದು ಸತ್ಯವಲ್ಲ, ಮಿಥ್ಯ!' ಎಂದು ನುಡಿದ. ಈ ಭೂಮಂಡಲದಲ್ಲಿ ತನ್ನನ್ನು ಯಾರೂ ತಿಳಿದುಕೊಳ್ಳಲಾರರೇ—ಎಂದು ಅಜೆಪ್ಪೋ ಸಲ ತಾನೇ ಪ್ರಶ್ನಿಸಿ-

ಕೊಳ್ಳುವ; ತಲೆ ತುರಿಸಿಕೊಳ್ಳುವ; ಕೊನೆಗೆ ನಿರಾಸೆಯ ನಿಟ್ಟುಸಿರೊಂದನ್ನು ಬಿಟ್ಟು, ಕ್ಷಣಹೊತ್ತು ಅಂತರ್ಮುಖಿಯಾಗುವ! ರಾಜೀವನಿಗೆ 'ತನ್ನದು' ಎಂಬುದು ಯಾವುದೂ ಬೇಡ. ಇಂತಹ ನಿಃಸ್ವಾರ್ಥ ಜೀವಿ! ಆದರೆ ಇಂದು ನಿಃಸ್ವಾರ್ಥತೆಗೆ ಬೆಲೆಯೆಲ್ಲಿದೆ?

ಇಂದಿನ ಅಧುನಿಕ ಜೀವನದಲ್ಲಿ ಪ್ರತಿಯೊಂದು ವಿಷಯವನ್ನೂ ಹಣಕಾಸಿನ ದೃಷ್ಟಿಕೋನದಿಂದ ಕಾಣುವ ಒಂದು ಅರಿಷ್ಟ ಪರಿಪಾಠ ನಡೆದುಬಂದಿದೆ. ಒರ್ವ ವ್ಯಕ್ತಿಯ ಯೋಗ್ಯತೆಯನ್ನು ಅಳೆಯುವಲ್ಲಾಗಲಿ, ಒಂದು ರಾಷ್ಟ್ರದ ಸಾಮರ್ಥ್ಯವನ್ನು ಕಂಡುಹಿಡಿಯುವಲ್ಲಿಯೇ ಆಗಲಿ, ಈ ಹಣಕಾಸಿನ ಮಾನದಂಡ ಅತ್ಯಗತ್ಯ. ಈ ವಿಚಾರದ ಹಿನ್ನೆಲೆಯಲ್ಲಿ 'ಅವನು ಕೃಪಣ, ಪರಪತ್ರವುಷ್ಟ' ಎಂದು ಮುಂತಾಗಿ ಅನ್ಯಥಾ ತಿಳಿದುಕೊಳ್ಳದಿರಲೆಂದು, ರಾಜೀವನ ಸಾಂಪತ್ತಿಕ ಚಟುವಟಿಕೆಯ ಒಂದು ವೈಚಿತ್ರ್ಯವನ್ನು ಕಂಡುಕೊಳ್ಳಬಹುದು. 'ಧನಸಂಚಯ' ಅದೊಂದು ಘೋರ ಪಾಪ—ಎಂದು ಅವನು ತಿಳಿಯುತ್ತಾನೆ ರಾಜೀವನ ಜೊತೆಗೆ ಹೋಟೆಲ್ಲಿಗೋ, ಚಲಚ್ಚಿತ್ರಕ್ಕೋ ಒಂದು ಸಲವಾದರೂ ಹೋಗಿ ನೋಡಿ. ಅವನ ವ್ಯಯದ ವಿರಾಟ್‌ಸ್ವರೂಪವನ್ನು ಕಂಡು ಬೆರಗಾಗದೆ ಇರಲಾರಿರಿ. 'ಅದರೂ ಒಂದು ಪತ್ರಿಕೆಯನ್ನೇಕೆ ಕೊಳ್ಳಲಾರ?' ಎಂದು ಕೇಳಿದಲ್ಲಿ, 'ಅದೇ ರಾಜೀವನ ಅಭಿರುಚಿಯ ತಿರುಳು' ಎಂದಿಷ್ಟೇ ಹೇಳಬಹುದು.

ರಾಜೀವ ಒಂದೊಂದು ಸಲ ತನ್ನ 'ಪತ್ರಧೋರಣೆಗೆ' ಅಷ್ಟೊಂದು ಕಠೋರವಾಗಿ ಅಂಟಿಕೊಳ್ಳದೆ 'ಅದೇನು ಹೇಳುವಿ ಬಿಡು ಪತ್ರವಾನದಿಂದ (ಇಲ್ಲಿ 'ದಾನ' ಎಂದರೆ ಒಂದು ವಸ್ತುವನ್ನು ಅಲ್ಪಾವಧಿಯ ವರೆಗೆ ಮಾತ್ರ ಎರವಾಗಿ ಕೊಡುವುದು ಎಂದು ಮಾಡಿಕೊಳ್ಳುವುದು.) ಜೀವನ ಪಾವನವಾದೀತು' ಎಂದು ಉಸಿರುವುದೂ ಉಂಟು; ಇಲ್ಲವೆ ಕೆಲಸಮಯ ಓದಬೇಕೆಂದು ಪಡೆದ ಪತ್ರವನ್ನು 'ಏನೊಪ್ಪಾ, ಅವನು ಒಳ್ಳೆಯ ಭಾವನೆಯಿಂದ ಕೊಟ್ಟಂತಿಲ್ಲ' ಎಂಬುದನ್ನು ಆ ವ್ಯಕ್ತಿಯ ಮುಖಮುದ್ರೆಯ ಮೇಲಿಂದ ಕಂಡುಕೊಂಡು, ಕೂಡಲೇ 'ಅವನದನ್ನು ಅವನಿಗೆ ಮುಟ್ಟಿಸಿ' ಕೈಮುಗಿದು ಬಿಡುವ.

ರಾಜೀವನ ಅನುಪಮ ನಿಃಸ್ವಾರ್ಥತೆಯನ್ನು ಎತ್ತಿ ತೋರಿಸುವ ಇನ್ನೊಂದು ಅಂಶ ಅವನ 'ಬಹುಭಾಷಾಪ್ರಿಯತೆ.' ಸ್ವಭಾಷೆಯ ಪತ್ರವನ್ನೇ ಓದಬೇಕೆಂಬಷ್ಟು ಸಂಕುಚಿತ ಮನೋವೃತ್ತಿ ಅವನದಲ್ಲ. ರಾಜೀವ ರೈಲಿನಲ್ಲೋ, ಬಸ್ಸಿನಲ್ಲೋ ಸಂಚರಿಸುವಾಗ, ಬಂಡಿಯನ್ನೇರಿದ ತಕ್ಷಣವೇ, ಎಲ್ಲರ ಕರಗಳತ್ತ ತನ್ನ ದೃಷ್ಟಿಯನ್ನು ಚೆಲ್ಲುವ. ರಾಜೀವನಿಗೆ ಪ್ರಶಸ್ಯಸ್ಥಾನ ದೊರೆಯದಿದ್ದರೂ ನಡೆದೀತು; ಆದರೆ ಬದಿಗೆ ಕುಳಿತವನ ಬಳಿ ಮಾತ್ರ ಪತ್ರ ಇರಲೇಬೇಕು. ಎಂದರೆ ಅವನ ಸಂಚಾರ ಸುಖಕರವಾದಂತೆ!

ಇಂತು, ರಾಜೀವನ ಪರಪತ್ರ ವಾಚನಾಭಿರುಚಿ, ಅವನಿಗೆ ಈ ಪ್ರಪಂಚದ 'ತಿಳಿವಳಿಕೆ' ಉಂಟಾದಂದಿನಿಂದಲೂ ಅವಿಚ್ಛಿನ್ನವಾಗಿ ವರ್ಧಿಸುತ್ತ ನಡೆದಿದೆ. ಅದನ್ನೇ ತನ್ನ ಕೊನೆಯ ಉಸಿರಿನ ವರೆಗೂ ಯಶಸ್ವಿಯಾಗಿ ಕಾಪಾಡಿಕೊಂಡು ಹೋಗಬೇಕೆಂಬುದೇ ಅವನ ಜೀವನವಲ್ಲಿಯ ಅತ್ಯುನ್ನತವಾದ ಆಕಾಂಕ್ಷೆ! ನಾನಿಲ್ಲಿ ಚಿತ್ರಿಸಿದ ರಾಜೀವನ ವ್ಯಕ್ತಿತ್ವ ಬರಿ ಛಾಯೆ. ರಾಜೀವನ ಬದುಕನ್ನು ಇನ್ನೂ ಒಳಹೊಕ್ಕು ನೋಡಲು ಪ್ರಾಮಾಣಿಕ ಪ್ರಯತ್ನ ಮಾಡಿದಲ್ಲಿ, 'ನಮ್ಮನ್ನೇ ನಾವು' ಕಂಡುಕೊಳ್ಳದಿರಲಾರೆವು!

ಒಂದು ಹಸಿಗತೆ

ಶ್ರೀ. ಸುರೇಂದ್ರ ಕೌಲಗಿ, ಘಾಟಕೋಪರ-ಮುಂಬೈ

ಅವನೊಬ್ಬ ಲೇಖಕ. ಜೀವನದಲ್ಲಿಯ ಅನೇಕ ವಿಷಯಗಳ ಮೇಲೆ ಅವನು ಲೇಖನಗಳನ್ನು ಬರೆದಿದ್ದ. ಅವುಗಳಲ್ಲಿ ಉತ್ತಮ ತತ್ತ್ವಗಳು ಅಡಕವಾಗಿದ್ದುವು. ಅನೇಕ ಓದುಗರು ಅವುಗಳನ್ನು ತಮ್ಮ ಜೀವನದಲ್ಲಿ ಬಿತ್ತಲು ಪ್ರಯತ್ನಿಸುತ್ತಿದ್ದರು. ಆದರೆ ಅವುಗಳ ಲೇಖಕನಲ್ಲಿಯೇ ಸಿಟ್ಟು, ಗರ್ವಗಳು ಅತಿಯಾಗಿದ್ದುವು. ಅವನ ಅಹಂಕಾರದ ವರ್ತನೆಯಿಂದ ಜನರಲ್ಲಿ ಅವನ ವಿಷಯವಾಗಿ ಜುಗುಪ್ಸೆ ಬೆಳೆಯುತ್ತಾ ಹೋಯಿತು.

ಇದನ್ನರಿತ ಅವನ ಆತ್ಮೀಯ ಗೆಳೆಯನೊಬ್ಬನು, ತನ್ನ ಮಿತ್ರನ ಒಳ್ಳೆಯ ಭವಿಷ್ಯ ನಿರ್ಮಿಸಲು ಪಸ್ತುತ ಪರೀಕ್ಷಕನಂತೆ ನಟಿಸಿ, ತನ್ನ ಗೆಳೆಯನಿಗೆ: "ನೀನು ಹೋದ ಜನ್ಮದಲ್ಲಿ ಒರ್ವ ಮಹಾಕವಿಯಾಗಿದ್ದೆ; ಆದರೆ ಅಂದು ನೀನು ತೋರಿದ, ಗರ್ವ-ಅಹಂಕಾರ ಅಷ್ಟಿಷ್ಟಲ್ಲ! ಅಸಂಖ್ಯಾತ ಜನರ ಮನಸ್ಸನ್ನು ಹಿಂಸಿಸಿದೆಯಾದ್ದರಿಂದ" ಅವರ ಫಲವೆಂದು ನಿನ್ನ ಈ ಲೇಖನಶಕ್ತಿಯು ಇನ್ನೆರಡು ವರುಷಗಳಲ್ಲಿ ಮಾಯವಾಗುವುದು" ಎಂದು ಹೇಳಿದನು.

ಆ ಲೇಖಕನ ಮನಸ್ಸಿನಲ್ಲಿ ಉಲ್ಲೋಲಕಲ್ಲೋಲವಾಯಿತು. 'ಗತಜನ್ಮದಲ್ಲಿ ಮಹಾಕವಿಯಾಗಿದ್ದೆನಲ್ಲಾ' ಎಂಬ ಹಿಗ್ಗು ಒಂದು ಕಡೆ; ಅದೇ ಶಕ್ತಿಯೇ ಇನ್ನೆರಡು ವರುಷಗಳಲ್ಲಿ ಮಾಯವಾಗುವುದಲ್ಲಾ—ಎಂಬ ಕೊರಗು ಒಂದು ಕಡೆ. ಎರಡನೆಯ ಶಕ್ತಿಯ ಜೋರೇ ಪ್ರಬಲವಾಯಿತು. ಅದರಿಂದಾಗಿ, ಒಂದೇ ಕ್ಷಣದಲ್ಲಿ ಚಿಂತಿಸಿ ಕ್ಷೀಣಿಸಹತ್ತಿದನು. ಅವನ ವರ್ತನೆಯಲ್ಲಿ ಬಹು ವ್ಯತ್ಯಾಸವಾಯಿತು.

ಅಂದಿನಿಂದ 'ಗರ್ವ' ಎಂಬ ವಿಷಯದ ಮೇಲೆ ದೊಡ್ಡ ಲೇಖನ ಬರೆಯಲು ಪ್ರಾರಂಭಿಸಿದ. ಅದರಲ್ಲಿ ಸಮಾವಿಷ್ಟವಾಗದ ವಿಷಯಗಳೇ ಇರಲಿಲ್ಲವೆಂದು ಹೇಳಬಹುದು. 'ಅದರ್ಶಮಾನವನು ದೇವರ ದೃಷ್ಟಿಯಲ್ಲಿ ಯಾರು?' ಎಂಬುದನ್ನೇ ಸವಿಸ್ತಾರವಾಗಿ ಆ ಲೇಖನದಲ್ಲಿ ನಿರ್ಣಯಿಸಿದ್ದನು. ತನ್ನ ಆ ನಿರ್ಣಯಕ್ಕೆ ತನ್ನನ್ನೇ ಉಜ್ಜಿಕೊಂಡಾಗ, ತನ್ನ ಜೀವನದ ಕಠೋರ—ಪಾಪಮಯ ಕೃತಿಗಳಿಂದ ಅವನು ಭೀತನಾದನು. ಆ ಲೇಖನವು ಪರರಿಗೆ ಪೂಜ್ಯ ಕಲಾಕೃತಿಯಾಗಿ ಕಂಡಿತು. ಅದನ್ನು ಅವನು ಸಂಪೂರ್ಣ ರಚಿಸಿ ಕ್ಷಯದಿಂದ ದೇಹವನ್ನು ನೀಗಿದನು.

ಆ ಲೇಖನಿಯ ಗೆಳೆಯನಿಂದ ಅದು ಪ್ರಕಟಿಸಲ್ಪಟ್ಟಿತು ಅದನ್ನು ಓದಿದವರೆಲ್ಲ ತಲೆದೂಗಿದರು. ಅದು ತಮ್ಮ ಜೀವನದ ಕೈದೀವಿಗೆಯಾಗಿ ಬಂದ ಪುಸ್ತಕವೆಂದು ಕುಣಿದಾಡಿದರು.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಕನಸಲ್ಲ ನನಸು' ಕತೆಯ ವಿಮರ್ಶೆಗಳು ೧೧ ಜನರಿಂದಲೂ 'ಬಲಿದಾನ' ಎಂಬ ಐತಿಹಾಸಿಕ ರೂಪಕದ ವಿಮರ್ಶೆಗಳು ೯ ಜನರಿಂದಲೂ ಬಂದಿವೆ. ವಿಮರ್ಶಕರ ಪರಿವಿಡಿಯು ಹೀಗಿದೆ:

'ಕನಸಲ್ಲ ನನಸು' ಕಥೆಯ ವಿಮರ್ಶಕರು:

೧. ಶ್ರೀ. 'ವಾಣಿ' ಹುಬ್ಬಳ್ಳಿ. ೨. ಶ್ರೀ. ಹಾ. ಕಸ್ತೂರಿ, ಬಿ ಎಸ್‌ಸಿ, ಶಿಕ್ಷಕರು, ಸುರಪುರ. ೩. ಶ್ರೀ. ಗೋಪಾಲ ಕೃಷ್ಣ ಸ. ಹೆಗಡೆ, ಕೇರಿಮನೆ (ಶಿಸಿ). ೪. ಶ್ರೀ. ಕೃ. ವೆಂ. ಘಡಣೀಸ, ಶಿರಹಟ್ಟಿ. ೫. ಶ್ರೀ. ವೆಂಕಟರಮಣ ತಿ. ಹೆಗಡೆ, ಬಳ್ಕಿ (ತ್ಯಾಗ್ಲಿ). ೬ ಶ್ರೀ. ಸೀತಾರಾಮು ಎಸ್. ಜಾಗಿರದಾರ, ಹೈದರಾಬಾದ್. ೭. 'ಮಲಪತಿ ಅಣ್ಣ,' ೮. ಶ್ರೀ ಜಿ ಎನ್. ಕುಂದರಗಿ, ಕರ್ನಾಟಕ ಕಾಲೇಜ್. ಧಾರವಾಡ. ೯. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೧೦. ಶ್ರೀ. ಜೆ. ಮಲ್ಲಾರಿಭಟ್ಟ, ಹೊಸಪೇಟೆ. ೧೧. ಶ್ರೀ. ಉ. ಮೋಹನರಾವ್, ಎಂ. ಜಿ. ಎಂ. ಕಾಲೇಜ್, ಉಡುಪಿ.

'ಬಲಿದಾನ' ರೂಪಕದ ವಿಮರ್ಶಕರು:

೧. ಶ್ರೀ. ನಾಗೇಶ ತೇಜಪ್ಪ ಹಾಗರಿಗಿ, ಮ್ಯು. ಪ ಹೈಸ್ಕೂಲ್, ಗೋಕಾಕ. ೨. ಶ್ರೀ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ, ಕಾಸರಗೋಡು. ೩. ಶ್ರೀ. ಎಸ್. ಪಿ. ಹಿರೇಮಠ, ಡಿ. ಎ. ವಿ. ಕಾಲೇಜ್, ಒನಾರಸ. ೪. ಶ್ರೀ. ಗೋಪಾಲಕೃಷ್ಣ ಹುನಗುಂದ ಮುಳುಂಡ—ಮುಂಬಯಿ. ೫. ಶ್ರೀ. ಕೆ. ಎಸ್. ಕಟ್ಟಿ, ಖಾಜಗಲ್ಲಿ, ಧಾರವಾಡ. ೬. ಕುಮಾರ ಪಂಚಾಕ್ಷರಿ ಶಿವಬಸಯ್ಯ ಹೊಸಮಠ, ಎಂ. ಎಚ್. ಸ್ಕೂಲ್, ಗೋಕಾಕ ೭. ಶ್ರೀ. ಜಿ. ಎನ್. ಕುಂದರಗಿ, ಕರ್ನಾಟಕ ಕಾಲೇಜು, ಧಾರವಾಡ. ೮. ಶ್ರೀ. ಎನ್. ಎಸ್. ಭಟ್ಟ, ಯಾದಗಿರಿ. ೯. ಶ್ರೀ. ಮುಳಗುಂದ, ಹುಬ್ಬಳ್ಳಿ.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕಸಮಿತಿಯವರೇ ನೋಡಿ, ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ.

'ಕನಸಲ್ಲ ನನಸು' ಕಥೆಯನ್ನು ವಿಮರ್ಶಿಸಿದವರಲ್ಲಿ ಶ್ರೀ. ಹಾ. ಕಸ್ತೂರಿ ಬಿ. ಎಸ್‌ಸಿ, ಸುರಪುರ ಮತ್ತು ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು ಇವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಜಿ ಎನ್. ಕುಂದರಗಿ ಅವರ ವಿಮರ್ಶೆ ಉತ್ತಮವಾಗಿದೆ. 'ಮಲಪತಿ ಅಣ್ಣ,' ಶ್ರೀ. ಸೀತಾರಾಮು ಎಸ್. ಜಾಗಿರದಾರ, ಶ್ರೀ ಉ. ಮೋಹನರಾವ್ ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವೆಲ್ಲ ತೀರ ಸಾಮಾನ್ಯವಾಗಿವೆ.

'ಬಲಿದಾನ' ರೂಪಕವನ್ನು ವಿಮರ್ಶಿಸಿದವರಲ್ಲಿ ಅತ್ಯುತ್ತಮವೆಂದು ಹೇಳಬಹುದಾದ ವಿಮರ್ಶೆ ಯಾರದೂ ಇಲ್ಲ. ಶ್ರೀ. ಕೆ ಎಸ್. ಕಟ್ಟಿ, ಧಾರವಾಡ ಮತ್ತು ಶ್ರೀ. ಗೋಪಾಲಕೃಷ್ಣ ಹುನಗುಂದ, ಮುಂಬಯಿ ಅವರ ವಿಮರ್ಶೆಗಳು ಉತ್ತಮವಾಗಿವೆ. ಅಲ್ಲದೆ ಶ್ರೀ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ, ಶ್ರೀ. ಎಸ್. ಪಿ. ಹಿರೇಮಠ, ಶ್ರೀ. ಜಿ. ಎನ್. ಕುಂದರಿಗಿ, ಶ್ರೀ. ಎನ್. ಎಸ್. ಭಟ್ಟ ಇವರ ವಿಮರ್ಶೆಗಳು ಚೆನ್ನಾಗಿವೆ ಮಿಕ್ಕುವೆಲ್ಲ ಸಾಮಾನ್ಯವಾಗಿವೆ.

ಮುಂದಿನ ಸಂಚಿಕೆಗಾಗಿ 'ಹಿಮಗಿರಿಯ ಅಡಿಯಲ್ಲಿ' ಎಂಬ ಕಥೆಯನ್ನಾಗಲಿ, 'ಆನಂದಯಜ್ಞ' ಎಂಬ ದೃಶ್ಯಕವನವನ್ನಾಗಲಿ ವಿಮರ್ಶಿಸಿ ಬರೆದು ಕಳುಹಬೇಕು.

—ಸಂಪಾದಕ

ಕನಸಲ್ಲ ನನಸು

(ಕಥೆಯ ವಿಮರ್ಶೆ)

ಶ್ರೀ. ಹಾ. ಕಸ್ತೂರಿ, ಸುರಪುರ

●

ಮಾನವ ವಿಧಿಯ ಕೈಗೊಂಬೆ. ವಿಧಿಯಾಡಿಸಿದಂತೆ ಆಡುವವರು ನಾವು. ವಿಧಿಯ ಬರಿಹವನ್ನು ಮೀರುವುದು ಅಸಾಧ್ಯ. ಮಂಕುತಿಮ್ಮನು ಹೇಳಿರುವಂತೆ ' ಬಾಳು ಜಟಕಾ ಬಂಡಿ, ವಿಧಿ ಅದರ ಸಾಹೇಬ! ' ಆ ಸಾಹೇಬನು ಹೂಡಿದತ್ತ ಸಾಗುವ ಕುದುರೆಗಳು ನಾವು. ಭಾಸನ ಮಾತಿನಲ್ಲಿ ಹೇಳಬೇಕಾದರೆ " ವಿಧಿರನತಿಕ್ರಮಣೀಯಃ! " ಇಳವಯಸ್ಸಿನಲ್ಲಿ ರಾಜ್ಯವನ್ನು ರಾಮನಿಗೆ ಬಿಟ್ಟುಕೊಟ್ಟು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ವನವನ್ನು ಕುರಿತು ತೆರಳಬೇಕೆಂದು ನಿಶ್ಚಯಿಸಿದ ದಶರಥನು, ರಾಮನನ್ನೇ ವನಕ್ಕೆ ಕಳುಹಬೇಕಾದ ಪ್ರಸಂಗವನ್ನು ತಂದು ಒಡ್ಡಿತು ಆ ವಿಧಿ! ಹೀಗೆ ದುಃಸಾಧ್ಯವಾದು. ದನ್ನೂ ಸಾಧ್ಯವಾಗಿಸಬಹುದಾದ ವಿಧಿ. ತನ್ನ ಕೈಚಳಕದಿಂದ ಅಣ್ಣ ತಂಗಿಯರನ್ನೂ ಪತಿ-ಪತಿಯರನ್ನಾಗಿಸಿ ' ಹೀಗೂ ಉಂಟೇ ? ' ಎಂದು ಉದ್ಗಾರ ತೆಗೆಸಬಲ್ಲುದು. ' ಹಾಗೂ ಉಂಟು ' ಎಂದು ತೋರಿಸುವುದೇ ಕನಸಲ್ಲ ನನಸಿನ ಕಥಾವಸ್ತು.

Export-Import ನಡೆಸುತ್ತಿದ್ದ ಮಗನಲಾಲರ ನಾಲ್ಕರು ಮುನ್ನಾಲಿಗಳಲ್ಲಿ, ದಿವ್ಯನೂ ಕಾರ್ಯತತ್ಪರನೂ ಆದುಗಿರಿಧರಲಾಲ್. ಸೇಠರಿಗೆ ಅಚ್ಚು ಮೆಚ್ಚಿನವ ಆತನ ಪತ್ನಿಯೇ ವೃಂದಾಳಾಬೇನ್. ಮಗನ್‌ಲಾಲರ ಉದಾರಾಶ್ರಯದಲ್ಲಿ ಕೃಷ್ಣಜೀವನವನ್ನು ನಡೆಸುತ್ತಿದ್ದ ಈ ಆದರ್ಶ ಪತಿ-ಪತ್ನಿಗಳಿಗೆ ಮಮತೆಯ ಕೇಂದ್ರದಂತಿದ್ದ ಅವರ ಮುದ್ದುಮಗ ಜೀವನಲಾಲ, ಅವರ ಆಶೆಯ ಒಂದೇ ಕುಡಿಯಾಗಿದ್ದನು ' Those whom the Gods love die young ' ಎಂಬಂತೆ, ದೇವರಿಗೆ ಈ ಮಗುವಿನ ಮೇಲೆ ಪ್ರೀತಿ ಹೆಚ್ಚಾಯಿತೇನೋ; ಆರುವರ್ಷದ ಜೀವನಲಾಲನನು ತನ್ನೆಡೆಗೆ ಕರೆದುಕೊಂಡು, ಇವರಿರ್ವರ ಬಾಳನ್ನು ಬರಿದು ಮಾಡಿದನು. ಅಷ್ಟೇ ಸಾಲದೆಂಬಂತೆ ವಿಧಿಯು ಮೈಲಿಯು ಬೇನೆಯಾಗಿ, ನೊಂದ ಪತಿ-ಪತ್ನಿಗಳಿರ್ವರನ್ನೂ ತಬ್ಬಿ. ಗಿರಿಧರಲಾಲನನ್ನು ಮಾತ್ರ ಸೆಳೆದುಕೊಂಡು ಮುಂದೆ ಸಾಗಿತು. " ಫಟಸ್ಯೋಪರಿ ಸ್ಫೋಟಃ " ಎಂಬಂತೆ, ಮೊನಲೇ ಮಗನ ಮರಣದಿಂದ ಮರುಗುತ್ತಿದ್ದ ವೃಂದಾಳಾಬೇನಳ ಮಂಗಳಸೂತ್ರವನ್ನೂ ನಿರ್ದಾಕ್ಷಿಣ್ಯವಾಗಿ ಮಾಡಿತು ಆ ವಿಧಿ ವಿಧಿಯ ಗಬ್ಬದಲಿ ಏನಡಗಿರುವುದೊ, ಆರು ಬಲ್ಲರು? ವಿಧಿ—ಇವಳೊಬ್ಬಳನ್ನಾದರೂ ವೃತ್ಯುವಿನ ದವಡೆಯಿಂದ ಉಳಿಸಿದ್ದೇಕೆ? (ಈ ಅಸಹಾಯಳಾದ ಹೆಣ್ಣಿನಿಂದ ವಿಧಿ ಏನನ್ನು ಸಾಧಿಸಬೇಕೆಂದಿದ್ದಿತೋ! ಆ ಉದ್ದಿಶ್ಯಸಾಧನೆಯು ಸಲುವಾಗಿಯೇ ಉಳಿಸಿರಬೇಕವಳನ್ನ !)

ವಿಶಾಲವಾದ ಪ್ರಪಂಚದಲ್ಲಿ ನಿರಾಕಿಂಚನಿಯಾಗಿ ಉಳಿದ ಈಕೆಗೆ, ಮಿಕ್ಕಾಯುಷ್ಯವನ್ನು ಹೇಗಾದರೂ ಕಳೆಯಲೆಂದು, ಅನಾಥಾಶ್ರಮದ ಕಾರ್ಯದರ್ಶಿನಿಗೆ ಸಹಾಯಕಳಾಗಿ ಈಕೆ ನಿಯಮಿಸಲ್ಪಡಲು ಮಗನಲಾಲರು ಸಹಾಯಕರಾದರು ಇದು ನಿಜವಾಗಿಯೂ ಅಭಿನಂದನೀಯ. ದೊಡ್ಡ ಬಂಡವಾಳಗಾರರೊಬ್ಬರು, ತಮ್ಮ ನೌಕರನ ವಿಧವೆಯ ಬಗ್ಗೆ ಇಷ್ಟು ಸಹಾನುಭೂತಿಯನ್ನು ತೋರಿಸುವುದು ವಿಧಿಪ್ರೇರಿತವೋ ಅಥವಾ ಅದು ಮಗನಲಾಲರ ಸಹಜಗುಣವೋ! ಅದು ಹೇಗೂ ಇರಲಿ, ಮೃದಳಾಬೇನಳಿಗೆ ಆಶ್ರಯಪ್ರೋದ್ದು ಸಿಕ್ಕಿದಂತಾಯಿತು. ಒಡೆದು ಹೋದ ತನ್ನ ಬದುಕಿನಲ್ಲಿ, ಅನಾಥ ಮಕ್ಕಳ ಸೇವೆ ಮಾಡುವುದಕ್ಕಿಂತ ಸುಖಕರವಾದ ಕೆಲಸ ಮತ್ತೊಂದಿಲ್ಲ. ಕಂದನನ್ನು ಕಳೆದುಕೊಳ್ಳುವುದೇನೆಂದರಿತಿರುವ ಇಂತಹ ಮಹಿಳೆಯರೇ, ಮಾತೆಯ ಮಮತೆಯಿಂದ ವಂಚಿತರಾದ ಮಕ್ಕಳಿಗೆ ಮಮತೆಯ ಮಾತೆಯಾಗುವುದು ಸಾಧ್ಯ. ಪುತ್ರವಿಹೀನಳಾಗಿ ಪರಿತಪಿಸುತ್ತಿದ್ದ ಇವಳ ಹೆಣ್ಣು ಹೃದಯಕ್ಕೆ ಶಾಂತಿಯೀಯಲೋ ಎಂಬಂತೆ, ವಿಧಿ ಇವಳನ್ನು ಅನಾಥಾಶ್ರಮಕ್ಕೆ ತಂದು ಸೇರಿಸಿತು. **ಹೀಗೆ ಇವಳ ಜೀವನದಲ್ಲಿಯ ಪ್ರತಿಯೊಂದು ಘಟನೆಯೂ ವಿಧಿಪ್ರೇರಿತವಾಗಿ, ವಿಧಿ ಇವಳ ಜೀವನವನ್ನು ರೂಪಿಸಲು ಹೊರಟಿರುವ ಶಿಲ್ಪಿಯಂತೆ ಭಾಸವಾಗುತ್ತದೆ.** ಅನತಿಕಾಲದಲ್ಲಿಯೇ ಇವಳು ಅನಾಥಾಲಯದ ಕಾರ್ಯದರ್ಶಿನಿಯಾದಳು. ಇಲ್ಲಿಗೆ ಕಥೆಯ ಮೊನಲನೆಯ ಘಟ್ಟ ಮುಗಿಯಿತು. ಮುಂದೆ ಮಗನಲಾಲರ ಸಂಸಾರದಲ್ಲಿ ಉಂಟಾದ ಒಂದು ಘಟನೆ, ಇವಳಿಗೆ ಅವರ ಸಂಸಾರಕ್ಕೆ ಮಹದುಪಕಾರ ಮಾಡುವ ಸುಯೋಗವೊದಗಿಸುತ್ತದೆ.

"God made the world and Rested
God made the man and Rested
God made the woman since
than neither God, nor man has rested"

ಎಂಬ ಉಕ್ತಿಗೆ ತಕ್ಕಂತೆ, ಮಗನಲಾಲರ ಮುದ್ದಿನ ಮಗಳು ಚಂಚಲಾ, ತನ್ನ ಪೆಸರನ್ನು ಸಾರ್ಥಕಗೊಳಿಸಲೋ ಎಂಬಂತೆ, ಮಗನಲಾಲರ ಮನಸ್ಸಿನ ವಿಶ್ರಾಮವನ್ನು ನಾಶಮಾಡಿದಳು. ಮಗನಲಾಲರ ಮನೆಯಲ್ಲೇ ಇದ್ದ—ಅವರ ದೂರದ ನಂಟು—ಶಂಬಾಲಾಲನೆಂಬ ಹುಡುಗನೊಡನೆ. ಚಂಚಲಾ ಇದ್ದಕ್ಕಿದ್ದಂತೆಯೇ ಕಾಣದಾದಳು. ಮಗನಲಾಲರು ಪ್ರಯತ್ನಪಟ್ಟು, ಮಗಳೆಡೆಯನ್ನು ಪತ್ತೆ ಹಚ್ಚಿ ಮನೆಗೆ ಕರೆತಂದರೂ ಅವರ ಚಿಂತೆ ಕಡಿಮೆಯಾಗಲಿಲ್ಲ. ಶಂಬಾಲಾಲನ ಮತ್ತು ಚಂಚಲಳ ಸಲುಗೆ ಅಷ್ಟರಲ್ಲೇ ಫಲಭರಿತವಾಗಿತ್ತು. ಮಗನಲಾಲರ ಮನಸ್ಸಿನ ಪರಿಸ್ಥಿತಿ, ' To be or not to be ' ಎಂಬ ಗೊಂದಲದಲ್ಲಿ ಬಿದ್ದ ಹ್ಯಾಮ್ಲೆಟ್ಟನಂತಿತ್ತು.

ಶಂಬಾಲಾಲನೊಡನೆ ಚಂಚಲೆಯ ವಿವಾಹ ಮಾಡಿಬಿಡುವುದೆಂದರೆ, ಮನಸ್ಸುಬಾರದು. ಅತ ತೀರ ನಿರ್ಗತಿಕ. ಮೇಲೆ ಶುದ್ಧ ಪೋಲಿ. ಬಿಟ್ಟುಬಿಡೋಣವೆಂದರೆ ಚಂಚಲೆ ವಿವಾಹವಿಧಿಯಿಲ್ಲದೆಯೇ

ಾಯಾಗಿ, ಸಮಾಜಬಾಹಿರಳಾಗುವಳು. ಭ್ರೂಣಹತ್ಯೆ ಮಾಡಿಸು-
ಂತಹ ನಿಷ್ಠಾರ ಮಗನಲಾಲರ ಮಡಿಮನಸ್ಸಿಗೆ ಜಾರದು. ಚಂಚಲ
ನ್ನು ಶಿಕ್ಷಿಸೋಣವೆಂದರೆ, ದೈವನೇ ಅವಳಿಗೆ ಭೋಗದ ಫಲವನ್ನಿತ್ತು
ಕ್ಷಿಸಿದೆ. ಮತ್ತು ಶಿಕ್ಷಿಸುವುದರಿಂದಲೂ ಪ್ರಯೋಜನವೇನೂ ಇಲ್ಲ.
ಚಂಚಲಳ ಮೇಲಿನ ಮಮತೆ, ಅವಳನ್ನು ಯಾವ ರೀತಿಯಲ್ಲಾದರೂ
ಕ್ಷಿಸಬೇಕೆಂದು ಒತ್ತಾಯಪಡಿಸುತ್ತಿದೆ. ಅಜ್ಞಾನದಿಂದ ಒಂದು
ಥಲ ಕಾಲುಜಾರಿದ ಮಾತ್ರಕ್ಕೆ, ಜೀವನಾವಧಿ ಅವಳು ಕಷ್ಟಪಡುವು-
ನ್ನು ಹೆತ್ತ ಹೊಟ್ಟೆ ಸಹಿಸದು ಮಗಳ ಮೇಲಿನ ಅಪಾರವಾದ
ಸ್ನೇಹದಿಂದ, ಅವಳ ಅಪರಾಧವನ್ನು ಕ್ಷಮಿಸಲು ತಂದೆ ಸಿದ್ಧರಾಗಿದ್ದಾರು
ಮಗಳ ಮೇಲಿನ ಮಮತೆಯಿಂದ ತಂದೆ ಕ್ಷಮಿಸಿದರೆನ್ನೋಣ; ಆದರೆ
ಸಮಾಜ ತನ್ನ ವಕ್ರದೃಷ್ಟಿಯನ್ನು ಮಗಳ ಮೇಲೆ ಬೀರದಿರುವುದೇ?
ಸಮಾಜಕ್ಕೆ ಇಂತಹ ಅವಕಾಶಗಳನ್ನು ಬಿಟ್ಟರೆ, ಕೆಲಸನಿಲ್ಲಜೆ
ಕೂಡಬೇಕಾದೀತು! 'To err is human, To forgive
is divine' ಎಂಬುದನ್ನರಿಯದ ಸಮಾಜ, ಈ ರೀತಿ ಅಜ್ಞಾನದಿಂದ
ದಾರಿತಪ್ಪಿದ ಹೆಣ್ಣುಮಕ್ಕಳ ಸಮಸ್ಯೆಗೆ ಪರಿಹಾರವನ್ನೊದಗಿಸಿ,
ಅವರಿಗುಪಕಾರ ಮಾಡುವ ಬದಲಾಗಿ, ಇಂತಹ ಪರಿಸ್ಥಿತಿಯ ದುರುಪ-
ಯೋಗಪಡಿಸಿಕೊಂಡು, ನಾಲ್ಕು ಜನರನ್ನು ದೂರುವ ತನ್ನ ಚಟವನ್ನು
ತೃಪ್ತಿಪಡಿಸಿಕೊಳ್ಳುತ್ತದೆ. ಆದರೆ ಎಷ್ಟು ಜನರು ತಮ್ಮ ಧನಬಲದಿಂದ
ಇದೇ ಸಮಾಜದ ಕಣ್ಣಿಗೆ ಮಣ್ಣು ಎರಚಿಲ್ಲ? ಸಮಾಜವು ಇಂತಹ
ಹೆಣ್ಣುಮಕ್ಕಳ ಪರಿಸ್ಥಿತಿಯನ್ನು ಸಹಾನುಭೂತಿಯಿಂದ ಕಾಣುವಷ್ಟು
ವಿಶಾಲ ಹೃದಯವನ್ನು ಹೊಂದಿದ್ದರೆ, ಈ ಕಥೆಯಲ್ಲಿ ಮುಂದಾಗುವ
ದುರ್ಘಟನೆ ಆಗುತ್ತಲೇ ಇರಲಿಲ್ಲ. ಈ ಕಥೆಯಲ್ಲಾದ ಘಟನೆ ಸಾಧ್ಯ-
ವಾಗಬಹುದಾದರೆ, ಅದು ವಿಧಿಯ ಆಟವಲ್ಲ; ಸ್ವಯಂಕೃತಾಪರಾಧ; ನಾವೇ ಮಾಡಿಕೊಂಡ ವಿಧಿಯೆನ್ನಬಹುದು). ಸಮಾಜದಲ್ಲಿ ತನ್ನ
ಸ್ಥಾನ, ಮಾನ, ಅಂತಸ್ತು, ಗೌರವ ಇವುಗಳ ಗತಿ? ಇವುಗಳನ್ನೂ
ಉಳಿಸಿಕೊಂಡು, ಚಂಚಲೆಯ ಭವಿಷ್ಯವನ್ನೂ ಹಾಳಾಗದಂತೆ ಮಾಡುವ
ಮತ್ತು ಏನೂ ಅರಿಯದ ಮಗುವಿನ ಜೋಪಾನಮಾಡುವ ಉಪಾಯ್ಯ
ವೇನು?—ಎಂಬ ಪ್ರಶ್ನೆ ಮಗನಲಾಲರ ಮನಸ್ಸಿನ ಮುಂದೆ ಮಹದ್ಭೂತ
ವಾಗಿ ಎದ್ದುನಿಂತಿದ್ದಿತು. ಚಂಚಲೆಯನ್ನು ಮನೆಯ ಹೊರಗೆ ಬಾರ
ದಂತೆ ಮನೆಯೊಳಗೇ ಗುಪ್ತವಾಗಿರಿಸಿದ್ದರೂ, ಈ ರಹಸ್ಯ ಎಲ್ಲಿಯ
ವರೆಗೆ ರಹಸ್ಯವಾಗಿರಲು ಸಾಧ್ಯ? 'ಅಳಿಯನ ಕುರುಡು ಬೆಳಗಾದರೆ'
ಎಂಬಂತೆ, ನಾಳೆ ಮಗುವಾದನಂತರ ಗುಟ್ಟು ರಟ್ಟಾಗದಿರುವುದೇ?
ಈ ರೀತಿಯ ಸಂದಿಗ್ಧ ಪರಿಸ್ಥಿತಿಯಲ್ಲಿರುವಾಗಲೇ, ಚಂಚಲೆ ಹಡೆ-
ದಿದ್ದಳು. ಸಮಯಸ್ಫೂರ್ತಿಯೋ ವಿಧಿಪ್ರೇರಿತವೋ ಎಂಬಂತೆ,
ಮಗನಲಾಲರಿಗೆ, ಅನಾಥಾಶ್ರಮದ ಮೃದುಳಾಬೇನ್‌ಳ ನೆನಪಾಯಿತು.
ಚಂಚಲೆಯ ಮಗುವನ್ನು ಅನಾಥಾಶ್ರಮಕ್ಕೊಪ್ಪಿಸಿ, ಮೃದುಳಾಬೇನ್‌ಳ
ಪೋಷಣೆಗೊಳಪಡಿಸುವುದೇ ಯುಕ್ತವಾದುದೆಂದೆಣಿಸಿ, ಮೃದುಳಾ-
ಬೇನ್‌ಳನ್ನು ಮನೆಗೆ ಕರೆಸಿ, ಪರಿಸ್ಥಿತಿಯನ್ನವಳಿಗೆ ವಿವರಿಸಿ, ಮಗುವ-
ನ್ನವಳಿಗೆ ಒಪ್ಪಿಸಿದರು. ಸೇತಜಿಯವರ ಉದಾರಾಶ್ರಯದಲ್ಲಿ ಬೆಳೆದ
ಅಕೆಗೆ, ಅವರಿಗೆ ಪ್ರತ್ಯುಪಕಾರ ಮಾಡುವ ಸುಯೋಗ ಈ ರೀತಿ-
ಯಲ್ಲಾದರೂ ಒದಗಿದುದರಿಂದಲೂ, ಮತ್ತು ಹೆಣ್ಣಿನ ಹೃದಯವನ್ನು
ಅರಿತವಳೂ ಆದುದರಿಂದಲೂ, ಈ ಕರ್ತವ್ಯನಿರ್ವಹಣೆಗೆ ಸಂತೋಷ
ದಿಂದ ಒಪ್ಪಿಕೊಂಡಳು. ಮೃದುಳಾ ಆ ಮಗುವಿನ ಪೋಷಣೆಯನ್ನು
ಒಪ್ಪಿಕೊಂಡದ್ದರಿಂದ, ಆ ಮಗುವಿನ ಹುಟ್ಟಿನ ರಹಸ್ಯ ಬೇರೊಬ್ಬರಿಗೆ
ಭಯಲಾಗುವ ಭಯವಿರಲಿಲ್ಲ. ಮಗುವಿಗವಳು ಪ್ರೇಮಕುಮಾರ
ನೆಂದು ನಾಮಕರಣ ಮಾಡಿದಳು. (ಮುಂದೆ ಆ ಮಗು, ನಾಲ್ಕಾರು
ಜನರ ಸ್ನೇಹದಿಂದ ಮಾತ್ರ ಬೆಳೆದು ದೊಡ್ಡವನಾಗಬೇಕಾಗಿದ್ದುದ
ರಿಂದ, ಪ್ರೇಮಕುಮಾರನೆಂದು ಅವಳು ಕರೆದಿರಬೇಕೇ ವಿನಾ ಅಂಬಾ
ಲಾಲರ-ಚಂಚಲೆಯ ಪ್ರೇಮದ ಕುರುಹಾದ ಕುಮಾರನೆಂದು ಹಾಗೆ
ಕರೆದಿರಲಿಕ್ಕಿಲ್ಲವಷ್ಟೆ). ಮಗು ಅನಾಥಾಶ್ರಮವನ್ನು ಸೇರಿತು.
ಮೃದುಳಾ ಮಾತೆಯಾಗಿ ಮಮತೆಯನ್ನು ನೀಡಿದಳು.

ಮಗನಲಾಲರ ಮನಸ್ಸಿಗೂ ಸಮಾಧಾನವಾಯಿತು. ಚಂಚ-
ಲೆಯ ವಿವಾಹವೂ ಬೇರೊಬ್ಬನೊಡನೆ ನಡೆದು ಹೋಯಿತು. ವಿಧಿಯು
ಮಗನಲಾಲರನ್ನು ಚಂಚಲೆಯು ಮದುವೆ, ಅವಳು ವಿವಾಹಪೂರ್ವ
ಪಡೆದ ಮಗುವಿನ ಜೋಪಾನ ಇವುಗಳನ್ನು ಮಾಡಿದ ನಂತರ ಅವರ
ಆವಶ್ಯಕವೇನೂ ಇಲ್ಲವೆಂಬಂತೆ, ಸೆಳೆದೊಯ್ದಿತು. ಇಲ್ಲಿಗೆ ವಿಧಿಯ-
ದಿಗ್ದರ್ಶನದಲ್ಲಿ ನಡೆಯುತ್ತಲಿರುವ ಈ ನಾಟಕದಲ್ಲಿ ಮಗನಲಾಲರ
ಪಾತ್ರ ಮುಗಿಯಿತು. ಇದು ಕತೆಯ ಎರಡನೆಯ ಘಟ್ಟ.

ಮೃದುಳಾಬೆನ್‌ಳ ಬರಡಾದ ಜೀವನದಲ್ಲಿ ಪ್ರೇಮಕುಮಾರ
ಆಸೆಯ ಸುಳಿಯಾಗಿ ಬಂದಿದ್ದನು. ಮಗುವನ್ನು ಬೆಳೆಸಿ ದೊಡ್ಡ
ದಾಗಿ ಮಾಡಿ ಸುಖದಿಂದಿರುವುದನ್ನು ನೋಡುವುದೇ ಅವಳ ಏಕ-
ಮಾತ್ರ ಆಸೆಯಾಗಿದ್ದಿತು. ಈ ಆಶಾತ್ರಿಲನೇ ಅವಳ ಜೀವನದ
ದೀಪವನ್ನು ನಂದಿಸದೆ ಇತ್ತು. ವಿಧಿ ಆ ಮಗುವಿಗೆ ಅನುಕೂಲ-
ವಾಗಿದ್ದಿತೇ ಅಥವಾ ಪ್ರತಿಕೂಲವಾಗಿದ್ದಿತೇ?—ಎಂಬ ಪ್ರಶ್ನೆಗೆ ಆ
ಮಗು ಕುಮಾರಿಯೊಬ್ಬಳಿಗೆ ಹುಟ್ಟಿದುದರಿಂದ ಸಮಾಜಬಾಹಿರ!
ಆದರೆ ಹಿಂದಿನ ಸಮಾಜ ಈ ರೀತಿಯ ಕಾನೀನರನ್ನು ಒಲುಮೆ-
ಯಿಂದ ಕಂಡಿಲ್ಲವೆ? ಪಸುಳೆಯನು ಚೆಲ್ಲೆ ರಾಜರ್ಷಿಯು, ಮುದ್ದಿಸಿದ
ಮುನಿಯು' ಆರವಳು? ಭರತನಲ್ಲವೆ ನಮಗೆ ಪಿರಿಯನು? ಸಮಾಜ
ಒಂದುಕಾಲಕ್ಕೆ ಇಂತಹುದಕ್ಕೆ ಸಮ್ಮತಿಯೀಯದಿದ್ದರೂ, ಸಹಾನು-
ಭೂತಿಯನ್ನು ದಯೆಪಾಲಿಸಿದ್ದಿತು. ಆದರೆ ಬರಬರುತ್ತಾ ಸಂಕುಚಿತ
ವಾದ ಸಮಾಜ, ತನ್ನದೇ ಆದ ನಿಯಮಗಳನ್ನು ಸೃಷ್ಟಿಸಿಕೊಂಡಿತ್ತು.
ಅಂತಹ ಸಮಾಜದ ಕಣ್ಣಿಗೆ ಮಗನಲಾಲರು ಮಣ್ಣೆರಚಿದ್ದರು.
ಸಮಾಜಕ್ಕೆ ಆ ಮಗುವಿನ ಹುಟ್ಟಿನ ಗುಟ್ಟು ತಿಳಿಯದುದರಿಂದಲೂ,
ಮತ್ತು ಅಂತಹ ಸಮಾಜದಲ್ಲೂ ಮೃದುಳಾನಂತಹ ನಾರಿಯರು
ಇದ್ದುದರಿಂದಲೂ, ಸಮಾಜ ಸುಮ್ಮನಿತ್ತು. ಇನ್ನು ಮಗುವಿನ ತಂದೆ.
ಆತನಿಗೆ ತನ್ನ ಆಕೃತ್ಯದ ಅರಿವಾಗಲಿ, ಪಶ್ಚಾತ್ತಾಪವಾಗಲಿ ಇರಲಿಕ್ಕಿ
ಲ್ಲವೋ ಏನೋ! ಈ ಮಗುವಿನ ಜನ್ಮಕ್ಕೆ ಕಾರಣರಾಗಲು ಮಾತ್ರ
ವಿಧಿ ಅವರಿಬ್ಬರನ್ನೂ ಕ್ಷಣಕಾಲ ಒಂದು ಮಾಡಿ, ಅನಂತರ ಸರ್ವ
ಕಾಲಕ್ಕೂ ಬೇರೆಯಾಗಿಸಿತ್ತೋ ಏನೋ! ತಾಯಿಯಿದ್ದರೂ ಲಕ್ಷಾಧಿ-

ಕಾರಿಯು ದೌಹಿತ್ರನಾದರೂ ಬೆಳೆಯಲು ಸೇರಿದುದು ಅನಾಥಾಶ್ರಮ! ಅದರೂ ವಿಧಿ ಅಸ್ಟ್ರ ಕ್ರೂರವಾಗಿದ್ದೆ, ಮಾತೃಪ್ರೇಮ ವಂಚಿತನಾದ ಈ ಮಗುವಿನ ಜೀವನದಲ್ಲಿ ಮೃದುಳಾನನ್ನು ತಂದೊಡ್ಡಿತು. ಹೀಗೆ ವಿಧಿಯು ಮಗುವಿನ ಜೀವನವನ್ನೂ ರೂಪಿಸಲು ತನ್ನ ಮನಬಂದಂತೆ ಸಾಗಿದ್ದಿತು.

ವಿಧಿಯಾದರೋ ತನ್ನ ಕೈಚಳಕವನ್ನು ಅಲ್ಲಿಗೇ ನಿಲ್ಲಿಸದೆ ಶೀಘ್ರಗತಿಯಿಂದ ಮುಂದೆ ಸಾಗುತ್ತದೆ. ಆದು ಮೃದುಳಾ ನುಶ್ತು ಮಗುವಿನೊಡನೆ ಕಣ್ಣುಮುಚ್ಚಾಲೆಯಾಡುತ್ತಿರುವಂತೆ ಭಾಸವಾಗುತ್ತದೆ. ಮೃದುಳಾಬೇನ್‌ಳ ಜೀವನದಲ್ಲಿ ಹೊಂದಿಕೊಂಡಿದ್ದ ಮಗುವನ್ನು ಆಕೆಯಿಂದ ಬೇರೆಯಾಗಿಸುವ ಪ್ರಸಂಗವನ್ನು ತಂದೊಡ್ಡುತ್ತದೆ. ಅವಳ ಜೀವನದಲ್ಲಿ ಒಂದರ ಮೇಲೊಂದು ಘಟನೆಗಳು, ಅವಳಿಗೆ ವಿರಮಿಸಲೂ ಅವಕಾಶನೀಯದಂತೆ ನಡೆಯುತ್ತವೆ. ಸುಖ-ದುಃಖಗಳನ್ನು ಒಂದರ ನಂತರ ಮತ್ತೊಂದರಂತೆ ತಂದೊಡ್ಡಿ, ಮಗುವಿನೊಡನೆ ಆಟವಾಡುತ್ತಾ ಅದನ್ನು ಅಳಿಸುತ್ತಲೂ ನಗಿಸುತ್ತಲೂ ಸಂತೋಷಪಡುವಂತೆ, ವಿಧಿ ಮೃದುಳಾ ಮತ್ತು ಮಗುವಿನೊಡನೆ ಆಟವಾಡುವಂತೆ ಭಾಸವಾಗುತ್ತದೆ. ಮೃದುಳಾ ತನ್ನ ಹಿಂದಿನ ಬದುಕಿನಲ್ಲಾದ ಘಟನೆಗಳ ಪರಿಣಾಮದಿಂದ ಅದ ಗಾಯ ಮಾಯುವುದರಲ್ಲೇ ಮತ್ತೊಂದು ಗಾಯವನ್ನುಂಟುಮಾಡುವುದು ಅನಾಥಾಶ್ರಮಕ್ಕೆ ನಿಸ್ಸಂತಾನರಾಗಿದ್ದ ರಸಿಕಲಾಲರ ಆಗಮನವಾಗುತ್ತದೆ. ಸಾಕಿಕೊಳ್ಳಲು ಮಗುವೊಂದನ್ನು ಬಯಸಿ ಅನಾಥಾಶ್ರಮಕ್ಕೆ ಬಂದಿದ್ದ ಅವರಿಗೆ, ಮೊಟ್ಟಮೊದಲಿನಲ್ಲಿಯೇ ಪ್ರೇಮಕುಮಾರನ ದರ್ಶನವಾಗುತ್ತದೆ. ರಸಿಕಲಾಲರಿಗೆ ಆ ಮಗುವಿನ ಮೇಲೆ ಒನ್ಸ್‌ಮೊರ್‌ನಲ್ಲೇ ಪ್ರೀತಿ ಉದ್ಭವಿಸುತ್ತದೆ. ಮೃದುಳಾ ಬೇನ್‌ಳನ್ನು ಆ ಮಗುವಿನ ಸಲುವಾಗಿ ಬೇಡುತ್ತಾರೆ. ಮಗುವಿನ ಭವಿಷ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಮಗುವನ್ನು ಅವರಿಗೆ ಸಾಕಿ ಕೊಳ್ಳಲು ಕೊಟ್ಟುಬಿಡುವುದೇ ಉಚಿತವೆಂದು ನಿರ್ಧರಿಸಿ, ಮಗುವನ್ನು ರಸಿಕಲಾಲರಿಗೆ ವಶಪಡಿಸುತ್ತಾಳೆ. ಮಗುವನ್ನು ಒಪ್ಪಿಸಿಕೊಡುವಾಗ ಮಗುವನ್ನು ಪ್ರೇಮಕುಮಾರನೆಂಬ ಹೆಸರಿನಿಂದಲೇ ಸಾಕಬೇಕೆಂದು ಬೇಡಿಕೊಳ್ಳುತ್ತಾಳೆ. "ಮುಂದೆ ಮಗುವನ್ನು ಇದೇ ಹೆಸರಿನಿಂದಲೇ ಗುರುತಿಸಬೇಕಾದ ಸನ್ನಿವೇಶ ಬರಬಾರದೇಕೆ?" ಎನ್ನುವ ಅವಳ ವಾಕ್ಯಗಳು ಗಮನಾರ್ಹವಾದುವು. ಇಪ್ಪತ್ತಮೂರು ವರ್ಷಗಳ ನಂತರ ಅವಳ ಹೆಸರಿಗೆ ಬಂದ ಮದುವೆಯ ಕರೆಯೋಲೆಯಲ್ಲಿ ಅಚ್ಚೊತ್ತಿದ್ದ ಪ್ರೇಮಕುಮಾರನ ಹೆಸರು ಕಂಡುಬಂದ ಕ್ಷಣ. ಆ ಮಗುವಿನ ನೆನಪು ಬರುತ್ತದೆ. ಅವರ ವಧುವಿನ ಹೆಸರನ್ನು ಓದಿದ ಕ್ಷಣ, ಕ್ಷಣಕಾಲ ಭ್ರಾಂತಳಾಗಿ, ತಾನು ನೋಡುತ್ತಿರುವುದು ಕನಸೋ ಎಂದೆನಿಸುತ್ತದೆ. ವಧು ಯಾರೂ ಅಲ್ಲದೆ ಚಂಚಲೆಯು ಮಗಳೇ ಆಗಿರುತ್ತಾಳೆ. ಪ್ರೇಮಕುಮಾರ ಚಂಚಲೆಯು ಸಮಾಜವೊಪ್ಪದ ಬಾಂಧವ್ಯದ ಫಲ—ವಧು ಚಂಚಲೆಯ ಸಮಾಜವೊಪ್ಪಿದ ಬಾಂಧವ್ಯದ ಫಲ! ಹೀಗೆ ಸಂಬಂಧದಿಂದ ಅಣ್ಣತಂಗಿಯರು—ವಿಧಿಯ ಆಟದಿಂದ ಈಗ ಪತಿಪತ್ನಿಯರಾಗಲಿದ್ದರು. ಇದಕ್ಕೆ ಕಾರಣರಾರು? ಯಾರನ್ನು ದೂರಬೇಕು? ಇದನ್ನು ತಪ್ಪಿಸಲು ಮೃದುಳಾಬೇನಳಿಗೆ ಸಾಧ್ಯವೇ? ಮೃದುಳಾಬೇನಳಿಗೆ ಮದುವೆಗೆ ಹೋಗುವುದಕ್ಕೂ ಅವಕಾಶವಿರದಂತೆ, ಅದೇ ದಿನ ಅವಳಿಗೆ ಮದುವೆಯ ಕರೆಯೋಲೆ ಕೈಸೇರಿದ್ದಿತು. 'ದೈವಲಿಲೆ ವಿಚಿತ್ರ' ಎಂದು ದಂಗುಬಡಿದವಳಂತೆ ಕುಳಿತುಬಿಡುವಳು.—ಇದು ಕಥೆ.

ಹೀಗೆ ಈ ಕಥೆಯಲ್ಲಿ ಮೊದಲಿನಿಂದ ಕಡೆಯವರೆಗೂ ವಿಧಿಯು ಕೈವಾಡವಿರುವುದು ಗೊತ್ತಾಗುತ್ತದೆ. ಈ ಕಥೆಯ ಅಂತಿಮ ಘಟನೆಗೆ ಅಜ್ಞಾತದ ಹಿನ್ನೆಲೆಯೇ ಕಾರಣ. ಈ ಅಜ್ಞಾತದ ಹಿನ್ನೆಲೆಯನ್ನು ವಿಧಿ ಸೃಷ್ಟಿಸುವುದರಲ್ಲಿ ಯಶಸ್ವಿಯಾಗಿದೆ. ಕಥೆಗಾರರು ವಿಧಿಯ ಕೈಚಳಕವನ್ನು ಚಿತ್ರಿಸಿರುವುದರಲ್ಲಿ ಇನ್ನೂ ಯಶಸ್ವಿಯಾಗಿದ್ದಾರೆ. ಚಂಚಲೆಗೆ ಪ್ರೇಮಕುಮಾರ ಯಾರೆಂಬುದರ ಅರಿವಿಲ್ಲ; ರಸಿಕಲಾಲರಿಗಾದರೋ ಪ್ರೇಮಕುಮಾರನಿಗೂ ಚಂಚಲೆಗೂ ಇರುವ ಸಂಬಂಧದ ಅರಿವೂ ಇರಲಿಲ್ಲ. ಇನ್ನು ರಹಸ್ಯವನ್ನು ಅರಿತವರೆಂದರೆ ಮಗನಲಾಲ ಮತ್ತು ಮೃದುಳಾ. ಮಗನಲಾಲರು ಮೃತರಾಗಿದ್ದರು ಮೃದುಳಾಬೇನರಿಗೆ ರಹಸ್ಯದ ಅರಿವಿದ್ದರೂ, ಅಕೆ ಮಾಡಲು ಸಾಧ್ಯವಾಗಿದ್ದುದಾದರೂ ಏನು? ಆದುದರಿಂದ ಅವಳ ಮೌನವೇ ಬಹು ಉತ್ತಮವೆನಿಸುತ್ತದೆ. ಇದರ ಹೊರತು ಅವಳಿಗೆ ಬೇರಾವ ವಾರಿಯೂ ಸಾಧ್ಯವಿರಲಿಲ್ಲ ಆ ಮಗುವಿನ ಭವಿಷ್ಯವನ್ನು ರೂಪಿಸುವುದರಲ್ಲಿ ಅವಳನ್ನು ವಿಧಿ ಒಂದು ಉಪಕರಣವನಾಗಿಸಿತ್ತು. ಅಷ್ಟೆ! ಪ್ರೇಮಕುಮಾರನನ್ನು ರಸಿಕಲಾಲರಿಗೊಪ್ಪಿಸಿದ ಬಳಿಕ ಮೃದುಳಾಬೇನಳ ಕರ್ತವ್ಯ ಮುಗಿದಿತ್ತು. ಆದುದರಿಂದಲೇ ಅವಳ ಮಗು ಇನ್ನು ಎಲ್ಲಾದರೂ ಸುಖವಾಗಿ ಬೆಳೆಯಬಹುದೆಂಬ ಸಂಪೂರ್ಣ ಭರವಸೆಯಿಂದ, ಅದರ ಬಗ್ಗೆ ಮತ್ತೊಮ್ಮೆ ಆಲೋಚನೆಯನ್ನೂ ಮಾಡಿರಲಿಲ್ಲ

ಚಂಚಲೆಗೆ ಅವಳ ತಂದೆ ಮಗುವನ್ನು ಅನಾಥಾಶ್ರಮಕ್ಕೆ ಕೊಟ್ಟಿರುವ ವಿಷಯ ಹೇಳಿರಲಿಲ್ಲವೇ? ಅಥವಾ ಚಂಚಲೆಯಾದರೂ ಮಗುವಿಗೇನುಪಾಯ ಮಾಡಿದೆಯೆಂದು ತಂದೆಯನ್ನು ಕೇಳಿರಲಿಕ್ಕಿಲ್ಲವೇ? ಚಂಚಲೆಗೆ ಮಗುವನ್ನು ಮೃದುಳಾಗೆ ಒಪ್ಪಿಸಿದ ವಿಷಯವನ್ನೂ, ಅದಕ್ಕೆ ಪ್ರೇಮಕುಮಾರನೆಂದು ಹೆಸರಿಟ್ಟ ವಿಷಯವನ್ನೂ ತಿಳಿಸಿದ್ದರೆ, ಆ ಭಾಷ ತಪ್ಪುತ್ತಿರಲಿಲ್ಲವೇ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಮಗನಲಾಲರ ಮುಂದೆ, ತನ್ನ ಗೌರವವನ್ನೂ ಮುರ್ಯಾದೆಯನ್ನೂ ಚಂಚಲೆಯ ಭವಿಷ್ಯವನ್ನೂ ರಕ್ಷಿಸಿಕೊಳ್ಳುವ ಮಹತ್ತರವಾದ ಸಮಸ್ಯೆ ಪ್ರಬಲವಾಗಿದ್ದುದರಿಂದ, ಅದಷ್ಟು ಗುಟ್ಟಾಗಿ ಮಗುವನ್ನು ಮನೆಯಿಂದ ಹೊರಗೆ ಸಾಗಿಸಿ ಜೋಪಾನವಾಡಬೇಕೆಂಬುದೇ ಅವರ ಉದ್ದೇಶವಾಗಿದ್ದಿತು. ಆ ಉದ್ದೇಶಪೂರ್ಣತೆಗಾಗಿ ಚಂಚಲೆಳಿಗೂ ಆ ವಿಷಯವನ್ನು ಹೇಳಿರಲಿಕ್ಕಿಲ್ಲವೆಂದರೆ ಒಪ್ಪಬಹುದು. ಇನ್ನು ಚಂಚಲೆಳಾದರೋ ಅಜ್ಞಾನದಲ್ಲಿ ಕಾಲುಜಾರಿದ್ದಳು. ಅರಿವಿನಿಂದ ಅಂಬಾಲಾಲನೊಡನೆ ಅವಳು ಪಲಾಯನ ಮಾಡಿದ್ದಲ್ಲ. ಅವಳು ತಂದೆಯ ಬಲವಂತದಿಂದಲಾದರೂ ಹಿಂತಿರುಗುವ ಪ್ರಶ್ನೆ ಕಠಿನವಾಗಿದ್ದಿತು. ಆದುದರಿಂದ ಚಂಚಲೆಗೆ ಅಂಬಾಲಾಲನಲ್ಲಿ ಬಲವತ್ತರವಾದ ಪ್ರೇಮವಾಗಲಿ, ಅಥವಾ ತನ್ನ ಭವಿಷ್ಯದ ಯೋಚನೆಯಾಗಲಿ ಇರಲಿಲ್ಲ. ಬರಿಯ ದುಡುಕುತನದಿಂದ, ವಯಸ್ಸಿನ ಪ್ರಭಾವದಿಂದ

ದಾರಿತಪ್ಪಿದ್ದಳು. ಮಗುವಿನ ವಿಷಯದಲ್ಲಿಯಾಗಲಿ ಅಥವಾ ತನ್ನ ಭವಿಷ್ಯವನ್ನು ತಾನೇ ನಿರೂಪಿಸಿಕೊಳ್ಳುವುದಕ್ಕಾಗಲಿ ಅವಳಿಗೆ ಸಾವಕಾಶವಿರಲಿಲ್ಲ. ತನ್ನ ಅಕೃತ್ಯಕ್ಕೆ ನಾಚಿಕೆಯೂ ಪರಿತಾಪವೂ ಉಂಟಾಗಿದ್ದಿತು ತಂದೆ ತನ್ನನ್ನು ಅತಿ ನಮ್ರತೆಯಿಂದ ಕಾಣುತ್ತಿದ್ದುದರಿಂದಲೂ ಮತ್ತು ಅತೀ ಮಮತೆಯ ಕಾರಣದಿಂದ ತನ್ನ ತಪ್ಪನ್ನು ಮನ್ನಿಸಲೂ ಸಿದ್ಧನಾಗಿದ್ದುದರಿಂದಲೂ 'ತಂದೆ ಏನು ಮಾಡಿದರೂ ಅದೆಲ್ಲವೂ ತನ್ನ ಶ್ರೇಯಸ್ಸಿಗಾಗಿ' ಎನ್ನುವ ಭಾವನೆಯಿಂದ ತಂದೆಯನ್ನು ಮಗುವಿನ ಬಗ್ಗೆ ಪ್ರಶ್ನೆಮಾಡುವ ಧೈರ್ಯಮಾಡಿರಲಿಕ್ಕಿಲ್ಲ ವೆಂದರೂ, ಅದೂ ಸಮಾಧಾನವಾಪ ಕಾರಣವೇ ? ಹಾಗಾದರೆ ಚಂಚಲೆ ಎಷ್ಟಾದರೂ ಹೆಣ್ಣಲ್ಲವೆ ? ಅವಳಿಗೆ ತನ್ನ ಮಗುವಿನ ಬಗ್ಗೆ ಯಾವಾಗ ಲಾದರೂ ಮನಸ್ಸು ತವಕಪಡುತ್ತಿರಲಿಲ್ಲವೇ ?—ಎಂಬ ಪ್ರಶ್ನೆಗೆ ಅವಳೇನೂ ಬಯಸಿ ಆ ಮಗುವನ್ನು ಪಡೆದಿರಲಿಲ್ಲ. ಆಕಸ್ಮಿಕವಾಗಿ ಆ ಜೀವ ಅವಳಲ್ಲಿ ಜನ್ಮ ತಳೆದಿತ್ತು. ಅದು ಅವಳ ಭವಿಷ್ಯಕ್ಕೇ ಕಂಟಕ ಪ್ರಾಯವಾಗಿದ್ದುದರಿಂದ—ತಂದೆ ಅವನ್ನು ಅವಳಿಂದ ದೂರಮಾಡಿದ, ಅದು ಒಂದು ರೀತಿಯಲ್ಲಿ ಅವಳಿಗೆ ಸಮಾಧಾನವನ್ನೇ ತಂದಿದ್ದಿತು ಎಂದರೆ ತಪ್ಪಿಲ್ಲ.

ಅಣ್ಣ-ತಂಗಿಯರಾಗಬೇಕಾದವರನ್ನು ವಿಧಿ ಪತಿ-ಪತಿಯರಾಗುವ ಹಾಗೆ ಸಂದರ್ಭವನ್ನು ತಂದೊಡ್ಡಿದರೆ, ಅದು ಸಮಾಜಕ್ಕೆ ಮಾನ್ಯವೇ ? ಈ ರೀತಿಯ ಘಟನೆಗಳು ನಡೆಯಬಹುದಾದರೂ ಕೋಟ್ಯಂತರದಲ್ಲಿ ಒಂದು ಎನ್ನಬಹುದು. ಯಾವಾಗಲೂ ಇದೇ ರೀತಿ ಆಗಲು ಸಾಧ್ಯವಿಲ್ಲ. ಸಮಾಜಕ್ಕೆ ಅವರಿಬ್ಬರೂ ಅಣ್ಣ-ತಂಗಿಯರೆಂಬುದು ತಿಳಿವಿಲ್ಲದುದರಿಂದ ಅದು ಮಾನ್ಯವೇ ಸರಿ! ಅಲ್ಲದೆ ದಂಪತಿಗಳಿಗೂ, ತಾವಿಬ್ಬರೂ ಅಣ್ಣ-ತಂಗಿಯರೆಂಬುದು ಗೊತ್ತಿಲ್ಲ. ಅಲ್ಲದೆ ಜೊತೆಯಲ್ಲಿ ಬೆಳೆಯದೆ ಇದ್ದುದರಿಂದ, ಅಣ್ಣ-ತಂಗಿಯ ನಲುಮೆಯ ಬಾಂಧವ್ಯದ ಭಾವ ಅವರಲ್ಲಿ ಉದ್ಭವವಂತೂ ಆಗಿಲ್ಲ. ಅಜ್ಞಾತದ ಹಸ್ತಲೆಯಲ್ಲಿ ಅವರಿಗೆ ಆಗುತ್ತಿರುವ ಅಭಾಸದ ತಿರಿವಿಲ್ಲ ಆಂಗ್ಲರ ವಾದದ ಪ್ರಕಾರ. ಸೃಷ್ಟಿಯ ಆದಿಯಲ್ಲಿ ಇದ್ದವರಿಬ್ಬರೇ Adam-Eve. ನಾವೆಲ್ಲರೂ ಅವರಿಬ್ಬರ ಸಂತಾನಗಳೇ. ಎಂದಮೇಲೆ ಪ್ರಪಂಚದಲ್ಲಿ ವಿಶಾಲ ದೃಷ್ಟಿಯಿಂದ ನೋಡಿದರೆ ನಾವೆಲ್ಲರೂ ಅಣ್ಣ-ತಂಗಿಯರೇ—ಎಂದು ಇದನ್ನೂ ಸಮಾಧಾನವಾನಸ್ಸಿನಿಂದ ವೀಕ್ಷಿಸಬಹುದು. ಜ್ಞಾತವಾದರೆ ತಾನೇ ತಪ್ಪು ? ಅಜ್ಞಾತವಾದರೆ ತಪ್ಪೂ ಒಪ್ಪಾಗಬಹುದು.

ಸೂತಕಸುತನಾವ ಸೃಷ್ಟಿಯ ತನುಜನು ವೊಡಲಿಗನು
ಸುಖಿಯಾದ ನಿನ್ನೊಲುಮೆಯ ಮಡಿಲಲಿರುವನಕ
ತಾಯಿ-ಮಗ ಎಂದರಿತೊಡನೆಯೆ ಡರಿಗೊಳಗಾದ
ಅನನ ಬಯಕೆಯ ಬುವಿಯು ಸೀಳಿತ್ತು-ಕಳೆದಿತ್ತು.

(ಶ್ರೀನಿವಾಸ)

ಹೀಗೆ ವಿಧಿಯು ಅಘಟಿತವನ್ನೂ ಘಟಿತವನ್ನಾಗಿ ಮಾಡಲು ಹೇಗೆ ಸಾಧ್ಯವಿದೆಯೆಂಬುದನ್ನು ಎಲ್ಲಿಯೂ ಎಡಪದೆ ಚಿತ್ರಿಸಿರುವುದ ರಲ್ಲಿ, ಕತೆಗಾರರು ಬಹು ಯಶಸ್ವಿಗಳಾಗಿದ್ದಾರೆ. ಕತೆಯಲ್ಲಿ ಯಾವ ಕುಂದು-ಕೊರತೆಯೂ ಕಂಡುಬರುವುದಿಲ್ಲ ಓದುಗರ ಮನಸ್ಸು ಕತೆಯನ್ನು ಮೆಚ್ಚುವುದರಲ್ಲಿ ಸಂದೇಹವಿಲ್ಲ. ಕತೆಯಲ್ಲಿ ಅವಶ್ಯಕತೆಗೆ ತಕ್ಕಷ್ಟು ಮಾತ್ರ ಪಾತ್ರಗಳಿವೆ. ಪ್ರತಿಯೊಂದು ಪಾತ್ರವೂ ಕತೆಯ ಐಕ್ಯತೆಗೆ ಸಹಾಯಕವಾಗಿದೆ. ಯಾವ ಪಾತ್ರವೂ ಅವಶ್ಯಕತೆಗಿಂತ ಹೆಚ್ಚಾಗಿ ಚಿತ್ರಿಸಲ್ಪಟ್ಟಿಲ್ಲ. ಶೈಲಿ ಚೆನ್ನಾಗಿದೆ, ಭಾಷೆ ಸರಳ, ಅಲ್ಲಲ್ಲಿ ಉತ್ಪ್ರೇಕ್ಷಾಲಂಕಾರಗಳ ಉಪಯೋಗ ಸಂದರ್ಭಕ್ಕೆ ಸೂಕ್ತವಾಗಿ ಉಪಯೋಗಿಸಲ್ಪಟ್ಟಿದೆ.

ಇನ್ನು ಶೀರ್ಷಿಕೆಯ ವಿಷಯ— ಸಮಂಜಸವಾಗಿಯೇ ಇದೆ ಯೆನ್ನಬೇಕು. ಮೃದುಳಾ ತಾನು ನೋಡುತ್ತಿರುವುದು ಕನಸೋ ಎಂಬ ಭಾಸವಾಗುತ್ತದೆ; ಆದರೆ ಅದು 'ಕನಸ್ಸು, ನನಸು!'

ಇದನ್ನು ಓದಿದ ನಂತರ—

ನಿನ್ನ ಮಹಿಮೆಯನೆಂತು ತಿಳಿವುವಜ್ಞಾತವೇ
ಸೃಷ್ಟಿಯೊಡೆಯನ ಮಾಯೆಯೋ, ಕಲೆಯೊ-ಲೀಲೆಯೋ ?
ಉರುಳುತಿಹ ಕಾಲದವಸರವೋ ಅಣುಕಿನಣುಕೋ
ನಿನ್ನ ಗಬ್ಬದಲೀನಡಗಿಹುದೋ ? ಆರರಿವರು..... ...
ಸಲುಮೆ ನಮ್ಮಲಿ ಪಳಗೆ ಕುಲಗೋತ್ರ ಬಾಂಧವ್ಯ
ಅಣ್ಣ-ತಂಗಿಯ ಕಟ್ಟು, ಗಂಡ-ಹೆಂಡಿರ ಗುಟ್ಟು
ಸಂಸ್ಕೃತಿಪವಾಸ, ಸಂಸ್ಕೃತಿಯ ಸ್ಥಿರವಾಸ
ಕಲ್ಲು ಹೆಣ್ಣಾಗುವುದು-ನಂಜು ಹಾಲಾಗುವುದು. (ಶ್ರೀನಿವಾಸ)

—ಎನಿಸುವುದು

ಬಲಿದಾನ

(ಐತಿಹಾಸಿಕ ರೂಪಕವಿಮರ್ಶೆ)

ಶ್ರೀ. ಕೆ. ಎಸ್. ಕಟ್ಟಿ, ಧಾರವಾಡ

●

ಈ ರೂಪಕವನ್ನು 'ಎನ್ಸೀಶಂ' ಅವರು, ಐತಿಹಾಸಿಕ ಸಂಗತಿಯೊಂದನ್ನು ಓದುಗರ ಮನದಲ್ಲಿ ಮೂಡುವಂತೆ, ಉಚಿತವಾದ ಕೆಲವೇ ಕೆಲವು ಪಾತ್ರಗಳನ್ನಾಯ್ದುಕೊಂಡು, ಹೆಣೆದಿದ್ದಾರೆ. ಈ ವಿಷಯಕವಾದ ನಾಟಕ, ಕಥೆ ಮುಂತಾದುವುಗಳು ಕನ್ನಡಿಗರಿಗೇನೂ ಅಪರಿಚಿತವಲ್ಲ. ಯಾವುದೊಂದು ಸಂದಿಗ್ಧ ಸ್ಥಿತಿ ಒದಗಿಬಂದಾಗ, ದೇವಿಯೊಬ್ಬಳು ಜನರ ಪರೀಕ್ಷೆಗಾಗಿಯೊ ಅಥವಾ ಅದೊಂದು ಅಕೆಯ ನೋಜಿಗಾಗಿಯೊ, ಏನೇ ಇರಲಿ—ಆಕೆ ಒಂದು ವ್ಯಕ್ತಿಯ ಬಲಿದಾನವನ್ನು ಅಪೇಕ್ಷಿಸುವುದು ಸಹಜವಾದ ರೀತಿಯಾಗಿ ಬಿಟ್ಟಿದೆ. ಅಂತೆಯೇ ನಾವು ಇಂಥವೇ ಸನ್ನಿವೇಶಗಳನ್ನೊಳಗೊಂಡ "ಗಂಗೆ ಅಳೆದ ಗಂಗಮ್ಮ" "ಕೆರೆಗೆ ಹಾರ" ಇತ್ಯಾದಿ ಕಥಾಭಾಗಗಳನ್ನು ಕಂಡಿದ್ದೇವೆ. "ಬಲಿದಾನ" ಎಂಬುದು ಇದೇ ಜಾತಿಗೆ ಸೇರಿದ್ದು.

"ಮಹಾಕಾಳಿ" ಯು ಗೌಡನೊಬ್ಬನ ಬೇಡಿಕೆಯಂತೆ ಪುರಜನರ ಸಮ್ಮುಖದಲ್ಲಿ ಅಶರೀರ ವಾಣಿಯಿಂದ 'ನನಗೆ ಗರ್ಭಿಣೀ ಸ್ತ್ರೀ ಯೊಬ್ಬಳ ಬಲಿ ಬೇಕು' ಎಂದು ಕೂಗಿ ಹೇಳುವುದು, ಆಧುನಿಕ ಮನಸ್ಸಿಗೆ ಅಷ್ಟು ಸರಿಯಾಗಿ ಕಾಣಲಿಕ್ಕಿಲ್ಲ. ಈ ರೂಪಕವನ್ನು ಓದುವಾಗ "ವೈಜ್ಞಾನಿಕ" ವಿಚಾರಗಳು ನಮ್ಮ ತಲೆಯಲ್ಲಿ ಸುಳಿದಾಡುತ್ತಿದ್ದರೆ ನಡೆಯದು. ಉದಾ: ಕೋಟೆಯು ಬಾಗಿಲನ್ನು ಕೂಡಿಸುವಾಗ ಅದರ ಮೂಲ Foundationನ್ನೇ ತಪ್ಪಿರಬೇಕು. ಕದಕ್ಕೇ ಅದು ಬಿದ್ದಿರಬಹುದು—ಇತ್ಯಾದಿ) ಇಲ್ಲಿ ನಮಗೆ ಮುಖ್ಯವಾಗಿ ಬೇಕಾದಿರುವುದು—ಕಥೆಯು ಉದ್ದೇಶಮೊಡನೆ ಸರಿಹೊಂದಿಕೊಂಡು ಹೋಗುವುದು. ವಿಮರ್ಶೆ ಮಾಡುವಾಗಲಾದರೂ ಬಲಿದಾನವಾದ ಲಕ್ಷ್ಮಿಯ ಗುಣಗಾನವೇ ಝರಿಯಾಗಿ ಹರಿದು ಬರಬಹುದು. ಇಲ್ಲವೆ ಆಗಿನ ಕಾಲದ ಜನರ ಭಕ್ತಿಭಾವನೆ, ಶಿಷ್ಟಾಚಾರ, ದೇಶಪ್ರೇಮ ಮುಂತಾದುವುಗಳನ್ನೂ ಈಗಿನವರ ಸ್ವಭಾವವನ್ನೂ ತುಲನೆ ಮಾಡಬಹುದು. ಆದರೆ "ಒಟ್ಟಿನಲ್ಲಿ ಇಂತಹ ಬಲಿದಾನವೇ ಅಸಂಭವನೀಯ" ಎನ್ನುವುದು ಮೂರ್ಖತನವಾದೀತು.

ಕಥೆಯ ಮೂಲ ಉದ್ದೇಶವೆಲ್ಲಾ ಲಕ್ಷ್ಮಿಯ ಅಪೂರ್ವವಾದ ತ್ಯಾಗವನ್ನು ಎತ್ತಿ ತೋರಿಸುವುದೇ ಆಗಿದೆ. ತನ್ಮೂಲಕ ಕನ್ನಡ ಮಹಿಳೆಯರ ಉಚ್ಚ ಮಟ್ಟದ ಆದರ್ಶವನ್ನೂ ಎತ್ತಿ ತೋರಿಸಬಹುದು. ಈ ಕಥಾಭಾಗದಲ್ಲಿ ಬಂದ ಲಕ್ಷ್ಮಿಯು ಝಾಂಸಿಯ ಲಕ್ಷ್ಮೀಬಾಯಿ, ಬೆಳವಡಿ ಮಲ್ಲಮ್ಮ, ಚಾಂದಬೀಬಿ, ನೂರ್ಜಿಯವರ "ನಿಜಗಲ್ಲಿನ ರಾಣಿ" ಯಲ್ಲಿಯ ಗಿರಿಜಮ್ಮೆ ಮುಂತಾದ ನಾರೀಮಣಿಯರಿಗೆ ಯಾವ ರೀತಿಯಿಂದಲೂ ಕಡಿಮೆಯವಳಲ್ಲ. ಲಕ್ಷ್ಮಿ, ಬಲಿದಾನವೆಸಗಿದ ಕಾರ್ಯಕ್ಷೇತ್ರ ಸಣ್ಣದಿರಬಹುದು; ಆದರೆ ಅಕೆಯ ತ್ಯಾಗಕ್ಕೇನು ಕಡಿದೆ?

ಮೊದಲೇ ಹೇಳಿದಂತೆ, ಇಲ್ಲಿ ಬರುವ ಪಾತ್ರಗಳ ಸಂಖ್ಯೆ ಬಹು ಕಡಿಮೆ. ಕೆಂಪೇಗೌಡ, ಮಂತ್ರಿ, ನಾಗರಿಕರಿಬ್ಬರು, ಲಕ್ಷ್ಮಿ ಮತ್ತು ದಾಸಿ ಪಾತ್ರದೃಷ್ಟಿಯಿಂದ ನೋಡಿದರೆ, ಯಾವ ಪಾತ್ರವೂ ಎದ್ದು ಕಾಣುವಂತಿಲ್ಲ. ಲೇಖಕರು ಮೂಲಪಾತ್ರವಾದ ಲಕ್ಷ್ಮಿಯ ದಿಸೆಯಲ್ಲಿ ಸಂತೂ ಎಡವಿಬಿದ್ದಿದ್ದಾರೆ. ಎಂದರೆ ಅದು ಎಷ್ಟು ಪ್ರಭಾವಶಾಲಿ ಯಾಗಬೇಕಾಗಿತ್ತೋ ಅಷ್ಟಾಗಿಲ್ಲ. ಏಕೆಂದರೆ, ಲಕ್ಷ್ಮಿಯನ್ನು ನಾಟಕದ ಕೊನೆಯ ಭಾಗದಲ್ಲಿ ತಂದು, ಏನೋ ಒಂದೆರಡು ಮಾತುಗಳನ್ನು ಆಕೆಯ ಬಾಯಲ್ಲಿ ನುಡಿಸಿ, ಅಷ್ಟಕ್ಕೇ ಆಕೆಯನ್ನು ಮಹಾಕಾಳಿಗೆ ಬಲಿಕೊಟ್ಟಿಬಿಟ್ಟಿದ್ದಾರೆ ಯಾರೂ ನೋಡದಂತೆ! ಲೇಖಕರು ಹೀಗೇಕೆ ಮಾಡಬೇಕಾಗಿತ್ತು? ನಮಗೆ ಅತೀವ ಅಸಮಾಧಾನವಾಗುವುದು ಇಲ್ಲಿಯೇ. ಲಕ್ಷ್ಮಿಯ ಹಿರಿಮೆಯನ್ನು ಸಂಪೂರ್ಣವಾಗಿ ಎತ್ತಿ ತೋರಿಸುವುದಕ್ಕೆ ಆಕೆಗೆ ಕೊಟ್ಟ ಅವಧಿ ಸಾಲದು. ಲಕ್ಷ್ಮಿಯು, ಕಥೆಯ ಪ್ರಾರಂಭದಲ್ಲಿಯೇ ಬಂದು ತನ್ನ ಅಪಾರವಾದ ಕರುಣೆಯಿಂದ ಪುರಜನರ ಹೃದಯವನ್ನು ಕಲಕಿ ಅವರ ಶಾಶ್ವತ ಪ್ರೀತಿಯನ್ನು ಸಂಪಾದಿಸಿಕೊಂಡಿರುವ ಸನ್ನಿವೇಶ ಬರಬೇಕಾಗಿತ್ತು. ಆ ಮಹಾತಾಯಿಯುದೇ ಬಲಿದಾನವಾದಾಗ, ಸಹಜವಾಗಿಯೇ ಓದುಗರ ಕಡೆಯಿಂದ ಇನ್ನಷ್ಟು ಮರ್ಯಾದೆ ಹೊಂದಿಸಿಕೊಳ್ಳುತ್ತಿದ್ದಳು ಲಕ್ಷ್ಮಿ. ಎರಡನೆಯದಾಗಿ ಲಕ್ಷ್ಮಿ ಬಹಿರಂಗವಾಗಿ ಏಕೆ ತನ್ನ ಬಲಿದಾನ ಮಾಡಿಕೊಳ್ಳಲಿಲ್ಲ? ಈ ಪ್ರಶ್ನೆ ನಮ್ಮನ್ನು ಬಾಧಿಸುತ್ತದೆ. ಅತ್ತೆ-ಮಾವಂದಿರು ತಡೆದಾರೆಂಬ ಭೀತಿಯಿಂದಲೇ? ಅಥವಾ ಗುಪ್ತವಾಗಿ ಸಾವನ್ನಪ್ಪಿಕೊಂಡು ಇನ್ನಷ್ಟು ತನ್ನ ಕೀರ್ತಿ ಹೆಚ್ಚಲೆಂದೇ? ಈ ಎರಡನೆಯ ಕಾರಣ ಯಾವ ಕಾಲಕ್ಕೂ ಸರಿಹೊಂದಲಾರದು. ಯಾಕೆಂದರೆ ಮಹಾನುಭಾವಳಾದ ಲಕ್ಷ್ಮಿಗೆ ತನ್ನ ಕೀರ್ತಿಯ ಬಗ್ಗೆ ಆಸ್ಥೆಯೆಲ್ಲಿ? ಮೊದಲನೆಯ ಕಾರಣ ಸರಿಯಾದುದಾಗಿದ್ದರೆ ಲಕ್ಷ್ಮಿ ತಪ್ಪುಮಾಡಿರುವಳೆಂದು ಹೇಳಬೇಕಾಗುವುದು. ಮಾನವನಾದ ಕೆಂಪೇಗೌಡನೇನೋ ತನ್ನ ಸೊಸೆಯ ಹತ್ಯಕ್ಕೆ ಅಡ್ಡಿ ಮಾಡಿಯೇ ಮಾಡುತ್ತಿದ್ದ. ಜೊತೆಗೆ ಪುರಜನರಾದರೂ ಏನು ಸುಮ್ಮನಿರುತ್ತಿದ್ದರೆ? ಅದರೂ ತನ್ನನ್ನು ಬಲಿ ಅರ್ಪಿಸಿಕೊಳ್ಳಬೇಕೆಂದೇ ನಿಶ್ಚಯಿಸಿಕೊಂಡಿದ್ದ ಲಕ್ಷ್ಮಿ, ಈ ಕ್ಷುಲ್ಲಕ ಕಾರಣಕ್ಕಾಗಿ ಭಯಪಡಬೇಕಾಗಿಲ್ಲ. ಆಕೆ ಬಹಿರಂಗವಾಗಿ ತನ್ನ ಉದ್ದೇಶವನ್ನು ತಿಳುಹಿ, ಎಲ್ಲರ ಮನವೊಲಿಸಬೇಕಾಗಿತ್ತು. ಒಮ್ಮೆ ಆಸ್ಟು ಮಾಡಿದ ಬಳಿಕ, ಯಾವ ಸಂಶಯ ಅವಳ ಮನದಲ್ಲಿ ಉಳಿದೀತು? ಆಕೆ ಮಡಿದ ಬಳಿಕ ವ್ಯಸನ, ದುಃಖಗಳಿಗೆ ಒಳಗಾಗುವ ಸಂದರ್ಭ ಕೆಂಪೇಗೌಡನಿಗಾದರೂ ಎಲ್ಲಿ ಬರುತ್ತಿತ್ತು? ಇದನ್ನು ನಾನು ಯಾಕೆ ಹೇಳುತ್ತಿದ್ದೇನೆಂದರೆ, ಅತ್ತೆ-ಮಾವಂದಿರ ಅಶೀರ್ವಾದ ಸಹಿತ ಲಕ್ಷ್ಮಿಯ ಬಲಿಯಾಗಿದ್ದರೆ, ಆಕೆಯ ಪುಣ್ಯ, ಕೋಟೆಯನ್ನು ರಕ್ಷಿಸುವಲ್ಲಿ ಇನ್ನಿಷ್ಟು ಸಹಾಯವಾಗುತ್ತಿತ್ತೇನೋ! ಇರಲಿ.

ಇನ್ನು ಮಂತ್ರಿಯ ವಿಷಯ: ಅವನು "ಸಲಹೆಗಾರ ಮಂತ್ರಿ" ಅಲ್ಲವೇ ಅಲ್ಲ. ಹಿಂದೆ ಆಗಿ ಹೋದ ವಿಷಯಗಳನ್ನು ಓದುಗರಿಗೆ ಸರಿಹೊಂದಿಸಿ ಹೇಳುವುದಕ್ಕೆಂದು ಲೇಖಕರು ಅವನನ್ನು ಉಪಯೋಗಿಸಿಕೊಂಡಿದ್ದಾರೆಂದು ತೋರುತ್ತದೆ. ಏಕೆಂದರೆ, ಕೋಟೆಯ ಮುಖ್ಯದ್ವಾರದ ಬಾಗಿಲು ಮೂರನೆಯ ಸಲವೂ ಬಿದ್ದಾಗ, ಕೆಂಪೇಗೌಡ—ಅದು ಹಾಗೆ ಬೀಳಲಿಕ್ಕೆ ಕಾರಣವೇನು, ಅದನ್ನು ಭದ್ರವಾಗಿಸುವುದಕ್ಕೆ ಉಪಾಯಗಳಾವವು, ಎಂಬುದಾಗಿ ಮಂತ್ರಿಯನ್ನು ವಿಚಾರಿಸಿದರೆ—ಆ ಮಂತ್ರಿ ಸಲಹೆ ಕೊಡುವ ಗೋಜಿಗೇ ಹೋಗದೆ, ಕೊನೆಯವರೆಗೂ ಹಿಂದೆ ಆಗಿಹೋದ ವಂಗತಿಯನ್ನೇ ವಿವರಿಸುತ್ತಾನೆ. ಇಂತಹ ಮಂತ್ರಿಗಳು ಕಾಣಸಿಗುವುದು ಅಪರೂಪ! ಇರಲಿ; ಅದು ಅಷ್ಟು ಮುಖ್ಯ ಅಲ್ಲವೆಂದುಕೊಳ್ಳೋಣ. ಇನ್ನು ನಾಟಕದಲ್ಲಿ ಬರುವ "ನಾಗರಿಕರು" ದಾಸಿ ಮುಂತಾದ ಪಾತ್ರಗಳು ರಂಗದ ಮೇಲೆ ಹೆಚ್ಚು ಕಾಲ ನಿಲ್ಲುವುದಿಲ್ಲವಾದ್ದರಿಂದ, ಓದುಗರ ಮನಸ್ಸಿನಲ್ಲಿ ಚಿರಕಾಲ ಮೂಡಲಾರವು. ಆದರೂ ಲೇಖಕರು 'ನಾಗರಿಕರಿಬ್ಬರ' ಪಾತ್ರಗಳನ್ನಾಯ್ದುಕೊಂಡದ್ದು ಉಚಿತವಾಗಿದೆ. ದಾಸಿ ಮಲ್ಲವ್ವ. ಹಾಗೂ ಒತ್ತಿಯ ಲಕ್ಷ್ಮೀದೇವಿ ಇವರ ಸ್ನೇಹಮಯ ಮೈತ್ರಿಯನ್ನು ಇನ್ನಷ್ಟು ಬೆಳೆಸಿ, ದಾಸಿ ಅಶಿಕ್ಷಿತಳಾದರೂ ಅವಳ ಹೃದಯದಲ್ಲಿರುವ ಉದಾತ್ತವಾದ ವಿಚಾರಗಳನ್ನು ಹಳ್ಳಿಗಾಡಿನ ಭಾಷೆಯಲ್ಲಿ ಅವಳ ಬಾಯಲ್ಲಿ ನುಡಿಸಿದ್ದರೆ, ಇನ್ನೂ ಚೆನ್ನಾಗಿರುತ್ತಿತ್ತೇನೋ! ಇದ್ದುದರಲ್ಲಿ ಕೆಂಪೇಗೌಡನ ಪಾತ್ರ ವಾಸಿ.

ಗೊತ್ತಿದ್ದ ಕಥೆಯನ್ನೇ ತಿರುಗಿ ಮತ್ತೆ ಓದುಗರ ಮನಸ್ಸಿನ ಮೇಲೆ ಮೂಡಿಸಬೇಕಾದರೆ, ಲೇಖಕನ ಶೈಲಿ ನೂತನವಾಗಿರಬೇಕು. ಹಿಂದಕ್ಕೆ ಇದೇ ವಸ್ತುವೇ ಕಥಾರೂಪದಲ್ಲಿ ಹೇಳಲ್ಪಟ್ಟಿದ್ದರೆ ಈಗ ಇದನ್ನೇ ನಾಟಕಕ್ಕೆ ತಿಳಿವಡಿಸಿಕೊಳ್ಳಬೇಕು. ಈ ದಿಶೆಯಲ್ಲಿ ಎನ್ಸೀಶಂ' ಅವರು ಯಶಸ್ವಿಯಾಗಿದ್ದಾರೆ. ಅವರ ಶೈಲಿ ನಿರರ್ಗಳವಾಗಿಯೂ, ಕೆಲವೆಡೆಯಲ್ಲಿ ವೀರವತ್ತಾಗಿಯೂ ಹರಿದು ಬಂದು ಓದುಗರಿಗೆ ಬೇಸರ ತರಿಸುವುದಿಲ್ಲ. ಈ ಮಾತನ್ನು ಮಾತ್ರ ಒಪ್ಪತಕ್ಕದ್ದೇ. ನಾಟಕವನ್ನೋದಲುಪಕ್ರಮಿಸಿದರೆ, ಅರ್ಧಕ್ಕೇ ನಿಲ್ಲದಂತೆ ಮಾಡಬಲ್ಲ ಶಕ್ತಿ ಲೇಖಕರಿಗೆ ಧಾರಾಳವಾಗಿದೆಯೆನ್ನಬಹುದು. ಅದರ ಬಲದಿಂದಲೇ ಅವರು ಓದುಗರನ್ನು ಎಳೆದೊಯ್ಯಬಲ್ಲರು. ತಲೆಬರಹವು 'ಬಲಿದಾನ' ಎಂದು ಇದ್ದುದರಿಂದ, ಸಾಮಾನ್ಯದರ್ಜೆಯ ಓದುಗನು ಬಲಿದಾನವೇಕೆ? ಯಾರ ಬಲಿದಾನ?—ಇಷ್ಟನ್ನು ತಿಳಿದುಕೊಳ್ಳಲು ಪ್ರಯತ್ನ ಪಡುವನು. 'ಗರ್ಭಿಣೀ ಸ್ತ್ರೀಯ' ಬಲಿದಾನವೆಂಬುದಂತೂ ಮೊದಲ ಅವಧಿಗೇ ತಿಳಿಯುವುದು. ಮುಂದೆ ಒಂದು ಸ್ತ್ರೀಯ ಪಾತ್ರ—ಅದೇ ಮಲ್ಲಪ್ಪ— ನಾಟಕದಲ್ಲಿ ಪ್ರವೇಶಿಸುತ್ತದೆ. 'ಮತ್ತೆ ಹಾಂತಿಯಾಗ್ತದೇನ್ರಮ್ಮಣ್ಣಿ?' ಎಂದು ಮಲ್ಲಪ್ಪ ತನ್ನ ಒಡತಿಯನ್ನುದ್ದೇಶಿಸಿ ಕೇಳಿದಾಗ, ಆಕೆಯೇ ಲಕ್ಷ್ಮಿಯೆಂದೂ ಆಕೆ ಗರ್ಭಿಣಿಯಾಗಿರಬೇಕೆಂದೂ ಮತ್ತು ಬಲಿಯಾಗಲು ಬಂದ ದಿಟ್ಟ ಸ್ತ್ರೀ ಇವಳೇ ಎಂದೂ ಊಹಿಸಲು ಓದುಗನಿಗೆ ಕೊಂಚವೂ ಕಾಲ ಹಿಡಿಯುವುದಿಲ್ಲ. ಅಂತೆಯೇ ಕಥೆಯ ಕೊನೆಗೆ ಬಂದಾಗ, ಅವನ ಚಿತ್ತದಲ್ಲಿ ಕುತೂಹಲಕಾರಿಯಾದುದೇನೂ ಉಳಿದಿರುವುದಿಲ್ಲ.

ಒಟ್ಟನಲ್ಲಿ "ಬಲಿದಾನ" ಚರಪರಿಚಿತವಿರುವ ಕಥಾವಸ್ತುವನ್ನೊಳಗೊಂಡ, ಅಧುನಿಕ ತಿಳಿಗನ್ನಡದ, ಉಚ್ಚ ಧ್ಯೇಯದ, ಚೆಕ್ಕದಾದರೂ ಚೊಕ್ಕಟವಾದ ರೂಪಕವಾಗಿದೆ. ಜನತೆಗೆ ಗೊತ್ತಿಲ್ಲದಿರುವ ಇನ್ನೂ ಎಷ್ಟೋ ಐತಿಹಾಸಿಕ ಘಟನೆಗಳು 'ಎನ್ಸೀಶಂ' ಅವರಿಂದ ಸಾಹಿತ್ಯರೂಪದಲ್ಲಿ ಹೊರಬರಲೆಂದು ಹಾರೈಸೋಣ.

(ತಿಂಳನೆಯ ಪುಟದಿಂದ ಮುಂದುವರಿದುದು)

ರಾ. ಪು. ಆಯೋಗದವರು ಇವಾವ ಮಾತಿನ ವಿಚಾರವನ್ನೂ ಮಾಡಿದಂತಿಲ್ಲ. ಮಲಯಾಳವನೇ ಆದ ಶ್ರೀ. ಪಣಿಕ್ಕರರು ಸದಸ್ಯರಾಗಿ ಇದ್ದುದರಿಂದ, ಕಾಸರಗೋಡು ತಾಲೂಕನ್ನು ಸಹಜವಾಗಿಯೆ ಮಲಯಾಳಕ್ಕೆ ಸೇರಿಸಿಬಿಟ್ಟಿರಬಹುದು. ಆಯೋಗದ ವರದಿಯನ್ನು ನೋಡಿದರೆ, ಕೆಲವೊಂದು ಸ್ವಭಾವಶಾಲಿ ವ್ಯಕ್ತಿಗಳ ಲಹರಿಗಳೂ ಅದರ ಮೇಲೆ ಸ್ವಭಾವ ಬೀರಿವಂತೆ ಕಾಣುತ್ತದೆ. ಈ ವೈಯಕ್ತಿಕ ಲಹರಿಗಳ ದುಷ್ಪರಿಣಾಮವನ್ನು ಈಗ ಕನ್ನಡಿಗರೇ ಹೆಚ್ಚಾಗಿ ಅನುಭವಿಸಬೇಕಾಗಿ ಬಂದಿದೆ. ಏನೇ ಆಗಲಿ ಕಾಸರಗೋಡಿನ ಕನ್ನಡಿಗರು ಜಾಗೃತರಾಗಿ ಕನ್ನಡತನವನ್ನು ಉಳಿಸಿಕೊಳ್ಳಲು ಚಟುವಟಿಕೆ ಪ್ರದರ್ಶಿಸುವುದು ಸಂತೋಷದ ಸಂಗತಿಯಾಗಿದೆ

ಮೈಸೂರಿನ ಕೆಲವು ಮುಂದಾಳುಗಳ ಮೂರಾಬಟ್ಟೆಯ ಬುದ್ಧಿ

ಇಂದು ಅಧಿಕಾರಸೂತ್ರಗಳು ಕೈಯಲ್ಲಿರುವ ಕೆಲವು ಜನ ಮೈಸೂರಿನ ಧುರೀಣಬ್ರುವರು, ಕೇವಲ ವರ್ತಮಾನಸ್ವಾರ್ಥಬುದ್ಧಿಯೊಂದರಿಂದಲೇ ಹೊರಟಿದ್ದಾರೆ. ವಿಶಾಲಕರ್ನಾಟಕದಲ್ಲಿ ತಮಗೆ ಸ್ಥಾನ-ಮಾನಗಳು ದೊರೆಯಲಿಕ್ಕಿಲ್ಲವೆಂಬ 'ದೀನನಾನುತನ' ಭಾವ ಅವರದು. ಕರ್ತೃತ್ವಶಾಲಿಯಾದವನು ಜಗತ್ತಿನ ಮೇಲೆಯೆ ತನ್ನ ಪ್ರಭಾವವನ್ನು ಬೀರಿ ದೊಡ್ಡವನಾಗಬಲ್ಲ. ಅತನಿಗೆ ಅಂತಹ ಆತ್ಮವಿಶ್ವಾಸವು ಇದ್ದೇ ಇರುವುದು. ಆದರೆ 'ಹಾಳೂರಲ್ಲಿ ಉಳಿದವನೇ ಗೌಡ'ನಾಗಿ ಮೆರೆಯಬೇಕೆನ್ನುವ ಹೇಡಿ, ತುಂಬಿದೂರಿಗೆ ಹೋಗಲು ಎಂದೂ ಮನಸ್ಸು ಮಾಡನು. ಇಂದು ಪ್ರತ್ಯೇಕ ಮೈಸೂರನ್ನು ಅಪೇಕ್ಷಿಸುವವರ ತಿಳಿವಳಿಕೆ ಇಂತಹ ಹೇಡಿತನದ್ದೇ ಆಗಿದೆಯೆಂದು ಹೇಳಬಹುದು

ಕರ್ನಾಟಕವನ್ನು ಹಿಂದೆ ಒಡೆದುಹಾಕಿದುದು, ಅಂದಿನ ನಮ್ಮ ಜನರ ಈ ಬಗೆಯ ಹೇಡಿತನದ ಸ್ವಾರ್ಥವೇ ಸರಿ ಅವರ ದುಷ್ಪರಿಣಾಮವನ್ನು ೨೦೦-೩೦೦ ವರ್ಷಗಳ ವರೆಗೆ ಕನ್ನಡ ಜನತೆ ಸಾಕಷ್ಟು ಅನುಭವಿಸಿದೆ. ನಮ್ಮ ಮನೆಯಲ್ಲಿಯೇ ನಾವು ಆಳುಗಳಂತೆ ಬಾಳುವ ಗೋಳು ನಮ್ಮದಾಗಿತ್ತು. ಆ ಗೋಳನ್ನು ಕಳೆದುಕೊಳ್ಳಲಿಕ್ಕೆಂದೇ ಎಲ್ಲರೂ ಒಟ್ಟುಗೂಡಿ ಇರಲು ಬಯಸಿ, ಒಂದೇ ಕರ್ನಾಟಕಕ್ಕಾಗಿ ಇದುವರೆಗೆ ಹೋರಾಡಿದೆವು ಈಗ ನಮ್ಮ ಹೋರಾಟಕ್ಕೆ ಫಲದೊರೆಯಲಿರುವ ಕಾಲದಲ್ಲಿ, ಮತ್ತೆ ನಮ್ಮ ದುರ್ದೈವ ನಮ್ಮನ್ನು ಕಾಡಲು ತೊಡಗಿದೆ. ಮೈಸೂರು ಜನತೆಯ ಬೆಂಬಲವು ಈ ನಾಯಕರಿಗೆ ಇಲ್ಲವಾದರೂ, ಇದ್ದ ಸ್ಥಾನಬಲವನ್ನು ತಮ್ಮ ಸ್ವಾರ್ಥಸಾಧನೆಗಾಗಿ ಇವರು ಉಪಯೋಗಿಸತೊಡಗಿದ್ದಾರೆ. ಇಂದಿನ ತಪ್ಪು ನಡೆಗಾಗಿ ಮುಂದೆ ಇವರಿಗೆ ಪಶ್ಚಾತ್ತಾಪವಾಗದೆ ಹೋಗದು. ಯೋಗ್ಯ ಪ್ರಾಯಶ್ಚಿತ್ತವನ್ನೂ ಪಡೆಯಬೇಕಾಗಲೂ ಬಹುದು. ಆದರೆ ಇಂದಿನ ಅವರ ವೃಶ್ಚಿಕವೃತ್ತಿ, ಕನ್ನಡದ ಹಿತ-ಸಂಬಂಧಿಗಳೆಲ್ಲರ ಹೃದಯವನ್ನು ಕುಟುಕುತ್ತಲಿದೆ.

ಸಾದರ ಸ್ವೀಕಾರ

೪೩. **ಹೂಗೊಂಚಲು** (ಸಚಿತ್ರ ವಾರ್ಷಿಕ ಸಂಪುಟ):– ಸಂಪಾದಕರು ಶ್ರೀ. ಬ. ರಾಮಚಂದ್ರ ಚಿಕ್ಕನಕೊಪ್ಪ. ಸಹಸಂಪಾದಕರು ಶ್ರೀ. ಲಕ್ಷ್ಮಣ್ಯ ಕಾಮಾಗಿರಿ. ಕಲಬುರ್ಗಿಯ ಶ್ರೀಶರಣಬಸವೇಶ್ವರ ಹೈಸ್ಕೂಲಿನ ವಿದ್ಯಾರ್ಥಿ ಮತ್ತು ಅಧ್ಯಾಪಕರ ಪತ್ರಿಕೆಯಿದು. ಕ್ರೌ. ೧೭೮ ಪುಟಗಳು ಕನ್ನಡಕ್ಕೆ, ೩೦ ಪುಟಗಳು ಇಂಗ್ಲಿಷಿಗೆ, ೩೦ ಪುಟಗಳು ಹಿಂದಿಗೆ—ಇವೆ.

ಸಂಪುಟವು ಅಂತರಂಗ–ಬಹಿರಂಗಗಳೆರಡರಿಂದಲೂ ಸುಂದರವಾಗಿದೆ

೪೪. **ಎಡವಿದ ಹೆಣ್ಣು** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ಎಂ. ಜೀವನ. ಪ್ರಕಾಶಕರು ತರಂಗ ಪ್ರಕಟನಾಲಯ, ಗದಗು. ಕ್ರೌ. ಆ. ೧೫೮ ಪುಟಗಳು. ಬೆಲೆ ೧–೦–೦.

೪೫. **ಜೀವದಾನ** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ನಾರಾಯಣ ಹುಲಿಗಿ ಎಂ. ಎ., ಮುಂಡರಿಗಿ. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೧೩ನೆಯ ವರ್ಷದ ೧೩ನೆಯ ಕೆರಣ. ಕ್ರೌ. ಆ. ೧೩೮ ಪುಟಗಳು. ಬೆಲೆ ೧–೮–೦.

೪೬. **ವಿದ್ಯಾ** (ಸಾಮಾಜಿಕ ನಾಟಕ) ಬರೆದವರು. 'ಎನ್ವೈ' ಮೇಲಿನ ಪ್ರತಿಭಾ ಗ್ರಂಥಮಾಲೆಯ ೧೩ನೆಯ ವರ್ಷದ ೨೩ನೆಯ ಕೆರಣ. ಕ್ರೌ. ಆ. ೯೨ ಪುಟಗಳು. ಬೆಲೆ ೦–೧೨–೦.

೪೭. **ಮುಗು** (ಮಕ್ಕಳಿಗಾಗಿ ಮಾಸಪತ್ರಿಕೆ) ಸಂಸ್ಥಾಪಕರು ಶ್ರೀ ಸೀಮಾಮಾ. ಲಿಂಗಸೂಗೂರು. ಸಂಪಾದಕ ಮತ್ತು ಪ್ರಕಾಶಕರು ಶ್ರೀ ಬಿ ಬಿ. ಜೋಷಿ, 'ಮುಗು' ಪ್ರಕಾಶನ ಕಾರ್ಯಾಲಯ, ತಾವರಗೇರಿ (ರಾಯಚೂರು). ಫೂ. ಕ್ರೌ. ೧೭೮ ಪುಟಗಳು. ವಾರ್ಷಿಕ ಚಂದಾ ೨ ರೂ. ಬಿಡಿಸಂಚಿಕೆಗೆ ೦–೪–೦.

ಮಕ್ಕಳಿಗೆ ಮನೋರಂಜನೆಯೂ ಜ್ಞಾನಪ್ರದವೂ ಎನಿಸುವಂತಹ ಲೇಖನ–ಕವನಗಳಿಂದಲೂ ಸಂಪಾದಕೀಯ ವಿಭಾಗಗಳಿಂದಲೂ ಈ ಪತ್ರಿಕೆಯನ್ನು ಕೂಡಿರುವುದು ಮಕ್ಕಳ ಪಾಲಕರು ಅವಶ್ಯವಾಗಿ ಈ ಪತ್ರಿಕೆಯನ್ನು ಮನೆ–ಮನೆಗೂ ಬರಮಾಡಿಕೊಳ್ಳಬೇಕು.

೪೮. **ತಿರು ಅಥವಾ ಬಿದಿಗೆಯ ಚಂದ್ರ** (ಅನುವಾದಿತ ಗದ್ಯಕವನ ಸಂಕಲನ). ಮೂಲಲೇಖಕರು ದಿವಂಗತ ರವೀಂದ್ರನಾಥ ಠಾಕೂರರು. ಕನ್ನಡದಲ್ಲಿ ಅನುವಾದಕರು. ಶ್ರೀಮಾನ್ ನರೇಗಲ್ಲ ಪ್ರಲ್ಹಾದರಾಯರು ಎಂ. ಎ., ಬಿ. ಟಿ. ಮತ್ತು ಶ್ರೀ. ಲಕ್ಷ್ಮೀಶ್ವರ ಲಕ್ಷ್ಮೀಕಾಂತರಾಯರು ಬಿ. ಎ., ಬಿ. ಟಿ. ಜನರು. ಧಾರವಾಡದ ಮಿಂಜಿನ ಬಳ್ಳಿಯ ೧೩ನೆಯ ವರ್ಷದ ೩ನೆಯ ಕುಡಿ. ಕ್ರೌ. ಆ. ೬೮ ಪುಟಗಳು. ಬೆಲೆ ೧–೦–೦.

೪೯. **ಭಾರತವಾಣಿ** (ಹಿಂದೀ ಮಾಸಪತ್ರಿಕೆ). ಪ್ರಧಾನ ಸಂಪಾದಕರು ಪಂಡಿತ ಸಿದ್ಧನಾಥಪಂತರು. ಸಹಸಂಪಾದಕರು ಶ್ರೀ. ಪಿ. ವೆಂಕಟಾಚಲ ಶರ್ಮರು ಉಪಸಂಪಾದಕರು: ಶ್ರೀ ಎನ್. ಶ್ರೀಕಂಠಮೂರ್ತಿ. ಪ್ರಕಾಶಕರು ಶ್ರೀ. ಎ. ವಿ. ಕೌಂಡಿ, ಕಾರ್ಯಕಾರಿ ಅಧ್ಯಕ್ಷ, ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭಾ, ಧಾರವಾಡ. ಕ್ರೌ. ೧೭೮ ಪುಟಗಳು ವಾರ್ಷಿಕ ಚಂದಾ ೪ ರೂ ಬಿಡಿಸಂಚಿಕೆಗೆ ೦–೬–೦.

ಕರ್ನಾಟಕ ಪ್ರಾಂತೀಯ ಹಿಂದೀಪ್ರಚಾರ ಸಭೆಯು ಪರಿಣಾಮಕಾರಿಯಾಗಿ ಹಿಂದೀ ಭಾಷೆಯಲ್ಲಿ ಪತ್ರಿಕೆ ಹೊರಟಿರುವುದು ಸಂತೋಷದ ಸಂಗತಿ. ಈ ಪತ್ರಿಕೆಯು ಕನ್ನಡ ಸಾಹಿತ್ಯ–ಸಂಸ್ಕೃತಿಗಳ ಪರಿಚಯವನ್ನು, ಭಾರತದ ಮಿಕ್ಕೆಲ್ಲ ವಿಭಾಗದ ಜನರೆಲ್ಲರಿಗೂ ಮಾಡಿಕೊಡುವಂತಾಗಲೆಂದು ಮನಸಾರೆ ಹಾರೈಸುವೆವು.

೫೦. **ಕನ್ನಡ ವರ್ಣಗಳು** (ಕನ್ನಡ ವ್ಯಾಕರಣದ ಸಮಸ್ಯೆಗಳನ್ನು ವಿವೇಚಿಸಿದ ಗ್ರಂಥ). ಲೇಖಕರು ಶ್ರೀಮಾನ್ ಸೇಡಿಯಾಪು ಕೃಷ್ಣಭಟ್ಟರು, ಮಂಗಳೂರು. ಪ್ರಕಾಶಕರು ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡ. ಡೆ. ಆ. ೧೩೮ ಪುಟಗಳು ಬೆಲೆ ೧–೮–೦.

೫೧. **ವೇಣೀಪುಷ್ಪ** (ಕವನಸಂಕಲನ). ಲೇ. ಶ್ರೀಮತಿ ಸೌ. ಪಾರ್ವತೀದೇವಿ ಹೆಗಡೆಯವರು. ಪ್ರಕಾಶಕರು ಕನ್ನಡಕೋಟಿ ಪ್ರಕಾಶನ, ಸೊಲ್ಲಾಪುರ. ಕ್ರೌ. ಆ. ೪೦ ಪುಟಗಳು. ಬೆಲೆ ೦–೧೫–೦.

೫೨. **ನಿಸರ್ಗದಲ್ಲಿ ಅಚಿಂತ್ಯದರ್ಶನ** (ಪ್ರವಾಸ ಪರಿಚಯಾತ್ಮಕ ಗ್ರಂಥ). ಲೇ. ಶ್ರೀಮತಿ ಸೌ. ಪಾರ್ವತೀದೇವಿ ಹೆಗಡೆಯವರು. ಪ್ರಕಾಶಕರು ಮೇಲಿನ ಕನ್ನಡಕೋಟಿಯವರು. ಕ್ರೌ. ಆ. ೫೦ ಪುಟಗಳು ಬೆಲೆ ೦–೮–೦

೫೩. **ಕೆಂಪು ಗುಲಾಬಿ** (ಕಥಾಸಂಕಲನ). ಬರೆದವರು ಶ್ರೀಮತಿ ಎಂ. ಸೀತಾರತ್ನ. ಧಾರವಾಡದ ಮನೋಹರ ಗ್ರಂಥಮಾಲೆಯ ೧೩೬ನೆಯ ಕುಸುಮ. ಕ್ರೌ. ಆ. ೧೩೮ ಪುಟಗಳು. ಬೆಲೆ ೧–೮–೦.

೫೪. **ಯಾತ್ರಿಕ** (ತತ್ತ್ವಜಿಜ್ಞಾಸುವಿನ ವಿಚಾರಲಹರಿ). ಬರೆದವರು ಶ್ರೀಮಾನ್ ರಂಗನಾಥ ದಿವಾಕರರು. ಇದು ಮನೋಹರ ಗ್ರಂಥಮಾಲೆಯ ೧೩೭ನೆಯ ಕುಸುಮ. ಕ್ರೌ. ಆ. ೧೩೬ ಪುಟಗಳು. ಬೆಲೆ ೨–೮–೦.

೫೫. **ಗೃಹದೇವತೆ** (ಸಾಮಾಜಿಕ ಕಾದಂಬರಿ): ಬರೆದವರು ಶ್ರೀಮತಿ ಬಿ. ವಿ. ಚಂಪಕಮಾಲಾ ಅವರು ಮನೋಹರ ಗ್ರಂಥಮಾಲೆಯ ೧೩೮–೧೩೯ನೆಯ ಕುಸುಮ. ಕ್ರೌ. ಆ. ೨೮೦ ಪುಟಗಳು. ಬೆಲೆ ೪–೦–೦.

ದ್ವಿಶಕ್ತಿಯುತವಾದ.....

ಮೋಬಿಲ್‌ಗ್ಯಾಸ್

ಉಪಯೋಗಿಸಿ ನಿಮ್ಮ ಹಣಕ್ಕೆ ಹೆಚ್ಚು ಎಂಜಿನ್ ಶಕ್ತಿಯನ್ನು ಪಡೆಯಿರಿ!

ಇಂಜಿನ್‌ಗಳಲ್ಲಿ ಅಧಿಕ್ಯಾಯವಲ್ಲಿ ಕೊನೆಯಪಕ್ಷ ಐದು ಮುಖ್ಯ ಕಾರಣಗಳಿಂದ ನಿಮ್ಮ ಎಂಜಿನ್ನು ಶಕ್ತಿಯನ್ನು ಕಳೆದುಕೊಳ್ಳಬಹುದು. ಪೆಟ್ರೋಲಿನಲ್ಲಿ ಯಾವುದೇ ಒಂದು ಅಡಿಟಿವ್ ಇರಿಸುವುದರಿಂದ ಈ ಎಲ್ಲ ತೊಂದರೆಗಳನ್ನೂ ನಿವಾರಣೆಮಾಡುವುದು ಸಾಧ್ಯವಿಲ್ಲವೆಂಬುದು ಸತ್ಯವಷ್ಟೆ.

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸನ್ನು ಪಯೋಗಿಸಲು ಇಂದೇ ಸುರುಮಾಡಿರಿ. ಮೋಬಿಲ್ ಸರ್ವರ್ ಕಾಂಪೌಂಡನ್ನೊಳಗೊಂಡಿರುವ ಪೆಟ್ರೋಲು ಇದೊಂದೇ. ಈ ಕಾಂಪೌಂಡು ಯಾವುದೋ ಒಂದು ಸಾಮಾನ್ಯ ಅಡಿಟಿವ್ ಎಂದು ತಿಳಿಯಬೇಡಿರಿ. ಇದು ಅನೇಕ ಅಡಿಟಿವ್‌ಗಳ ಬಲವಾದ ಮಿಶ್ರಣ. ಇಷ್ಟು ಬಲವಾದ ಮಿಶ್ರಣವು ಇದುವರೆಗೆ ಪೆಟ್ರೋಲಿನಲ್ಲಿ ಸೇರಿಸಲ್ಪಟ್ಟೇ ಇಲ್ಲ.

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸು ಬೇರೆಯಾವ ಭಾಷದ ಪೆಟ್ರೋಲಿನಕಂತಲೂ ಹೆಚ್ಚು ಎಂಜಿನ್ ತೊಂದರೆಗಳನ್ನು ನಿವಾರಣೆ ಮಾಡುತ್ತದೆ. ನಿಮ್ಮ ಎಂಜಿನ್ನು ಹೆಚ್ಚು ಶಕ್ತಿಯನ್ನು ಕೊಡುತ್ತದೆ. ಮೋಬಿಲ್‌ಗ್ಯಾಸು ನಿಮ್ಮ ಹಣಕ್ಕೆ ಹೆಚ್ಚು ಮೌಲ್ಯವನ್ನು ಕೊಡುವುದರಿಂದ ಅದನ್ನು ಪಯೋಗಿಸಲು ಸುರುಮಾಡುವುದು ನಿಮಗೆ ಲಾಭಕರ.



ಸ್ಟ್ಯಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ (ಕಂಪೆನಿಯ ಮೆಂಬರುಗಳ ಹೊಣೆಗಾರಿಕೆಯು ಮಿತವಿದೆ)

Printed by N. A. Hoskeri at the Vijaya Press, Dharwar and published for the Proprietors Jayanti publications, by K. S. Betgeri at the Jayanti Office, Dharwar

ಜಯಂತಿ

ಡಿಸೆಂಬರ್
೧೯೫೫

ಬೆಲೆ:
೮ ಆಣೆಗಳು

ನನ್ನದು ಈ ಕನ್ನಡ ನಾಡು

೧

ನಾನಿದನೇ ಹಾಡುವೆ ಹಾಡು....
ನನ್ನದು ಈ ಕನ್ನಡ ನಾಡು !

೨

ಪರ್ವತರಾಜನು ನುಡಿಸುತಿಹ—ಕಮನೀಯ ಕೊಳಲ ನಾದದಲಿ
ತಿಳಿನೀರಿನ ತುಂಬುದೊರೆಗಳು—ಮಂಜುಳದನಿಯನು ಬೆರಸುತಲಿ
ಕಂಗೊಳಿಸುವ ಜಲಪಾತಗಳು—ಗಿರಿಕಂದರದೊಳು ಕುಣಿಯುತಲಿ
ಕವಿಗಾನಂದದ ಬೀರುವುವು
ಕಣ್ಣಿಗೆ ಹಬ್ಬವ ತೋರುವುವು
ನಾಡಿನ ಸಿರಿಯನು ಸಾರುವುವು
ಹಾಡುತಲೀ ಸೊಬಗಿನ ಹಾಡು:—'ನನ್ನದು ಈ ಕನ್ನಡ ನಾಡು'

೩

ಧನ-ರಾಜ್ಯಲಕ್ಷ್ಮಿಯರ ಜೋಡು—ನೂಪುರಗಳ ನುಡಿಸಿದ ನಾಡು,
ನಾತೃಕಲ್ಪತರುಗಳ ಕಾಡು— ನರವೀರಸಿಂಹಗಳ ಬೀಡು,
ಸಜ್ಜನ ಬಗವ್ಯಂವದ ಗೂಡು— ಸಾಧ್ವೀರತ್ನದ ಕರುಮಾಡು,
ಧೈರ್ಯದ ಬಿಟ್ಟಿದ ಕುದಿಗೋಡು
ಅಜನಿಡುವ ಚೆಲ್ವಿಕೆಯ ಮಾಡು
ಸಂತೋಷ-ಸೌಖ್ಯಗಳ ಸೂಡು ...
ಹಾಡುವೆನೆದರಿಂದೀ ಹಾಡು:— ನನ್ನದು ಈ ಕನ್ನಡ ನಾಡು !

ಈ ಸಂಚಿಕೆಯಲ್ಲಿ :

卐

ಈ ಪುಂಡಾಟಿಕೆಯು ಅರ್ಥವೇನು? (ಸಂಪಾದಕೀಯ)
ಸಂಪಾದಕರು ೨೪೧

ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು)
'ಕಾಲಭೈರವ' ೨೪೩

ನನ್ನ ಪ್ರಿಯ ಶಕುಂತಲೆ (ಅನುವಾದಿತ ಸಣ್ಣಕತೆ)
ಶ್ರೀ. ಬಿ. ಜಯಾಚಾರ್ಯ ಬಿ. ಎಸ್‌ಸಿ. ಹೈದರಾಬಾದ್ ೨೪೫

ಪೌಲ್ ವಿಲ್ಲಿಷ್ (ವ್ಯಕ್ತಿಪರಿಚಯ)
ಶ್ರೀ. ಟಿ. ಆರ್. ನಾಡಗೀರ ಬಿ. ಎಸ್‌ಸಿ. (ಟೆಕ್). ಮುಂಬಯಿ ೨೪೯

ಕೊನೆಯ ಗಳಿಗೆ (ಕವನ)
ಶ್ರೀ. ಕುಲಕರ್ಣಿ ಶಂಕರರಾಯ, ಅಕ್ಕಲಕೋಟೆ ೨೫೫

ದರ್ಶನ (ಕವನ)
ಶ್ರೀ. ವೆಂಕಟರಾಯ ಪ್ರಭು, ಸೀ. ಎಂ. ಎ., ಮುಂಬಯಿ ೨೫೫

ಸಂಸ್ಕೃತಿಸಮರ (ಸಣ್ಣಕಥೆ)
ಶ್ರೀ. ಚಿ. ಕಾ. ಜೋಶಿ, ಅಧ್ಯಾಪಕ ಬಿ. ಕೆ. ಮಾಡೆಲ್ ಹೈಸ್ಕೂಲ್
ಬೆಳಗಾಂವಿ ೨೫೭

ಸಂಸ್ಕೃತ ಸಾಹಿತ್ಯದಲ್ಲಿ ಆತ್ಮಸ್ತುತಿ (ಪರಿಚಯಾತ್ಮಕ)
ಶ್ರೀ. ಗೋವರ್ಧನಾಚಾರ್ಯ ಗಲಗಲಿ ಎಂ. ಎ, ಬಿ. ಟಿ. ಧಾರವಾಡ ೨೬೩

ಕವಿಕುಲದ ಗುರುವೆ! (ಕವನ)
'ಆನಂದಕಂದ' ೨೬೭

ಇದೂ ಒಂದು ಸ್ವಭಾವ (ನವ್ಯಕಥೆ)
ಶ್ರೀ. ವೆಂ. ಮು. ಜೋಶಿ, ಧಾರವಾಡ ೨೬೮

ಹೂ-ಹಸಿರು (ಕವನ)
'ನಾರಂಗಿಭಟ್ಟ' ಮುಂಬಯಿ ೨೭೧

ರಶಿಯದ ಇಬ್ಬರು ರಾಜಕೀಯ ಅತಿಥಿಗಳು (ಜೀವಿತ ಪರಿಚಯ)
ಸೋವಿಯೆತ್ ಒಕ್ಕೂಟದ ಸಮಾಚಾರ-ಪತ್ರಿಕೆಯಿಂದ ೨೭೨

ಬಹಳ ದಿನಗಳ ಮೇಲೆ (ಕವನ)
ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ. ಗುಳೇದಗುಡ್ಡ ೨೭೫

ನಾಡನುಳಿಸಲು ಕರೆ (ಕವನ)
ಶ್ರೀ. ಜೆ. ಎನ್. ಸಜ್ಜನ ಬಿ. ಎ. ಹೈದರಾಬಾದ್ ೨೭೫

ಸಾಹಿತ್ಯವಿಮರ್ಶೆಯು ಶಿಕ್ಷಣರಂಗ (ಕಥೆ-ದೃಶ್ಯಕವನಗಳ ವಿಮರ್ಶೆ)
ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು ಮತ್ತು ಶ್ರೀ. ಎನ್.
ನಾರಾಯಣ ಬಲ್ಲಾಳ ಉಡುಪಿ ೨೭೬

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೧೪ ಸಂಚಿಕೆ ೬

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**

**

ಜಾಹೀರಾತು ಕೊಡಬಯಸುವವರ
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಈ ಪುಂಡತನದ ಅರ್ಥವೇನು?

ಬೆಳಗಾಂವಿ ಜಿಲ್ಲೆಯೂ ಬೆಳಗಾಂವಿ ನಗರವೂ ಏಕೀಕೃತ ಕರ್ನಾಟಕದಲ್ಲಿ ಸೇರಬೇಕೆಂದು ರಾ. ಪು. ಆಯೋಗದ ವರದಿ ಹೊರಬೀಳುವುದೇ ತಡ; ಅಂದಿನಿಂದಲೂ ಬೆಳಗಾಂವಿಯಲ್ಲಿಯ ಮರಾಟಿಗರ ಗುಂಪೊಂದು, ಆ ನಗರದಲ್ಲಿಯ ಸುಖಜೀವನವನ್ನೇ ಕೆಡಿಸುತ್ತಲಿದೆ—ಅನೇಕ ಬಗೆಯ ಪುಂಡತನಗಳನ್ನು ನಡೆಸಿದೆ.

'ನಾವೆಲ್ಲರೂ ಭಾರತೀಯರು!' ಎಂಬ ಬುದ್ಧಿ ನಮ್ಮ ಜನರಲ್ಲಿ ಜಾಗೃತವಾದರೆ, ಈ ಬಗೆಯ ಪುಂಡು-ಪೋಕರಿತನಗಳು ತಾವೇ ಮಾಯವಾಗುವುವು. ಅದನ್ನು ಬಿಟ್ಟು ಪ್ರಾಂತೀಯತೆಯ ಅಭಿನಿವೇಶನವನ್ನು ತಾಳಿ, ಅಕ್ರಮಣಭಾವದಿಂದ, ತಮ್ಮ ಬಂಧುಗಳೊಂದಿಗೇ ಕಾದಾಟ ನಡೆಸಿರುವ ಈ ಜನರ ವಿವೇಕಕ್ಕೆ ಏನೆನ್ನಬೇಕು?

ಇಂದು ಭಾರತದಲ್ಲಿ ರಾಜ್ಯಗಳ ಪುನರ್‌ಘಟನೆಯಾಗುತ್ತಿದ್ದುದು ಜನರ ಮತ್ತು ಆಡಳಿತದ ಅನುಕೂಲತೆಗಾಗಿ, ಪುನರ್ಘಟಿತವಾದ ಯಾವ ರಾಜ್ಯವೂ ಪಾಕಿಸ್ತಾನದಂತೆ ಪ್ರತ್ಯೇಕ ರಾಷ್ಟ್ರವೇನೂ ಆಗುವುದಿಲ್ಲ. ಎಲ್ಲ ರಾಜ್ಯಗಳ ಜನರೂ ತಮ್ಮ ರಾಜ್ಯದ ಅಭಿವೃದ್ಧಿಯನ್ನು ಮಾಡಿಕೊಂಡು, ಭಾರತ ರಾಷ್ಟ್ರದ ಅಭಿವೃದ್ಧಿಗಾಗಿ ಕೂಡಿ ಕೆಲಸಮಾಡಬೇಕಾಗಿದೆ. ಇಂತಹ ಕಾಲದಲ್ಲಿ ತಮ್ಮ ರಾಜ್ಯ ದೊಡ್ಡದಾಗಬೇಕೆಂಬ ಸ್ವಾರ್ಥಭಾವದಿಂದ, ನೆರೆಹೊರೆಯವರೊಡನೆ ಜಗಳ ಹೂಡುವುದು ಸಮಂಜಸತನವೆನ್ನಿಸೀತೆ? ಸಂಕುಚಿತ ದೃಷ್ಟಿಯ ಈ ಸಾರ್ಥೀ ಜನರ ಕಿಡಿಗೇಡಿತನದಿಂದ ರಾಜ್ಯ-ರಾಜ್ಯಗಳ ಜನರಲ್ಲಿ, ಶಾಶ್ವತವಾದ ದ್ವೇಷ-ಮತ್ಸರಗಳು ಬೆಳೆದು ಉಳಿಯಬಹುದು. ಇದು ರಾಜ್ಯಗಳ ಅಭಿವೃದ್ಧಿಗೂ ಒಳ್ಳೆಯದಲ್ಲ; ಭಾರತರಾಷ್ಟ್ರದ ಅಭ್ಯುದಯಕ್ಕೂ ಒಳ್ಳೆಯದಲ್ಲ.

ಇಂದು ಭಾರತೀಯರಾದ ನಾವು ಎಲ್ಲರೂ ಸ್ವತಂತ್ರರಾಗಿದ್ದೇವೆ. ನಾವೇ ಪ್ರಜಾ ಪ್ರಭುತ್ವವನ್ನು ರಚಿಸಿಕೊಂಡಿದ್ದೇವೆ. ನಮ್ಮ ಪ್ರಭುತ್ವ. ನಮ್ಮೆಲ್ಲರ ಕಲ್ಯಾಣಕ್ಕಾಗಿಯೂ ಯೋಚನೆ ಮಾಡಿ, ವಿಧಿ-ವಿಧಾನಗಳನ್ನು ನಿರ್ಮಿಸುತ್ತಲಿದೆ. ಪ್ರಭುತ್ವದ ಸರಿಮಿತಜ್ಞಾನ ದೃಷ್ಟಿದೋಷಗಳ ಮೂಲಕ, ಅದು ಮಾಡಿದ ವಿಧಿ-ವಿಧಾನಗಳಲ್ಲಿ ಏನಾದರೂ ಕುಂದು ಕೊರತೆಗಳು ಕಂಡರೆ, ಅವುಗಳನ್ನು ತಿದ್ದಿಸಿಕೊಳ್ಳುವುದಕ್ಕೆ ಸಹಾನುಭೂತಿ-ಸಹಕಾರಪೂರಿತ ಸಮಂಜಸ ಮಾರ್ಗಗಳು ಬೇಕಾದಷ್ಟಿವೆ. ಬಹುಜನರ ಅನುಕೂಲತೆಗಳ ಕಡೆಗೇ ದೃಷ್ಟಿಯಿದ್ದ ಪ್ರಭುತ್ವದಿಂದ, ಕೆಲವು ಜನರಿಗೆ ಅನನುಕೂಲತೆಗಳು ಉಂಟಾಗುವುದು ಅಸ್ವಾಭಾವಿಕವಲ್ಲ. ಬಹುಜನರ ಕಲ್ಯಾಣಕ್ಕಾಗಿ ಅಲ್ಪಸಂಖ್ಯಾಕರು ತಮ್ಮ ಹಿತಸಂಬಂಧಗಳನ್ನು ಮರೆಯಲೇ ಬೇಕಾಗುವುದು. ಇದೇ 'ರಾಷ್ಟ್ರನಿಷ್ಠೆ' ಎನಿಸಿಕೊಳ್ಳುವುದು. ರಾಷ್ಟ್ರನಿಷ್ಠೆಯಿಲ್ಲದ ಸ್ವಾರ್ಥಿ, ಇಂದಿನ ಕಾಲದಲ್ಲಿ ನಾಗರಿಕನೆನಿಸಿಕೊಳ್ಳಲಾರನು.

ಬೆಳಗಾಂವಿ ಅನೇಕ ಕಾರಣಗಳಿಂದ, ಕರ್ನಾಟಕದ ಅವಿಭಾಜ್ಯಭಾಗವೆಂದು ಎಂದೋ ಸಿದ್ಧವಾಗಿದೆ. ಅದು ಮಹಾರಾಷ್ಟ್ರಕ್ಕೇ ಸೇರಬೇಕಾದುದು ನ್ಯಾಯವೆಂದು ಮರಾಟಿಗರಿಗೆ ಎನಿಸುತ್ತಿದ್ದರೆ, ಕೇವಲ ಪುಂಡತನ ನಡೆಸಿದರೆ ಅದರಿಂದ ಸಿದ್ಧವಾಗಲಾರದು. ಅವರ ಈ ಪುಂಡತನ ಪ್ರತಿಪಕ್ಷದ ಜನಸಾಮಾನ್ಯರಲ್ಲಿಯೂ ಪುಂಡತನದ ಪ್ರವೃತ್ತಿಯನ್ನು ಹುಟ್ಟಿಸಬಹುದು. ಇದರಿಂದ ದಾಯಾದ ಕಲಹೆಗಳುಂಟಾಗಿ, ರಾಷ್ಟ್ರದ ಪ್ರಗತಿಯ ದಾರಿಯಲ್ಲಿ ಕಲ್ಲು-ಮುಳ್ಳುಗಳನ್ನು ಹಾಕಿದಂತಾಗುವುದಲ್ಲದೆ ಇನ್ನೇನೂ ಇಲ್ಲ. ಬೆಳಗಾಂವಿಯಲ್ಲಿ ಮರಾಟಿಗರು ಇಷ್ಟೊಂದು ಪುಂಡತನ ನಡೆಸಿದ್ದರೂ, ಕನ್ನಡಿಗರು ಇದುವರೆಗೂ ಅದೆಲ್ಲವನ್ನು ಸಹಿಸಿಕೊಂಡು ನಡೆದಿರುವುದು, ಅವರ

ವಿವೇಕದ ಲಕ್ಷಣವಾಗಿದೆ. 'ಏಟಿಗೆ ಏಟು' ಎಂಬ ರಜೋವೃತ್ತಿ ಕನ್ನಡಿಗರಲ್ಲಿಯೂ ಮೂಡಿದ್ದರೆ, ಇಂದು ಬೆಳಗಾಂವಿಯೂ ಒಂದು ಕುರುಕ್ಷೇತ್ರವಾಗಬಹುದಾಗಿತ್ತು.

ಬೆಳಗಾಂವಿಯಲ್ಲಿ ಪುಂಡತನ ನಡೆಸಿರುವ ಕಿಡಿಗೇಡಿಗಳಿಗೆ, ತಮ್ಮ ನಾಯಕರ ಮಾತಿನ ಬೆಲೆಯೂ ಇದ್ದಂತಿಲ್ಲ. ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನ ಅಧ್ಯಕ್ಷರಾದ ಶ್ರೀಮಾನ್ ಶಂಕರರಾವ್ ದೇವ ಅವರು, ಈ ಜನರಿಗೆ ರಾಜಕೀಯವಿವೇಕವನ್ನು ಬೇಕಾದಷ್ಟು ಬೋಧಿಸಿದರೂ, ಅವರ ಮಾತುಗಳೂ ಇವರಿಗೆ ಕಹಿಯಾಗಿ ಕಂಡುವು. ರಾಷ್ಟ್ರದ ಯಾವ ಬಗೆಯ ಹೊಣೆಗಾರಿಕೆಯೂ ಇಲ್ಲದ ಪುಂಡರ ನಾಯಕತ್ವವನ್ನೇ ಈ ಜನರು ಒಪ್ಪಿಕೊಂಡು ಹೊರಟಿದ್ದಾರೆ. ಇವರ ಈ ವರ್ತನೆ ಸಂಯುಕ್ತಮಹಾರಾಷ್ಟ್ರದ ನಿರ್ಮಿತಿಗೆ ಯಾವ ರೀತಿಯಿಂದಲೂ ಸಹಾಯಕಾರಿಯಾಗಿಲ್ಲವೆಂಬುದರ ವಿವೇಕವೇ ಇವರಿಗೆ ಮೂಡದಾಗಿದೆ.

ಕನ್ನಡಿಗರ ಮನೆಗಳ ಮೇಲೆ ಮುತ್ತಿಗೆ ಹಾಕುವುದು, ಅವರ ವೈಯಕ್ತಿಕ ಅಭಿರುಚಿಗಳ ಮೇಲೆ ದಾಳಿಮಾಡುವುದು, ಕನ್ನಡ ವಕೀಲ-ಡಾಕ್ಟರುಗಳ ಹೆಸರಿನ ಹಲಗೆಗಳನ್ನು ಸುಡುವುದು, ಕನ್ನಡಿಗರ ಸಭೆಗಳಲ್ಲಿ ಕಲ್ಲು-ಚಪ್ಪಲಿಗಳನ್ನು ತೂರುವುದು—ಇವರಿಂದ, ಬೆಳಗಾಂವಿಯ ಮರಾಟೀ ಕಿಡಿಗೇಡಿಗಳು ಮಹಾರಾಷ್ಟ್ರದ ಹಿತವನ್ನು ಸಾಧಿಸಬಹುದೆ? ಪ್ರತಿಯಾಗಿ ಕನ್ನಡ ಕಿಡಿಗೇಡಿಗಳೂ ಈ ಬಗೆಯ ನಿಧ್ವಂಸಕ ಕಾರ್ಯಕ್ಕೆ ಸಿದ್ಧರಾದರೆ, ಪಾಪ! ಬೆಳಗಾಂವಿಯಲ್ಲಿ ಬದುಕಿ ಸುಖ-ಜೀವನವನ್ನು ನಡೆಸಿಕೊಂಡಿರುವ—ಅದೆಷ್ಟು ಜನ—ನಿಷ್ಪಾಪ ಮಹಾರಾಷ್ಟ್ರೀಯ ಕುಟುಂಬಗಳಿಗೆ ತೊಂದರೆಯಾದೀತು? ಅವಿವೇಕದ ಹಿಂಸಾವೃತ್ತಿ ತಮ್ಮಲ್ಲಷ್ಟೇ ಇದೆಯೆಂದು ಈ ಮರಾಟೀ ಕಿಡಿಗೇಡಿಗಳು ತಿಳಿದುಕೊಂಡಿದ್ದರೆ, ಅದು ಬಹಳ ದೊಡ್ಡ ತಪ್ಪು!

ಇನ್ನೊಂದು ಮಾತು: ಬೆಳಗಾಂವಿಯ ಜಿಲ್ಲಾಧಿಕಾರಿಗಳ ಉಪೇಕ್ಷಾವೃತ್ತಿಯೂ ಈ ಪುಂಡರ ಪುಂಡತನಕ್ಕೆ ಪೋಷಣೆಕೊಡುತ್ತಿದೆಯೆಂದು ಹೇಳಬಹುದು. ಚಳವಳಿ ಚಿಕ್ಕದಾಗಿರುವಾಗ, ಮೂಲದಲ್ಲಿಯೆ ಅವರು ಅದನ್ನು ಹಿಸುಕಿಬಿಟ್ಟಿದ್ದರೆ, ಮರಾಟಿಗರ ಪುಂಡತನ ಇಷ್ಟೊಂದು ಬೆಳೆಯುತ್ತಿರಲಿಲ್ಲ. ಆದುದರಿಂದಲೇ ಜಿಲ್ಲಾಧಿಕಾರಿಗಳು ಸಮಂಜಸ ಜನರ ಸಂದೇಹಕ್ಕೆ ಅವಕಾಶವನ್ನು ಉಂಟುಮಾಡಿಕೊಡುತ್ತಿದ್ದಾರೆಂದು ಹೇಳಬಹುದು. ಜಿಲ್ಲಾಧಿಕಾರಿಗಳು ಸರಕಾರದ ಪ್ರತಿನಿಧಿಗಳು ಆಹುದಾದರೂ, ಅವರು ಮರಾಟಿಗರಿರುವುದೂ ಅಷ್ಟೇ ನಿಜ. ಮರಾಟಿಗರ ಪ್ರಾಂತಾಭಿಮಾನ—ಭಾಷಾಭಿಮಾನಗಳು ಸರ್ವಶ್ರುತ. ಹೀಗಿರುವಾಗ ಬೆಳಗಾಂವಿಯ—ಮರಾಟಿಗರಾದ—ಜಿಲ್ಲಾಧಿಕಾರಿಗಳು, ಮರಾಟಿಗರ ಈ ಚಳವಳಿಯನ್ನು, ವೈಯಕ್ತಿಕವಾಗಿ ಪಕ್ಷಪಾತಬುದ್ಧಿಯಿಂದ ನೋಡುತ್ತಿದ್ದರೆ, ಅದೇನೂ ಅಸ್ವಾಭಾವಿಕವಲ್ಲ. ಈಗ ಇರುವ ಜಿಲ್ಲಾಧಿಕಾರಿಗಳಲ್ಲದೆ, ಬೇರೆ ಯಾರಾದರೂ ನಿಷ್ಪಕ್ಷಪಾತಿಗಳಾದ ಜಿಲ್ಲಾಧಿಕಾರಿಗಳಿದ್ದರೆ, ಮರಾಟೀ ಪುಂಡರಿಂದ ಈ ಬಗೆಯ ತೊಂದರೆಯನ್ನು ಅನುಭವಿಸಬೇಕಾಗುವ ಸಂದರ್ಭ ಬೆಳಗಾಂವಿಯ ಕನ್ನಡಿಗರಿಗೆ ಬರುತ್ತಿರಲಿಲ್ಲ.

ಜಿಲ್ಲಾಧಿಕಾರಿಗಳು ಪ್ರತ್ಯಕ್ಷವಾಗಿ ವಾಸಿಸುವ ಮಹಾನಗರ! ಅಲ್ಲದೆ ಪೋಲೀಸರ ಹಿಂಡು ರಕ್ಷಣೆಯ ಕೆಲಸಕ್ಕೆಂದೇ ಬೇಕಾದಷ್ಟು ಇರುವುದು. ಕನ್ನಡಿಗರ ನಾಯಕರು ಆಗಾಗ ಹೋಗಿ, ಜಿಲ್ಲಾಧಿಕಾರಿಗಳೆದುರು, ತಮಗಾಗುವ ತೊಂದರೆಗಳನ್ನು ತೋಡಿಕೊಳ್ಳುವರು. ಮರಾಟೀ ಕಿಡಿಗೇಡಿಗಳ ಪ್ರಚೋದಕರು ಯಾರೆಂಬುದು, ಜಿಲ್ಲಾಧಿಕಾರಿಗಳಿಗೂ ಪೋಲೀಸರಿಗೂ ಗೊತ್ತಿಲ್ಲದೆ ಇಲ್ಲ. ಇಷ್ಟಿದ್ದರೂ ಮರಾಟೀ ಕಿಡಿಗೇಡಿಗಳ ಪುಂಡತನ:—ತುಂಟತನಗಳು ಸೋಂಕುರೋಗದಂತೆ ದಿನದಿನಕ್ಕೂ ಹೆಚ್ಚಾಗುತ್ತಲಿವೆ. ಇದು ಏತರ ಲಕ್ಷಣ? ಮರಾಟಿಗರ ಸಂಯುಕ್ತ ಮಹಾರಾಷ್ಟ್ರದ ಚಳವಳಿಯು, ಯಾವ ರೀತಿಯಿಂದಲಾದರೂ ಬೆಳಗಾಂವಿಯಲ್ಲಿ ನಡೆಯುತ್ತಿರಬೇಕೆಂದು, ಮರಾಟಿಗರೇ ಆದ ಅಲ್ಲಿಯ ಜಿಲ್ಲಾಧಿಕಾರಿಗಳ ಮನಸ್ಸಿನಲ್ಲಿ ಇರುವುದೆಂದು, ಯಾರಾದರೂ ತರ್ಕದಿಂದ ಸಿದ್ಧಮಾಡಿದರೆ, ಅದು ಅಸತ್ಯವೆಂದು ಹೇಗೆ ಹೇಳಬೇಕು?

ಒಂದು ಮರೆತ ಮಾತು

ಈ ಸಂಚಿಕೆಯಲ್ಲಿ ಪ್ರಕಟವಾದ 'ನನ್ನೆ ಪ್ರಿಯ ಶಕುಂತಲೆ' ಎಂಬ ಸಣ್ಣಕತೆಯ ವಿಷಯದಲ್ಲಿ ಕೆಳಗಿನ ಮಾತುಗಳನ್ನು ಅದರ ಲೇಖಕರು ಹೇಳಿದ್ದಾರೆ:—

೧೯೩೬ರಲ್ಲಿ, ಹೈದರಾಬಾದ್ ರಾಜ್ಯದ ಸುದ್ದಿಖಾತೆಯವರು, ವಿವಿಧ ಭಾಷೆಗಳಲ್ಲಿ ಸಣ್ಣಕತೆಗಳ ಲೇಖನಸ್ಪರ್ಧೆಯನ್ನು ಏರ್ಪಡಿಸಿದ್ದರು. ಉರ್ದು ಭಾಷೆಯ ಕಥಾಸ್ಪರ್ಧೆಯಲ್ಲಿ ೧೯೯ ಜನ ಲೇಖಕರು ಭಾಗ ವಹಿಸಿದ್ದರು. ಇವರಲ್ಲಿ ಶ್ರೀ. ಅತಿಖ್ ಷಾ ಎಂಬ ಕತೆಗಾರನ 'ಮಾಯ್ ಡೀಯರ್ ಶಕುಂತಲಾ' ಎಂಬ ಕಥೆಯು ೨೦೦ ರೂ. ಗಳ ಪ್ರಥಮ ಬಹುಮಾನವನ್ನು ಪಡೆಯಿತು. ನಾನೀಗ ಆ ಕತೆಗಾರರ ಅನುಮತಿಯಿಂದ ಉರ್ದುಕಥೆಯನ್ನು ಕನ್ನಡಕ್ಕೆ ಅನುವಾದಿಸಿದ್ದೇನೆ.

—ಲೇ.

ನಾಡನಡೆ

ಭಾರತರಾಷ್ಟ್ರದ ಅಜಾತಶತ್ರುತ್ವ

ಬೇರೆ ಬೇರೆ ವಿದೇಶಗಳ ರಾಜಕೀಯ ಅತಿಥಿಗಳು, ಭಾರತಕ್ಕೆ ಒಬ್ಬರ ಹಿಂದೊಬ್ಬರಂತೆ ಬಂದು ಬಂದು ಹೋಗುತ್ತಲಿದ್ದಾರೆ. ಅಜಾತಶತ್ರುತ್ವವನ್ನೇ ಗುರಿಯಾಗಿಟ್ಟುಕೊಂಡ ಭಾರತಕ್ಕೆ ಇದು ಭೂಷಣವೂ ಆಗಿದೆ; ಆವಶ್ಯಕವೂ ಆಗಿದೆ ಆದರೆ ಇಲ್ಲಿಗೆ ಬರುತ್ತಿರುವ ವಿದೇಶೀ ರಾಷ್ಟ್ರಗಳ ಪ್ರತಿನಿಧಿಗಳು, ಅಜಾತ ಶತ್ರುತ್ವವನ್ನು ಗುರಿಯಾಗಿ ಇಟ್ಟುಕೊಂಡವರಲ್ಲ. ಈಗಾಗಲೇ ಅವರು ಬೇರೆ ಬೇರೆ ಹೊರಗಿನ ರಾಷ್ಟ್ರಗಳ ಶತ್ರುತ್ವವನ್ನು ಜೀವನಕ್ಕೆ ಕಟ್ಟಿಕೊಂಡವರೇ ಆಗಿರುವರು. ಅದುದರಿಂದಲೇ, ಅಂತಹ ವಿದೇಶಗಳ ಪ್ರತಿನಿಧಿಗಳನ್ನು ಭಾರತವು ತನ್ನಲ್ಲಿಗೆ ಬರಮಾಡಿಕೊಂಡು, ಸ್ನೇಹಪೂರ್ಣವಾಗಿ ಉಪಚರಿಸುತ್ತಿರುವುದು, ಅವರ ವೈರಿರಾಷ್ಟ್ರಗಳಲ್ಲಿ ಉದ್ವೇಗವನ್ನು ಬೆಳೆಸುತ್ತಿದೆ; ಅಲ್ಲದೆ ಭಾರತವನ್ನೂ ಅವು ಸಂದಿಗ್ಧದೃಷ್ಟಿಯಿಂದ ನೋಡುವಂತೆ ಮಾಡುತ್ತಲಿದೆ.

ಇಂದು ರಶಿಯದ ಧುರೀಣರಾದ ಮಾರ್ಶಲ್ ಬುಲ್ಗಾನಿನ್ ಮತ್ತು ಖ್ರುಶ್ಚೇವ್ ಆವರು ಭಾರತಕ್ಕೆ ಬಂದು, ಇಲ್ಲಿಯ ಜನತೆಯಿಂದಲೂ ಸರಕಾರಗಳಿಂದಲೂ ಪಡೆಯುತ್ತಿರುವ ಅಭೂತಪೂರ್ವವಾದ ಸ್ವಾಗತವನ್ನು ಕಂಡು, ರಶಿಯದ ವಿರೋಧೀರಾಷ್ಟ್ರಗಳು— ಆದರಲ್ಲಿಯೂ ಹೆಚ್ಚಾಗಿ ಅಮೇರಿಕೆಯು— ಮತ್ಸರಗ್ರಸ್ತ ಭಾವನೆಯಿಂದ ಭಾರತದ ಧುರೀಣರನ್ನು ದೂಷಿಸುತ್ತಲಿವೆ. ಭಾರತದ ಬಗೆಗೆ ರಶಿಯನ್ನರ ಮನಸ್ಸಿನಲ್ಲಿಯೂ ರಶಿಯದ ಬಗೆಗೆ ಭಾರತೀಯರ ಮನಸ್ಸಿನಲ್ಲಿಯೂ ವಿಪರೀತಕಲ್ಪನೆಗಳು ಉಂಟಾಗುವಂತೆ, ಸುಳ್ಳುಸುಳ್ಳು ಸುದ್ದಿಗಳನ್ನು ಹುಟ್ಟಿಸಿ ಪ್ರಕಟಿಸುತ್ತಲಿವೆ. ಕುಟಿಲ ರಾಜಕಾರಣಿಗಳ ಪ್ರಚಾರದ ರೀತಿಯೇ ಹೀಗೆ ಇರುವುದು.

ಹಿಂದೊಂದು ಸಲ ಅಮೇರಿಕೆಯೂ ಭಾರತದ ಮುಖ್ಯ ಮಂತ್ರಿಗಳನ್ನು ತನ್ನಲ್ಲಿಗೆ ಬರಮಾಡಿಕೊಂಡಿತು; ಅಪೂರ್ವ ಉಪಚಾರಗಳಿಂದ ಸ್ವಾಗತಿಸಿತು. ಆದರೆ ಆ ಸ್ವಾಗತದ ಹಿಂದೆ, ಭಾರತರಾಷ್ಟ್ರದ ವಿಶೇಷನೀತಿಗೆ ವಿರೋಧವಾದ ಸ್ವಾರ್ಥವು ಹುದುಗಿರುವುದು ಕಂಡುಬಂದಿತು. ಅದರ ಮರ್ಮವನ್ನು ಸರಿಯಾಗಿ ಅರಿತುಕೊಂಡು ನಮ್ಮ ಮುಖ್ಯಮಂತ್ರಿಗಳು ಅಮೇರಿಕೆಯಿಂದ ಹಿಂದಿರುಗಿದರು.

ಅಮೇರಿಕೆಗೆ ಅತಿಥಿಗಳಾಗಿ ಹೋದಂತೆಯೆ ನಮ್ಮ ಮುಖ್ಯಮಂತ್ರಿಗಳು ರಶಿಯಕ್ಕೂ ಮೊನ್ನೆ ಮೊನ್ನೆ ಹೋಗಿಬಂದರು. ಅಲ್ಲಿಯ ಜನತೆ, ಸರಕಾರ ಅವರನ್ನು ವೈಭವಪೂರ್ಣವಾಗಿ ಸ್ವಾಗತಿಸಿ ಸತ್ಕರಿಸಿದುವು. ರಶಿಯಾ ರಾಷ್ಟ್ರದ ಸತ್ಕಾರದಲ್ಲಿ, ಬರೀ ಸ್ನೇಹಾಕಾಂಕ್ಷೆ ತುಂಬಿದ್ದಿತಲ್ಲದೆ, ಕುಟಿಲರಾಜಕಾರಣವ ಸ್ವಾರ್ಥವೇನೂ ಅದರಲ್ಲಿರಲಿಲ್ಲ. ಎಂತಲೇ ಭಾರತರಾಷ್ಟ್ರ ರಶಿಯದ ಜನತೆಯು ನಿರಪೇಕ್ಷಸ್ನೇಹವನ್ನು ಗುರುತಿಸಿತು; ಅದರ ಸ್ನೇಹಭಾವಕ್ಕೆ ಪ್ರತಿಯಾಗಿ ತನ್ನ ಸ್ನೇಹಭಾವವನ್ನೂ ತೋರಿಸಲು ಸಿದ್ಧವಾಯಿತು. ಭಾರತವನ್ನು ಟೀಕಿಸುವ ಅಮೇರಿಕದ ರಾಜಕಾರಣಿಗಳು ಈ ಮಾತನ್ನು ತಿಳಿದುಕೊಂಡರೆ ಒಳ್ಳೆಯದು. ಭಾರತವಿಂದು ನಿಶ್ಚಲದಲ್ಲೆಲ್ಲ ತನ್ನ ಸ್ನೇಹಹಸ್ತ ಚಾಚಿದೆ.

ಸಮಾನಶೀಲ ರಾಷ್ಟ್ರಗಳೊಡನೆ ಸ್ನೇಹ!

ಮಾರ್ಶಲ್ ಬುಲ್ಗಾನಿನ್ ಮತ್ತು ಶ್ರೀ. ಖ್ರುಶ್ಚೇವರವರು ಭಾರತದಲ್ಲಿ ತಿರುಗಾಡುತ್ತಿದ್ದಾರೆ. ನಮ್ಮ ರಾಷ್ಟ್ರದ ಮಹತ್ತ್ವದ ಸ್ಥಳಗಳನ್ನು ನೋಡುತ್ತಿದ್ದಾರೆ. ಅಲ್ಲಲ್ಲಿ ನೆರೆದ ಜನಜಂಗುಳಿಯಲ್ಲಿ ನಿಂತು, ಭಾರತದ ರಾಜಕೀಯ ಆದರ್ಶ, ರಶಿಯದ ರಾಜಕೀಯ ಆದರ್ಶ ಒಂದೇ ಬಗೆಯವು—ಎಂದು ಉದ್ಘೋಷಿಸುತ್ತಾರೆ. ಪರಸ್ಪರ ಸಹಕಾರ–ಸಹಾನುಭೂತಿಯ ಮಾತುಗಳನ್ನು ಆಡುತ್ತಿದ್ದಾರೆ. ಸ್ವಾರ್ಥದ ಸಂದೇಹವನ್ನು ಹುಟ್ಟಿಸುವಂತಹ ಒಂದು ಮಡಿಯನ್ನೂ ಅವರು ನುಡಿದಂತಿಲ್ಲ.

ದೈನಂದಿನ ರಾಜಕೀಯ ತಂತ್ರಗಳು ಯಾವ ಬಗೆಯನೇ ಇರಲಿ; ಇಂದು ಭಾರತವೂ ರಶಿಯವೂ ಬಯಸುವುದು, ಸ್ವಜನರ ಸುಖಜೀವನವನ್ನು; ಅದಕ್ಕಾಗಿ ಜಾಗತಿಕ ಶಾಂತಿಯನ್ನು. ಯಾವುದೇ ಸಮೃದ್ಧವಾದ ರಾಷ್ಟ್ರವು ತನ್ನವರ ಯೋಗಕ್ಷೇಮ, ಜ್ಞಾನವಿಕಾಸಗಳ ಕಡೆಗೇ ದೃಷ್ಟಿಯಿರಿಸುವುದಲ್ಲದೆ, ಪರರಾಷ್ಟ್ರಗಳನ್ನು ಆಕ್ರಮಿಸಬೇಕೆಂಬ ದುರ್ಬುದ್ಧಿಯನ್ನು ಇರಿಸಿಕೊಂಡಿರುವುದಿಲ್ಲ. ರಶಿಯವು ವಿಶಾಲವಾದ ಸುಭಿಕ್ಷ ಭೂಮಿಯುಳ್ಳದ್ದಾಗಿದೆ. ದಿನದ ಅನ್ನಕ್ಕಾಗಿ ಅದು ಇನ್ನೊಬ್ಬರ ಮುಖವನ್ನು ನೋಡಬೇಕಾಗಿಲ್ಲ. ಕರ್ತೃತ್ವಶಾಲಿಗಳಾದ ಕರ್ತವ್ಯನಿಷ್ಠ ಜನರನ್ನದು ಪಡೆದುದರಿಂದ, ಆ ರಾಷ್ಟ್ರಕ್ಕೆ ಯಾವ ಮಾತಿನದೂ ಕೊರತೆಯಿಲ್ಲ. ಸ್ವಯಂಪೂರ್ಣವಾಗಿ ತನ್ನಷ್ಟಕ್ಕೆ ತಾನು ಬದುಕಬೇಕೆಂದರೆ, ಪಶ್ಚಿಮರಾಷ್ಟ್ರಗಳ ಸ್ವಾರ್ಥವೃತ್ತಿಯು ಅದನ್ನು ಹಾಗೆ ಬದುಕಗೊಡಿಸಲೊಲ್ಲದಾಗಿದೆ.

ಭಾರತದ ಅಂತಃಸ್ಥಿತಿಯೂ ರಶಿಯದಂತೆಯೇ ಇದೆ. ಇದುವರೆಗಿನ ಪರಾಧೀನ ಜೀವನದ ಮೂಲಕ, ದೇಶದಲ್ಲಿ ಸಮೃದ್ಧ ಜೀವನವನ್ನು ತಂದುಕೊಳ್ಳಲಿಕ್ಕೆ ಆಗಿಲ್ಲವಷ್ಟೇ. ಸಮೃದ್ಧಜೀವನಕ್ಕೆ ಬೇಕಾದ ಎಲ್ಲ ಸಾಧನೆಗಳೂ ಭಾರತದಲ್ಲಿ ಇವೆ. ಆದರೆ ಆ ಸಾಧನೆಗಳಿಂದ ಗುರಿಯನ್ನು ಸಾಧಿಸಲಿಕ್ಕೆ ನಮ್ಮ ಜನತೆಗೆ ನಿಶ್ಚಿಂತಜೀವನ ಬೇಕಾಗಿದೆ. ಪಶ್ಚಿಮದ ಬೇರೆ ಬೇರೆ ರಾಷ್ಟ್ರಗಳು, ಭಾರತಕ್ಕೆ ಅಂತಹ ನಿಶ್ಚಿಂತಜೀವನ ಸಿಗಬಾರದೆಂದು, ಎಡೆಬಿಡದೆ ಹೆಣಗುತ್ತಲಿವೆ. ಭಾರತದಲ್ಲಿ ಇದುವರೆಗೂ ಗೂಳಿಗಳಂತೆ ಮೇದುಹೋದ ಪಾಶ್ಚಿಮಾತ್ಯರು, ಭಾರತಕ್ಕೆ ಕೃತಜ್ಞರಾಗಿರುವುದನ್ನು ಬಿಟ್ಟು ಕೃತಘ್ನರಾಗುತ್ತ ಹೊರಟಿದ್ದಾರೆ. ಅವರಿಗೆ ಭಾರತದ ಸ್ನೇಹ ಬೇಕಾಗಿಲ್ಲ; ಭಾರತದ ಸಂಪತ್ತಿ ಬೇಕಾಗಿದೆ—ರಕ್ತ ಬೇಕಾಗಿದೆ. ಹೀಗಿರುವಾಗ ಭಾರತವು ತನ್ನ ಸಮಾನಶೀಲ ರಾಷ್ಟ್ರದ ಸ್ನೇಹವನ್ನೇ ಮಾಡಬೇಕಲ್ಲವೆ? ಎಂತಲೇ ಚೀನ–ರಶಿಯಾಗಳ ಸ್ನೇಹವನ್ನು ಭಾರತರಾಷ್ಟ್ರ ಮನವಾರೆ ಬಯಸಿತು. ಅದು ಸಂಪೂರ್ಣವಾಗಿ ದೊರೆತಿದೆಯೆಂಬುದು

ಮಾತುಗಳಿಂದ ಈಗ ಸಿದ್ಧವಾಗಿದೆ; ಕೃತಿಗಳಿಂದ ಮುಂದೆ ಸಿದ್ಧವಾಗಲಿದೆ.

ಅರಬ ಅರಸರ ಸ್ನೇಹಯಾಚನೆ

ರಶಿಯ ರಾಷ್ಟ್ರದ ಅತಿಥಿಗಳನ್ನು ಉಪಚರಿಸುತ್ತಿರುವಾಗಲೇ ಇನ್ನೊಂದು ರಾಷ್ಟ್ರದ ನಾಯಕರು ಭಾರತಕ್ಕೆ ಅತಿಥಿಗಳಾಗಿ ಬಂದಿದ್ದಾರೆ. ಅವರನ್ನೂ ನಮ್ಮ ಜನತೆ ಪ್ರೀತಿಯಿಂದ ಬರಮಾಡಿಕೊಂಡಿದೆ. ಇನ್ನೊಬ್ಬ ಅತಿಥಿಗಳೆಂದರೆ ಅರಬರಾಷ್ಟ್ರದ ಅರಸರು.

ಮಧ್ಯಪೂರ್ವದ ಅರಬರಾಷ್ಟ್ರಗಳೆಂದರೆ, ಕೇವಲ ಶೋಷಿತ ರಾಷ್ಟ್ರಗಳಾಗಿವೆ. ಪಶ್ಚಿಮದ ನಾಗರಿಕ ರಾಷ್ಟ್ರಗಳು, ಭಾರತದಂತೆಯೆ ಅರೆಬರಾಷ್ಟ್ರಗಳನ್ನೂ ಶೋಷಿಸಿ ಶಕ್ತಿಹೀನವಾಗಿಸಿಬಿಟ್ಟಿವೆ. ಪಶ್ಚಿಮದ ಸುಧಾರಿತ ರಾಷ್ಟ್ರಗಳಿಗೆ ಅರಬರ ಕೃಷಿ-ಸಂಪತ್ತಿಗಳು ಮಾತ್ರ ಬೇಕಾದುವು; ಅರಬಜನತೆಯ ಮಾನವೀಯಜಾಗೃತಿ ಬೇಡವಾಯಿತು. ಈಗ ಆ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಮೊರೆತಿದೆಯೇನೋ ಸರಿ; ಪರಾಕ್ರಮಣದ ಭೀತಿ ಇದ್ದೇ ಇದೆ.

ಅರಬರಾಷ್ಟ್ರದ ಜನತೆ ಈ ಇಪ್ಪತ್ತನೆಯ ಶತವರ್ಷದಲ್ಲಿಯೂ ಹದಿನೈದನೆಯ ಶತಮಾನದವರಾಗಿಯೆ ಉಳಿದಿದ್ದಾರೆ. ವಿಜ್ಞಾನದ ಸಿದ್ಧಿಗಳನ್ನು ಆ ಜನರು ಇನ್ನೂ ಪಡೆದೇ ಇಲ್ಲ. ಅರಬರು ದೇಹ-ಮನಸ್ಸುಗಳಿಂದ ಬಲಿಷ್ಠರಾಗಿರುವರಾದರೂ, ವಿಜ್ಞಾನದ ವಿಧ್ವಂಸಕ ಸಾಧನೆಗಳಿಗೆ ಅವರು ಬೆದರುತ್ತಿದ್ದಾರೆ. ಅವರಿಗೂ ಈಗ ಸ್ವಾತಂತ್ರ್ಯ-ಸುಖಜೀವನಗಳು ಬೇಕಾಗಿವೆ. ಪಾಶ್ಚಿಮಾತ್ಯ ರಾಷ್ಟ್ರಗಳ ಸ್ನೇಹ ಮಾಡಿದರೆ, ತಮಗವು ದೊರೆಯಬಲಾರವೆಂಬ ಕಲ್ಪನೆ ಅರಬರಲ್ಲಿ ಪೂರ್ಣವಾಗಿ ಮೂಡಿನಿಂತಿದೆ. ಇಷ್ಟೇ ಅಲ್ಲ; ತಮ್ಮ ಧರ್ಮದವರ ರಾಷ್ಟ್ರವಾಗಿದ್ದರೂ, ಪಶ್ಚಿಮರಾಷ್ಟ್ರಗಳ ಪ್ರಭಾವಕ್ಕೆ ಒಳಗಾಗಿರುವ ಪಾಕಿಸ್ತಾನದ ಸ್ನೇಹವನ್ನೂ ಅವರು ತಿರಸ್ಕರಿಸಿದ್ದಾರೆ. ಭಾರತ-ರಾಷ್ಟ್ರದ ಪಂಚಶೀಲದ ಆದರ್ಶವು ಅರಬರನ್ನೂ ಇಂದು ತನ್ನೆಡೆಗೆ ಆಕರ್ಷಿಸಿಕೊಂಡುಬಿಟ್ಟಿದೆ.

ಇಂದು ಅರಬರ ಅರಸನು ಭಾರತದ ರಾಜಧಾನಿಯಲ್ಲಿ ಬಂದು ಉಳಿದುಕೊಂಡಿದ್ದಾನೆ. ಭಾರತದೊಂದಿಗಿನ ಸ್ನೇಹ ಅರಬರಂತಹ ಹಿಂದುಳಿದ ಜನತೆಗೆ ತಾರಕನೆಂಬುದನ್ನು ತಿಳಿದುಕೊಂಡಿದ್ದಾನೆ. ಅದರಂತೆ ಭಾರತದೊಂದಿಗೆ ಸ್ನೇಹಹಸ್ತವನ್ನು ಚಾಚಿ ನಿಂತಿದ್ದಾನೆ.

ಮೈಸೂರು ಕಾಂಗ್ರೆಸ್ಸು ಏಕಕರ್ನಾಟಕವನ್ನು ಒಪ್ಪಿತು

ಕೊನೆಗೊಮ್ಮೆ ಮೈಸೂರುವಿಧಾನಸಭೆಯ ಕಾಂಗ್ರೆಸ್ ಸಭೆಯು ಏಕಕರ್ನಾಟಕದ ಮಾತನ್ನು ಬಹುಮತದಿಂದ ಒಪ್ಪಿಕೊಂಡಿತು. ಮತ ಕೊಡಲಾರದ ಜನರು, ವಿರೋಧಿಗಳಾಗಿ ನಿಲ್ಲದೆ ತಟಸ್ಥವೃತ್ತಿಯನ್ನು ಅವಲಂಬಿಸಿದರು.

ಮೈಸೂರಿನ ಕಾಂಗ್ರೆಸ್ ಧುರೀಣರು, ಏಕಕರ್ನಾಟಕದ ವಿಚಾರದಲ್ಲಿ ದೀರ್ಘಸೂತ್ರವೃತ್ತಿಯನ್ನು ವಹಿಸಿ ಪರಿಸ್ಥಿತಿಯನ್ನೇ ಹದ ಗೆಡಿಸಿದರೆಂದು ಹೇಳಬಹುದು. ಮೊದಲೇ ಒಂದು ಗಟ್ಟಿಯಾದ ಅಭಿಪ್ರಾಯವನ್ನು ಹಿಡಿದು ನಿಂತಿದ್ದರೆ, ಏಕಕರ್ನಾಟಕದ ವಿರೋಧಿಗಳ ಸಂಖ್ಯೆ ಅರ್ಧಕ್ಕರ್ಧ ಕಡಿಮೆಯಾಗಬಹುದಾಗಿತ್ತು. ಇವರ ಅಸ್ಪಷ್ಟ ಮನೋಭಾವನೆಗಳು ತಮಗೇ ಅನುಕೂಲವಾಗಿವೆಯೆಂದು ಏಕಕರ್ನಾಟಕ ವಿರೋಧಿಗಳು ತಿಳಿದುಕೊಂಡರು. ಎಂತಲೇ ಪಕ್ಷವನ್ನು ಸಂಘಟಿಸುವುದಕ್ಕೆ ಅವರಿಗೆ ಸಾಕಷ್ಟು ಅವಕಾಶ ಸಿಕ್ಕಿತು.

ಈಗ ತಾವು ಹಿಡಿದ ಹಟವು ಅಸ್ವಾಭಾವಿಕವೂ ಅಸಾಂವಿಧಾನಿಕವೂ ಆದುದು—ಎಂಬ ಮನವರಿಕೆ, ಏಕಕರ್ನಾಟಕ ವಿರೋಧಿಗಳಿಗೆ ಆಗಿದೆಯಾದರೂ, ಹಿಡಿದ ಹಟವನ್ನು ಒಮ್ಮೆಲೆ ಬಿಡುವುದಕ್ಕೆ ಅವರ ಸ್ವಾಭಿಮಾನವು ಒಪ್ಪದಾಗಿದೆ. ಈಗ ವಿರೋಧಮತವನ್ನು ಕೊಡದೆ ತಟಸ್ಥವೃತ್ತಿಯನ್ನು ಅವರು ತಳೆಯುದು, ಆ ಸ್ವಾಭಿಮಾನದ ಲಕ್ಷಣವೇ ಆಗಿದೆ.

ಮತ್ತೆ ಕಾಶ್ಮೀರದ ತೊಡಕಿನ ಮಾತುಗಳು

ಪಾಕಿಸ್ತಾನದ ರಾಜಕೀಯ ಧುರೀಣರಲ್ಲಿ, ಅಧಿಕಾರಲಾಲಸೆಯು ಮೂಲಕ ಆಂತಃಕಲಹ ನಡೆದಾಗ, ಪಾಕಿಸ್ತಾನ ಸರಕಾರವು, ಕಾಶ್ಮೀರ ಸಮಸ್ಯೆಯ ಕುರಿತು ಗಂಭೀರವಾಗಿ ಮಾತನಾಡಿ, ಪಾಕಿಸ್ತಾನೀ ಜನತೆಯ ಮನಸ್ಸನ್ನು ಭಾರತದ ವಿಷಯದಲ್ಲಿ ಕೆರಳಿಸುತ್ತಿರುತ್ತದೆ. ಇದೊಂದು ಮಾನಸಿಕ ಚಿಕಿತ್ಸೆಯು ಉಪಾಯವೆಂದು, ಅಲ್ಲಿಯ ಅಡಳಿತವ ನಾಯಕರು ಭಾವಿಸಿದಂತಿದೆ. ತಮ್ಮಲ್ಲಿಯ ಆಂತಃಕಲಹದ ವಿಷಯ ಜನತೆಯ ಮನಸ್ಸಿಗೆ ಇಳಿದರೆ, ಜನತೆಯಲ್ಲಿ ಬೇರೆ ಬೇರೆ ಪಕ್ಷೋಪಪಕ್ಷಗಳಾಗಿ ಅಡಳಿತದ ಬಲವು ಕುಗ್ಗಿಹೋಗಬಹುದೆಂದು ಅಲ್ಲಿಯ ಸರಕಾರದ ಸೂತ್ರಧಾರಿಗಳು ಭಾವಿಸಿದ್ದಾರೆ. ಆದುದರಿಂದಲೇ ಅವರು ಜನತೆಯ ಮನಸ್ಸನ್ನು ಕೆರಳಿಸಿ, ಅದರ ದ್ವೇಷ-ಮತ್ಸರಗಳ ದೃಷ್ಟಿ ಭಾರತದ ಕಡೆಗೆ ತಿರುಗುವಂತೆ ಮಾಡುತ್ತಾರೆ.

ಸದ್ಯ ಪಾಕಿಸ್ತಾನದ ರಾಜಕೀಯ ನಾಯಕರಲ್ಲಿ ಅಭಿಪ್ರಾಯೈಕ್ಯ ಇಲ್ಲದಂತಾಗಿದೆ. ಅಧಿಕಾರದ ಬಾಲ ಕಳೆದುಕೊಂಡ ಸುಹ್ರವರ್ದಿಯವರು, ಪಾಕಿಸ್ತಾನದ ರಾಜಕೀಯದಲ್ಲಿ ಅನೇಕ ಆಟಗಳನ್ನು ನಡೆಸಿದ್ದಾರೆ. 'ಬೇಗನೆ ಪಾಕಿಸ್ತಾನದ ರಾಜ್ಯಘಟನೆಯನ್ನು ರಚಿಸಿ ಮುಗಿಸುತ್ತೇವೆ' ಎಂದು ಆಶ್ವಾಸನ ಕೊಟ್ಟ ಅಡಳಿತದ ಮುಖ್ಯಾಧಿಕಾರಿಗಳ ನಂಬುಗೆ ಇಂದು ಕರಗಿಹೋಗಿದೆ. ಘಟನಾಸಮಿತಿಯಲ್ಲಿ ಮಂಡಿತವಾದ ಯಾವ ಸಣ್ಣ ವಿಷಯವೂ ಸುಸೂತ್ರವಾಗಿ ಒಮ್ಮತದಿಂದ ಸಾಸಾಗದಂತಾಗಿದೆ; ಆದುದರಿಂದ ಘಟನಾಸಮಿತಿಯ ಕಾರ್ಯವೇ ಸ್ಥಗಿತವಾದಂತಾಗಿದೆ. ತಮ್ಮ ಈ ಅಶಕ್ತತೆಯು ಪರಿಣಾಮ ಸಾಮಾನ್ಯ ಜನತೆಯ ಮೇಲೆ ಆಗಬಾರದೆಂದು, ಪಾಕಿಸ್ತಾನದ ಮುಖ್ಯ ಪ್ರಧಾನರು, ಕಾಶ್ಮೀರ ಸಮಸ್ಯೆಯನ್ನು ಚರ್ಚಿಸಿ ನಿರ್ಣಯಿಸಲು ಸರ್ವಪಕ್ಷೀಯಪರಿಷತ್ತನ್ನು ಕೂಡಿಸಿದರು. ಪರಿಷತ್ತಿನ ಪ್ರಾರಂಭ ಭಾಷಣದಲ್ಲಿ ಮತ್ತೆ ಭಾರತವನ್ನು ವಿರೋಧಿಸಿ ವಚನವಿಷವನ್ನು ಕಾರಿದರು. ಆದರೆ ವಿವೇಕೋದಯದ ಲಕ್ಷಣವೊ, ಅಥವಾ ತಮ್ಮ ಶಕ್ತಿ-ಸಾಮರ್ಥ್ಯಗಳ ಅಳತೆಯ ಕಾರಣವೊ, ಪಾಕಿಸ್ತಾನದ ಮುಖ್ಯಮಂತ್ರಿಗಳು ಈ ಸಲ, ಶಾಂತಿಸಂಧಾನದ ಮಾರ್ಗದಿಂದಲೇ ಕಾಶ್ಮೀರದ ತೊಡಕನ್ನು ಬಿಡಿಸುವೆವೆಂದು ಹೇಳಿದ್ದಾರೆ. ಆದರೆ ಭಾರತದ ಬಗೆಗೆ ದ್ವೇಷವನ್ನು ಹರಡುವ ಮಾತುಗಳು ಜೊತೆಗೆ ಇದ್ದೇ ಇವೆ.

ನನ್ನ ಪ್ರೀಯ ಶಕುಂತಲೆ!

(ಸಣ್ಣಕತೆ)

ಶ್ರೀ. ಬಿ. ಜಯಾಚಾರ್ಯ ಬಿ. ಎಸ್‌ಸಿ. ಹೈದರಾಬಾದ್

ಪ್ರೀತಿ-ಪ್ರೇಮಗಳು ನಿರ್ಜೀವವಸ್ತುಗಳನ್ನೂ ಸಜೀವ ವ್ಯಕ್ತಿಗಳನ್ನಾಗಿ ಭಾವಿಸುತ್ತವೆ. ಅದೊಂದು ಹೃದಯಧರ್ಮ. ಈ ಕಥೆಯೂ, ಅಂತಹ ಹೃದಯಧರ್ಮವನ್ನು ಕುತೂಹಲಕಾರಿಯಾಗಿ ಚಿತ್ರಿಸುತ್ತದೆ. ಇದರಲ್ಲಿಯ ಶಕುಂತಲೆಯು ಯಾರು? ಕಥನಕಾರನ ತಂಗಿಯಲ್ಲ; ಪತ್ನಿಯಲ್ಲ; ಸಂಬಂಧಿಕಳಲ್ಲ! ಹಾಗಾದರೆ ಯಾರು?

'ಆದರೆ .....

ಮತ್ತೆ ನಾನು ವಿಚಾರಪರವಶನಾದೆ:—ಇಷ್ಟಕ್ಕೆ ಅಫ಼ಝುಲ್‌ನಿಗೆ ಏಷ್ಟೊಂದು ಆವೇಶ ಬರಬಾರದಾಗಿತ್ತು!

ಅವನು ತನ್ನ ಎರಡೂ ಕೈಗಳನ್ನು, ಭಾರತೀಯ ಚಲನಚಿತ್ರದ ನಾಯಕನಂತೆ, ಸೊಂಟದ ಮೇಲಿಟ್ಟು ಹೇಳುತ್ತಿದ್ದನು:

"ಶಕುಂತಲೆ — ಶಕುಂತಲೆ — ಉಸ್ ಆಽ! ನಾನು ಬೇಸತ್ತು ಹೋದೆ. ಯಾವಾಗಲೂ ಬೇನೆ, ಬೇಸರಿಕೆ—ಶಕುಂತಲೆಗೆ ಹೀಗಾಯಿತು, ಮತ್ತೆ ಹಾಗಾಯಿತು—ನೀನು ಅವಳನ್ನು ಬಿಡುವುದಾದರೂ ಇಲ್ಲವಲ್ಲ.... ..." ನಾನು ಮಾತನ್ನು ಮುಂದುವರಿಸಲು ಇಚ್ಛಿಸುತ್ತಿರಲಿಲ್ಲ. ಅಂತೆಯೇ ಸುಮ್ಮನಾದೆ. ತಾಳ್ಮೆಗೊಂಡೆ. ಮತ್ತೆ ಮುಗುಳುನಗೆ ಬೀರಿ ಅಫ಼ಝುಲ್‌ನ ಕೋಪವನ್ನು ಒಂದೇ ಏಟಿಗೆ ನುಂಗಿಕೊಂಡೆ.

ಸತ್ಯವನ್ನರುಹುವುದಾದರೆ, ನನ್ನ ಅಂತರಂಗದಲ್ಲಿನ್ನ ಮಾನವನು, ಗಾಯಗೊಂಡ ಸಾರಿವಾಳದಂತೆ ತಲ್ಲಣಿಸುತ್ತಿದ್ದ. ಮತ್ತೆ ಗಟ್ಟಿಯಾಗಿ ಕೂಗುತ್ತಿದ್ದ:—

"ಅವಮಾನ! ಅವಮಾನ!! ಅವಮಾನ!!!"

ಆದರೆ ನಾನು ಏನನ್ನೂ ಲಕ್ಷ್ಯಿಸದೆ ಸ್ವಲ್ಪ ಗಟ್ಟಿಯಾಗಿಯೇ ನುಡಿದೆ:

'ಸುಮ್ಮನಿರು—'' ಎಂದು

ಮತ್ತೆ ಅವನ ಶಬ್ದವು ನನ್ನ ಹೃದಯದ ಬಡಿತಗಳಲ್ಲಿ ಹೊಕ್ಕು ಮಾಯವಾದ ಮೇಲೆ, ನಾನು ಒಂದು ಲೋಟ ನೀರನ್ನು ಕುಡಿದೆ. ಮತ್ತೆ ಸಿಗರೇಟನ್ನು ಹಚ್ಚಿ ಎರಡುಸಾರಿ ದೀರ್ಘವಾಗಿ ಸೇದುತ್ತ ಹೊಗೆಯನ್ನು ಕಿಡಕಿಯಿಂದಾಚೆ ಚೆಲ್ಲುತ್ತ ಯೋಚಿಸಿದೆ:—

"ಪರಂತು.....

ಅಫ಼ಝುಲ್‌ನಿಗೆ ಎಲ್ಲವೂ ಗುರುತಿದೆ. ಅವನು ಎಲ್ಲವನ್ನೂ ಅರಿತವನು. ಅವನೇ ಮೊದಲು ಶಕುಂತಲೆಯ ಭೆಟ್ಟಿ ಮಾಡಿಸಿದ್ದನಲ್ಲವೇ—ಅವನು ಅವಳನ್ನು ಮನಸಾರೆ ಹೊಗಳಿದುಮಂಟು. ನಾನು ಅಪೇಕ್ಷಿಸಿದಲ್ಲಿ ಅದನ್ನು ಅಲ್ಲಿಯೇ ತಡೆಯಬಹುದಾಗಿತ್ತು. ಏಕೆಂದರೆ ಶಕುಂತಲೆ ಒಬ್ಬನ ನೆಚ್ಚಿನವಳಲ್ಲ; ಒಬ್ಬನಲ್ಲಿರಲಿಲ್ಲ. ಅವಳು ಎಷ್ಟೋ ಜನರ ಕೈಸೇರಿ ಬಂದವಳು—ಅಸರಫ್‌ನ—ಹಫೀಝುನ—ಸಿರಾಜನ—ಮತ್ತು ನಾಯ್ದುನ ಕೈಯಲ್ಲಿ ಸಿಕ್ಕಿದ್ದಳು. ಅವರೆಲ್ಲರೂ ಅವಳ ಯವ್ವನವನ್ನು ಹೀರಿದ್ದರು. ಸೌಂದರ್ಯವನ್ನು ನೀಗುವಂತೆ ಮಾಡಿ, ಅವಳ ಸುಕುಮಾರವಾದ ಶರೀರದಲ್ಲಿ—ಅವಳ ಅಂತರಾಳದಲ್ಲಿ ಕೆಚ್ಚಿನ ಅಗ್ನಿಯನ್ನು ಹೊತ್ತಿಸಿದ್ದರು—ಇಂದಿನವರೆಗೂ ಅವಳು ಆ ಅಗ್ನಿಯ ಜ್ವಾಲೆಯಲ್ಲಿ ದಹಿಸುತ್ತಿದ್ದಾಳೆ—ಎಷ್ಟೋ ಸಾರಿ ನೋವನ್ನು ತಾಳಲಾರದೆ ಚೀರುತ್ತಾಳೆ:

'ಅಯ್ಯೋ, ನಾನು ಸತ್ತೆ!' ಎಂದು.

ನಾನು ಮತ್ತೆ ಮತ್ತೆ ಬೆಚ್ಚಿ ಬೆಚ್ಚಿ ಬೀಳುತ್ತೇನೆ. ಶಕುಂತಲೆ—ಸಾವಕಾಶವಾಗಿ, ತಾನರಿಯದ ಪಿಸುದನಿಯಲ್ಲಿ ಮೆಲ್ಲನೆ ಹೇಳುತ್ತಿದ್ದಾಳೆ:

'ನನ್ನನ್ನು ಬಿಡಿ—ದೇವರ ಹೆಸರಿನಲ್ಲಾದರೂ ಬಿಡಿ!'

ನಾನು ಗಾಬರಿಗೊಂಡು ಹಿಂಜರಿಯುತ್ತೇನೆ. ಮತ್ತೆ ಶಕುಂತಲೆಯ ಆರ್ತನುಡಿಗಳು ಬಹಳ ಹೊತ್ತಿನವರೆಗೆ ನನ್ನ ತಲೆಯಲ್ಲಿ ಪ್ರತಿಧ್ವನಿಸುತ್ತವೆ.

ನಾನರಿಯದ ಯಾವುದೋ ಒಂದು ಮಾತಿಗಾಗಿ ನಾನವಳನ್ನು ಬಯಸಿದೆ. ಎಷ್ಟೋ ಸಾರಿ ನಾನು ಶಕುಂತಲೆಯನ್ನು ನೋಡಿದುದುಂಟು; ಆದರೆ ಆಗ ನಾನು ಅವಳ ವಿಷಯವಾಗಿ ಏಷ್ಟೊಂದು ಯೋಚಿಸಿರಲಿಲ್ಲ. ಅವಳು ಈ ಸ್ಥಿತಿಯಲ್ಲಿ ನನ್ನಲ್ಲಿಗೆ ಬಂದಾಗ, ನಾನು ಎಷ್ಟೋ ಯುಗಗಳಿಂದ ಅವಳನ್ನು ನಿರೀಕ್ಷಿಸಿದಂತೆ ಅನುಭವವಾಯಿತು—ಅವಳಾದರೂ ನನ್ನನ್ನೇ ನಿರೀಕ್ಷಿಸಿದಂತೆ—ನಾನು ಅವಳಿಗಾಗಿಯೇ ಸೃಷ್ಟಿಯಾದಂತೆ—ತೋರಿತು. ನಾನು ಎರಡೂ ಕೈಗಳನ್ನು ಅವಳೆಡೆಗೆ ಚಾಚಿದೆ.

ಅಫ಼ಝುಲ್‌ನು "ಧನ್ಯವಾದ" ಎಂದ.

ನನ್ನ ಕಣ್ಣುಗಳು ಹನಿಗೂಡಿದುವು.

ನಾಲ್ಕು ವರ್ಷಗಳು ಕಳೆದುವು. ಕಾಲಚಕ್ರವು ಎಷ್ಟೊಂದು ತಿರುಗಿದರೂ, ಇದು ಒಂದು ಮರೆಯುಲಾರದ ಕ್ಷಣವೆಂತಲೇ ಭಾಸವಾಗುವುದು. ನಾನು ಮಾತ್ರ ಇನ್ನೆಲ್ಲಿಯೇ ಇನ್ನೇನೆ—ಒಂದು ಭೀಕರಶಬ್ದ—ಹೃದಯ ಭೇದಿಸುವ—ಕುಗ್ಗಿಸುವ ಕೂಗು! ಮತ್ತೆ ಏನೂ ಇಲ್ಲ. ಏನೂ ಬದಲಾವಣೆ ಇಲ್ಲ. ಯಾವ ಹಾನಿಯೂ ಇಲ್ಲ—ಅದರ ತಿರುವಿಕೆಯೂ ಇಲ್ಲ—ಅನರೆ ಹಸಿವಸಿಯಾವೆ—ಬಗ್ಗಿ ಬಾಗಿದ—ಬೀಳಲನುವಾದ ಮನೆ—ಚಿಕ್ಕ ಮತ್ತು ಇಕ್ಕಟ್ಟಾದ ಓಣಿ! ಎಷ್ಟೋ ದೂರ ಹೋಗುವ ಡಾಂಬರು ರಸ್ತೆ—ನನ್ನ ಆಫೀಸು, ನಾನು—ಮತ್ತೆ ಶಕುಂತಲೆಯೊಬ್ಬಳು!

ಈ ತ್ರಿಕೋಣದಲ್ಲಿ ನಾಲ್ಕು ವರ್ಷದಿಂದ ಸಿಲುಕಿದ್ದೆನೆ ಆಗಾಗ ನಾನು ಅದರಿಂದ ತಪ್ಪಿಸಿಕೊಂಡು ಹೊರಬರುವ ಪ್ರಯತ್ನ ಮಾಡುತ್ತೇನೆ ಆದರೆ ಆಫೀಸೊಂದಿವೆಯಲ್ಲ!—ಅದು ಕಣ್ಣಿಗೆ ಕಟ್ಟುತ್ತದೆ. ಮತ್ತೆ ನಾನು 'ಫಾಯಿಲ್'ಗಳಲ್ಲಿ ಹುಗಿದುಹೋಗುತ್ತೇನೆ. ಅಲ್ಲಿಂದ ತಪ್ಪಿಸಿಕೊಂಡರೆ ಶಕುಂತಲೆ ಎದುರು ಬರುತ್ತಾಳೆ.

ಇವೆರಡನ್ನೂ ಬಿಟ್ಟು ಹೊರಬೆರೆ ಮತ್ತೆ ವಿರಳಿತದ ಡಾಂಬರು ರಸ್ತೆ—ಜೀವನದಲ್ಲಿ ಎಷ್ಟೊಂದು ಜೇಸರವಿವೆ! ಮತ್ತೆ ವಿಚಾರಿಸುತ್ತೇನೆ – ಇದರಲ್ಲಿ ಶಕುಂತಲೆ ಇಲ್ಲದಿದ್ದರೆ ಏನಾಗುತ್ತಿತ್ತೆಂದು.

ಮರಣಹೊಂದಿದರೂ ಉಸ್ಮಾನಿಯಾ ಹಾಸ್ಪೆಟ್ಲಿನ ಯಾವುದಾವರೊಂದು ವಾರ್ಡಿನಲ್ಲಿ ಬಿದ್ದು ನರಳುತ್ತ ಸೃಷ್ಟಿಕರ್ತನನ್ನು ಹೊಗಳಿ ಪ್ರಾರ್ಥಿಸುತ್ತಿದ್ದೆ:

"ಹೇ ಇಹಪರಗಳ ಒಡೆಯನೆ!.. ...."

ಶಕುಂತಲೆ ನನಗೆಷ್ಟು ಸುಖವನ್ನಿತ್ತಿದ್ದಾಳೆಂಬುದು ನನ ಹೃದಯವಲ್ಲದೇ ಮತ್ತಾರೂ ಅರಿಯರು. ಅವಳ ಋಣವನ್ನೆಂದಿಗೂ ತೀರಿಸಲಾಗದು. ಅದರ ಬದಲಾಗಿ ಅವಳು ನನ್ನ ಹೃದಯವನ್ನು ಕೇಳಿದರೂ ಅದನ್ನು ಕಿತ್ತು "ತಕ್ಕೊ—ಇದು ನನ್ನ ನ್ಯೇಮುಚ ಕಾಣಿಕೆ" ಎಂದು ಕೊಟ್ಟು ಬಿಡುತ್ತಿದ್ದೆ. ಆದರೆ ಪ್ರಣಂಜವೂ ಪ್ರಣಯಿಗಳ ಪ್ರೇಮ ಅಭಿವೃದ್ಧಿಸುವುದನ್ನು ನೋಡಲಾರದಷ್ಟು ಕೀಳಾಗಿದೆ—ಅದು ಏಕೆ? ನಾನು ಯಾರ ಕೆಡುಕು ಬಯಸಿದ್ದೇನೆ! ಶಕುಂತಲೆಯನ್ನು ಪ್ರೀತಿಸಿದ ಮಾತ್ರಕ್ಕೇ ನಾನೇನು ಪಾಪ ಮಾಡಿಲ್ಲವಲ್ಲ! ನನಗೆ ಪ್ರೀತಿಸುವ ಅಧಿಕಾರವಿದೆ. ನಾನು ಪ್ರೀತಿಸುವುದು "ಪೆನ್ನೇ" (Pen) ಆಗಲಿ, ಸಿಗರೇಟೇ ಆಗಲಿ ಅಥವಾ ಶಕುಂತಲೆಯೇ ಆಗಲಿ! ಜನರು ನನ್ನಿಂದ ಪ್ರೀತಿಸುವ ಹಕ್ಕನ್ನು ಏಕೆ ಕಿತ್ತುಕೊಳ್ಳಬೇಕೆನ್ನುವರು? ನನ್ನ ಪ್ರೀತಿ ಇತರರ ಕಣ್ಣಿಗೇಕೆ ಒತ್ತುತ್ತದೆ? ಎಲ್ಲರ ದೃಷ್ಟಿ ಶಕುಂತಲೆಯ ಮೇಲೇಕೆ?—

ಪೆನ್ನೆಯದೇ ಒಂದು ಮಾತು:—ಕುಡಿಗಣ್ಣಿನಿಂದ ಶಕುಂತಲೆಯನ್ನು ನೋಡುತ್ತ ಮಿತ್ರನೊಬ್ಬನು ಕೇಳಿದನು: "ಇವನು ಅವಳೇ ಅಲ್ಲವೆ?"

ಇದರ ಅರ್ಥ—ಇವಳೇ ಆ ಶಕುಂತಲೆ ಅಲ್ಲವೆ?—ಇವಳೇ ಅಲ್ಲವೇ ಅಮರಶ್ರೀಯ ಸಹವಾಸದಲ್ಲಿದ್ದವಳು—ಸ್ಫಿರ್ಯು ಮತ್ತು ನಾಯ್ಡುನ ಸಹವಾಸದಲ್ಲಿದ್ದ ಶಕುಂತಲೆ!



ನನ್ನ ಮಿತ್ರನ ಈ ಪರಿಯ ಮಾತು ನನ್ನ ಹೃದಯದಲ್ಲಿ ಬಾಣವಾಗಿ ನೆಟ್ಟಿತು. ನಾನು ತಲ್ಲಣಿಸಿ ಎರಡೂ ಕೈಗಳಿಂದ ಹೃದಯವನ್ನು ಬದಿಗೊತ್ತಿ ನೆಟ್ಟ ಬಾಣವನ್ನು ಹೊರದೆಗೆದೆ—ಅದು ನನ್ನ ರಕ್ತದಲ್ಲಿ ನಾಂದು ಹೋಗಿದ್ದಿತು—ತಕ್ಷಣ ಅದೇ ಬಾಣವನ್ನು ಬಂದ ವೇಗದಿಂದಲೇ ಅವನೆಡೆಗೆ ಹೊಡೆದೆ—

"ಹೌದು—ಅವಳೇ—ಆಗಾಗ ನೀನು ನನ್ನ ವಳೆಂದವಳೇ!" ಎನ್ನುತ್ತ ಗಟ್ಟಿಯಾಗಿ ನಕ್ಕೆ.

ನನ್ನ ಗುರಿ ಸರಿಯಾಗಿದ್ದಿತು. ಹೊಡೆದ ಬಾಣವು ನನ್ನ ಮಿತ್ರನ ಹೃದಯವನ್ನೇ ಅಲ್ಲ; ಜೀವನದಲ್ಲಿ ಸೇರಿ ಎಲ್ಲಿಯೋ ಮಾಯವಾಗಿತ್ತು. ಮತ್ತೆ ಅವನ ಪರಿವಾಸಮುಖ ಬಣ್ಣಬಣ್ಣವಾಯಿತು

ಶಕುಂತಲೆ ನನ್ನ ಜೀವನದ ಸಹಪಾಠಿ! ಅವಳೇ ನನ್ನ ಬಾಳು—ನನ್ನ ಜೀವ! ಅವಳಿಲ್ಲದೆ ನಾನು ಯಾವ ಕಾರ್ಯವನ್ನೂ ಮಾಡಲಾರೆ. ಅವಳಿಗೆ ಸ್ವಲ್ಪ ಹೆಚ್ಚು—ಕಡಿಮೆಯಾದರೆ ನನ್ನಲ್ಲಿ ಅಶಾಂತಿ ಮನೆ ಮಾಡುತ್ತದೆ. ನಾನು ತತ್ತರಿಸಿ ಹೋಗುತ್ತೇನೆ. ಗಾಬರಿಗೊಳಗಾಗಿ ನಾನು ಎಲ್ಲವನ್ನೂ ಮರೆಯುತ್ತೇನೆ—ನನ್ನ ಆಫೀಸನ್ನು ಕೂಡಾ!—ನನಗೆ ನೆನಪಿರುವುದೆಂದರೆ ಶಕುಂತಲೆಯೊಬ್ಬಳೆ—ಅವಳ ಪ್ರಕೃತಿ ಸುಧಾರಿಸಿದಾಗಲೇ ನನಗೆ ಹಸಿವೆ ಆಗುತ್ತದೆ—ಮತ್ತೆ ಆಫೀಸಿನ ನೆನಪಾಗುತ್ತದೆ—ಕೆಲಸಮಾಡಲುದ್ಯುಕ್ತನಾಗುತ್ತೇನೆ.

ಇದೆ ಭಾವನೆಯ ಹೆಸರೇ ಪ್ರೀತಿಯ ಬಯೆ, ನಾನು ಗಟ್ಟಿಯಾಗಿ ಕೂಗಿ ಹೇಳುತ್ತೇನೆ: "ನನಗೆ ಶಕುಂತಲೆಯಲ್ಲಿ ಪ್ರೀತಿಯೊಂದೇ ಅಲ್ಲ—ಪ್ರಣಯವೂ ಇದೆ" ಎಂದು. ಆಯ್ಯೋ!—ನನ್ನಿಂದ ಶಕುಂತಲೆ ದೂರವಾಗುವಳೆಂದು ಮೊದಲೇ ತಿಳಿದಿದ್ದರೆ! ಈ ಜಗತ್ತಿನಲ್ಲಿ ಕಾಲಿಡುವ ಮೊದಲೆ:

"ಎಷ್ಟು ಕಷ್ಟವನ್ನಾದರು ಸಹಿಸಬಲ್ಲೆ; ಆದರೆ ಶಕುಂತಲೆಯ ವಿರಹವನ್ನು ಸಹಿಸಲಾರೆ" ಎಂದು ದೇವರನ್ನು ದೀನಸ್ವರದಲ್ಲಿ ಬೇಡಿಕೊಳ್ಳುತ್ತಿದ್ದೆ. ಆದರೆ ಹಣೆಯ ಬರೆಹವನ್ನು ಯಾರಿಗೆಳಲು ಸಾಧ್ಯ? ಮುಖ್ಯ ನನ್ನ ದೈವವೆ ಕೆಟ್ಟದ್ದು. ಮೊನ್ನೆಯದೊಂದು ಮಾತು: ಶಕುಂತಲೆ ಒಂದುವಾರದ ಕಾಯಿಲೆಯಿಂದೆದ್ದಳು. ಅವಳನ್ನು ಜೊತೆಯಲ್ಲಿ ಕರೆದುಕೊಂಡು ಸಂತೋಷದಿಂದ ಸಿಳ್ಳು ಹಾಕುತ್ತ ಮನೆಯ

ಕಡೆಗೆ ಬರುತಿದ್ದೆ — ಸುಲ್ತಾನ್‌ಬಾಜಾರದ ರಸ್ತೆಯು ತಿರುವಿನಲ್ಲಿ— ರಾತ್ರಿ ಹತ್ತು ಗಂಟೆಗೆ ದೊಡ್ಡ ಹೊಂದು–ಬಿರುನಾದ–ಕಪ್ಪಾದ–ದೊಡ್ಡ ಹೊಡ್ಡ ಬೆರಳುಳ್ಳ ಕೈಯೊಂದು ನನ್ನೆದುರು ಬಂದಿತು.

ನನ್ನ ಕಣ್ಣಲ್ಲಿ ಕತ್ತಲೆ ಕವಿಯಿತು!
ಪೋಲಿಸರು ಶಕುಂತಲೆಯನ್ನು ಸೆರೆಹಿಡಿದಿದ್ದರು!!

ಅವಳು ಪೋಲಿಸರ ನಡುವೆ ನಿಂತು ಭೀತಿಯಿಂದ ನನ್ನನ್ನೇ ನೋಡುತ್ತಿದ್ದಳು. ಅವಳ ಆ ನೋಟದಿಂದ "ನನ್ನನ್ನು ಕಾಪಾಡು—ನನ್ನನ್ನು ಕಾಪಾಡು" ಎನ್ನುವ ಆರ್ತಸ್ವರವೂ ಬರುವಂತಿತ್ತು. ನಾನು ಹುಚ್ಚನಂತೆ ಅವಳಡೆಗೆ ಜಿಗಿದು:

"ಶಕುಂತಲೆ ನನ್ನವಳು—ನನ್ನವಳು!" ಎಂದೆ.

ಆದರೆ 'ಕಾನ್‌ಸ್ಟೆಬಲ'ನು ಕ್ಕೈಯಲ್ಲಿದ್ದ ಕಟ್ಟಿಗೆಯನ್ನು ತೋರಿಸಿ, ನನ್ನನ್ನು ನೂಕಿ ಮತ್ತೆ ಬದಿಗಳೆದನು. ನಾನು ಪೋಲೀಸ ತಾಣೆಯಲ್ಲಿ ಕಶ್ಚರ್ಯಗೊಂಡು ನಿಂತಿದ್ದೆ. ನನ್ನ ಸ್ಥಿತಿ ಒಬ್ಬ ಕೈದಿಯಂತಿದ್ದಿತು. ನಾನು ನಿರ್ದೋಷಿ ಎಂಬ ನಂಬಿಕೆಯನ್ನು ಹುಟ್ಟಿಸಲು ಪೂರ್ಣ ಪ್ರಯತ್ನಪಟ್ಟೆ. ನನ್ನ ಮಾತಿಗೆ ಕಿವಿಗೊಡದೆ, ಶಕುಂತಲೆಯನ್ನು ಕತ್ತಲೆಕೋಣೆಯೊಂದರಲ್ಲಿ ಹಾಕಿ ಕದವಿಕ್ಕಿದರು. ನನ್ನ ಹೃದಯವು ಸಿಂಡಿನಂತೆ ಪುಟಿದು ಕುಸಿದುಹೋಯಿತು. ಆಗ ನನಗೆ ಜೀವನ ಮತ್ತು ಮರಣದಲ್ಲಿ ಒಂದೇ ಅಡಿ ಅಂತರವಿದ್ದಂತೆ ಭಾಸವಾಯಿತು.

ಶಕುಂತಲೆಯನ್ನು ಬಿಡುಗಡೆ ಮಾಡಿಸಲೇನಾದರೂ ವಿಚಾರಿಸ ಬೇಕೆಂದು ಎಚ್ಚರಿಸಿಕೊಂಡು ನಡೆಯಲು ಎದ್ದುನಿಂತೆ; ಆದರೆ— "ನೀನೆಲ್ಲಿಗೆ ನಡೆದೆ? ನೀನು ಇಲ್ಲಿ ಇರಬೇಕೆಂದು ಹೇಳಲಿಲ್ಲವೆ?" ಎನ್ನುವ ಕ್ರೂರ ಮತ್ತು ಕರ್ಕಶವಾದ ವಾಕ್ಯವು ನನ್ನನ್ನು ತಡೆಯಿತು. ನನ್ನ ಕಾಲ್ಕೆಳಗಿನ ಭೂಮಿ ಸರಿದಂತಾಯಿತು. ಎಷ್ಟೋ ವಿತ್ತರವಾದ ಸರ್ವತದ ತುದಿಯಿಂದ ಆಳವಾದ ತಗ್ಗಿಗೆ ಬಿದ್ದಂತಾಯಿತು.

ಆದರೆ ಮತ್ತೊಂದು ವ್ಯಕ್ತಿಯ ಮಾತು ನನ್ನಡಿಗಳನ್ನು ಮುಂದಿಡುವಂತೆ ಮಾಡಿತು. ನನ್ನ ಓಣಿಯ ಕಾನಸ್ಟೆಬಲ್ ಒಬ್ಬ ಹೇಳುತ್ತಿದ್ದ:

"ಜಮೇದಾರರೆ, ಈತನನ್ನು ನನ್ನ ಜಮಾನತಿನಮೇಲೆ ಬಿಟ್ಟು ಬಿಡಿರಿ! ನೀವು ಬೇಡಿದಾಗ ಕರೆತರುತ್ತೇನೆ. ಇವನೆಂದಿಗೂ ತಪ್ಪಿಸಿಕೊಳ್ಳಲಾರನು."—

ರಸ್ತೆಯು ನಿರ್ಜನವಾಗಿದ್ದಿತು. ರಾತ್ರಿಯು ಒಬ್ಬ ವಿಧವೆಯಂತೆ, ತನ್ನ ಕೂದಲುಗಳನ್ನು ಭುಜಗಳಲ್ಲಿ ಹರಡಿಕೊಂಡು ಯಾವುದೋ ಒಂದು ಚಿಂತೆಯಲ್ಲಿ ಮಗ್ನವಾಗಿದ್ದಿತು. ನಾನು ಎಚ್ಚರದಿಂದ ನಾಲ್ಕೂ ದಿಕ್ಕಿನಲ್ಲಿ ನೋಡುತ್ತ, ಯಾರ ಕಣ್ಣಿಗೆ ಬಿದ್ದರೆ ಮತ್ತೆಲ್ಲಿ ಹಿಡಿಯುವರೋ ಎನ್ನುವ ಭಯದಿಂದ ಕತ್ತಲೆಯಲ್ಲಿ ಮಾಯವಾದೆ.

ಬೆಳಗಾಗುವವರೆಗೆ ಹಾಸಿಗೆಯಲ್ಲಿ ಹೊರಳಾಡುತ್ತ ಬಿದ್ದುಕೊಂಡೇ ವಿಚಾರಿಸಿದೆ:—ಸರಕಾರವು ಶಕುಂತಲೆಯನ್ನು ಎಷ್ಟೋ ದಿನಗಳಿಂದ ಕಟ್ಟಿಕೊಂಡು ಬಂದಿತ್ತು! ಭೂತಕಾಲವು ನನ್ನ ಚಿತ್ತದ ಮೇಲೆ ಮುಳಿದು ಹೋಯಿತು. ಈ ಕರಿಯ ಕೋಟನ್ನು ಧರಿಸಿ ನಿಂತಿದ್ದವನು, ಶಕುಂತಲೆ.

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವರ್ಧಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್–ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಆರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಯನ್ನು ದಿಟ್ಟಿಸಿ ನೋಡುತ್ತಿದ್ದಾನೆ—ಇಥೋ, ಯಾರೋ ಹಿಂದೆ ಬರುತ್ತಿದ್ದಾರೆ—ಆರ್ಧವಯಸ್ಸಿನ ಮನುಷ್ಯನ ದೃಷ್ಟಿಯು ಕಠೋರ ತೀಕ್ಷ್ಣತೆಯಿಂದ ತುಂಬಿದೆ—

ಎಲ್ಲ ತಿಳಿದದ್ದೇ ಇತ್ತು—ವಿಚಾರಿಸಿ ಮಾಡಲ್ಪಟ್ಟ ಒಂದು ಹೊಂಚು ಯಾರಾದರೂ ಪೋಲಿಸರಿಗೆ ಹೇಳಲೇ ಇರಬೇಕು. ಆದರೆ ನಾನು ನಿರಪರಾಧಿಯೆನ್ನುವುದನ್ನು ಸಾಧಿಸದೆ ಇರಲಾರೆ—ಶಕುಂತಲೆಯನ್ನು ಕತ್ತಲುಕೋಣೆಯಿಂದ ಹೊರತರುವವರೆಗೆ ನನಗೆ ಊಟ ಕೂಡ ಬೇಡ,—ಎಂದೇನೇನೋ ವಿಚಾರಿಸಿದೆ.

ಬೆಳಗಾಗುತ್ತಲೇ ಹುಚ್ಚನಂತೆ ಮನೆಬಿಟ್ಟು ನಡೆದೆ—

ನೆರಳು ಉದ್ದವಾಗಿತ್ತು. ಕೋರ್ಟಿನಲ್ಲಿ ಶಕುಂತಲೆಯನ್ನು ಬಿಡುಗಡೆ ಮಾಡಲಾಗುವುದೆಂದು ಕೇಳಿ, ಪೋಲಿಸತಾಣೆಗೆ ಬಂದೆ—ಕಡೆಗೆ ಸತ್ಯಕ್ಕೆ ಜಯವಾಗಿದ್ದಿತು.

ಆದರೆ ಶಕುಂತಲೆಯನ್ನು ಕೇಂದ್ರಕಚೇರಿಗೆ ಕಳಿಸಲಾಗಿದೆ ಎಂದು ತಿಳಿದನೇಲೆ, ಕೋಪ ತಲೆಗೇರಿತು. ಕೋಪದ ಭರದಲ್ಲಿ ರಸ್ತೆಯಮುದ್ದಕ್ಕೂ ನಡೆದೆ—ಹೊಸ ಆಫೀಸು. ಹೊಸ ಜನ; ಹೊಸ ಕಾನಸ್ಟೆಬಲರು—ಆದರೆ ನನಗೇನಾಗಬೇಕು?

ಸರಿಯಾಗಿ ಇನ್‌ಸ್ಪೆಕ್ಟರನ ಕೋಣೆಯನ್ನು ಹೊಕ್ಕೆ:

"ಇನ್‌ಸ್ಪೆಕ್ಟರರೆ—ಈಗಲಾದರೂ ನಿಮ್ಮ ಖಾತೆಯ ಅನುಮಾನವು ದೂರವಾಯಿತಲ್ಲಾ! ನಾನು ಶಕುಂತಲೆಯನ್ನು ಎಲ್ಲಿಂದಲೋ ಹಾರಿಸಿಕೊಂಡು ಬಂದಿಲ್ಲ. ಅವಳು ನನ್ನವಳು—ನನ್ನವಳೇ ವಿನಾ ಬೇರೆಯಾದವಳಲ್ಲ" ಎಂದೆ. ಅವನು ಆಶ್ಚರ್ಯದಿಂದಲೆ ಕೇಳಿದ, "ಶಕುಂತಲೆಯ!!—"

"ಹಾಂ—ಹಾಂ—ಶಕುಂತಲೆ! ನಿನ್ನೆ ಅವಳನ್ನು ಸೆರೆಹಿಡಿಯಲಾಗಿತ್ತು. ಇಂದು ಮುಂಜಾನೆ ಇಲ್ಲಿಗೆ ಕಳುಹಿಸಲ್ಪಟ್ಟಳು."

ಇನ್‌ಸ್ಪೆಕ್ಟರನು ವಿಚಾರಪರವಶನಾಗಿ, ಕುಳಿತಿದ್ದ ಕುರ್ಚಿಯನ್ನು ಬಿಟ್ಟೆಬುತ್ತಲೇನೆ ಹೇಳಿದ:

"ನಿಮಗೆ ತಪ್ಪುಕಲ್ಪನೆಯಾಗಿದೆ.—ಇಡಿ ಊರಿನಲ್ಲೆ ನಿನ್ನೆ ಯಾವ ಶಕುಂತಲೆಯನ್ನೂ ಸೆರೆಹಿಡಿಯಲಿಲ್ಲ!"

ಕ್ಷಣಮಾತ್ರ ನನ್ನ ಹೃದಯದ ಬಡಿತವು ನಿಂತಿತು.— ಯಾರಾದರೂ ಶಕುಂತಲೆಯನ್ನು ಇಲ್ಲಿಂದ ಹಾರಿಸಿರಲಿಕ್ಕಿಲ್ಲವೇ?—ಎಂದು ಯೋಚಿಸಿದೆ. ಆದರೆ ಈ ವಿಚಾರವು ನನ್ನಲ್ಲಿ ಶಾಂತಿ ಮತ್ತು ನಂಬುಗೆಗೆ ನೆಲೆಗೊಟ್ಟಿತು. ಅವಳನ್ನು ಯಾರೂ ಒಯ್ಯಲಾರರು.—ಏಕೆಂದರೆ ಅವಳಲ್ಲಿ ಸೌಂದರ್ಯವಿಲ್ಲ—ಕಾಯಿಲೆ ಬಿದ್ದಿದ್ದಿದ್ದಳು—ಮತ್ತೆ.....

ಇನ್‌ಸ್ಪೆಕ್ಟರನ್ನು ಕುರಿತು ಮತ್ತೆ ನಾನು, "ನಗೆಯಾಡಬೇಡಿ" ಎಂದೆ.

"ನಗೆಯಾಡುವುದೆಽ—" ಎಂದು ರಾಗವೆಳೆದ ಇನ್‌ಸ್ಪೆಕ್ಟರ್.

"ನಗೆಯಾಟವಲ್ಲದೇ ಮತ್ತೇನು?—ನಿನ್ನೆ ನನ್ನ ಜೊತೆಯಲ್ಲಿಯೇ ಅವಳನ್ನು ಸೆರೆಹಿಡಿದರು. ಮತ್ತೆ ಇಂದು ಇಲ್ಲಿಗೆ ಕಳುಹಿಸಲ್ಪಟ್ಟಳು—ನೀವೇನೋ ಇಲ್ಲವೆನ್ನುತ್ತೀರಲ್ಲ?" ಎನ್ನುವಾಗ ನನ್ನ ಕಂಠವು ಸ್ವಲ್ಪ ಕಠೋರವಾಗಿದ್ದಿತು.

ಇನ್‌ಸ್ಪೆಕ್ಟರನು ಕುರ್ಚಿಯಲ್ಲಿ ಕುಳಿತು ಎರಡೂ ಕೈಗಳಿಂದ ತಲೆ ಹಿಡಿದುಕೊಂಡು:

"ಏನೂ ತಿಳಿಯದಾಗಿದೆ—ಇವಳಾರೋಽ—ಇವಳೇನು ನಿಮ್ಮ ಪತ್ನಿಯೇ?" ಎಂದು ಕೇಳಿದ.

"ಅಲ್ಲ!"

"ನಿಮ್ಮ ತಂಗಿಯೇನು?"

"ಅಲ್ಲ"

"ನಿಮ್ಮ ಸಂಬಂಧಿಕರಲ್ಲೊಬ್ಬಳೋಽ—?"

"ಅಲ್ಲ—ಅಲ್ಲ—ಅಲ್ಲ—" ಎಂದು ನಾನು ಗಟ್ಟಿಯಾಗಿ ಕೂಗಿದೆ.

"ಮತ್ತೆ ಅವಳಾರು?"

"ಅವಳು ನನ್ನ ಪ್ರಾಣ, ನಾನು ಅವಳ ಶರೀರ—ಶರೀರವು ಪ್ರಾಣವಿಲ್ಲದೆ ಇರಲಾರದು. ಅದಕ್ಕಾಗಿ ಇನಸ್ಪೆಕ್ಟರರೇಽ—" ಎಂದೆ.

ಇನಸ್ಪೆಕ್ಟರನು "ವಿಚಿತ್ರ ತಲೆತಿರುಕನ ಸಂಬಂಧವಾಯಿತು" ಎಂದು ಗೊಣಗಿಕೊಂಡ. ಈ ಸಾರೆ ನನಗೆ ಸುಮ್ಮನಿರಲಾಗಲಿಲ್ಲ. ನಾನು ಸಿಗರೇಟನ್ನು ಭೂಮಿಗೆ ಒಗೆದು, ಅದನ್ನು ಕಾಲಿನಿಂದ ತುಳಿಯುತ್ತ ಹೇಳಿದೆ:

"ಇನ್‌ಸ್ಪೆಕ್ಟರರೆ—ನೀವೇ ತಲೆಹರಟುತ್ತಿರುವಂತೆ ಕಾಣುತ್ತದೆ. ಮರ್ಯಾದಸ್ತರ ಸಂಗಡ ಮಾತನಾಡುವ ಬಗೆ ಕೂಡ ಗೊತ್ತಿಲ್ಲ—ನಡೆಯಿರಿ—ನನ್ನ ಸಂಗಡ—ಈಗಲೂ ಅವಳು ಕೈದಿಯಾಗಿದ್ದಾಳೆಂಬುದನ್ನು ತೋರಿಸುತ್ತೇನೆ."

ಇನ್‌ಸ್ಪೆಕ್ಟರನು ಚಿಕ್ಕ ಚಿತ್ತ ಒಂದನ್ನು ತಿರುಗಿಸುತ್ತಲೆ ಕೇಳಿದ:

"ಅವಳಿಲ್ಲದಿದ್ದರೆ ನಿಮ್ಮನ್ನು ಸೆರೆಹಿಡಿಯುವೆ — ಏನು ಒಪ್ಪಿಗೆಯೇ?"

"ಒಪ್ಪಿಗೆ" ಎಂದೆ ನಾನು.

ಅವನು ಒಳಗೆ ಹೋಗಿ ಮತ್ತೆ ಗೊಣಗುತ್ತ ಹೊರಬಂದ—

ಕನ್ನಡ ನಿಬಂಧಗಳು

(ಹೈಸ್ಕೂಲಿನ ಮೇಲಿನ ವರ್ಗಗಳಿಗಾಗಿ)

ನಿಬಂಧ ಬರೆಯುವ ಕ್ರಮವಲ್ಲದೆ, ಅನೇಕ ಮಾದರಿಗಳನ್ನು ಇಲ್ಲಿ ರಸವತ್ತಾದ ಶೈಲಿಯಲ್ಲಿ ಬರೆದು ತೋರಿಸಿದೆ. ವಿದ್ಯಾರ್ಥಿಗಳಿಗೆಲ್ಲ ಪರೀಕ್ಷೆಯ ದೃಷ್ಟಿಯಿಂದಲೂ ತೀರ ಉಪಯುಕ್ತ ಹೊತ್ತಿಗೆ.

ಲೇಖಕರು: **ಎಸ್. ರಮಾನಂದ** ಬಿ. ಎ.

ಬೆಲೆ: ಹನ್ನೆರಡು ಆಣೆ

ಮುಖ್ಯ ಮಾರಾಟಗಾರರು:

ರಾಮಾಶ್ರಯ ಬುಕ್‌ಡಿಪೊ, ಧಾರವಾಡ

"ಯಾವನೋ ಹುಚ್ಚನೇ ಸರಿ—"

ನಾನು ಅವನನ್ನು ಸಮಾಪಿಸಿ ಕೇಳಿದೆ: "ಕಡೆಗೆ ಸಿಕ್ಕಳಲ್ಲವೆ?" ಎಂದು.

"ಇಲ್ಲ" ಎಂದು ಗುಡುಗಿದ.

"ತೋರಿಸಲೇ ಎಲ್ಲಿದ್ದಾಳೆಂಬುದನ್ನು?" ಎನ್ನುತ್ತ ನಾನು ಕೋಣೆಯೊಳಕ್ಕೆ ಪ್ರವೇಶಿಸಿದೆ. ನಾಲ್ಕೂ ದಿಕ್ಕಿಗೆ ದೃಷ್ಟಿ ಬೀರಿದೆ. ಬಾಗಿಲ ಬಲಗಡೆಯಲ್ಲಿ ಶಕುಂತಲೆ ನಿಂತಿದ್ದಳು. ನಾನು ಸಂತೋಷದಿಂದ:

"ಶಕುಂತಲಾ! ಶಕುಂತಲಾ!!" ಎಂದು ಗಟ್ಟಿಯಾಗಿಯೇ ನುಡಿದೆ. ಇನ್‌ಸ್ಪೆಕ್ಟರ್ ಒಳಗೆ ಧಾವಿಸಿ ಬಂದು, "ಎಲ್ಲಿದ್ದಾಳೆ!!—ಎಲ್ಲಿದ್ದಾಳೆ!!!" ಎಂದು ಕೇಳಿದ.

"ಇದೇನು?" ಎಂದು ಅವಳನ್ನು ತೋರಿಸಿದೆ.

"ಇದೇನು—ಇದೇನು—" ಎಂದು ಎರಡು ಮೂರು ಸಾರಿ ಅವನು ನನ್ನ ವಾಕ್ಯನನ್ನು ಹೇಳಿದ. ಮತ್ತೆ ನನ್ನನ್ನು ದಿಟ್ಟಿಸಿ ನೋಡಲಾರಂಭಿಸಿದ. ಮತ್ತೆ ದೊಡ್ಡದಾದ ಮೇಲುನಗೆ ಬೀರುತ್ತ ಕೇಳಿದ:

"ಏನು ಇವಳೇನೇ ನಿಮ್ಮ ಶಕುಂತಲೆ! ಽಽ—?" ಎಂದು.

ಅಂಗುಷ್ಟದಿಂದ ಶಿರಸ್ಸಿನವರೆಗೆ ನನ್ನ ಮೈಯೆಲ್ಲಾ ಉರಿಯಿತು. ನಾನು ಮತ್ತೆ ಹೇಳಿದೆ—

"ಇನಸ್ಪೆಕ್ಟರರೆಽಽ—ನಗೆಯಾಡುವಿರೇನು?—ಇದರಲ್ಲಿ ಅಗಾಧವೇನಿದೆ?—ಆಶ್ಚರ್ಯವೇನಿದೆ?—ಹೌದು, ಇವಳೇ ನನ್ನ ಶಕುಂತಲೆ—ನನ್ನ ಜೊತೆಗಾತಿ—ನನ್ನ ಪ್ರಾಣ—ನನ್ನ ಉಸಿರು—ನನ್ನ ಜೀವನ—ನಿಮಗೆ ಮಾತ್ರ ಅವಳೊಂದು ವಸ್ತು!—ಒಂದು ಯಂತ್ರ—ಜನತೆಗೆ ಕೇವಲ "ಬಾಯಸ್ಕಲ್" ಮಾತ್ರ."

ಪೌಲ್ ಏರ್ಲಿಷ್

(ವ್ಯಕ್ತಿಪರಿಚಯ)

ಶ್ರೀ. ಟಿ. ಆರ್. ನಾಡಗೀರ ಬಿ. ಎಸ್ಸಿ. (ಟೆಕ್) ಮುಂಬಯಿ

ವಿಜ್ಞಾನಸಂಶೋಧಕರೆಂದರೆ ಭೌತಿಕಪ್ರಪಂಚದ ಋಷಿಗಳು. ಅವರು ಎಲ್ಲಿ ಹುಟ್ಟಿ ಬೆಳೆದರೇನು? ಲೋಕದ ಜನರಿಗೆಲ್ಲ ಅವರು ಉಪಕಾರಿಗಳು. ಆದುದರಿಂದಲೇ ವಿಜ್ಞಾನಸಂಶೋಧಕರು ಯಾವುದೇ ದೇಶದವರಾದರೂ ಅವನು ನಮ್ಮವರು. ಅವರ ಪರಿಚಯವು ಎಲ್ಲರಿಗೂ ಅತ್ಯಗತ್ಯ.

ಏರ್ಲಿಷ್ ತುಂಬಾ ವಿನೋದಿ. ದಿನಕ್ಕೆ ಏನಿಲ್ಲೆಂದರೂ ೨೫ ಸಿಗಾರ್ ಬೂದಿ ಮಾಡುತ್ತಿದ್ದ. ಸಹೋದ್ಯೋಗಿಗಳೊಂದಿಗೆ ಬೀರ್ ಸೇವನೆ ಮಾಡುವುದರಲ್ಲಿ ತುಂಬಾ ಆಸಕ್ತ. ಈತ ಒಂದು ಸಂದರ್ಭದಲ್ಲಿ ಸೂಕ್ಷ್ಮಜೀವಿಗಳನ್ನು ಮಾಂತ್ರಿಕ ಗುಂಡುಗಳಿಂದ ಸಂಹರಿಸುವುದು ಸಾಧ್ಯವೆಂದಾಗ, ಅಂದಿನ ವೈಜ್ಞಾನಿಕರು, 'ಎಲ್ಲೋ ಹುಚ್ಚು ಹಿಡಿದಂತಿದೆ ಇವನಿಗೆ; ಬೀರಿನ ಅಮಲಿನಲ್ಲಿ ಬಡಬಡಿಸುತ್ತಿರಬಹುದು!' ಎಂದು ಉಪೇಕ್ಷೆ ತಳೆದರು. ಈತನ ಈ ಹೇಳಿಕೆ ವ್ಯಂಗ್ಯಚಿತ್ರಕಾರರನ್ನೂ ಆಕರ್ಷಿಸಿತು. ಏರ್ಲಿಷ್‌ನ ಹೇಳಿಕೆ ಹೊರಬಿದ್ದಿನಿಂದ ಸುಮಾರು ೧೦ ತಿಂಗಳು, ಜರ್ಮನಿಯ ಎಲ್ಲ ಪತ್ರಿಕೆಗಳಲ್ಲಿಯೂ ಈ ವಿಷಯವನ್ನು ಹಾಗೂ ಈ ವ್ಯಕ್ತಿಯನ್ನು ಕುರಿತು ಒಂದಿಲ್ಲೊಂದು ಚಿತ್ರಗಳು ಇರದಿರುತ್ತಿರಲಿಲ್ಲ. ಅಂತೂ ಈ ಹೇಳಿಕೆಯಿಂದ ಏರ್ಲಿಷ್ ಜರ್ಮನರಿಗೆ ಸುಪರಿಚಿತನಾದ. ಯಾವುದೋ ಮೂಲೆಯಲ್ಲಿಯ ಪ್ರಯೋಗಶಾಲೆಯಲ್ಲಿ ಪರೀಕ್ಷಾನಳಿಕೆ, ಸೂಕ್ಷ್ಮದರ್ಶಕದ ಆವರಣದಲ್ಲಿರುವ ವ್ಯಕ್ತಿ, ಒಂದೇ ಒಂದು ಹೇಳಿಕೆಯಿಂದ ಜನಜನಿತನಾದನು. 'ಏನಕೇನಪ್ರಕಾರೇಣ ಪ್ರಸಿದ್ಧ ಪುರುಷೋಭವ' ಎಂದೆನ್ನಬಹುದೆ? ಆಹುದು, ಇಲ್ಲ—ಎಂಬ ವಿರೋಧಶಬ್ದಗಳನ್ನು ಒಂದೇ ಸಂದರ್ಭದಲ್ಲಿ ಹೇಳುವುದು ಅನಿವಾರ್ಯವಾಗಿದೆ ಮೇಘಾಚ್ಛಾದಿತ ಆಕಾಶದಲ್ಲಿ ಸೂರ್ಯನನ್ನು ಕಾಣಲು ತಾಳ್ಮೆ ಬೇಕು. ಸತ್ಯ ಎಂದಾದರೂ ಸತ್ಯವೆ; ಆದರೆ ಆ ಸತ್ಯದ ಸತ್ಯತೆಯ ಅರ್ಥ ಮಹಾಜನರಿಗಾಗಲು ಬಹುಕಾಲ ಬೇಕು. ತಾನು ಸತ್ಯ ನುಡಿದವನು! ಇದುವರೆಗೆ ಅಜ್ಞಾನವಶದಿಂದ, ಅದೂರದೃಷ್ಟಿಯಿಂದ ಜನತೆ ನುಡಿಯುವುದು ಅಸಹಜವಾದುದಲ್ಲ! ವಿಜ್ಞಾನಿಗೆ ತಾಳ್ಮೆ ಅತ್ಯವಶ್ಯವಾದುದು. ಏರ್ಲಿಷ್‌ನೆ ಅಣುಜೀವಿಗಳನ್ನು, ಅದೆಂತು ಸುಲಭವಾಗಿ ಸಂಹರಿಸಬಹುದೆಂಬುದನ್ನು ಕಂಡುಹಿಡಿದ; ಮಾಂತ್ರಿಕಗುಂಡುಗಳನ್ನು ನಿರ್ಮಿಸಿದ ಪಾಕದ ಫಲವೆಂದು ತಿಳಿಯಲಾದ ಗನೋರಿಯಾ ಹಾಗೂ ಸರಮಾಗಳ ಮೇಲೆ, ಭಯಂಕರ ವಿಷವೆಂದು ಗಣಿಸಲಾದ ಆರ್ಸೆನಿಕ್ (Arsenic) ಎಂತಹ ಅದ್ಭುತ ಪರಿಣಾಮ ಮಾಡಬಲ್ಲುದೆಂಬುದನ್ನು ತೋರಿಸಿದನು. ಈ ಮೊದಲು ಕುಚೋದ್ಯಕ್ಕೆ ಮುಂದಾದ ಪತ್ರಿಕೆಗಳು, ವಿಜ್ಞಾನಿಗಳು, ವ್ಯಂಗ್ಯಚಿತ್ರಕಾರರು ಅವನಿಗೆ ಅಭಿನಂದನೆ ಕೊಡುವುದರಲ್ಲಿ ಮುಂದಾಗದಿರಲಿಲ್ಲ.

ಏರ್ಲಿಷ್ ಹುಟ್ಟಿದ್ದು ಜರ್ಮನಿಯ ಸ್ಟೈಹ್ಡೆನ್‌ನಲ್ಲಿ—ಮಾರ್ಚ್ ೧೮೫೪ರಲ್ಲಿ. ಪ್ರಾಪ್ತವಯಸ್ಕನಾದ ಮೇಲೆ ಬ್ರೆಸ್ಲೂ ಶಾಲೆಯನ್ನು ಸೇರಿದ. ಈ ಶಾಲೆಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿದ. ಮಾಧ್ಯಮಿಕ ಶಿಕ್ಷಣದ ಕೊನೆಯ ಗಟ್ಟದಲ್ಲಿದ್ದಾಗ, ಒಮ್ಮೆ ಸಾಹಿತ್ಯದ ಅಧ್ಯಾಪಕರು 'ಜೀವನವು ಒಂದು ಕನಸು!' ಎಂಬುದರ ಮೇಲೆ ಪ್ರಬಂಧ ಬರೆಯಲು ಆಜ್ಞಾಪಿಸಿದರು. ಈ ಮಹಾಶಯ ಆ ಪ್ರಬಂಧದಲ್ಲಿ ಏನು ಬರೆದಿರಬಹುದು? 'ಜೀವನವು ಭಸ್ಮೀಕರಣದ ಮೇಲೆ ಅವಲಂಬಿಸಿರುತ್ತದೆ..... ಕನಸುಗಳು ಮಿದುಳಿನ ಕ್ರಿಯೆಯ ಫಲ..... ಈ ಮಿದುಳಿನ ಕ್ರಿಯೆಗೆ ಕಾರಣ ಭಸ್ಮೀಕರಣ .....' ಆ ಅಧ್ಯಾಪಕರು ಈ ಪ್ರಬಂಧಕ್ಕಾಗಿ ಇವನಿಗೆ ಛೀ ಹಾಕಿದರು. ಬ್ರೆಸ್ಲೂ ಶಾಲೆಯಿಂದ ಈತ ಅನಂತರ ಸೇರಿದುದು ವೈದ್ಯಕಕ್ಕೆ. ಹಾಗೆ ನೋಡಿದರೆ ಈತ ವೈದ್ಯಶಾಸ್ತ್ರವನ್ನು ಕಲಿತದ್ದು ೩-೪ ಶಾಲೆಗಳಲ್ಲಿ. ಆ ಆ ವೈದ್ಯಶಾಲೆಗಳ ಅಧ್ಯಾಪಕರ ಅಭಿಪ್ರಾಯಗಳನ್ನು ಗಮನಿಸಿದಾಗ, ಈತ ಇತರ ಸಾಮಾನ್ಯ ವಿದ್ಯಾರ್ಥಿಗಳಂತಿರಲಿಲ್ಲವೆಂಬುದು ವ್ಯಕ್ತವಾಗುತ್ತದೆ. ಒಬ್ಬ ಅಧ್ಯಾಪಕರು ಈತನ ಬುದ್ಧಿಮತ್ತೆಯನ್ನು ಮೆಚ್ಚಿದ್ದರೂ, ತುಂಟನೆಂದೆನ್ನುವುದು ಅನಿವಾರ್ಯವೆಂದಿದ್ದಾರೆ. ಇನ್ನೊಬ್ಬರು 'ತುಂಬ ಮಂಗಾಟ' ಎಂದಿಷ್ಟೇ ನುಡಿದಿದ್ದಾರೆ. ಈತನಿಗೆ ಕಂಠಪಾಠ ಮಾಡುವುದೆಂದರೆ ತಲೆಬೇಸರು. ರೋಗಿಗಳ ಕುರಿತಾದ ೧೦೦೧೫ ದೀರ್ಘಶಬ್ದಗಳನ್ನು ಮುಖೋದ್ಗತ ಮಾಡಲು ಈತ ನಿರಾಕರಿಸಿದ್ದರಿಂದ, ಈತನ ಪ್ರಾಧ್ಯಾಪಕರು 'Abnormaly bad student (ತುಂಬ ಕೆಟ್ಟ ಹುಡುಗ) ಎಂಬ ಪದವಿಯನ್ನು ಸಮರ್ಪಿಸಿದರು. ಒಂದು ರೀತಿಯಲ್ಲಿ ಈತನ ಮಾರ್ಗ ಕ್ರಾಂತಿಕಾರಕವಾದುದು. ಈತನ ಪ್ರಾಧ್ಯಾಪಕರು ಮೃತದೇಹವನ್ನು ವಿಚ್ಛೇದಿಸಿ, ವಿವಿಧಾಂಗಗಳ ರಚನೆಯ ಪರಿಚಯ ಮಾಡಿಕೊಳ್ಳಲು

ಹೇಳಿದರೆ, ಈತ ದೇಹದ ಒಂದೊಂದು ಅಂಗವನ್ನು ಇನ್ನಿಷ್ಟು ವಿಜ್ಞೇಯಿಸಿ, ಪ್ರತಿಯೊಂದು ಅಂಗದ ನಯನಾವ ತುಂಡುಗಳಿಗೆ ತನ್ನಲ್ಲಿಯ ಬಣ್ಣಗಳನ್ನು ಬರೆಯುತ್ತಿರುತ್ತಿದ್ದ. ಈ ಬಣ್ಣಗಳನ್ನು ಸಂಗ್ರಹಿಸಿದ ವಿಧಾನ—ಕದ್ದು, ಕೇಳಿ, ಕೊಂಡುಮ. ಯಾವಾಗಲೂ ಬಣ್ಣಗಳೊಂದಿಗೇ ಆಟವಾಡುತ್ತಿದ್ದುದನ್ನು ಗಮನಿಸಿದ ಪ್ರಾಧ್ಯಾಪಕರಿಗೆ ಸಿಟ್ಟು ಬಾರದೇನು ನೂಡೀತು? ಅವರು ಈತನಿಗೆ ಬುದ್ಧಿ ಹೇಳಹೋದಷ್ಟೂ ಬಣ್ಣದ ಆಟ ಇವನನ್ನು ಹೆಚ್ಚು ಹೆಚ್ಚು ಆಕರ್ಷಿಸುತ್ತ ನಡೆಯಿತು. ಈ ಆಟವೇ ಅಪೂರ್ವ ಶೋಧನೆಯ ಮೂಲವೆಂದು ಯಾರು ತಿಳಿಯಬೇಕು? ಲ್ಯಾಟಿನ್ ಭಾಷೆಯು ಅಭ್ಯಾಸವನ್ನು ತಕ್ಕ ಮಟ್ಟಿಗೆ ಮಾಡಿದ್ದ. ಯಾವುವಾದರೂ ವಿಷಯವನ್ನು ನಿವೇದಿಸಬೇಕಾದಾಗ, ನೀವು ಬಲ್ಲಿರಾ? ನಿನುಗೆ ತಿಳಿಯಿತಷ್ಟೆ? ಇಲ್ಲವೆ? ಅದು ಹೇಗೆ?—ಎಂಬಿತ್ಯಾದಿ ಪ್ರಶ್ನಾರ್ಥಕಗಳ ಮಳೆಯನ್ನು ಸುರಿಸುತ್ತಿದ್ದ.

ರಾಬರ್ಟ್ ಕಾಚನಿಗಿಂತ ಏರ್ಲಿಷ್ ೧೦ ವರುಷಕ್ಕೆ ಚಿಕ್ಕವ. ಕಾನ್‌ಹೀಮನ ಪ್ರಯೋಗಶಾಲೆಯಲ್ಲಿದ್ದಾಗ, ಕಾಚನ ಅಪೂರ್ವ ಪ್ರಯೋಗಗಳನ್ನು ನೋಡುವ ಸೌಭಾಗ್ಯ ಈತನಿಗೆ ಲಭಿಸಿತ್ತು. ಅಂದಿನ ಪ್ರಯೋಗಗಳಿಂದ ಪ್ರಭಾವಿತನಾದ ಏರ್ಲಿಷ್, ಕಾಚನನ್ನೇ, ಇಷ್ಟದೇವತೆಯನ್ನಾಗಿಟ್ಟುಕೊಂಡ. ಕಾಚನಿಗಿಂತ ಮೊದಲೇ ಕ್ಷಯಕಾರಕ ಅಣುಜೀವಿಯನ್ನು ಕಂಡಿದ್ದನಾದರೂ, ಗುರುತಿಸಿರಲಿಲ್ಲ. ಕಾಚನ ಪ್ರಯೋಗಗಳನ್ನು ನೋಡಿದ ಮೇಲೆ, ಅಂದೇ ಆತನನ್ನು ಕಂಡು ಕ್ಷಯರೋಗದ ಕಣ-ಅಣುಜೀವಿಗಳಿಗೆ ಬಣ್ಣ ಬಳಿದಾಗ, ಅವುಗಳನ್ನು ಸುಲಭವಾಗಿ ಹೇಗೆ ಗುರುತಿಸಬಹುದೆಂಬುದನ್ನು ವಿವರಿಸಿದ. ಕಾಚ್ ತರುಣನ ಬೆನ್ನು ತಟ್ಟಿ, ಪ್ರೋತ್ಸಾಹಿಸಿದ. ಈ ಪ್ರೋತ್ಸಾಹನೆ ಆತನಿಗೆ ಸ್ಫೂರ್ತಿಯನ್ನಿತ್ತಿತು. ದಶಬಲ ಸಾಮರ್ಥ್ಯ ಆಗಲೇ ಅವನಲ್ಲುದಿಸಿತು ಇಂದೂ ಏರ್ಲಿಷ್‌ನ ವಿಧಾನವೇ ಪರಿಪೂರ್ಣವಾದುದೆಂದು ಗಣಿಸಲಾಗಿದೆ. ರೋಗಾಣುಜೀವಿಗಳ ಅಭ್ಯಾಸ ಕೈಕೊಂಡಾಗ, ಈತನಿಗೆ, ಕ್ಷಯ ತಗಲಿತು. ವಿಧಿಲಿಖಿತವನ್ನು ಬಲ್ಲವರಾರು? ಕ್ಷಯದ ಹುಟ್ಟನ್ನಡಗಿಸಲು ಹೊರಟ ಸಾಹಸಿಯ ಮೇಲೇ ಕ್ಷಯವು ಸಿಟ್ಟಿಗೆದ್ದು ಬಾಯ್ದೆರೆಯಿತೇನೋ! ವಿಶ್ರಾಂತಿಗಾಗಿ ಇಜಿಪ್ತ್‌ಗೆ ತೆರಳಿದ. ಇಜಿಪ್ತಿಗೆ ಬಂದಾಗ ಏರ್ಲಿಷ್‌ನಿಗೆ ೩೪ ವರುಷಗಳು ಮಾತ್ರ. ಆಗಲೇ ಆತ ಬೇನೆಗೆ ಆಹುತಿಯಾಗಿದ್ದರೆ? ದೈವದ ಕೈಚಳಕವನ್ನು ಕಾಣುವುದೆಂತು! ಸುಪ್ತಶಕ್ತಿಯ ಎಳೆಯ ಜೀವನೊಂದು ಬಾಳಲ್ಲಿ ಬೆಂದು ಬೂದಿಯಾಯಿತೆಂದು ಆಗ ವಿಷಾದಿಸಬಹುದಾಗಿತ್ತು. ಆದರೆ ದೇವರು ಕರುಣಾಳು. ಈತನಿಂದ ಮಾನವಕುಲಕ್ಕೆ ಮಹೋಪಕಾರ ಮಾಡಿಸುವ ಮನೀಷೆ ಇರಲೇಬೇಕು!

ರೋಗಾಣುಜೀವಿಗಳಿಂದಲೇ ರೋಗನಿವಾರಣೆ ಸಾಧ್ಯವೆಂದು ಏರ್ಲಿಷ್ ಬಲವಾಗಿ ನಂಬಿದ್ದ. ರೋಗಿಯು ಗುಣಮುಖನಾಗಲೆಂದು ಕೇವಲ ದೇವರನ್ನು ಪ್ರಾರ್ಥಿಸುವುದೆ? ಉಪಾಯಗಳನ್ನು ಯೋಜಿಸಿ, ನವೀನ ಉಪಾಯಗಳನ್ನು ಕಾಣಬಯಸುವುದು ಅಸ್ಪಸ್ತುತವೆ? ಎಷ್ಟು ಜನ ಡಾಕ್ಟರರು ತಾನೆ ಮುಂದೆ ಬಂದು, ತಾವು ಇದುವರೆಗೆ ಕೇಳದ ಬೇನೆಯ ಮೂಲವನ್ನೂ, ಆ ಬೇನೆಯ ನಿವಾರಣಾಕ್ರಮವನ್ನು ಹೆಡುಕುವ ಹವ್ಯಾಸಕ್ಕೆ ಬೀಳಬಹುದು? ಪುಸ್ತಕೀಯ ಜ್ಞಾನಭಾಂಡಾರವೇ ಇವರ ಸರ್ವಾಧಾರ! ಮಾಡಿನೋಡುವ ಜನ ವಿರಳ ಕಡಿಮೆ; ನೋಡಿ ನೋಡಿ ಮಾಡುವ ಜನಕ್ಕೆ ಮಾತ್ರ ಮಿತಿ ಇಲ್ಲ. ತಮ್ಮಿಂದ ನೀಗಲಾರದ ಬೇನೆಯ ಉಪಚಾರದ ಬಗ್ಗೆ ಡಾಕ್ಟರರು ಎಂದೂ ನಿರಾಶರಾಗಕೂಡದು. ನಿರಾಶೆಯನ್ನು ಬಹಿರಂಗಪಡಿಸುವುದಂತೂ ಅಕ್ಷನ್ಯವೇ! ಪ್ರತಿಯೊಂದಾಗಿ ರೋಗಿಗಳಿಗೆ ಅವರ ಸಂಬಂಧಿಕರಿಗೆ ಧೈರ್ಯ ಹೇಳಬೇ ಎ! ಡಾಕ್ಟರರ ಈ ಸಾಂತ್ವನವೇ ರೋಗಿಗೆ ಹಾಗೂ ಅವನ ಸಂಬಂಧಿಕರಿಗೆ ಊರುಗೋಲು. ಮನಸ್ಸು ನುದ್ದಿಗಿಂತ ಮಿಗಿಲಾದುದಲ್ಲವೆ? ಇದು ಏರ್ಲಿಷ್‌ನ ರೋಗಮಿಮಾಂಸೆ.

ಏರ್ಲಿಷ್ ರೋಗಿಗಳ ಶರೀರವನ್ನು ಆಮೂಲಾಗ್ರವಾಗಿ ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದ. ಅವನ ಈ ಸೂಕ್ಷ್ಮಾವಲೋಕನವು ರೋಗಿಗಳಿಗೆ ಡಾಕ್ಟರರಿಗೆ ಅಂತರ್ದೃಷ್ಟಿ ಇರಬಹುದೆಂಬ ಊಹೆಗೆ ಕಾರಣವಾಗುತ್ತಿತ್ತು. 'ನಾನು ಜೀವಾಣುಗಳಿಗೆ ಬಣ್ಣ ಬಳಿಯುತ್ತೇನೆ. ಜೀವಿಗಳ ರಾಸಾಯನಿಕ ಘಟನೆ ನನ್ನ ಬಣ್ಣಗಳ ಘಟನೆಗಿಂತ ಬೇರೆಯೇನಿದೆ?' ಎಂಬುದೇ ಆತನ ವಾದಸರಣಿ. ತನ್ನ ವಾದಸರಣಿಯ ಯಥಾರ್ಥತೆಯನ್ನು ಬಿಂಬಿಸಲೆಂದು, ತನಗೆ ಪ್ರಿಯವಾದ Methylene blue ಬಣ್ಣವನ್ನು, ಪ್ರಾಯೋಗಿಕ ಪ್ರಾಣಿಯಾದ ಮೊಲದ ಕಿವಿಯ ನಾಳದಲ್ಲಿ ಚುಚ್ಚಿದನು. ನಿರೀಕ್ಷಿಸುತ್ತಿದ್ದಂತೆ ಆ ಬಣ್ಣ ರಕ್ತದಲ್ಲಿ ಪ್ರವಹಿಸುತ್ತ ನಡೆದು, ಕೊನೆಗೆ ನರಗಳಲ್ಲಿ ಮಾತ್ರ ಕೇಂದ್ರೀಕರಿಸಿತು. ದೇಹದ ಉಳಿದ ಅಂಗಾಂಗಗಳಲ್ಲಿ ವಿಶೇಷ ನೂರ್ಪಾರ್ಶು ಕಾಣಬರಲಿಲ್ಲ; ಆಶ್ಚರ್ಯಪ್ರಯೋಗವಲ್ಲನೇ ಇದು! ಈ ಪ್ರಯೋಗದಿಂದಾಗಿಯೇ ಕೆಲ ವಿಶಿಷ್ಟ ರಾಸಾಯನಿಕಗಳ ನಿರ್ದಿಷ್ಟ ಕ್ರಿಯೆ ವಿಶಿಷ್ಟ ಅಂಗಗಳಲ್ಲಿ ನಡೆಯುತ್ತಿರುವುದನ್ನು ಕಂಡುಕೊಳ್ಳುವುದು ಸುಲಭವಾಯಿತು. ಈ ವಿಶಿಷ್ಟ ಕ್ರಿಯೆಯನ್ನು ಕಂಡು ಏರ್ಲಿಷ್ ಆನಂದತುಂದಿಲನಾದುದರಲ್ಲಿ ಏನಾಶ್ಚರ್ಯ? ಬಹುಶಃ ಈ ಬಣ್ಣದಲ್ಲಿ ವೇದನಾಹಾರಕ ಗುಣನಿರಬಹುದಾಗಿ ಅದೇಕೋ ತರ್ಕಿಸಿದನು. ಈ ತರ್ಕಕ್ಕೆ ಆಧಾರವಾಗಿ ಒಬ್ಬ ನಿರುಪದ್ರವಿ ದೊರೆತನು. ಮೊದಲು ಆತನ ತರ್ಕ ದಿಟವಾಗಿ ಕಂಡಿತು ಮಾತ್ರ. ಈ ಪ್ರಯೋಗದಿಂದಾಗಿ ದೇಹದ ವಿಶಿಷ್ಟ ಕೋಶಸಮೂಹಗಳು ವಿಶಿಷ್ಟ ಬಣ್ಣಗಳನ್ನು ಹೀರಿಕೊಳ್ಳುವುದೆಂಬುದನ್ನು ಶ್ರುತಪಡಿಸಿದಂತಾಯಿತು. ಇಂತಹ ಕೆಲ ಬಣ್ಣಗಳಲ್ಲಿಯೇ ರೋಗನಿವಾರಣಾಶಕ್ತಿ ಇರುವ ಹೊಂಗನಸನ್ನು ಕಂಡನು. ಈ ಹೊಂಗನಸು ನನಸಾಗಲು ಏರ್ಲಿಷ್ ೧೫ ವರುಷಗಳ ಕಾಲ ಅವಿರತ ಪರಿಶ್ರಮಪಡಬೇಕಾಯಿತು.

೧೮೯೯ರಲ್ಲಿ ಕ್ಷಯದಿಂದ ಬದುಕಿಬಂದ ಏರ್ಲಿಷ್, ನೇರವಾಗಿ ಬರ್ಲಿನಿನಲ್ಲಿಯ ಸುಪ್ರಸಿದ್ಧ ವಿಜ್ಞಾನಿಯಾದ ಕಾಚನ ಸಂಸ್ಥೆಯನ್ನು ಸೇರಿದ. ಏರ್ಲಿಷ್‌ನ ಪ್ರಯೋಗಗಳ ಬಗ್ಗೆ ಕಾಚನಿಗೆ ವಿಶ್ವಾಸವಿರದಿದ್ದರೂ, ಆತನಿಗೆ ಏರ್ಲಿಷ್‌ನಲ್ಲಿ ಅಪಾರ ವಿಶ್ವಾಸ. ಏರ್ಲಿಷ್‌ನ ಧೀಮಂತಿಕೆಯನ್ನು ಕಾಚ ಮೆಚ್ಚಿಕೊಂಡಿದ್ದ. ಮೇಳೆ ದೊರೆತಾಗ, 'ಎಲ್ಲಿಗೆ ಬಂತು ನಿಮ್ಮ ಪ್ರಯೋಗ?' ಎಂದು ಕಾಚ ಮುಗುಳ್ನಗುತ್ತ ಕೇಳುವುದೊಂದೇ ತಡ, ಏರ್ಲಿಷ್ ಒಂದೇ ಉಸುರಿನಲ್ಲಿ ವಿವರ ಹೇಳ-

ಆರಂಭಿಸುತ್ತಿದ್ದ. ಕಕ್ಕಾವಿಕ್ಕಿಯಾದ ಕಾಚ—'ಸ್ವಲ್ಪ ನಿಧಾನವಾಗಿ ಹೇಳಿರಿ ಮಹಾರಾಯರೇ? ಎಂದೊಡನೆ, ನಸು ನಾಚಿದ ಏರ್ಲಿಷ್, ಬಳಿಯಲ್ಲಿದ್ದ ಖಡುವನ್ನೆತ್ತಿಕೊಂಡು ನೆಲದ ಮೇಲೆ ತನ್ನ ವಿಚಾರಗಳನ್ನು, ಪ್ರಯೋಗಗಳನ್ನು ಸಚಿತ್ರವಾಗಿ ವಿವರಿಸುತ್ತಿದ್ದ. ಈ ವಿವರಣೆ ಪೂರಯಿಸಿಯಾದ ಮೇಲೆ 'ಈಗ ಬಳಿಯಿತಷ್ಟೆ?' ಎಂದು ಕುಲುಕುಲು ನಗುತ್ತಿದ್ದ. ಆ ನಗೆಯಲ್ಲಿ ಹಾಗೂ ಆ ಧ್ವನಿಯಲ್ಲಿ ಜಂಭವು ಸುಸ್ಪಷ್ಟವಿರುತ್ತಿತ್ತು. 'ಓಹೋ, ಸರಿಯಾಯಿತು. ಮುನ್ನಡೆಯಿರಿ!' ಎಂದು ಕಾಚ ಪ್ರೋತ್ಸಾಹಿಸುತ್ತಿದ್ದ.

ಏರ್ಲಿಷ್‌ನ ಸ್ವಭಾವ ತೀರ ವಿಚಿತ್ರ. ಯಾರಾದರೂ ತನ್ನ ಪ್ರಯೋಗಗಳನ್ನು ಕುರಿತು ಕೇಳಿದರೆ ಸಾಕು—ಎಲ್ಲಿ ಬೇಕಾದಲ್ಲಿ, ಕೈಗೆ ಸಿಕ್ಕಿದ್ದನ್ನು ಎತ್ತಿಕೊಂಡು, ಚಿತ್ರಗಳ ಮೂಲಕ ವಿವರಿಸುತ್ತಿದ್ದ. ಎಷ್ಟೋ ಸಲ ತನ್ನ ಶುಭ್ರವಾದ ಅಂಗಿಯ ಮೇಲೆಯೇ ಚಿತ್ರಗಳನ್ನು ಬಿಡಿಸಿಕೊಂಡುದಕ್ಕಾಗಿ, ಶ್ರೀಮತಿಯವರಿಂದ ಮಂಗಳಾರತಿ ಮಾಡಿಸಿಕೊಳ್ಳುವ ಮಹಾಯೋಗಗಳು ಬಂದುದುಂಟು. ಇನ್ನೆಷ್ಟೋ ಸಲ ಗೆಳೆಯರ ವಸ್ತ್ರಗಳ ಮೇಲೆ ಚಿತ್ರ ತೆಗೆಯಹೋಗಿ ಕಪಾಳಮೋಕ್ಷ ಪಡೆದದ್ದೂ ಉಂಟು. ಒಟ್ಟು ಯಾವಾಗಲೂ ಅತನಿಗೆ ಬಣ್ಣಗಳ ಧ್ಯಾನವೇ! ತನ್ನ ಬೂಟುಗಳು ಮಿರಿಮಿರಿ ಮಿಂಚುತ್ತಿರಬೇಕೆಂದು ಅತ ಬಡುಸುತ್ತಿದ್ದನಾದರೂ, ಅವುಗಳ ಹೊಳಪನ್ನು ಕಾಯ್ದುಕೊಳ್ಳಲು ಅತ ನಿಃಸಹಾಯನಾಗಿದ್ದ; ಅವುಗಳ ಮೇಲೂ ಚಿತ್ರ ಬರೆಯುತ್ತಿದ್ದ ಭೂಪತಿ!

ಏರ್ಲಿಷ್ ತುಂಬ ವಿನೋದಿ ಹಾಗು ವಿನಯಸಂಪನ್ನ. ಈ ಗುಣಗಳಿಂದಾಗಿ ಅನೇಕ ಸಹೃದಯರು ಈತನಿಗೆ ಲಭಿಸಿದರು. ಅವರೋ ಸುಪ್ರತಿಷ್ಠಿತರು. ಇಂಥ ಮಿತ್ರರ ಸಕ್ಕಿಯ ಸಹಕಾರದ ಫಲವಾಗಿ ಏರ್ಲಿಷ್ ೧೮೯೬ರಲ್ಲಿ ಬರ್ಲಿನಿನ ಬಳಿಯ ಸ್ಟೆಗ್ಲಿಟ್ಸ್(Steglitz)ನಲ್ಲಿ ಪ್ರಯೋಗಶಾಲೆಯನ್ನು ತೆರೆದು ತಾನೇ ಡಿರೆಕ್ಟರನಾದನು. ಈ ಪ್ರಯೋಗಶಾಲೆಗೆ Royal Prussian Institute ಎಂದು ಹೆಸರಿಡಲಾಗಿತ್ತು. ಈ ಪ್ರಯೋಗಶಾಲೆಯಾದರೂ ಎಷ್ಟು ದೊಡ್ಡದಿರಬಹುದು? ಕೇವಲ ಎರಡು ಕೋಣೆಗಳು ಮಾತ್ರ. ಈ ನೊದಲು ಮುಂದಿನ ಕೋಣೆಯಲ್ಲಿ ಬೇಕರಿ ಇದ್ದರೆ, ಹಿಂದಿನ ಕೋಣೆಯಲ್ಲಿ ದನಗಳ ವಿಶ್ರಾಮಧಾಮ. ಈ ಪ್ರಯೋಗಶಾಲೆಯಲ್ಲಿ ಮುಖ್ಯವಾಗಿ ರಕ್ತಪರೀಕ್ಷೆಯನ್ನು ಕೈಕೊಳ್ಳಲಾಗುತ್ತಿತ್ತು. ಸೋಲಿನ ಕಾರಣ ನಿರ್ದೋಷರಹಿತವಾಗದಿರುವುದೇ ಕಾರಣವೆಂದು ಅತನ ವಾದ. ವಿಷ (Toxin) ಹಾಗು ವಿಷಹಾರಿ (Anti-toxins) ಗಳ ಕ್ರಿಯೆ ಗಣಿತದ ತತ್ತ್ವದಂತೆಯೆ ಕೆಲ ವಿಶಿಷ್ಟ ನಿಯಮಗಳನ್ನು ಅನುಸರಿಸುತ್ತಿರಬಹುದೆಂದು ಭಾವಿಸಿದನು. ಏರ್ಲಿಷ್‌ನ ಕಾರ್ಯಪದ್ಧತಿ ನಿರ್ದೋಷವಾಗಿತ್ತು. ವಿಷವನ್ನು ನಳಿಕೆಯಲ್ಲಿ ತೆಗೆದುಕೊಳ್ಳುವಾಗ ಸ್ಪಷ್ಟತೆ ವಹಿಸುತ್ತಿದ್ದ. ಅತನ ಪ್ರಯೋಗಪದ್ಧತಿಯ ವೈಶಿಷ್ಟ್ಯವೆಂದರೆ—ಜಾಗರೂಕತೆ ಹಾಗು ಶ್ರದ್ಧೆ. ಸ್ಟೆಗ್ಲಿಟ್ಸ್‌ನ ಕತ್ತಲೆಯ ಪ್ರಯೋಗಶಾಲೆಯಲ್ಲಿ ಸಹೋದ್ಯೋಗಿಗಳೊಂದಿಗೆ ಹರಟೆ ಹೊಡೆಯುತ್ತ, ಸಿಗಾರಗಳ ವಾಸನೆಯನ್ನು ಕೋಣೆಯ ತುಂಬ ತುಂಬುತ್ತಿದ್ದ. ಇಂತಹ ಕೋಣೆಯಲ್ಲಿಯೇ ಅಪೂರ್ವ ಪ್ರಯೋಗಗಳಿಗೆ ಅಪೂರ್ವ ಫಲಶ್ರುತಿ ದೊರೆತುದು.

ತತ್ತ್ವಪ್ರತಿಪಾದನೆಗೆ ಆಧಾರಗಳೇ ಮುಖ್ಯವಲ್ಲವೆ? ವಿಷ, ಪ್ರತಿ-ವಿಷಗಳ ಕಾರ್ಯಾಚರಣೆಯ ಕುರಿತು ಅದೇನೋ ವಿಚಿತ್ರ ತರ್ಕ ಮಾಡಿದ್ದ. ಆ ತರ್ಕ ಪ್ರಯೋಗಗಳಿದುರು ಲಾಗ ಹಾಕಿದರೂ ಅತ ಧೃತಿಗೆಡಲಿಲ್ಲ. 'ಜೀವಕೋಶಗಳೆಂದರೆ ರಾಸಾಯನಿಕ ವಸ್ತುಗಳ ಸಂಕೀರ್ಣ ಮಿಶ್ರಣ' ಎಂಬುದನ್ನು ಆಯಶಸ್ವಿಯಾಗಿ ಪ್ರತಿಪಾದಿಸಿದನು. ಹಾಗೆಯೇ ಪ್ರತಿರೋಧ ಸಾಮರ್ಥ್ಯದ (Immunity) ಕುರಿತು ಅತನ ಸಿದ್ಧಾಂತ ಬಹುಕಾಲ ಬಾಳಲಿಲ್ಲವಾದರೂ, ಈ ವಿಷಯದ ಅಭ್ಯಾಸ ಅತನಿಗೆ ನೋಬೆಲ್ ಪಾರಿತೋಷಕವನ್ನು ತಂದಿತು.

೧೮೯೯ರಲ್ಲಿ ತನ್ನ ಪ್ರಯೋಗಶಾಲೆಯನ್ನು ಫ್ರಾಂಕ್‌ಫರ್ಟ್‌ಗೆ ಸ್ಥಳಾಂತರಿಸಿದನು. ಇಲ್ಲಿಯೇ ಅತನಿಗೆ ಸರ್ವವಿಧದ ಸಹಾಯ ದೊರೆತುದು. ಮೇಲಾಗಿ ಇಲ್ಲಿಯ ಯಹೂದಿಗಳು ಉದಾರತೆಗೆ ಸುಪ್ರಸಿದ್ಧರು. ಪವಾಡಕ್ಕೆ ೪ ಘಟಕಗಳು ಅವಶ್ಯವೆಂದು ಏರ್ಲಿಷ್‌ನ ಅಭಿಪ್ರಾಯ. ಆ ೪ ಘಟಕಗಳೆಂದರೆ:— (೧) ಹಣ, (೨) ತಾಳ್ಮೆ, (೩) ಬುದ್ಧಿ ಮತ್ತು ಕೊನೆಯದಾಗಿ ಹಾಗೂ ಅತಿ ಮಹತ್ತ್ವದ (೪) ದೈವ. ವಿಶ್ವದ ವಿಖ್ಯಾತ ವೈಜ್ಞಾನಿಕ ಪತ್ರಿಕೆಗಳು ಈತನ ಪ್ರಯೋಗಶಾಲೆಗೆ ಬರುತ್ತಿದ್ದುವು. ಪರಿಚಿತ ಭಾಷೆಗಳಲ್ಲಿ ಪ್ರಕಟವಾಗುವ ಪತ್ರಿಕೆಗಳನ್ನು ತರಿಸುವುದರಲ್ಲಿ ಔಚಿತ್ಯವಿಲ್ಲ; ಆದರೆ ತಾನರಿಯದ ಭಾಷಾಪತ್ರಿಕೆಗಳನ್ನು ತರಿಸುತ್ತಿದ್ದುದೇ ಏರ್ಲಿಷ್‌ನ ವೈಶಿಷ್ಟ್ಯವಲ್ಲವೆ? ಸುಸಜ್ಜಿತ ವಾಚನಾಲಯವು ಪ್ರಯೋಗಶಾಲೆಗೆ ಪೋಷಕವಾಗಿತ್ತು. ಆದರೆ ಸ್ವಳಸಂಕೋಚ ಹೇಳಲಾಸಲ್ಲ. ಅಕಸ್ಮಾತ್ತಾಗಿ ಆ ಪ್ರಯೋಗಶಾಲೆಗೆ ಸಂದರ್ಶಕರು ಬಂದಾಗ, ತುಂಬ ತೊಂದರೆಯಾಗುತ್ತಿತ್ತು—ಅತಿಥಿಗೂ ಯಜಮಾನನಿಗೂ! ಏರ್ಲಿಷ್‌ನ ಮಲಗುವ ಕೋಣೆ ಪುಸ್ತಕರಾಶಿಯಿಂದ ಶೋಭೆ ಪಡೆದಿತ್ತು. ಓದುವ ಹಂಬಲ ಹಿಡಿತದಲ್ಲಿರಲಿಲ್ಲ. ವಿಷಯವ್ಯಾಸಂಗಕ್ಕೆ ಅತನ ವೇತನದ ಬಹ್ವಂಶ ವಿನಿಯೋಗವಾಗುತ್ತಿತ್ತು. ಪುಸ್ತಕ ಓದುತ್ತಿದ್ದಂತೆ, ತಲೆ ವಿಷಯ ಸಂಗ್ರಹಿಸಿದರೆ, ಅಧರಗಳಿಗೆ ಸಿಗಾರುಗಳೊಂದಿಗೆ ಸರಸ. ಈತನ ವಾಚನಾಲಯದಲ್ಲಿ ಇಲಿಗಳಿಗೆ ಸದಾ ಸ್ವಾಗತ. ಇವನ ವಿವಿಧ ವಿಚಾರ—ಚೌರ್ಯಕ್ಕೆ ಅಸ್ಪದವಿತ್ತರಲು ಸಾಕು ಎಂಬುದು ಕೆಲವರ ಮತ. ಆದರೆ ಈ ಊಹೆಯಿಂದ ಏರ್ಲಿಷ್ ನಿರ್ಲಿಪ್ತ. ಎಷ್ಟೋ ಹೊತ್ತಿಗೆಗಳ ಸೂಕ್ಷ್ಮಾವಲೋಕನದಿಂದ ಅತನ ವಿಚಾರಗಳು ರೂಪುಗೊಂಡು, ಪ್ರತ್ಯಕ್ಷಕ್ಕಿಳಿಯುತ್ತಿದ್ದುವು.

೧೯೦೧ರಲ್ಲಿ ಚಳಿಜ್ವರವನ್ನುಂಟು ಮಾಡುವ ಸೊಳ್ಳೆಯನ್ನು ಕಂಡುಹಿಡಿದ ಅಲ್ಫಾನ್ಸ್ ಲಾವೆರನ್ನನ ಪ್ರಯೋಗಗಳ ವಿವರವನ್ನು ಸೂಕ್ಷ್ಮವಾಗಿ ಅಭ್ಯಾಸಿಸಿದ. ಹಾಗೂ ಅತನ ಇತ್ತೀಚಿನ ಪ್ರಯೋಗಗಳ ವರದಿಯನ್ನೋದಿದಾಗ ಏರ್ಲಿಷ್‌ನಿಗೆ Trypanosomes ಎಂಬ ಸೂಕ್ಷ್ಮ ಜೀವಿಗಳ ಅಭ್ಯಾಸ ಕೈಕೊಳ್ಳಬೇಕೆಂಬ ಉತ್ಕಟೇಚ್ಛೆಯಾಯಿತು. 'ಓಹೊ! ಇಲ್ಲಿದೆ ಸೂಕ್ಷ್ಮಜೀವಿ, ಇದರ ಅಭ್ಯಾಸವನ್ನು

ನಾನು ಕೈಕೊಳ್ಳಲೀಬೇಕು. ಈ ಜೀವಿ ಅಷ್ಟೇನೂ ಸೂಕ್ಷ್ಮ-ಜೀವಿಯಲ್ಲ—ಸಾಕಷ್ಟು ದೊಡ್ಡದಿದೆ. ಇದನ್ನು ಸುಲಭವಾಗಿ ದೊರಕಿಸ-ಬಹುದು. ಹಾಗೂ ಈ ಜೀವಿಗಳುಂಟು ಮಾಡುವ ಬೇನೆಯನ್ನು ಇಲಿಗಳಲ್ಲಿ ಸರಾಗವಾಗಿ ಉಂಟುಮಾಡಬಹುದು. ಇಲಿಗಳಾದರೂ ಈ ಬೇನೆಯಿಂದ ಸಾಯುವುದು ಶತಃಸಿದ್ಧ. ನನ್ನ ಬಣ್ಣಗಳ ಪ್ರಯೋಗವನ್ನು ಈ ಸೂಕ್ಷ್ಮ ಜೀವಿಯ ಮೇಲೆ ಮಾಡಬಹುದಲ್ಲವೆ? ನನ್ನೀ ಬಣ್ಣದಿಂದ ಇಲಿಗಳಲ್ಲೊಂದಾದರೂ ಬದುಕಿದರೆ, ನಾನು ಕೃತಾರ್ಥನೆ!' ಎಂಬ ವಿಚಾರ, ಆತನ ಪ್ರಯೋಗಗಳನ್ನೋದುತ್ತಿದ್ದಾಗ ಉದಯಿಸಿತು. ಸರಿ ಪ್ರಯೋಗಕ್ಕೇಕೆ ವಿಲಂಬ? ೧೯೦೨ರಲ್ಲಿ ಏರ್ಲಿಷ್ ಪ್ರಯೋಗಗಳನ್ನು ಮಾಡಲಾರಂಭಿಸಿದನು. ತಾನು ಇದು-ವರೆಗೆ ಪ್ರಯೋಗಿಸ ಬಯಸಿದ ಬಣ್ಣಗಳ ಸಂಗ್ರಹ ಸಾಕಷ್ಟಿದೆ ಎಂಬು-ದನ್ನು ಮನವರಿಕೆ ಮಾಡಿಕೊಂಡ. ಹಾಗೆಯೇ ಮನೆ, ಮಾರು, ಮಡದಿ, ಮಕ್ಕಳು, ತಂದೆ, ತಾಯಿಯಿಂದ ಸಹಿತವಿರುವ—ಸಮರಾಂಗಣದಲ್ಲಿ ಗುಂಡಿಗೆ ಎದೆ ತೆರೆದು ನಿಂತ ಸೈನಿಕನಂತೆ, ಏರ್ಲಿಷ್‌ನ ಯಜ್ಞಕ್ಕೆ ಪಶುಗಳೆಂದು ಇಲಿಗಳ ದಂಡೊಂದು, ಮಾರಣ ಹೋಮಕ್ಕಾಗಿ ಕಾಯ್ದಿದ್ದಿತು. ಪರಿಶ್ರಮಕಾರಕವಾದ, ಹಾಗೂ ತಾಳ್ಮೆಯ ಒರೆಗಲ್ಲಿಗೆ ಸಾಟಿಯಾಗಿ ನಿಲ್ಲುವ ಎದೆಗಾರಿಕೆ ಜಪಾನಿಯರಿಗಿದೆ ಎಂತಲೇ ಸಹಾಯಕನಾಗಿರಲು ಏರ್ಲಿಷ್ ಶಿಗಾನಿಗೆ ಕೇಳಿ-ಕೊಂಡ. ಇಂಥಾ ಪರಿಶ್ರಮವನ್ನು ಆಪೂರ್ವ ತಾಳ್ಮೆಯಿಂದ ಸಹಿಸು-ವುದು ಜಪಾನಿಯರಿಗೆ ಮಾತ್ರ ಸಾಧ್ಯವೆಂದು ಏರ್ಲಿಷ್‌ನಿಗೆ ಖಚಿತ-ವಾಯಿತು. ಪ್ಯಾರಿಸಿನಲ್ಲಿರುವ ಪಾಶ್ಚರ್ ಸಂಸ್ಥೆಯಿಂದ Trypanso-meನಿಂದ ಪೀಡಿತವಾದ ಗಿನಿಪಿಗ್ಗುಗಳನ್ನು ದೊರಕಿಸಲಾಯಿತು. ಈ ಗಿನಿಪಿಗ್ಗಿನ ರಕ್ತವನ್ನು ಇಲಿಯ ಬಾಲದಲ್ಲಿ ಚುಚ್ಚಲಾಯಿತು. ಅನಂತರ ಕೆಲ ದಿನಗಳ ಮೇಲೆ ಬೇನೆಯ ಎಲ್ಲ ಲಕ್ಷಣಗಳು ಸುವ್ಯಕ್ತವಾದ ಮೇಲೆ, ಈ ಇಲಿಯ ರಕ್ತವನ್ನು ಇನ್ನೊಂದು ಸಶಕ್ತ—ನಿರೋಗಿ ಇಲಿಯ ಬಾಲದಲ್ಲಿ ಸೇರಿಸಲಾಯಿತು. ಇದೇ ಕ್ರಮವನ್ನು ಅನುಸರಿಸಲಾಗಿತ್ತು. ಅಸಂಖ್ಯ ಇಲಿಗಳಿಗೆ ರೋಗಾಣುಗಳಿರುವ ರಕ್ತವನ್ನು ಇಂಜೆಕ್ಷನ್ನಿ-ನಿಂದ ಸೇರಿಸಿ, ಅವುಗಳಲ್ಲಿ ಕಾಣಬರುವ ರೋಗಚಿಹ್ನೆಗಳನ್ನು ಗುರು-ತಿಸುವ ಗುರುತರ ಕಾರ್ಯವನ್ನು ಶಿಗಾ ಕೈಕೊಂಡ. ಈ ಬೇನೆಯ ನಿವಾರಣೋಪಾಯಗಳನ್ನು ಶೋಧಿಸುವ ಸಾಹಸ ಏರ್ಲಿಷ್‌ನದಾ-ಯಿತು. ಏರ್ಲಿಷ್ ಒಟ್ಟಿನಲ್ಲಿ ಹಂಠ ವಿವಿಧ ಬಣ್ಣಗಳನ್ನು ಪ್ರಯೋ-ಗಿಸಿದ. ಈ ಪ್ರಯೋಗಗಳಿಗೆ ಹಿಡಿದ ವೇಳೆ, ಪಡಬೇಕಾದ ಪರಿಶ್ರಮ—ಇವೆಲ್ಲವುಗಳನ್ನೂ ತಾಳ್ಮೆಯಿಂದ ಸಹಿಸಿದುದು ಅಪೂರ್ವವಲ್ಲವೆ? ಕಂಡ ಕಂಡ ಬಣ್ಣಗಳನ್ನು ಪ್ರಯೋಗಿಸಿ ನೋಡುವುದು ಜನೈಜ್ಞಾನಿಕ ಕ್ರಮವಾದರೂ, ಇವರಿಬ್ಬರ ಎದೆಗಾರಿಕೆ, ಸಹನೆ ನಿಜ್ಜಕ್ಕೂ ಅಂತಹದೆ. ಪ್ರಯೋಗಗಳ ಫಲಶ್ರುತಿಯನ್ನು ಬಹಿರಂಗಗೊಳಿಸುತ್ತ ತೆಗೆದ ಉದ್ಗಾರಗಳು ಮನನೀಯವಾಗಿವೆ:— ಈ ಶೋಧದಿಂದ ನಷ್ಟಗುಂದಾದ ಸಂತೋಷಕ್ಕೆ ಎಣೆಯುಂಟೆ? ನಾವಿಕ ಆದೇ ತಾನೇ ನೀರಿಗೆ ಇಳಿಯ ಬಯಸಿ, ತನ್ನ ನಾವೆಗೆ ಯಾವ ಕಟ್ಟಿಗೆಯಿಂದ ಗಟ್ಟಿಮುಟ್ಟಾದ ಹುಟ್ಟನ್ನು ಮಾಡಬಹುದೆಂಬುದನ್ನು ಕಂಡುಕೊಳ್ಳುವಂತೆ, ಆಯುಧ ನಿರ್ಮಾತೃ ಚೂಸಾಧ ಆಯುಧಗಳಿಗೆ ಅತ್ಯುತ್ತಮವಾಗಬಹುದಾದ ಲೋಹವನ್ನು ಕಾಣಹೊರಟಂತೆ, ನಾನೂ ಈ ಬೇನೆಗೆ ಯಾವ ಬಣ್ಣ-ದಿಂದ ನಿವಾರಣೆ ದೊರೆಯುವುದೆಂಬುದನ್ನು ಕಾಣಬಯಸಿದೆನು. ನನ್ನೀ ವಿಧಾನ ಅನುಚಿತವೆಂದೂ, ಲೋಹಯುಗಕ್ಕೆ ಮಾತ್ರ ಸರಿಹೋಗ-ಬಹುದೆಂಬುದನ್ನೂ ಬಲ್ಲೆ. ಸೂಚ್ಯವಾಗಿ ಹೇಳಬಹುದಾದರೆ—It was the method of Trial Sweeting. ನಾವಿಬ್ಬರೂ ಬೆಪರಿಸಲ್ಲಿ ಸ್ನಾನ ಮಾಡಿದ್ದೇವೆ. ಕೊನೆಗೂ ನನ್ನು ಪ್ರಯತ್ನಕ್ಕೆ ಫಲ ದೊರೆಯಿತು. ಇದಕ್ಕಿಂತ ಹೆಜ್ಜಿನ ಸಂತೋಷ ಇನ್ನಾವುದು?

ಈ ಪ್ರಯೋಗಗಳನ್ನು ಕೈಕೊಂಡಾಗ ಏರ್ಲಿಷ್ ರಾತ್ರಿಯೆಲ್ಲೂ ಬಹು ಬೆಲೆಯುಳ್ಳ ಸಿಗಾರ್ ಸೇದುತ್ತಿದ್ದ. ಎಷ್ಟೋ ವೇಳೆ ಸಿಗಾರು ಸೇದಲೆಂದೇ ಏಳುತ್ತಿದ್ದನಂತೆ. ಬಳಲಿ ಬೆಂಡಾದಾಗ, ಸೋಡಾ ಅಥವಾ ಲೆಮನ್ ಹೀರಿ, ಬೆಮರನ್ನೊರಿಸಿಕೊಂಡು ಮತ್ತೆ ಕಾರ್ಯಾರಂಭ! ವಿರಾಮವೇಳೆಯಲ್ಲಿ ವಿಶೇಷ ಅಧ್ಯಯನ. ಈ ಪರಿಯ ಅಧ್ಯಯನ, ಪರಿಶ್ರಮ, ಮೊದ.ಮೊದಲು ನಿರರ್ಥಕವಾಗುತ್ತಿದ್ದದರಿಂದ ನಿರಾಶೆ-ಯುಂಟಾಗುವುದು ಸಹಜ. ಆದರೆ ಅಧೈರ್ಯ ತಾಳಲಿಲ್ಲ—ಮುಳುಗು ಹಾಕಿರುವವನಿಗೆ ತೃಣವು ಕೈಗೆ ಸಿಕ್ಕಂತೆ, ಈ ಧೈರ್ಯದ ಬಲದಿಂದ ನಿರಾಶೆಯ ಪ್ರಬಲ ಗೋಡೆಯನ್ನು ಪುಡಿಯಾಗಿಸಿದ ಅಸಮಸಾಹಸಿ ಏರ್ಲಿಷ್. ಒಮ್ಮೊಮ್ಮೆ ಪುಸ್ತಕ ಓದಿಯಾದ ಮೇಲೆ, ಅದನ್ನು ಬೀಸಿ ಒಗೆಯುತ್ತಿದ್ದ. ಆಶೆಯು ತೀವ್ರವಾಗಿದ್ದರೆ, ನಿರಾಶೆಯು ದುಃಖಜನಕವಾಗಿರುತ್ತದೆ. ಅವಿರತ ಪರಿಶ್ರಮಕ್ಕೆ ಫಲಪ್ರಾಪ್ತಿಯಾಗ-ಲಾರದೆ? ೧೯೦೩ರಲ್ಲಿ ಏರ್ಲಿಷ್ ಆಶಾಕಿರಣವೊಂದನ್ನು ಕಂಡು ಹಿರಿಹಿರಿ ಹಿಗ್ಗಿದ. ಬಿರುಗಾಳಿಗೆ ಸಿಕ್ಕಿ ನಾವೆ ಡೋಲಾಯಮಾನ-ವಾಗುತ್ತಿರುವಾಗ, ಜೀವ-ಸಾವಿನೊಂದಿಗೆ ಉಯ್ಯಾಲೆಯಾಡುತ್ತಿರು-ವಾಗ, ಕೈಗೆ ಸಿಕ್ಕಿದ ಕಸದ ಕಡ್ಡಿಯೂ ಆಧಾರಸ್ತಂಭವೆನಿಸದೆ? ನಿರಾಶಾಭೂತ ಬೆಂಬತ್ತಿದಾಗ, ಆಶೆಯ ಕುದುರೆಯ ಖುರಧ್ವನಿ ಧೈರ್ಯವೀಯದೆ?

೧೯೦೩ರಲ್ಲೊಂದು ದಿನ ಶಿಗಾ ಮತ್ತು ಏರ್ಲಿಷ್ Benzo-purpurin ಗುಂಪಿಗೆ ಸೇರಿದ ಬಣ್ಣವೊಂದನ್ನು ಪ್ರಯೋಗಿಸ-ತೊಡಗಿದ್ದರು. ನಿರಾಶೆಯಿಂದ ಸುಕ್ಕುಗೊಂಡ ಮುಖ ಪಡೆದ ಏರ್ಲಿಷ್ ಹುಬ್ಬುಗಂಟು ಹಾಕಿ ಶಿಗಾನಿಗೆ ಹೇಳಿದ:—'ಶಿಗಾ, ಈ ಬಣ್ಣ ಇಲಿಯ ದೇಹಾದ್ಯಂತ ವ್ಯಾಪಿಸಿಲ್ಲವೆಂಬುದನ್ನು ಗಮನಿಸಿದ್ದೀರಜ್ಜೆ? ಬಹುಶಃ ಇದೇ ಬಣ್ಣದ ರಚನೆಯನ್ನು ಕೆಲಮಟ್ಟಿಗೆ ಪರಿವರ್ತಿಸಿದರೆ, ಅದು ಇಲಿಯ ದೇಹಾದ್ಯಂತ ವ್ಯಾಪಿಸಬಹುದಲ್ಲವೆ?' ಶಿಗಾ 'ಸರಿ, ಮಾಡಿ ನೋಡಬಹುದು' ಎಂದಿಷ್ಟೇ ನುಡಿದ. ಮಾಡಿ ನೋಡಬೇಕೆಂಬ ಆತುರತೆಯುಂಟಾಯಿತು ಏರ್ಲಿಷ್‌ನಿಗೆ. ಆದರೆ ಮಾಡುವುದೆಂತು ಎಂಬುದೇ ಮಹಾಸಮಸ್ಯೆ. ರಸಾಯನ ವಿಜ್ಞಾನವನ್ನು ಅರಗಿಸಿ-ಕೊಂಡಿದ್ದರೂ, ಕ್ಲಿಷ್ಟವಾದ ಸಲಕರಣೆಗಳನ್ನು ನಿಯೋಜಿಸಿ, ಪ್ರಯೋಗ-ಗಳನ್ನು ಮಾಡುವುದೆಂದರೆ ಏರ್ಲಿಷ್‌ನಿಗೆ ಪ್ರಾಣಸಂಕಟ. ನಳಿಕೆ-ಯಲ್ಲಿಯೇ ಆತನ ಪರೀಕ್ಷಾವಿಧಾನ ಪೂರೈಸುತ್ತಿತ್ತು. ಕ್ಲಿಷ್ಟತತ್ತ್ವವ-ನ್ನೋಷಿ ಏರ್ಲಿಷ್‌ನಿಗೆ, ಕ್ಲಿಷ್ಟ ಸಂಯೋಜನೆಯನ್ನು ಕಂಡರಾಗದು

ಏರ್ಲಿಷ್‌ನ ಈ ಸಮಸ್ಯೆ ಬಹುದಿನ ಸಮಸ್ಯೆಯಾಗಿಯೇ ಉಳಿಯ-
ಲಿಲ್ಲ. ಆಲ್ಲಿಯೇ ಇರುವ ಬಣ್ಣದ ಕಾರಖಾನೆಯಲ್ಲಿ, ಏರ್ಲಿಷ್
ನಿರೀಕ್ಷಿಸುತ್ತಿದ್ದ ಬಣ್ಣವನ್ನು ನಿರ್ಮಿಸಿದರು. ಆ ಬಣ್ಣವೇ Try-
pan red. ಕೆಲ ಬಿಳಿಯ ಇಲಿಗಳಲ್ಲಿ ಶಿಗಾ Trypanosame
ಸೇರಿಸಿದ. ದಿನವೊಂದುರುಳಿತು– ಬೇನೆಯು ಪ್ರಾರಂಭಿಕ ಲಕ್ಷಣಗಳು
ಪ್ರಕಟಗೊಂಡುವು.....ಇನ್ನೊಂದು ದಿನ ಕಳೆಯಿತು—ಬೇನೆ ವರ್ಧಿ-
ಸಿತು.....ಹೀಗೆಯೇ ದಿನಗಳು ಉರುಳುತ್ತ ನಡೆದು, ಇನ್ನೇನು ದಿನ-
ವೊಂದರಲ್ಲಿ ಆ ಬಡಪಾಯಿ ಪ್ರಾಣಾರ್ಪಣೆ ಮಾಡಬಹುದಾಗಿತ್ತು.
ಶಿಗಾ Trypan redನ್ನು ಆ ಇಲಿಯ ತ್ವಚದಲ್ಲಿ ಸೇರಿಸಿದ. ಇಬ್ಬರೂ
ಪರಿಣಾಮವನ್ನು ಕುತೂಹಲದಿಂದ ನಿರೀಕ್ಷಿಸತೊಡಗಿದರು. ಏರ್ಲಿಷ್
ಏನೇನೋ ತೊದಲಿದ; ಕೈ ಕೈ ಹಿಸುಕಿಕೊಂಡ; ಹುಬ್ಬು ಏರಿಸಿದ;
ಹಣೆಯು ನಿರಿಗೆಗಳು ಏರಿ ಇಳಿಯತೊಡಗಿದುವು; ಕೊರಳು ಕೊಂಕಿ-
ಸಿದ; ರೆಪ್ಪೆ ಮುಚ್ಚಿದ್ದಿಲ್ಲ. ನೆಟ್ಟ ದೃಷ್ಟಿಯಿಂದ ನೋಡಿದ; ಒಮ್ಮೆಲೆ
ಹರ್ಷಭರಿತನಾದ. ಹರ್ಷ ಉಂಕೆ ಮೀರಿ ಹೊರಸೂಸಿತು, 'ಅದೋ,
ಶಿಗಾ, ನೋಡಿರಿ. ಅದೋ ಅಲ್ಲಿ.....ಹಾಂ, ಅಲ್ಲಿಯೇ ನೋಡಿರಿ'
ಶಿಗಾನ ಭುಜ ಅಲುಗಿಸಿದ. 'ಅದೋ ನೋಡಿರಿ, ಅದರ ಕಿವಿಗಳು
ಹೇಗೆ ಕೆಂಪಾಗಿವೆ? ಆಗಲೆ ಅದರ ಕಣ್ಣುಗಳು ನೇರಳೆ ಬಣ್ಣ
ತಾಳಿವೆ.' ಆಹಾ! ಅವರಿಬ್ಬರ ಆನಂದಕ್ಕೆ ಅಳತೆ ಇಲ್ಲ. ಉಬ್ಬಿನಿಂದ
ಕುಣಿದರು; ಉತ್ಸಾಹದ ಕೇಕೆ ಹಾಕಿದರು ಮಳಿಗಾಲದಲ್ಲಿ ಭಾಸ್ಯ-
ರನ ಹೊಂಗಿರಣಗಳನ್ನು ಕಂಡರಾಗುವ ಸಂತೋಷಕ್ಕಿಂತ ಹೆಚ್ಚಿನ
ಸಂತೋಷ ಅವರಿಗಾಗಿತ್ತು. ಆ ಬಡಪ್ರಾಣಿ ಸಾವಧಾನವಾಗಿ
ಚೇತರಿಸತೊಡಗಿತು. ಅದೇ ಮಹಾ ಸುದಿನ ಅವರಿಗೆ. ಅನಿನಿತ್ತವಾಗಿ
ಒದಗಿಬಂದ ಭಾಗ್ಯ! 'ಇಲಿಯನ್ನು ಗುಣಪಡಿಸುವ ಬಣ್ಣ ಕಂಡಿ-
ದ್ದೇನೆ. ಇಂತಹದೇ ಒಂದರಿಂದ ಲಕ್ಷಾವಧಿ ಜನರನ್ನು ಬದುಕಿಸುವ
ಮಾರ್ಗವನ್ನು ಕಾಣುವೆನು!' ಹೊಂಗನಸನ್ನು ಕಂಡ ಏರ್ಲಿಷ್—
ಜರ್ಮನ್ ಯಹೂದಿ. ಆ ಕನಸು ನನಸಾಗಲು ಬಹುಕಾಲ ಕಾಯ-
ಬೇಕಾಯಿತು. ಇಲಿಯಲ್ಲಿ ಸಫಲವಾದ ಪ್ರಯೋಗ, ಗಿನಿಪಿಗ್ ಮತ್ತು
ನಾಯಿಗಳಲ್ಲಿ ವಿಫಲವಾಯಿತು. ಪ್ರಯೋಗವನ್ನು ಯಶಸ್ವಿಯಾಗಿಸಲು
ಸಾವಿರಾರು ಪ್ರಾಣಿಗಳ ಉದಾರ ಬಲಿದಾನವಾಗಬೇಕಾಯಿತು.

ಏರ್ಲಿಷ್ ತುಂಬ ಒಳ್ಳೆಯವ. ಫ್ರಾಂಕ್‌ಫರ್ಟಿನ ಜನರಿಗೆ
ಸ್ಪೆಯನಾಗಿದ್ದ. ಅಲ್ಲಿಯ ಜನರ ವಕ್ರದೃಷ್ಟಿ ಗಮನಾರ್ಹವಾಗಿದೆ:—
"ಯಾವಾಗಲೂ ವಿಚಾರಕ್ರಾಂತ"—ಇದು ಆತನನ್ನು ಗಾಡಿಯಲ್ಲಿ
ಕರೆದೊಯ್ಯುವ ಕೋಚವಾನನ ಉದ್ಗಾರ. 'ಮಹಾ ಮೇಧಾವಿ'
ವಾರಕ್ಕೊಂದು ಬಾರಿ ಆತನನ್ನು ಮನರಂಜಿಸುತ್ತಿದ್ದ ವಾದ್ಯಗಾರನ
ಪ್ರಶಂಸೆ. 'ತುಂಬಿದ ಕೊಡ ತುಳುಕದು, ನಿಗರ್ವಿ.' ಇದು ಸಾರ್ವ-
ಜನಿಕ ದೃಷ್ಟಿ–'ಅತ್ಯುತ್ತಮ ವಿಚಾರಗಳು ತಲೆದೋರುವುದು ಉತ್ತಮ
ಸಂಗೀತಶ್ರವಣದ ನಂತರವೇ' ಎಂಬುದು ಏರ್ಲಿಷ್‌ನ ನಂಬಿಕೆ.
ಈತನ ಜನಸ್ಪ್ರಿಯತೆಯ ಕುರುಹಾಗಿ, ಫ್ರಾಂಕ್‌ಫರ್ಟಿನ ಬೀದಿಯೊಂದು
ಈತನ ಶುಭನಾಮದಿಂದ ಶೋಭಿಸುತ್ತಿದೆ. ಮನೆಯಲ್ಲಿಯ ಸಮಾ-
ರಂಭಗಳ ದಿನಾಂಕ ಸ್ಮರಣೆಯಲ್ಲಿರಲೆಂದು, ಮೊದಲೇ ತಾನೇ ತನಗಾಗಿ

ಮಕ್ಕಳ ಸದೃಢತೆ-ಗಾಗಿ "ಬಗನ ಬಾಲಾ-ಮೃತ"

ಹೆಲ್ಲು ಬರುವಾಗ "ಎಸ್ಪನ್ ಗ್ರಾಇಪ್" ಹೀಲರ್

ಜ-ನ್ಸ್ ಆದರೆ "ಜರ್ಮ್ ಆಯಿಲ್

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು

The National Pharmacies & Pharmaceuticals Ltd., Dharwar

ಒಂದು ಓಲೆ ಬರೆದು ಆಂಜೆಗೆ ಹಾಕುತ್ತಿದ್ದನಂತೆ. ಎಂದರೆ ಸಕಾಲಕ್ಕೆ
ಓಲೆ ತಲ್ಪಿ ಸಮಾರಂಭದಲ್ಲಿ ಸಮಭಾಗಿಯಾಗಲು ಸಾಧ್ಯವಾಗುತ್ತಿ-
ತ್ತಂತೆ. ಅತಿವಿಚಾರದ ಆವಿಷ್ಕಾರವೇ ಇದು?

೧೯೦೬ನೆಯ ಇಸ್ವಿಯು ಏರ್ಲಿಷ್ ಜೀವನದಲ್ಲಿ ಮರೆಯಲಾಗದ
ವರುಷ. ಆ ವರುಷ ಏರ್ಲಿಷ್‌ನ ಮೇಲೆ ಸುವರ್ಣವೃಷ್ಟಿ-
ಯಾಯಿತು. ಶ್ರೀಮತಿ ಫ್ರಾಂಯಿನ್ಸ್ ಸ್ಪಿಯರ್ ಎಂಬ ಶ್ರೀಮಂತಳು
ತನ್ನ ಗಂಡನ ಸ್ಮರಣೆಯ ಕುರುಹಾಗಿ, ಒಂದು ಪ್ರಯೋಗಶಾಲೆ-
ಯನ್ನು ನಿರ್ಮಿಸಲು ಮುಂದೆ ಬಂದಳು. ಆ ಪ್ರಯೋಗಶಾಲೆಯನ್ನು
ಸುಸಜ್ಜಿತಗೊಳಿಸಲು ಏರ್ಲಿಷ್‌ಗೆ ಬಿನ್ನವಿಸಿದಳು. ಆ ಪ್ರಯೋಗ-
ಶಾಲೆಗೆ–ತನಗೆ ಸರಿದೋರಿದಂತೆ ವಿದ್ವಾಂಸರನ್ನು ನಿಯಮಿಸಿಕೊಳ್ಳುವ
ಹೊಣೆಯನ್ನು ಏರ್ಲಿಷ್ ನಿರ್ವಹಿಸಬೇಕಾಯಿತು.

Atoxyl ಎಂಬ ರಸಾಯನದ ರಚನೆಯಲ್ಲಿ ಬದಲು ವಸಾಡುವ
ಕುರಿತು ಏರ್ಲಿಷ್ ಅಭ್ಯಾಸ ಕೈಕೊಂಡನು. ಆಗ ಆತನ ಪ್ರಯೋಗ.

ಶಾಲೆಯಲ್ಲಿ ಯುಕ್ತ ಸಲಕರಣೆಗಳ ಅತೀವ ಅಭಾವವಿತ್ತು. ಕೇವಲ ಶೀಸೆಗಳ ರಾಶಿ ಮೇರೆ ಮೀರಿತ್ತು. ಈ ಅಭ್ಯಾಸದ ಮುಖ್ಯೋದ್ದೇಶ ವಿಷವಾದ Arsenic (ಸೋಮಲ) ನ್ನು ನಿರವಾಯಕಾರಿಯಾಗಿ, ಸಾಧ್ಯವಾದರೆ ವಿಷನಿವಾರಕನನ್ನಾಗಿ ಮಾರ್ಪಡಿಸುವುದಿತ್ತು. ಈ ದಿಶೆಯಲ್ಲಿ ಒಟ್ಟಾರೆ ೬೦೬ ಪ್ರಯೋಗಗಳನ್ನು ಮಾಡಿ ನೋಡಿದನು. ಏರ್ಲಿಷ್ ಮತ್ತು ಸಂಗಡಿಗರ ಅವಿರತ ಪರಿಶ್ರಮಕ್ಕೆ ಕೊನೆಗೆ ಫಲ ಪ್ರಾಪ್ತಿಸಿತು. ಯಶಸ್ಸು ದೊರೆತುದು ೧೯೦೯ರಲ್ಲಿ–ಎಂದರೆ ಏರ್ಲಿಷ್‌ನ ಸುವರ್ಣಮಹೋತ್ಸವವನ್ನು ನೆರವೇರಿಸುವ ಸುಮಾರಿಗೆ. ೬೦೬ನೆಯ ಪ್ರಯೋಗದಿಂದ ಫಲಪ್ರದವಾಗಿ ಕಂಡುಬಂದ ದಿವ್ಯೌಷಧಿ. ಈಗ ಸುಪರಿಚಿತವಿರುವ ಸಾಲ್ವರ್ಸನ್ (Salvarsan). ಇದಕ್ಕೆ ಕೇವಲ '೬೦೬' ಎಂದೂ ಹೆಸರು ಜಗತ್ಪ್ರಸಿದ್ಧವಾಗಿದೆ. ಇದು Trypanosomeಗಳನ್ನು ಸಹಜವಾಗಿ ನಾಶಪಡಿಸಬಲ್ಲದು. ಭಯಂಕರ ವಿಷವಾದ ಸೋಮಲ (ಶಂಖಪಾಷಾಣ), ರಾಸಾಯನಿಕ ಸಂಯೋಗದಿಂದಾಗಿ ವಿಷನಿವಾರಕ ಹಾಗೂ ರೋಗನಾಶಕವಿದ್ದುದನ್ನು ತಿಳಿದು, ಏರ್ಲಿಷ್ ಮತ್ತು ಅವನ ಸಂಗಡಿಗರಾದ ಹಾಟಾ ಮತ್ತು ಬರ್ಥೇಮರಿಗೆ ಅತ್ಯಾನಂದವಾದುದು ಸಹಜವಲ್ಲವೇ? ಈ ಶೋಧ ಮಾನವಕುಲಕ್ಕೆ ಮಹೋಪಕಾರ ಮಾಡಬಹುದಲ್ಲವೆ? ಅಹುದು, ಅವರ ಊಹೆ ನಿಜ! 'ಪಕ್ಷಿಗಳಲ್ಲಿ ತಾರಕವಾಗಿ ಕಂಡುಬಂದ '೬೦೬' ಮನುಷ್ಯರಲ್ಲೂ ತಾರಕವಾಗಬಹುದೆ?' ಎಂಬುದೇ ಈ ತ್ರಿಮೂರ್ತಿಗಳನ್ನು ಬಲವಾಗಿ ಬಾಧಿಸುತ್ತಿದ್ದ ಭೀತಿ. ಏರ್ಲಿಷ್‌ನು ಮಿತ್ರನಾದ ಡಾ. ಕೋನ್ಯಾಡನಿಗೆ ಈ '೬೦೬'ನ್ನು ಪರಮಾದ ಮೇಲೆ ಪ್ರಯೋಗಿಸಲು ಕೇಳಿಕೊಂಡಾಗ, ಆತ ಆತ್ಮಸಂತೋಷದಿಂದ ಒಪ್ಪಿದನು. ಕೋನ್ಯಾಡ್ ತನ್ನ ಕೆಲ ರೋಗಿಗಳ ಮೇಲೆ '೬೦೬'ನ್ನು ಪ್ರಯೋಗಿಸಿ ನೋಡಿದಾಗ, ಪರಿಣಾಮ ಪ್ರಿಯವಾಗಿ ಕಂಡುಬಂದದ್ದರಿಂದ, ಈ ಸುವಾರ್ತೆಯನ್ನು ಸಾರಲು ಏರ್ಲಿಷ್‌ನಲ್ಲಿಗೆ ಧಾವಿಸಿದ. ಏರ್ಲಿಷ್‌ನಿಗೆ ಆದ ಆನಂದಕ್ಕೆ ಅಳತಿ. ಗೋಲಿಲ್ಲ. ಯಾರದೋ ತಪ್ಪಿಗೆ ಯಾರೋ ಬಲಿಯಾಗಿ, ಸಮಾಜದಿಂದ ಬಹಿಷ್ಕೃತರಾಗಿ, ಹೊಲಸು ಹೇಸಿ ಭವನದಲ್ಲಿ ದಿನಗಳನ್ನೆಣಿಸುತ್ತಿದ್ದ ಮಹಿಳೆಯರಿಗೆ, ಈ ದಿವ್ಯೌಷಧಿ ಸಂಜೀವಿನಿಯಾಗಿ ತೋರಿದುದಲ್ಲಿ ಏನಾಶ್ಚರ್ಯ? ಏರ್ಲಿಷ್ ತನ್ನ ಪ್ರಯೋಗಗಳ ಪರಿಣಾಮಗಳನ್ನು ೧೯೦೯ರಲ್ಲಿ ಸೇರಿದ ವಿಜ್ಞಾನಗೋಷ್ಠಿಯಲ್ಲಿ ಬಹಿರಂಗ ಪಡಿಸಿದಾಗ, ಗೋಷ್ಠಿಗೆ ಗೋಷ್ಠಿಯೇ ಆನಂದಸಾಗರದಲ್ಲಿ ಮುಳುಗಿತು. ಚಪ್ಪಾಳೆಯ ಕಡಕಡಾಟದಿಂದ ಸಭಾಂಗಣ ಪ್ರತಿಧ್ವನಿಸಿತು. ಸರಿ, ಈ ದಿವ್ಯೌಷಧವನ್ನು ಹಡೆಯಬಯಸಿದ ಹತಭಾಗ್ಯರ ಬೇಡಿಕೆಗಳು ಏರ್ಲಿಷ್‌ನಿಗೆ ತಲ್ಪಿದುವು. ಆ ದಿವ್ಯೌಷಧವನ್ನು ದೊಡ್ಡ ಪ್ರಮಾಣದಲ್ಲಿ ಆ ಚಿಕ್ಕ ಪ್ರಯೋಗಶಾಲೆಯಲ್ಲಿಯೇ ನಿರ್ಮಿಸುವುದು ಅನಿವಾರ್ಯವಾಯಿತು. ಹಾಟಾ ಮತ್ತು ಬರ್ಥೇಮರಂಥವರು ಅವನಿಗೆ ಸಹಾಯಕರಿರಲು ಏನು ತಾನೆ ಅಸಾಧ್ಯ? ಹಾಗೆ ನೋಡಿದರೆ '೬೦೬' ಕಂಡುಹಿಡಿದ ಶ್ರೇಯಸ್ಸು ಬರ್ಥೇಮನಿಗೆ ಸಲ್ಲಬೇಕು; ಆದರೆ ಸಲಹೆ ದೊರೆತುದು ಏರ್ಲಿಷ್‌ನಿಂದ.

ಈಗ ಏರ್ಲಿಷ್‌ನಿಗೆ ಮೇಹರೋಗ ಕಾಡುತ್ತಿತ್ತು. ಸಿಗಾರ್ ಸೇವನೆ ಎಂದಿನಂತೆ ಸಾಗಿತ್ತು. ಅರೈಕೆಗಾಗಿ ಕಾಡೆರೇಟ್ ಟೊಂಕ-ಕಟ್ಟಿದ್ದ '೬೦೬'ರ ಪರಿಣಾಮವನ್ನು ತಿಳಿಸಲು ಡಾಕ್ಟರರಿಗೆ ಕೇಳಿಕೊಂಡಿದ್ದ. ಅವರಿಂದ ಬಂದ ಪ್ರಶಂಸಾಪರ ಪತ್ರಗಳನ್ನು ಕ್ರಮವಾಗಿಡುವುದು ಈತನ ಕಾರ್ಯದರ್ಶಿಗೆ ಕಷ್ಟಸಾಧ್ಯವಾಗಿತ್ತು. ಈ ಅಪೂರ್ವಶೋಧದಿಂದಾಗಿ ಏರ್ಲಿಷ್‌ನಿಗೆ ಅನೇಕ ಪದಕಗಳು ದೊರೆತುವು. ಈ ಪದಕಗಳಲ್ಲಿ ಯಾವುದನ್ನು ಹೇಗೆ ಹಾಕಿಕೊಳ್ಳಬೇಕೆಂಬುದರಲ್ಲಿ ಏರ್ಲಿಷ್‌ನಿಗೆ ಆಸ್ಥೆ ಇರಲಿಲ್ಲ. ಯಾರಾದರೂ ಕಿರಿಯ ವಿಜ್ಞಾನಿಗಳು ಈತನಮ್ಮ ಕಾಣಬಂದಾಗ, ವಿಶೇಷ ವಸ್ತ್ರಗಳನ್ನು ಧರಿಸುವ ಗೋಜಿಗೆ ಹೋಗದೆ, ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಪ್ರೋತ್ಸಾಹಿಸುತ್ತಿದ್ದ. '೬೦೬'ರ ಪ್ರಯೋಜನವೆಂದು ಗುಣ ಹೊಂದಿದ ರೋಗಿಯೊಬ್ಬ, ಈ ಔಷಧ ಅದ್ಭುತವೆಂದು ಮೆಚ್ಚಿಗೆ ವ್ಯಕ್ತಪಡಿಸಿದಾಗ, ಏರ್ಲಿಷ್ ತೆಗೆದ ಉದ್ಗಾರ ಗಮನಾರ್ಹವಾದುದು: 'ಪ್ರಿಯ ಸೀಗರಾ, ಕಳೆದ ಏಳು ದುರ್ದೈವೀ ವರುಷಗಳಲ್ಲಿ, ಇದೊಂದೇ ಸುದಿನ! ಅಹುದು; ಇದೊಂದೇ ಸುದಿನ; ಇದೆ ಮಹಾ ಸುದಿನ!"

ಪ್ರತಿರೋಧ ಸಾಮರ್ಥ್ಯದ (Immunity) ಕುರಿತು ಈತ ತಕ್ಕಮಟ್ಟಿಗೆ ಅಭ್ಯಾಸ ಮಾಡಿದನು. ಇವನಂತೆ ಮೆಟ್ಸ್‌ನಿಕಾಫ್ ಅಭ್ಯಾಸ ಕೈಕೊಂಡಿದ್ದ. ಇವರಿಬ್ಬರಿಗೂ ೧೯೦೮ರಲ್ಲಿ ನೋಬೇಲ್ ಪಾರಿತೋಷಕ ದೊರೆಯಿತು.

ವಿಶ್ವದ ವೈದ್ಯರು ಏರ್ಲಿಷ್‌ನಿಗೆ ತುಂಬ ಋಣಿಗಳಾಗಿದ್ದಾರೆ. ಏಕೆಂದರೆ, ರೋಗಗಳ ನಿವಾರಣೆಯ ನವೀನಕ್ರಮ ಕಂಡುಹಿಡಿದು ಇವನು ಮಹೋಪಕಾರ ಮಾಡಿದ್ದಾನೆ. ಈತನ ಅಪೂರ್ವ ಸಂಶೋಧನೆ ಹಾಗು ಪ್ರಭಾವೀ ವ್ಯಕ್ತಿತ್ವದಿಂದಾಗಿ, ಡಾಕ್ಟರರು ಸಂಶೋಧನೆಯತ್ತ ಆಕರ್ಷಿತರಾದರು. ಈ ಮಹಾಮಹಿಮನು ೧೯೧೫ರಲ್ಲಿ ಕಾಲವಾದನು. ೧೯೫೫ರಲ್ಲಿ ವಿಶ್ವದ ವಿಜ್ಞಾನಿಗಳು ಈತನ ಶತಮಾನೋತ್ಸವವನ್ನು ಸಂಭ್ರಮದಿಂದ ಜರುಗಿಸಿದರು. ಈ ಸಮಾರಂಭ ಯಾವುದರ ನಿದರ್ಶನ? ಏರ್ಲಿಷ್ ಮೃತನಾಗಿಯೂ ಅಮರನಾಗಿಲ್ಲವೆ?

ಕೊನೆಯಗಳಿಗೆ

ಶ್ರೀ. ಕುಲಕರ್ಣಿ ಶಂಕರರಾಯ, ಅಕ್ಕೇರಿಕೋಟಿ

ಉರಿಯುತಿದೆ 'ಲಾಯ್ಟು' ಝಗ್-ಝಗಿಸಿ
ನೆರೆದ ಕತ್ತಲ ಸಂತೆ ತಳಕಿತ್ತಿ ಮೈಮರೆಸಿ—
ಕತೆಹೇಳುತಿದೆ ಬೆಳಕು
ವಿಜ್ಞಾನದದ್ಭುತದ; ಮೈದುಂಬಿ
ನೆನೆಯುತದನೇ ತರ್ಕ-ತರ್ಕಗಳ ಹೆಣೆಯುತಿರೆ
ಚಟಪಟಿಸಿ-ನೊಗಕೊಮ್ಮೆ ಕೂರಂಬಿನಂತಿದ್ದ
ಕಾಲ್ಗಳಿಂದೊತ್ತೈಸಿ, ಹಾರಿತಾ 'ಲಾಯ್ಟಿ'ನೆಡೆ
ಆ ಜಿಟ್ಟೆ
ಬಲುಗಟ್ಟಿ!
ಭಯವರಿಯುದಲೆ ನಾಟ್ಯಹೂಡಿತಾ ಜಿಟ್ಟೆ.

ಅಬ್ಬ! ಏನದರ ಹಾರಾಟ, ಏರಾಟ
ಬೆಳಕ ನುಂಗುವೆನೆಂಬ ಪೀಕಲಾಟ!
ಫಟ್, ಫಟ್, ಫಟ್, ಫಟ್!
ನೆಲಕಪ್ಪಿ ಎಷ್ಟೊಸಲ ಪಕ್ಕಗಳ ಬಡಿಬಡಿದು
ನೊಂದುಕೊಳುತಿರೆ ಬರಿದೆ, ಎನ್ನನೋಟ
ಹರಿಯಿತೀ ಎಡೆ—ಸನಿಹದಲ್ಲಿ!
ಅಯ್ಯೋ! ಜಿಟ್ಟೆಯ ನೋಡುತಲ್ಲಿ
ಹೊಂಚಿ ಕುಳಿತಿದೆ ಸಾವು-ಅದುವೆ-ಹಲ್ಲಿ!
ಮಿಂಚಿನಂತಹ ಘಟನೆ, ಮನದಿ ಡವಡವಿಸಿ

'ಹುಶ್' ಎಂದೆ 'ಹಿಶ್' ಎಂದೆ
ಹುಟ್ಟಾ ಹೆದರುವ ಜಾತಿ
ಎಂತಂತೆ ನಿಂತಿತ್ತು ಮೈಮರೆದು
ಜಿಟ್ಟೆಯೆಡೆ—ದಿಟ್ಟೆ ಚಿಲ್ಲಿ!

ಜಿದ್ದಿನಾಟಕೆ ಸೋತ—ಪಾಪ ಹುಳು ಮೊದಲಂತೆ
ಹಾರುತಿದೆ ಏರುತಿದೆ. ಸುತ್ತಾಡಿಬರುತಲಿದೆ.
ಅದಕೇನೊ ಸರಸಾಟ. ಒಣಬಯಕೆಗಳ ಕೂಟ!
ಬೆಳಕು ನಕ್ಕಿತು 'ಮರುಳೆ, ನೋಡಿದೆಯ ಆ ಅಲ್ಲಿ?
ಬೇಟದಾ, ಬಲೆ ಚೆಲ್ಲಿ, ಕಾಯ್ದಿಹುದು ಹಿರಿಹಲ್ಲಿ!'
'ಹಿ—ಹಿ!' ಅದಕದರ ಪರವೆಯೇಂ?
ಮತ್ತೆ ಚಿಗಿದಿತು ಮೇಲೆ.
ಸುತ್ತಿಬಂದಿತು ನೆಲಕೆ—

ಜೊಂಗನೇ ನೆಗೆದಿತ್ತು—ಹಲ್ಲಿ ಜೇಡನ ಹಿಡಿದು
'ಜಿಟ್ಟೆ' ಒದ್ದಾಡಿದರು—ಗೋಡೆಗಲ್ಲಿಗೆ ಬಡಿದು
ಕೊನೆಗೊಮ್ಮೆ ನುಂಗಿ ಮರಳಿತ್ತು—
ಹಸಿವೆ ಹಿಂಗಿದ ಹರುಷಭಾರದಲ್ಲಿ
ಆ—ಹೆಲ್ಲಿ....
ನೋಡಿದೆನು ನೀರ್ತಂದು ಕಣ್ಣಿನಲ್ಲಿ.

ದರ್ಶನ

ಶ್ರೀ. ವೆಂಕಟರಾಯ ಪ್ರಭು, ಬೀ. ಎಂ. ಎ. ಮುಂಬಯಿ

ಕಂಗಳಲಿ ಜೀವವನು ತುಂಬಿ ಕುಡಿನು ನಿನ್ನ
ಸ್ನಿಗ್ಧ ಸುಂದರ ಮೂರ್ತಿ ಒಲವಿನಲೆಗಳ ಮೊತ್ತ;
ನೀರವತೆ ಮನಸಿನಲಿ ತುಂಬಿರಲು ನುಡಿ ಎತ್ತ?
ಇನ್ನಿಹುದು ಉನ್ಮಾದ ನರ್ತನೆಯ ಭಯ ಬನ್ನಿ!
ದೃಷ್ಟಿಗಳು ಎನಿತೊಂದು ಬಾರಿ ಒಂದೆನಿಸಿಲ್ಲ,
ಹೃದಯದಳಲನು ವಿಾರಿ ಹರಿದಿಲ್ಲ ಕಣ್ಣೀರು?
ಒಲವುಸಿ ಬೆಳೆದಿಹುದು ಹೀರಿ ಈ ತಣ್ಣೀರು.

ಭಾವನೆಯ ಬೆಚ್ಚಗಿನ ತಕ್ಕೈಯಲಿ ನೊಳೆಯುತಲಿ.
ನುಡಿದ ಗಾಯದ ನೋವು ಮರೆಯುವುದು ಮಾಸುವುದು,
ನುಡಿಯದಿಹ ಸಂಕಟವು ಉಳಿಯುವುದು ಬಳೆಯುವುದು,
ಗೆಳೆಯರಲಿ ಕೆಲಪೊಮ್ಮೆ ಅಳುವಿಡಲು ಹಂಬಲಿಸಿ,
ನುಡಿನಾಡ ಪರಿಕಿಸಿದೆ ಒಂದಿಲ್ಲ, ಎಲ್ಲ ಹುಸಿ!
ನುಡಿಮೊಮ್ಮೆ ಎನ್ನೊಲವ ಸಟೆಗೊಳಿಸೆ ಮುಂದೊಂದು,
ಭಾವಗಳ ಬಾಸೆಯಿರೆ ಮಾನವತೆ ಬಲಹೊಂದು!

ಸಂಸ್ಕೃತಿ ಸಮರ

(ಒಂದು ಸಣ್ಣ ಕಥೆ)

ಶ್ರೀ. ಚಿದಂಬರ ಕಾಶೀನಾಥ ಜೋಶಿ, ಅಧ್ಯಾಪಕರು
ಬಿ. ಕೆ. ಮಾಡೆಲ್ ಹಾಯಸ್ಕೂಲ್, ಬೆಳಗಾಂವಿ

●

ಪ್ರೀತಿ-ಪ್ರೇಮಗಳು ಒಂದು ಲೌಕಿಕ ವ್ಯವಹಾರದ ವಸ್ತುಗಳಲ್ಲ. ವ್ಯಕ್ತಿ-ವ್ಯಕ್ತಿಗಳ ಆಂತರಿಕ ಸಂಸ್ಕೃತಿಯನ್ನು ಅವಲಂಬಿಸಿರುತ್ತವೆ. ಸೂಳೆಗಾಗಿ ಮಾಡಿದ ಸಾಲದ ಕಾಟಕ್ಕೆ ಸಿಕ್ಕಿ ಪತಿಯು ಗೊಳಾಡುವಾಗ, ತವರಮನೆಯಿಂದ ತಂದ ಕವಿ-ಯೋಲೆಯನ್ನು ಹೆಂಡತಿಯು ಕೊಟ್ಟು ಗಂಡ-ನನ್ನು ಗೋಳಿನಿಂದ ಉಳಿಸಿಕೊಳ್ಳುವುದು ಭಾರತೀಯ ಸ್ತ್ರೀಯರ ಸಂಸ್ಕೃತಿ.

●

ಅಂದು ಮುಂಬಯಿಯ ಬಂದರದ ಧಕ್ಕೆಯ ಮೇಲೆ ತುಂಬ ಜನಸಮ್ಮರ್ದ! ಅಪೂರ್ವ ಉತ್ಸಾಹ! ದೊಡ್ಡ ಸಮಾರಂಭ! ಒಬ್ಬ ಯುವಕನು ಉಚ್ಚ ಶಿಕ್ಷಣ ಹೊಂದಲು ವಿಲಾಯತಿಗೆ ಹೊರಟಿದ್ದನು. ಅತನ ಗುರುಗಳೂ, ಸಹಾಧ್ಯಾಯಿಗಳೂ ಬೀಳ್ಕೊಡುವುದಕ್ಕಾಗಿ ಬಂದಿದ್ದರು. ಯುವಕನಿಗೆ ಹೂಮಾಲೆಯನ್ನರ್ಪಿಸಿ, ಶುಭಾಶಯವನ್ನು ಕೋರಿ, ಕರತಾಡನದಿಂದ ಎಲ್ಲರೂ ತಮಗಾದ ಆನಂದವನ್ನು ಬೀರಿದರು. ಆ ಜನಜಂಗುಳಿಯಲ್ಲಿ ಯೌವ್ವನಪಥದೊಳಗೆ ಅದೇ ಕಾಲಿಕ್ಕಿದ ಸುಂದರಿಯಾದ ಒರ್ವ ಮಹಿಳೆಯು ಯುವಕನೊಂದಿಗೆ ಪ್ರಮುಖ ಸ್ಥಾನದಲ್ಲಿ ಶೋಭಿಸುತ್ತಿದ್ದಳು. ಅವಳ ಅವಸ್ಥೆಯು ಮಾತ್ರ ಎಲ್ಲರಿಂದ ಭಿನ್ನವಾಗಿತ್ತು; ಬಹು ಅನುಕಂಪನೀಯವಾಗಿತ್ತು. ಎಲ್ಲರೂ ಸಂತೋಷಸಾಗರದಲ್ಲಿ ಆಲೆಯುತ್ತಿದ್ದರೆ, ಅವಳು ಸುಖ-ದುಃಖ, ಹರ್ಷ-ಕೋಪಗಳೆಂಬ ತೆರೆಗಳ ತಾಕಲಾಟದಲ್ಲಿ ಸಿಲುಕಿ ಜರ್ಜರಿತಳಾಗಿದ್ದಳು. ಒಂದು ಕ್ಷಣದಲ್ಲಿ ಆನಂದದ ಸುಹಾಸ್ಯದಿಂದ ಪ್ರಫುಲ್ಲಿತ ವದನಳಾಗಿ ತೋರಿದರೆ, ಮರುಕ್ಷಣದಲ್ಲಿ ಬಿಗಿದ ಕೊರಲಿನಿಂದ ನಿಟ್ಟುಸಿರಿಡುತ್ತ, ದುಃಖಾಶ್ರುವಿನೊಂದಿಗೆ ಮ್ಲಾನವದನಳಾಗಿ ತೋರುವಳು. ಅಂತಹ ಕಾತರತೆಯ ಅವಸ್ಥೆಯಲ್ಲಿಯೇ ಅವಳು ಯುವಕನನ್ನು ಬೀಳ್ಕೊಟ್ಟಳು. ಅಲ್ಲದೆ ತನ್ನ ಮನದನ್ನನು, ಕೈಕೊಂಡ ಕಾರ್ಯದಲ್ಲಿ ಯಶಸ್ವಿಯಾಗಿ ಬೇಗನೆ ಮರಳಲೆಂದು ಪರಮೇಶ್ವರನಲ್ಲಿ ಮನೋಮಯವಾಗಿ ಮೊರೆಯಿಟ್ಟಳು. ಯುವಕನಾದರೂ ಹರ್ಷಾಮರ್ಷ ಮನಃಸ್ಥಿತಿಯಲ್ಲಿಯೇ ಎಲ್ಲರ ಒಪ್ಪಿಗೆ ಪಡೆದು ಹಡಗನ್ನೇರಿದನು. 'ಸುಖಾಸ್ತೇ ಪಂಥಾನಃ ಸಂತು' ಎಂದೆಲ್ಲರೂ ಆಶಿಸಿದರು. 'ಜಯ ಹಿಂದ' ಘೋಷದಿಂದ ಧಕ್ಕೆಯು ಮಾರ್ದನಿಗೊಂಡಿತು. ಕರವಸ್ತ್ರಗಳನ್ನು ಬೀಸಿ, ಎಲ್ಲರೂ ಮತ್ತೊಮ್ಮೆ ತಮ್ಮ ಸಂತಸವನ್ನು ತೋರಿ ಮರಳಿದರು. ಯುವಕನನ್ನು ಎತ್ತಿಕೊಂಡು, ಜೀವನವನ್ನು ಕದಡುತ್ತ ಭರದಿಂದ ಸಾಗಿದ ಕಡಲ ರಾಣಿಯನ್ನು ಮರಳಿ ಮರಳಿ ಕಟಾಕ್ಷದಿಂದ ಕಾಣುತ್ತ, ಎಲ್ಲರೊಡನೆ ಆ ಮಹಿಳೆಯಾದರೂ ಹಿಂದಿರುಗಿದಳು.

× × × ×

ವ್ಹಿಕ್ಟೋರಿಯಾ ಸ್ಟ್ರೀಟ್, ಲಂಡನ್
ದಿನಾಂಕ ೨೦-೬-೧೯೪೫

ನನ್ನ ಪ್ರಿಯ, ಇಂದಿರಾರಮಣ,

ನನ್ನ ಊಹೆಯಂತೆ ತಾವು ಮುಂಬಯಿ ಯುನಿವರ್ಸಿಟಿಯ ಎಮ್. ಬಿ. ಬಿ. ಎಸ್. ಪರೀಕ್ಷೆಯಲ್ಲಿ ಮೊದಲ ತರಗತಿಯೊಳಗೆ ಮೊದಲಿಗರಾಗಿ ತೇರ್ಗಡೆಯಾದ ಶುಭವಾರ್ತೆಯು ತಿಳಿಯಿತು. ಆದರಿಂದ ನನಗಾದ ಸಂತೋಷವನ್ನು ಬರೆದು ವ್ಯಕ್ತಪಡಿಸಲು, ನಾನು ಅಸಮರ್ಥನಿದ್ದೇನೆ. ಇನ್ನು ಮುಂದಿನ ಶಿಕ್ಷಣಕ್ಕಾಗಿ, ಕೂಡಲೇ ಹೊರಟು ಬರುವ ಏರ್ಪಾಡು ಮಾಡುವಿರೆಂದು ಬಲವಾಗಿ ಭಾವಿಸುವೆ; ಅಲ್ಲದೆ ಶಕ್ಯವಾದ ಸಹಾಯಸಂಪತ್ತನ್ನು ಸಂತೋಷದಿಂದ ನೀಡಲು ಆಶ್ವಾಸಿಸುವೆ. ನೀವು ತೇರ್ಗಡೆಯಾದ ವೃತ್ತದಿಂದ ಮಿಸ್. ವಿಂಡರ್ ಮಿಯರಳಿಗೂ ನನ್ನಂತೆಯೇ ಅಪರಿಮಿತ ಆನಂದವೆನಿಸಿತು. ನಿಮ್ಮ ಶುಭಾಗಮನವನ್ನು ನಾವಿರ್ವರೂ ನಿರೀಕ್ಷಿಸುತ್ತಲಿದ್ದೇನೆ.

ತಮ್ಮ ಹಿತೈಷಿ—ಕ್ಲೈಟನ್

× × × ×

ಇಂದಿರಾರಮಣನು ಸುರೂಪಿಯೂ ಸಶಕ್ತನೂ ಆದ ಗೌಡ ಕಾಯದ ಕನ್ನಡ ಯುವಕ; ಒಳ್ಳೇ ಮೇಧಾವಿ. ಆತನು ಗ್ಲಾಸ್ಗೋ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿರುವಾಗ, ಮಿಸ್ ವಿಂಡರ್‌ಮಿಯರ್ ಎಂಬೊರ್ವ ಆಂಗ್ಲಯುವತಿಯು ಅದೇ ಕಾಲೇಜಿನಲ್ಲಿ ಓದುತ್ತಿದ್ದಳು. ಅವಳು ಅದೇ ಕಾಲೇಜಿನ ಡೀನರಾದ ಮಿ. ಕ್ಲೈಟನ್ನರ ಪ್ರಿಯಕುವರಿ. ಬುದ್ಧಿಮತ್ತೆ—ಚೆಲುವಿಕೆಗಳಿಗೆ ಮನಸೋತು, ಡೀನರು ಇಂದಿರಾರಮಣನನ್ನು ಪ್ರೀತಿಸುವಂತೆ, ಅವಳೂ ಪ್ರೀತಿಸುತ್ತಿದ್ದಳು. ಅವರಿಬ್ಬರೂ ಅವಳಿಗೆ ಮರುಳುಗೊಂಡಿದ್ದ. ಮುಂದೆ ಕೆಲದಿನಗಳಲ್ಲಿಯೇ ಡೀನರು, ವಿಶ್ರಾಂತಿಯನ್ನು ಹೊಂದಿ ಮಗಳೊಂದಿಗೆ ಮಾತೃಭೂಮಿಗೆ ತೆರಳಿದರು. ಅದೇ ಸಲ ಇಂದಿರಾರಮಣನು ಪರೀಕ್ಷೆಯಲ್ಲಿ ಉಚ್ಚಾಂಕವನ್ನು ಪಡೆದು ಪಾಸಾದನು.

ನಿವೃತ್ತ ಡೀನರು ವಿಲಾಯತಿಗೆ ಹೋದಂದಿನಿಂದ, ಆ ಪಿತಾ-ಪುತ್ರಿಯರೊಡನೆ ಅತನ ಸತ್ಪ್ರವ್ಯವಹಾರವು ನಡೆದೇ ಇತ್ತು. ಆದರಂತೆ ತಾನು ಪರೀಕ್ಷೆಯಲ್ಲಿ ತೇರ್ಗಡೆಯಾದ ಆನಂದದ ವೃತ್ತವನ್ನು ತಿಳಿಸಿದನು. ಇಷ್ಟರಿಂದಲೇ ಅತನ ವಿದ್ಯಾಭ್ಯಾಸದ ಹಸಿವು ತಣಿದಿರಲಿಲ್ಲ

ಶ್ರೀ. ಗೌರಮ್ಮ ಸ್ಮಾರಕ ಸಮಿತಿ, ಮಡಿಕೇರಿ (ಕೊಡಗು) ಯ ಕಥಾ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ ಪಡೆದ ಕತೆಯು. —ಲೇ.

ವೈದ್ಯಕಕ್ಷೇತ್ರದ ಚರಮಸೀಮೆಯನ್ನು ಕಂಡೇ ತಾನು ಕೃತಾರ್ಥನಾಗಬೇಕೆಂಬುದು ಅತನ ಮಹತ್ತ್ವಾಕಾಂಕ್ಷೆ! ಇಂತಹ ಸಂದರ್ಭದಲ್ಲಿ ಮಿ. ಕ್ಲೇಟನ್ನರ ಅಶ್ವಾಸನಪರ ಸಂದೇಶದಿಂದ "ರೋಗಿ ಬಯಸಿದ್ದೂ ಹಾಲೋಗರ, ವೈದ್ಯ ಹೇಳಿದ್ದೂ ಹಾಲೋಗರ" ಎಂಬಂತಾಗಿ, ಅತನ ಆನಂದಕ್ಕೆ ಆಕಾಶವು ಕಿರಿಯದೆನಿಸಿತು.

ಇಂದಿರಾರಮಣನು ವಿಲಾಯತಿಯಲ್ಲಿ ಎಮ್. ಡಿ. ಪರೀಕ್ಷೆಯ ವಿಷಯಗಳನ್ನು ಅಭ್ಯಸಿಸುತ್ತ, ಎಲ್ಲರ ಬಯಕೆಯಂತೆ ಆದರಲ್ಲಿಯೂ ಅಪೂರ್ವಯಶಸ್ಸನ್ನು ಪಡೆದನು. ಅವನು ಮಿ. ಕ್ಲೇಟನ್ನರಲ್ಲಿಯೇ ಉಳಿದಿದ್ದನೆಂದು ಬೇರೆ ಹೇಳಬೇಕಾಗಿಲ್ಲ. ಸಹಶಿಕ್ಷಣ, ಸಹವಾಸಗಳ ಫಲವಾಗಿ, ಅತನ ಮೇಲಿನ ಮಿಸ್ ವಿಂಡರ್‌ಮಿಯರಳ ಪ್ರೇಮವು ವೃದ್ಧಿಗೊಳ್ಳುತ್ತ, ಪ್ರಣಯದಲ್ಲಿ ರೂಪಾಂತರಗೊಂಡು, ಕೊನೆಗೆ ಪರೀಕ್ಷೆ ತೇರ್ಗಡೆಯಾದೊಡನೆ, ವಿವಾಹದಲ್ಲಿ ಪರಿಣಮಿಸಿತು. ಪುಣ್ಯಪ್ರಾಪ್ತಿಗಾಗಿ ಕಾಶೀಯಾತ್ರೆಯನ್ನು ಕೈಕೊಂಡ ಸನಾತನಿಯು, ಪವಿತ್ರವಾದ ಭಾಗೀರಥೀ ಕುಂಭವನ್ನು ತರುವಂತೆ, ವಿದ್ಯಾರ್ಜನೆಗಾಗಿ ವಿಲಾಯತಿಯಾತ್ರೆಯನ್ನು ಕೈಕೊಂಡ ಭಾರತಯುವಕನು ಆಂಗ್ಲರಮಣಿಯನ್ನು ತರುವುದು ಇತ್ತಿತ್ತಲಾಗಿ ಗೌರವದ ಸಂಗತಿಯಾಗಿದೆ. ಇದಕ್ಕೆ ಇಂದಿರಾರಮಣನು ಅಪವಾದವಾಗಿರಲಿಲ್ಲ. ಸುಂದರಯುವತಿಯ ಬಲವಾದ ಪ್ರೇಮಪಾಶ–ಮಾನವತೆಯ ಕೃತಜ್ಞತೆಯೆಂಬ ಸಂಕೋಲೆಗಳಿಂದ ಪರವಶನಾದ ಅತನು, ಗತಿಗಾಣದೆ ಪಾಣಿಗ್ರಹಣಕ್ಕೆ ಸಮ್ಮತಿಸಿದನು. ವಿವಾಹವು ಆಂಗ್ಲಪದ್ಧತಿಯಂತೆ ರಜಿಸ್ಟರ್ ಮಾಡಲ್ಪಟ್ಟಿತು. ವಧೂವರರ ಭಾವಚಿತ್ರವು ತೆಗೆಯಲ್ಪಟ್ಟು, ಅದರ ಮೇಲೆ ವಿವಾಹದ ದಿನಾಂಕವನ್ನು ಬರೆದಿಡಲಾಯಿತು. ಮುಂದೆ ಅತನು 'ಎಫ್. ಆರ್. ಸಿ. ಎಸ್.' ಎಂಬ ವೈದ್ಯಕದ ಅತ್ಯುಚ್ಚ ಸನ್ಮಾನದ ಪದವಿಯನ್ನು ಹೊಂದಿ, ಮಾತೃಭೂಮಿಯ ಸೇವೆಗಾಗಿ ಮರಳಿ ಮುಂಬಯಿ ಪಟ್ಟಣಕ್ಕೆ ಬಂದಿಳಿದನು. ಕರ್ನಾಟಕ ಮಾತೆಯು ತನ್ನ ಸುಪುತ್ರನನ್ನು ಹಲವು ಬಗೆಯಾಗಿ ಹರಸಿದಳು. ಅಲ್ಲಲ್ಲಿ ಅಭಿನಂದನೆಯ ಸನ್ಮಾರಂಭಗಳು ನೆರವೇರಿದುವು. ಮುಂಬಯಿ ಪಟ್ಟಣವನ್ನೇ ತನ್ನ ಕರ್ಮಕ್ಷೇತ್ರವನ್ನಾಗಿ ಗೊತ್ತುಪಡಿಸಿ, ಅತನು ತನ್ನ ವೈದ್ಯಕ ಪ್ರಕ್ರಿಯೆಯನ್ನು ಆರಂಭಿಸಿದನು; ಅಲ್ಲದೆ ಪರ್ಷಾರು. ಟಂಗಳಲ್ಲೀ ಶಸ್ತ್ರಚಿಕಿತ್ಸೆಯ ನೈಪುಣ್ಯಕ್ಕಾಗಿ ಹೆಸರು ಪಡೆದನು. ಅತನ ವ್ಯವಸಾಯವು ಕಲ್ಪನೆ ಮೀರಿ ಬೆಳೆಯತೊಡಗಿತು. ಭಾರತದ ಬೇರೆ ಬೇರೆ ಕಡೆಗಳಿಂದ ಶಸ್ತ್ರಚಿಕಿತ್ಸೆಗಾಗಿ ಕರೆ ಬರಹತ್ತಿದುವು. ಹೀಗಿರುವಾಗಲೇ ಅವನು ತನ್ನ ಆಂಗ್ಲಪತ್ನಿಯನ್ನು ಕರೆಯಿಸಿಕೊಂಡನು ಮತ್ತು ವಿರಲ ವಸ್ತಿಯುಳ್ಳ, ಸಿರಿವಂತರು ವಾಸಿಸುವ 'ಮಲಬಾರ್ ಹಿಲ್' ಎಂಬ ಭಾಗದಲ್ಲಿ ಒಂದು ಬಂಗಲೆಯನ್ನು ಕೊಂಡು, ಅಲ್ಲಿ ಅವಳೊಡನೆ ವಾಸಿಸತೊಡಗಿದನು.

× × × ×

ಇಂದಿರಾರಮಣನು ಮಹತ್ತ್ವದ ಶಸ್ತ್ರ ಚಿಕಿತ್ಸೆಗೆಂದೋ, ಡಾಕ್ಟರರ ಸಭೆ ಸಮ್ಮೇಲನಗಳಿಗೆಂದೋ, ಆಗಾಗ ಬೇರೆ ಬೇರೆ ಭಾಗದ ಪ್ರವಾಸವನ್ನು ಕೈಕೊಳ್ಳುತ್ತಿದ್ದನು. ತಾನು ಎಲ್ಲೆಲ್ಲಿ ಹೋಗುವೆನೆಂದು ಹೇಳುವನೋ, ಅಲ್ಲಲ್ಲಿ ದೊರಕುವ ವಿಶಿಷ್ಟ ವಸ್ತುಗಳನ್ನು ತನ್ನ ಪ್ರಿಯಪತ್ನಿಗೆ ಕಾಣಿಕೆಯಾಗಿ ತಂದುಕೊಡುವನು. ಒಮ್ಮೆ ಧಾರವಾಡದ ಒಬ್ಬ ಡಾಕ್ಟರರಿಂದ ಮಹತ್ತ್ವದ ಶಸ್ತ್ರಚಿಕಿತ್ಸೆಯು ಯಶಸ್ವಿತೆಗಾಗಿ ಬಂದ ಒಂದು ಅಭಿನಂದನೆಯ ಪತ್ರವು ಅಕಸ್ಮಾತ್ತಾಗಿ ಮಿ. ವಿಂಡರ್‌ಮಿಯರಳ ಕಣ್ಣಿಗೆ ಬಿತ್ತು. ಅದರಲ್ಲಿ ಶ್ರೀಮತಿ ಇಂದಿರಾದೇವಿಯ ಶುಭಾಶಯವನ್ನೂ ಕೋರಲಾಗಿತ್ತು. ತಾನರಿಯದ ಈ ಇಂದಿರಾದೇವಿಯು ಅದಾವಳೆಂದು ಅವಳು ಸಂದೇಹಕ್ಕೊಳಗಾದಳು. ಅದನ್ನು ತಿಳಿದು ಇಂದಿರಾರಮಣನು "ತಾನು ಇಂದಿರಾರಮಣನಾದ್ದರಿಂದ ತನ್ನ ಪತ್ನಿಯು ಸಹಜವೇ ಇಂದಿರೆಯಾದಂತಾಯಿತು. ಆದ್ದರಿಂದ ಆ ಹೆಸರು ತಮ್ಮನ್ನು ಕುರಿತೇ ಉಪಯೋಗಿಸಲಾಗಿದೆ" ಎಂದು ಹೇಳಿದನು. ಅದರಿಂದ ಸ್ವಾಭಾವಿಕವಾಗಿಯೇ ಅವಳು ಸಮಾಧಾನಗೊಂಡಳು.

ಮತ್ತೆ ಕೆಲವು ದಿನ ಉರುಳಿದುವು. ಇಂದಿರಾರಮಣನು ಶಸ್ತ್ರಚಿಕಿತ್ಸೆಗಾಗಿ ಮದ್ರಾಸಿಗೆ ತೆರಳಿದ್ದ. ಆಗ ಆಂಗ್ಲೇಯರಿಗೆ ಪವಿತ್ರವಾದ ಒಂದು ರವಿವಾರ ಮುಂಜಾವಿನಲ್ಲಿ, ವಿಂಡರ್‌ಮಿಯರಳು ಪ್ರಾರ್ಥನೆ ಮುಗಿಸಿ ಚರ್ಚಿನಿಂದ ಹಿಂದಿರುಗಿದ್ದಳು. ಅದೇ ಸಮಯದಲ್ಲಿ ಬಹು ನೆಪಾಗಿ ಸಾಗಿದ ಮುಗಿಲುಬಣ್ಣದ ಒಂದು ಮೋಟಾರ್ ಕಾರು ಅವಳಿಗೆ ಇದಿರಾಯಿತು. ನೋಡು ನೋಡುವಷ್ಟರಲ್ಲಿಯೇ ಅದು ಮುಂದೆ ಸಾಗಿ ಮಾಯವಾಯಿತು. ಮೋಟಾರು ಸಾಗಿರುವ ವ್ಯಕ್ತಿಯು ತನ್ನ ಪತಿಯಾದ ಡಾಕ್ಟರನೆಂದೇ ಅವಳಿಗೆ ಭಾಸವಾಯಿತು ಆದನೆ ಮನೆಗೆ ತೆರಳಿದನಂತರ, ಅದು ಸತ್ಯವಾಗಿರದೆ, ದೃಗ್ಭ್ರಮೆಯಿಂದ ಮೂಲಕ ಉಂಟಾದ ಆಭಾಸವೆಂದು ನಿರ್ಣಯಿಸಿ ಅವಳು ಸುಮ್ಮನಾದಳು.

× × × ×

ಅನಂತರ ಮತ್ತೆ ಕೆಲವು ದಿನಗಳ ಮೇಲೆ ಸಾಗಿದ ಒಂದು ಸನ್ನಿವೇಶ! ಮಧ್ಯಾಹ್ನದ ನಾಲ್ಕು ಗಂಟೆಯ ಸಮಯ! ಧರ್ಮಪ್ರಚಾರಕಳಾದ ಸಿಸ್ಟರ್ ನ್ಯೂಲಂಡ್ ಎಂಬ ಆಂಗ್ಲವಿದುಷಿಯು, ಸಹಾಯಧನವನ್ನು ಪಡೆಯುವುದಕ್ಕಾಗಿ ಮಿ. ವಿಂಡರ್‌ಮಿಯರಳಲ್ಲಿಗೆ ಬಂದಿದ್ದಳು. ಅವರಲ್ಲಿ ಧರ್ಮಪ್ರಸಾರದ ಬಗೆಗೆ ಸಂಭಾಷಣೆ ಸಾಗಿರುವಾಗ, ಪರಿಚಾರಿಕೆಯು ಚಹಾಪಾನದ ಸಾಮಗ್ರಿಗಳನ್ನು ತಂದು ಮುಂದಿರಿಸಿದಳು. ಪಾನಪಾತ್ರೆಯನ್ನು ಕೈಯಲ್ಲಿ ತಕ್ಕೊಂಡಾಗ, ಸಿಸ್ಟರ್‌ನ್ಯೂಲಂಡಳು ಒಮ್ಮೆಲೇ ನೆನಪುಮಾಡಿಕೊಂಡವಳಂತೆ ಮಾಡಿ–"ಪ್ರಿಯ ವಿಂಡರ್! ತಮ್ಮ ಅತಿಥಿಗಳಾದ ಆರ್ಯ ಮಹಿಳಾಮಣಿಯನ್ನೂ ಚಹಾಪಾನಕ್ಕೆ ಕರೆಯುವಿರಾ? ನಾನು ಅವರ ಪರಿಚಯ ಮಾಡಿಕೊಳ್ಳಲು ಬಯಸುವೆ. ಅವರು ತಮ್ಮ ನಾದಿನಿಯರಲ್ಲವೆ?

ವಿಂಡರ್ :— (ಸೋಜಿಗಗೊಂಡು) ಯಾರು? ನಮ್ಮಲ್ಲಿ ಅದಾವ ಆರ್ಯ ಮಹಿಳೆಯೂ ಆಗಮಿಸಿಲ್ಲ. ಅಲ್ಲದೆ ನನಗೆ ಯಾವ ನಾದಿನಿಯೂ ಇಲ್ಲ.

ಸಿಸ್ಟರ್ :— ಇದೇನು ಹೇಳುವಿರಿ? ನಿಜವಾಗಿಯೇ ಯಾರೂ ಬಂದಿಲ್ಲವೇ? ನಾನು ನಿನ್ನೆ ಮಾರ್ಕೆಟಿನತ್ತ ಹೋಗುತ್ತಿರುವಾಗ, ಗಿರಗಾಂವ ಬ್ಯಾಕ್‌ರೋಡಿನ ಮೇಲೆ, ಪ್ರಾರ್ಥನಾಸನಮಾಜದ ಪಕ್ಕದಲ್ಲಿ, ಮೋಟಾರಿನೊಳಗೆ ಕುಳಿತು ಹೋಗುವ ಡಾಕ್ಟರ್‌ಸಾಹೇಬರನ್ನೂ ಅವರೊಡನೆ ಒರ್ವ ಕರ್ನಾಟಕ ಮಹಿಳೆಯನ್ನೂ ಕಂಡೆನು ಅವರು ನಗುತ್ತ ಕೆಲೆಯುತ್ತ ಸಾಗಿದ್ದರು. ಅದರಿಂದ ಅವಳು ಡಾಕ್ಟರರ ಭಗಿನಿಯಾಗಿರಬೇಕೆಂದೇ ನನ್ನ ಊಹೆ. ಆಗ ಸಂಧ್ಯಾಸಮಯ!

ವಿಂಡರ್ :— ನೀವು ಕಂಡದ್ದು ನಿನ್ನೆಯೇ ಅಲ್ಲವೆ?

ಸಿಸ್ಟರ್ : — ಅಹುದು, ನಿಶ್ಚಿತವಾಗಿಯೂ ನಿನ್ನೆಯೇ!

ವಿಂಡರ್ :— ಪೂಜ್ಯ ಸಿಸ್ಟರ್! ಇದು ಅಶಕ್ಯ! ಏಕೆಂದರೆ ಈಗ ನಾಲ್ಕು ದಿನಗಳ ಮೊದಲೇ ಡಾಕ್ಟರರ ಪರಿಷತ್ತಿನ ಅಧ್ಯಕ್ಷಪದವನ್ನು ನಿರ್ವಹಿಸಲು ಮೈಸೂರಿಗೆ ಹೋಗಿರುವರು. ಈಗ ನಾನು ಅವರ ಸ್ವಾಗತಕ್ಕಾಗಿಯೇ ನಿಲ್ದಾಣಕ್ಕೆ ಹೋಗಿ ಬಂದೆ; ಅವರು ಬಂದಿರಲಿಲ್ಲ. ಅಲ್ಲದೆ ಅವರಿಗೆ ಭಗಿನಿಯೂ ಇಲ್ಲ. ನೀವು ಅದೇ ಹೋಲಿಕೆಯುಳ್ಳ ಮತ್ತಾರನ್ನೋ ಕಂಡಿರಬಹುದು. ಒಬ್ಬರಂತೊಬ್ಬರು ಬಹು ಜನರು.

ಸಿಸ್ಟರ್:— ಗೆಳತಿ! ನನ್ನ ದೃಷ್ಟಿಗೆ ಇನ್ನೂ ಮಾಂದ್ಯವುಂಟಾಗಿಲ್ಲ. ಡಾಕ್ಟರರನ್ನು ಚೆನ್ನಾಗಿ ನಾಲ್ಕಾರು ಸಲ ಕಂಡಿರುವೆ. ಅದೇ ನಿಡುಮೂಗಿನ ಗೌರವರ್ಣದ ಮುಖ! ಅದೇ ಬಂಗಾರ ಬಣ್ಣದ ಕನ್ನಡಕ! ಅವರನ್ನು ನಾನು ಚೆನ್ನಾಗಿ ಗುರುತಿಸಿರುವೆ.

ವಿಂಡರ್:— ಸಂಧ್ಯಾಸಮಯ, ಮತ್ತು ಮೋಟಾರಿನ ವೇಗಗಳ ಮೂಲಕ ದೃಗ್ಭ್ರಮೆಯಾಗುವ ಸಂಭವವುಂಟು. ಒಮ್ಮೆ ನನಗೂ ಇದೇ ಬಗೆಯಾಗಿತ್ತು.

ಸಿಸ್ಟರ್:— ನನಗೆ ಅಂತಹ ಭ್ರಮೆಯಾಗಿರಲಾರದೆಂದು ವಿಶ್ವಾಸಿಸುವೆ.

ವಿಂಡರ್:— ಒಳ್ಳೆಯದು, ಸಿಸ್ಟರ್! ಅವರು ಕುಳಿತ ಮೋಟಾರಿನ ಬಣ್ಣವು ತಮ್ಮ ಜ್ಞಾಪಕದಲ್ಲಿರುವುದೆ?

ಸಿಸ್ಟರ್: — ಇದೆ! ಅದು ಹಸನಾದ ಮುಗಿಲುಬಣ್ಣದ್ದಾಗಿತ್ತು.

ವಿಂಡರ್ :— ತಮ್ಮ ಮಾತೇ ನಿಜವಿದ್ದರೆ, ಅವರು ಇಲ್ಲಿ ಬರಬಹುದಾಗಿತ್ತಲ್ಲ? ಆಗಲಿ, ಅವರು ಬಂದನಂತರ ವಿಚಾರಿಸಿ ತಿಳಿಯೋಣ.

ಚಹಾಪಾನದ ನಂತರ ಸಿಸ್ಟರ್ ತನ್ನ ನಿವಾಸಕ್ಕೆ ತೆರಳಿದಳು. ವಿಂಡರ್‌ಳು ಸಂದೇಹಕ್ಕೊಳಗಾದ್ದರಿಂದ, ಚಹಾಪಾನವು ಅವಳಿಗೆ ಅಷ್ಟೊಂದು ರುಚಿಸಲಿಲ್ಲ. ವಾಡಿಕೆಯಂತೆ ನಾಲ್ಕಾರು ದಿನಗಳ ಮೇಲೆ, ಎಂದರೆ ಇದು ನಡೆದ ಸಂಗತಿಯ ಮರುದಿನವೇ, ಇಂದಿರಾರಮಣನು ಬಂದನು. ಗಂಧದ ಎಣ್ಣೆ, ಟಾಯಲೆಟ್ ಸೋಪು ಮೊದಲಾದ ಮೈಸೂರಿನ ನಿಶಿಷ್ಟವಸ್ತುಗಳನ್ನು ಪ್ರಿಯಪತ್ನಿಗೆ ಅರ್ಪಿಸಿದನು. ಅಲ್ಲದೆ ಕೃಷ್ಣರಾಜಸಾಗರದ ಭಾವಚಿತ್ರವನ್ನು ತೋರಿಸಿ, ಅಲ್ಲಿಯ ಎಂಜನಿಯರಿಂಗಿನ ಕೌಶಲವನ್ನು ಬಣ್ಣಿಸಿದನು. ಅದರಿಂದ ಸಹಜವಾಗಿಯೇ ಅವಳ ಸಂದೇಹವು ದೂರವಾಯಿತು. ಅಲ್ಲದೆ ಸಿಸ್ಟರ್ ನಿಜವಾಗಿಯೇ ಭ್ರಮೆಗೊಂಡಿರುವಳೆಂದು ನಂಬಿದಳು. ಮತ್ತೆ ಕೆಲವು ದಿನಗಳು ಉರುಳಿದುವು. ಕಾಲಚಕ್ರಕ್ಕೆ ಬಿಡುವೆಲ್ಲಿ?

× × × ×

ಅಂದು ಆರ್ಯ ಮಹಿಳಾಮಂದಿರವು ತಳಿರ್ತೋರಣ, ರಾಷ್ಟ್ರ-ಧ್ವಜಗಳಿಂದ ಸಿಂಗರಿಸಲ್ಪಟ್ಟಿತ್ತು. ವಿಧವಿಧದ ವೇಷಭೂಷಣಗಳಿಂದೊಪ್ಪುವ ವಿದುಷಿಯರಿಂದ ಮಂದಿರದ ಮುಂಬದಿಯು ತುಂಬಿತ್ತು. ಭಾರತದ ಎಲ್ಲ ಭಾಗದ ಮಹಿಳೆಯರ ಮಾದರಿಗಳನ್ನೂ ಅಲ್ಲಿ ಕಾಣುವಂತಿತ್ತು. ಆವಾರದ ಬಾಗಿಲಿಗೆ ಒರ್ವ ಗುರ್ಜರ ಮಹಿಳೆಯು, ಅತಿಥಿಗಳ ಸ್ವಾಗತಕ್ಕೆಂದು ಸನ್ನದ್ಧಳಾಗಿ ನಿಂತಿದ್ದಳು. ಅವಳೊಡನೆ ಆಂಗ್ಲಯುವತಿಯೊಬ್ಬಳು ಗರುವಾಯಿಯಲ್ಲಿ ನಿಂತಿರುವುದು ಒಡೆದು ಕಾಣುವಂತಿತ್ತು. ಅವರೆಲ್ಲರೂ ಯಾರ ಆಗಮನವನ್ನೋ ನಿರೀಕ್ಷಿಸುವಲ್ಲಿ ನಿರತರಾಗಿದ್ದರು.

ಗುರ್ಜರ ಮಹಿಳೆಯು ಆಂಗ್ಲರಮಣಿಯನ್ನು ಕುರಿತು ಮಾತಿಗೆ ಮೊದಲುಮಾಡಿದಳು. "ಪ್ರಿಯ ವಿಂಡರ್! ನೀವು ಲಂಡನ್ನಿಗೆ ತಿರಳಿದ ಅಲ್ಪಾವಕಾಶದಲ್ಲಿಯೇ ನನ್ನ ಅಧ್ಯಯನವು ನಿಂತುಹೋಗಿ, ನಾನೊಬ್ಬ ಗುಜರಾಥಿ ಯುವಕರೊಂದಿಗೆ ವಿವಾಹಿತಳಾದೆ. ಅವರು ಒಂದು ಮಿಲ್ಲಿನ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಲಿದ್ದಾರೆ. ಸಂಸಾರವು ಸುಖದಿಂದ ಸಾಗಿದೆ. ಸಂಸಾರದೊಂದಿಗೆ ಸಾಧ್ಯವಾದಷ್ಟು ಸಮಾಜಸೇವೆ ಮಾಡಬೇಕೆಂಬುದು ನನ್ನದೊಂದು ದೊಡ್ಡ ಹಂಬಲ. ಅದಕ್ಕಾಗಿ ಆರ್ಯಮಹಿಳೆಯರ ಉನ್ನತಿಗಾಗಿ ಯತ್ನಿಸುವ ಈ ಮಂಡಲದ ಕಾರ್ಯದರ್ಶಿಪದವನ್ನು ಅಂಗೀಕರಿಸಿರುವೆ.

ವಿಂಡರ್:— ಒಳ್ಳೆಯದು, ಬಹಳೇ ಒಳ್ಳೆಯದು!

ಕಾರ್ಯದರ್ಶಿನಿ:— ಮೊನ್ನೆ ನಾಯುಸೇವನೆಗಾಗಿ ಸಮುದ್ರದ ತಡಿಗೆ ಬಂದಾಗ, ತಮ್ಮನ್ನು ಕಂಡೆ. ತಮ್ಮ ಅಲಭ್ಯಾಗಮನಕ್ಕಾಗಿಯೂ ಗಾಢ ಮೈತ್ರಿಯ ಮೂಲಕವಾಗಿಯೂ ಮತ್ತು ತಮ್ಮಂತಹ ವಿದುಷಿಯರ ಹಿರಿಯತನದಲ್ಲಿ ಮಾನನೀಯರ ಸನ್ಮಾನ ಮಾಡುವುದು ಔಚಿತ್ಯಪೂರ್ಣವೆಂಬುದಾಗಿಯೂ ತಮಗೆ ಆಮಂತ್ರಣವನ್ನಿತ್ತೆ.

ವಿಂಡರ್ :— ಗೆಳತಿ! ತಮ್ಮ ಅಕೃತ್ರಿಮ ಪ್ರೇಮಕ್ಕಾಗಿ ಬಹಳೇ ಆಭಾರಿಯಾಗಿರುವೆ.

ಕಾರ್ಯ:— ಇದರಲ್ಲಿ ಔಪಚಾರಿಕವೇ ಇಲ್ಲ. ಮೊನ್ನೆ ನಾನು ಮಂಡಲದ ಮತ್ತಿತರ ಕಾರ್ಯಗಳಲ್ಲಿ ವ್ಯಗ್ರಳಾದುದರಿಂದ, ತಮ್ಮ ವೃತ್ತಾಂತ ಕೇಳಲು ಆನುವಾಗಲಿಲ್ಲ. ತಾವು ಲಂಡನ್ನಿನ ಎಮ್. ಬಿ. ಬಿ. ಎಸ್. ಪಾಸಾಗಿರಬಹುದಲ್ಲವೆ?

ವಿಂಡರ್ :— ಆಹುದು.

ಕಾರ್ಯ:— ತಾವು ವಿವಾಹಿತರಾಗಿರಬಹುದು. ಈಗ ತಮ್ಮ ಶುಭಾಗಮನವು ಅದಾವ ಕಾರ್ಯಕ್ಕಾಗಿ?

ವಿಂಡರ್ :— ನಾನು ಇನ್ನೂ ಅವಿವಾಹಿತಳಾಗಿಯೇ ಇದ್ದು, ರೆಡ್‌ಕ್ರಾಸ್ ಸೋಸಾಯಿಟಿಯ ಪ್ರಚಾರಕಾರ್ಯವನ್ನು ಕೈಕೊಂಡು ಬಂದಿರುವೆ.

ಕಾರ್ಯ:— ಸೈ, ಸೈ, ಬಹಳೇ ಸಂತೋಷದ ಸಂಗತಿ! ವಿದುಷಿಯರು ತಮ್ಮ ವ್ಯವಸಾಯದೊಂದಿಗೆ ಸಮಾಜಸೇವೆಗಾಗಿ ಶ್ರಮಿಸುವುದು ಅಭಿನಂದನೀಯವಾಗಿದೆ. ತಮ್ಮ ವಾಸ್ತವ್ಯವು ದೀರ್ಘಾವಕಾಶದ್ದಾಗಿ, ಆಗಾಗ ಸಂದರ್ಶನದ ಸಂತಸವು ದೊರಕಬಹುದೆಂದು ನಾನು ಬಲವಾಗಿ ಭಾವಿಸುವೆ.

ವಿಂಡರ್ :— ಓಹೋ! ಸಂತೋಷದ ಸಂಗತಿ. ನಾನೂ ಅದನ್ನೇ ಬಯಸುವೆ.

ಅಷ್ಟರಲ್ಲಿ ಒಂದು ಮುಗಿಲುಬಣ್ಣದ ಮೋಟಾರು ವೇಗವಾಗಿ ಬಂದು ಬಾಗಿಲನ್ನು ತಲುಪಿತು. ಕೂಡಲೇ ವಿನಯವತಿಯಾದ ಒಬ್ಬ ಕರ್ನಾಟಕ ಯುವತಿಯು ಕೆಳಗಿಳಿದಳು. ಸದಸ್ಯರೆಲ್ಲ ಸನ್ಮಾನದಿಂದ ಅವಳನ್ನು ಕರೆದೊಯ್ದು, ಉಚ್ಚಾಸನದಲ್ಲಿ ಕುಳ್ಳಿರಿಸಿದರು. ಪೂರ್ವನಿಯೋಜನೆಯಂತೆ ಮಿ. ವಿಂಡರ್‌ಮಿಯರಳು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದಳು. ಕಾರ್ಯದರ್ಶಿಯು ಅಧ್ಯಕ್ಷರ ಪರಿಚಯ ಮಾಡಿಕೊಟ್ಟ ನಂತರ, ಸನ್ಮಾನಿತ ಮಹಿಳೆಯು ವಿಷಯವನ್ನೆತ್ತಿ "ನಮ್ಮ ಮಂಡಲಕ್ಕೆ ಇಂದಿನ ಹುಟ್ಟುಹಬ್ಬದ ನಿಮಿತ್ತವಾಗಿ, ಒಂದು ಸಾವಿರದ ಕಾಣಿಕೆಯನ್ನು ದಯಪಾಲಿಸಿದ ಈ ಮಹಿಲಾಮಣಿಯು ಶ್ರೀಮತಿ ಇಂದಿರಾದೇವಿಯವರು. ಇವರು ಸೌಂದರ್ಯಶಾಲಿನಿಯಾದಂತೆ ಸದ್ಗುಣಗಳ ಭಾಂಡಾರವೂ ಆಗಿದ್ದಾರೆ. ಇಂತಹ ಸ್ತ್ರೀರತ್ನವು ತೀರ ಅಪೂರ್ವ. ಇವರು ಲಂಡನ್ ವಿಶ್ವವಿದ್ಯಾಲಯದ ಪದವೀಧರರೂ ಕನ್ನಡಿಗರೂ ಆದ ವಿಖ್ಯಾತ ಡಾಕ್ಟರ್ ಇಂದಿರಾರಮಣರ ವಿವಾಹಿತ ಪತ್ನಿಯವರು. ಇವರು ನೀಡಿದ ಸಹಾಯಕ್ಕಾಗಿ ಮಂಡಲದ ಪರವಿಂದ ಇವರನ್ನು ಎಷ್ಟು ಕೊಂಡಾಡಿದರೂ ಕಡಮೆಯೇ ಸರಿ!" ಎಂದು ಹೇಳಿದರು. ಎಲ್ಲರೂ ಕರತಾಡನದಿಂದ ಆ ಮಾತನ್ನು ಒಪ್ಪಿದರು.

ಕಾರ್ಯದರ್ಶಿನಿಯು ಭಾಷಣವನ್ನು ಕೇಳುತ್ತಿರುವಂತೆ ಮಿ.। ವಿಂಡರ್‌ಮಿಯರಳ ಉತ್ಸಾಹವು ಕುಗ್ಗತೊಡಗಿತು; ಗಾಂಭೀರ್ಯವು ಅಡಗಿತು; ಅಲ್ಲದೆ ಅವಳು ಯಾವುದೋ ಗೂಢ ವಿಚಾರಸಾಗರದಲ್ಲಿ ಮುಳುಗಿಹೋದಳು. ಇಂದಿರಾದೇವಿಯ ವಿನೀತಭಾವದ ನಗುಮೊಗವನ್ನು ಕಂಡಾಗಲೆಲ್ಲ, ಅವಳಿಗೆ ಅನನುಭೂತವಾದ ನೋವನ್ನೆಯುಂಟಾಗುತ್ತಿರುವಂತೆ ತೋರಿತು. ಹಿಂದಿನ ಘಟನೆಗಳೆಲ್ಲವೂ ಚಲಚ್ಚಿತ್ರದಂತೆ ಅವಳ ಅಂತಶ್ಚಕ್ಷುವಿನೆದುರು, ಒಂದೊಂದೇ ಭರದಿಂದ ಸಾಗಿಹೋದುವು. ಅದೇ ಮುಗಿಲುಬಣ್ಣದ ಮೋಟಾರು! ಅದೇ ಕರ್ನಾಟಕ ಮಹಿಳೆ!! ಮತ್ತು ಪತ್ರದಲ್ಲಿ ಶುಭಾಶಯ ಕೋರಲಾದ ಅದೇ 'ಇಂದಿರಾದೇವಿ' ಎಂಬ ಹೆಸರು!!

ಕಾರ್ಯದರ್ಶಿನಿಯಂತೆ ಮತ್ತೆ ಒಬ್ಬಿಬ್ಬರು ಸದಸ್ಯರು ಅಭಿನಂದಿಸಿದ ಮೇಲೆ, ಪ್ರತಿಯಾಗಿ ಇಂದಿರಾದೇವಿಯೂ ಅಭಿನಂದಿಸಿದಳು. ತನ್ನ ಕಲಕಿದ ಮನಃಸ್ಥಿತಿಯನ್ನು ಬದಿಗೊತ್ತಿ, ಬಲುಮೆಯ ಮುಗುಳುನಗೆ ಬೀರುತ್ತ ವಿಂಡರ್‌ಮಿಯರಳೂ ವಾಡಿಕೆಯಂತೆ ಅವಳನ್ನು ಅಭಿನಂದಿಸಿದಳು. ಅಲ್ಲದೆ ಇಂತಹ ಆದರ್ಶಸ್ತ್ರಿಯಳಾದ ಮಹಿಳಾಮಣಿಯ ಭಾವಚಿತ್ರವನ್ನು ತನ್ನಲ್ಲಿರಿಸುವುದು ಒಳ್ಳೇಗೌರವದ್ದಾಗಿದೆಯೆಂದೂ ನುಡಿದಳು. ಅಲ್ಲಿಯೇ ಇಂದಿರಾದೇವಿಯಿಂದ ಅವಳ ಭಾವಚಿತ್ರವನ್ನು ಪಡೆದುಕೊಂಡಳು. ಉಪಾಹಾರದನಂತರ ಎಲ್ಲರೂ ತಮ್ಮ ತಮ್ಮ ನಿವಾಸಗಳಿಗೆ ತೆರಳಿದರು.

× × × ×

ಇಳಿಹೊತ್ತು! ಇಂದಿರಾರಮಣನು ತನ್ನ ಕಚೇರಿಯ ಕೋಣೆಯಲ್ಲಿ ವೃತ್ತಪತ್ರಗಳನ್ನು ಅವಲೋಕಿಸುತ್ತ ಸುಖಾಸನದ ಮೇಲೆ ಒರಗಿದ್ದನು. ವಿಂಡರ್‌ಮಿಯರಳು ಸಭೆಯಿಂದ ನಿವಾಸಕ್ಕೆ ಆಗಮಿಸಿದೊಡನೆ, ಆತನ ಕೋಣೆಯನ್ನೇ ಸೇರಿ, ಮನಸ್ಸಿಲ್ಲದೆ ಒಂದು ಆಸನವನ್ನು ಸ್ವೀಕರಿಸಿದಳು.

ಇಂದಿರಾರಮಣ :— ಯಾಕೆ? ಇಂದು ವಾಯುಸೇವನೆಯಿಂದ ಬೇಗನೆ ಹಿಂದಿರುಗೋಣವಾಯಿತಲ್ಲ?

ವಿಂಡರ್‌ಮಿಯರ್ :— ಇಂದು ನಾನು ವಾಯುಸೇವನೆಗಾಗಿ ಹೋಗಿರಲಿಲ್ಲ; ಒಂದು ಬಗೆಯ ವಿಷಸೇವನೆಗಾಗಿ! ಆಂತೆಯೆ ಅವನ್ನು ಓಕರಿಸಲು ಓಡಿಬಂದೆ!

ಇಂದಿರಾ :— ಅದೇಕೆ, ಹೀಗೆ ನುಡಿಯುವುದು? ನೀನು ಯಾವುದೋ ಮಾನಸಿಕನೋವನೆಯಿಂದ ಸಂತಸ್ತರಾಗಿರುವಂತೆ ತೋರುವಿರಲ್ಲ? ಏನಾದರೂ ಅನೌಚಿತ್ಯವು ಸಂಭವಿಸಿತೇ?

ವಿಂಡರ್ :— ಸರಿ. ಹತಾತ್ತಾಗಿಯೆ ಒಂದು ಅನೌಚಿತ್ಯವು ಸಂಭವಿಸಿದ್ದು ಸತ್ಯ! ಮಾನನೀಯರ ಸನ್ಮಾನ ಮಾಡಲು ಹೋದಾಗ— "ಧರ್ಮ ಮಾಡಹೋದಾಗ ಕರ್ಮವು ಬಂತು" ಎಂಬಂತೆ, ಅಮೃತೋಪಮವಾದ ಸಂಸಾರಸುಖವನ್ನಲ್ಲಿ ವಿಷವನ್ನು ಬೆರೆಸುವ ಸನ್ನಿವೇಶವು ಸಂಭವಿಸಿದ್ದು ನಿಜ!

ಇಂದಿರಾ :— ಅದು ಯಾರಿಗೆ ಸಂಬಂಧಪಟ್ಟದ್ದು?

ವಿಂಡರ್ :— ತಮಗೇ! ಅದು ತಮ್ಮನ್ನೇ ಸಂಬಂಧಿಸಿದೆ.

ಇಂದಿರಾ :— ನನ್ನನ್ನೇ?

ವಿಂಡರ್ :— ಅಹುದು!

ಇಂದಿರಾ :— ಅದಾವುದು?

ವಿಂಡರ್ :— ನಿನುಗೂ ಇಂದಿರಾದೇವಿಗೂ ಅದಾವ ಬಗೆಯ ಸಂಬಂಧವುಂಟು— ಎಂಬುದನ್ನು ಮೊದಲು ಹೇಳಿ!

ಇಂದಿರಾ :— ಅವಳು ನನ್ನ ಪ್ರಿಯತಮೆ! ವಿವಾಹಿತಪತ್ನಿ!

ವಿಂಡರ್ :— ಆಯ್ ಸಿ! ಹಾಗಾದರೆ ಅವಳು ಈಗೆಲ್ಲಿ?

ಇಂದಿರಾ :— ಇಲ್ಲಿಯೇ ನನ್ನ ಬಳಿಯಲ್ಲಿ! ನೀವೇ ನನ್ನ ಪ್ರಿಯತಮೆ! ಇಂದಿರಾದೇವಿ!

ವಿಂಡರ್ :— ಇಂತಹ ನೆಟನೆ ನನಗೆ ಬೇಡ. ಆರ್ಯಮಹಿಲಾಮಂಡಲಕ್ಕೆ ಒಂದು ಸಾವಿರದ ಕೊಡುಗೆಯನ್ನು ಕೊಟ್ಟ ಇಂದಿರಾದೇವಿಗೆ ನಿಮ್ಮ ಸಂಬಂಧವೇನು?

ಇಂದಿರಾ :— ಇಲ್ಲ, ಅವಳ ಪರಿಚಯ ಕೂಡ ನನಗಿಲ್ಲ. ಎಂದನೇಲೆ ಸಂಬಂಧದ ಮಾತು ಎಲ್ಲಿಯದು?

ವಿಂಡರ್ :— ಹೀಗೋ? ಈ ಮಾತನ್ನು ನ್ಯಾಯಾಸ್ಥಾನದಲ್ಲಿ ಹೇಳಬಲ್ಲಿರೋ?

ಇಂದಿರಾ :— ಓಹೋ, ಅವಶ್ಯ!

ವಿಂಡರ್ :— ಆಗಲಿ, ಹಾಗಿದ್ದರೆ ನಿಮ್ಮ ಮೇಲೆ ಮೋಸದ ಅಭಿಯೋಗ ಮಾಡಲಾಗುವುದಲ್ಲದೆ, ತ್ಯಾಗಪತ್ರವನ್ನೂ ಬೇಡಲಾಗುವುದು. ಅರಿಕೆಯಿರಲಿ ನಾನು ಈ ಕ್ಷಣದಿಂದಲೂ ಇಲ್ಲಿ ನಿಲ್ಲಲಾರೆ.

ಇಂದಿರಾ :— ಏಕೆ, ಅದೇಕೆ?

ವಿಂಡರ್ :— ಅದೇಕೆ ಎಂಬುದನ್ನು ನಾನು ಹೇಳಬೇಕೆ? ಇನ್ನೂ ನಟನೆಯೇ? ನಟನೆ ಬಹುದಿನ ಬಾಳದು! ಕಳವು ಒಂದಿಲ್ಲೊಂದು ದಿನ ಬಯಲಿಗೆ ಬಂತಕ್ಕದ್ದೇ! ಶ್ರೀ ಇಂದಿರಾದೇವಿಯು ನಿಮ್ಮ ವಿವಾಹಿತ ಪತ್ನಿಯಂತೆ! ಅವಿವಾಹಿತರೆಂದು ನುಡಿದು, ನನ್ನನ್ನು ಪತ್ನಿಯಾಗಿ ಪರಿಗ್ರಹಿಸಿದ್ದೀರಿ. ಮೋಸಗಾರಿಕೆಯ ಅಕ್ಷನ್ಯ ಅಪರಾಧವನ್ನು ಮಾಡಿದ್ದೀರಿ!

ಇಂದಿರಾ :— ಇದು ಸಂದೇಹದ ತಿರುಗಣಿ; ಈ ಮಡುವಿನಲ್ಲಿ ನಿಮ್ಮನ್ನು ಅದಾರು ನೂಕಿದರು? ಇಂದಿರಾದೇವಿಯ ಸಂಬಂಧವು ನನಗೆ ಇಲ್ಲವೇ ಇಲ್ಲ. ಆದರೆ ಅವಳ ಪತಿಯೊಡನೆ ನನ್ನ ಹೆಸರಿನ ಸಂಬಂಧವು ಮಾತ್ರ ಇವ್ವರೂ ಇರಬಹುದು.

ವಿಂಡರ್ :— ಅಂದರೇನು?

ಇಂದಿರಾ :— ಇಂದಿರಾದೇವಿಯ ಪತಿಯಾದರೂ ನನ್ನ ಹೆಸರಿನವರೇ ಇರಬಹುದು.

ವಿಂಡರ್ :— ಸೈ, ಸೈ. ಅದೆಲ್ಲವನ್ನೂ ನಾನು ಜಿನ್ನಾಗಿಯೇ ಅರಿತಿರುವೆ. ಇನ್ನು ಈ ಕಣ್ಣುಮುಚ್ಚಿಕೆಯಾಟ ಸಾಕು. (ಭಾವಚಿತ್ರವನ್ನು ತೋರಿಸಿ) ಈ ಭಾವಚಿತ್ರವು ಏನನ್ನು ಹೇಳುವುದು? ತಿಳಿದೂ ತಿಳಿದೂ ಅಸತ್ಯವನ್ನು ಆಚರಿಸುವಿರೆಂದೇ ಹೇಳುವುದಲ್ಲವೇ? ಆಂಗ್ಲಸಂಸ್ಕೃತಿಯು ಪ್ರೇಮದಂತೆ ವೈರವನ್ನೂ ಮಾಡಬಲ್ಲದು. ಅಡ್ಡವಾಗಿ ಬಂದ ಕೂಸನ್ನು ಅದು ಕೊಯ್ಯಲೂ ಬಲ್ಲದು!

ಇಂದಿರಾ :— ಪ್ರಿಯ ವಿಂಡರ್! ಸತ್ಯವರ್ತನೆ-ಸದ್ಭಾವನೆಗಳೂ ಕೂಡ ಒಮ್ಮೊಮ್ಮೆ ಅನಿಷ್ಟಕ್ಕೆ ಕಾರಣವಾಗುತ್ತವೆ ಸದ್ಭಾವನೆಯಿಂದ ಪ್ರೇಮಪಾಲನೆಗಾಗಿ ಮಾಡಿದ ಅಸತ್ಯಾಚರಣೆಯು ಕ್ಷಮ್ಯವಾದುದಲ್ಲವೇ?

ವಿಂಡರ್ :— ಅಲ್ಲ. ಶುದ್ಧಪ್ರೇಮವು ಸತ್ಯವನ್ನೇ ಅಧರಿಸಿರುವುದು. ಆ ಸತ್ಯವನ್ನು ಅಧರಿಸಿದ್ದು ಪ್ರೇಮವಲ್ಲ; ಅನಿಷ್ಟವಾಸನೆ! ಶುದ್ಧ ಪಶುತ್ವ!

ಇಂದಿರಾ :— ನನ್ನ ಪ್ರೇಮಪಾಲನೆಯ ರೀತಿಯು ತಮಗೆ ಅಪರಾಧವೆಂದು ಎನ್ನಿಸುತ್ತಿದ್ದರೆ, ನನ್ನನ್ನು ಕ್ಷಮಿಸುವಿರಷ್ಟೇ?

ವಿಂಡರ್ :— ಹಾಗಾದರೆ ಅದರ ಸತ್ಯಸ್ವರೂಪವೇನು?

ಇಂದಿರಾ :— ನಾನು ಎಮ್. ಬಿ. ಬಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ, ತಮ್ಮಂತೆಯೆ ವಿವಾಹಕ್ಕಾಗಿ ಯಾಚಿಸಿದ ಈ ಇಂದಿರಾದೇವಿಯನ್ನು ನಾನು ಧರ್ಮಪತ್ನಿಯನ್ನಾಗಿ ಸ್ವೀಕರಿಸಿದ್ದು ನಿಜವು!

ವಿಂಡರ್ :— ಸರಿ. ಈಗ ಅದರ ಪರಿಮಾರ್ಜನೆ ಮಾಡುವಿರಷ್ಟೇ?

ಇಂದಿರಾ :— ಅದು ಹೇಗೆ?

ವಿಂಡರ್ :— ಇಬ್ಬರಲ್ಲಿ ಯಾರೊಬ್ಬರಿಗಾದರೂ ತ್ಯಾಗಪತ್ರ ನನ್ನು ಕೊಡುವುದು! ಅಷ್ಟಲ್ಲದೆ ಗತ್ಯಂತರವಿಲ್ಲ. ಧನಧನ ವಿದ್ಯುತ್ತುಗಳು ಎಂದೂ ಕೂಡಲಾರನೆಂಬುದು ಶಾಸ್ತ್ರೀಯಸಿದ್ಧಾಂತವು.

ಇಂದಿರಾ :— ನಾನು ಯಾರನ್ನೂ ತ್ಯಜಿಸಿ, ಕೃತಘ್ನನಾಗಲು ಬಯಸುವುದಿಲ್ಲ. ನನಗೆ ನೀವಿರ್ವರೂ ಅಷ್ಟೇ—ಪ್ರಾಣಕ್ಕಿಂತ ಹೆಚ್ಚು ಪ್ರಿಯರಾಗಿರುವಿರಿ. ನನ್ನ ಪತ್ನಿಪ್ರೇಮದಲ್ಲಿ ತರ-ತಮಭಾವವಿಲ್ಲ. ಅಂತೆಯೆ ಇಬ್ಬರೊಡನೆಯೂ ವ್ಯವಹರಿಸುವುದನ್ನು ಗೊತ್ತುಪಡಿಸಿರುವೆ. ಒಬ್ಬರ ಜೀವನ ಇನ್ನೊಬ್ಬರಿಗೆ ತಿಳಿಯಂತೆ ದೂರವಾಗಿರಿಸಲು ಪ್ರಯತ್ನಿಸಿರುವೆ ಗ್ರಾಮಸೇವೀ ವಿಭಾಗದಲ್ಲಿ ಇಂದಿರಾದೇವಿಯನ್ನಿರಿಸಿ, ಪ್ರವಾಸದ ನೆವದಿಂದ ಆಗಾಗ ಅಲ್ಲಿಗೆ ತೆರಳುತ್ತಿದ್ದೆ.

ವಿಂಡರ್ :— ಸರಿ, ಸರಿ. ಮಿ. ಇಂದಿರಾರಮಣ! ತಮ್ಮ ಸರಳ ಹೃದಯಕ್ಕಾಗಿ ನಾನು ತಮ್ಮನ್ನು ಅಭಿನಂದಿಸುವೆ. ಆದರೆ ಮಾನವತೆಯ ಮುಸುಕಿನಲ್ಲಿ ನಡೆದ ಅಪರಾಧವನ್ನು ಮಾತ್ರ ನಾನು ಎಂದಿಗೂ ಸಹಿಸಲಾರೆ!

ಇಂದಿರಾ :— ಪ್ರಿಯ ವಿಂಡರ್! ಈ ಅಪರಾಧಕ್ಕಾಗಿ ತಾವು ವಿಧಿಸುವ ಎಂತಹ ದೊಡ್ಡ ಧನದಂಡನೆಯನ್ನಾದರೂ ಆನಂದದಿಂದ ಸಹಿಸಲು ಸಿದ್ಧನಿರುವೆ.

ವಿಂಡರ್ :— ನಾನು ಧನಕ್ಕಾಗಿ ಬುಭುಕ್ಷಿತಳಾಗಿಲ್ಲ, ಶುದ್ಧಪ್ರೇಮ, ಸನ್ಮಾನ, ಸರಳಹೃದಯನೆಗಾಗಿ ಬುಭುಕ್ಷಿತಳಾಗಿರುವೆ.

ಇಂದಿರಾ :— ದಯೆಮಾಡಿ ನನ್ನನ್ನು ನ್ಯಾಯಾಸ್ಥಾನಕ್ಕೆಳೆಯಬೇಡಿ. ನನ್ನ ಧನಲುಕೀರ್ತಿಗೆ ಕಲಂಕವನ್ನು ಬಳಿಯಬೇಡಿ. ನಾನು ಶರಣಾಗತನಾಗಿರುವೆ. ಶರಣಾಗತನನ್ನು ಕಾಪಾಡುವುದು—ವೈರಿಯನ್ನು ಕ್ಷಮಿಸುವುದು ದೇವನಿಗೂ ದೇವಮಾನವನಿಗೂ ಪ್ರಿಯವಾದ ಧರ್ಮವಲ್ಲವೇ?

ವಿಂಡರ್ :— ನನ್ನ ಕೀರ್ತಿಗೆ ಕಪ್ಪು ಬಳಿದದ್ದಕ್ಕೆ ಮುಯ್ಯಿ ಮುಟ್ಟಲೇಬೇಕಲ್ಲ? 'ಏಟಿಗೆ ನುರುಏಟು' ಎಂಬುದೇ ನಿಮ್ಮ ಆರ್ಯತತ್ತ್ವಜ್ಞಾನದ ತಿರುಳಲ್ಲವೇ?

ಇಂದಿರಾ :— ಸರಿ. ವಚನಪಾಲನೆಗಾಗಿ-ಸತ್ತ್ವರಕ್ಷಣೆಗಾಗಿ ನಾನಂತೂ ಧನದಂತೆ ಮಾನವನ್ನಾದರೂ ತ್ಯಜಿಸಲು ಸಿದ್ಧನಿರುವೆ. ಪ್ರಿಯ ವಿಂಡರ್, ಇದೇ ನನ್ನ ಕೊನೆಯ ಸಂದೇಶ!

× × × ×

ಇಂದು ವಿಶೇಷ ನ್ಯಾಯಾಲಯದ ಒಳಗೂ ಹೊರಗೂ ತುಂಬ ಜನಸಮ್ಮರ್ದ! ಅಪೂರ್ವ ಕಳವಳ! ಮಿ. ವಿಂಡರ್‌ಮಿಯರ್ ಅಭಿಯೋಗದ ವಿಚಾರಣೆ ನಡೆಯುತಕ್ಕದ್ದು. ಈ ಸಂಗತಿಯು ಎಲ್ಲ ವೃತ್ತಪತ್ರಗಳಲ್ಲಿಯೂ ದಪ್ಪಗಿನ ಅಕ್ಷರಗಳಿಂದ ಪ್ರಮುಖ ಸ್ಥಾನವನ್ನು ಪಡೆದಿತ್ತು. ಡಾ ಇಂದಿರಾರಮಣನು ಭಾರತದಲ್ಲಿ ಕೀರ್ತಿವೆತ್ತ ಲೋಕಪ್ರಿಯ ವ್ಯಕ್ತಿ! 'ಅಂತಹನ ಮೇಲೆ ಮೋಸದ ಅಪಾದನೆ' ಎಂಬ ವಿಷಯವೇ ಎಲ್ಲರಿಗೂ ಕುತೂಹಲ ಹುಟ್ಟಿಸಿತ್ತು. ಅಲ್ಲದೆ

ಶ್ರೀಮತಿ ಇಂದಿರಾದೇವಿಯು ಸಾಕ್ಷಿಯೂ ಆಗುವುದಿತ್ತು. ನ್ಯಾಯಾಧಿಕಾರಿಯೂ ಆಂಗ್ಲ. ಅಂತೆಯೆ ಎಲ್ಲ ವರ್ಗದ—ಎಲ್ಲ ವ್ಯವಸಾಯದ—ಜನರೂ ವಿಚಾರಣೆಯನ್ನು ಪರಿಶೀಲಿಸಲು, ಉತ್ಕಂಠೆಯಿಂದ ಆಗಮಿಸಿದ್ದರು. ನ್ಯಾಯಮೂರ್ತಿಗಳು ನ್ಯಾಯಾಸ್ಥಾನದಲ್ಲಿ ವಿರಾಜಮಾನರಾಗಿದ್ದರು. ಫಿರ್ಯಾದಿ ಆರೋಪಿಗಳಿರ್ವರೂ ಉಪಸ್ಥಿತರಿದ್ದರು. ಅವರವರ ಪಕ್ಷದ ಬ್ಯಾರಿಸ್ಟರೂ ಸನ್ನದ್ಧರಾಗಿ ಕುಳಿತಿದ್ದರು.

ಆಪಾದಿತನಾದ ಇಂದಿರಾರಮಣನ ಮೋರೆಯು ಕಪ್ಪಾಗಿ ಸುಕ್ಕುಗಟ್ಟಿತ್ತು. ಅತನ ಮನಃಸಾಗರದಲ್ಲಿ ವಿಧವಿಧದ ವಿಚಾರತರಂಗಗಳ ತಾಕಲಾಟವು ಎಡೆಬಿಡದೆ ನಡೆದಿರುವುದೆಂದೂ, ಅದರಿಂದ ಆವನು ಕ್ಷಣಕ್ಷಣಕ್ಕೆ ಹತಾಶನಾಗುತ್ತಿರುವನೆಂದೂ ಅತನ ಕಳೆಗುಂದಿದ ಮುಖಮುದ್ರೆಯಿಂದ ಯಾರೂ ಸುಲಭವಾಗಿ ಗುರುತಿಸುವಂತಿತ್ತು. ತನ್ನ ಕೀರ್ತಿಪ್ರಭೆಯನ್ನು ಬೆಳಗಲು ಕಾರಣರಾದ ಪ್ರಿಯಪತ್ನಿಯರೇ ಇದೀಗ ಅದನ್ನು ನಂದಿಸಲು ಸ್ಪರ್ಧೆಯಿಂದ ನುಗ್ಗುವರೆಯುವರೆಂದು ಆತನಿಗೆ ಭಾಸವಾಗುತ್ತಿತ್ತು. ಅಪಾದನೆಯು ಸಹಜವೇ ಸಿದ್ಧವಾಗಿ, ಶಿಕ್ಷೆಯು ನಿಧಿಸಲ್ಪಡುವುದೆಂದೂ, ಪತ್ನಿಯರಿರ್ವರೂ ಅಂತರಿಸುವರೆಂದೂ ಆತನ ಮನೋದೇವತೆಯು ಯೋಚಿಸುತ್ತಿದ್ದಳು. ಅಲ್ಲದೆ ದ್ವಿಭಾರ್ಯಾ ಪ್ರತಿಬಂಧಕ ವಿಧಿಯಂತೆ, ಮತ್ತೊಂದು ಅಪಾದನೆಗೆ ಗುರಿಯಾಗುವ ಹೆದರಿಕೆಯನ್ನೂ ಹಾಕುತ್ತಿದ್ದಳು. ಸನ್ಮಾನರಕ್ಷಿತನಾಗಿ, ಅಪಾದನೆಯಿಂದ ಪಾರಾಗುವ ಯಾವ ಆಶಾಕಿರಣವೂ ಆತನನ್ನು ಪ್ರಜ್ವೋದಿಸುತ್ತಿರಲಿಲ್ಲ. ಎಲ್ಲ ಬಗೆಯಿಂದಲೂ ನಿರಾಶನಾದ ಆತನು, ಮಾನರಕ್ಷಣೆಗಾಗಿ ಅಂತರಾತ್ಮನನ್ನೇ ಮೊರೆಯಿಡುವನೋ ಎಂಬಂತೆ, ಆತನ ಆಧೋವದನವು ಸೂಚಿಸುತ್ತಿತ್ತು.

ಮಿ. ವಿಂಡರ್‌ಮಿಯರಳು ತಾನು ಡಾ. ಇಂದಿರಾರಮಣನ ವಿವಾಹಿತ ಪತ್ನಿಯೆಂಬುದನ್ನು ಗೊತ್ತುಪಡಿಸಲು ಬೇಕಾದ ಪತ್ರ, ಭಾವಚಿತ್ರಗಳನ್ನು ಅಭಿಯೋಗದಲ್ಲಿ ಸೇರಿಸಿದಂತೆ, ಶ್ರೀ. ಇಂದಿರಾದೇವಿಯೂ ಪತ್ನಿಯಾಗಿರುವುದನ್ನು ಸಿದ್ಧಪಡಿಸುವ ಕಾಗದ-ಪತ್ರ-ಭಾವಚಿತ್ರಗಳನ್ನೂ ಸೇರಿಸಿದ್ದಳು.

ನ್ಯಾಯಾಸನವು ಇಂದಿರಾದೇವಿಯನ್ನು ಸಾಕ್ಷಿ ನುಡಿಯಲು ಆಹ್ವಾನಿಸಿತು. ಬಿಳಿಯಬಣ್ಣದ ಪವಿತ್ರವಾದ ಪತ್ತಲವನ್ನುಟ್ಟು, ಶಾರದೆಯಂತೆ ಶೋಭಿಸುವ ಅವಳು ಮಂದಗಮನದಿಂದ ನ್ಯಾಯಾಲಯಸನ್ನು ಪ್ರವೇಶಿಸಿದಳು. ಕೂಡಲೆ ನ್ಯಾಯಾಲಯವೆಲ್ಲವೂ ಗಂಭೀರವಾದ ಶಾಂತತೆಯಿಂದ ತುಂಬಿಕೊಂಡಿತು. ಅವಳು ಒಮ್ಮೆ ನ್ಯಾಯಾಲಯವನ್ನೆಲ್ಲ ಲಕ್ಷ್ಯಿಸಿ, ಅಧೋವದನಳಾಗಿ ನಿಂತುಕೊಂಡಳು

ನ್ಯಾಯಮೂರ್ತಿಗಳು ವಿಚಾರಿಸಿದರು :— ನಿಮ್ಮ ಹೆಸರೇನು ?

ಇಂದಿರಾದೇವಿ :— ಇಂದಿರಾದೇವಿ !

ನ್ಯಾಯ :— ಪತಿಯ ಹೆಸರು ?

ಇಂದಿರಾ :— ಇಂದಿರಾರಮಣ !

ನ್ಯಾಯ :— ಪರಮೇಶ್ವರನನ್ನು ಸ್ಮರಿಸಿ ನಿಜ ಹೇಳುವಿರಷ್ಟೇ ?

ಇಂದಿರಾ :— ಅಹುದು. ಪತಿಸ್ವರೂಪದ ಪರಮೇಶ್ವರನನ್ನು ಸ್ಮರಿಸಿ ಹೇಳುವೆ.

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ	೧೫-೦-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಹಾಲು-ಹಣ್ಣು (ಕವನ ಸಂಗ್ರಹ)	೧-೪-೦
ಶ್ರೀ. ಭುಜೇಂದ್ರ ಮಹಿಷವಾಡಿ	
ಮೂಲಶಿಕ್ಷಣದ ಮೌಲ್ಯಮಾಪಣ	೦-೧೨-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಬಾಳ-ಬಂಡಿ (ಕವನ ಸಂಗ್ರಹ)	೦-೪-೦
ಶ್ರೀ. ಬಾಳ ಬಿ. ಉಪಾಧ್ಯೆ	
ಭರತೇಶನ ನಾಲ್ಕು ಚಿತ್ರಗಳು	೧-೪-೦
ಶ್ರೀ. ಮಿರ್ಜಿ ಅಣ್ಣಾರಾಯರು	

ಅಚ್ಚಿನಲ್ಲಿ :

ಸಂಸ್ಕೃತಿಯ ಹೃದಯ

ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ :

ಶಾಂತಿ ಸೇವಾಸದನ, ಸೇಡಬಾಳ

ಪೊ. : **ಸೇಡಬಾಳ** (ಜಿಲ್ಲಾ ಬೆಳಗಾಂವಿ)

ನ್ಯಾಯ :— ಮಿ. ವಿಂಡರ್‌ಮಿಯರರು ಡಾ. ಇಂದಿರಾರಮಣರ ಮೇಲೆ ಮೋಸದ ಅಭಿಯೋಗ ಮಾಡಿರುವುದನ್ನು ನೀವು ಅರಿತಿರುವಿರಾ ?

ಇಂದಿರಾ :— ಸರಿ. ಅದನ್ನು ನಾನು ಅರಿತಿರುವೆ.

ನ್ಯಾಯ :— ನೀವು ಆಪಾದಿತರ ಮನೆಯಲ್ಲಿಯೇ ವಾಸಿಸುವಿರೋ ?

ಇಂದಿರಾ :— ಅಹುದು.

ನ್ಯಾಯ :— ನೀವು ಆಪಾದಿತರ ವಿವಾಹಿತ ಪತ್ನಿಯರಷ್ಟೇ ?

ಇಂದಿರಾ :— ಅಲ್ಲ

ನ್ಯಾಯ :— ಇಂದಿರಾರಮಣರು ನಿಮ್ಮ ಪತಿಯೆಂದು ಹೇಳಿದಿರಲ್ಲ ? ಅದರ ಅರ್ಥವೇನು ?

ಇಂದಿರಾ :— ಈ ಜೀವನವು ಯಾರಿಂದ ಪೋಷಿಸಲ್ಪಡುವುದೋ, ಮತ್ತು ಯಾರ ಉಪಭೋಗಕ್ಕಾಗಿ ವಿಲಾಸಲಾಗಿರುವುದೋ ಆವರು—ಈ ಜೀವನದ ಸ್ವಾಮಿ—ಪತಿಯಲ್ಲದೆ ಮತ್ತೇನು ?

ನ್ಯಾಯ :— ಹಾಗಾದರೆ ಆಪಾದಿತರಲ್ಲಿ ಉಪಪತ್ನಿ—ವೇಶ್ಯೆಯೆಂಬ ಸಂಬಂಧದಿಂದ ವಾಸಿಸುವಿರೋ ?

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಬಾಲೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯು ಮೂಲು! ಪ್ರಾಮಾಣಿಕ ವ್ಯವಹಾರ
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಗಿ**

ಇಂದಿರಾ :— ಆಹುದು.

ನ್ಯಾಯ :— ಎಂದಿನಿಂದ ಈ ಬಗೆಯಾಗಿ ವಾಸಿಸುವಿರಿ?

ಇಂದಿರಾ :— ಉಷವರಳಾದಂದಿನಿಂದ.

ನ್ಯಾಯ :— ಈ ಬಗ್ಗೆ ವೇತನನೇನು ದೊರಕುವುದು?

ಇಂದಿರಾ :— ಜೀವನಯಾತ್ರೆಗೆ ಬೇಕಾದ ಎಲ್ಲ ಸುಖ. ಸೌಲಭ್ಯಗಳೂ ದೊರಕುವುವು.

ನ್ಯಾಯ :— ಆಪಾದಿತರು ಮಿ. ವಿಂಡರ್‌ಮಿಯರ್ ಎಂಬ ಆಂಗ್ಲಮಹಿಳೆಯೊಡನೆ ವಿವಾಹಿತರಾಯುದನ್ನು ನೀವು ಬಲ್ಲಿರಷ್ಟೇ?

ಇಂದಿರಾ :— ಸರಿ. ಬಲ್ಲೆ.

ನ್ಯಾಯ :— ಹಾಗಾದರೆ ಅವರು ನಿಮ್ಮ ಸಮ್ಮತಿಯಿಂದಲೇ ವಿವಾಹಿತರಾಗಿರುವರೆಂದು ನಿಃಸಂಶಯವಾಗಿ ನಂಬಹುದಲ್ಲವೇ?

ಇಂದಿರಾ :— ಹಾಗೆ ನಂಬಲು ಯಾ ಪ್ರತ್ಯವಾಯವೂ ಇಲ್ಲ.

ನ್ಯಾಯ :— ಆಪಾದಿತರ ಬಗ್ಗೆ ನಿಮ್ಮದೇನಾದರೂ ಅಸಮಾಧನೆಯುಂಟೋ?

ಇಂದಿರಾ :— ಇಲ್ಲ.

ನ್ಯಾಯ :— ಇನ್ನುಮೇಲಾದರೂ ನೀವು ಆಪಾದಿತರನು ಮೊದಲಿನಂತೆಯೇ ಪ್ರೀತಿಸುವಿರಷ್ಟೇ?

ಇಂದಿರಾ :— ಆಹುದು. ಮೊದಲಿನಂತೆಯೇ—ಇಷ್ಟೇ ಪ್ರೀತಿಸುವೆ!

ನ್ಯಾಯ :— ಯಾವ ಬಗೆಯಿಂದಲೂ ಆಪಾದನೆಯು ಸಿದ್ಧಿಸಲಿಲ್ಲ. ಆದಕ್ಕಾಗಿ ಡಾ. ಇಂದಿರಾರಮಣರು ಸಂಪೂರ್ಣ ಸನ್ಮಾನಿತರಾಗಿ ಉಳಿದಿರುವರೆಂದು ನಿರ್ಣಯಿಸಲು ನನಗೆ ಸಂತೋಷವನ್ನಿನಿಸುವುದು. ಆದ್ದರಿಂದ ಮೋಸದ ಅಭಿಯೋಗವನ್ನು ನಾಮಂಜೂರ್ ಮಾಡಲಾಗಿದೆ; ಅಲ್ಲದೆ ಮಿ. ವಿಂಡರ್‌ಮಿಯರ್ ಇವರ ತ್ಯಾಗಪತ್ರದ ಬೇಡಿಕೆಯನ್ನೂ ತೆಗೆದುಹಾಕಲಾಗಿದೆ.

× × × ×

ಈಗ ನ್ಯಾಯಾಲಯದೆದುರು ಜನಸಾಗರವು ಒಬ್ಬುಳಿಗೂಡಿತ್ತು! ಅಪೂರ್ವವಾದ ಆನಂದದ ತೆರೆಗಳು ಉಕ್ಕಿ ಹೊರಚೆಲ್ಲುತ್ತಿದ್ದುವು; ದೊಡ್ಡ ಗಲಭೆಯುಂಟಾಗಿತ್ತು! ಕೆಲವರು ಇಂದಿರಾರಮಣನ ಯಶಕ್ಕಾಗಿ ಪರಮೇಶ್ವರನ ಕೃಪೆಯನ್ನು ಕೊಂಡಾಡುತ್ತಿದ್ದರೆ, ಮತ್ತೆ ಕೆಲವರು ಇಂದಿರಾದೇವಿಯ ಪತಿಭಕ್ತಿಯನ್ನು ಹೊಗಳುತ್ತಿದ್ದರು. ಇನ್ನೂ ಕೆಲವರು ಆರ್ಯಸಂಸ್ಕೃತಿಯು ಮೇಲ್ಮೆಯನ್ನು ಮನಮಾಡಿ ಸಮರ್ಥಿಸುತ್ತಿದ್ದರು. ಅಷ್ಟರಲ್ಲಿ ಇಂದಿರಾರಮಣನು ಇರ್ವರು ಆರ್ಯಾಂಗ್ಲ ಪತ್ನಿಯರೊಡನೆ, ಶ್ರೀದೇವಿ — ಭೂದೇವಿಯರಿಂದ ಶೋಭಿಸುವ ವೆಂಕಟರಮಣನಂತೆ, ಉತ್ಸಾಹಿಶನಾಗಿ ನ್ಯಾಯಾಲಯದಿಂದ ಹೊರಬಂದನು. ಇಂದಿರಾದೇವಿಯು ಮುಖಮಂಡಲವು ಕೃತಾರ್ಥ ಭಾವನೆಯಿಂದ ಬೆಳಗುತ್ತಿದ್ದರೆ, ವಿಂಡರ್‌ಮಿಯರಳು ವಿನೀತ ಭಾವದಿಂದ ಒಪ್ಪುತ್ತಿದ್ದಳು. ಕೂಡಲೆ ಜನತೆಯು ಅವರನ್ನು ಪೀಠದ ಮೇಲೆ ಕರೆದೊಯ್ದು, ಮೂವರನ್ನೂ ಪೂಮಾಲೆಗಳನ್ನರ್ಪಿಸಿ ಗೌರವಿಸಿತು.

ಇಂದಿರಾರಮಣನು ಜಗನ್ನಿಯಂತನಿಗೂ ಜನತೆಗೂ ಅನನ್ಯ ಭಾವದಿಂದ ವಂದಿಸಿ—"ಮಹಾಜನರೇ ಇಂದು ತಮ್ಮೆಲ್ಲರ ಸದ್ಭಾವನೆಯ ಬಲದಿಂದಲೇ ನಾನು ನಿಷ್ಕಳಂಕನಾಗಿ ಉಳಿದಿರುವೆ" ಎಂದು ಗದ್ಗದಕಂಠದಿಂದ ನುಡಿದನು.

ಒಬ್ಬರು :— ಇಂದಿರಾದೇವಿಯು ತನ್ನ ಗೌರವವನ್ನು ಬಲಿಗೊಟ್ಟು ಪತಿಯ ಗೌರವವನ್ನು ಕಾಯ್ದುಳಿಸಿದೆ, ಆತ್ಮಗೌರವವನ್ನು ಅಮರಗೊಳಿಸಿದ್ದಾಳೆ.

ಇನ್ನೊಬ್ಬರು :— "ಭೌತಿಕ ಸುಖವಾದದ ನಿಜವಾದ ಬೆಲೆಯನ್ನು ನಿರ್ಧರಿಸಬೇಕಾದರೆ, ಅಧ್ಯಾತ್ಮದ ಒರೆಗಲ್ಲೇ ಬೇಕು" ಎಂಬ ಸಿದ್ಧಾಂತದ ಸತ್ಯತೆಗಾಗಿ ಪ್ರಯತ್ನಪಟ್ಟ ವಿಂಡರ್‌ಮಿಯರರು ಕೂಡ ಇಂದಿರಾದೇವಿಯಷ್ಟೇ ಪ್ರಶಂಸನಾರ್ಹರಾಗಿರುವರು.

ಮತ್ತೊಬ್ಬರು :— ಆರ್ಯಮಹಿಳೆಯರ ಈ ತ್ಯಾಗಭಾವನೆಯು ಎಂದಿಗೆ ಬೆಳೆಯುವುದೋ ಅಂದೆಯೆ ಪಾತಿವ್ರತಾಧರ್ಮವು ಹೇಳಹೆಸರಿಲ್ಲದಂತಾಗುವುದು ನರಕಕ್ಕೆ ಕಾರಣವಾದ ಸಂಕರವನ್ನು ಹೊಂದಿದ ಮೇಲೆ, ಇಂತಹ ಉದಾತ್ತವಾದ ದೃಶ್ಯವನ್ನು ಕಾಣುವುದೆಲ್ಲಿ?

ಮಗುದೊಬ್ಬರು :— ಸೈ, ಸೈ, ಇದಕ್ಕನ್ನಬೇಕು ಆರ್ಯಸಂಸ್ಕೃತಿಯೆಂದು! ಇಂದಿರಾದೇವಿಯು ಇಂದು ಪ್ರೇಮಪರೀಕ್ಷೆಯಲ್ಲಿ ಧೀರ ಉಚ್ಚಾಂಕವನ್ನು ಪಡೆದು ಪಾಸಾಗಿರುವಳು. ಅವಳು ತೋರಿದ ಮನೋಧೈರ್ಯವೂ, ಪತಿಭಕ್ತಿಯೂ ಎಲ್ಲ ಮಹಿಳಾ ಸಮಾಜಕ್ಕೆಯೇ ಆದರ್ಶಪ್ರಾಯವಾಗಿವೆ.

ವಿಂಡರ್ :— ಆರ್ಯಸೀ. ವೈವಾಹಿಕ ಸಂಬಂಧವನ್ನೂ ಪತಿಪ್ರೇಮದ ತತ್ತ್ವವನ್ನೂ ಮತ್ತು ಅದರ ವ್ಯವಹಾರವನ್ನೂ ನಿಜವಾಗಿಯೇ ಅರಿತವರೆಂದರೆ ಆರ್ಯಮಹಿಳೆಯರೇ ಸರಿ—ಎಂಬುದನ್ನು ಇಂದು ನಾನು ಪೂರ್ಣ ಮನಗಂಡೆನು! ಸಂಸ್ಕೃತಿಸಮರದಲ್ಲಿ ಆರ್ಯಸಂಸ್ಕೃತಿಯೇ ಯಶಸ್ವಿಯಾಗಿದೆ!

'ಜಯಹಿಂದ' ಘೋಷವು ಗಗನವನ್ನಡರಿತು. ಜನತರಂಗುಳಿಯು ಚೆದರಿ ದಿಕ್ಕಾಪಾಲಾಯಿತು.

ಸಂಸ್ಕೃತ ಸಾಹಿತ್ಯದಲ್ಲಿ ಆತ್ಮಸ್ತುತಿ

(ಸಾಹಿತ್ಯರೀತಿಯ ಪರಿಚಯ)

ಶ್ರೀ. ಗೋವರ್ಧನಾಚಾರ್ಯ ಗಲಗಲಿ, ಎಂ. ಎ. ಬಿ. ಟಿ. ಧಾರವಾಡ

卐

ನಮ್ಮ ಪ್ರಾಚೀನ ಕವಿಪರಂಪರೆಯಲ್ಲಿ ಆತ್ಮಸ್ತುತಿವಿಶಾರದರಾದ ಕವಿಗಳು ಅನೇಕ ಜನರು ಸಿಕ್ಕುವರು. ಕಾಲಿದಾಸನಂತಹ ವಿನಯಭಾವದವರು ಬಹಳ ಕಡಿಮೆ. ಕೆಲವರು ಕಾಲಿದಾಸನಿಗೆ ಸೂರ್ಯಡಿ ಹೆಚ್ಚಿನವರು ತಾವು--ಎಂದು ತಾನೇ ಹೊಗಳಿಕೊಳ್ಳುವರು; ಆದರೆ ಅವರ ಕೃತಿಗಳಲ್ಲಿ ಅಂತಹ ಗುಣಗಳು ಯಾವುವೂ ಕಂಡುಬರುವುದಿಲ್ಲ !

卐

"ತೆನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ" ಎಂದು ("ಆತ್ಮಸಂಭಾವಿತಾಃ ಸ್ತಬ್ಧಾ ದನವಮಾನಮುದಾನ್ವಿತಾಃ") ಧರ್ಮೋಪದೇಶವಿದ್ವಾಗಲೂ, ಈ ವಿಧಿವಾಕ್ಯವನ್ನು ಮೀರುವುದರಲ್ಲಿ ಸಾಹಿತಿಗಳಿಗೂ ಸಾಮಾನ್ಯರಿಗೂ ಅಂತರವು ಕಂಡುಬರುವುದಿಲ್ಲ ಅದರೆ, ಎಷ್ಟೇ ಜ್ಞಾನಿಗಳಿದ್ದರೂ, ಎಂತಹ ರಸಸಿದ್ಧಿಯನ್ನು ಪಡೆದಿದ್ದರೂ, ಕವಿಗಳು ಕೂಡ ಮನುಷ್ಯರೇ ಅಲ್ಲವೇ ? ಹೊಟ್ಟೆ–ಬಟ್ಟೆಗಳ ಚಿಂತೆ ಕಡಿದಾಗ, ಅಥವಾ ಅದಿದ್ದರೂ–ಮತ್ತೊಂದು ಚಿಂತೆ ಉಪಸ್ಥಿತವಾಗುವುದು. ಅದು ಯಾವುದೆಂದರೆ ರಟ್ಟೆಯುದು. ಅದರಲ್ಲಿ ಸಾಕಷ್ಟು ಸಾಮರ್ಥ್ಯವಿದ್ದರೆ, ಅವನೊಬ್ಬ ಯೋಧನಾಗುತ್ತಾನೆ; ರಕ್ತದಿಂದಲೆ ತನ್ನ ಕೀರ್ತಿಯನ್ನು ಬರೆದಿಡುತ್ತಾನೆ. ಅದೇ ರಟ್ಟೆಯಲ್ಲಿ ಮಾಂಸ ವಿರಲಿಕ್ಕಿಲ್ಲ; ಅದರ ಮುಂಭಾಗದಲ್ಲಿ ಎಂದರೆ ಅಂಗುಲಿಗಳಲ್ಲಿ ಒಂದು ಲಿಪ್ಯಾತೀಯ ಕೌಶಲವಿರಬಹುದು; ಆಗ ಅವನೊಬ್ಬ ಕಲಾವಂತನಾಗುತ್ತಾನೆ ಕಲ್ಲಿನಲ್ಲಿಯೊ, ಕಾಗದದ ಮೇಲೆಯೊ, ಬಣ್ಣಗಳಲ್ಲಿಯೊ ತನ್ನ ಕೀರ್ತಿಯನ್ನು ಚಿರಂತನ ಮಾಡಲು ಬಯಸುತ್ತಾನೆ. ಈ ಮಾನವಸಾಮಾನ್ಯ ಬಯಕೆಯನ್ನು ಜಗಜ್ಜೇತೃವಾದ ಅಲೆಕ್ಷ್ಯಾಂಡರನು ಮುಚ್ಚುಮರೆಯಿಲ್ಲದೆ ಬಿಚ್ಚುಮನಸ್ಸಿನಿಂದ ಒಂದು ಪ್ರಸಂಗದಲ್ಲಿ ಆಡಿತೋರಿಸಿದ್ದಾನೆ. ಆ ಅಸಮಯೋಧನು ತನ್ನ ಅಗಣಿತ ಸೈನ್ಯದೊಂದಿಗೆ, ಸಿಂಧುನದೀ ತೀರಕ್ಕೆ ಬಂದಿದ್ದಾನೆ ಅದರ ಆಚೆಯ ದಂಡೆಯಲ್ಲಿ ಸಬಲ ಸೈನ್ಯದೊಂದಿಗೆ ಪೋರಸನು ಕಾದಿದ್ದಾನೆ. ಹೊಳೆಯನ್ನು ದಾಟಬೇಕೆಂಬ ಅಲೆಕ್ಷ್ಯಾಂಡರನ ಎಲ್ಲ ಪ್ರಯತ್ನಗಳೂ ವಿಫಲವಾಗುತ್ತವೆ. ಅಷ್ಟು ದಕ್ಷತೆಯನ್ನು ವಹಿಸಿದ್ದಾನೆ ಪೋರಸ. ಒಂದು ದಿನ ಕಾಳರಾತ್ರಿಯಲ್ಲಿ ಸ್ವತಃ ಅಲೆಕ್ಷ್ಯಾಂಡರನೇ ಕೆಲವು ಶೂರ ಸೈನಿಕರನ್ನು ಕರೆದುಕೊಂಡು ನದಿಯನ್ನು ದಾಟಲು ಹೊರಟಿದ್ದಾನೆ. ಮಹಾ ಪೂರದಿಂದ ನದಿಯು ಭೋರ್ಗರೆಯುತ್ತಿದೆ. ಒಂದು ಚಿಕ್ಕ ನೌಕೆಯಲ್ಲಿ ಸೆಲ್ಯೂಕಸ್ ಮಗ್ಯಾಸ್ಥೆನಿಸ್ ಮೊದಲಾದ ೪, ೫ ಸೇನಾನಿಗಳೊಂದಿಗೆ ಅಲೆಕ್ಷ್ಯಾಂಡರನು ಕುಳಿತಿದ್ದಾನೆ. ಅವರೆಲ್ಲ ಅವನ ನಂತರ ಪ್ರಸಿದ್ಧಿಗೆ ಬಂದ ಸತ್ರಪರೇ ಕ್ಷತ್ರಪರು. "That little boat contained so much history" (ಆ ಚಿಕ್ಕ ನೌಕೆಯಲ್ಲಿ ಅಷ್ಟೊಂದು ಇತಿಹಾಸವು ಅಡಕವಾಗಿತ್ತು) ಅಲೆಗಳ ಹೊಡೆತದಿಂದ ನೌಕೆಯು ಹೊಯ್ದಾಡುತ್ತದೆ. "ನಿಮ್ಮ ಜೀವನವನ್ನು ಗಂಡಾಂತರದಲ್ಲಿ ಹಾಕಬೇಡಿರಿ. ನಮಗೆ ಈ ಕಾರ್ಯವನು ಬಿಡಿರಿ." ಎಂದು ಅವನ ಸೇನಾನಿಗಳು ಬೇಡಿಕೊಳ್ಳುತ್ತಾರೆ. ಆದರೆ ಅಲೆಕ್ಷ್ಯಾಂಡರನು ಕೇಳುವುದಿಲ್ಲ. ನೌಕೆಯು ಉರುಳುತ್ತದೆ. ಆದರೆ ನದೀಮಧ್ಯದಲ್ಲಿಯ ಒಂದು ನಡುಗಡ್ಡೆಗೆ ಎಲ್ಲರೂ ಈಸಿ ಬರುತ್ತಾರೆ. ಮತ್ತೊಂದು ನೌಕೆಯನ್ನು ಹಡ್ಡಿ ನದಿಯ ಈಚೆಯ ದಂಡೆಗೆ ಬರುತ್ತಾರೆ. ಆಗ ಅಲೆಕ್ಷ್ಯಾಂಡರನು ಸೆಲ್ಯೂಕಸನಿಗೆ ನುಡಿಯುತ್ತಾನೆ: "ನಾನು ಇಷ್ಟೆಲ್ಲ ಸಾಹಸವನ್ನು ಮಾಡುವುದು, ಪದೇ ಪದೇ ನನ್ನ ಜೀವನವನ್ನು ಗಂಡಾಂತರದಲ್ಲಿ ನೂಕುವುದು ಏಕೆ ನಿನಗೆ ಗೊತ್ತೇ ? ಗ್ರೀಸದಲ್ಲಿ ನನ್ನ ಕೃತಿಗಳ ಬಗ್ಗೆ ಜನರು ಮಾತಾಡಬೇಕು,— ಬರೆದಿಡಬೇಕು— ಎಂಬುದೇ ನನ್ನ ಉದ್ದೇಶ" ಕಲಿಗಳಿಗೆ ಸಾಮಾನ್ಯವಾದ ಈ ಉದ್ದೇಶದಿಂದ ಕವಿಗಳು ಹೇಗೆ ಹೊರತಾದಾರು ? ಆದ್ದರಿಂದಲೇ ಕವಿಗಳು ಕಾವ್ಯವನ್ನು ರಚಿಸುವ ಉದ್ದೇಶಗಳಲ್ಲಿ ಕೀರ್ತಿಗೇ ಅಗ್ರಸ್ಥಾನ ಕೊಟ್ಟಿದ್ದಾನೆ ಮಮ್ಮಟನು: "ಕಾವ್ಯಂ ಯಶಸೇ....." ಎಂದು.

ವೇಧಾ ದ್ವೇಧಾ ಭ್ರಮಂ ಚಕ್ರೇ ಕಾಂತಾಸು ಕನಕೇಷು ಚ |
ತಾಸು ತೇಷ್ವಪ್ಯನಾಸಕ್ತಃ ಸಾಕ್ಷಾದ್ಭಗ್ನೋ ನರಾಕೃತಿಃ ||

"ಬ್ರಹ್ಮದೇವನು ಎರಡು ಬಗೆಯ ಭ್ರಮೆಯನ್ನು ಕಲ್ಪಿಸಿದ್ದಾನೆ ಒಂದು ಕಾಂತೆಯ ವಿಷಯಕ್ಕೆ; ಮತ್ತೊಂದು ಕನಕದ ವಿಷಯಕ್ಕೆ. ಇವೆರಡರಲ್ಲಿಯೂ ಅನಾಸಕ್ತನಾದವನು ನರರೂಪ ಧಾರಣ ಮಾಡಿದ ಸಾಕ್ಷಾತ್ ಶಿವನೆಂದೇ ತಿಳಿಯಬೇಕು." ಆದರೆ ಈ ಸುಭಾಷಿತಕಾರನು ಮೂರನೆಯ ಭ್ರಮೆಯನ್ನು ಮರೆತಿದ್ದಾನೆ—ಅಥವಾ ಬುದ್ಧಿಪೂರ್ವಕ ಬಿಟ್ಟಿದ್ದಾನೆಯೊ ! ಯಾಕೆಂದರೆ ಆ ಭ್ರಮೆಯು ತ್ರಿಮೂರ್ತಿಗಳನ್ನೂ ಬಿಟ್ಟಿಲ್ಲ ಸಾಕಷ್ಟು ಸರಿಯಾಗಿ ಸ್ತುತಿಸಿದರೆ, ಅವರು ಬೇಕಾದ ವಾವನ್ನೂ ನೀಡುವರು .....ಹರಿ—ಬ್ರಹ್ಮ—ರುದ್ರಾದಿಗಳೆಂಬುದು ಪುರಾಣಪ್ರಸಿದ್ಧವಿದೆ.

ಎರಡನೆಯವರು ಸ್ತುತಿಸಿದರೆ ಒಳಿತು. ಆದರೆ ಹಾಗೆ ಆಗದಿದ್ದರೆ Self help is the best help, ಸ್ವಾವಲಂಬೀ ತತ್ತ್ವವನ್ನು ಅವಲಂಬಿಸಬೇಕು.

ಭೋದ್ಧಾರೋ ಮತ್ಸರಗ್ರಸ್ತಾಃ ಪ್ರಭವಃ ಸ್ಮಯದೂಷಿತಾಃ।
ಆಬೋಧೋಪಹತಾಶ್ಚಾನ್ಯೇ ಜೀರ್ಣಮಂಗೇ ಸುಭಾಷಿತಮ್ ॥

(ಸಾಹಿತಿಗಳು ಸಾಹಿತಿಗಳನ್ನು ವಿಶೇಷತಃ ಸಮಕಾಲೀನ ಸಾಹಿತಿಯನ್ನು ಹೊಗಳುವುದು ತೀರ ವಿರಳ)

ತಿಳಿದವರು ಮತ್ಸರದಿಂದ ಕೂಡಿರುತ್ತಾರೆ. ಪ್ರಭುಗಳಾದವರಿಗೆ ಗರ್ವ ಬಹಳ; ಇನ್ನು ಸಾಮಾನ್ಯರಿಗೆ ತಿಳಿಯುವುದೇ ಇಲ್ಲ. ಹೀಗಾಗಿ ಒಳ್ಳೆಯ ಸಾಹಿತ್ಯವು ಶರೀರದಲ್ಲಿಯೇ ಅಡಗಿ ಹೋಗುತ್ತದೆ. ಅದ್ದರಿಂದ ತಮ್ಮ ಕೃತಿಗಳು ಬಯಲಿಗೆ ಬರಬೇಕಾದರೆ, ಕವಿಗಳಿಗೆ ಉಳಿದದ್ದು ಒಂದೇ ಮಾರ್ಗ. ಅದೆಂದರೆ ಆತ್ಮಶ್ಲಾಘನ. ಸಂಸ್ಕೃತ ಸಾಹಿತ್ಯದಲ್ಲಿ ಈ ಆತ್ಮಶ್ಲಾಘನಕ್ಕೇನು ಕಡಿಮೆ ಇಲ್ಲ. ಅದನ್ನು ಇಲ್ಲಿ ನಿರೂಪಿಸುವುದು ಈ ಲೇಖನದ ಉದ್ದೇಶ.

ಈ ಸ್ವಸ್ತುತಿಪರ ಸಾಹಿತಿಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು: ಸಾತ್ತ್ವಿಕ, ರಾಜಸ, ತಾಮಸ ಎಂದು. ಸಾತ್ತ್ವಿಕರು ತಮ್ಮ ವಿಷಯಕ್ಕೆ ಏನೂ ಹೇಳದೆ, ತಮ್ಮ ಕೃತಿಗಳೇ ತಮ್ಮ ಕೀರ್ತಿಯನ್ನು ಹೊಗಳುವಂತೆ ಮಾಡುವವರು. ರಾಜಸರು ಯೋಗ್ಯತೆ ಇದ್ದು ತಮ್ಮನ್ನು ಹೊಗಳಿಕೊಳ್ಳುತ್ತಾರೆ. ತಾಮಸರು ಯೋಗ್ಯತೆ ಇಲ್ಲದೆ ತಮ್ಮನ್ನು ಹೊಗಳಿಕೊಳ್ಳುತ್ತಾರೆ. ಇವರಲ್ಲಿ ಇನ್ನೂ ಒಂದು ದುರ್ಗುಣ ನಿರುತ್ತದೆ. ತಮ್ಮ ಸ್ತುತಿಯಲ್ಲದೆ, ಎರಡನೆಯ ಕವಿಗಳ ನಿಂದೆಯನ್ನೂ ಮಾಡುತ್ತಾರೆ. ಇವರಿಗೆ ಬೇಕಾದದ್ದು ಪರಾಪಕರ್ಷ. ಪೂರ್ವಕ ಸ್ವೋತ್ಕರ್ಷವು. ಕೆಳಗಿನಿಂದ ಮೇಲಕ್ಕೆ ಹೋಗೋಣ:

ಸಂಸ್ಕೃತ ಸಾಹಿತ್ಯದಲ್ಲಿ ಮುರಾರಿಯೇನು ಅಂಥ ದೊಡ್ಡ ಕವಿಯಲ್ಲ; ಆದರೆ ತನ್ನ ಕೃತಿಗಿಂತ ಆತ್ಮಶ್ಲಾಘನಪರ ಒಂದು ಶ್ಲೋಕದಿಂದಲೇ ಅವನು ಪ್ರಸಿದ್ಧನಿದ್ದಾನೆ. ಅದನ್ನು ಕೇಳಿ:

ದೇವೀಂ ವಾಚಮುಪಾಸತೇ ಹಿ ಬಹವಃ ಸಾರಂತು ಸಾರಸ್ವತಮ್।
ಜಾನೀತೇ ನಿತರಾಮಸೌ ಗುರುಕುಲಕ್ಲೇಶೋ ಮುರಾರೇಃ ಕವೇಃ॥
ಆಬ್ಧಿರ್ಲಂಘಿತ ಏವ ವಾನರಭಟೈಃ ಕಿಂತ್ವಸ್ಯ ಗಂಭೀರತಾ।
ಆಪಾತಾಲ ನಿಮುಗ್ನ ಮೀವರತನುರ್ಯಾನಾತಿ ಮಂಥಾಚಲಃ॥

ಸರಸ್ವತೀ ದೇವಿಯ ಉಪಾಸಕರು ಬಹಳ ಜನರು. ಆದರೆ, ಸಾರಸ್ವತ ಸಾರವನ್ನು ಅರಿತವನೆಂದರೆ, ಗುರುಕುಲದಲ್ಲಿ ಪರಿಶ್ರಮಗೈದ ಮುರಾರಿ ಕವಿಯೊಬ್ಬನೇ. ವಾನರವೀರರು ಸಮುದ್ರವನ್ನು ದಾಟಿದರೆಂಬುದೇನೋ ನಿಜ; ಆದರೆ, ಅದರ ಆಳ, ಪಾತಾಳದ ವರೆಗೆ ಮುಳುಗಿದ ಮಂದರಪರ್ವತಕ್ಕೊಂದೇ ಗೊತ್ತು. ಇತರ ಕವಿಗಳನ್ನು ಮಂಗಗಳಿಗೂ, ತನ್ನನ್ನು ಮಂಥಾಚಲಕ್ಕೂ ಹೋಲಿಸಿದ ಈ ಕವಿಯು ಧಾರ್ಷ್ಟ್ಯ ಹೆಚ್ಚಿನದು. ಆದರೆ ಈ ಶ್ಲೋಕದ ಸೌಂದರ್ಯವನ್ನು ಯಾರೂ ಅಲ್ಲಗಳೆಯರು

'ನಲಚಾಂಪೂ' ಕಾವ್ಯವನ್ನು ರಚಿಸಿದ ತ್ರಿವಿಕ್ರಮಭಟ್ಟನೇನು ಅಂಥ ದೊಡ್ಡ ಕವಿಯಲ್ಲ; ಆದರೆ ತನ್ನ ಕವಿತಾಶಕ್ತಿಯ ಬಗೆಗೆ ಅವನಿಗೆ ಹೆಚ್ಚಿನ ಹೆಮ್ಮೆ. ತನ್ನ ಸ್ತುತಿಯಷ್ಟೇ ಸಾಲದವನಾಗಿ; ತನ್ನ ತಂದೆಯ ಸ್ತುತಿಯನ್ನೂ, ಮನೆಯ ಸ್ತುತಿಯನ್ನೂ ಅತ್ಯುಕ್ತಿಪೂರ್ವಕವಾಗಿ ಮಾಡುತ್ತಾನೆ. ಆ ಶಾಂಡಿಲ್ಯಗೋತ್ರದಲ್ಲಿ, ಆದಿತ್ಯದೇವನೆಂಬವನು ಜನಿಸಿದನು. ಅವನು ವೇದವಿದ್ಯಾಪಾರಂಗತನಾಗಿದ್ದು, ಅವನ ಕೀರ್ತಿ ಎಂಬ ಸಮುದ್ರದಿಂದ ಅಮೃತವನ್ನು ಎಲ್ಲ ದಿಕ್ಕುಗಳಲ್ಲಿಯೂ ಜನರು ಇನ್ನೂ ಕಣ್ಣು ಮುಚ್ಚಿ ಕುಡಿಯುತ್ತಿದ್ದಾರೆ—ಎಂದು ಮುಂತಾಗಿ ಹೇಳುತ್ತಾನೆ. ಇತರ ಕವಿಗಳನ್ನೆಲ್ಲ ಹುಡುಗರೆಂದು ತುಚ್ಛೀಕರಿಸುತ್ತಾನೆ:

ಅಪ್ರಗಲ್ಭಾಃ ಪದನ್ಯಾಸೇ ಜನನೀರಾಗಹೇತವಃ।
ಸನ್ತ್ಯೇಕೇ ಬಹುಲಾಲಾಪಾಃ ಕವಯೋ ಬಾಲಕಾ ಇವ ॥

ಪದನ್ಯಾಸವನ್ನು ಅರಿಯದವರೂ, ಜನನೀರಾಗ ಹೇತವಃ (ಎಂದರೆ) ಜನರಿಗೆ ವಿರಸವನ್ನುಂಟುಮಾಡುವವರೂ, ಬಹುಲಾಲಾಪಾಃ ಬಹಳ ಮಾತನಾಡುವವರೂ ಆದ ಎಷ್ಟೋ ಕವಿಗಳಿದ್ದಾರೆ. ಅವರು ಬಾಲಕರಿದ್ದಂತೆ. "ಅವರು ಪದನ್ಯಾಸದಲ್ಲಿ ಎಂದರೆ ಹೆಜ್ಜೆ ಇಡುವುದರಲ್ಲಿ ತಪ್ಪುವರು. ಜನನೀ ರಾಗ ಹೇತವಃ —ತಾಯಿಗೆ ಸಿಟ್ಟು ಬರುವಂತೆ ವರ್ತಿಸುವರು. ಮತ್ತು ಬಹುಲಾಲಾಪಾಃ=ಬಹಳ ಜೊಲ್ಲು ಬುರುಕರಿರುತ್ತಾರೆ." ಎಂದು ಇತರ ಕವಿಗಳನ್ನು ಬಯ್ದಿದ್ದಾನೆ.

ಈ ಸಂದರ್ಭದಲ್ಲಿ ವೀರಕಾಪನದೇವನಾಯ. ಚರಿತವನ್ನು ಬರೆದ ಗಂಗಾದೇವಿಯ ಒಂದು ಶ್ಲೋಕವು ನೆನಪಾಗುತ್ತದೆ:

ಏಕೋಭೂನ್ನಲಿನಾತ್ ತತಶ್ಚ ಪುಲಿನಾದ್ ವಲ್ಮೀಕತಶ್ಚಾ ಪರಃ।
ತೇ ಸರ್ವೇ ಕವಯೋ ಭವಂತಿ ಪುರತಸ್ತೇಷಾಂ ನಮಸ್ಯುರ್ಮಹೇ॥
ಅರ್ವಾಂಚೋ ಯದಿ ಗದ್ಯಪದ್ಯರಚನೈಶ್ಚಿತ್ರೈಶ್ಚ ಮತ್ಕುರ್ವತೇ।
ತೇಷಾಂ ಮೂರ್ಧ್ನಿ ದಧಾಮಿ ವಾಮಚರಣಂ ಕರ್ನಾಟ-
ರಾಜಪ್ರಿಯಾ॥

ಒಬ್ಬನು ನಲಿನ ಎಂದರೆ ಕಮಲದಿಂದ ಸಂಭವಿಸಿದನು, ಎರಡನೆಯವನು ಪುಲಿನ ಎಂದರೆ ಉಸುಕಿನಿಂದ ಉದ್ಭವಿಸಿದನು, ಮೂರನೆಯವನು ಹುತ್ತಿನಿಂದ ಹುಟ್ಟಿದನು ಈ ಮೂವರೇ ನಿಜವಾದ ಕವಿಗಳು. ನಾನು ತಲೆಬಾಗಿಸುವುದು ಈ ಮೂವರಿಗೇ. ಗದ್ಯಪದ್ಯ ರಚನೆಯಿಂದ ಚಿತ್ರದಲ್ಲಿ ಚನುತ್ತಾರವನ್ನುಂಟುಮಾಡಲು ಬಯಸುವ ಈಚಿನ ಎಲ್ಲ ಕವಿಗಳ ತಲೆಯ ಮೇಲೆ, ಕರ್ನಾಟರಾಜನ ಪ್ರಿಯನಾದ ನಾನು ನನ್ನ ಎಡಗಾಲಿನ ಪಾದವನ್ನು ಇಡುತ್ತೇನೆ" ಎಂದು ಹೇಳುತ್ತಾಳೆ. ಎಂಥ ಗರ್ವ! ಇವಳಿಗೆ ಮಾನ್ಯರಾದ ಕವಿಗಳೆಂದರೆ ಬಹ್ಮ, ವ್ಯಾಸ, ವಾಲ್ಮೀಕಿ ಈ ಮೂವರೇ. ಕಾಳಿದಾಸ, ಭಾಸ, ಭವಭೂತಿಗಳು ಕೂಡ ತನ್ನೆದುರು ಕಸದಾರ್ಥವೆಂದು ಇವಳ ಮತ.

ಪ್ರತಿಭೆಯೊಂದಿಗೆ ಪಾಂಡಿತ್ಯವೂ ಪ್ರಭುತ್ವವೂ, ವೈಭವವಿಲಾಸಗಳೂ ಕೂಡಿದಾಗ, ಈ ತರದ ಅಹಂಕಾರವು ತಲೆದೋರುತ್ತದೆಂದು ತೋರುತ್ತದೆ. ಜಗನ್ನಾಥಪಂಡಿತನೂ ಇದೇ ಮಾಲಿಕೆಯಲ್ಲಿ ಬರುತ್ತಾನೆ. ಅವನ ಆತ್ಮಶ್ಲಾಘನವು ಅತಿ ಪ್ರಸಿದ್ಧವಿದೆ. ಅದಕ್ಕೆಲ್ಲ ಅವನು ಅರ್ಹನಿರುವುದರಿಂದ, ಅವನನ್ನು ರಾಜಸಗುಣವೆಲ್ಲಿ

ಸೇರಿಸಬಹುದು. ತನ್ನ ಕವಿತಾಸಾಮರ್ಥ್ಯವನ್ನು ಎಷ್ಟು ಹೃದಯಂಗಮವಾಗಿ ಬಣ್ಣಿಸಿದ್ದಾನೆ ಕೇಳಿರಿ :

ಗಿರಾಂ ದೇವೀ ವೀಣಾ ಗುಣರಣನ ಹೀನಾದರ ಕರಾ |
ಯದೀಯಾನಾಂ ವಾಚಾಮಮೃತಮಯಮಾಚಾಮತಿರಸಮ್॥
ವಚಸ್ತಸ್ಯಾಕರ್ಣ್ಯ ಶ್ರವಣ ಸುಭಗಂ ಪಂಡಿತಪತೇಃ |
ಅಧುಂಸ್ವನ್ ಮೂರ್ಧಾನಂ ನೃಪಶುರಥವಾಯಂ ಪಶುಪತಿಃ॥

ಸರಸ್ವತಿಯು ವೀಣಾವಾದನವನ್ನು ತೊರೆದು, ಯಾವನ ಕಾವ್ಯ ನಿರ್ಝರಿಣಿಯ ಅಮೃತಮಯ ರಸವನ್ನು ಆಚಮನ ಮಾಡುತ್ತಾಳೊ, ಅಂಥ ಶ್ರುತಿಮನೋಹರವಾದ ಪಂಡಿತಪತಿಯ ಮಾತನ್ನು ಕೇಳಿ ಯಾವನು ತಲೆದೂಗುವುದಿಲ್ಲವೊ—ಅವನು ನರಪಶುವಿರಬೇಕು, ಇಲ್ಲವೇ ಪಶುಪತಿ ಎಂದರೆ ಶಿವನಾದರೂ ಆಗಿರಲಿಕ್ಕೆಬೇಕು.

ಅವನ ಕಾವ್ಯವನ್ನು ಬಿಡಿರಿ, ಆದರೆ ಈ ಶ್ಲೋಕದ ಪದಲಾಲಿತ್ಯ, ಸುಲಭಪ್ರಾಸ, ಅಲಂಕಾರವೈಚಿತ್ರ್ಯಕ್ಕೆ ಎಲ್ಲರೂ ತಲೆದೂಗಲೇಬೇಕು. ಹಾಗೆ ಮಾಡದವನು ನರಪಶುವೆಂದ ಕವಿಯ ಅಭಿಪ್ರಾಯಕ್ಕೇ ನಮ್ಮ ಸಮ್ಮತಿ ಇರುತ್ತದೆ.

ಇವನು ತನ್ನ ಕಾವ್ಯವನ್ನಷ್ಟೇ ಅಲ್ಲ, ತನ್ನ ಸಮಗ್ರ ಜೀವನವನ್ನೇ ವೈದ್ಯಾಹ್ಯದಲ್ಲಿ ಅತ್ಯಂತ ಸಂತೃಪ್ತಿಯಿಂದ ನೋಡಿಕೊಳ್ಳುತ್ತಾನೆ. ಏಕೆ ಹಾಗೆ ಬಗೆಯಬಾರದು ? ಅಪರೂಪವಾಗಿ ಕೂಡಿಯೇ ಕಂಡುಬರುವ ಶ್ರೀ ಮತ್ತು ಸರಸ್ವತಿಯರು ಇವನಲ್ಲಿ ಕಲೆತಿದ್ದರು. "ನಿಸರ್ಗಭಿನ್ನಾಸ್ಪದಮೇಕಸಂಸ್ಥಮಸ್ಮಿನ್ ದ್ವಯಂ ಶ್ರೀಶ್ಚ ಸರಸ್ವತೀ ಚ" ಎಂಬುದು, ಸಾವಿರಾರು ಕವಿಗಳೊಳಗೆ ಇವನೊಬ್ಬನಲ್ಲಿ ಮಾತ್ರ ಸಾರ್ಥಕವಾಗಿತ್ತು.

"ಎಲ್ಲ ಶಾಸ್ತ್ರಗಳನ್ನು ಅಧ್ಯಯನ ಮಾಡಿದ್ದೇನೆ. ಧರ್ಮವಿಧಿಗಳನ್ನೆಲ್ಲ ಪಾಲಿಸಿದ್ದೇನೆ. ನೂತನ ವಯಸ್ಸನ್ನು ದಿಲ್ಲೀವಲ್ಲಭನ ಪಾಣಿಪಲ್ಲವದ ಆಶ್ರಯದಲ್ಲಿ ಕಳೆದಿದ್ದೇನೆ. ಈಗ ಸದ್ಯಕ್ಕೆ ವೃದ್ಧಾಪ್ಯದಲ್ಲಿ ಎಲ್ಲ ವಾಸನೆಗಳನ್ನೂ ತೊರೆದು, ಮಧುರೆಯಲ್ಲಿ ಶ್ರೀಹರಿಯನ್ನು ಸೇವಿಸುತ್ತಿದ್ದೇನೆ—ಹೀಗೆ ಪಂಡಿತರಾಜನದು ಎಲ್ಲವೂ ಲೋಕಾಧಿಕವೆ!" ಎಂದು ಹೇಳುವ ಈ ವಾಕ್ಯವನ್ನು ಕೇಳಿರಿ :

ಶಾಸ್ತ್ರಾಣ್ಯಾಕಲಿತಾನಿ ನಿತ್ಯವಿಧಯಃ ಸರ್ವೇಪಿ ಸಂಭಾವಿತಾಃ|
ದಿಲ್ಲೀವಲ್ಲಭಪಾಣಿಪಲ್ಲವತಲೇ ನೀತಂ ನವೀನಂ ವಯಃ |
ಸಂಪ್ರತ್ಯುಜ್ಝಿತವಾಸನಂ ಮಧುಪುರೀ ಮಧ್ಯೇ ಹರಿಃಸೇವ್ಯತೇ|
ಸರ್ವಂ ಪಂಡಿತರಾಜ ರಾಜಿತಿಲಕೇ ನಾಕಾರಿ ಲೋಕಾಧಿಕಮ್॥

ಸ್ತುತಿಯ ವ್ಯಾಮೋಹವಂತೂ ಯಾರಿಗೂ ಬಿಟ್ಟದ್ದಲ್ಲ. ಆದರೆ, ಸ್ವಾತ್ಮಪ್ರತಿಷ್ಠೆಗಾಗಿ ಇತರರನ್ನು ಹೀಯಾಳಿಸದೆ, ಅವರಲ್ಲಿಯ ಗುಣಗಳನ್ನು ಕಂಡುಹಿಡಿದು ತಮ್ಮ ಗುಣಗಳೊಂದಿಗೆ, ಅವನ್ನೂ ಮುಕ್ತಕಂಠದಿಂದ ಸ್ತುತಿಸುವವರು ಕೊನೆಯ ಎಂದರೆ ಸಾತ್ತ್ವಿಕ ಆತ್ಮಸ್ತುತಿಪರರಲ್ಲಿ ಬರುತ್ತಾರೆ. ಗೀತಗೋವಿಂದದ ಕರ್ತೃವಾದ ಜಯದೇವನು ಇಂಥವರಲ್ಲಿ ಉತ್ತಮ ನಿದರ್ಶನನಾಗಿದ್ದಾನೆ. ಲಕ್ಷ್ಮಣಸೇನರಾಜನ ಆಶ್ರಯದಲ್ಲಿರುವ ತನ್ನ ಸಮಕಾಲೀನ ಕವಿಗಳನ್ನು ತನ್ನ ಜೊತೆಗೆ ಅವನು ಹೀಗೆ ಬಣ್ಣಿಸಿದ್ದಾನೆ:

ವಾಚಃ ಪಲ್ಲವಯತ್ಯುಮಾಪತಿಧರಃ ಸಂದರ್ಭಶುದ್ಧಿಂಗಿರಾಮ್|
ಜಾನೀತೇ ಜಯದೇವ ಏವ ಶರಣಃಶ್ಲಾಘ್ಯೋ ದುರೂಹದ್ಯುತೇಃ॥
ಶೃಂಗಾರೋತ್ತರ ಸತ್ಪ್ರಮೇಯ ರಚನೈರಾಚಾರ್ಯ
ಗೋವರ್ಧನ |
ಸ್ಪರ್ಧೀ ಕೋಪಿ ನ ವಿಶ್ರುತಃ ಶ್ರುತಿಧರೋ ಧೋಯೀ–
ಕವಿಕ್ಷ್ಮಾಪತಿಃ ॥

"ಮಾತು ಕುದುರಿಸುವಲ್ಲಿ ಉಮಾಪತಿಧರನು ನಿಪುಣನು. ಸಂದರ್ಭಕ್ಕೆ ಉಚಿತವಾದ ಉಕ್ತಿಗಳನ್ನು ಬಲ್ಲವನೆಂದರೆ ಜಯದೇವನೊಬ್ಬನೇ. ಕಲ್ಪನಾತೀತ ಓಘದಲ್ಲಿ ಶರಣನು ಶ್ಲಾಘ್ಯನಿರುತ್ತಾನೆ. ಶೃಂಗಾರಭೂಯಿಷ್ಠವಾದ ಪಾಗ್ರಚನೆಯಲ್ಲಿ ಆಚಾರ್ಯ ಗೋವರ್ಧನನ ಕೈ ಹಿಡಿಯುವವರು ಯಾರೂ ಇಲ್ಲ. ವಿದ್ವಾಂಸನಾದ ಧೋಯಿಯು ಕವಿಗಳಲ್ಲೆಲ್ಲ ರಾಜನು. "

ಕೊನೆಯದಾಗಿ, ಈ ವಿಷಯದಲ್ಲಿಯೂ ಕಾಲಿದಾಸನು ಕವಿಕುಲಗುರುವೆಂಬ ತನ್ನ ಬಿರುದಿಗೆ ತಕ್ಕಂತೆಯೇ ವರ್ತಿಸಿದ್ದಾನೆ. ಅವನ ಯಾವ ಕೃತಿಯಲ್ಲಿಯೂ, ಆತ್ಮಶ್ಲಾಘನಪರ ಒಂದು ಉಕ್ತಿಯೂ ಕಂಡುಬರುವುದಿಲ್ಲ. ಪ್ರತ್ಯುತ—ಪ್ರತಿಯೊಂದರಲ್ಲಿಯೂ ತನ್ನ ವಿನಯವನ್ನೇ ತೋರ್ಪಡಿಸುತ್ತಾನೆ.

ಕವಿಯ ಕೀರ್ತಿಯನ್ನು ಬಯಸುವ ಮಂದಮತಿಯಾದ ನಾನು, ಎತ್ತರಿದ್ದವನಿಗೇ ನಿಲುಕಬಹುದಾದ ಹಣ್ಣನ್ನು ಅಪೇಕ್ಷಿಸಿ. ಲೋಭದಿಂದ ಕೈಗಳನ್ನು ಮೇಲಕ್ಕೆ ಚಾಚಿದ ಕುಳ್ಳನಂತೆ ಉಪಹಾಸಕ್ಕೆ ಈಡಾಗಿದ್ದೇನೆ.

ಮಂದಃ ಕವಿಯಶಃ ಪ್ರಾರ್ಥೀ ಗಮಿಷ್ಯಾಮ್ಯುಪಹಾಸ್ಯತಾಮ್|
ಪ್ರಾಂಶುಲಭ್ಯೇ ಫಲೇ ಲೋಭಾದುದ್ಬಾಹುರಿವ ವಾಮನಃ ॥

ಎಂದು ರಘುವಂಶದಲ್ಲಿ ಹೇಳುತ್ತಾನೆ.

ವಿಶ್ವನಾಟಕಗಳ ಉಚ್ಚಶ್ರೇಣಿಯಲ್ಲಿ ಸ್ಥಾನ ಪಡೆದ ಕೃತಿರತ್ನವನ್ನು ರಚಿಸಿಯೂ ಅದರ ಪ್ರಾರಂಭದಲ್ಲಿ, ಪಂಡಿತರ ಪರಿತೋಷವಾಗುವ ವರೆಗೆ ನನ್ನ ಪ್ರಯೋಗವು ಸಾಧುವೆಂದು ತಿಳಿಯಲಾರೆ. ಯಾಕೆಂದರೆ, ಎಷ್ಟೇ ಪರಿಣತನಿದ್ದರೂ ಪ್ರತಿಯೊಬ್ಬನಲ್ಲಿ ಆತ್ಮವಿಶ್ವಾಸ ವಿರುವುದಿಲ್ಲ.

ಆಪರಿತೋಷಾದ್ವಿದುಷಾಂ ನಸಾಧುಮನ್ಯೇ ಪ್ರಯೋಗ-
ವಿಜ್ಞಾನಮ್ |
ಬಾಲವದಪಿ ಕಿನ್ನೆಶಾನಾಮಾತ್ಮನ್ಯಪ್ರತ್ಯಯಂ ಜೇತಃ॥

ಎಂದು ಹೇಳಿ, ಮಾನವಸಾವಧಾನ್ಯವಾದ ಔರ್ಬಲ್ಯವನ್ನು ವ್ಯಕ್ತಪಡಿಸಿದ್ದಾನೆ.

ಇನ್ನು ಈ ಕವಿಗಳಿಗೆ ಇಷ್ಟು ಆತ್ಮಸ್ತುತಿ ಮಾಡಿಕೊಳ್ಳುವ ಪ್ರಸಂಗವೇಕೆ ಬಂದಿತು ? ವ್ಯಾಸ–ವಾಲ್ಮೀಕಿ, ಭಾಸ–ಭವಭೂತಿ

ಕಾಲಿದಾಸಾದಿಗಳ ಕೃತಿಗಳೆದುರು ತಮ್ಮ ಕಾವ್ಯಗಳೇ ಶ್ರೇಷ್ಠವೆಂಬ ಭ್ರಮೆಯು ಅವರಿಗಿತ್ತೋ? ಅಷ್ಟು ನಿಜವಾದ ಮುರಹಂಕಾರದಿಂದ ಅವರು ತುಂಬಿದ್ದರೋ? 'ರವಿ ಕಾಣದ್ದನ್ನು ಕವಿ ಕಾಣುತ್ತಾನೆ' ಎಂದು ಹೇಳಲಾಗುತ್ತದೆ. ಆದರೆ ಈ ಕವಿಗಳಿಗೆ ತಮ್ಮ ಕಲೆಗಳೇ ಕಾಣುತ್ತಿರಲಿಲ್ಲವೋ? ಸ್ವಲ್ಪ ವಿಚಾರ ಮಾಡಲಾಗಿ, ಹಾಗೇನೂ ಇರಲಿಕ್ಕಿಲ್ಲ; ಜನರ ಚಿತ್ತವನ್ನು ತಮ್ಮೆಡೆಗೆ ಎಳೆಯಲು ಅದೊಂದು ವಿಧಾನವಾಗಿರಬೇಕು—ಎಂದಿಷ್ಟೇ ಎನಿಸುತ್ತದೆ.

ಆಧುನಿಕ ಆಂಗ್ಲಸಾಹಿತ್ಯಸಮ್ರಾಟನಾದ Bernard Shawನ ಆತ್ಮಪ್ರೌಢಿಮೆಯು ಅತಿ ಪ್ರಸಿದ್ಧವಾಗಿದೆ. ಜಾಹೀರಾತಿನ ಈ ಯುಗದಲ್ಲಿ ಹಾಗೆ ಮಾಡಿದ ಹೊರತು ನಿರ್ವಾಹವೇ ಇಲ್ಲ—ಎಂದು ಅವನು ಹೇಳುತ್ತಾನೆ. ತನ್ನ ಕೀರ್ತಿಯನ್ನು ತಾನೇ ತಯಾರಿಸಿದುದರಿಂದ, ಅದರಿಂದ ತಾನು ಎಂದೂ ಮೋಸ ಹೋಗಿಲ್ಲ, ಅದು ಇತರರ ಸೇವನೆಗಾಗಿ ಮಾತ್ರ. I have never been taken in by my reputation, having manufactured it myself" ಎಂದು ಹೇಳುತ್ತಾನೆ.

"ಹಿಂದಿನದೆಲ್ಲ ಹಿರಿದು, ಇಂದಿನದೆಲ್ಲ ಕಿರಿದು" ಎಂದು ಪೂರ್ವಪರಂಪರೆಗೇ ಅಂಟಿಕೊಂಡ ಸಮಾಜದಲ್ಲಿ, ಇದೇ ಒಂದು ತರದ ಪರಿಸ್ಥಿತಿ ಇದ್ದಿರಬೇಕು. ಆಗ ನಾಚಿಕೆ ಬಿಟ್ಟು ತಾನೇ ಒಬ್ಬ ಶ್ರೇಷ್ಠ ಕವಿ, ಇತರರು ತನ್ನೆದುರು ಕಃಪದಾರ್ಥ—ಎಂದು ಹೇಳಿಕೊಳ್ಳದ ವಿನಾ ಜನರ ಲಕ್ಷ್ಯವೆಳೆದುಕೊಳ್ಳುವುದು ಸಾಧ್ಯವಿರಲಿಕ್ಕಿಲ್ಲ. ಕಾಲಿದಾಸನಂತಹ ಕವಿಶ್ರೇಷ್ಠನಿಗೂ ಈ ಪರಂಪರಾಪ್ರಿಯತೆಯ ವಿರುದ್ಧ ಹೋರಾಡಬೇಕಾಯಿತೆಂಬುದು ಈ ಶ್ಲೋಕದಿಂದ ಕಂಡುಬರುತ್ತದೆ:

ಪುರಾಣಮಿತ್ಯೇವ ನಸಾಧು ಸರ್ವಂ |
ನಚಾಪಿ ಕಾವ್ಯಂ ನವಮಿತ್ಯವದ್ಯಂ ||
ಸಂತಃಪರೀಕ್ಷ್ಯಾನ್ಯತರದ್ಭಜಂತೇ |
ಮೂಢಃ ಪರಪ್ರತ್ಯಯನೇಯ ಬುದ್ಧಿಃ ||

ಪುರಾತನವೆಂದಾಕ್ಷಣಕ್ಕೆ ಎಲ್ಲವೂ ಒಳಿತಲ್ಲ. ಹೊಸದೆಂದ ಕೂಡಲೇ ಎಂಥ ಕಾವ್ಯವೂ ಹೇಯವಲ್ಲ. ಸಜ್ಜನರು ಚೆನ್ನಾಗಿ ಪರೀಕ್ಷಿಸಿ, ಯಾವುದೊಂದು ನಿರ್ಣಯಕ್ಕೆ ಬರುತ್ತಾರೆ. ಮೂಢರು ಮಾತ್ರ ಗತಾನುಗತಿಕರಿರುತ್ತಾರೆ.

ಹೀಗೆ ನಮ್ಮ ಪ್ರಾಚೀನ ಕವಿಗಳ ಆತ್ಮಸ್ತುತಿಯು ಅಹಂಕಾರ ಮೂಲಕವಾಗಿರದೆ, ಕಾವ್ಯಜೀವನದ ಬಾಳ್ವಿಕೆಗೇ ಒಂದು ಉಪಾಯವೇಕಾಗಿರಬಾರದು?

ದೃಷ್ಟಿಸಂಗಮ

ಶ್ರೀ. ವೆಂಕಟರಾಯ ಪ್ರಭು, ಸಿ. ಎಂ. ಎ. ಮುಂಬಯಿ

ಶಬ್ದಗಳೆ ನಮಗಿಲ್ಲ! ವಾಕ್ಯ-ಅಲಂಕಾರಗಳ
ಜೇನು ಮನದಲಿ ಜನಿಸಿ ಸವಿಯ ರುಚಿ ನೋಡುತಿರೆ
ಹಲವೊಮ್ಮೆ ಹುಳಿಯಿಟ್ಟು ಮಾತಿನಲಿ ತೇಲಿಬರೆ
ಎನ್ನಿಪುದು ಭ್ರಾಂತಿಯಿದು, ಬುದ್ಧಿ ಜೇತನ ವಿಕಲ!
ಕಣ್ಣುಗಳು ನುಡಿಯುವುವು ಭಾವಗಳ ಬಾಯಿಯಿವು
ಎದೆಗವಿಗಳವು ಮನದ ಮೂಗು ಕೊಳೆ ಪರಿಕಿಪುವು
ಹೃದಯಜೀವನ ಜಗದ ಪಂಚೇಂದ್ರಿಯಂಗಳವು
ಕವಿಗೊಟ್ಟು ಮನದಿನಳಿಯದಿರೆ ಬರೆಯುವುವು!
ದೃಷ್ಟಿಗಳ ಸಂಗಮದಿ ಜೀವ ಪುಣ್ಯಕ್ಷೇತ್ರ-
ವಿದೆ; ಇಲ್ಲಿ ಒಲವ ನದಿಗಳು ಬಂದು ಒಂದೆನಿಸಿ
ಕೂಡುವವು ಸಂಧಿಸುತ, ಪಾವನಿಸೆ ಸೂರೆ ಹುಸಿ,
ಮಾನವತೆ ಯಾತ್ರಿಕನೆ ಮುಗಿಸಿಲ್ಲಿ ತನುಯಾತ್ರೆ!
ಹೃದಯಗಳ ಕಾಂತತ್ವ ಅಗಲಿಕೆಯ ತಡೆಗಟ್ಟಿ
ದೃಷ್ಟಿಗಳ ಧ್ರುವದಲ್ಲಿ ಧಾವಿಸಿವೆ ತುದಿಮುಟ್ಟಿ.

ಓ, ಕವಿಕುಲದ ಗುರುವೆ!*

'ಆನಂದಕಂದ'

೧

ಕವಿಕುಲದ ಗುರುವೆ, ರಸವಲಿಯ ವರನೆ, ಸೌಂದರ್ಯ ಕಲ್ಪತರುವೆ,
ರವಿ ನೂಡಿ ಮುಳುಗುವಲ್ಲೆಲ್ಲ ನಿನ್ನ ಸವಿಸೊಲ್ಲ ಸುಧೆಯನೆರೆವೆ!
'ದಿವಿ-ಭುವಿಯು ಹುದುಗಿಹುದು ಕವನದೊಳೇ' ಎಂಬುದನು
ಲೋಕಕೊರೆವೆ,
ಓ, ಅವಿತು ನಿಂತು ನೀ ನಿನ್ನ ಕೃತಿಗಳಲಿ ಮಾನವತೆಯನ್ನು ಕರೆವೆ!

೨

ಕಾಲಿದಾಸ ನೀನೆಂತು? ಒಂದೆ ಬಿರುನುಡಿಯ ಬಳಸಲಾರೆ—
ಕಾಲಿಮಾತೆ ನಿಖ್ಯಾತೆ, ರಕ್ಕಸರ ಬಲವ ಗೈದು ಸೆರೆಸೂರೆ!
ಸರಿಯೆ, ಅಹುದು ನೀ ಕಾಲಿದಾಸ; ಕೆಡುನುಡಿಯ ದನುಜವೃಂದ—
ತರೆದು ಕೆಡಹಿ ಕಾಪಿಟ್ಟೆ ಮಧುರವಚನಗಳ ನಲ್ಮೆಯಿಂದ.

೩

ಇದ್ದುದನ್ನು ಇದ್ದಂತೆ ಹೇಳಿದರು ನುಡಿಗದೆನಿತು ಕುಸುರು!
ಮೊದ್ದು ಕೊರಡುಮರಗಳಲಿ ತುಂಬಿಹೆಯೊ ತಳಿರಿನೆಳೆಯ ಹೆಸುರು.
ರೀತಿಗಾಗಿ ಸಾಹಿತ್ಯಲೋಕದಲಿ ನಿನ್ನ ಹೆಸರದೇ ಹೆಸರು....
ಮಾತಿನಿಂದೆ ಮಾನವರನು ನಿರ್ಮಿಸಿ ಅವರಿಗಿತ್ತೆ ನೀನುಸಿರು!

೪

ಭಾರತಧರ್ಮದ ತಿರುಳನುಂಡು ತೇಗಿರುವ ಶಿಲ್ಪಕಾರಾ,
ನೀ ರಚಿಸಿಹೆ ಆದರ್ಶಧರ್ಮಿಗಳ ಪ್ರತಿಮೆಯ ಸಂಸಾರಾ;
ಬುದ್ಧಿ-ಹೃದಯಗಳ ಬೆಲೆಯನರಿದು ಬೇಹಾರಗೈದೆ ಧೀರಾ,
'ಶುದ್ಧಹೃದಯನೇ ಮಾನವತೆಯ ಗುರಿ' ನಿನ್ನನುಭವ ಸಾರಾ!

೫

ರಘುಕುಲದ ಭೂಸರಾ ಅಜ-ದಿಲೀಪರನು ಅಮರರನಾಗಿಸಿದೆ—
ನಭವಲ್ಲಿ ಹಾರಿ ಜೆಲುವನ್ನು ತೂರುವಪ್ಸರೆಯ ಧರೆಗೆ ನೀ ಕರೆದೆ;
ಮಾನವರ ಹೃದಯದಾ ಮಧುರ ಮಧುವ ಸುರಮಾನಿನಿಯರಿಗೆರೆ-
ದೆರೆದೆ—
'ಆ ನಾಕದಿಂದ ಕೀಳೀಕೆ ಲೋಕವಿದು?' ಎಂದು ನಿರ್ಜರರಿಗೆಂದೆ.

೬

'ಈ ಲೋಕದಲಿಯೆ ಇಹುದಿಹುದು ಅಮೃತವನು; ಅದಕೆ ಹೆಸರು
ಪ್ರೇಮ—
ಸೋಲಿಲ್ಲವದಕೆ ನರ-ನಾರಿಯರಿದೆಗಳೆ ದಿವ್ಯಪ್ರೇಮದಾರಾಮ!
ಪ್ರೇಮದಮೃದ ಪಾನದಲಿ ನರರು ನಿರ್ಜರರಾಗುವುದಿದು ನೇಮ'—
ಈ ಮಾತನು ಮಾನವಕುಲಕರುಹಲು ಉದಿಸಿದೆ ಸತ್ಕವಿಸೋಮ!

೭

'ಕವಿಯೊಬ್ಬನಿಳೆಗೆ, ಅವ ಕಾಲಿದಾಸ' ಎನ್ನುವುದು ರಸಿಕಜನವೃಂದ—
ಕವಡೆಲ್ಲ ನುಡಿಯು, ಇನ್ನಾರ ಕೃತಿಯಲಿದೆ ನಿನ್ನ ಬಂಧ-ಸುಚ್ಛಂದ?
ನಿನ್ನ ಯಕ್ಷ-ಯಕ್ಷಿಣಿಯ ಬೇಟ-ಕೂಟಗಳ ಚಿತ್ರದೊಂದಂದ....
ಇನ್ನು ಎಲ್ಲಿ ದೊರೆತಾವು, ಕವಿಯೆ ನೀನಹುದು ಪ್ರತಿಭೆಯುಕ್ಕಂದ!

೮

ಶಕುಂತಲೆಯ ಪ್ರೇಮಮರ್ಮ ಬಲ್ಲನೇನು ಬ್ರಹ್ಮ?
ಅನಸೂಯೆಯ ಸ್ನೇಹಧರ್ಮ ಕವಿಯೆ ನಿನ್ನ ಕರ್ಮ!
ಪ್ರಿಯಂವದೆಯ ಚತುರವಚನರಚನೆಗಿಲ್ಲ ಸರಿಸಮ—
ಗೌತಮಿಯಾ ಮನದರಳಿಕೆ ಎಂತಹದದು—ಅನುಪಮ!

೯

ಬಾರ ಬಾರ ಕವಿಕುಲಗುರು, ಬಾರ ಮರಳಿ ಬಾರೈ!
ಭಾರತದಲಿ ಮತ್ತೆ ಜನಕೆ ಪ್ರೇಮಸಾಕ ಬೀರೈ!
ಕಾರಿರುಳಿನ ದಾರಿಗರಿಗೆ ದಿವ್ಯದೀಪ ತೋರೈ—
ಭಾರತೀಯ ಕಲಾಧ್ವಜಕೆ ನವವರ್ಣನ ತಾರೈ!

---

* ದಿನಾಂಕ ೧೪-೧೧-೫೫ರಂದು ದಿಲ್ಲಿಯ ಆಕಾಶವಾಣಿ ಕೇಂದ್ರದಲ್ಲಿ ಮಹಾಕವಿ ಕಾಲಿದಾಸನ ವಿಷಯಕವಾದ ಕೆಲವು ಕಾರ್ಯಕ್ರಮಗಳನ್ನು ಪ್ರಸಾರಿಸಲಾಯಿತು. ಆ ಕಾರ್ಯಕ್ರಮದಲ್ಲಿ ಒಳಗೊಂಡ ಕನ್ನಡಕವಿತೆಯಿದು. —ಸಂ.

ಇದೂ ಒಂದು ಸ್ವಭಾವ

(ಒಂದು ನವ್ಯ ಕಥೆ)

ಶ್ರೀ. ವೆಂ. ಮು. ಜೋಶಿ, ಧಾರವಾಡ

ಶ್ರೀಪಾದರಾಯನಂತಹ ಸ್ವಭಾವ ಸ್ಥಿತಿಯೊಬ್ಬ ಸಾಮಾನ್ಯ ಮನುಷ್ಯನಲ್ಲಿಯೂ ಅಂಶರೂಪದಿಂದ ಇದ್ದೇ ಇರುವುದು. ಆದರೆ ಶ್ರೀಪಾದರಾಯರು ತಮ್ಮ ಸ್ವಭಾವವನ್ನು ಒಂದು ಗುಣನೆಂದೇ ಬೆಳೆಸಿಕೊಂಡಿದ್ದರು. ಹೃದಯಸಹಜ ಧರ್ಮ ಕೊನೆಗೆ ಶ್ರೀಪಾದರಾಯರ ಸ್ವಭಾವವನ್ನು ಸೋಲಿಸಿಬಿಟ್ಟಿತು.

ಮನೆಯ ಮುಂಬದಿಯಲ್ಲಿ ಕೋಳಿ ಕೂಗುತ್ತಿತ್ತು. ಆಗೆಲ್ಲೋ ಶ್ರೀಪಾದರಾಯರಿಗೆ ಎಚ್ಚರು. ಎಚ್ಚರಿಂದರೆ ನಿದ್ದೆಯಿಂದ ಎಚ್ಚರಾದುದಲ್ಲ; ಮೈನೇಲೆ ಎಚ್ಚರು ಬಂದದ್ದು. ಆಗ ಹಾಸಿಗೆಯಲ್ಲಿ ಅವರು ಮಲಗಿದ್ದರು ಎನ್ನುವುದಕ್ಕಿಂತಲೂ, ಹಾಸಿಗೆಯ ಮೇಲೆ ಕುಳಿತಿದ್ದರು—ಎಂದು ಹೇಳಿದರೆ ಸರಿಯಾದೀತು. ಗೋಡೆಗೆ ಆನಿಸಿಟ್ಟ ತಕ್ಕೈಗೆ ಆತು ಕುಳಿತ ಶ್ರೀಪಾದರಾಯರು, ಇನ್ನೂ ಹಾಗೆಯೇ ಕುಳಿತಿದ್ದಾರೆ. ಮೈಯನ್ನು ಅಲುಗಿಸಿಲ್ಲ; ಕೈಯನ್ನು ಅಲುಗಿಸಿಲ್ಲ. ಉಸಿರಾಡಿಸುವ ಕ್ರಿಯೆಯೊಂದು ನಡೆದಿದೆ ಜೀವ ಇರುವ ತನಕ ಅದು ನಡೆಯಲೇ ಬೇಕಲ್ಲವೇ? ಆದರೂ ಶ್ರೀಪಾದರಾಯರು ಉಸಿರಾಡಿಸುವುದರಲ್ಲಿಯೇ ಎಚ್ಚರು ವಹಿಸುತ್ತಿದ್ದರು. ಉಸಿರಾಡಿಸುವುದರಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೆ, ಎಲ್ಲಿ ತಮ್ಮ ಪತ್ನಿಗೆ ಎಚ್ಚರಾಗುವುದೋ ಎಂಬ ಭಯ. ಇದ್ದುದಿದ್ದಂತೆಯೆ ಮೆಲ್ಲನೇ ಕೊರಳನ್ನು ತಿರುಗಿಸಿ, ಬದಿಯಲ್ಲಿ ಮಲಗಿದ ತಮ್ಮ ಪತ್ನಿ ಲೀಲಾಬಾಯಿಯವರತ್ತ ನೋಡಿದರು. ನೋಡಿಯೇ ನೋಡಿದರು—ಹೀಗೆಯೇ ಹಿಂದೊಂದು ಸಲ ನೋಡಿದ್ದರು—ಅದು ಶೋಭನಪ್ರಸ್ಥದ ದಿನ—ಆರತಿ ಮುಗಿದ ನಂತರ. ಇಡಿಯ ದಿನದ ಓಡಾಟದಲ್ಲಿ ಬಳಲಿ ಬೆಂಡಾದ ಲೀಲಾಬಾಯಿ, ನೆರೆದ ಜನರು ಕೋಣೆ ಬಿಟ್ಟು ಹೊರಗೆ ಹೋದಾಕ್ಷಣ, ಬಾಗಿಲಿಗೆ ಚಿಲಕ ಹಾಕಿ ಮೈತುಂಬ ಬೆವರು, ಜಂಜಿ, ಮಾತನಾಡದೆ ಬೆಪ್ಪಗೆ ಹಾಸಿಗೆಯ ಮೇಲೆ ಉರುಳಿದರು. ಉರುಳಿದಂತೆಯೆ ಗೊರಕೆಗೆ ಪ್ರಾರಂಭಿಸಿದರು. ಅದು ಸುಳ್ಳು ನಿದ್ದೆ—ಎಂಬುದನ್ನು ಶ್ರೀಪಾದರಾಯರು ಕಂಡುಹಿಡಿದಿದ್ದರು; ಮೆಲ್ಲಗೆ ಒಂದು ಕೈಯಿಂದ ಲೀಲಾಬಾಯಿಯ ಮೈಮೇಲಿನ ಚಾದರವನ್ನು ಒರೆಗೆ ಸರಿಸಿದರು. ಲೀಲಾಬಾಯಿಗೆ ಎಚ್ಚರಿದ್ದಿತು. ಆದರೆ ನೋಡುವುದು ಹೇಗೆ—ಮುಚ್ಚಿದ ಕಣ್ಣನ್ನು ತೆರೆಯುವುದು ಹೇಗೆ?—ಹಾಗೆ ಮಾಡಿದರೆ ಸಮಂಜಸವಾಗಲಾರದು. ಶ್ರೀಪಾದರಾಯರು ಚಾದರವನ್ನು ಒರೆ ಮಾಡುವಾಗ, ಆ ಚಾದರಿನ ಜತೆಯಲ್ಲಿ ಎದೆಯ ಮೇಲಣ ಸೆರಗೂ ಅರಿವಾರಿತ್ತು. ಕಣ್ಣು ಮುಚ್ಚಿಕೊಂಡಿದ್ದರೂ ಸೆರಗು ಜಾರಿದ್ದು ಲೀಲಾಬಾಯಿಗೆ ತಿಳಿದಿತ್ತು. ಆದರೆ ಸರಿಪಡಿಸುವುದೆಂತು? ಸರಿಪಡಿಸಿಕೊಂಡರೆ ತನ್ನ ನಿದ್ದೆಯ ಸೋಗು ತಿಳಿಯುವುದಲ್ಲ! ಕಡೆಗೆ ತನ್ನನ್ನು ಅವರು ಮಾತನಾಡಿಸುವರು. ಮಾತನಾಡಿದ ಮೇಲೆ ಸುಮ್ಮನಿರಲಾಗುವುದೆ? ತಾನೂ ಪ್ರತಿಯಾಗಿ ಮಾತನಾಡಲೇಬೇಕಾಗುವುದು. ಮಾತನಾಡದೇ ಇದ್ದರೆ ಅದೂ ಒಂದು ತಪ್ಪು! ಇವೆಲ್ಲ ಕಷ್ಟಗಳಿಂದ ಪಾರಾಗುವುದಕ್ಕೆ ಒಂದೇ ಮದ್ದು—ಅದೇ ನಿದ್ದೆ. ಆ ಸೋಗಿನಲ್ಲಿ ಸೆರಗು ಸರಿದರೂ ಸರಿಯೇ.—ಶ್ರೀಪಾದರಾಯರು ಒಂದೈದು ನಿಮಿಷ ಲೀಲಾಬಾಯಿಯನ್ನು ಹಾಗೆಯೆ ದೃಷ್ಟಿಸತೊಡಗಿದರು. ಸುಳ್ಳು ನಿದ್ರೆಯಲ್ಲಿಯ ಮುಖಕ್ಕೆ ಸುವರ್ಣಕಾಂತಿ ಬಂದಿತ್ತು. ತುಂಬು ಗಲ್ಲ, ಅರ್ಧೋನ್ಮಿಲಿತ ನೇತ್ರ, ಕೊರೆದ ಗೆರೆಯಂತೆ ಕಾಣುವ ಹುಬ್ಬು, ನೀಳವಾದ ಮೂಗು, ಶ್ವಾಶೋಛ್ವಾಸದ ವಿರಳಿತಗಳು. ಮೈಕೈಯಿಂದ ತುಂಬಿಕೊಂಡ ಲೀಲಾಬಾಯಿಯ ದೇಹವನ್ನು ಅಂದು ನೋಡಿದ ಶ್ರೀಪಾದರಾಯರು, ಇಂದೂ ನೋಡುತ್ತಿದ್ದಾರೆ. ಆದರೆ ಅಂದಿನ ಲೀಲಾಬಾಯಿ ಇಂದಿಲ್ಲ. ಅಂದಿನ ಶ್ರೀಪಾದರಾಯರೂ ಇಂದಿಲ್ಲ ದಿದ್ದರೂ, ದೃಷ್ಟಿ ಮಾತ್ರ ಅದೇ ಇದೆ.

ಮದುವೆಯಾಗಿ ಮೂವತ್ತು ವರ್ಷಗಳಾದರೂ, ಶ್ರೀಪಾದರಾಯರ ಶಿಸ್ತಿನಲ್ಲಿ ಲವಲೇಶನಾದರೂ ಬದಲಾವಣೆಯಾಗಿರಲಿಲ್ಲ. ಶ್ರೀಪಾದರಾಯರಿಗೆ ತಮ್ಮ ಶಿಸ್ತಿನ ಬಗ್ಗೆ ಎಲ್ಲಿಲ್ಲದ ಹೆಮ್ಮೆ. ಶಿಸ್ತಿನ ಕುಸ್ತಿಯಲ್ಲಿ ಅವರು ಯಾರನ್ನೂ ಎದುರಿಸಬಲ್ಲರು. ಶಿಸ್ತಿನ ಕುಸ್ತಿಯಲ್ಲಿಯೇ ಅವರು, ತಮ್ಮ ತಂದೆಯನ್ನು ತ್ಯಜಿಸಿದ್ದರು. ತಾಯಿಯನ್ನು ಬೈದಿದ್ದರು. ಶಾಲೆಯ ಶಿಕ್ಷಣಕ್ಕಾಗಿ ಅಣ್ಣನ ಮನೆಯಲ್ಲಿ ಅನ್ನಕ್ಕಾಗಿ ಇರುವ ಪ್ರಸಂಗ ಬಂದರೂ, ಅತ್ತಿಗೆಯ ಜತೆಯಲ್ಲಿ ಒಗರಿನಿಂದಲೇ ಇದ್ದರು. ಅಣ್ಣ ದೇವಪ್ರಿಯ ವ್ಯಕ್ತಿ; ತಮ್ಮನ ಜಗತ್ತಿನಲ್ಲಿ ದೇವರೇ ಇಲ್ಲ. 'ಎಲ್ಲವೂ ಸುಳ್ಳು' ಎಂದು ವಾದಿಸುವ ವಿಶಿಷ್ಟ ವ್ಯಕ್ತಿಯದು. ಶ್ರೀಪಾದರಾಯರು ಈ ಹಟವನ್ನು 'ಶಿಸ್ತು'

ಎಂದು ತಪ್ಪು ತಿಳಿವಳಿಕೆ ಮಾಡಿಕೊಂಡಿದ್ದವರು. ಈ ತಪ್ಪು ತಿಳಿವಳಿಕೆಯಲ್ಲಿಯೇ ಬೆಳೆಯುತ್ತಿತ್ತು ಆ ಜೀವ. ತಕ್ಕೆಗೆ ಒರಗಿಕೊಂಡೇ ಶ್ರೀಪಾದರಾಯರು ಕೆಲವು ಹಳೆಯ ಪ್ರಸಂಗಗಳನ್ನು ನೆನಸಿಕೊಂಡು ಬಾಯಿ ಜೆಪ್ಪರಿಸಿಕೊಳ್ಳತೊಡಗಿದರು:

ಅಣ್ಣ ಒಂದು ದಿನ ಪೂಜೆಗೆ ಕುಳಿತುಕೊಂಡಿದ್ದರು. ಬದಿಯಲ್ಲಿ ತಾನು ಕೆಲಸವಿಲ್ಲದೆ ನಿಂತಿದ್ದ. ಮೇಲಿಂದ ಹಲ್ಲಿಯೊಂದು ಲೊಟ್ಟನೇ ಕೆಳಗೆ ಬಿದ್ದಿತು. ಸರಿ, ತಾನು ಅದನ್ನು ಕೈಕೋಲಿನಿಂದ ಕೊಂದುಬಿಟ್ಟ. ಅಣ್ಣ ಸುಮ್ಮನೇ ಕಣ್ಣು ಮುಚ್ಚಿಕೊಂಡು 'ಶಿವ ಶಿವಾ' ಎಂದರು. ಅತ್ತಿಗೆ ಹೌಹಾರಿ ಚೀರಿದಳು: "ಅಯ್ಯೋ ಪಾಪ! ಹಲ್ಲಿಯನ್ನು ಕೊಲ್ಲುತ್ತೀರಾ? ನಿಮಗೆ ಬುದ್ಧಿ ಇಲ್ಲವೇ?" ತಾವು ತುಂಬ ರೇಗಿಗೆದ್ದ ಗುಡುಗಾಡಿದ್ದರು:—"ನೀವು ಹೆಣ್ಣು ಮಕ್ಕಳು; ನಿಮಗೆ ಮೊಣಕಾಲಮೇಲೆ ಬುದ್ಧಿ ಇಲ್ಲ. ಹುಳುಹುಪ್ಪಡಿ ಮನೆಯಲ್ಲಿ ಇರಕೂಡದು. ಹುಳುಗಳನ್ನು ಕಂಡರೆ ಕೊಲ್ಲಲೇಬೇಕು. ಹಲ್ಲಿಯನ್ನು ಕೊಂದರೆ ಪಾಪವಂತೆ! ಎಲ್ಲಿಯ ಪಾಪ? ಯಾರು ಹೇಳಿದರು? ಆದರೆ ಅತ್ತಿಗೆ, ನೀವು ನನ್ನ ಅವಮಾನ ಮಾಡಿದಿರಿ. ನಿಮಗೆ ಬುದ್ಧಿ ಇಲ್ಲವೇ?—ಎಂದಿರಿ ಅದಕ್ಕಾಗಿ ನೀವು ನನ್ನ ಕ್ಷಮೆ ಕೇಳಲೇಬೇಕು, ಇಲ್ಲದಿದ್ದರೆ ಈಗಲೇ ಈ ಮನೆಯನ್ನು ಬಿಡುವೆ" ಪೂಜೆ ಮಾಡುತ್ತ ಕುಳಿತ ಅಣ್ಣ ನಡುವೆ ಬಿದ್ದು ಹೇಳಿದರು: "ತಂದೆಯ ಜತೆ ಜಗಳವಾಡಿ ದೂರವಾದ ಮಗು; ಈಗ ತನ್ನಿಂದಲೂ ದೂರವಾಗುತ್ತಾನಲ್ಲ" ಎಂದು ತಮಗೆ ತಿಳಿಯಪಡಿಸಿದರು. ತಾವು ಒಪ್ಪಲಿಲ್ಲ. ತಮ್ಮ ಹಟದ ಶಕ್ತಿಯನ್ನು ಅರಿತ ಅತ್ತಿಗೆ 'ಕ್ಷಮೆ ಮಾಡಪ್ಪಾ!' ಎಂದರು. ಆಗಲೂ ತಾವೊಪ್ಪಲಿಲ್ಲ. 'ಕಾಗದದ ಮೇಲೆ ನೀವು ಕ್ಷಮಾಯಾಚನೆ ಬರೆದುಕೊಡಬೇಕು' ಎಂದರು. ಅದರಂತೆ ಅತ್ತಿಗೆ ಬರೆದುಕೊಟ್ಟರು. ಆ ಕಾಗದ ಇನ್ನೂ ತಮ್ಮ ಬ್ಲೈದೆ—

ಈ ಪ್ರಸಂಗದ ನೆನಪಿನಿಂದ ಶ್ರೀಪಾದರಾಯರ ಮುಖದ ಮೇಲೆ ಗೆಲವಿನ ನಗು ಮೂಡಿತು. ಪೆನ್ಸನ್ ಪಡೆವ ಅವರ ಮುಖದ ಮೇಲೆ ಮುರುಕು ಹರುಕು ಗೆರೆಗಳು ಮೂಡಿದ್ದರೂ, ಆ ನಗು ನವತಾರುಣ್ಯವನ್ನು ತಂದಿರಿಸಿದಂತೆ ಭಾಸವಾಗುತ್ತಿತ್ತು. ಆ ಗೆಲುನಗೆಯ ಉಬ್ಬಿನ ಮಬ್ಬಿನಲ್ಲಿಯೆ, ಹುತ್ತೊಮ್ಮೆ ಲೀಲಾಬಾಯಿಯತ್ತ ಮುಖ ಹೊರಳಿಸಿದರು—

—ಲೀಲಾಬಾಯಿ ಶಾಂತರಾಗಿ ನಿದ್ರಿಸುತ್ತಿದ್ದರು ಇಂದಿನ ನಿದ್ರೆ ಸೋಗಿನದಾಗಿರಲಿಲ್ಲ. ಎದೆಯ ಮೇಲಣ ಸೆರಗೂ ದೂರ ಸರಿದಿತ್ತು. ಸೆರಗು ಮುಚ್ಚಿಕೊಳ್ಳಲೇಬೇಕೆನ್ನುವ ಸ್ಥಿತಿಯನ್ನು ಎಚ್ಚರಿಸಿ ನಿಂತಿತ್ತು. ನೀಳವಾದ ಮೂಗು ನೀಳವಾಗಿಯೇ ನಿಂತಿದ್ದರೂ, ನೀರಸವಾಗಿದೆ. ಕೊರೆದ ಗೆರೆಯಂತಿದ್ದ ಹುಬ್ಬುಗಳು, ಹಣೆಯ ಮೇಲೆಲ್ಲ ಮೂಡಿದ ಆಳವಾದ ಗೆರೆಗಳಲ್ಲಿ ಒಂದಾಗಿ, ತನ್ನತನವನ್ನು ಕಳೆದುಕೊಂಡಿದ್ದುವು. ಆಗಲವಾಗಿದ್ದ ಹಣೆ, ಸಮವಾಗಿ ಉಳಿದಿರಲಿಲ್ಲ; ಬಿತ್ತುನ ಮೊದಲು ನೇಗಿಲು ಹೊಡೆದ ಎರೆಯ ಹೊಲವಾಗಿತ್ತು. ಗಲ್ಲಗಳೇನೋ ಇದ್ದುವು. ದೇಹವಿತ್ತೆಂದ ಮೇಲೆ ಗಲ್ಲವಿರಲೇಬೇಕು. ಆದರೆ ತುಂಬುತನ ಮಾಯವಾಗಿತ್ತು. ಗಾಣ ತಿರುವಿ ಎಣ್ಣೆ ತೆಗೆದ ನಂತರ, ಉಳಿದ ಹಿಂಡಿಯಂತೆ, ಚಪ್ಪಟೆ ಬಿದ್ದಿದ್ದುವು ಗಲ್ಲ. ಅಂತೂ ಹಾಸಿಗೆಯಲ್ಲಿ ಒಂದು ಎಲುಬಿನ ಹಂದರವನ್ನು ನುಲಗಿಸಿದಂತಿತ್ತು. ಈ ಅಮಂಗಳ ದೇಹಕ್ಕೆ ಹಿನ್ನೆಲೆಯ ಸೌಂದರ್ಯವಾಗಿ, ಹಾಸಿಗೆಯ ಬದಿಯಲ್ಲಿ ಎರಡು ಮೂರು ಔಷಧಿಯ ಸೀಸೆಗಳು, ತೇಲುಗಣ್ಣು ಬಿಡುತ್ತ ನಿಂತಿದ್ದುವು.

ಇದನ್ನೆಲ್ಲ ನೋಡುತ್ತಿರುವಂತೆ ಶ್ರೀಪಾದರಾಯರು ಮತ್ತೆ ಮುಖವನ್ನು ತಿರುಗಿಸಿದರು; ಮತ್ತೆ ತಮ್ಮ ಶಿಸ್ತಿನ ಬಗೆಗೇ ಅವರು ಹೆಮ್ಮೆಪಟ್ಟುಕೊಳ್ಳತೊಡಗಿದರು. ವಯಸ್ಸು ಏರಿದಂತೆ ನಿದ್ದೆ ಅರುತ್ತ ನಡೆಯುತ್ತದೇನೋ! ಬೆಳಕು ಇದ್ದಾಗ ಉಳಿದ ಕೆಲಸವಿಲ್ಲ; ಕತ್ತಲಾದಾಗ ಹಾಸಿಗೆಯಮೇಲಿದ್ದರೂ ನಿದ್ದೆಯಿಲ್ಲ. ಈ ಸ್ಥಿತಿಯಲ್ಲಿ ಇದ್ದರು ಶ್ರೀಪಾದರಾಯರು. ಆದರೆ ಇಂದು ಇಡಿ ರಾತ್ರಿ ಅವರಿಗೆ ನಿದ್ರೆ ಬಾರದಿದ್ದುದಕ್ಕೆ ಒಂದು ಪ್ರಬಲ ಕಾರಣವಿತ್ತು. ಅವರ ಸಾಂಸಾರಿಕ ಜೀವನದಲ್ಲಿಯ ಮೂವತ್ತು ವರುಷಗಳ ದೀರ್ಘಾವಧಿಯಲ್ಲಿ, ಅವರು ಸೋಲು ಕಂಡದ್ದು ನಿನ್ನೆಯೇ. ಈ ಮೂವತ್ತು ವರುಷಗಳ ಸುದೀರ್ಘ ಅವಧಿಯಲ್ಲಿ, ಎಂದೂ ಎದುರು ಉತ್ತರಿಸದ ಲೀಲಾಬಾಯಿ, ಅವರ ಮೇಲೆ ಹರಿಹಾಯ್ದಿದ್ದರು. "ನನ್ನ ಮಗು ನಿರ್ಮಲೆಯನ್ನು ನನಗೊಂದೇ ಸಲ ಭೆಟ್ಟಿ ಮಾಡಿಸಿರಿ; ನಾನು ಸಂತೋಷದಿಂದ ಸಾಯುತ್ತೇನೆ. ನಿಮ್ಮ ಹಟ ಹಾಳಾಯಿತು!"

—'ನಿಮ್ಮ ಹಟ ಹಾಳಾಯಿತು' ಇದೊಂದು ಹಿಮಾಲಯದಷ್ಟು ದೊಡ್ಡ ಶಬ್ದವಾಗಿತ್ತು ಲೀಲಾಬಾಯಿಗೆ. ಅದರ ಇಮ್ಮಡಿ ಮುಮ್ಮಡಿ ಭಾರವಾಗಿತ್ತು ಶಬ್ದ ಶ್ರೀಪಾದರಾಯರಿಗೆ. ಸೋಲರಿಯದ ಜೀವ, ಸಹಿಸೀತೆ ಈ ಅವಮಾನ? ರಾಯರು ಬಲವಾಗಿ—ಫಳೀರನೇ—ಲೀಲಾಬಾಯಿಯ ಕೆನ್ನೆಗೆ ಏರಿಸಿದರು. ರಭಸದಿಂದ ಪುಟಿವ ಕಾರಂಜಿ ಕುಸಿದು ಬಿದ್ದಂತೆ, ಲೀಲಾಬಾಯಿ ಹಾಸಿಗೆಯಲ್ಲಿ ಕುಸಿದು ಬಿದ್ದರು. ದೇಹ ಕುಸಿದುಬಿದ್ದರೂ ಬಾಯಿ ಕುಸಿಯಲಿಲ್ಲ; "ನಿರ್ಮಲೆ. ನನ್ನ ನಿರ್ಮಲೆ, ಒಮ್ಮೆ ನಿನ್ನನ್ನು ನೋಡಿ ಸಾಯುವೆನೆ! ಬರಲಾರೆಯಾ?" ಇದೊಂದೇ ಪದ—ಇದೊಂದೇ ರಾಗವನ್ನು ಅವರ ಬಾಯಿ ನುಡಿಯುತ್ತಿತ್ತು.

ಈ ಕಡಿನೈದು ದಿನಗಳಿಂದಲೂ ವಿಷಮಜ್ವರದಿಂದ ತೊಳಲಾಡುವ ಲೀಲಾಬಾಯಿ ತನ್ನ ತಲೆಯನ್ನು ಕಳೆದುಕೊಂಡರು. ಆಗಲೇ ಶ್ರೀಪಾದರಾಯರು ವೈದ್ಯರನ್ನು ಕರೆಯಿಸಿ ಶುಶ್ರೂಷೆ ನಡೆಸಿದರು. ವೈದ್ಯರೂ ಔಷಧಿಕೊಟ್ಟು ನಡೆದರು; ಅವರೂ ಲೀಲಾಬಾಯಿಯ ನರಳಾಟ ನಿಲ್ಲಲಿಲ್ಲ. ಇದುವೇ ಕಾರಣದಿಂದ ಶ್ರೀಪಾದರಾಯರು ನಿದ್ರೆ ಮಾಡುವಂತಿರಲಿಲ್ಲ. ಅವರೆ ಮನೆಯ ಮುಂಬಾಗಿಲಿನ ಕೋಳಿ ಕೂಗುವ ಮುನ್ನ, ಒಂದು ಗಂಟೆ ಲೀಲಾಬಾಯಿಗೆ ಜೊಂಪು ಹತ್ತಿರಬೇಕು; ಅವರ ನರಳಾಟ ಆಗ ನಿಂತಿತ್ತು. ಅವರ ನರಳಾಟ ನಿಂತ ಮೇಲೆ, ತಾವೂ ಮಲಗಬೇಕೆಂದು ಶ್ರೀಪಾದರಾಯರು

ನಿರ್ಧರಿಸಿದ್ದರು. ಆದರೆ ಅವರ ನರಳಾಟ ನಿಲ್ಲುವ ವೇಳೆಗೆ ಇವರ ನಿದ್ರೆಯ ಅವಧಿ ವಿಸ್ತರಿತ್ತು. ಸೂರ್ಯನು ಬರುವವರೆಗೂ ಸಮಯವನ್ನು ಸರಿಸುವುದು ಹೇಗೊ—ಎಂಬುದೇ ಅವರಿಗೆ ತಿಳಿಯದಾಯಿತು. ಹಾಗೆಯೆ ನಿನ್ನೆಯ ಘಟನೆಯನ್ನು ನೆಲುಕುಹಾಕತೊಡಗಿದರು:

—ಮೂವತ್ತು ವರುಷದ ಸುದೀರ್ಘ ಅವಧಿಯಲ್ಲಿ ತನ್ನ ಹೆಂಡತಿ ತಮಗೆ ಎದುರಾಡುವುದೆಂದರೆ ಏನು —ಅವಳಿಗೆ ತಾವೆಂದೂ ಆ ಅಧಿಕಾರವನ್ನು ಕೊಟ್ಟಿರಲಿಲ್ಲ. ನೋಡಿದರೆ ಲೀಲಾಬಾಯಿ ಒಬ್ಬ ಅಧಿಕಾರಿಯ ಮಗಳು. ಅವಳ ತಂದೆಯ ಅಧಿಕಾರದಷ್ಟೆ ತನ್ನದೂ ಅಧಿಕಾರ ಕಚೇರಿಯಲ್ಲಿ ನಡೆಯುತ್ತಿತ್ತು. ಸಮಸ್ಥಾನದಲ್ಲಿದ್ದರೂ ಅವರು ತನಗಿಂತ ಹಿರಿಯರು. ಆ ಹಿರಿಯತನದ ಹೆಮ್ಮೆಯಲ್ಲಿ, ತಾನು ಅವರಿಗೆ ತಲೆ ತಗ್ಗಿಸಬೇಕೆನ್ನುವ ಅವರ ಮನೋವೃತ್ತಿಯಲ್ಲಿ ನೇಲಿಂದನೇಲೆ ನಿರ್ಮಾಣವಾಗುತ್ತಿರುವ ಧ್ವನಿಯನ್ನು ತಾನೆಂದೋ ಕಂಡುಹಿಡಿದು, ಆದರಂತೆ ಅವರಿಗೆ ಸ್ಪಷ್ಟ ಎದುರು ಬಾದಿಸಿಬಿಟ್ಟಿದ್ದಾಳೆ. ಅದೇ ಜಗಳ ಬೆಳೆದು, ಯುಗಯುಗದ ವೈರಿಗಳಂತಾದೆವು. ಇವಳಿಗೆ ತವರುಮನೆಯ ದಾರಿಯನ್ನು ಶಾಶ್ವತನಾಗಿ ಬಂದುಮಾಡಿದೆ. ಇವಳು ಅಗಲೂ ತೆಪ್ಪಗಿದ್ದಳು. ನನ್ನ ಕಣ್ಸನ್ನೆಯ ಮೇಲೆ ಉಸಿರನ್ನು ಒಳಗೆ ತೆಗೆದುಕೊಳ್ಳುತ್ತಿದ್ದಳು; ಅದೇ ಕಣ್ಸನ್ನೆಯ ಮೇಲೆ ಉಸಿರನ್ನು ಹೊರಗೆ ಬಿಡುತ್ತಿದ್ದಳು. ಅಂತಹ ಅವಳು ಹೀಗೆ ನಿನ್ನೆ ಉದ್ಧಟತನದಿಂದ ವರ್ತಿಸುವುದೆಂದರೆ—"

ಈ ಸಿಟ್ಟಿನ ಭರದಲ್ಲಿ, ಮತ್ತೊಂದೇಟನ್ನು ಕೆನ್ನೆಗೆ ಕೊಡಲೆ—ಎಂದು ಶ್ರೀಪಾದರಾಯರು ಕೈಯನ್ನು ಮೇಲಕ್ಕೆತ್ತಿದ್ದರು; ಆದರೆ ಕೈ ತಡವರಿಸಿತು. ತಡವರಿಸಿದ ಕೈ ಸರಿದಾಡತೊಡಗಿತು. ಕೈಗೆ ಗೋಡೆಗೆ ತಗುಲುಹಾಕಿದ ಫೋಟೋ ತಾಗಿತ್ತು. ಹಾಗೆಯೇ ಫೋಟೊವನ್ನು ಇಳಿಸಿ ತಮ್ಮೆದುರಿನಲ್ಲಿ ಹಿಡಿದುಕೊಂಡರು ಬದಿನು ಲ್ಲಿದ್ದ ಕಂದೀಲನ್ನು ಎಡಗೈಯಿಂದ ದೊಡ್ಡದನ್ನಾಗಿ ಮಾಡಿದರು. ಆ ದೀಪದ ಬೆಳಕಿನಲ್ಲಿ ಆ ಫೋಟೋವನ್ನು ಹಿಡಿದು ದಿಟ್ಟಿಸತೊಡ ಗಿದರು. ಅದು ಅವರ ಮಗಳು ನಿರ್ಮಲೆಯ ಫೋಟೊ. ಒಬ್ಬಳದೇ ಅಲ್ಲ. ಗುಂಡು-ಹೆಂಡಿರದು. ಮಗಳ ಲಗ್ನವಾದ ದಿನ ತೆಗೆದ ಫೋಟೊ ವದು. ಫೋಟೊವನ್ನು ನೋಡುತ್ತಿರುವಂತೆ ಶ್ರೀಪಾದರಾಯರಿಗೆ ತಮ್ಮ ಮಗಳ ಲಗ್ನದಲ್ಲಿ ನಡೆದ ಪ್ರಸಂಗಗಳು ಒಂದರಮೇಲೊಂದು ನೆನಪಾಗತೊಡಗಿದುವು:

ಪುಸ್ತಕ ಪ್ರಕಾಶಕರಲ್ಲಿ:

'ಆನಂದಕಂದ'ರ ಕೆಳಗೆ ಕಾಣಿಸಿದ ಪುಸ್ತಕಗಳ ಹಿಂದಿನ ಆವೃತ್ತಿಯ ಪ್ರತಿಗಳೆಲ್ಲ ತೀರಿಹೋಗಿವೆ. ಪೇಟೆಯಲ್ಲಿ ಅವು ಸಿಕ್ಕದಂತಾಗಿವೆ. ಆದುದರಿಂದ ಅವುಗಳನ್ನು ಮತ್ತೆ ಮುದ್ರಿಸಿ ಪ್ರಕಟಿಸಬೇಕಾಗಿದೆ. ಪ್ರಕಟಿಸಲು ಇಷ್ಟವಿರುವ ಪ್ರಕಾಶಕರು ಪತ್ರವ್ಯವಹಾರಮಾಡಿ ವ್ಯವಹಾರವನ್ನು ಹೊಂದಿಸಿಕೊಳ್ಳಬೇಕು.

ಪ್ರಕಟಿಸಬೇಕಾದ ಪುಸ್ತಕಗಳು

ಸುದರ್ಶನ	(ಸಾಮಾಜಿಕ ಕಾದಂಬರಿ)	ಸುಮಾರು ೧೫೦ ಪುಟಗಳು
ರಾಜಯೋಗಿ	(ಐತಿಹಾಸಿಕ ಕಾದಂಬರಿ)	ಸುಮಾರು ೧೯೨ ಪುಟಗಳು
ನನ್ನ ಬದುಕು	(ಕಥಾಸಂಕಲನ)	ಸುಮಾರು ೧೨೦ ಪುಟಗಳು
ಮಾತನಾಡುವ ಕಲ್ಲು	(ಕಥಾಸಂಕಲನ)	ಸುಮಾರು ೧೨೦ ಪುಟಗಳು
ಅರುಣೋದಯ	(ಕವನ ಸಂಕಲನ)	ಸುಮಾರು ೫೦ ಪುಟಗಳು
ವಿರಹಿಣಿ	(ಕವನ ಸಂಕಲನ)	ಸುಮಾರು ೮೦ ಪುಟಗಳು
ಒಡನಾಡಿ	(ಕವನ ಸಂಕಲನ)	ಸುಮಾರು ೬೪ ಪುಟಗಳು

ಸಂಪಾದಕ 'ಜಯಂತಿ' ಧಾರವಾಡ

—ಮದುವೆ ಎಂದಮೇಲೆ ಜಗಳವಿರಲೇಬೇಕು; ಎಂದರಿನೇ ಸೊಗಸು. ಆದರೆ, ಜಗಳ ಈ ಅವಸ್ಥೆಗೆ ನುಟ್ಟಬಾರದಾಗಿತ್ತು. ಆತ ನನ್ನ ಅಳಿಯ; ಆದರೇನಾಯಿತು? ಬಾಯಿಗೆ ಬಂದಂತೆ ಬೈಯಬೇಕೆ?—"ನೀನು ಮನುಷ್ಯನಲ್ಲ, ಕ್ರೂರ ಪಿಶಾಚಿ—ತಾಯಿ ಸಾಯುವಾಗಲೂ, ನಿನ್ನ ಹೆಂಡತಿಯನ್ನು ತವರುಮನೆಗೆ ಹೋಗಗೊಡದ ನರಪಿಶಾಚಿ!" ಎಂದು ತನಗೆ ನುಡಿಯಬೇಕೆ? ಮಗಳನ್ನು ಧಾರೆ ಎರೆದುಕೊಟ್ಟದ್ದೆ; ಅದೇ ತಪ್ಪಾಗಿತ್ತು. ಆದರೆ 'ಇದೇ ನಮ್ಮ ನಿಮ್ಮ ಕೊನೆಯ ಭೆಟ್ಟಿ' ಎಂದು ತಾನು ಖಡಾಖಂಡಿತವಾಗಿ ಹೇಳಿದ್ದೆ. ಈಗ ಐದು ವರುಷಗಳಾದುವು: ಅವರು ಅಲ್ಲಿ, ನಾವು ಇಲ್ಲಿ. ಅವರ ಮುಖ ನಮಗಿಲ್ಲ; ನಮ್ಮ ಮುಖ ಅವರಿಗಿಲ್ಲ!

ತಮ್ಮ ಮಗಳ ಭಾವಚಿತ್ರವನ್ನು ನೋಡುತ್ತಿರುವಂತೆಯೇ ಬದಿಯಲ್ಲಿ ಅಳಿಯನ ಚಿತ್ರವನ್ನು ನೋಡತೊಡಗಿದರು. ಶ್ರೀಪಾದರಾಯರಿಗೆ ಏನೋ ಭಾಸವಾಗತೊಡಗಿತು. ಆ ಚಿತ್ರದಲ್ಲಿಯ ಅಳಿಯನ ತುಟಿ ಅಲುಗಾಡಿದಂತೆ ಭಾಸವಾಗತೊಡಗಿತು. ಕೈ ತನ್ನೆಡೆಗೆ ಬೆರಳುಮಾಡಿ ತೋರಿಸಿದಂತೆ ಭಾಸನಾಗತೊಡಗಿತು: "ನೀನು ನರಪಿಶಾಚಿ, ಸಾಯುವ ತಾಯಿಯ ದರುಶನವನ್ನೂ ಹೆಂಡತಿಗೆ ಮಾಡಗೊಡದ ಕ್ರೂರಪಿಶಾಚಿ ನೀನು!"

ಕೋಣೆಯಲ್ಲಿ ಕವಿದ ಅರಿಗತ್ತಲು, ರುದ್ರ ಭಯಾನಕ ಶಾಂತತೆ, ಎಲ್ಲವೂ ಶ್ರೀಪಾದರಾಯರ ಮನಸ್ಸನ್ನು ಅದುರಿಸತೊಡಗಿದುವು. ತಮ್ಮ ಮಾನ ಇದೇ ಮನೆಯಲ್ಲಿ—ಈಗ ಆರು ವರುಷಗಳ ಹಿಂದೆ ಬಂದದ್ದು, ಶ್ರೀಪಾದರಾಯರಿಗೆ ನೆನಪಾಗತೊಡಗಿತು; ಆ ದೃಶ್ಯ ಕಣ್ಣಿಗೆ ಕಟ್ಟತೊಡಗಿತ್ತು:—

—ತನ್ನ ಮಾವ ತನಗೆ ಪ್ರಾರ್ಥಿಸಿಕೊಳ್ಳುತ್ತಿದ್ದ:—"ನಿನ್ನ ಕಾಲು ಬೀಳುವೆ. ಅವಳು ಲೀಲಾನ ಧ್ಯಾಸ ಹಿಡಿದು ಕೂತಾಳೆ. ಕಣ್ಣುಮುಚ್ಚುವ ಮೊದಲು ಒಮ್ಮೆ ಆಕೆ ಲೀಲಾನ್ನ ನೋಡಲಿ. ಕಳಿಸಿಕೊಡು. ಬೇಕಾದರೆ ನನ್ನ ತಪ್ಪಿರಲಿ ಇಲ್ಲದಿರಲಿ; ನೀನೆ ನನ್ನನ್ನು ಎರಡು ಹೊಡೆದರೂ ಚಿಂತೆ ಇಲ್ಲ. ಲೀಲಾನ್ನ ಒಮ್ಮೆ ಕಳಿಸು"—ತಾನು ಗಹಗಹಿಸಿ ನಗುತ್ತ ಅವರನ್ನು ಮನೆಯ ಹೊರಗೆ ದಬ್ಬಿದ್ದೆ. ಒಳಗೆ ಲೀಲಾ ಅಳುತ್ತ ಗೋಡೆಗೆ ಒರಗಿ ಕುಳಿತಿದ್ದಳು. ಅವಳನ್ನು ಅಪ್ಪಿ ನಿರ್ಮಲೆ ಕುಳಿತಿದ್ದಳು. ಅಂದು ನಾನೇ ನಾನು. ಸರ್ವಾಧಿಕಾರಿ! ಈಗ ನಾಲ್ಕೈದು ದಿನದಿಂದ ಲೀಲಾ ನಿರ್ಮಲೆಯನ್ನು ಕರೆಸುಕೊಂಡು ಬರಲು ಒತ್ತಾಯಪಡಿಸುತ್ತಿದ್ದಾಳೆ. ಆದರೆ ನಾನೇ ಅಂದು ಅಳಿಯನಿಗೆ ಹೇಳಿದ್ದೇನೆ: "ಇಂದಿಗೆ ನನ್ನ ನಿಮ್ಮ ಭೆಟ್ಟಿ ಕೊನೆಯದು" ಎಂದು. ಆದರೂ ಅವನು ನಿರ್ಲಜ್ಜ! "ಅತ್ತೆಯವರಿಗೆ ಸ್ವರ ಬರುತ್ತಿದೆಯಂತೆ, ಬೇಕಾದರೆ ನಿರ್ಮಲೆಯನ್ನು ಒಂದು ತಿಂಗಳ ಮಟ್ಟಿಗೆ ಕರೆದೊಯ್ಯಿರಿ. ನಾನೂ ಒಬ್ಬ ಮನುಷ್ಯ!" ಎಂದು ಬರೆದಿದ್ದಾನೆ. ಅವನಿಗೆ ಹೇವವಿರದಿದ್ದರೂ ನನಗಿಲ್ಲವೇ? ಅವನು ನಿರ್ಲಜ್ಜನಾದರೆ ನಾನೂ ಆಗಲೇ? ಛೇ!—

ಹೂ-ಹಸಿರು

'ನಾರಂಗಿ' ಭಟ್ಟ, ಮುಂಬಯಿ

ಮಳೆ ನೀರಿನ ಹುಲ್ಲು ಹಸಿರು ಚಿಗಿತು ಬರಲು ಭೂಮಿ ಬಸಿರು
ಏನದ್ಭುತ ಜೀವಜಾತಿ ಏನೆಲ್ಲವೊ ಹೆಸರ ಹುಳುವು-

ಬರಡೆನಿಸಿದ ಭೂಮಿತಾಯಿ ಬೋಳಾದೀ ಸೃಷ್ಟಿತಾಯಿ
ಕಂಡುವೇನೋ ತಮ್ಮ ಕನಸ ಈ ಹಸಿರಿನ ಹೊನಲಲಿ.

ಹೊಟ್ಟೆ ಎಳೆವ ಚರಟೆ ಹುಳುವು ಮೈ ಮುಳ್ಳಿನ ಕೊಂಡಿಹುಳುವು
(ಬೀಭತ್ಸತೆ ಮೈ ತಾಳಿಕೆ ವಿವಿಧವೇಷ ತಾಳಿ!)

ಎಲ್ಲೆಲ್ಲೆಡೆ ಮುನ್ನುಗ್ಗಿದೆ ತನುವಡೆದೀ ಸೃಷ್ಟಿ.
ಹೂ-ಹುಲ್ಲೊಳು ಮೈ ತೋರಿದೆ ಮುನ್ನಡೆವೀ ಶಕ್ತಿ

ಎಲ್ಲೆಲ್ಲಿಯ ಗಂಡು ಜೀವ ಬಂತರಸುತ ಹೆಣ್ಣು....
ಹೆಸರಿಟ್ಟುವು ಹೊಸದೇಹಕೆತ್ತು ತಮ್ಮ ತನುವ

ಏಕೇತಕೆ ಈ ಸೃಷ್ಟಿಗೆ ಮುನ್ನುಗ್ಗುವ ದಾಹ
ಮುನ್ನುಗ್ಗಿರಿ ಲಯ ಕಾದಿರಿ, ಬೇಕೇತಕೆ ಓಟ?

ಹೂ ಹುಲ್ಲಿನ ಕತೆ ಸಾರಿದೆ ಲಯ ಕಾದಿದೆ ಬದುಕ.
ಏಕಾದರು ವರು-ವರುಷವು ಹುಸಿ ಹಸಿರಿನ ಹುಟ್ಟು?

ಈ ವಿಚಾರತರಂಗದಲ್ಲಿಯೇ ಶ್ರೀಪಾದರಾಯರು ಫೋಟೋವನ್ನು ದೂರ ಎಸೆದರು. ಆ ಎಸೆದ ಸಪ್ಪಳಕ್ಕೆ ಸರಿಯಾಗಿ ಓಣಿಯಲ್ಲಿ ಸದ್ದಾಯಿತು. ಆ ಸದ್ದು ಕೋಳಿ ಕೂಗುವ ಸದ್ದಲ್ಲ; ಅಪಸ್ವರದಲ್ಲಿ ನಾಯಿಯೊಂದು ಅಳುತ್ತಿತ್ತು. ಆ ಕೂಗಿನ ಹಿನ್ನೆಯಲ್ಲಿಯೆ ಗಡಿಯಾರ ಅಲಾರ್ಮು ಬಡಿಯತೊಡಗಿತು. ಶ್ರೀಪಾದರಾಯರಿಗೆ ಎಚ್ಚರಮೂಡಿತು ಈಗ ಒಂದು ಡೋಜು ಔಷಧಿ ಲೀಲಾಬಾಯಿಯವರ ಬಾಯಲ್ಲಿ ಹಾಕಬೇಕಿತ್ತು. ಬಾಟ್ಲಿಯಿಂದ ಗ್ಲಾಸಿನಲ್ಲಿ ಔಷಧಿ ಸುರುವಿದ ಶ್ರೀಪಾದರಾಯರು, ಲೀಲಾಬಾಯಿಯವರ ಬಾಯಿಗೆ ಗ್ಲಾಸನ್ನಿರಿಸಿ, ತುಟಿ ಸರಿಸಿ ಔಷಧಿ ಸುರುವಿದರು; ಸುರುವಿದ ಔಷಧಿ ತಿರುಗಿ ಹಾಗೆಯೆ ಬಂದಿತು.

ಆರಿಸಂಶಯದಿಂದೆ ಶ್ರೀಪಾದರಾಯರು ಲೀಲಾಬಾಯಿಯ ಹಣೆ ಮುಟ್ಟಿ ನೋಡಿದರು—ಹೊರಗೆ ನಾಯಿಯ ಕೂಗು ಮಾರ್ದನಿಕೊಡುತ್ತಿತ್ತು. ಮೂಲೆಯಲ್ಲಿ ಹಲ್ಲಿ ಲೊಟಗುಟ್ಟುತ್ತಿತ್ತು. ಮೂಲೆಗೆ ಸೆದ ನಿರ್ಮಲೆಯ ಫೋಟೋದ ಕಾಜು, ಫಳಫಳನೇ ಬಿಡಿಬಿಡಿಯಾಗಿ ಬಿದ್ದಿದ್ದುವು. ಲೀಲಾಬಾಯಿಯ ಹಣೆ ತಣ್ಣಗಾಗಿತ್ತು—ಶ್ರೀಪಾದರಾಯರ ಹಟ ಅರತೊಡಗಿತ್ತು. ಅವರ ಕಣ್ಣಂಚಿನಲ್ಲಿ ಅವರ ಜೀವಮಾನದಲ್ಲಿಯೇ ಮೊದಲು ಸಲ ಒಂದುಹನಿ ಕಾಣಿಸಿಕೊಂಡಿತು. ಆದರೆ ಅವರ ಹಟ ಅರಿದ್ದು ಹೆಂಡತಿಯ ಹಣೆ ತಣ್ಣಗಾದಾಗ.

ರಶಿಯದ ಇಬ್ಬರು ರಾಜಕೀಯ ಅತಿಥಿಗಳು

(ಜೀವಿತ ಪರಿಚಯಗಳು)*

ಇಂದು ಭಾರತಕ್ಕೆ ಬಂದಿರುವ—ಇಂದಿನ ರಶಿಯದ ನಾಯಕರಿಬ್ಬರ ಪರಿಚಯಕ್ಕಾಗಿ ಅನೇಕ ಜನ ವಾಚಕರು ಕುತೂಹಲಿಗಳಾಗಿರಬಹುದು. ಇಲ್ಲಿ ನೋಡಿರಿ ಬುಲ್ಗಾನಿನ್ ಮತ್ತು ಖ್ರುಷ್ಚ್ಯೇವ ಅವರ ರೋಮಾಂಚಕಾರಿ ಜೀವಿತಗಳನ್ನು !

ನಿಕೊಲಾಯ್ ಅಲೆಗ್ಜಾಂಡ್ರೊವಿಚ್ ಬುಲ್ಗಾನಿನ್

ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಅಧ್ಯಕ್ಷಮಂಡಲದ ಸಭಾಸದರೂ, ಸೋವಿಯೆತ್ ಒಕ್ಕೂಟದ ಮಂತ್ರಾಲೋಚನ ಮಂಡಲದ ಅಧ್ಯಕ್ಷರೂ ಆದ ನಿಕೋಲಾಯ್ ಅಲೆಗ್ಜಾಂಡ್ರೋವಿಚ್ ಬುಲ್ಗಾನಿನ್‌ರವರು, ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯು ಮುಖ್ಯ ಸೋವಿಯೆತ್ ರಾಜ್ಯದ ಪ್ರಸಿದ್ಧರಾದ ಮುಖಂಡರೂ, ವಿ. ಐ. ಲೆನಿನ್‌ರವರ ಶ್ರದ್ಧಾಳು ಶಿಷ್ಯರೂ ಮತ್ತು ಜೆ. ವಿ. ಸ್ತಾಲಿನ್‌ರವರ ಸಹಚರರೂ ಆಗಿದ್ದಾರೆ.

ಎನ್. ಎ ಬುಲ್ಗಾನಿನ್‌ರವರು ೧೮೯೫ರಲ್ಲಿ, ಈಗ 'ಗೋರ್ಕಿ' ಎಂದು ಕರೆಯಲ್ಪಡುವ ಅಂದಿನ 'ನಿಝ್ನಿ—ನವ್ಗೋರದ್' ನಗರದಲ್ಲಿ, ಒಬ್ಬ ಗುಮಾಸ್ತೆಯ ಮನೆತನದಲ್ಲಿ ಹುಟ್ಟಿದರು. ೧೯೧೭ರ ಫೆಬ್ರುವರಿ ತಿಂಗಳ ಕ್ರಾಂತಿಯ ತರುವಾಯ, ಅವರು ಕಮ್ಯುನಿಸ್ಟ್ ಪಾರ್ಟಿಯ ಸದಸ್ಯರಾದರು. ಅಂದಿನಿಂದಲೂ ಅವರ ಇಡೀ ಜೀವನವು ಕಮ್ಯುನಿಸ್ಟ್ ಪಾರ್ಟಿಯೊಂದಿಗೆ ಅಭೇದ್ಯಸಂಪರ್ಕ ಹೊಂದಿದ್ದು, ಸಂಪೂರ್ಣತಃ ಕಾರ್ಮಿಕ ಜನತೆಯ ಹಿತಗಳಿಗೇ ಒಳಪಟ್ಟಿದೆ.

ಅಕ್ಟೋಬರ್ ಸಮಾಜವಾದೀ ಮಹಾಕ್ರಾಂತಿಯ ವಿಜಯದ ಬಳಿಕ, ಪಾರ್ಟಿಯು ಎನ್. ಎ. ಬುಲ್ಗಾನಿನ್‌ರವರನ್ನು, ಅಖಿಲ ರಶಿಯದ ಅಸಾಧಾರಣ ಆಯೋಗದ ಅಂಗಸಂಸ್ಥೆಗಳಲ್ಲಿ, ಪ್ರತಿಕ್ರಾಂತಿ ಮತ್ತು ವಿಧ್ವಂಸಕ ಚಟುವಟಿಕೆಗಳನ್ನೆದುರಿಸಿ ಹೋರಾಡುವ ಕೆಲಸ ಮಾಡುವುದಕ್ಕಾಗಿ ಕಳಿಸಿಕೊಟ್ಟಿತು. ೧೯೧೮ ರಿಂದ ೧೯೩೭ ರ ವರೆಗೆ ಅವರು ಅಖಿಲ ರಶಿಯದ ಅಸಾಧಾರಣ ಆಯೋಗದ ಅಂಗಸಂಸ್ಥೆಗಳಲ್ಲಿ ಮುಖಂಡಸ್ಥಾನವೊಂದರಲ್ಲಿದ್ದರು.

೧೯೩೨ ರಿಂದ ೧೯೩೭ ರ ವರೆಗೆ ಎನ್. ಎ. ಬುಲ್ಗಾನಿನ್‌ರವರು ರಾಷ್ಟ್ರೀಯ ಆರ್ಥಿಕವ್ಯವಸ್ಥೆಯ ಸರ್ವೋಚ್ಚ ಸಮಿತಿಯ ಅಂಗಸಂಸ್ಥೆಗಳಲ್ಲಿ ಅನೇಕ ಮುಖಂಡ ಸ್ಥಾನಗಳಲ್ಲಿದ್ದರು. ೧೯೩೭ರಲ್ಲಿ ಅವರು ಮಾಸ್ಕೋ ನಗರದ ವಿದ್ಯುತ್ ಯಂತ್ರೋಪಕರಣಗಳ ಕಾರ್ಖಾನೆಯ ವ್ಯವಸ್ಥಾಪಕರಾಗಿ ನಿಯಮಿಸಲ್ಪಟ್ಟರು. ಕ್ಷಿಪ್ರಕಾಲದಲ್ಲಿಯೇ, ಈ ಕಾರ್ಖಾನೆಯು ರಾಜಧಾನಿಯ ಅತ್ಯಂತ ಮುಂದುವರಿದ ಉದ್ಯಮಗಳಲ್ಲೊಂದಾಯಿತು. ಅದು ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿಗೊಳಿಸಲಾಗಿದ್ದ ಕೆಲಸವನ್ನು ಎರಡುವರೆ ವರ್ಷಗಳ ಅವಧಿಯಲ್ಲಿಯೇ ಪೂರಯಿಸಿತು.

೧೯೩೭ರ ಜನವರಿ ತಿಂಗಳಲ್ಲಿ ಎನ್. ಎ. ಬುಲ್ಗಾನಿನ್‌ರವರು ಮಾಸ್ಕೋ ನಗರದ ಸೋವಿಯೆತ್ತಿನ ಅಧ್ಯಕ್ಷರಾಗಿ ಚುನಾಯಿತರಾದರು.

೧೯೩೭ರ ಜುಲೈ ತಿಂಗಳಲ್ಲಿ ಎನ್. ಎ. ಬುಲ್ಗಾನಿನ್‌ರವರು ರಶಿಯದ ಸೋವಿಯೆತ್ ಸಮಾಜವಾದೀ ಪ್ರಜಾತ್ಂತ್ರದ (RSFSR) ಜನತೆಯ ಕಮಿಸಾರರ ಮಂಡಲದ ಅಧ್ಯಕ್ಷರಾಗಿ ನಿಯಮಿಸಲ್ಪಟ್ಟರು. ೧೯೩೭ರಲ್ಲಿ ಅವರು, ಸೋವಿಯೆತ್ ಒಕ್ಕೂಟದ ಜನತೆಯ ಕಮಿಸಾರರ ಮಂಡಲದ ಉಪಾಧ್ಯಕ್ಷರಾಗಿ ನೇಮಕಹೊಂದಿ, ಆನಂತರ ಸೋವಿಯೆತ್ ಒಕ್ಕೂಟದ ರಾಜ್ಯದ ಬ್ಯಾಂಕಿನ ಆಡಳಿತ ಮಂಡಲದ ಪ್ರಧಾನಸ್ಥಾನದಲ್ಲಿ ಇದ್ದರು.

ದೇಶಾಭಿಮಾನಪೂರಿತವಾದ ಮಹಾಯುದ್ಧಾರಂಭದಲ್ಲಿ ಪಾರ್ಟಿಯು ಎನ್. ಎ. ಬುಲ್ಗಾನಿನ್‌ರವರನ್ನು ಕಾರ್ಯನಿರತ ಅಧಿಕಾರಕ್ಷೇತ್ರಗಳಲ್ಲಿ ಉನ್ನತವಾದ ಪದವಿಗಳನ್ನು ವಹಿಸಿಕೊಳ್ಳಲು ಕಳಿಸಿಕೊಟ್ಟಿತು. ೧೯೪೧ರಿಂದ ೧೯೪೫ ರ ವರೆಗೆ ಅವರು ಪಶ್ಚಿಮ ಯುದ್ಧಮುಖದ (ವೆಸ್ಟರ್ನ್ ಫ್ರಂಟ್) ಸೈನ್ಯಾಧಿಕಾರಿ ಸಮಿತಿಯ ಸದಸ್ಯರಾಗಿದ್ದರು. ತರುವಾಯ ಅವರು ಬಾಲ್ಟಿಕ್ ಪ್ರದೇಶ ಮತ್ತು ಮೊದಲನೆಯ ಬೈಲೋರಶಿಯದ ಯುದ್ಧಮುಖಗಳ (ಫ್ರಂಟ್ಸ್) ಸೈನ್ಯಾಧಿಕಾರ ಸಮಿತಿಯ ಸದಸ್ಯರಾಗಿದ್ದರು.

೧೯೪೫ರಲ್ಲಿ ಎನ್. ಎ. ಬುಲ್ಗಾನಿನ್‌ರವರು ರಾಜ್ಯರಕ್ಷಣಾ ಸಮಿತಿಯ ಸದಸ್ಯರಾಗಿಯೂ ಸೋವಿಯೆತ್ ಒಕ್ಕೂಟದ ರಕ್ಷಣೆಯ

* ಈ ವಿಷಯವನ್ನು 'ಸೋವಿಯೆತ್ ಒಕ್ಕೂಟದ ಸರ್ವಾಚಾರವಿಚಾರ'ದಿಂದ, ಪ್ರತಜ್ಞತೆಯೊಂದಿಗೆ ತೆಗೆದುಕೊಳ್ಳಲಾಗಿದೆ. ಸಂ. ಜ.

ಜನತೆಯ 'ಕಮಿಸಾರ್' ಮಂಡಲಕ್ಕೆ ಪ್ರತಿನಿಧಿಯಾಗಿ (ಡೆಪ್ಯುಟಿ) ನಿಯಮಿಸಲ್ಪಟ್ಟರು.

೧೯೪೬ರ ಮಾರ್ಚ್ ತಿಂಗಳಲ್ಲಿ ಎನ್. ಎ. ಬುಲ್ಗಾನಿನ್‌ರವರು ಸೋವಿಯೆತ್ ಒಕ್ಕೂಟದ ಸೇನಾಬಲದ ಮಂತ್ರಿಯಾಗಿಯೂ, ಸೋವಿಯೆತ್ ಒಕ್ಕೂಟದ ಮಂತ್ರಾಲೋಚನ ಸಭೆಯ ಉಪಾಧ್ಯಕ್ಷರಾಗಿಯೂ ನಿಯಮಿಸಲ್ಪಟ್ಟರು.

೧೯೫೫ರ ಮಾರ್ಚ್ ತಿಂಗಳಲ್ಲಿ ಅವರು ಸೋವಿಯೆತ್ ಒಕ್ಕೂಟದ ಮಂತ್ರಾಲೋಚನ ಸಭೆಯ ಪ್ರಥಮ ಉಪಾಧ್ಯಕ್ಷರಾಗಿಯೂ, ಸೋವಿಯೆತ್ ಒಕ್ಕೂಟದ ರಕ್ಷಣಮಂತ್ರಿಯಾಗಿಯೂ ನೇಮಕ ಹೊಂದಿದರು.

೧೯೫೫ರ ಫೆಬ್ರುವರಿ ತಿಂಗಳ ದಿನಾಂಕ ೮ ರಂದು, ಸೋವಿಯೆತ್ ಒಕ್ಕೂಟದ ಚತುರ್ಥ ಸರ್ವೋಚ್ಚ ಸೋವಿಯೆತ್ತಿನ ಎರಡನೆಯ ಮಹಾಧಿವೇಶನವು, ಎನ್. ಎ. ಬುಲ್ಗಾನಿನ್‌ರವರನ್ನು ಸೋವಿಯೆತ್ ಒಕ್ಕೂಟದ ಮಂತ್ರಾಲೋಚನ ಸಭೆಯ ಅಧ್ಯಕ್ಷರನ್ನಾಗಿ ನಿಯಮಿಸಿತು.

೧೯೩೫ ರಿಂದಲೂ ಅವರು ಸೋವಿಯೆತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಸದಸ್ಯರಾಗಿದ್ದಾರೆ. ೧೯೪೬ರ ಫೆಬ್ರುವರಿ ತಿಂಗಳಲ್ಲಿ ಅವರು ಕೇಂದ್ರಸಮಿತಿಯ ರಾಜಕೀಯ ಸಮಿತಿಯ (ಪೊಲಿಟಿಕಲ್ ಬ್ಯೂರೋ) ಸದಸ್ಯರಾಗಿಯೂ, ೧೯೫೨ರ ಅಕ್ಟೋಬರ್ ತಿಂಗಳಲ್ಲಿ—೧೯ನೆಯ ಪಾರ್ಟಿ ಮಹಾಧಿವೇಶನ ತರುವಾಯ—ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಯ ಅಧ್ಯಕ್ಷ ಮಂಡಲದ ಸದಸ್ಯರಾಗಿಯೂ ಆಯ್ಕೆ ಪಡೆದರು.

ಎನ್. ಎ. ಬುಲ್ಗಾನಿನ್‌ರವರು ಸೋವಿಯೆತ್ ಒಕ್ಕೂಟದ ಮತ್ತು ಸಂಯುಕ್ತ ರಶಿಯದ ಸರ್ವೋಚ್ಚ ಸೋವಿಯೆತ್ತುಗಳ ಪ್ರತಿನಿಧಿಯಾಗಿದ್ದಾರೆ.

ಅವರು ದೇಶಕ್ಕೆ ಸಲ್ಲಿಸಿದ ಸೇವೆಗಾಗಿಯೂ, ದೇಶಾಭಿಮಾನಪೂರ್ಣವಾದ ಮಹಾಯುದ್ಧದ ಅವಧಿಯಲ್ಲಿ ಉನ್ನತಾಜ್ಞಾ ಮಂಡಲವು (ಹೈಕಮಾಂಡ್) ವಿಧಿಸಿದ ಕಾರ್ಯಭಾರಗಳನ್ನು, ಜಯಪ್ರದವಾಗಿ ನೆರವೇರಿಸಿದುದರ ಸಲುವಾಗಿಯೂ, ಎನ್. ಎ. ಬುಲ್ಗಾನಿನ್‌ರವರಿಗೆ 'ಆರ್ಡರ್ ಆಫ್ ಲೆನಿನ್' (ಲೆನಿನ್ ಪ್ರಶಸ್ತಿ), 'ಆರ್ಡರ್ ಆಫ್ ರೆಡ್ ಬ್ಯಾನರ್' (ಕೆಂಬಾವುಟ ಪ್ರಶಸ್ತಿ), ಮೊದಲನೆಯ ಮತ್ತು ಎರಡನೆಯ ದರ್ಜೆಯ 'ಆರ್ಡರ್ ಆಫ್ ಸುವೊರೋವ್' (ಸುವೊರೋವ್ ಪ್ರಶಸ್ತಿ) ಗಳೆರಡು, ಮೊದಲನೆಯ ದರ್ಜೆಯ ಎರಡು ಕುತುಜೋವ್ ಪ್ರಶಸ್ತಿಗಳು, ಕೆಂಪುತಾರೆಯ ಎರಡು ಪ್ರಶಸ್ತಿಗಳು ಮತ್ತು ಅನೇಕ ಪದಕಗಳು ಬಹುಮಾನಿಸಲ್ಪಟ್ಟಿವೆ.

ಅವರ ಅರುವತ್ತನೆಯ ದಿನದಂದು, ಕಮ್ಯುನಿಸ್ಟ್ ಪಾರ್ಟಿಗೂ ಮತ್ತು ಸೋವಿಯೆತ್ ಜನತೆಗೂ ಅವರು ಸಲ್ಲಿಸಿರುವ ಪ್ರಮುಖ ಸೇವೆಗಳಿಗೆ ಮನ್ನಣೆಯನ್ನು ಕೊಟ್ಟು, ಸೋವಿಯೆತ್ ಒಕ್ಕೂಟದ ಸರ್ವೋಚ್ಚ ಸಮಿತಿಯ ಅಧ್ಯಕ್ಷ ಮಂಡಲವು ತನ್ನ ಜೂನ್ ದಿನಾಂಕ ೧೦ ರ (೧೯೫೫) ಶಾಸನದ (ಡಿಕ್ರೀ) ಮೂಲಕ, ಎನ್. ಎ. ಬುಲ್ಗಾನಿನ್‌ರವರಿಗೆ ಸಾಮಾಜಿಕ ಶ್ರಮವೀರ (ಹೀರೋ ಆಫ್ ಸೋಷಿಯಾಲಿಸ್ಟ್ ಲೇಬರ್) ಎಂಬ ಉಪಾಧಿಯನ್ನು (ಆದು ಲೆನಿನ್ ಪ್ರಶಸ್ತಿ ಮತ್ತು ಕುಡುಗೋಲು–ಸುತ್ತಿಗೆಯ ಚಿನ್ನದ ನಕ್ಷತ್ರವನ್ನೊಳಗೊಂಡಿದೆ) ಕೊಟ್ಟು ಬಹುಮಾನಿಸಿತು.

ನಿಕಿತಾ ಸೆರ್ಗೆಯೇವಿಚ್ ಖ್ರುಷ್ಚ್ಯೇವ್

ನಿಕಿತಾ ಸೆರ್ಗೆಯೇವಿಚ್ ಖ್ರುಷ್ಚ್ಯೇವ್‌ರವರು (ಜನ್ಮದಿನಾಂಕ ೧೭, ಎಪ್ರಿಲ್ ೧೮೯೪) ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಮತ್ತು ಸೋವಿಯೆತ್ ರಾಜ್ಯದ ಖ್ಯಾತನೇತ್ರ ಮುಖಂಡರೂ, ಎ. ಐ. ಲೆನಿನ್‌ರವರ ಶ್ರದ್ಧಾಯುತ ಅನುಯಾಯಿಗಳೂ, ಜೆ. ವಿ. ಸ್ಟಾಲಿನ್‌ರವರ ಆತ್ಯಂತ ನಿಕಟ ಸಹಚರರಲ್ಲೊಬ್ಬರೂ ಆಗಿದ್ದು, ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಅಧ್ಯಕ್ಷಮಂಡಲದ ಸದಸ್ಯರೂ, ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಪ್ರಥಮ ಕಾರ್ಯದರ್ಶಿಯವರೂ ಮತ್ತು ಸೋವಿಯೆತ್ ಒಕ್ಕೂಟದ ಸರ್ವೋಚ್ಚ ಸೋವಿಯೆತ್ತಿನ ಅಧ್ಯಕ್ಷ ಮಂಡಲದ ಸದಸ್ಯರೂ ಆಗಿದ್ದಾರೆ.

ಕಾರ್ಮಿಕ ವರ್ಗದ ಕುಟುಂಬವೊಂದರಲ್ಲಿ ಅವರು (ಅವರ ತಂದೆ ಗಣಿಯ ಕಾರ್ಮಿಕರಾಗಿದ್ದರು) ಕುರ್ಸ್ಕ್ 'ಗುಬರ್ನಿಯಾ' (ಜಿಲ್ಲೆ)ಯಲ್ಲಿ ಕಲಿನೋವ್ಕಾ ಎಂಬ ಹೆಸರಿನ ಹಳ್ಳಿಯಲ್ಲಿ ಜನಿಸಿದರು. ಸಣ್ಣ ವಯಸ್ಸಿನಲ್ಲಿಯೇ ಎನ್. ಎಸ್. ಖ್ರುಷ್ಚ್ಯೇವ್‌ರವರು ಕೆಲಸಕ್ಕೆ ಹೋಗಬೇಕಾಗಿಬಂದಿತು. ಕುರಿಕಾಯುವವರಾಗಿಯೂ, ತರುವಾಯ ದೋನ್‌ಬಾಸ್ ಪ್ರದೇಶದ ಕಾರಖಾನೆಗಳಲ್ಲಿ ಮತ್ತು ಗಣಿಗಳಲ್ಲಿ ಯಂತ್ರಜೋಡಣೆಯ ಕೆಲಸಗಾರರಾಗಿಯೂ (ಫಿಟ್ಟರ್) ಅವರು ಕೆಲಸ ಮಾಡಿದರು. ಅವರು ೧೯೧೮ರಲ್ಲಿ ಕಮ್ಯುನಿಸ್ಟ್ ಪಾರ್ಟಿಯನ್ನು ಸೇರಿದರು. ಅಂತರ್ಯುದ್ಧದ (ಸಿವಿಲ್‌ವಾರ್) ಅವಧಿಯಲ್ಲಿ ಎನ್. ಎಸ್. ಖ್ರುಷ್ಚ್ಯೇವ್‌ರವರು, ದಕ್ಷಿಣಪ್ರಾಂತದ ಯುದ್ಧಮುಖದಲ್ಲಿ ಕಾರ್ಯನಿರತರಾಗಿದ್ದರು. ಅಂತರ್ಯುದ್ಧದ ತರುವಾಯ ಅವರು ದೋನ್‌ಬಾಸ್ ಗಣಿಗಳಲ್ಲಿ ಕೆಲಸ ಮಾಡಿದರು. ಆ ತರುವಾಯ ಒಂದು ಕಾರ್ಮಿಕ ಶಿಕ್ಷಣ ಕೇಂದ್ರದಲ್ಲಿ ವ್ಯಾಸಂಗವನ್ನು ನಡೆಸಿದರು. (ಕ್ರಾಂತಿಯ ಮೊದಲ ವರ್ಷಗಳಲ್ಲಿ ವಯಸ್ಕರಿಗಾಗಿ ಸಂಘಟಿಸಲ್ಪಟ್ಟಿದ್ದ ವಿಶಿಷ್ಟ ಪಾಠಶಾಲೆಗಳು ಕಾರ್ಮಿಕ ಶಿಕ್ಷಣ ಕೇಂದ್ರಗಳೆಂದು [ವರ್ಕರ್ಸ್ ಫ್ಯಾಕಲ್ಟಿ] ಕರೆಯಲ್ಪಡುತ್ತಿದ್ದುವು.) ಕಾರ್ಮಿಕ ಶಿಕ್ಷಣಕೇಂದ್ರದ ಪದವೀಧರರಾದ ತರುವಾಯ ಎನ್. ಎಸ್. ಖ್ರುಷ್ಚ್ಯೇವ್‌ರವರು, ದೋನ್‌ಬಾಸ್ ಪ್ರದೇಶದಲ್ಲಿ ಪಾರ್ಟಿಯ ಕಾರ್ಯನಿರತ ಮುಂಬಾಳುಗಳಲ್ಲೊಬ್ಬರಾಗಿದ್ದರು. ಆ ಮೇಲೆ ಕೀಯೆವ್ ನಗರದಲ್ಲಿ ಪಾರ್ಟಿಯ ಮುಖ್ಯ ಕಾರ್ಯಕರ್ತರಲ್ಲೊಬ್ಬರಾಗಿದ್ದರು. ೧೯೨೭ರಲ್ಲಿ ಅವರು ಮಾಸ್ಕೋ ನಗರದ ಸ್ಟಾಲಿನ್ ಔದ್ಯೋಗಿಕ ಉಚ್ಚ ಶಿಕ್ಷಣಾಲಯವನ್ನು (ಅಕಾಡೆಮಿ) ಸೇರಿದರು. ಅಲ್ಲಿ ಪಾರ್ಟಿಯ ಸಮಿತಿಯ ಕಾರ್ಯದರ್ಶಿಯಾಗಿ ಅವರು ಆಯ್ಕೆ

ಯೊಂದಿದರು. ೧೯೩೧ ರ ಜನವರಿ ತಿಂಗಳಲ್ಲಿ ಎನ್. ಎಸ್. ಖ್ರುಷ್ಚೇವ್‌ರವರು ಪಾರ್ಟಿಯ ಬೌಮನ್ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾದರು. ಆನಂತರ ಪಾರ್ಟಿಯ ಕ್ರಾಸ್ನಯಾ ಪ್ರೆಸ್ನ್ಯಾ ಜಿಲ್ಲಾ ಸಮಿತಿಯ (ಮಾಸ್ಕೋ ನಗರದಲ್ಲಿ) ಕಾರ್ಯದರ್ಶಿಯಾಗಿಯೂ ಇದ್ದರು. ೧೯೩೨-೩೪ರಲ್ಲಿ ಎನ್. ಎಸ್. ಖ್ರುಷ್ಚೇವ್‌ರವರು ಮಾಸ್ಕೋ ನಗರದ ಸಮಿತಿಯ ದ್ವಿತೀಯ ಕಾರ್ಯದರ್ಶಿಯಾಗಿಯೂ ತರುವಾಯ ಪ್ರಥಮ ಕಾರ್ಯದರ್ಶಿಯಾಗಿಯೂ, ಆನಂತರ ಪಾರ್ಟಿಯ ಮಾಸ್ಕೋ ಪ್ರದೇಶ ಸಮಿತಿಯ ದ್ವಿತೀಯ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದರು. ೧೯೩೫ರಲ್ಲಿ ಅವರು ಪಾರ್ಟಿಯ ಮಾಸ್ಕೋ ಪ್ರದೇಶಸಮಿತಿಯ ಮತ್ತು ನಗರಸಮಿತಿಯ ಪ್ರಥಮ ಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟರು. ೧೯೩೭ರ ವರೆಗೂ ಅವರು ಈ ಪದವಿಗಳಲ್ಲಿದ್ದರು. ೧೯೩೫ರ ಜನವರಿ ತಿಂಗಳಲ್ಲಿ ಎನ್. ಎಸ್. ಖ್ರುಷ್ಚೇವ್‌ರವರು ಉಕ್ರೇನಿನ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಪ್ರಥಮ ಕಾರ್ಯದರ್ಶಿಯಾಗಿ ಚುನಾಯಿತರಾದರು. ೧೯೩೫ರ ಮಾರ್ಚ್ ತಿಂಗಳಿನಿಂದ ಡಿಸೆಂಬರ್ ವರೆಗೆ ಅವರು ಉಕ್ರೇನಿನ ಸೋವಿಯೆತ್ ಸಮಾಜವಾದೀ ಪ್ರಜಾತಂತ್ರದ ಮಂತ್ರಾಲೋಚನ ಮಂಡಲದ ಅಧ್ಯಕ್ಷರಾಗಿದ್ದರು. ೧೯೩೭ರ ಡಿಸೆಂಬರ್ ತಿಂಗಳಲ್ಲಿ ಅವರು ಪುನಃ ಉಕ್ರೇನಿನ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಪ್ರಥಮ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರು. ೧೯೩೯ರ ಡಿಸೆಂಬರ್ ತಿಂಗಳ ವರೆಗೂ ಅವರು ಆ ಸ್ಥಾನದಲ್ಲಿದ್ದರು. ೧೯೩೯ ಡಿಸೆಂಬರಿನಿಂದ ೧೯೫೩ರ ಮಾರ್ಚ್ ತಿಂಗಳ ವರೆಗೆ ಎನ್. ಎಸ್. ಖ್ರುಷ್ಚೇವ್‌ರವರು ಪಾರ್ಟಿಯ ಮಾಸ್ಕೋ ಪ್ರದೇಶಸಮಿತಿಯ ಪ್ರಥಮ ಕಾರ್ಯದರ್ಶಿಸ್ಥಾನವನ್ನೂ, ಕೇಂದ್ರ ಸಮಿತಿಯ ಕಾರ್ಯದರ್ಶಿಯ ಸ್ಥಾನವನ್ನೂ ವಹಿಸಿದ್ದರು. ೧೯೩೫ರಿಂದಲೂ ಎನ್. ಎಸ್. ಖ್ರುಷ್ಚೇವ್‌ರವರು ಪಾರ್ಟಿಯ ಕೇಂದ್ರ ಸಮಿತಿಯ ಸದಸ್ಯರಾಗಿದ್ದಾರೆ. ೧೯೩೫ರಲ್ಲಿ ಅವರು ಕೇಂದ್ರ ಸಮಿತಿಯ ರಾಜಕೀಯಸಮಿತಿಯ (ಬ್ಯೂರೋ) ಪ್ರತ್ಯಾಮ್ನಾಯ (ಆಲ್ಟರ್ನೇಟ್) ಸದಸ್ಯರಾಗಿ ಆಯ್ಕೆ ಹೊಂದಿದರು. ೧೯೩೯ರಲ್ಲಿ, ಪಾರ್ಟಿಯ ಹದಿನೆಂಟನೆಯ ಅಧಿವೇಶನದ ತರುವಾಯ, ಅವರು ಪಾರ್ಟಿಯ ಕೇಂದ್ರಸಮಿತಿಯ ರಾಜಕೀಯ ಸಮಿತಿಯ ಸದಸ್ಯರಾದರು. ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಹತ್ತೊಂಬತ್ತನೆಯ ಅಧಿವೇಶನದಲ್ಲಿ(೧೯೫೨) ಎನ್. ಎಸ್. ಖ್ರುಷ್ಚೇವ್‌ರವರು "ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ (ಬೋಲ್ಶೆವಿಕ್) ನಿಯಮಗಳಿಗೆ ತಿದ್ದುಪಡಿಗಳು" ಎಂಬ ವಿಷಯದ ಮೇಲೆ ವರದಿಯನ್ನೊಪ್ಪಿಸಿದರು. ಈ ಅಧಿವೇಶನದಲ್ಲಿ ಎನ್. ಎಸ್. ಖ್ರುಷ್ಚೇವ್‌ರವರು ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಸದಸ್ಯರಾಗಿ ಆಯ್ಕೆಗೊಂಡಿದರು ಮತ್ತು ಕೇಂದ್ರಸಮಿತಿಯ ಸಕಲಸದಸ್ಯರ ಸಭೆಯಲ್ಲಿ ಕೇಂದ್ರಸಮಿತಿಯ ಅಧ್ಯಕ್ಷಮಂಡಲದ ಸದಸ್ಯರಾಗಿಯೂ, ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ೧೯೫೩ರ ಮಾರ್ಚ್ ತಿಂಗಳಲ್ಲಿ ನಡೆದ ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಸಕಲ ಸದಸ್ಯರ ಮತ್ತು ಸೋವಿಯೆತ್ ಒಕ್ಕೂಟದ ಮಂತ್ರಾಲೋಚನ ಮಂಡಲಿಯ ಹಾಗೂ ಸೋವಿಯೆತ್ ಒಕ್ಕೂಟದ ಸರ್ವೋಚ್ಚ ಸೋವಿಯೆತ್ತಿನ ಅಧ್ಯಕ್ಷ ಮಂಡಲದ ಸಂಯುಕ್ತ ಸಭೆಯು ಎನ್. ಎಸ್. ಖ್ರುಷ್ಚೇವ್‌ರವರು ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಕೆಲಸ ಕಾರ್ಯಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಬೇಕೆಂಬುದರ ಅವಶ್ಯಕತೆಯನ್ನು ಮನಗಂಡು, ಆ ಕಾರಣದಿಂದಲೇ ಮಾಸ್ಕೋ ನಗರಸಮಿತಿಯ ಪಾರ್ಟಿಯ ಪ್ರಥಮ ಕಾರ್ಯದರ್ಶಿ ಸ್ಥಾನದ ಕರ್ತವ್ಯಗಳಿಂದ ಅವರನ್ನು ಬಿಡುಗಡೆ ಮಾಡಿತು. ೧೯೫೩ರ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಸಕಲ ಸದಸ್ಯರ ಸಭೆಯಲ್ಲಿ ಎನ್. ಎಸ್. ಖ್ರುಷ್ಚೇವ್‌ರವರು, ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರಸಮಿತಿಯ ಪ್ರಥಮ ಕಾರ್ಯದರ್ಶಿಯಾಗಿ ಚುನಾಯಿತರಾದರು.

ದೇಶಾಭಿಮಾನಪೂರ್ಣವಾದ ಮಹಾಯುದ್ಧದ ಕಾಲದಲ್ಲಿ ಎನ್. ಎಸ್. ಖ್ರುಷ್ಚೇವ್‌ರವರು, ಕೀಯೇವ್ ವಿಶಿಷ್ಟ ಸೈನ್ಯಾಚರಣೆಯ ಕ್ಷೇತ್ರದ ಸೈನ್ಯಾಧಿಕಾರ ಸಮಿತಿಯ, ನೈಋತ್ಯ ದಿಶೆಯ, ಸ್ಟಾಲಿನ್‌ಗ್ರಾಡಿನ, ದಕ್ಷಿಣದ ಮತ್ತು ಮೊದಲನೆಯ ಉಕ್ರೇನಿನ ಯುದ್ಧಮುಖಗಳ ಸೈನ್ಯಾಧಿಕಾರ ಸಮಿತಿಯ ಸದಸ್ಯರಾಗಿದ್ದರು.

ಆರ್ಥಿಕ ಕ್ಷೇತ್ರದ ಮುಂದಾಳುತನದಲ್ಲಿಯೂ, ದೇಶಾಭಿಮಾನಪೂರ್ಣವಾದ ಮಹಾಯುದ್ಧದ ವೇಳೆಯಲ್ಲಿ ಪಾರ್ಟಿಯೂ ಮತ್ತು ಸರಕಾರವೂ ತಮಗೆ ವಹಿಸಿಕೊಟ್ಟಿದ್ದ ಕಾರ್ಯಭಾರಗಳನ್ನು ಯಶಸ್ವಿಯಾಗಿ ಪೂರೈಸುವುದರಲ್ಲಿಯೂ ಅವರು ಸಲ್ಲಿಸಿದ ಮಹತ್ತ್ವವಾದ ಸೇವೆಯನ್ನು ಪರಿಗಣಿಸಿ, ಎನ್. ಎಸ್. ಖ್ರುಷ್ಚೇವ್‌ರವರು ಮೂರು ಲೆನಿನ್ ಪ್ರಶಸ್ತಿ ಬಹುಮಾನಗಳನ್ನೂ, ಮೊದಲನೆಯ ಮತ್ತು ಎರಡನೆಯ ದರ್ಜೆಯ ಸುವೊರೋವ್ ಪ್ರಶಸ್ತಿಯನ್ನೂ ಮೊದಲನೆಯ ದರ್ಜೆಯ ಕುತುಜೋವ್ ಪ್ರಶಸ್ತಿಯನ್ನೂ, ಮೊದಲನೆಯ ದರ್ಜೆಯ ದೇಶಾಭಿಮಾನಪೂರ್ಣ ಯುದ್ಧಪ್ರಶಸ್ತಿಯನ್ನೂ, ಶ್ರಮಿಕರ ಕೆಂಬಾವುಟ ಪ್ರಶಸ್ತಿಯನ್ನೂ ಮತ್ತು ಮೂರು ಪದಕಗಳನ್ನೂ ಬಹುಮಾನವಾಗಿ ಪಡೆದರು. ಅವರ ಅರುವತ್ತನೆಯ ಹುಟ್ಟು ಹಬ್ಬದ ಸಂದರ್ಭದಲ್ಲಿ 'ಸಾಮಾಜಿಕ ಶ್ರಮವೀರ' ಎಂಬ ಬಿರುದು (ಲೆನಿನ್ ಪ್ರಶಸ್ತಿ ಮತ್ತು ಕುಡುಗೋಲು ಸುತ್ತಿಗೆಯ ಸುವರ್ಣನಕ್ಷತ್ರದ ಬಹುಮಾನವನ್ನೊಳಗೊಂಡುದು), ಕಮ್ಯುನಿಸ್ಟ್ ಪಾರ್ಟಿಗೂ ಮತ್ತು ಸೋವಿಯೆತ್ ಜನತೆಗೂ ಅವರು ಸಲ್ಲಿಸಿದ ಅದ್ಭುತ ಸೇವೆಯ ಸನ್ಮಾರ್ಥವಾಗಿ, ಸೋವಿಯೆತ್ ಒಕ್ಕೂಟದ ಸರ್ವೋಚ್ಚ ಸೋವಿಯೆತ್ತಿನ ಅಧ್ಯಕ್ಷ ಮಂಡಲದ ಶಾಸನದ ಮೂಲಕ, ೧೯೫೪ರ ಏಪ್ರಿಲ್ ದಿನಾಂಕ ೧೬ ರಂದು ಎನ್. ಎಸ್. ಖ್ರುಷ್ಚೇವ್‌ರವರಿಗೆ ಗೌರವ ಪೂರ್ವಕವಾಗಿ ಕೊಡಲ್ಪಟ್ಟಿತು.

ಬಹಳ ದಿನಗಳ ಮೇಲೆ

ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ. ಗುಳೇದಗುಡ್ಡ

೧

ಬಹಳ ದಿನಗಳ ವರೆಗೆ ನಿಮ್ಮ ದರುಶನವಿಲ್ಲ,
ಎಷ್ಟು ಸೊರಗಿದಿರಲ್ಲ ಎನ್ನ ದೊರೆಯೆ— !
ಎನ್ನ ಒಲವನೆ ಆಣೆಯಿಟ್ಟು ಹೇಳುವೆ ನಿಮಗೆ
ನಿಮ್ಮ ಒಲವನು ನಾನು ಎಂದಿಗೂ ಮರೆಯೆ.

೨

ನಿಮ್ಮ ಹೆಸರನು ಹೇಳಿ ಹಣೆಗೆ ತಿಲಕವನಿಡುವೆ
ಹೂವೆತ್ತಿ ಮುಡಿಯುವೆನು ಮತ್ತೆ ನಾನು;
ನಿಮ್ಮಿಂದಲೇ ಎನಗೆ ಎಲ್ಲ ಸಂಪದವಿಲ್ಲಿ
ನಿಮ್ಮ ಒಲವೇ ಎನಗೆ ಹಾಲು—ಜೇನು.

೩

ನಿಮ್ಮ ಒಲವಿನ ಕೊಳದಿ ಜೀವಿಸುವ ಮೀನನಾ,
ನಿಮ್ಮ ಬಲವೇ ಎನಗೆ ಆಧಾರವು—;
ಎನ್ನ ಬಾಳಿನ ಕೊಳದಿ ರಮ್ಯತೆಯ ಸೂಸುತಿಹ
ನಿಮ್ಮ ನಾಮವೆ ಎನಗೆ ಮಂದಾರವು.

೪

ಎನ್ನ ಜೀವದ ಜೀವ, ನೀವು ನಿಲ್ಲುವ ತಾವು
ಎನ್ನ ಪಾಲಿಗೆ ಅದುವೆ ಬೃಂದಾವನ;
ಬಾಳಕಾಸಾರದಲಿ ಒಲವಿನಾಸರದಲ್ಲಿ
ಬೆಳೆದ ಮನವಿದು ನಿಮ್ಮ ಸಿಂಹಾಸನ.

೫

ಬಂದು ನಿಂದಿಹೆನಿಂದು ನಿಮ್ಮೆದುರು ಎನ್ನರಸ,
ಕೊರಗದಿರಿ, ಮರುಗದಿರಿ ಇನ್ನು ಮೇಲೆ—;
ನಿಮ್ಮ ಮಂದಸ್ಮಿತದ ಮಂದಾರವರಳಿಸುತ
ಕರುಣಿಸೈ ಓ ದೊರೆಯೆ ಎನ್ನ ಮೇಲೆ—.

೬

ಬಹಳ ದಿನಗಳ ಮೇಲೆ ನಿಮ್ಮ ದರುಶನವಾಯ್ತು;
ಎಷ್ಟು ಸೊರಗಿದಿರಲ್ಲ ಎನ್ನ ದೊರೆಯೆ!
ನಿಮ್ಮಿಂದ ನಾನಗಲಿ ಒಂದು ತಿಂಗುಳ ಸಹಿತ
ಇನ್ನೆಂದಿಗೂ ಮತ್ತೆ ದೂರ ಸರಿಯೆ—.

ನಾಡನುಳಿಸಲು ಕರೆ

ಶ್ರೀ. ಜಿ. ಎನ್. ಸಜ್ಜನ ಬಿ. ಎ., ಹೈದರಾಬಾದ್

ನರಿ-ನಾಯಿಗಳಿಗಿಂದು. ಕಡೆಯಾದೆವಲ್ಲ |
ನರದೇಹವನೆ ಧರಿಸಿ ಜಡವಾದೆವಲ್ಲ ||

ನರಿಯು ಕರೆಯಿತು ತನ್ನ ಬಳಗವನೇ ಕೂಗಿ |
ಕಾಣ! ಎಂದು ಕೂಡಿಸಿತು ಕುಲವನ್ನೆ ಕಾಗಿ ||
ಸ್ವಾಮಿನಿಷ್ಠೆಯ ಮೂರ್ತಿ ಶ್ವಾನ ತಾನಾಗಿಹುದು |
ಸಹನಶೀಲದ ಮೂರ್ತಿ ಕತ್ತೆಯೇ ತಾನಿಹುದು ||
ಬ್ಯಾಡ! ಎನಲು ಒಂದೆಡೆಗೆ ಕುರಿ ಹಿಂಡೆ ಕೂಡುವುದು |
ಬಾಣ! ಎಂದು ಕರೆದರೂ ಬಾರದಿಹ ಕನ್ನಡರೆ! ||

ತಲೆಯಿರದ ಪ್ರಾಣಿಗೂ ಬೆಲೆಯಾಯಿತಲ್ಲ! |
ತಲೆಯುಳ್ಳ ಮಾನವನ ಬೆಲೆಹೋಯಿತಲ್ಲ! ||
ಧರ್ಮಗುರುವಿನ ಗಾದಿ ಬಸವ ಕಲ್ಯಾಣವನು |
ರಾಜ್ಯಗುರುವಿನ ಗಾದಿ ಹಂಪೆಯಾಸ್ಥಾನವನು ||
ಕನ್ನಡವ ಗಾದಿಗಳನುಳಿಸಿ ಅಳಲು ಕೂಡಿ |
ಕನ್ನಡದ ಬಾವುಟವ ನೆಟ್ಟುನಲಿಯಲು ಕೂಡಿ! ||

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ '**ಹಿಮುಗಿರಿಯ ಅಡಿಯಲ್ಲಿ**" ಕಥೆಯನ್ನು ಕುರಿತು ಇಬ್ಬರಿಂದಲೂ '**ಆನಂದಯಜ್ಞ**' ಕವಿತೆಯನ್ನು ಕುರಿತು ಐದು ಜನರಿಂದಲೂ ವಿಮರ್ಶೆಗಳು ಬಂದಿವೆ. ವಿಮರ್ಶಕರ ಸಂಖ್ಯೆ ಈ ಪಂಗಳು ಅತ್ಯಲ್ಪವಾಗಿದೆ. ದೀಪಾವಳಿ ಹಬ್ಬದ ಸಡಗರ–ಸಮಾರಂಭಗಳನ್ನು ಬಿಟ್ಟು, ಸಾಹಿತ್ಯವಿಮರ್ಶೆಗಾಗಿ ಏಕೆ ತಲೆ–ಯನ್ನು ಕಾಯಿಸಿಕೊಳ್ಳಬೇಕೆಂಬ ವಿಚಾರ ಬಂದಿತೋ ಏನೋ ನಮ್ಮ ತರುಣ ವಿಮರ್ಶಕರಿಗೆ. ಆದರೆ ತಲೆಯನ್ನು ಕಾಯಿಸಿ ಕೊಳ್ಳದೆ ಆನಂದದ ಸಿದ್ಧಿಯಾಗಲಾರದು. ಮನೆಯ ಹಿರಿಯರು ಹಣಕ್ಕಾಗಿ ತಲೆ ಕಾಯಿಸಿಕೊಳ್ಳುತ್ತಾರೆ; ಮನೆಯ ಹಿರಿಯ ಹೆಣ್ಣುಮಕ್ಕಳು ತಿಂಡಿ–ತೀರ್ಥಗಳನ್ನು ಒದಗಿಸಲು ತಲೆ–ದೇಹ ಕಾಯಿಸಿಕೊಳ್ಳುತ್ತಾರೆ. ಅವರು ತಲೆಯನ್ನು ಕಾಯಿಸಿಕೊಂಡಾಗಲೇ ನಿಕ್ಕವರಿಗೆ ದೀಪಾವಳಿಯ ಆನಂದ ಸಿದ್ಧಿಸಿತು. ನಮ್ಮ ವಿಮರ್ಶಕರು ಸಾಹಿತ್ಯಾನಂದದ ಸಿದ್ಧಿಗಾಗಿ ತಲೆ ಕಾಯಿಸಿಕೊಳ್ಳುವುದಕ್ಕೆ ಹಿಂಜರಿಯಬಾರದು.

'**ಹಿಮುಗಿರಿಯ ಅಡಿಯಲ್ಲಿ**' ವಿಮರ್ಶಕರು

೧. ಶ್ರೀ. ಶಿವರಾಮಪ್ರಸಾದ ಕ್ಯಾದಕೊಪ್ಪ, ಕರ್ನಾಟಕ ಕಾಲೇಜ್, ಧಾರವಾಡ ೨. ಶ್ರೀ. ಕೆ. ಎಸ್. ಶರ್ಮಾ '**ವಾಣೀಮಂದಿರ**' ಕಾಸರಗೋಡು.

'**ಆನಂದಯಜ್ಞ**'ದ ವಿಮರ್ಶಕರು

೧. ಶ್ರೀ. ಅನಂತ ಪಿ. ಜಹಾಗಿರದಾರ, ಕಲಬುರ್ಗಿ ೨. ಶ್ರೀ. ಪುಂಡೂರು ವೆಂಕಟರಾಜ, ಪುಣಿಂಚತ್ತಾಯ ೩. ಶ್ರೀ. ಎನ್. ನಾರಾಯಣ ಬಲ್ಲಾಳ, ಉಡಿಪಿ ೪. ಶ್ರೀ. ಕೆ. ಎಸ್. ಶರ್ಮಾ '**ವಾಣೀಮಂದಿರಂ**' ಕಾಸರಗೋಡು. ೫. ಶ್ರೀ. ಎಸ್. ಶ್ರೀನಿವಾಸ, ಮಂಗಳೂರು.

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಸಮಿತಿಯವರೇ ನೋಡಿ ನಿರ್ಣಯ ಕೊಟ್ಟಿದ್ದಾರೆ. '**ಹಿಮುಗಿರಿಯ ಅಡಿಯಲ್ಲಿ**' ಕಥೆಯ ವಿಮರ್ಶೆಗಳಲ್ಲಿ ಶ್ರೀ. **ಕೆ. ಎಸ್. ಶರ್ಮಾ** ಅವರದು ಅತ್ಯುತ್ತಮವಾಗಿದೆ. ಶ್ರೀ. ಶಿವರಾಮಪ್ರಸಾದರ ವಿಮರ್ಶೆಯು ಉತ್ತಮವಾಗಿದೆ.

'**ಆನಂದಯಜ್ಞ**' ಕವಿತೆಯ ವಿಮರ್ಶೆಗಳಲ್ಲಿ ಶ್ರೀ. **ಕೆ. ಎಸ್. ಶರ್ಮಾ** ಮತ್ತು **ಶ್ರೀ. ಎನ್. ನಾರಾ. ಯಣ ಬಲ್ಲಾಳ** ಇವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಎಸ್. ಶ್ರೀನಿವಾಸರ ವಿಮರ್ಶೆ ಚೆನ್ನಾಗಿದೆ. ಮಿಕ್ಕುವು ತೀರ ಸಾಮಾನ್ಯವಾಗಿವೆ. ಕೃತಿಯ ಅಂತರಾರ್ಥವನ್ನು ಸರಿಯಾಗಿ ಅರಿತುಕೊಳ್ಳದೆ, ಅದನ್ನು ವಿಮರ್ಶಿಸಲು ಅಪೇಕ್ಷೆಪಡುವುದು ಸರಿಯಾದ ಕ್ರಮವಲ್ಲ. ಕೃತಿಯನ್ನು ಅರ್ಥಮಾಡಿಕೊಂಡು, ಕೃತಿಕಾರನ ಭಾವರೀತಿಗಳು ಒಪ್ಪಿಗೆ. ಯಾಗದೆ ಹೋದರೆ, ಸರಿಯಾದ ಕಾರಣಗಳನ್ನು ಕೊಟ್ಟು ಅವುಗಳನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಬಹುದು; ಖಂಡಿಸಬಹುದು. ಆದರೆ ಕೃತಿಕಾರನ ಆಶಯಗಳನ್ನು ಸರಿಯಾಗಿ ಗುರುತಿಸದೆ, ಅವನ ಕೃತಿಯಲ್ಲಿ ಇಲ್ಲದ ತಪ್ಪುಗಳನ್ನು ಇವೆಯೆಂದು ಭಾವಿಸಿ ಟೀಕಿಸುವುದೂ ಖಂಡಿಸುವುದೂ ವಿಮರ್ಶೆಯ ಗಾಂಭೀರ್ಯಕ್ಕೆ ಒಪ್ಪಿಗೆಯಾಗದ ಮಾತು.

ಮುಂದಿನ **ಸಲದ** ವಿಮರ್ಶೆಯ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ '**ಸಂಸ್ಕೃತಿ ಸಮರ**' ಎಂಬ ಕಥೆಯನ್ನು ತೆಗೆದುಕೊಳ್ಳಬೇಕು. ಅಲ್ಲದೆ, ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಕವಿತೆಗಳಲ್ಲಿ, ತಮಗೆ ಇಷ್ಟವೆನಿಸಿದ ಒಂದು ಕವಿತೆಯನ್ನು ಕುರಿತೂ ವಿಮರ್ಶೆ ಬರೆದು ಕಳುಹಬೇಕು. ಮುಂದಿನ ಮೇಲಾಟಕ್ಕಾದರೂ ವಿಮರ್ಶೆಗಳು ಹೆಚ್ಚು ಸಂಖ್ಯೆಯಲ್ಲಿ ಬಂದಾವು— ಎಂಬ ನಿರೀಕ್ಷೆಯಿದೆ.

—ಸಂಪಾದಕರು

ಹಿಮಗಿರಿಯ ಅಡಿಯಲ್ಲಿ

(ಸಣ್ಣಕತೆಯ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು

ಭಾರತೀಯ ವೀರ ಚರಿತ್ರಾಲಂಕಾರಭೂತನಾದ, ರಣಶೂರನಾದ ಕ್ರಾಂತಿನಾಯಕ ನಾನಾಸಾಹೇಬನ ವೀರಚರಿತ್ರೆಯು, ಕ್ಷತ್ರಸನ್ಯಾಸೋ-ವೃತ್ತಿಯು ಸಂನ್ಯಾಸದ–ಶಾಂತಿಯ ಸೋಗಿಲನ್ನು ಹೊಂದಿ, ಭಾರತ ಸ್ವಾತಂತ್ರ್ಯೋದಯವನ್ನು ಸೇವಾಭಾವದಿಂದ ಪ್ರತೀಕ್ಷಿಸುವುದೇ ಪ್ರಸ್ತುತ ಕಥಾಭಾಗದ ಅಂತರ್ನಿಲೀನ ವಿಚಾರಸಂಪತ್ತು.

× × × ×

ಕೈಹೊತ್ತಿಗೆಗಳ ರೂಪದಲ್ಲಿ ಕಾದಂಬರೀಪ್ರಪಂಚವು ತಲೆ-ಯೆತ್ತಿನಿಂತ ಈ ಕಾಲದಲ್ಲಿ, ಚಿಕ್ಕಕತೆಗಳ ಅವತರಣವು ಕಡಿಮೆ-ಯೆಂಬುದು ಸರ್ವವಿದಿತವು. ಶೀಘ್ರ ಪರ್ಯವಸಾಯಿಗಳಾದ ಚಿಕ್ಕ-ಕತೆಗಳು ಮೂಡಿಸುವ ಪ್ರಭಾವವು ಆಕರ್ಷಕ, ಸುಂದರ, ನೈಜ ಘಟನೆಗಳಲ್ಲಿ ಅದೆಷ್ಟು ಮಾರ್ಮಿಕವಾಗಿ ನೆಲೆನಿಲ್ಲುತ್ತವೆಂಬುದು ಅನುಭವಾಯತ್ತವು. ಇಂತಹ ಕತೆಗಳು ಸಾಮಾಜಿಕ, ಚಾರಿತ್ರಿಕ, ಪೌರಾಣಿಕ ವಸ್ತುಗಳ ಎರಕದಲ್ಲಿಯೂ ತತ್ತತ್ ಮಾರ್ಗಾಯತ್ತ ವೈಶಿಷ್ಟ್ಯಗಳಿಂದ ಶೋಭಿಸುವವು ಎಂದೆನ್ನುವಾಗ; ನಾವಿಲ್ಲಿ ರಚಕನ ವಸ್ತು, ಸನ್ನಿವೇಶ, ಕಥಾಘಟಕಗಳ ನಿರೂಪಣೆಯನ್ನು ಗಮನವಿರಿಸಿ ಪರಿಶೀಲಿಸಬೇಕು. ಅರ್ಥಾತ್ ಚಿಕ್ಕಕತೆಗಳ ರಚನೆ ಸುಲಭವಲ್ಲ; ಅನುಭಾವೀ ಲೇಖಕನ ಅನುಭವಪೂರ್ಣ ವಿಚಾರ ಸಂಪದ್ವಾನವಲ್ಲಿದೆ-ಯೆಂಬುದನ್ನರಿಯಬೇಕು!

× × × ×

ಪ್ರಸ್ತುತ ಕತೆಯು ಚಾರಿತ್ರಿಕ ಘಟನೆಯೊಂದನ್ನು ಪುಟಗೊಳಿ-ಸಿದೆ. ಚರಿತ್ರೆಯಲ್ಲಿ ಬರುವ ಘಟನೆಗಳೆಲ್ಲವನ್ನೂ ಪರಿಶೀಲಿಸಿದ ಲೇಖಕನು ತಾನು ಅನುಗೊಳಿಸುವ ವಸ್ತುರಚನೆಯಲ್ಲಿ ಪಾತ್ರ-ಪೋಷಣೆಯನ್ನು ಕೈಕೊಂಡಂತೆ ಉಪಾತ್ತ ವಸ್ತುವಿನ ರೂಪರೇಷೆ-ಗಳನ್ನು ಸಾಂದರ್ಭಿಕ ವಿಚಾರದಿಂದ ಸಮೆಯಬೇಕು. ಇದರೊಂದಿಗೆ ಲೇಖಕನು, ಪ್ರಸ್ತುತ ಕಾಲಾನುಗುಣವಾದ ವಿಚಾರಲಹರಿಯನ್ನು ಹರಿಯಿಸುವ ಬಗೆಯು ಕಥಾವಸ್ತುವನ್ನು ಆರಿಸಿ ಜನಮನದಲ್ಲಿ ಕ್ರಾಂತಿ ಯನ್ನೆಸಗುವುದು ಅವಶ್ಯವಿದೆ. ಕಾಲಾನುಗುಣವಾಗಿ ಹರಿದುಬಾರದ ಜನತೆಯ ಹಸಿವನ್ನಿಂಗಿಸಲಾರದ ಸಾಹಿತ್ಯ ಪ್ರಭಾವಿಯಾಗಲಾರದು. ಈ ವಿಚಾರವನ್ನರಿತೇ ಲೇಖಕನು ತಾನಾಯುವ ವಸ್ತುವನ್ನು ಪರಿ-ಶೀಲಿಸಬೇಕು. ಶತಮಾನಗಳ ಮರೆಯಲ್ಲಿ ನಿಂತ ಕಥಾವಸ್ತುವಿಗೆ ಅಧುನಿಕ ಜೀವನದ ಜೀವವನ್ನು, ಆವಶ್ಯಕತೆಯನ್ನು ತುಂಬಿಕೊಡ-ಬೇಕು—ಆಗಲೆ ಅದು ಪೂರ್ಣ.

" ಹಿಮಗಿರಿಯ ಅಡಿಯಲ್ಲಿ "—ಗಜಾನನರ ಒಂದು ಕ್ರಾಂತಿಯ ಸಿಂಹಾವಲೋಕನ; ಇಲ್ಲವೆ ವೀರಚರಿತ್ರೆಯ ಪರಿಶೀಲನೆ. ಎಂದರೆ ಕ್ರಾಂತಿನಾಯಕ ನಾನಾಸಾಹೇಬನ ಚರಿತ್ರೆಯು ಭಾರತಕ್ಕೆ ಸಾರಿದ ಒಂದು ವೀರೇತಿಹಾಸದ ಶುಭಸಂಧಿ; ಈ ಸಂಧಿಯಲ್ಲಿ ಅಡಕವಾಗಿದೆ ಭಾರತ ಸ್ವಾತಂತ್ರ್ಯವನ್ನು ಪಡೆಯಲಿರುವ, ಜೀವನ ಸ್ವಾತಂತ್ರ್ಯ-ವನ್ನು ಹೊಂದಲಿರುವ ಅಹಿಂಸಾಮನೋವೃತ್ತಿಯ ಉದಾತ್ತೇತಿವೃತ್ತ. ಕ್ಷತ್ರವೃತ್ತಿಯನ್ನೂ ಮೀರಿನಿಂತು ಬೆಳಗುವ ಸಂನ್ಯಾಸವೃತ್ತಿಯನ್ನಿದು ತೋರುತ್ತದೆಯೆಂಬುದರಿಂದಲೇ ಇದೊಂದು ಅದರಣೀಯ ಕಥಾ-ವಸ್ತು!

ಹೌದು, ನಾನಾಸಾಹೇಬನು, ಇಂಗ್ಲಿಷ್ ಸೇನಾಪತಿಯಾದ ಸರ್ ಹೋಪ್ ಗ್ರ್ಯಾಂಟನಿಗೆ ಕೊನೆಯ ಪತ್ರವನ್ನು ಕೊಟ್ಟು, ಒಡ-ನಾಡಿಗಳೆಲ್ಲರನ್ನೂ ಕಳೆದುಕೊಂಡ ಆ ದುರ್ಧರ ಪ್ರಸಂಗದಲ್ಲಿ, ಜೀವನದ ತೀಕಾಟದಲ್ಲಿ ತತ್ತರಿಸಿ, ಪ್ರಪಂಚದಿಂದ ಕಣ್ಮರೆಯಾಗಿ ಹೋಗುತ್ತಿದ್ದನು. ಅವನೇರಿದ ಕುದುರೆ ಹಿಮಾಲಯದ ತಪ್ಪಲೆಡೆಗೆ ಬಂತು. ದಣಿದು ಬಾಯಾರಿದ ನಾನಾ, ಕಾಣಿಸಿದೊಂದು ಸರೋವರದಿಂದ ನೀರುಕುಡಿದು ಬಳಯಲ್ಲಿದ್ದ ಗಿಡದಡಿಯಲ್ಲಿ ಕುಳಿತು, ಅಗೊ, ತನ್ನ ಭೂತಸ್ಥಿತಿಯನ್ನು ಎಣಿಸುತ್ತಿರುವನು.

ನಾನಾನ ಅಶ್ರುಭರಿತ ನಯನಗಳಲ್ಲಿ ಐದು ವರುಷಗಳ ಹಿಂದಿನ ಭಾರತಚರಿತ್ರೆ ಮತ್ತೊಮ್ಮೆ ಕಂಡಿತು. ಭಾರತ ಸ್ವಾತಂತ್ರ್ಯಕ್ಕಾಗಿ, ಧರ್ಮವಿಜಯಕ್ಕಾಗಿ, ಹೆಚ್ಚೇನು–ಭಾರತ ಜೀವನದ ಪೂರ್ಣ ಸ್ವಾತಂ-ತ್ರ್ಯಕ್ಕಾಗಿ ಉದ್ಯಮಿಸಿದ ತನ್ನೊಡನೆ ಸಂಗಾತಿಗಳಾಗಿ ಬಂದ ತಾತ್ಯಾ ಟೋಪಿ, ಲಕ್ಷ್ಮೀಬಾಯಿ, ಮೌಲ್ವಿಅಹಮ್ಮದಶಹ, ಅಜಿಮುಲ್ಲಾಖಾನ್ ಮೊದಲಾದ ಮಹಾವೀರರನ್ನು ನೆನೆದು, ಅವರೆಲ್ಲರ ನಿಃಸ್ವಾರ್ಥ ಬಲಿ-ದಾನವನ್ನು ನೆನೆದು, ಅವರಿಸಗಿದ ಭಾರತ ಸೇವೆಯನ್ನು ಸ್ತಂಭಿತ ಹೃದಯದಿಂದ ನೆನೆಯುವನು; ಆ ಮಹಾವೀರರ ಜೀವನದ ಘಟನೆ-ಗಳನ್ನು ಪರಿಭಾವಿಸುತ್ತ, ತತ್ತತ್ ಕಾಲಾಯತ್ತವಾಗಿ ನೆಲೆನಿಂತ ರಾಜಪರಂಪರೆಗಳನ್ನು ನಿಲುಕಿಸುತ್ತ, ಭಾರತವು ತನ್ನ ವೀರಚರಿತ್ರೆ-ಯಲ್ಲಿ ನೆಲೆನಿಲ್ಲಿಸಿದ್ದ ಇತರ ಭಾರತಸಿಂಹಗಳನ್ನು ನೋಡುತ್ತ ನಾನಾ-ಸಾಹೇಬನು ಇದ್ದಕ್ಕಿದ್ದಂತೆಯೆ ಕೆರಳಿ— ರಾಜಕೀಯ ವಿಚಾರ-ವನ್ನೊಮ್ಮೆ ಪರಿಶೀಲಿಸುವನು. ಪರಿಶೀಲನೆಯ ಮುಂದೆ– ಸೋತು ಪಲಾಯನವೆಸಗಬಹುಬಾಗಿದ್ದ ಫಿರಂಗಿಗಳನ್ನು ಬೇಕೆಂದೇ ಬರಮಾಡಿ-ಕೊಂಡ, ಭಾರತದ ನೆಲದಲ್ಲೆ ಜನಿಸಿದ್ದ ಸ್ವಾರ್ಥಿರಾಜರ ದ್ರೋಹ-ವನ್ನೊಮ್ಮೆ ನೆನೆಯುವನು. ನಾನಾನು ಉದ್ವಿಗ್ನನಾಗಿ ಅದೇ ಹಿಮ-ಗಿರಿಯನ್ನು ಆಚ್ಛಾದಿಸಿದ್ದ ರಾತ್ರಿಯ ಭೀಕರತೆಯನ್ನು ಸೀಳಿ ಮುಂದಡಿ ಇಡಬಯಸಿದನು. ಆ ಮುಂದಡಿಯಲ್ಲೇ ವೀರರ ನಡೆಗಳೂ, ಕುಹಕಿ ಗಳ ಮೋಸವೂ ಮತ್ತೊಮ್ಮೆ ಸುಳಿದುಬಂದುವು. ಅದರಿಡೆಯಲ್ಲೇ ಏಕಾಕಿಯಾಗಿ ಹೇಡಿಯಂತೆ ಬಂದ ತನ್ನಿರವೂ ಅವನನ್ನು ಚುಚ್ಚಿತು. ವೀರನಾದ ನಾನಾನು ಮತ್ತೊಮ್ಮೆ, ಭಾರತದ ಸ್ವಾತಂತ್ರ್ಯಕ್ಕಾಗಿ ಪ್ರತಿಜ್ಞೆಗೈಪು, ರಾತ್ರಿಯನ್ನು ಸೀಳಿಕೊಂಡು ಬರುತ್ತಿರುವ—ತನ್ನ ನಡೆಗೆ ಕಲ್ಯಾಣವನ್ನೊದಗಿಸಿ ಬರುತ್ತಿರುವ—ಉಷೆಯನ್ನೂ, ಉಷೆಯ ಮುಂದೆ ತಲೆದೋರಿದ ಸೂರ್ಯನಾರಾಯಣನನ್ನೂ ವಂದಿಸಿ, ತನ್ನ

ನಡೆಗೆ ದಾರಿತೋರಬೇಕಾದ ಶಕ್ತಿಯೊಂದನ್ನು ಬಗೆನು, ಅಲ್ಲೇ ನಿಲ್ಲುವನು.

ಆಗಲೆ–ಮಹರ್ಷಿಯೊಬ್ಬನು ಆಗಮಿಸುವನು. ಸರೋವರದಲ್ಲಿ ಸ್ನಾನಾದಿಗಳನ್ನು ತೀರಿಸಿ ಆಶ್ರಮದೆಡೆಗೆ ಸಾಗುತ್ತಿರುವ ಆ ಸಂನ್ಯಾಸಿಯ ಪಾದಗಳಿಗೆ ವಂದಿಸಿ, ಅವನಪ್ಪಣೆಯಂತೆ ಆಶ್ರಮಕ್ಕೆ ತೆರಳಿ, ತನ್ನ ಜೀವಿತದ ಇತಿವೃತ್ತವನ್ನು ಸಾರಿ ನೆಲೆಯನ್ನು ಕೇಳುವನು.

ಸಂನ್ಯಾಸಿಯು ಕರುಣಿಸಿದ: "ವೀರಯೋಧನೆ, ಸತ್ಯದೃಷ್ಟಿಯಿಂದ, ಜ್ಞಾನದ ದೃಷ್ಟಿಯಿಂದ–ನೀನ್ನಿಸು ಇಂದು ಭರತವರ್ಷವನ್ನು ಉದ್ಧರಿಸುವವರು ಕ್ಷತ್ರಿಯರಲ್ಲ—ಸಂನ್ಯಾಸಿಗಳು" ಎಂಬ ಉಪದೇಶಾಮೃತದಿಂದ ಪುಳಕಿತನಾಗಿ, ಭಾರತಸ್ವಾತಂತ್ರ್ಯದ ಸವಿಯನ್ನು ಅಹಿಂಸೆಯ ಮಾರ್ಗದಲ್ಲಿ ಸವಿದು, ಆದೇ ದಿನ ಆದೇ ಸರೋವರದ ಬಳಿಯಲ್ಲಿ, ತನ್ನ ಸೈನಿಕ ಉಡುಪನ್ನು ಕಳಚಿ ಕಾಷಾಯವಸ್ತ್ರವನ್ನು ಧರಿಸಿ, ಭಾರತೀಯ ಸೇನೆಗೆ ಮನದಂದು ಶಾಂತಿದೀಕ್ಷೆಯನ್ನು ಕೈಕೊಂಡು ಪಾವನನಾದನು.

ಇಲ್ಲಿಗೆ ಮುಗಿಯಿತು ಕಥಾವಸ್ತು!

ಸ್ವಾಭಿಮಾನಶೂನ್ಯರಲ್ಲದ, ಭಾರತೀಯ ಹೃದಯವನ್ನೇ ಇಂದಿನ ಸ್ವಾತಂತ್ರ್ಯ ಯುಗಕ್ಕೆ ಮಣಿದೀಪಿಕೆಯಂತೆ ಕಾಣಿಸಿದ ರಣಹೇಡಿಗಳಲ್ಲದ–ಕ್ರಾಂತಿನಾಯಕರ, ಕ್ರಾಂತಿಚರಿತ್ರೆಯ ಒಂದು ಉದಾತ್ತ ಇತಿವೃತ್ತವನ್ನು ನಾವೀಕಥೆಯಲ್ಲಿ—ನಾನಾನ ಜೀವಿತ ಪ್ರವಾಹದಲ್ಲಿ—ಕಾಣಬಹುದು. ಕೊನೆಯ ಪೇಶ್ವೆಯಾದ ನಾನಾ, ಜೀವಿತದ ಕೊನೆಯಲ್ಲಿ ಸೇವಾಭಾವದಿಂದ ಕಾಷಾಯ ವಸ್ತ್ರವನ್ನು ಧರಿಸಿದವನಾದರೂ, ತನ್ನ ಪೂರ್ವಾಶ್ರಮದಲ್ಲಿ, ಭಾರತೀಯ ರಣರಂಗವನ್ನು ವೀರಚರಿತ್ರೆಯಿಂದ ಮೆರೆದಾಡಿಸಿ, ಭಾರತಿಯನ್ನು ಧರ್ಮಭಾವನೆಯಿಂದ ಪುಳಕಿತಗೊಳಿಸಿ, ಸ್ವಯಂಪೂರ್ಣನಾದ ಆದರ್ಶವೀರ. ಫಿರಂಗಿಯವರ ದಾಳಿಯಲ್ಲಿ ಭಾರತವನ್ನು ಸ್ವತಂತ್ರಗೊಳಿಸಲೆಳಸಿ ಹೋರಾಡಿ, ಹೋರಾಡಿ, ಶುಭಸಂಧಿಯನ್ನು ದೊರೆಕಿಸುವ ಮಹಾದಿನವನ್ನು ಕಾಣುವಂತಹ ಭಾಗ್ಯವನ್ನು ಯೋಚಿಸುತ್ತಿದ್ದಾಗಲೆ, ವಿದ್ರೋಹಿ ಬಂಧುಗಳ ಸ್ವಾರ್ಥಲಾಲಸೆಯಿಂದ ಆ ಭಾಗ್ಯವನ್ನೂ, ಮಹಾವೀರರನ್ನೂ ಅಳಿಸಿಕೊಂಡ ದುರ್ದೈವೀ ಯೋಧ. ನಾನಾನ ವೀರಚರಿತ್ರೆಯೆಂದರೆ ಅದೊಂದು ಅದ್ಭುತೇತಿಹಾಸ. ಆ ಚರಿತ್ರೆಯಲ್ಲಿ ತುಂಬಿನಿಂತ ಘಟನೆಗಳಿಗೆ ಮಿತಿಯಿಲ್ಲ. ಅದೊಂದು ಸಂಮಿಶ್ರಿತ ಭಾವಸಂಧಿ.

ಹಿಮಗಿರಿಯ ಅಡಿಯಲ್ಲಿ ನೆಲೆನಿಂತ ನಾನಾ, ತನ್ನ ಚರಿತ್ರೆಯನ್ನು ಸ್ಮೃತಿಪಟದಲ್ಲಿ ಬಿಂಬಿಸುವನು. ಆ ನೆನಹು ಅವನ ಹೃದಯವನ್ನು ಕುಲುಕುವುದು; ಹಿಚುಕುವುದು; ಮೊರೆದೇಳಿಸುವುದು. ವೀರನಾದರೂ ಅವನ ನೇತ್ರಗಳಿಂದ ಕಣ್ಣೀರ ಕೋಡಿಯನ್ನು ಹರಿಯಿಸುವುದು. ಆ ಕಣ್ಣೀರ ಕೋಡಿಯೇ ಅವನಲ್ಲಿ ರಣೋನ್ಮತ್ತತೆಯನ್ನು ತುಂಬುವುದು. ತುಂಬಿನಿಂತ ಆ ಉನ್ಮಾದ ಅವನಲ್ಲಿ ಭಾರತದ ಪೂರ್ಣಸ್ವಾತಂತ್ರ್ಯದ ಹೊಂಗನಸನ್ನು ಕೆರಳಿಸುವುದು.

ಲೇಖಕರು ಉತ್ತಮವಾದ ಕಥಾವತಾರವನ್ನು ಇಳಿಸಿದ್ದಾರೆ. ಇಂಗ್ಲೀಷ್ ಸೇನಾಪತಿಗೆ ಪತ್ರ ಬರೆದು, ಅದೇ ಗಳಿಗೆಯಲ್ಲಿ ಕುದುರೆಯೇರಿ ಹಿಮಗಿರಿಯೆಡೆಗೆ ತೆರಳುತ್ತಿರುವ ನಾನಾನನ್ನು, ವೀರನನ್ನು—ಒಂದು ಹೊಸಕ್ಷೇತ್ರಕ್ಕೆ ಕಾಲಿರಿಸುವಂತೆ ಮಾಡಿ, ಅವನ ಇತಿವೃತ್ತವನ್ನು ಉಪಸಂಹಾರದ ಗತಿಯಲ್ಲಿ ಪೂರ್ಣತೆಗೆ ತಂದಿದ್ದಾರೆ. ಉಪಸಂಹಾರದ ಶಾತಿಯು ಸೋಗಲೇ— ನಾನಾನ ಹೃದಯವನ್ನು ಭವಿಷ್ಯದ್ಭಾರತದ ಸ್ವಾತಂತ್ರ್ಯ ಸೇವಾಭಾವದಿಂದ ತುಂಬಿ ನಿಲಿಸಿದೆ. ಹಿಮಗಿರಿಯ ತಪ್ಪಲಲ್ಲಿ ತಂಗಿದ ನಾನಾ, ತನ್ನ ಗತಜೀವನವನ್ನು ನೆನೆಯುತ್ತಾನೆ. ನಾನಾಮುಖವಾಗಿ—ಎಂದರೆ—ಭಾರತದ ಪರಿಸ್ಥಿತಿ, ಫಿರಂಗಿಯವರ ಅಧಿಕಾರಲಾಲಸೆ, ಕೆಲವೊಂದು ಕ್ಷುದ್ರ ಭಾರತೀಯರ ಹೇಡಿತನ, ದೇಶಸೇವೆಗಾಗಿ ಜೀವ ಬಲಿದಾನವೆಸಗಿದ ಮಹಾವೀರರ ನೆನಹು, ಅದರೆಡೆಯಲ್ಲಿ ಏಕಾಕಿಯಾಗಿ ಬಂದ ತನ್ನಿರವು—ಇವು ಬಂದು, ನಾನಾನ ಹೃದಯದಲ್ಲಿ ವಿವಿಧಭಾವಗಳನ್ನು ಮೊರೆದೇಳಿಸುವುವು. ಫಿರಂಗಿಯವರನ್ನು ಭ್ರಷ್ಟಿಭಟಿಸಲು, ಹಿಂದಿನ ವೈರವನ್ನೂ ಲೆಕ್ಕಿಸದೆ ವಿಧರ್ಮೀಯರಾದ ಮುಸಲ್ಮಾನರ ಸ್ನೇಹವನ್ನು ಪಡೆದು, ತಾನೆಬ್ಬಿಸಿದ ಕ್ರಾಂತಿಯ ಅಂದೋಲನವನ್ನು ನೆನೆಯುತ್ತ ನಾನಾನು, ತನ್ನ ಗತಿಯಲ್ಲಿರುವ ಲೋಪದೋಷಗಳ ಚಿಂತನೆಯನ್ನೆಸಗಿ, ಅದರಲ್ಲೂ ನಿರ್ದೋಷತ್ವವನ್ನು ಮನಗಂಡು, ಒಮ್ಮೆಲೆ ತನ್ನ ಜೀವನದೊಡನಾಡಿಗಳಾದ ಮಹಾವೀರರನ್ನು ನೆನೆಯುವನು. ಅವರ ವೀರಘಟನೆಗಳನ್ನು ಪರಿಭಾವಿಸುವನು. ಈ ಘಟನೆಗಳ ಚಿಂತನೆಯನ್ನು ಲೇಖಕರು ನಾನಾನ ವ್ಯಕ್ತಿತ್ವದಲ್ಲಿ ತುಂಬಿದುದು ಸಹಜ ಸುಂದರವಿದೆ. ಇದು ಈ ತೆರನ ಕತೆಯ ಓಟಕ್ಕೆ ತುಂಬ ನೆರವಾಗಿದೆ. ಕಾಷಾಯವಸ್ತ್ರವನ್ನು ತೊಡಬೇಕಾದರೆ, ಅಹಿಂಸಾಶಸ್ತ್ರವನ್ನು ಕೈಗೊಳ್ಳಬೇಕಾದರೆ, ಜೀವಿತದ ಗತಸಂಧಿಯ ಭದ್ರವಾದ ನೆನಹುಬೇಕು; ವಿಚಾರಮಥನಬೇಕು. ಇದಕ್ಕೆಂದೇ ಲೇಖಕರು ಗತಚಿಂತನೆಯ ಪರಿವಿಡಿಯಿಂದ ನಾನಾನ ಹೃದಯವನ್ನು ಕೆಚ್ಚಿನಿಂದ ರೊಚ್ಚಿಗೆಬ್ಬಿಸಿದ್ದಾರೆ. ನೀರಾವೇಶವನ್ನು ಜೀವನದ ಒಂದೊಂದು ಅಧ್ಯಾಯಗಳಿಂದಲೂ ಮೊಗೆಮೊಗೆದು ತುಂಬಿದ್ದಾರೆ. ಬಹು ರುಚಿರವಾಗಿದೆ ಈ ಭಾವಸಮಾವೇಶ. ಈ ಸಮಾವೇಶಕ್ಕನುವಾಗಿಯೇ ಲೇಖಕರು ಭೀಕರವಾದ ರಾತ್ರಿಯಲ್ಲಿ, ಶಾಂತವಾದ ಹಿಮಗಿರಿಯ ತಪ್ಪಲಲ್ಲಿ, ನಾನಾನನ್ನು ತಂದು ನಿಲ್ಲಿಸಿದ್ದಾರೆ. ಆದುದರಿಂದಲೇ ವೀರನಾದ ನಾನಾ ಒಮ್ಮೊಮ್ಮೆ ಘೋರರಾತ್ರಿಗೆ ತನ್ನ ಮನವನ್ನು ತೆತ್ತು ಕ್ರೋಧೋನ್ಮತ್ತನಾಗುತ್ತಾನೆ. ಅಲ್ಲೇ ವೀರಚರಿತ್ರೆಯ–ತ್ಯಾಗ ಜೀವನದ ಮಹಾವೃತ್ತವನ್ನು ನೆನೆದು, ಆದೇ ಪ್ರಶಾಂತ ವಾತಾವರಣದಲ್ಲಿ ಶಾಂತಿಗಾಗಿ, ಮುಂಗಲಕ್ಕಾಗಿ, ವಿಜಯಕ್ಕಾಗಿ ಹಾರೈಸುತ್ತಾನೆ. ಎಂತಹ ಸುಂದರ ಸಮಾವೇಶವಿದು!

ಮುಂದೆ ನಾನಾನ ಹೃದಯ, ಗತಚರಿತ್ರೆಯ ಮೆಲುಕಾಟದಿಂದ ಸರಿದು, ತನ್ನ ಜೀವನದೆಡೆ ಬರುವುದು. ಮಹಾಕವಿ ರನ್ನನು ಕಾಣಿಸಿದ ವೀರಕೌರವನ ಹೃದಯಕ್ಕಿಂತಾದವಿದು. ಕೌರವನು ಹೇಡಿಯಾಗಿ ನೀರಲ್ಲಿ ಮುಳುಗಲಿಲ್ಲ; ಕರ್ತವ್ಯಕ್ಕಾಗಿ, ಮಾತಾಪಿತೃಗಳಿಗಾಗಿ ಮುಳುಗಿದನು. ನಾನಾನು ಹೇಡಿಯಾಗಿ ಬರಲಿಲ್ಲ; ಕರ್ತವ್ಯವನ್ನು ಸಮೆಯಲು ಬಂದಿದ್ದನು. ಆದರೆ—ಇಲ್ಲೇ ಕೌರವನಿಗೂ–ನಾನಾನಿಗೂ ಮಹದಂತರ

ಕಾಣಿಸುವುದು. ವೀರ ಕೌರವನು ಕರ್ತವ್ಯದೃಷ್ಟಿಯಿಂದಲೇ ಮುಂದೆ ಸರಿದರೆ, ನಾನಾನು ತನ್ನ ಜೀವನದ ತೀರ್ಮಾನವನ್ನು ಮನದಂದು, ಒಂದು ಪಥದಿಸಿಕೆಗಾಗಿ ಕಾಯುವನು. ಸೂರ್ಯನಾರಾಯಣನನ್ನು ಬೇಡುವನು. ಈ ಭಕ್ತಿಭಾವಸಂಧಿಯಲ್ಲಿ — ವಿವೇಚನಾಪೂರ್ಣ ಭಾವಸಂಧಿಯಲ್ಲಿ–ಕ್ರೋಧವು ಹುದುಗಿನಿಂತು ಭವ್ಯವಾದ ನೆಲೆಯನ್ನು ಕಾಯುವ ಉನ್ಮತ್ತಭಾವಸಂಧಿಯಲ್ಲಿ ನಾನಾನ ಹೃದಯವು ಬೆಳಗುವಂತೆ, ಆ ಪ್ರಶಾಂತ ಉಷಃಕಾಲದಲ್ಲಿ ಲೇಖಕರು 'ಮಹರ್ಷಿ'ಯೊಬ್ಬನನ್ನು ಬರಮಾಡುತ್ತಾರೆ. ಅವನೇ ನಾನಾನ ಹೃದಯಕ್ಕೆ ಬೆಳಕನ್ನು ನೀಡಿದನು. ಯೋಗ್ಯವಾದ ಕಾಲದಲ್ಲೇ ಈ ಘಟನೆ ರೂಪುದೋರಿದೆ. ಈ ಘಟನೆಯು ಅರ್ಥಗರ್ಭಿತವಾಗಿದೆ. ಸರೋವರದ ದಡದಿಂದ ಮೌನವಾಗಿ ಸಾಗುವ ಆ ಮಹಾವ್ಯಕ್ತಿಗಳಿಬ್ಬರ ಗತಿ, ಮುಂದೆ ಆಶ್ರಮದಲ್ಲಿ ನಡೆಯುವ ಮಾರ್ಮಿಕ ಸಂಭಾಷಣೆ, ನಾನಾನ ಹೃದಯ ಪರಿವರ್ತನೆ— ಇವು ವೀರನ ಎದೆಯಿಂದಲೂ ತ್ಯಾಗಪದವಿಯನ್ನು ತೋರುವ ರುಚಿರ ಸಮಾವೇಶವು. ಉಷಃ ಕಾಲದ ಘಟನೆಯಾದುದರಿಂದಲೆ, ನಾನಾನ ಹೃದಯವು ಶಾಂತಿಯನ್ನರಸುವಂತಾಯಿತು. ಆ ಶಾಂತಿಗನುವಾಗಿಯೆ ಪೂರ್ಣನಾದ ಮಹರ್ಷಿ ತಲೆದೋರಿದನು. ವೀರನ ಹೃದಯಪರಿವರ್ತನೆಗಾಗಿಯೆ ಸರೋವರದಿಂದ ಆಶ್ರಮದೆಡೆ ಸಾಗುವ ಮಹರ್ಷಿ ಉಸಿರೆತ್ತಲಿಲ್ಲ. ಎಲ್ಲವೂ ಈ ಬಗೆಯ ಕಥೆಗೆ ಸಮುಂಜಸವಾಗಿ ಒಪ್ಪುತ್ತಿದೆಯೆನ್ನಬೇಕು. "ಕ್ರಾಂತಿಯು ದೈನೇಚ್ಛೆಯಿಂದಲೇ ವಿಫಲವಾಗಿದೆ; ನಿಶ್ಶಸ್ತ್ರವಾಗಿ, ವಿಶ್ವಾಮಿತ್ರನ ಸರ್ವಶಸ್ತ್ರಗಳಿಗೂ ಬಗ್ಗದೇ ಅವನನ್ನು ಸೋಲಿಸಿದ ವಸಿಷ್ಠನಂತಹ ಮಹರ್ಷಿಗೆ ಜನ್ಮನಿತ್ತ ಪುಣ್ಯಭೂಮಿಯಿದು....ಭರತಭೂಮಿಯ ಉದ್ಧಾರವಿಂದು ಕಸ್ತ್ರಾಸ್ತ್ರಗಳಿಂದ ಸಾಧ್ಯವಿಲ್ಲ; ಭಾರತೀಯ ಸೇವೆಗೆ ಇಂದು ರಕ್ತಜೆಲ್ಲಬೇಕಾಗಿಲ್ಲ; ಇಂದು ಬೇಕಾಗಿರುವುದು ತ್ಯಾಗ, ಜ್ಞಾನ, ಧರ್ಮ!" ಈ ಮಾತುಗಳು ಹಿಮಗಿರಿಯ ಅಡಿಯಲ್ಲಿ ಶಾಂತಿಯ ಅಲೆಗಳ ನುಧುರನಾದವನ್ನೆಬ್ಬಿಸುವ ವಚನ ರತ್ನಗಳೆನ್ನುವಂತೆಯೆ, ಇವು ಇಂದಿನ ಜನಜೀವನದ ಪಥದರ್ಶಕಗಳೆನ್ನದಿರಲು ಸಾಧ್ಯವಿಲ್ಲ. ಈ ನುಡಿಗಳೇ ಆ ವೀರಚರಿತ್ರೆಗೂ ಶಾಂತಿಯನ್ನೆರಚಿ ತಣಿಸಿತು. ಸೊಸತೊಂದು ಜೀವನವನ್ನು ತುಂಬಿ ಜೀವನದ ಮತ್ತೊಂದು ತೆರೆಯನ್ನೆಬ್ಬಿಸಿತು.....

ಇದಿಷ್ಟು ಕತೆಯ ಗತಿಯ ನೋಟವೆಂದಾದರೆ, ದೋಷಭಾಗವಲ್ಲೊಂದು ಮಾತನ್ನೆಣಿಸದಿರಲು ಸಾಧ್ಯವಿಲ್ಲ. 'ಕೇವಲ ಒಂದೇ ಒಂದು ಪಾತ್ರಸಮಾವೇಶದಿಂದ (ಕೊನೆಗೆ ಮಾತ್ರ ಅಂಗತ್ವೀನ ಮಹರ್ಷಿಯ ಪಾತ್ರವಿದೆ, ಅದು ಕಥೆಗೆ ಮುಖ್ಯವಾದರೂ ಘಟಕಗಳ ಮುಂದೆ ಗೌಣ) ಜೀವನದ ಗತಸಂಧಿಗಳನ್ನು ನೆನಸುವಂತಾಗಿಸುವ ಏಕಪಾತ್ರಾನುಗತ ನಾಟಕವನ್ನು ನೆನಪಿಗೆ ತರುವುದು. ಈ ಬಗೆಯ ರಚನೆ ಅಷ್ಟು ರುಚಿಕರವಲ್ಲ. ಮುಖ್ಯವಾಗಿ ಕಥೆಯ ನೆಳೆತನ್ನಿದು ಕೊಡುವುದಿಲ್ಲ. ಒಂದು ಸಿಂಹಾವಲೋಕನದ ಪರಿವಿಡಿಗೆರವಾಗುತ್ತದೆ....

ಆದರೂ ಉದಾತ್ತ ಚರಿತ್ರವಿಸ್ತರಣ ಮತ್ತು ಉಪಯುಕ್ತ ಘಟನೆಗಳ ಪೂರಕದಿಂದ, ಲೇಖಕರೀ ಕೊರತೆಯನ್ನು ಇಲ್ಲದಾಗಿಸಲು ಯತ್ನಿಸಿದ್ದಾರೆಂಬುದನ್ನು ಹೇಳದಿರಲು ಅಸಾಧ್ಯ. ವೀರಚರಿತ್ರಕ್ಕೊಪ್ಪಿದ ಭಾಷಾಬಂಧ, ಘಟನೆಗಳ ಹೊಂದಿಕೆ— ಇವುಗಳಿಂದೀ ಕತೆಯು ನಮ್ಮ ಭಾರತದ ರಾಜಕೀಯಾಂದೋಲನದ ಮಹಾವೃತ್ತವನ್ನು ನೀಡಿ, ಭಾರತ ಜೀವನಕ್ಕೊಂದು ಮಾರ್ಗವನ್ನು ಕೊಡುತ್ತಿದೆಯೆಂದಂದು— ಈ ಕತೆಯನ್ನು ಮನಸಾಸ್ವೀಕರಿಸಲೇ?

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ" ಈ ಪುಣ್ಯ ವಸ್ತುಗಳ ಸೇವೆಗೆ— ತ್ಯಾಗ ಜೀವನವೇ ಶಾಂತಿಯುಲಿಗಳೀ ಮಂತ್ರ ಪುಷ್ಪಾಂಜಲಿ!

— —

"ಆನಂದ–ಯಜ್ಞ"

(ಕವಿತಾ ವಿಮರ್ಶೆ:)

ಶ್ರೀ. ನಿ. ನಾರಾಯಣ ಬಲ್ಲಾಳ, ತೆಂಕಪೇಟೆ,
ಉಡುಪಿ. (ದ. ಕ.)

'ಆನಂದಯಜ್ಞ'ಕ್ಕೆ ಶಾಂತಿಯು ಕುಂಡವಾಗಿದೆ. ಆದರೆ ಈ ಶಾಂತಿಕುಂಡದಲ್ಲಿ ಉರಿಯುವ ಯಜ್ಞಹೋಮವಾದರೂ ಕ್ರಾಂತಿಯ ಜ್ವಾಲೆಯು. ಈ ದೃಶ್ಯಕವನದಲ್ಲಿ ನಮಗೆ 'ಆನಂದಯಜ್ಞ'ದ ವಿಡಂಬನೆಯು ತೋರಿಬರುತ್ತದೆ. ಕವಿಯು ಇಲ್ಲಿ 'ಆನಂದಯಜ್ಞ'ದ ವಿಡಂಬನೆಯನ್ನು ಮಾಡಿರುವುದಾದರೂ, 'ಲೋಕಾಃ ಸಮಸ್ತಾಃ ಸುಖಿನೋ ಭವಂತು!' ಎಂಬ ಉದ್ದೇಶಕ್ಕಾಗಿಯೇ! ಇದು ಬರೇ ವಿಡಂಬನೆ ಅಲ್ಲ; ಯಥಾರ್ಥ ಉದ್ದೇಶವೂ ಇದರಲ್ಲಿದೆ! ಯಾವೊಬ್ಬ ಮನುಷ್ಯನು ತನ್ನ ಕೌಟುಂಬಿಕರಲ್ಲಿ ಬೆರೆತು ತನ್ನ ಬಂಧುಗಳ ಹಿತವನ್ನು ಯೋಚಿಸದವನು ಏನೋ ಒಂದು ಸಮಾಜದೆದುರು ಹೆದರಿ ಸಮಾಜ ಹಿತಸಾಧನೆಗೆ ದುಡಿಯುವವನು ಎಂಬುದನ್ನು ತೋರಿಸಿಕೊಳ್ಳುತ್ತಾನೊ, ಅಂತಹವನಿರುವಲ್ಲಿ ಇಂತಹ ವಿಡಂಬನೆಯು ಅಗತ್ಯವಾಗಿ ಬೇಕಾಗುತ್ತದೆ. ಆದರೆ ಆತನು ಮುಗ್ಧ. ಅಂತಃಕರಣದಿಂದಲೇ ಸಮಾಜದ ಹಿತಕ್ಕೆ ಅಥವಾ ನೆಮ್ಮದಿಗಾಗಿ ದುಡಿಯಲಿಕ್ಕೆ ಸಾಕು. ಆತನು ಮೊದಲಿನ ಬಳಗದ ಹಿತಚಿಂತನೆಯನ್ನು ಮಾಡಬೇಕೆಂಬುದು! ಇದರಿಂದ ಸಮಾಜವು ಆತನಿಗೆ ಸ್ವಾರ್ಥಿ ಎಂಬ ಅಪವಾದವನ್ನು ಹೊರಿಸುವುದಕ್ಕೆ ಹಿಂಜರಿಯುವುದಿಲ್ಲ. ಆದರೆ ಇದು ಕೂಡ ಆತನ ಧೃತಿಪರೀಕ್ಷೆಗಾಗಿಯೇ. ಕ್ರಮೇಣ ಅದೇ ಸಮಾಜಕ್ಕೆ ಅವನ ಸಾಹಸದಿಂದ ಸ್ವಾರ್ಥಪರಿಚಯವು ಆಗುವುದು ಖಂಡಿತ. ಇದನ್ನು ನಾವು ಏನೊಂದೂ ಮಹತ್ತರದ್ದೆಂದು ತಿಳಿಯಬೇಕಾಗಿಲ್ಲ. ನಮ್ಮ ಜೀವನದಿಂದ ನಮಗೆ ಸಿಗುವ ಒಂದು ಪಾಠವಿದು.

ಈ 'ಆನಂದಯಜ್ಞ' ದೃಶ್ಯ ಕವನದಲ್ಲಿರುವ ವಸ್ತುವಾದರೋ ಇದೇ ತಿಗಿದೆ. ಅದು ನಮ್ಮ ರಾಜಕೀಯಕ್ಕೆ ಸೇರಿದ್ದೇ. ಇದು ಆ

ರಾಜಕಾರಣದ ಗೊಂದಲ. ಇದರಲ್ಲಿ ಕಂಡುಬರುವ ಪಾತ್ರಗಳಾದರೋ ನಮ್ಮ ರಾಷ್ಟ್ರದ ಮುಖಂಡರ. ಹಾಗೂ ನಾವು. ವಸ್ತುವಿನ ಮೂಲ ಉದ್ದೇಶವಾದರೋ—ವಿಶ್ವಶಾಂತಿ. ಹಕ್ಕಿಯು ತನ್ನ ಪಕ್ಕದ ಬಲವನ್ನರಿಯದೆ ಗುರಿಯನ್ನು ಇಟ್ಟುಕೊಂಡಿದೆ. ಇಂತಹ ಪರಿಸ್ಥಿತಿಯಾಗಿದೆ ನಮ್ಮ ರಾಜಕೀಯದ್ದು. ವಿಶ್ವಶಾಂತಿ ಎನ್ನುತ್ತಾರಲ್ಲಾ! ನಮಗೇನು ಶಾಂತಿಯು ದೊರಕುತ್ತದೆ? ಭಾರತದ ಶಾಂತಿಯಲ್ಲಿಯೇ ಭಂಗವು ಬಂದೊದಗಿರುವಾಗ, ಇದೇನು ವಿಶ್ವಶಾಂತಿಯ ಕೂಗು ಎಂದು ಕೋರುವುವರಲ್ಲಿ ಸೋಜಿಗ ಕಾಣದು. ಆದರೆ ಕೆಲವು ಧುರೀಣರು ಹೇಳುತ್ತಾರೆ:—ಭಾರತದ ಹೊರಗಿನ ರಾಷ್ಟ್ರಗಳ ಶಸ್ತ್ರಗಳಿಂದಾಗಿ ನಮ್ಮಲ್ಲಿ ಏನೊಂದು ಹೆದರಿಕೆಯಿದೆ. ಅದರ ನಿವಾರಣೆಗಾಗಿ ಈ ವಿಶ್ವಶಾಂತಿಯ ಕೂಗು. ಆ ರಾಷ್ಟ್ರಗಳೊಡನೆಯೇ ನಾವು ಮೈತ್ರಿಯನ್ನು ಸಾಧಿಸಿದಂತಾದರೆ, ನಮ್ಮಲ್ಲಿಯ ಶಾಂತಿಯು ತನ್ನಿಂದ ತಾನೇ ಆಗುವುದು. ಈ ಒಂದು ಕಲ್ಪನೆಯನ್ನಿಟ್ಟುಕೊಂಡು ನಮ್ಮ ರಾಷ್ಟ್ರದ ನಾಯಕರು ಸಮದ್ವೇಷವನ್ನು ಸಾಧಿಸುತಿದ್ದಾರೆ. ಆದರೆ ಈವೊತ್ತಿನ ದಿನದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೇ ಕೆಲವು ದೇಶಗಳಲ್ಲಿ ಯುದ್ಧವು ನಡೆದುದು ನಮಗೆ ಇತ್ತೀಚೆಗೆ ಕಂಡು ಬಂದಿದೆ. ಅಲ್ಲದೆ ಇವರಿಗೆ ಸಹಾಯ ಮಾಡುವುದಕ್ಕೆ ಹಿಂಜರಿಯದೆ ತಮ್ಮ ಶಸ್ತ್ರಾಸ್ತ್ರಗಳ (ಅಣುಬಾಂಬು)ಉಪಯುಕ್ತತೆಯನ್ನು ಸಾಧಿಸಲು ಮುಂಬರುವ ರಾಷ್ಟ್ರಗಳೂ ಇವೆ. ನಾವೇನೋ ಬಹಳ ಹೆದರಿದಂತಿದೆ. ಇದರಿಂದಲೇ ಶಾಂತಿಯ ಸೋಗನ್ನು ಹಾಕಿದ್ದೇವೆ. ಈ ಶಾಂತಿಯು ಸುಲಭದ್ದಲ್ಲ. ಈ ಶಾಂತಿಯ ಹಿನ್ನೆಲೆಯಲ್ಲೂ ಏನು ಅಡಗಿರಬಹುದು?—ಎಂಬುದು ನಮಗೆ ತಿಳಿಯಬೇಕು. ನಮಗೆ ಉಳಿಯುವಂತಹ ಭಯವು ಎಂದೆಂದೂ ಇದ್ದದ್ದೇ. ಅಲ್ಲಲ್ಲಿ ಅಂಕುರಿಸಿದ್ದ ಕ್ರಾಂತಿಯ ಕಿಡಿಗಳು ಕೂಡಿ ಒಂದಾಗಿ, ಒಮ್ಮೆ ಪ್ರಜ್ವಲಿಸಲಿಕ್ಕಿದೆ. ಇದಕ್ಕೆ ನಾವು ಭಯಪಡಬೇಕಾದದ್ದಿಲ್ಲ. ಕ್ರಾಂತಿಯು ಕೂಡ ಶಾಂತಿಗಾಗಿಯೇ. ಆದುದರಿಂದ ನಾವು ಮೊದಲು ನಮ್ಮ ಶಾಂತಿಯನ್ನು ನೋಡಬೇಕು. ನಮಗೆ ಬಂದಿರುವ ಕೊರತೆಗಳನ್ನು ತೊಡೆಯಬೇಕು. ನಮ್ಮೊಳಗಿನ ಸ್ಥಿತಿಯು ಇಂದು ಯಾವ ದಿಶೆಯಲ್ಲಿದೆ? "ಲಾಭಹಾನಿಯ ಲೆಕ್ಕಕ್ಕೆ ಸದ್ಗುಣಗಳು ವ್ಯರ್ಥ. ಅನುಕಂಪ ನಿರ್ಮಿಸುತಿದೆ ಒಮ್ಮೊಮ್ಮೆ ಅನರ್ಥ! ಅಣ್ಣ–ತಮ್ಮಂದು ಬೊಗಳುವವ ಬಿದ್ದ ಗಟಾರಕ್ಕೆ. ಉಪಕರಿಸುವ ಪೆದ್ದ ನರಳುವನು ಎದೆಚಾಚಿ ಕುಠಾರಕ್ಕೆ." ಪರಿಸ್ಥಿತಿ ಈ ರೀತಿಯಾಗಿರುವಾಗ, "ಪರಮಾಣು ಬಾಂಬುಗಳ ಕಟ್ಟಿ ಮಿದುಳ ಮಸೆದವನೆ ತಜ್ಞ—" ಎಂದು ಹೇಳಿದ ಹಾಗೆ, ಕ್ರಾಂತಿಯು ಆಗಲೇ ಬೇಕು—ಎಂದು ಕವಿಯ ಮತವಾಗಿದೆ. ಇದರಲ್ಲಿ ನಮಗೂ ಕೂಡ ಸತ್ಯಾಂಶ ಕಂಡುಬರುವುದರಲ್ಲಿ ಎಡೆಯಿದೆ. "ಪೌರ್ಜಲ್ಯ ಒಗೆದಿದೆ ನರನನ್ನು ಹೊಂಡದಲ್ಲಿ. ಇಂಥವರ ಗೋಳಿಗಿಲ್ಲ ಯೋಗ್ಯ ವಿಚಾರಣೆ ಜನ ಹಿಂಡಿನಲ್ಲಿ!" ಇದು ನಮ್ಮ ಅನುಭವಕ್ಕೆ ಬಂದ ವಿಷಯ. ಎಲ್ಲಿಯವರೆಗೆ ನಮ್ಮ ಜನ ಸಭ್ಯತನವನ್ನು ಪಾಲಿಸಿಕೊಂಡು ಬಂದಿರುವರು! ಎಂಬುದನ್ನು ಮಾರ್ಮಿಕವಾಗಿ ಕವಿ ನುಡಿದಿರುವರು. "ಉಚ್ಚ ಜೀವಿಗಳಿಗೇ ಈ ಭೂಲೋಕ ವಿನಾಸಲು—ಎನ್ನುವವರ ತುಳಿತಕೆದ್ದಿದೆ ದೀನಜೀವಿಗಳ ಹುಯ್ಯಲು," "ಕಾರಕೂನಗೂಳಿಯ ಮೇಲೆ ಸೀನುವರು ಅಧಿಕಾರರನೇಕರು ಪದವೀಭೂಷಿತನು ಹೆಲ್ಲು ಕಿಸಿಯುವನು ಅಶಿಕ್ಷಿತನ ಕಂಡು." ನಮ್ಮ ಜನರಿಗೆ ಇನ್ನೂ ದೇಶಪ್ರೇಮವಿಲ್ಲ. ಬಂಧುಗಳಲ್ಲಿ ಪ್ರೇಮವಿದ್ದರಲ್ಲವೇ—ದೇಶದ ಮೇಲೆ? ತನ್ನ ನಾಡಿನ ಅಶಿಕ್ಷಿತನನ್ನು ಕಂಡು ಹೃದಯವು ಕರಗದವನನ್ನು ನಾವು ನೂನವನೆಂದು ಕರೆಯುವುದೇ? ಇವರು ತಮ್ಮ ಶಿಕ್ಷಣವನ್ನು ಈ ರೀತಿಯಾಗಿ ಸಾರ್ಥಕಪಡಿಸಿಕೊಳ್ಳುವುದೇ? ಇಂತಹ ರಾಕ್ಷಸನನ್ನು ಏನೆನ್ನಬೇಕು ನಾವು? ಇಂಥವರೇ ನಾಳೆ ನಮಗೆ ನಾಯಕರಾಗಿ ಬಂದು ಉಪದೇಶವನ್ನು ಕೊಡುವುದಕ್ಕೆ ಆರಂಭಿಸುವರು. ಭಾತೃಪ್ರೇಮ, ಮಾತೃಪ್ರೇಮ ವಿಲ್ಲದವನು ಏನು ಸಾಧಿಸಿಯಾನು? ಇದು ನಾವು ನಾಗರಿಕತೆಯನ್ನು ಬೆಳೆಸಿಕೊಂಡಿರುವುದಲ್ಲದೆ ಮತ್ತೇನು?

ನಮ್ಮಲ್ಲಿ ಇಂತಹ ಪರಿಸ್ಥಿತಿಯು ಬಲಿತು ನಿಂತಿರುವಾಗ ಆನಂದವೆಲ್ಲಿ? "ಆವಂದವೆಂಬುದಿಂದು ಕೆಲವರದೇ ಸೊತ್ತು, ಮಿಕ್ಕವರ ಗೋಳೆಲ್ಲ ಅವರವರಿಗೆ ಗೊತ್ತು. ಹಾರಾಡುವವರು ಹಾರಾಡುವರು ಹೊಸ ಹೊಸ ರೆಕ್ಕೆ ಪಡೆದು. ಬಿದ್ದವರು ಲಕ್ಷೋಪಲಕ್ಷ ನರಳುವರು ಹೊಟ್ಟೆಯೊಡೆದು." ಇಂತಹ ಪರಿಸ್ಥಿತಿಯಲ್ಲಿ ಕ್ರಾಂತಿಯು ಅಗತ್ಯ! ಅಂತ್ಯದಲ್ಲಿ ಇದರ ಜಯವು ಶಾಂತಿಯೆ! "ವಜ್ರಮುಷ್ಟಿಯಲಿ ದುರ್ಬಲರ ಅಳುವವನೆ ತಜ್ಞ! ಪರಮಾಣು ಬಾಂಬುಗಳ ಕಟ್ಟಿ ಮಿದುಳ ಮಸೆದವನೆ ತಜ್ಞ."

ಈ ರೀತಿಯಾಗಿ 'ಆನಂದಯಜ್ಞ' ದೃಶ್ಯಕವನದಲ್ಲಿ ಕ್ರಾಂತಿಯ ಕಹಳೆಯನ್ನು ಊದಿದೆ. ನಮ್ಮಲ್ಲಿಯ ವಿಷಮತೆಯನ್ನು ಕವಿಯು ಮಾನವರಾಗಿ ಬರುವ ಪಾತ್ರಗಳಲ್ಲಿ ಚಿತ್ರಿಸಿದ್ದಾರೆ. ಈ ದೃಶ್ಯಕವನದ ಥಾಟಿಯು ಕೂಡ ಕ್ರಾಂತಿಯ ಕಹಳೆಯನ್ನು ಊದಿದಂತಿದೆ.

ಸಾದರ ಸ್ವೀಕಾರ

೫೬ **ಬಾಗಿನ** (ಕಥಾಸಂಕಲನ) ಲೇಖಕಿ ಶ್ರೀಮತಿ ಆರ್. ಲಲಿತಮ್ಮ ಮುಂಬಯಿ. ಧಾರವಾಡದ ಮನೋಹರ ಗ್ರಂಥಮಾಲೆಯ ೧೩೦ನೆಯ ಕುಸುಮ. ಕ್ರಾ. ಅ. ೧೦೬ ಪುಟಗಳು. ಬೆಲೆ ೧–೦–೦

೫೭ **ಸ್ತ್ರೀ** (ಮರಾಠಿ ಮಾಸಪತ್ರಿಕೆಯ ರಜತೋತ್ಸವ ಸಂಚಿಕೆ) ಪ್ರಕಾಶಕರು: ಕಿರ್ಲೋಸ್ಕರ ಬಂಧು ಲಿಮಿಟೆಡ್, ಕಿರ್ಲೋಸ್ಕರವಾಡಿ.

ಸ್ತ್ರೀಯರ ಜೀವನ ಪ್ರಗತಿಯ ಉದ್ದೇಶದಿಂದಲೆ ಹೊರಟ ಈ ಪತ್ರಿಕೆಯು ತನ್ನ ೨೫ ವರ್ಷಗಳನ್ನು ಮುಗಿಸಿ ರಜತೋತ್ಸವವನ್ನು ಮಾಡಿಕೊಂಡುದು ಸಂತೋಷದ ಸಂಗತಿ. ಈ ಪತ್ರಿಕೆಯು ಮಹಾರಾಷ್ಟ್ರದ ಸ್ತ್ರೀಯರಲ್ಲಿ ಒಂದು ಬಗೆಯ ಹೊಸ ಜಾಗೃತಿಯನ್ನು ಉಂಟು ಮಾಡಿದೆ ಸ್ತ್ರೀ ಜೀವನದ ವಿವಿಧ ಸಮಸ್ಯೆಗಳನ್ನು ಇದು ಗಂಭೀರರೀತಿಯಿಂದ ಚರ್ಚಿಸುವುದು. ಮಹಾರಾಷ್ಟ್ರದಲ್ಲಿ ಅನೇಕ ಸ್ತ್ರೀ ಲೇಖಕಿಯರು, ಈ ಪತ್ರಿಕೆಯು ಮುಖಾಂತರವಾಗಿಯೆ ಬೆಳಕಿಗೆ ಬಂದರು. ಈ ಸಂಚಿಕೆಯಲ್ಲಿ ಮಹಾರಾಷ್ಟ್ರದ ಕಳೆದ ೨೫ ವರ್ಷಗಳ ಸ್ತ್ರೀಯರ ಪ್ರಗತಿಯನ್ನು ಸೂಚಿಸುವಂತಹ ಅನೇಕ ಸಚಿತ್ರ ಲೇಖನಗಳು ಬಂದಿವೆ.

೫೮ **ಭಾರತದಲ್ಲಿಯ ಜಾತಿಪದ್ಧತಿ** (ಪರಿಚಯಾತ್ಮಕ ಕಿರುಹೊತ್ತಿಗೆ) ಲೇಖಕರು: ಡಾ. ಎಸ್. ಡಿಸೋಜಾ ಎಂ. ಎ., ಪಿಎಚ್. ಡಿ. ಅವರು. ಪ್ರಕಾಶಕರು: ಶ್ರೀಮಾನ್ ಎಂ. ಎಸ್. ಬಗಲಿ ಬಿ. ಎ., ಎಲ್‌ಎಲ್. ಬಿ. ಗಜಿಸ್ಪಿಂಗ್ ಕರ್ನಾಟಕ ಯುನಿವರ್ಸಿಟಿ, ಧಾರವಾಡ. ಫ್ಲೂ. ಕ್ಯಾ. ದ್ವಿದ ೫೬ ಪುಟಗಳು. ಬೆಲೆ ೦–೪–೦.

೫೯ **ರೇಖಾ** (ಸ್ವತಂತ್ರ ಸಾಮಾಜಿಕ ಕಾದಂಬರಿ) ಬರೆದವರು: ಶ್ರೀಮತಿ ಲಲಿತಾಂಬಾ. ಪ್ರಕಾಶಕರು: ಉಷಾಸಾಹಿತ್ಯಮಾಲೆ, ಮೈಸೂರು. ಕ್ರಾ. ಅ. ೪೦೦ ಪುಟಗಳು. ಬೆಲೆ ೨–೮–೦.

೬೦ **ಕನ್ನಡ ವಿಕ್ರಮೋರ್ವಶೀಯ** (ಸಂಸ್ಕೃತ ನಾಟಕದ ಅನುವಾದ) ಮೂಲ ಸಂಸ್ಕೃತ ನಾಟಕ ಕಾಲಿದಾಸ ಕವಿಯದು. ಅನುವಾದಕರು: ಶ್ರೀ. ಎಸ್. ವಿ. ಪರಮೇಶ್ವರಭಟ್ಟರು. ಪ್ರಕಾಶಕರು: ಉಷಾಸಾಹಿತ್ಯಮಾಲೆ, ಮೈಸೂರು. ಕ್ರಾ. ಅ. ೮೦ ಪುಟಗಳು ಬೆಲೆ ೧–೦–೦

೬೧ **ಸತೀಗೀತ** (ಹದಿಬದೆಯ ಧರ್ಮದ ಸಂಗ್ರಹ ಗ್ರಂಥ) ಲೇಖಕರು: ಶ್ರೀಮಾನ್ ಕ. ನರಸಿಂಹಶಾಸ್ತ್ರಿ, ಕನ್ನಡ ಅಧ್ಯಾಪಕ, ಶಿಕ್ಷಣ ಮಹಾಪಾಠಶಾಲೆ, ಮೈಸೂರು. ಪ್ರಕಾಶಕರು: ಉಷಾ. ಸಾಹಿತ್ಯಮಾಲೆ, ಮೈಸೂರು. ಕ್ರಾ. ಅ. ೧೨೨ ಪುಟಗಳು. ಬೆಲೆ ೧–೦–೦.

೬೨ **ವಿಜಯ** (ಮಾಸಪತ್ರಿಕೆ) ಸಂಪಾದಕರು: ಶ್ರೀಮಾನ್ ಆರ್. ವೆಂಕಟಶೆಟ್ಟರು. ಪ್ರಕಾಶಕರು: ಕರ್ನಾಟಕ ಸಂಘ, ರಾಯಚೂರು. ಕ್ರಾ. ದ್ವಿದ ೨೪ ಪುಟಗಳು. ವಾರ್ಷಿಕ ಚಂದಾ ೩–೮–೦.

೬೩ **ಗ್ರಾಮಜೀವನ** (ಕನ್ನಡ ಮಾಸಪತ್ರಿಕೆ) ಸಂಪಾದಕರು: ಶ್ರೀಮಾನ್ ಲಿಂಗೇಶಶರ್ಮಾ ಎಂ. ಎ. ವ್ಯವಸ್ಥಾಪಕ ಸಂಪಾದಕರು: ಶ್ರೀಮಾನ್ ಆರ್. ಕೆ. ಕುಲಕರ್ಣಿ. ಪ್ರಕಾಶಕರು: ಶ್ರೀ. ಏ. ಎನ್. ಭಟ್ಟ, ಕಲ್ಲಾಳ—ಕುಮಟಾ. ಡೆ. ೧೮ ದ ೫೬ ಪುಟಗಳು. ವಾರ್ಷಿಕ ಚಂದಾ ೪–೮–೦. ಬಿಡಿ ಸಂಚಿಕೆ ೦–೬–೦.

೬೪ **ಜಯ ಗೋವಾಂತಕ** (ರಾಜಕೀಯ ಹಿನ್ನೆಲೆಯ ಕಾದಂಬರಿ) ಲೇಖಕರು: ಶ್ರೀಮಾನ್ ಆನಂದ ವಿರ್ಮಿ. ಪ್ರಕಾಶಕರು: ಸುಧಾ ಪ್ರಕಾಶನ, ೨೦೧, ೫ನೆಯ ರಸ್ತೆ, ಚಾಮರಾಜ ಪೇಟೆ—ಬೆಂಗಳೂರ ಸಿಟಿ. ಕ್ರಾ. ಅ. ೧೮೪ ಪುಟಗಳು. ಬೆಲೆ ೧–೦–೦.

೬೫ **ವೈದಿಕ ವಾಙ್ಮಯ ಪರಿಚಯ** (ಪರಿಚಯಾತ್ಮಕ ಗ್ರಂಥ) ಲೇಖಕರು: ವಿದ್ವಾನ್ ರಾ. ಭ. ಹಾಸಣಗಿ, ಸಂಸ್ಕೃತ ಪಂಡಿತರು ಬಿ. ಎಂ. ಎಂ. ಹಾಯಸ್ಕೂಲ್, ಚಳ್ಳಕೆರೆ. ಕ್ರಾ. ಅ. ೨೦೪ ಪುಟಗಳು. ಬೆಲೆ ಒಳ್ಳೆಯ ಪ್ರತಿಗೆ ೨–೪–೦. ಸಾಮಾನ್ಯ ಪ್ರತಿಗೆ ೨–೦–೦

೬೬ **ವಿನ್ಯಾಧನ** (ಚಿಕ್ಕನಾಟಕ) ಬರೆದವರು: ಶ್ರೀಮಾನ್ ಸೇತುಮಾಧವಾಚಾರ್ಯರು. ಪ್ರಕಾಶಕರು: ಮಿತ್ರಪ್ರಕಾಶನ, ರಾಯಚೂರು. ಕ್ರಾ. ಅ. ೩೨ ಪುಟಗಳು. ಬೆಲೆ ೦–೬–೦.

೬೭ **ಸ್ತವರಾಜ** (ಪದ್ಯಪುಸ್ತಿಕೆ) ಮೂಲ ಸಂಸ್ಕೃತದಲ್ಲಿ ಶ್ರೀಮದ್ಭುಮಂಗಲಾಚಾರ್ಯರು ವಿರಚಿಸಿದ 'ಗೋವಿಂದ-ದಮೋದರ ಸ್ತೋತ್ರ'ವನ್ನು ಸೌ. ಶ್ರೀಮತಿ ಪಾರ್ವತಿದೇವಿ ಹೆಗಡೆ ಅವರು ಕನ್ನಡಿಸಿರುವರು. ಪ್ರಕಾಶಕರು: ಪುರೋಹಿತ ಪಬ್ಲಿಶಿಂಗ್ ಹೌವುಸ್, ನೀಲಾನಗರ, ಸೊಲ್ಲಾಪುರ. ಕ್ರಾ. ಅ. ೧೪ ಪುಟಗಳು. ಬೆಲೆ ೦–೨–೦.

೬೮ **ಪ್ರಾರ್ಥನೆ** (ಸಾಮೂಹಿಕ ಪ್ರಾರ್ಥನೆಗಳ ಸಂಕಲನ) ಪ್ರಕಾಶಕರು: ಧಾರವಾಡ ಜಿಲ್ಲಾ ಸರ್ವೋದಯ ಯೋಜನೆಯ ಸಂಚಾಲಕರು, ಅರವಟಗಿ. ಫ್ಲೂ. ಕ್ಯಾ. ಅ. ೩೨ ಪುಟಗಳು. ಬೆಲೆ ೦–೨–೦.

೬೯ **ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ** (ಅರವಟಗಿ)ಯ ವಾರ್ಷಿಕ ವರದಿ (೧–೪–೫೪ ರಿಂದ ೩೧–೩–೫೫ ರ ವರೆಗಿನ ಕಾರ್ಯ ಮತ್ತು ಆಯ–ವ್ಯಯಗಳ ವಿವರಗಳನ್ನು ಒಳಗೊಂಡುದು) ಡೆ. ಅ. ೨೪ ಪುಟಗಳು.

೭೦ **ಗೋಗ್ರಾಸ** (ಗೋರಕ್ಷಣೆ ವಿಷಯದ ಕುರಿತು ಪರಿಚಯಾತ್ಮಕ ಗ್ರಂಥ) ಲೇಖಕರು: ಶ್ರೀಮಾನ್ ನಾರಾಯಣ ಸಂಗಮ ಅವರು. ಧಾರವಾಡದ ಮಿಂಚಿನಬಳ್ಳಿಯ ೧೩ನೆಯ ವರ್ಷದ ಅನೆಯ ಕುಡಿ. ಕ್ರಾ. ಅ. ೧೦೪ ಪುಟಗಳು. ಬೆಲೆ ೧–೮–೦.

೭೧ **ಶ್ರೀಕೃಷ್ಣಗೀತಾವ್ಯೃತವು** (ಶ್ರೀ ಭಗವದ್ಗೀತೆಯ ಕನ್ನಡ ಸಾಂಗತ್ಯಾನುವಾದ) ಅನುವಾದಕರು: ಶ್ರೀಮಾನ್ ಅಚ್ಯುತ ಕೃಷ್ಣರಾವ ಹುಯಿಲಗೋಳ. ಪ್ರಕಾಶಕರು: ಶ್ರೀ. ಗುರುರಾಜ ಗ್ರಂಥಮಾಲೆ, ವಕೀಲ ಚಾಳ, ಗದಗ. ಕ್ರಾ. ಅ. ೧೯೨ ಪುಟಗಳು. ಬೆಲೆ ೧–೪–೦.

ದ್ವಿಶಕ್ತಿಯುತವಾದ.....

ಮೋಬಿಲ್‌ಗ್ಯಾಸ್

ಉಪಯೋಗಿಸಿ ನಿಮ್ಮ ಹಣಕ್ಕೆ ಹೆಚ್ಚು ಎಂಜಿನ್ ಶಕ್ತಿಯನ್ನು ಪಡೆಯಿರಿ!

ಇಂಜಿನಿಯರುಗಳ ಅಭಿಪ್ರಾಯದಲ್ಲಿ ಕೊನೆಯಪಕ್ಷ ಐದು ಮುಖ್ಯ ಕಾರಣಗಳಿಂದ ನಿಮ್ಮ ಸಾಮರ್ಥ್ಯವನ್ನು ಶಕ್ತಿಯನ್ನು ಕಳೆದುಕೊಳ್ಳಬಹುದು. ಪೆಟ್ರೋಲಿನಲ್ಲಿ ಯಾವದೇ ಒಂದು ಆಂಟಿಪ್ ಸೇರಿಸುವದರಿಂದ ಈ ಎಲ್ಲ ತೊಂದರೆಗಳನ್ನೂ ನಿವಾರಣೆಮಾಡುವುದು ಸಾಧ್ಯವಿಲ್ಲವೆಂಬುದು ಸ್ಪಷ್ಟಕ್ಷ.

ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸನ್ನು ಪಯೋಗಿಸಲು ಇಂದೇ ಪುರುಪಾಡಿರಿ. ಮೋಬಿಲ್ ಪವರ್ ಕಾಂಪೌಂಡನ್ನೊಳಗೊಂಡಿರುವ ಪೆಟ್ರೋಲು ಇಹೊಂದೇ. ಈ ಕಾಂಪೌಂಡು ಯಾವುದೋ ಒಂದು ಸಾಮಾನ್ಯ ಆಡಿಟಿವ್ ಎಂದು ತಿಳಿಯಬೇಡಿರಿ.'' ಇದು ಆಸೇಳ ಆಡಿಟಿವ್‌ಗಳ ಬಲವಾದ ಮಿಶ್ರಣ. ಇಷ್ಟು ಬಲವಾದ ಮಿಶ್ರಣವು ಇದುವರೆಗೆ ಪೆಟ್ರೋಲಿನಲ್ಲಿ ಸೇರಿಸಲ್ಪಟ್ಟೇ ಇಲ್ಲ.

ದ್ವಿಶಕ್ತಿಯುಕವಾದ ಮೋಬಿಲ್‌ಗ್ಯಾಸು ಬೇರೆಯಾವ ಛಾಪದ ಪೆಟ್ರೋಲಿನಕಿಂತಲೂ ಹೆಚ್ಚು ಎಂಜಿನ್ ತೊಂದರೆಗಳನ್ನು ನಿವಾರಣೆ ಮಾಡುತ್ತದೆ. ನಿಮ್ಮ ಎಂಜಿನ್ನು ಹೆಚ್ಚು ಶಕ್ತಿಯನ್ನು ಕೊಡುತ್ತದೆ. ಮೋಬಿಲ್‌ಗ್ಯಾಸು ನಿಮ್ಮ ಹಣಕ್ಕೆ ಹೆಚ್ಚು ಮೌಲ್ಯವನ್ನು ಕೊಡುವುದರಿಂದ ಅದನ್ನು ಪಯೋಗಿಸಲು ಪುರುವಾಡುವುದು ನಿಮಗೆ ಲಾಭಕರ.



ದ್ವಿಶಕ್ತಿಯುತವಾದ ಮೋಬಿಲ್‌ಗ್ಯಾಸ್ ಪ್ರತಿ ಗ್ಯಾಲನ್ನಿಗೂ ಹೆಚ್ಚು ಮೈಲೇಜನ್ನು ಕೊಡುತ್ತದೆಂದು ಟ್ಯಾಕ್ಸಿ ಡ್ರೈವರುಗಳು ಕಂಡುಕೊಂಡಿದ್ದಾರೆ. ಎಂದ ಮೇಲೆ ಅವ್ವ ಮಂದಿ ಲಾಭವನ್ನು ಉಪಯೋಗಿಸುವುದರಲ್ಲಿ ನಿನಾಶ್ಚರ್ಯ!

ಸ್ಟ್ಯಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ (ಕಂಪೆನಿಯ ಮೆಂಬರುಗಳ ಹೊಣೆಗಾರಿಕೆಯು ಮಿತಿಯಿದೆ)

Printed by N A. Hoskeri at the Vijaya Press, Dharwar and published for the Proprietors Jayanti publications, by K. S. Betgeri at the Jayanti Office, Dharwar